
ಶಿವಪುರ ಧ್ವಜ ಸತ್ಯಾಗ್ರಹ

ಡಿ. ಅಂಗಯ್ಯ



ಶಿವಪುರ ಧ್ವಜಸತ್ಯಾಗ್ರಹ

ಚರಿತ್ರೆ

ಡಿ. ಲಿಂಗಯ್ಯ

ಶಿವಪುರ ಧ್ವಜಸತ್ಯಾಗ್ರಹ ಸ್ಮಾರಕ ಟ್ರಸ್ಟ್
೨೧೫, ಸದಾಶಿವನಗರ
ಬೆಂಗಳೂರು–೫೬೦೦೦೬

Shivapura Dhvaja Sathyagraha–by D. Lingaiah, M.A., Visvesvarapuram College, K. R. Road, Bangalore-560 004. Published by Shivapura Flag Satyagraha Memorial Trust, 215, Sadasiva nagar, Bangalore-560 006. First Edition, July 1979. 5000 copies. Pages : 1/8 Demy xvi + 288 + 20 = 324. Price Rs.15/-

ಮೊದಲ ಮುದ್ರಣ ಜುಲೈ 1979

ಮುಖ ಚಿತ್ರ : ಪ್ರಸಾದ್

ಬೆಲೆ : ಹದಿನೈದು ರೂಪಾಯಿ

ಮುದ್ರಕರು :
ಓರಿಯೆಂಟ್ ಪವರ್ ಪ್ರೆಸ್,
ಲಾಲ್‌ಬಾಗ್ ರಸ್ತೆ, ಬೆಂಗಳೂರು–27

ಚಿತ್ರಗಳು : 'ಪ್ರಜಾಮತ,' ಬೆಂಗಳೂರು

ಪರಿವಿಡಿ

ತಿದ್ದುಪಡಿ

೨೫೭, ೨೫೯, ೨೬೧, ೨೬೩ ನೇ ಪುಟಗಳಲ್ಲಿ (ಶೀರ್ಷಿಕೆ) "ಬಂದೂಕಗಳ ಮುಂದೆ ಧ್ವಜಾರೋಹಣ"ಕ್ಕೆ ಬದಲಾಗಿ "ಧ್ವಜ ಸತ್ಯಾಗ್ರಹದ ಪ್ರಭಾವ" ಎಂದು ಓದಿಕೊಳ್ಳತಕ್ಕದ್ದು.

ಶಿವಪುರ ಧ್ವಜ ಸತ್ಯಾಗ್ರಹ ಸ್ಮಾರಕ ಟ್ರಸ್ಟ್

ಅಧ್ಯಕ್ಷರು : ಶ್ರೀ ಕೆ. ಹನುಮಂತಯ್ಯ
ಟ್ರಸ್ಟಿಗಳು : ಶ್ರೀ ಡಿ. ದೇವರಾಜ ಅರಸ್
ಶ್ರೀ ಹೆಚ್.ಎಂ. ಚನ್ನಬಸಪ್ಪ
ಶ್ರೀ ಸಚ್ಚಿದಾನಂದ

ದೂರವಾಣಿ : 32324
'ಕೆಂಗಲ್ ಕೃಪ'
215, ಸದಾಶಿವನಗರ
ಬೆಂಗಳೂರು 560006

ತಾ॥ ೬-೭-೧೯೭೯

ಮುನ್ನುಡಿ

ಭಾರತದ ಸ್ವಾತಂತ್ರ್ಯ ಸಂಗ್ರಾಮವು ಸುಮಾರು ಒಂದು ಶತಮಾನಕಾಲ ಸತತವಾಗಿ ನಡೆಯಿತು. ಈ ಅವಧಿಯಲ್ಲಿ ಹಲವು ಹೋರಾಟಗಳು ಭಾರತದ ಎಲ್ಲ ಭಾಗಗಳಲ್ಲೂ ನಡೆದುವು. ಮಹಾತ್ಮಗಾಂಧಿಯವರ ನಾಯಕತ್ವದಲ್ಲಿ ಅವುಗಳು ಸತ್ಯಾಗ್ರಹ ನಾಮ ಮತ್ತು ರೂಪುಗಳನ್ನು ಪಡೆದುವು.

ಅಂದಿನ ಮೈಸೂರು ಸಂಸ್ಥಾನದಲ್ಲೂ ಈ ಹೋರಾಟಗಳು ನಡೆದುವು. ಅವುಗಳಲ್ಲೆಲ್ಲ 1938ನೇ ಏಪ್ರಿಲ್ ತಿಂಗಳಲ್ಲಿ, ಶಿವಪುರದಲ್ಲಿ ನಡೆದ ಧ್ವಜಸತ್ಯಾಗ್ರಹವು ಅತ್ಯಂತ ಯಶಸ್ವಿಯಾದುದು. ಅದು ಅಖಿಲ ಭಾರತದ ಪ್ರಖ್ಯಾತಿಯನ್ನೂ ಪಡೆಯಿತು ; ಮಹಾತ್ಮ ಗಾಂಧಿಯವರ ಮೆಚ್ಚಿಗೆಯನ್ನೂ ಗಳಿಸಿತು.

ಶಿವಪುರ ಧ್ವಜಸತ್ಯಾಗ್ರಹವು ಮೈಸೂರು ಸಂಸ್ಥಾನಕ್ಕೆ ಪ್ರಜಾರಾಜ್ಯವನ್ನು ಸಂಪಾದಿಸಿ ಕೊಟ್ಟ ಮೂಲಶಕ್ತಿಯಾಯಿತು. ಇಂಥ ಮಹತ್ವಪೂರ್ಣವಾದ ಚಾರಿತ್ರಿಕ ಘಟನೆಗೆ, ಒಂದು ಸ್ಮಾರಕವನ್ನು ರಚಿಸಬೇಕೆಂಬ ಬಯಕೆಯು ನನ್ನ ಮನಸ್ಸಿನಲ್ಲಿ ಮೂಡಿ ಬೆಳೆಯುತ್ತಿತ್ತು. ಹಲವು ಸ್ನೇಹಿತರೊಡನೆ ಈ ವಿಷಯವನ್ನು ಪ್ರಸ್ತಾಪ ಮಾಡಿದಾಗ ಅವರ ತುಂಬುಹೃದಯದ ಬೆಂಬಲ ದೊರಕಿತು. ಸತ್ಯಾಗ್ರಹ ನಡೆದ ಜಮೀನಿನ ಮೇಲೆಯೇ ಸ್ಮಾರಕಭವನವನ್ನು ಕಟ್ಟಲು ಸಂಕಲ್ಪಿಸಿದೆವು. ಆ ಜಮೀನು ಮದ್ದೂರು ಮುನಿಸಿಪಾಲಿಟಿಗೆ ಸೇರಿತ್ತು. ಮುನಿಸಿಪಲ್ ಕೌನ್ಸಿಲರುಗಳು ಮತ್ತು ಅಧಿಕಾರಿಗಳು ಉಚಿತವಾಗಿ ಆ ಜಮೀನನ್ನು ಕೊಟ್ಟು ಮಹದುಪಕಾರ ಮಾಡಿದರು. ಬೆಂಗಳೂರು ನಗರ ಕಾರ್ಪೊರೇಷನ್‌ನವರು ಐದು ಲಕ್ಷ ರೂಪಾಯಿಗಳನ್ನು ಉದಾರವಾಗಿ ದಾನಮಾಡಿ, ಕಟ್ಟಡದ ಕೆಲಸವನ್ನು ಪ್ರಾರಂಭಿಸಲು ಸಹಾಯಕರಾದರು. ತದನಂತರ ರಾಜ್ಯಸರ್ಕಾರದವರು ಹತ್ತು ಲಕ್ಷ ರೂಪಾಯಿಗಳನ್ನು ಕೊಟ್ಟು ಸ್ಮಾರಕ

ಭವನವು ಎದ್ದು ನಿಲ್ಲುವಂತೆ ಮಾಡಿದರು. ಈ ಭವನದಲ್ಲಿ ಒಂದು ಪುಸ್ತಕಾಲಯ ವನ್ನು ಸ್ಥಾಪಿಸಲಾಗುವುದು; ಸ್ವಾತಂತ್ರ್ಯ ಸಂಗ್ರಾಮಗಳಿಗೆ ಸಂಬಂಧಪಟ್ಟ ಗ್ರಂಥ ಗಳನ್ನು ಸಂಗ್ರಹಿಸಿಡಲಾಗುವುದು. ಸರ್ಕಾರದವರು ಮತ್ತೊಂದು ಉಪಕಾರವನ್ನೂ ಮಾಡಿದ್ದಾರೆ. ಅಲ್ಲಿ ಒಂದು ಉದ್ಯಾನವನ ಇರಲು ವ್ಯವಸ್ಥೆ ಮಾಡಿದ್ದಾರೆ. ಮುಖ್ಯಮಂತ್ರಿಗಳಾದ ಶ್ರೀ ಡಿ. ದೇವರಾಜ ಅರಸ್ ಅವರು ಸ್ವತಃ ಸ್ವಾತಂತ್ರ್ಯ ಹೋರಾಟಗಾರರು. ಈ ಧ್ವಜಸತ್ಯಾಗ್ರಹ ಸ್ಮಾರಕಭವನಕ್ಕೆ ಸ್ಮರಣೀಯ ಸಹಾಯ ವನ್ನು ಮಾಡಿದರು.

ಈ ಪುಸ್ತಕವನ್ನು ಬರೆಯಲು ಸಾಹಿತಿಗಳಾದ ಶ್ರೀ ಡಿ. ಲಿಂಗಯ್ಯನವರು ತಮ್ಮ ಶ್ರದ್ಧಾಸಕ್ತಿಗಳನ್ನು ಧಾರೆಯೆರೆದಿದ್ದಾರೆ. ಅವರ ಕೃತಿಯೂ ಸ್ಮಾರಕಭವನದಷ್ಟೇ ಚಿರಕಾಲ ಉಳಿಯುವಂಥದು.

ಈ ಭವನ ಮತ್ತು ಪುಸ್ತಕಗಳು ದೇಶಭಕ್ತಿಯ ಬುಗ್ಗೆಗಳಾಗಿರಲಿ; ಸ್ವಾತಂತ್ರ್ಯಾಭಿ ಮಾನದ ಪ್ರಚೋದಕ ಶಕ್ತಿಗಳಾಗಿರಲಿ ಎಂಬುದೇ ಟ್ರಸ್ಟಿಗಳ ಆಶಯ.

ಕೆ. ಹನುಮಂತಯ್ಯ

ಪ್ರಸ್ತಾವನೆ

ಒಮ್ಮೆ ಮಾತಿನ ನಡುವೆ ಶ್ರೀ ಕೆ. ಹನುಮಂತಯ್ಯನವರು "ಶಿವಪುರ ಧ್ವಜ ಸತ್ಯಾಗ್ರಹ ಸ್ಮಾರಕ ಭವನ ನಿರ್ಮಾಣವಾಗುತ್ತಿದೆ. ಅದರ ಪ್ರಾರಂಭೋತ್ಸವದ ಹೊತ್ತಿಗೆ ಒಂದು ಸ್ಮರಣ ಸಂಚಿಕೆ ಪ್ರಕಟಿಸಬೇಕು. ನೀವು ಅದರ ಪ್ರಧಾನ ಸಂಪಾದಕರಾಗಿದ್ದುಕೊಂಡು ಸಿದ್ಧಪಡಿಸಿಕೊಡಿ" ಎಂದರು. ಶ್ರೀ ಹನುಮಂತಯ್ಯನವರು ಯಾವ ಕೆಲಸವನ್ನು ಕೈಗೊಂಡರೂ ದೂರಾಲೋಚನೆಯಿಂದ, ನಾಲ್ಕು ಕಾಲ ಶಾಶ್ವತವಾಗಿ ನಿಲ್ಲುವಂತೆ ಭಾರಿ ಪ್ರಮಾಣದಲ್ಲಿ ಮಾಡುವ ಜಾಯಮಾನದವರು ಎಂದು ಬಹಳ ಹಿಂದೆಯೇ ನನ್ನ ಅನುಭವಕ್ಕೆ ಬಂದಿತ್ತು. ಅವರ ಕೆಲಸಗಳಲ್ಲಿ ಕಲೆ, ಸಂಸ್ಕೃತಿ, ಪರಂಪರೆ, ನಾವೀನ್ಯತೆ ಮೊದಲಾದವು ಮೇಳವಿಸಿರುತ್ತವೆ. ಶ್ರೀ ಕೆಂಗಲ್ಲರು ಕಟ್ಟಿಸಿದ ವಿಧಾನಸೌಧವೇ ಇದಕ್ಕೆ ಸಾಕ್ಷಿ. ಅವರು ನಿರ್ಮಿಸಿರುವ ದೇವಾಲಯಗಳೂ ಅಷ್ಟೆ. ಶಿವಪುರದ್ದು ಸ್ವಾತಂತ್ರ್ಯಯೋಧರ ಸ್ಮಾರಕ ಭವನ. ಅದರ ಜ್ಞಾಪಕಾರ್ಥವಾಗಿ ಒಂದು ಸ್ಮರಣ ಸಂಚಿಕೆ ಹೊರಡಿಸುವುದು ಉಚಿತವಾದ ಕಾರ್ಯವೆಂದು ಭಾವಿಸಿ ಶ್ರೀ ಕೆಂಗಲ್ಲರ ಸೂಚನೆಯನ್ನು ಒಪ್ಪಿಕೊಂಡೆ.

ಐದಾರು ಜನ ಆಸಕ್ತರಿಗೆ ಕಾಗದ ಬರೆದು ಒಂದು ಸಭೆಯನ್ನು ಸೇರಿಸಿ ವಿಚಾರ ವಿನಿಮಯ ಮಾಡಿದೆವು. ಕೆಲವು ದಿನಗಳಾದ ಮೇಲೆ ಶ್ರೀ ಕೆಂಗಲ್ಲರು ತಮ್ಮ ಆಲೋಚನೆಯನ್ನು ಬದಲಾವಣೆ ಮಾಡಿ, "ಕೇವಲ ಸ್ಮರಣ ಸಂಚಿಕೆ ಅದರೆ ಸಾಲದು. ಶಿವಪುರ ಧ್ವಜ ಸತ್ಯಾಗ್ರಹದ ಚರಿತ್ರೆಯನ್ನೇ ಬರೆದುಬಿಡಿ. ಅದರಿಂದ ಹೆಚ್ಚು ಉಪಯೋಗವಾಗುತ್ತದೆ" ಎಂದರು. ಸ್ಮರಣ ಸಂಚಿಕೆ ಆಗಿದ್ದರೆ ಒಂದು ರೀತಿಯಲ್ಲಿ ಪ್ರಧಾನ ಸಂಪಾದಕನ ಕೆಲಸ ಸುಲಭ. ವಿಷಯ ತಿಳಿದವರಿಗೆ ಲೇಖನಕ್ಕಾಗಿ ಪ್ರಾರ್ಥಿಸಿಕೊಂಡು, ಅವರಿಂದ ಲೇಖನಗಳನ್ನು ತರಿಸಿಕೊಂಡು ಸಂಪಾದನ ಕಾರ್ಯ ಮಾಡಿದರೆ ಕೆಲಸ ಮುಗಿಯುತ್ತದೆ. ಅದರೆ 'ಚರಿತ್ರೆ' ಬರೆಯಬೇಕಾದರೆ ಬೇರೆಯ ರೀತಿಯಲ್ಲಿ ಸಾಗಬೇಕು. ಸ್ವಾತಂತ್ರ್ಯಯೋಧರನ್ನು ಖುದ್ದಾಗಿ ಭೇಟಿಯಾಗಿ ವಿಷಯಗಳನ್ನು ಸಂಗ್ರಹಿಸಿ, ತಾಳೆನೋಡಿ ಅಂಕಿಅಂಶಗಳನ್ನು ಅಧಿಕೃತವೆಂದು ನಿರ್ಧರಿಸಿದ ಮೇಲೆ ಇಡಿಯಾಗಿ ಗ್ರಂಥರಚನೆ ಮಾಡಬೇಕು. ನಾವು ಮೊದಲು ಸಭೆಗೆ ಕರೆದಿದ್ದವರು ಒಬ್ಬೊಬ್ಬರೂ ಒಂದೊಂದು ಸ್ಥಳದವರು. ಆದ್ದರಿಂದ ಎಲ್ಲರೂ ಒಟ್ಟಿಗೆ

ಕೂಡಿ ಕೆಲಸಮಾಡಲೂ ಸಾಧ್ಯವಿಲ್ಲ. ಒಬ್ಬನೇ ಹೆಗಲುಕೊಡಬೇಕು. ಇದೊಂದು ಸವಾಲು. ಇದನ್ನು ಕಾರ್ಯಗತ ಮಾಡಲೇಬೇಕೆಂದು ತೀರ್ಮಾನಿಸಿ ಶ್ರೀ ಕೆಂಗಲ್ಲರ ಸೂಚನೆಯಂತೆ 'ಶಿವಪುರ ಧ್ವಜಸತ್ಯಾಗ್ರಹ' ಚರಿತ್ರೆ ಬರೆಯಲು ಒಪ್ಪಿ ಕಾರ್ಯಾರಂಭ ಮಾಡಿದೆ.

ಶಿವಪುರ ಧ್ವಜ ಸತ್ಯಾಗ್ರಹ 1938ನೇ ಏಪ್ರಿಲ್ ತಿಂಗಳಿನಲ್ಲಿ ನಡೆಯಿತು. ಅದರಲ್ಲಿ ಭಾಗವಹಿಸಿದ್ದವರು, ಅದನ್ನು ಕಣ್ಣಾರೆ ಕಂಡಿದ್ದವರು ಎಷ್ಟು ಜನ ಬದುಕಿದ್ದಾರೋ ಎಲ್ಲೆಲ್ಲಿ ಇದ್ದಾರೋ ಇರುವವರಿಗೆ ಎಷ್ಟು ವಿಷಯಗಳು ಜ್ಞಾಪಕದಲ್ಲಿವೆಯೋ ಎಂಬುದನ್ನು ಪತ್ತೆ ಹಚ್ಚುವುದು ಸುಲಭದ ಕೆಲಸವಲ್ಲ. ಅದಕ್ಕಾಗಿ ಪತ್ರಿಕೆಗಳಿಗೆ ಪ್ರಕಟಣೆ ಕೊಡಲಾಯಿತು. ಸುಮಾರು 50,000 ಜನರು ಶಿವಪುರ ಕಾಂಗ್ರೆಸ್ ಅಧಿವೇಶನದಲ್ಲಿ ಭಾಗವಹಿಸಿದ್ದರೂ ಬಹುತೇಕ ಎಲ್ಲ ಪತ್ರಿಕೆಗಳಲ್ಲಿ ಪ್ರಕಟಿಸಿದ್ದರೂ ಪ್ರತಿಕ್ರಿಯೆ ವ್ಯಕ್ತಪಡಿಸಿದವರು ಕೇವಲ 40-50 ಮಂದಿ ಮಾತ್ರ. ಹೀಗೇಕೆ ಅನ್ನಿಸಿತು. ಇಷ್ಟರಿಂದ ಸಮಗ್ರ ವಿಷಯಗಳನ್ನು ಸಂಗ್ರಹಿಸಿ ಚರಿತ್ರೆ ಬರೆಯುವುದು ಹೇಗೆ ಸಾಧ್ಯ ಎಂದು ಭಯವಾಯಿತು. ಆ ಬಗೆಗೆ ಇರುವ ಗ್ರಂಥ ಸಾಮಗ್ರಿ ಅತ್ಯಲ್ಪ. ಇಲ್ಲವೆಂದರೂ ಒಪ್ಪುತ್ತದೆ. ಅಂದಮೇಲೆ ಒಂದು ಗ್ರಂಥ ಬರೆಯುವುದು ಸಾಧ್ಯವೇ ? ಕಾರ್ಯಾರಂಭ ಮಾಡಿದ್ದಾಯಿತು, ನಿಲ್ಲಿಸಬಾರದು ಎಂದು ನಿಶ್ಚಯಿಸಿಕೊಂಡೆ.

ಪ್ರತಿಯೊಂದಕ್ಕೂ ಹೊಸದಾಗಿ ಸಂಶೋಧನೆ ಮಾಡಬೇಕಾಯಿತು. ಹಲವು ಜನ ಹಿರಿಯ ಸ್ವಾತಂತ್ರ್ಯಯೋಧರನ್ನು ಭೇಟಿಮಾಡಿದೆ. ಸತ್ಯಾಗ್ರಹಿಗಳನ್ನು ಭೇಟಿ ಮಾಡಲು ನನ್ನೊಡನೆ ಪ್ರವಾಸಮಾಡಿ ಮಂಡ್ಯದ ಶ್ರೀ ಪಿ. ಎನ್. ಜವರಪ್ಪಗೌಡ ಮೊದಲಾದವರು ಬಹಳವಾಗಿ ಸಹಕರಿಸಿದರು. ಒಬ್ಬರಿಂದ ಇನ್ನೊಬ್ಬರ ಪರಿಚಯವಾಯಿತು; ಒಂದರಿಂದ ಮತ್ತೊಂದು ವಿಷಯದ ಕೊಂಡಿ ಸಿಕ್ಕಿತು. ಸಾಕಷ್ಟು ವ್ಯತ್ಯಾಸಗಳೂ ಇದ್ದವು. ಎಲ್ಲವನ್ನೂ ತಾಳೆನೋಡಿ ಅಧಿಕೃತವಾದುದನ್ನು ಪತ್ತೆ ಹಚ್ಚಬೇಕಾದರೆ ಸಾಕಷ್ಟು ಸಮಯ ಹಿಡಿಯಿತು. ವಿಷಯ ಸಂಗ್ರಹಕ್ಕೆ ಸುಮಾರು ಒಂದು ವರ್ಷ ಬೇಕಾಯಿತು. ಮಾಹಿತಿ ಸಂಗ್ರಹಕ್ಕೆ ಅನುಸರಿಸಿದ ಕ್ರಮಗಳು ಹೀಗಿವೆ :

1. ಸತ್ಯಾಗ್ರಹಿಗಳಿಂದ ಬಂದ ಪತ್ರ—ಲೇಖನಗಳು

ಪತ್ರಿಕೆಗಳಲ್ಲಿ ಸುದ್ದಿಯನ್ನು ಪ್ರಕಟಿಸಿದ ಮೇಲೆ ಕೆಲವರು—ಶಿವಪುರ ರಾಷ್ಟ್ರಕೂಟದಲ್ಲಿ ಭಾಗವಹಿಸಿದ್ದವರು, ಆ ಬಗೆಗೆ ಕೇಳಿದ್ದವರು—ತಮ್ಮ ಅನುಭವಗಳನ್ನು ಬರೆದು ಕಳಿಸಿಕೊಟ್ಟರು. ಇವು ವ್ಯವಸ್ಥಿತವಾದ ಲೇಖನಗಳಲ್ಲ. ಚೆಲ್ಲಾಪಿಲ್ಲಿಯಾಗಿ ನಿರೂಪಣೆಗೊಂಡ ನೆನಪುಗಳು. ಇಂಥವುಗಳನ್ನು ಸ್ಥೂಲವಾದ ಅರ್ಥದಲ್ಲಿ ಲೇಖನಗಳು ಎಂದಿದೆ

ಅಷ್ಟೆ. ಕೆಲವು ಒಂದೆರಡು ಸಾಲಿನ ಪತ್ರಗಳು. ಸುಮಾರು 40 ವರ್ಷಗಳ ಹಿಂದಿನ ಘಟನೆಗಳಾದ್ದರಿಂದ ಇವುಗಳಲ್ಲಿ ಅನೇಕ ಅಭಿಪ್ರಾಯಗಳು, ಅಂಕಿ ಅಂಶಗಳು ಹಿಂದು ಮುಂದಾಗಿದ್ದುವು. ಉತ್ಪ್ರೇಕ್ಷೆಯೂ ಸಾಕಷ್ಟಿತ್ತು. ಎಚ್ಚರಿಕೆಯಿಂದ ಪರಿಶೀಲಿಸಿ ಈ ಸಾಮಗ್ರಿಯನ್ನು ಬಳಸಿಕೊಂಡಿದೆ. ಶಿವಪುರಕ್ಕೆ ಹತ್ತಿರದವರಾದರೆ, ಇದ್ದುದನ್ನು ಇದ್ದಹಾಗೆ ಹೇಳಿರುವುದು ಖಾತ್ರಿಯಾದರೆ, ಶಿವಪುರ ರಾಷ್ಟ್ರಕೂಟದಲ್ಲಿ ಸ್ವತಃ ಭಾಗವಹಿಸಿದವರ ಅನುಭವಗಳಾದರೆ ಅಂಥದ್ದಕ್ಕೆ ಹೆಚ್ಚು ಗಮನಕೊಟ್ಟಿದೆ.

2. ಸತ್ಯಾಗ್ರಹಿಗಳ ಸಂದರ್ಶನದಿಂದ ವಿಷಯ ಸಂಗ್ರಹ

ಹಲವು ಊರುಗಳಿಗೆ ಹೋಗಿ ಶಿವಪುರ ರಾಷ್ಟ್ರಕೂಟದಲ್ಲಿ ನೇರವಾಗಿ ಭಾಗವಹಿಸಿದ್ದವರನ್ನು ಕಂಡು — ಬರೆದುಕೊಳ್ಳುವುದು ಕಷ್ಟವಾದುದರಿಂದ—ಧ್ವನಿ ಮುದ್ರಣ ಯಂತ್ರದಿಂದ ವಿಷಯಗಳನ್ನು ಸಂಗ್ರಹಿಸಲಾಯಿತು. ಶಿವಪುರ ಅಧಿವೇಶನಕ್ಕೆ ಸಂಬಂಧಿಸಿದಂತೆಯೇ ಹೆಚ್ಚಾಗಿ ಪ್ರಶ್ನೆಗಳನ್ನು ಕೇಳಿ ಅಭಿಪ್ರಾಯಗಳನ್ನು ರೆಕಾರ್ಡ್ ಮಾಡಿಕೊಂಡೆ. ಇವರೆಲ್ಲ ಈಗ ಇಳಿವಯಸ್ಸಿನಲ್ಲಿದ್ದಾರೆ. ಕೆಲವರಿಗೆ ಆರೋಗ್ಯ ಕೆಟ್ಟಿದೆ. ಇನ್ನು ಕೆಲವರಿಗೆ ಮಾತನಾಡುವುದು, ಕೇಳುವುದು, ನೋಡುವುದು ತೊಡಕಾಗಿದೆ. ಆದಷ್ಟೂ ಇವರನ್ನು ಉಪಯೋಗಿಸಿಕೊಂಡಿದೆ. ಲೇಖನಗಳನ್ನು ಕಳಿಸಿಕೊಟ್ಟವರಷ್ಟೇ ಇವರ ಅಭಿಪ್ರಾಯಗಳೂ ಮೂಲಗ್ರಂಥಕ್ಕೆ ಸಹಾಯಕವಾಗಿದೆ. ಈ ಸತ್ಯಾಗ್ರಹಿಗಳಲ್ಲಿ ಎಲ್ಲವೂ ನೆನಪಿನ ಮೇಲೆ ನಿಂತಿದೆ. ನಿರ್ದಿಷ್ಟ ದಾಖಲೆಗಳಿಲ್ಲ. ಪೋಲೀಸರು ಇವರ ಮನೆಗಳ ಮೇಲೆ ಮತ್ತೆ ಮತ್ತೆ ದಾಳಿ ಮಾಡುತ್ತಿದ್ದುದರಿಂದ, ಇವರು ಬಹುಕಾಲವನ್ನು ಭೂಗತವಾಗಿ ಅಥವಾ ಸೆರೆಮನೆಗಳಲ್ಲಿ ಅಥವಾ ಪರಸ್ಥಳಗಳಲ್ಲಿ ಕಳೆಯಬೇಕಾದುದರಿಂದ ದಾಖಲೆಗಳನ್ನು ರಕ್ಷಿಸಿಲ್ಲ. ಸ್ವಾತಂತ್ರ್ಯ ಬಂದಮೇಲಾದರೂ ಅಳಿದುಳಿದ ಅವಶೇಷಗಳನ್ನು ರಕ್ಷಿಸಬಹುದಾಗಿತ್ತು; ಆ ಶ್ರಮವನ್ನು ಇವರು ತೆಗೆದುಕೊಂಡಿಲ್ಲ. ಗುರಿಸಾಧನೆಯಾದ ಮೇಲೆ ಉಳಿದ ಯೋಚನೆಗಳನ್ನು ಮರೆತುಬಿಟ್ಟರು.

ಈ ಸತ್ಯಾಗ್ರಹಿಗಳು ಹಲವು ಸತ್ಯಾಗ್ರಹಗಳಲ್ಲಿ ಭಾಗವಹಿಸಿದ್ದಾರೆ. ಅನೇಕ ಸತ್ಯಾಗ್ರಹಗಳು ಒಂದೇ ರೀತಿ ನಡೆದಿವೆ. ಹಾಗಾಗಿ ಹಲವು ಹೇಳಿಕೆಗಳು ಹಿಂದುಮುಂದಾಗಿದ್ದುವು ಅಥವಾ ಗಾಜುಗೋಜಲಾಗಿದ್ದುವು. ಅವುಗಳನ್ನೆಲ್ಲ ಆದಷ್ಟು ಕ್ರಮಬದ್ಧವಾಗಿ ವಿಂಗಡಿಸಿ ಪರಿಭಾವಿಸಲು ಪ್ರಯತ್ನಿಸಿದೆ. ಬೇರೆ ಬೇರೆಯವರ ಅಭಿಪ್ರಾಯಗಳನ್ನು ತೌಲನಿಕವಾಗಿ ನೋಡಿದಾಗ ಇದು ಸಾಧ್ಯವಾಯಿತು.

ನೋಡಿದವರಿಗಿಂತ, ಕೇಳಿದವರಿಗಿಂತ, ಶಿವಪುರ ಅಧಿವೇಶನದಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದ್ದವರ ಅನುಭವಗಳಿಗೆ ಹೆಚ್ಚು ಗಮನಕೊಟ್ಟು ಅಂಥವರನ್ನು ಸಂದರ್ಶಿ

ಸುವಾಗ ವಿಚಿತ್ರವಾದ ಅನುಭವಗಳಾದುವು. ಕೆಲವರು ಭೇಟಿಮಾಡುವುದಕ್ಕೆ ಅವಕಾಶಕೊಡಲು ಸತಾಯಿಸಿದರು. ಒಬ್ಬೊಬ್ಬರು ಇಂದು ನಾಳೆ ಅಂತ ಅಲೆಸಿದರು. ಬಹಳ ಮಂದಿಯಲ್ಲಿ ಉತ್ಪ್ರೇಕ್ಷೆ ವಿಶೇಷವಾಗಿ ಕಂಡು ಬಂತು. ತಾವು ಪ್ರಯತ್ನಿಸ ದಿದ್ದರೆ ಈ ದೇಶಕ್ಕೆ ಸ್ವಾತಂತ್ರ್ಯವೇ ಬರುತ್ತಿರಲಿಲ್ಲ ಎನ್ನುವಂತೆ ಮಾತಾಡಿದವರೂ ಉಂಟು. ಈಗಿನ ಆಡಳಿತದ ಅನ್ಯಾಯ ಅಕ್ರಮ ಭ್ರಷ್ಟಾಚಾರಗಳನ್ನು ನೋಡಿದರೆ ನಾವು ಯಾಕಾದರೂ ಸ್ವಾತಂತ್ರ್ಯಕ್ಕೆ ಹೋರಾಡಿದೆವೊ ಎಂದು ಅನ್ನಿಸುತ್ತೆ ಅಂತ ಒಬ್ಬಿಬ್ಬರು ಕೊರಗಿದರು. "ಅಭಿಪ್ರಾಯಗಳನ್ನು ರೆಕಾರ್ಡ್ ಮಾಡಿಕೊಳ್ಳುತ್ತೇನೆ, ಎಲ್ಲವನ್ನೂ ನೆನಪಿಟ್ಟು ಕೊಳ್ಳುವುದು ಕಷ್ಟ" ಎಂದು ರೆಕಾರ್ಡರ್ ತೆಗೆದಾಗ "ಅಯ್ಯಯ್ಯೋ ಹಾಗೆಲ್ಲಾ ಮಾಡಬೇಡಿ. ತುರ್ತು ಪರಿಸ್ಥಿತಿ ಬೇರೆ! (ಆಗ ದೇಶದಲ್ಲಿ ತುರ್ತುಪರಿಸ್ಥಿತಿ ಇತ್ತು) ನಾನೇನೋ ಹೇಳೋದು, ಅದೇನೋ ಆಗೋದು, ಒಂದೂ ಬೇಡ. ಸುಮ್ಮನೆ ಕೇಳಿ. ಅನಂತರ ನಾನೇ ಎಲ್ಲವನ್ನೂ ಬರೆದು ಕಳಿಸಿಕೊಡ್ತೀನಿ" ಅಂತ ಒಬ್ಬಿಬ್ಬರು ಹೇಳಿದರು. ಹಾಗೆಂದವರು ಈ ವರೆಗೂ ಬರೆದು ಕಳಿಸಿಲ್ಲ. ಹಲವು ಸಾರಿ ಬರೆದ ಪತ್ರ ವ್ಯವಹಾರ ವ್ಯರ್ಥವಾಯಿತು.

ಕೆಲವರಿಗೆ ಹೇಳಬೇಕೂಂತ ಉತ್ಸಾಹವಿದ್ದರೂ ಅವರ ಅನಾರೋಗ್ಯದಿಂದ ಸಾಧ್ಯವಾಗಲಿಲ್ಲ. ಕೆಲವರು ಇರುವ ಸ್ಥಳಗಳನ್ನು ಹುಡುಕಿ, ಅವರು ಮನೆ ಯಲ್ಲಿರುವ ಸಮಯದಲ್ಲಿ ಭೇಟಿಮಾಡಲು ಸಾಕಷ್ಟು ತಾಳ್ಮೆವಹಿಸಬೇಕಾಯಿತು. ಆದರೂ ಕೆಲವು ಸತ್ಯಾಗ್ರಹಿಗಳ ಸಹಾಯ ಸಹಕಾರ ಅಪೂರ್ವವಾದುದು. ಪ್ರೀತಿ ಯಿಂದ ಬರಮಾಡಿಕೊಂಡು, ತಮಗೆ ತಿಳಿದ ವಿಷಯಗಳನ್ನು ವಿವರವಾಗಿ ಹೇಳಿ, ಜೊತೆ ಜೊತೆಗೇ ಕಳೆದ ಘಟನೆಗಳನ್ನು ಮೆಲುಕು ಹಾಕಿ, ಮತ್ತೊಮ್ಮೆ ಹಿಂದಿನದನ್ನು ಅನುಭವಿಸಿದರು. ಇದಕ್ಕೆ ಸಂಬಂಧಿಸಿದಂತೆ ನೋಡಬೇಕಾದ ವ್ಯಕ್ತಿಗಳ ಹೆಸರು ಗಳನ್ನು ಸೂಚಿಸಿದರು. ಅಂದಿನ ಚಿತ್ರಗಳು ಕಾಗದಪತ್ರಗಳು ಇರಬಹುದಾದ ಮೂಲಗಳನ್ನು ತಿಳಿಸಿದರು. ತಮ್ಮಲ್ಲಿ ಇದ್ದವುಗಳನ್ನು ಉದಾರವಾಗಿ ಕೊಟ್ಟರು. ಮಾಡುತ್ತಿರುವ ಕೆಲಸ ಒಳ್ಳೆಯದು, ಚೆನ್ನಾಗಿ ನಡೆಯಲಿ ಎಂದು ಹೃತ್ಪೂರ್ವಕ ವಾಗಿ ಹರಿಸಿದರು. ಇಂಥವರ ನಡತೆ ಹಲವು ಕಹಿಪ್ರಸಂಗಗಳನ್ನು ಮರೆಯಿಸಿ, ಕೆಲಸದಲ್ಲಿ ಇನ್ನಷ್ಟು ಉತ್ಸಾಹವನ್ನು ತುಂಬಿತು. ಇಲ್ಲದಿದ್ದರೆ ಕೆಲಸ ಮುಂದು ವರಿಯಲು ಸಾಧ್ಯವಾಗುತ್ತಿರಲಿಲ್ಲ.

3. ಹಿಂದಿನ ಗ್ರಂಥಗಳ ಸಹಾಯ

ಶಿವಪುರ ಅಧಿವೇಶನಕ್ಕೆ ಸಂಬಂಧಿಸಿದಂತೆ ಇರಬಹುದಾದ ಪತ್ರಿಕೆಗಳನ್ನು ಗ್ರಂಥ ಗಳನ್ನು ಶೋಧನೆ ಮಾಡಲಾಯಿತು. ನನ್ನ ಹುಡುಕಾಟದ ಪ್ರಾರಂಭದಲ್ಲಿ 1938 ನೇ

ಇಸವಿಯಲ್ಲಿ ಇದ್ದ ಹೆಚ್ಚು ಪತ್ರಿಕೆಗಳು ಸಿಗಲಿಲ್ಲ. ಇದ್ದ ಕೆಲವು ಸಂಚಿಕೆಗಳನ್ನು (ವಿಶ್ವಕರ್ನಾಟಕ ಪತ್ರಿಕೆಯದು) ಒಬ್ಬರು ನಮ್ಮ ಪ್ರಯತ್ನಕ್ಕೆ ಒಂದೆರಡು ತಿಂಗಳ ಹಿಂದೆ ಮನೆಯನ್ನು ಚೊಕ್ಕಟ ಮಾಡುವಾಗ ಹಳೆಯ ಪತ್ರಿಕೆಗಳು ಅಂತ ಕಾಫಿ ಕಾಯಿಸಲು ಬಳಸಿದರಂತೆ. ಸಾಕಷ್ಟು ಪ್ರಯತ್ನಪಟ್ಟು ಪತ್ರಿಕೆಗಳ ಯೋಚನೆಯನ್ನು ಕೈಬಿಡಲಾಯಿತು.

ದೊರೆತ ಗ್ರಂಥಗಳ ಸಹಾಯವೂ ಕಡಮೆಯೇ. ಕರ್ನಾಟಕ ಸ್ವಾತಂತ್ರ್ಯಕ್ಕೆ ಸಂಬಂಧಿಸಿದ ಗ್ರಂಥಗಳಲ್ಲಿ ಶಿವಪುರದ ಘಟನೆ ಒಂದೋ ಎರಡೋ ವಾಕ್ಯಗಳಷ್ಟು ಬಂದಿದೆ, ಅಷ್ಟೆ. ಶಿವಪುರ ಕಾಂಗ್ರೆಸ್ಸಿನ ಸ್ಮರಣ ಸಂಚಿಕೆಗಾಗಿ (ಒಂದು ಸಂಚಿಕೆ ಪ್ರಕಟವಾಗಿತ್ತಂತೆ) ಪತ್ರಿಕೆಗಳಿಗೆ ಪ್ರಕಟನೆ ಕೊಟ್ಟರೂ ಪ್ರಯತ್ನ ವಿಫಲವಾಯಿತು. ಸಿಕ್ಕಿದ ಹರಕು ಮುರಕು ಸಾಹಿತ್ಯವನ್ನೇ ಬಳಸಿಕೊಂಡಿದೆ.

ಮೈಸೂರು ಕಾಂಗ್ರೆಸ್ ಕಚೇರಿಯಲ್ಲಿ ಸರಿಯಾಗಿ ದಾಖಲೆಗಳು ಸಿಗುತ್ತಿಲ್ಲ. ಮೊದಲಿಂದಲೂ ಕಾಂಗ್ರೆಸ್ ಕಚೇರಿ ಬೇರೆ ಬೇರೆ ಸ್ಥಳಗಳಲ್ಲಿ ಬೇರೆ ಬೇರೆ ಬಾಡಿಗೆ ಮನೆಗಳಲ್ಲಿ ಇತ್ತು. ಅದರಲ್ಲಿ ಅನೇಕರು ಕೆಲಸಮಾಡಿದರು. ಕೇಳಿದರೆ ಅವರ್ಯಾರೂ ಯಾವ ದಾಖಲೆಗಳು ಇಲ್ಲ ಅನ್ನುತ್ತಾರೆ. ಏಕೆ ಹೀಗೆ? ಕಚೇರಿಯ ಕಾಗದ ಪತ್ರಗಳು, ಸ್ಮರಣಸಂಚಿಕೆಗಳು, ಭಾವಚಿತ್ರಗಳು ಏನಾದುವು? ಒಬ್ಬರನ್ನು ವಿಚಾರಿಸಿದಾಗ "ಅವೆಲ್ಲ ಪೋಲೀಸರ ವಶವಾದುವು" ಎಂದರು. ಇನ್ನೊಬ್ಬರು "ಕಚೇರಿಯಲ್ಲಿ ಕೆಲಸಮಾಡುತ್ತಿದ್ದವರೇ ಎಲ್ಲವನ್ನೂ ಕಳವು ಮಾಡಿದರು" ಎಂದರು.

ಕುತೂಹಲದಿಂದ ಹಿಂದೆ ಕಾಂಗ್ರೆಸ್ ಕಚೇರಿಯಲ್ಲಿ ಕೆಲಸಮಾಡುತ್ತಿದ್ದ ಒಬ್ಬರನ್ನು ಕಂಡು ವಿಚಾರಿಸಿದೆ. ಅವರೊಡನೆ ಎರಡು ಗಂಟೆ ಮಾತಾಡಿದೆ. ಅವರ ಹತ್ತಿರ ಕೆಲವು ಸಾಮಗ್ರಿ ಇರುವುದು ಖಚಿತವಾಯಿತು. ಆದರೆ ನಾನು ಎಷ್ಟು ಗೋಗರೆದರೂ ಅವರು ಯಾವುದನ್ನೂ ಹೊರಗೆ ತೆಗೆಯಲಿಲ್ಲ.

ಮೈಸೂರು ಕಾಂಗ್ರೆಸ್ಸಿಗೂ ಮೈಸೂರು ಸಂಸ್ಥಾನದ ಸ್ವಾತಂತ್ರ್ಯ ಸಂಗ್ರಾಮಕ್ಕೂ ಅವಿನಾ ಸಂಬಂಧವಿದೆ. ಎರಡರ ಇತಿಹಾಸವೂ ಖಚಿತವಾಗಿ ದಾಖಲೆಯಾಗಬೇಕಾಗಿದೆ. ಪ್ರಾರಂಭದ ದಾಖಲೆಗಳನ್ನೆಲ್ಲ ಸಂಗ್ರಹಿಸಿಕೊಂಡು ಮೈಸೂರು ಕಾಂಗ್ರೆಸ್ಸಿನ ನಿಜವಾದ ಚರಿತ್ರೆಯನ್ನು ಬರೆಯಿಸುವ ಪ್ರಯತ್ನಕ್ಕೆ ಸರಕಾರ ಯೋಚಿಸಬೇಕು. ಹಿಂದೆ ಕಾಂಗ್ರೆಸ್ಸಿನ ಕಚೇರಿಯಲ್ಲಿ ಯಾರ್ಯಾರು ಕೆಲಸಮಾಡುತ್ತಿದ್ದರೋ ಅಂಥವರು ಇನ್ನೂ ಬದುಕಿದ್ದರೆ ಅಂಥವರಿಂದ ಕಾಂಗ್ರೆಸ್ಸಿಗೆ ಸಂಬಂಧಿಸಿದ ಸಾಮಗ್ರಿಗಳನ್ನು ಆದಷ್ಟುಬೇಗ ವಶಪಡಿಸಿಕೊಳ್ಳಬೇಕು. ಇಲ್ಲದಿದ್ದರೆ ಇತಿಹಾಸಕಾರರಿಗೆ, ಸಂಶೋಧಕರಿಗೆ ಬಹಳ ತೊಂದರೆಯಾಗುತ್ತದೆ. ಮೈಸೂರು ಕಾಂಗ್ರೆಸ್ಸಿನ ಇತಿಹಾಸ ಸಿದ್ಧವಾದರೆ ಮೈಸೂರಿನ ರಾಜಕೀಯ ಇತಿಹಾಸವೂ ಸಿದ್ಧವಾದಂತಾಗುತ್ತದೆ. ಈ

ನಿಟ್ಟಿನಲ್ಲಿ ಆಗಬೇಕಾದ ಕೆಲಸ ಬಹಳ ಇದೆ. ಕೇವಲ ಕಲ್ಪನೆಯಿಂದ ಇತಿಹಾಸ ಕಟ್ಟಿದರೆ ಸತ್ಯಕ್ಕೆ ದೂರವಾಗುತ್ತದೆ.

ಅಂತೂ, ಸಂಗ್ರಹಿಸಿದ ಮಾಹಿತಿಗಳ ಆಧಾರದಿಂದ "ಶಿವಪುರ ಧ್ವಜ ಸತ್ಯಾಗ್ರಹ" ಗ್ರಂಥವನ್ನು ಬರೆದು ಸಿದ್ಧಪಡಿಸಿದೆ. ಮತ್ತೆ ಮತ್ತೆ ಓದಿದೆ. ಸಮಾಧಾನವಾಗಲಿಲ್ಲ. ಅಂದಿನ ಘಟನೆಗಳನ್ನು ವರದಿ ಮಾಡಿರುವ ಒಂದಾದರೂ ಪತ್ರಿಕೆ ಸಿಕ್ಕಿದ್ದರೆ ಇನ್ನಷ್ಟು ಉಪಯೋಗವಾಗುತ್ತಿತ್ತಲ್ಲಾ ಎಂದು ಹುಡುಕುತ್ತಲೇ ಇದ್ದೆ. ಶ್ರೀ ಖಾದ್ರಿ ಶಾಮಣ್ಣನವರ ಮೂಲಕ 'ಸಂಯುಕ್ತ ಕರ್ನಾಟಕ'ದ ಸಂಚಿಕೆಗಳು ಇರುವುದು ತಿಳಿಯಿತು. ಹುಬ್ಬಳ್ಳಿಗೆ ಹೋಗಿ ನೋಡಿದಾಗ ನನಗೆ ಅಪೂರ್ವನಿಧಿ ಸಿಕ್ಕಿದಷ್ಟು ಸಂತೋಷವಾಯಿತು. ಸ್ವಾತಂತ್ರ್ಯಪೂರ್ವದ ದಾಖಲೆಗಳಿಗೆ ಆಧಾರವಾಗಿ ಉಳಿದುಕೊಂಡಿರುವ ಕನ್ನಡದ ಏಕೈಕ ಪತ್ರಿಕೆ ಇದು. ಹಲವರು ಬಳಸಿ ಬಳಸಿ ಜೀರ್ಣವಾಗಿರುವ ಈ ಅಪರೂಪದ ಪತ್ರಿಕೆಯನ್ನು ವೈಜ್ಞಾನಿಕ ಪದ್ಧತಿಯಿಂದ ಜೋಪಾನವಾಗಿ ಕಾಪಾಡಿಕೊಳ್ಳುವುದು ಅಗತ್ಯವಾಗಿದೆ. ಮೈಸೂರು ಸಂಸ್ಥಾನದ ಸ್ವಾತಂತ್ರ್ಯ ಹೋರಾಟ ಮತ್ತು ಕರ್ನಾಟಕ ಏಕೀಕರಣದ ಹೋರಾಟಗಳಿಗೆ ಸಂಬಂಧಿಸಿದ್ದಂತೆ ಇದರಲ್ಲಿ ಹಲವು ಉಪಯುಕ್ತವಾದ ವಿವರಗಳು ದೊರೆಯುತ್ತವೆ. ನನಗೆ ಬೇಕಾದ ವಿವರಗಳನ್ನು ಸಂಗ್ರಹಿಸಿದೆ. ಯಾರಿಂದಲೋ 'ದಿ ಹಿಂದು' ಪತ್ರಿಕೆಯ ಸುಳುಹು ಹತ್ತಿತು. ಮದರಾಸಿಗೆ ಹೋಗಿ ಹಿಂದಿನ ಸಂಚಿಕೆಗಳ ಮೈಕ್ರೋಫಿಲಂ ಅನ್ನು ತಿರುವಿಹಾಕಿದೆ. ಸಾಕಷ್ಟು ವಿಷಯ ಸಿಕ್ಕಿತು. ಈ ಎರಡೂ ಪತ್ರಿಕೆಗಳ ಮಾಹಿತಿಗಳನ್ನು ಧಾರಾಳವಾಗಿ ಬಳಸಿಕೊಂಡಿದೆ. ಎಷ್ಟು ಪ್ರಯತ್ನಪಟ್ಟರೂ ಇಂಡಿಯನ್ ಎಕ್ಸ್‌ಪ್ರೆಸ್ ಮತ್ತು ವಿಶ್ವಕರ್ನಾಟಕದ 1938ನೇ ಇಸವಿಯ ಸಂಚಿಕೆಗಳು ಸಿಗಲಿಲ್ಲ. ಸಂಯುಕ್ತ ಕರ್ನಾಟಕ ಮತ್ತು ಹಿಂದು ಪತ್ರಿಕೆಗಳಿಂದ ದೊರೆತ ಸಾಮಗ್ರಿಯ ಆಧಾರದ ಮೇಲೆ ಇಡೀ ಗ್ರಂಥವನ್ನು ಸಂಪೂರ್ಣವಾಗಿ ಪರಿಷ್ಕರಿಸಿದೆ. ಸತ್ಯಾಗ್ರಹಿಗಳಿಂದ ಸಂಗ್ರಹಿಸಿದ ವಿಷಯಗಳ ಖಚಿತತೆಗೆ, ಅಂಕಿಅಂಶಗಳ ನಿಜಸ್ಥಿತಿಗೆ ಸಿಕ್ಕಿದ ಪತ್ರಿಕೆಗಳು ಸಹಾಯಕವಾದುವು. ಗ್ರಂಥರಚನೆಯ ಕಾರ್ಯ ಮುಗಿದ ಮೇಲೆ ಶ್ರೀ ಕೆ. ಹನುಮಂತಯ್ಯನವರು ಅಲ್ಲಿಲ್ಲಿ ಓದಿ ಸಲಹೆ ಸೂಚನೆಗಳನ್ನು ನೀಡಿದರು. ಅನಂತರವೂ ಸಾಕಷ್ಟು ಪರಿಷ್ಕರಣವಾಯಿತು.

ಹಲವು ಮೂಲಗಳಿಂದ ನಾನು ಕಲೆಹಾಕಿದ ಮಾಹಿತಿಗಳ ಆಧಾರದಿಂದ ಐತಿಹಾಸಿಕ ಪ್ರಜ್ಞೆಗೆ ಚ್ಯುತಿ ತರದೆ ಕರಾರುವಾಕ್ಕಾಗಿ ನಿಷ್ಪಕ್ಷಪಾತವಾಗಿ ಈ ಗ್ರಂಥವನ್ನು ಬರೆದಿದ್ದೇನೆ. ಗ್ರಂಥದ ಉದ್ದಕ್ಕೂ ಇದೊಂದು 'ಚರಿತ್ರೆ' ಎಂಬುದನ್ನು ದೃಷ್ಟಿಯಲ್ಲಿಟ್ಟುಕೊಂಡಿದ್ದೇನೆ. ಸಣ್ಣಪುಟ್ಟ ವಿಷಯಗಳಿಗೂ ಹೆಚ್ಚು ಗಮನ ಕೊಟ್ಟಿದೆ. ಕಾಲಗರ್ಭದಲ್ಲಿ ಮರೆಯಾಗಬಹುದಾಗಿದ್ದ ಅನೇಕ ಘಟನೆಗಳನ್ನು ವ್ಯಕ್ತಿಗಳನ್ನು ಸತ್ಯವಾಗಿ ಬೆಳಕಿಸಲು ಪ್ರಯತ್ನಿಸಿದೆ. ಇನ್ನೂ ಎಷ್ಟೋ ಅಂಶಗಳು ಬಿಟ್ಟುಹೋಗಿರುವ ಸಾಧ್ಯತೆ ಇದೆ. ಇತಿಹಾಸಕಾರರ ಸತತ ಸಂಶೋಧನೆ ಪರಿಶ್ರಮ

ಗಳಿಂದ ಅವು ಮುಂದೆ ಬೆಳಕಿಗೆ ಬರಬೇಕಾಗಿದೆ. ನನಗಿದ್ದ ಕಾಲಾವಕಾಶ ಮತ್ತು ನನಗೆ ದೊರೆತ ಮಾಹಿತಿಗಳಿಂದ ಎಷ್ಟು ಸಾಧ್ಯವೋ ಅಷ್ಟರಮಟ್ಟಿಗೆ ಶಿವಪುರಧ್ವಜ ಸತ್ಯಾಗ್ರಹದ ಚರಿತ್ರೆಯನ್ನು ಗ್ರಂಥವಾಗಿಸಲು ಪ್ರಯತ್ನಿಸಿದ್ದೇನೆ.

ಈ ಗ್ರಂಥದ ಮಾಹಿತಿ ಸಂಗ್ರಹ, ರಚನೆ, ಪರಿಷ್ಕರಣಕ್ಕೆ ಸುಮಾರು ಎರಡು ವರ್ಷಗಳ ಸಮಯ ಬೇಕಾಯಿತು. ಇದು ಅನಿವಾರ್ಯ ಎನ್ನುವುದು ಈ ಕ್ಷೇತ್ರ ದಲ್ಲಿ ಕೆಲಸ ಮಾಡಿರುವವರಿಗೆ ಸ್ವಯಂವೇದ್ಯ. ಇದರಲ್ಲಿ ಮುಖ್ಯವಾದ ಮೂರು ಘಟ್ಟಗಳಿವೆ. 1. 1938ಕ್ಕೆ ಮೊದಲು ಮೈಸೂರು ಸಂಸ್ಥಾನದ ರಾಜಕೀಯ ಪರಿಸ್ಥಿತಿ. 2. 1938ರಲ್ಲಿ ನಡೆದ ಶಿವಪುರ ಧ್ವಜಸತ್ಯಾಗ್ರಹದ ವಿವರಗಳು. ಮತ್ತು 3. ಶಿವಪುರ ಧ್ವಜಸತ್ಯಾಗ್ರಹದ ಪ್ರಭಾವ. ಸಾಹಿತ್ಯಾಭ್ಯಾಸಿಗಳಿಗೆ, ಇತಿಹಾಸ ಪ್ರಿಯರಿಗೆ ಈ ಗ್ರಂಥ ಪ್ರಿಯವಾದರೆ ನನ್ನ ಶ್ರಮ ಸಾರ್ಥಕವಾಗುತ್ತದೆ.

ಇದನ್ನು ಬರೆಯಲು ಅವಕಾಶಮಾಡಿಕೊಟ್ಟ ಶ್ರೀ ಕೆ. ಹನುಮಂತಯ್ಯನವರಿಗೆ, ಸತ್ಯಾಗ್ರಹಿಗಳನ್ನು ಸಂದರ್ಶಿಸಲು ಸಹಕರಿಸಿದ ಹಿರಿಯ ಕಿರಿಯ ಸ್ನೇಹಿತರಿಗೆ, ಹಲವು ಮಾಹಿತಿಗಳನ್ನು ಒದಗಿಸಿಕೊಟ್ಟ ಸತ್ಯಾಗ್ರಹಿಗಳಿಗೆ, ಇತರ ಸಾಮಗ್ರಿಯನ್ನು ನೀಡಿದ ಆತ್ಮೀಯರಿಗೆ, ಗ್ರಂಥರಚನೆ ಮತ್ತು ಪ್ರಕಟಣೆಗೆ ಸಂಬಂಧಿಸಿದಂತೆ ನಾನಾ ರೀತಿಯಲ್ಲಿ ಸಹಾಯಮಾಡಿದ ಮಹನೀಯರಿಗೆ ನಾನು ಕೃತಜ್ಞನಾಗಿದ್ದೇನೆ.

ಬೆಂಗಳೂರು
11–4–1979

ಡಿ. ಲಿಂಗಯ್ಯ

ಶಿವಪುರ ಧ್ವಜಸತ್ಯಾಗ್ರಹ

ಸಿಂಹಾವಲೋಕನ

ಮಾನವನು ಸ್ವಾತಂತ್ರ್ಯ ಪ್ರೇಮಿ. ಅನ್ಯರ ದಬ್ಬಾಳಿಕೆಯಿಂದ ಹೊರಗಿರಲು, ಪ್ರಕೃತಿಯಲ್ಲಿ ಸಹಜವಾಗಿ ಸ್ವತಂತ್ರ್ಯವಾಗಿ ಬದುಕಲು ಅವನು ಆದಿ ಕಾಲದಿಂದ ಹೋರಾಡಿದ್ದಾನೆ. ಆಕಸ್ಮಿಕವಾಗಿ ಅನ್ಯರ ಆಳ್ವಿಕೆಗೆ ಸಿಕ್ಕಿ ಕೆಲವು ಕಾಲ ತೊಳಲಾಡಬೇಕಾಗಿ ಬಂದರೂ ಅದರಿಂದ ಆದಷ್ಟು ಬೇಗ ಬಿಡಿಸಿಕೊಳ್ಳಲು ಮನುಷ್ಯ ಹೋರಾಡಿರುವುದು ಜಗತ್ತಿನ ಇತಿಹಾಸದ ಉದ್ದಕ್ಕೂ ಕಂಡುಬರುತ್ತದೆ. ಬುದ್ಧಿಜೀವಿಯಾದ ಮನುಷ್ಯನನ್ನು ದಾಸ್ಯದಲ್ಲಿಟ್ಟು ಆಳುವುದು ಸಾಧ್ಯವಿಲ್ಲ ಎಂಬ ಸತ್ಯವನ್ನು ಇತಿಹಾಸ ಸಾರಿ ಸಾರಿ ಹೇಳುತ್ತದೆ.

ಕಾರಣಾಂತರದಿಂದ ಭಾರತವು ಹಲವರ ಆಳ್ವಿಕೆಗೆ ಒಳಗಾಗಿತ್ತು. ಸ್ವಾತಂತ್ರ್ಯಕ್ಕೆ ಪೂರ್ವದಲ್ಲಿ ಸುಮಾರು 180 ವರ್ಷಗಳ ದೀರ್ಘಕಾಲದವರೆಗೆ ಭಾರತ ಬ್ರಿಟಿಷರ ದಬ್ಬಾಳಿಕೆಗೆ ಸಿಕ್ಕಿತ್ತು. ಆ ಅವಧಿಯಲ್ಲಿ ಮೊದಮೊದಲು ದಾಸ್ಯ ಶೃಂಖಲೆಯನ್ನು ಕಿತ್ತೊಗೆದು ಸ್ವತಂತ್ರವಾಗಿ ಉಸಿರಾಡಲು ಸಣ್ಣಪುಟ್ಟ ಪ್ರಯತ್ನಗಳು ನಡೆದುವು. ಆದರೆ ಆ ಪ್ರಯತ್ನಗಳು ಆಳುವವರ ಬಂದೂಕದ ಮುಂದೆ ವಿಫಲವಾದುವು. ಅಜ್ಞಾನ, ಅಂತಃಕಲಹ, ಜಾತೀಯತೆ, ಒಗ್ಗಟ್ಟಿನ ಕೊರತೆ, ಸ್ವಾರ್ಥ ಮೊದಲಾದ ಅನಿಷ್ಟಗಳಿಗೆ ತುತ್ತಾದ ಭಾರತೀಯರು ಬ್ರಿಟಿಷರ ಆಳ್ವಿಕೆಯಿಂದ ವಿಮೋಚನೆ ಪಡೆದು ಸ್ವತಂತ್ರರಾಗಲು ಸುಮಾರು 100 ವರ್ಷಗಳು ಸತತವಾಗಿ ಹೋರಾಡಬೇಕಾಯಿತು.

ಕುತಂತ್ರದಿಂದ, ಬಂದೂಕದ ಬಲದಿಂದ, ಬ್ರಿಟಿಷರು ಭಾರತೀಯರನ್ನು ತಮ್ಮ ಅಧೀನದಲ್ಲಿಟ್ಟುಕೊಂಡು ಅಧಿಕಾರ ನಡೆಸುತಿದ್ದರೂ ಆ ಅಧಿಕಾರಶಾಹಿಗಳಿಗೆ ಚಳ್ಳೆ ಹಣ್ಣು ತಿನ್ನಿಸಲು ಅನೇಕ ಜೀವಗಳು ತುಡಿಯುತ್ತಿದ್ದುವು. ಆದರೆ ಆ ತುಡಿತ ಸುಪ್ತವಾಗಿದ್ದು ಪ್ರಕಟವಾಗಲು ಸೂಕ್ತ ಕಾಲಕ್ಕಾಗಿ ಕಾಯುತ್ತಿತ್ತು. ಶಕ್ತರು ಅಶಕ್ತರನ್ನು ದಬ್ಬಾಳಿಕೆಯಿಂದ ಗುಲಾಮರನ್ನಾಗಿಸಿಕೊಂಡು ಅವರನ್ನು ಛಿದ್ರಮಾಡಲು ಸನ್ನಾಹಗಳು ನಡೆಯುತ್ತಲೇ ಇರುತ್ತವೆ. ಈ ಪ್ರವೃತ್ತಿ ಯುಗಧರ್ಮವೂ ಹೌದು. ಸತ್ಯವಾದ, ಧರ್ಮವಾದ, ವಿಶ್ವಮಾನ್ಯವಾದ ಸ್ಥಿತಿಯತ್ತ ಮನುಕುಲವನ್ನು ಸಾಗಿಸಲು ಎಲ್ಲ ತ್ಯಾಗಕ್ಕೂ, ಬಲಿದಾನಕ್ಕೂ ಸಿದ್ಧಗೊಳಿಸುವ ಚೇತನಗಳನ್ನು ಆ ಯುಗಧರ್ಮವೇ ಸೃಷ್ಟಿಸಿಕೊಳ್ಳುತ್ತದೆ. ಆ ಚೇತನಗಳು ಕಾಲ ಪಕ್ವವಾದಾಗ ಭುಗಿಲ್ಲೆಂದು ಪ್ರಕಟ

ವಾಗುತ್ತವೆ. ಅವುಗಳ ಶಕ್ತಿ ಸಾಮರ್ಥ್ಯವನ್ನು ಯಾವ ಅಧಿಕಾರಶಾಹಿಯಾಗಲಿ ಹತ್ತಿಕ್ಕಲು ಅಸಮರ್ಥವಾಗುತ್ತದೆ. ಆ ಚೇತನಗಳ ಪ್ರಕಾಶನ ಯಾರ ಮೂಲಕ, ಯಾವ ಸಂದರ್ಭದಲ್ಲಿ ಆಗುತ್ತದೆ ಎಂಬುದೂ ಆಕಸ್ಮಿಕವಾಗಿರುತ್ತದೆ. ಅಂಥ ಸಂದರ್ಭದಲ್ಲಿ ಯಾನೋ ಒಬ್ಬ ವ್ಯಕ್ತಿ ಯುಗಪ್ರವರ್ತಕನಾಗುತ್ತಾನೆ. ಉಳಿದ ಜನಸಮೂಹ ಅವನ ಅನುಯಾಯಿಗಳಾಗುತ್ತಾರೆ. ಹಾಗೆ ಭಾರತಕ್ಕೆ ಲಭ್ಯವಾದ ಯುಗಪ್ರವರ್ತಕ ಮಹಾತ್ಮ ಗಾಂಧೀಜಿ. ಆ ರಾಷ್ಟ್ರಪಿತನ ಮೂಲಕ ಭಾರತದಲ್ಲಿ ಹೊಸ ಸ್ಫೂರ್ತಿ ಸಂಚಾರವಾಗಲು ಕಾರಣವಾಯಿತು.

ನೂರಾರು ವರ್ಷಗಳಿಂದ ದಾಸ್ಯಕ್ಕೆ ಸಿಕ್ಕಿದ್ದ ಭಾರತವನ್ನು ವಿಮೋಚನೆಮಾಡಿ. ಆಧ್ಯಾತ್ಮಿಕ ಪ್ರಕಾಶದ ಸುಸಂಸ್ಕೃತಮಯವಾದ ಪ್ರಾಚೀನ ಭಾರತವನ್ನು ಸ್ವತಂತ್ರಗೊಳಿಸಲು ಗಾಂಧೀಜಿಯವರು ಬದ್ಧಕಂಕಣರಾದರು. ಮಾನವಪ್ರೇಮಿಯಾದ ಅವರು ರಕ್ತಪಾತವನ್ನು ತೊರೆದು ಅಹಿಂಸಾಮಾರ್ಗವನ್ನು ಅನುಸರಿಸಿ ಬ್ರಿಟಿಷರನ್ನು ಭಾರತದಿಂದ ಅಟ್ಟಲು ಸಾಮೂಹಿಕ ಚಳುವಳಿಗಳನ್ನು ಪ್ರಾರಂಭಿಸಿದರು. ಮಹಾತ್ಮ ಗಾಂಧೀಜಿಯವರ ಚಳುವಳಿಗಳು, ಘೋಷಣೆಗಳು, ವಿಚಾರ ಪ್ರಣಾಳಿಕೆಗಳು ಭಾರತದ ಮೂಲೆ ಮೂಲೆಗೂ ಮುಟ್ಟಿದುವು. ವಿದ್ಯಾವಂತರು, ಅವಿದ್ಯಾವಂತರು ಅವರ ಪ್ರಭಾವಕ್ಕೆ ಒಳಗಾಗಿ ಸ್ವಾತಂತ್ರ್ಯಪ್ರೇಮಿಗಳು ಲಕ್ಷ ಲಕ್ಷ ಸಂಖ್ಯೆಯಲ್ಲಿ ಗಾಂಧೀಜಿಯವರ ಬೆಂಬಲಿಗರಾದರು, ಸಕ್ರಿಯವಾಗಿ ಚಳುವಳಿಗಳಲ್ಲಿ ಭಾಗವಹಿಸಿದರು.

ಬ್ರಿಟಿಷರ ದಬ್ಬಾಳಿಕೆಗೆ ಸಿಕ್ಕಿ ಆರ್ಥಿಕವಾಗಿ, ರಾಜಕೀಯವಾಗಿ, ಶೈಕ್ಷಣಿಕವಾಗಿ ಹಿಂದುಳಿದಿದ್ದ ಭಾರತೀಯರಲ್ಲಿ ಗಾಂಧೀಜಿಯವರ ರಾಜಕೀಯ ಚಳುವಳಿಗಳು ಎಷ್ಟರ ಮಟ್ಟಿಗೆ ಜಾಗೃತಿಯನ್ನುಂಟು ಮಾಡಿದುವು ಎಂಬ ಬಗೆಗೆ ನೂರಕ್ಕೆ ನೂರರಷ್ಟು ಖಂಡಿತವಾಗಿ ಉತ್ತರಿಸುವುದು ಕಷ್ಟ. ಗಾಂಧೀಜಿಯವರದು ಸೌಮ್ಯವಾದ ಅಹಿಂಸಾ ಚಳುವಳಿ. ಉಗ್ರವಾದ ಹಿಂಸಾತ್ಮಕ ಚಳುವಳಿಯಾಗಿದ್ದರೆ ಜನರಿಗೆ ಅದರ ಕಾವು ಬೇಗ ತಟ್ಟುತಿತ್ತು. ಆದರೆ ಅಂಥ ಚಳುವಳಿಯಿಂದ ಭಾರತೀಯರ ಪ್ರಾಣಹಾನಿ ಹೆಚ್ಚುತಿತ್ತು. ಗಾಂಧೀಜಿಯವರಿಗೆ ಅದು ಹಿಡಿಸಲಿಲ್ಲ. ರಕ್ತದ ಕೋಡಿಯಿಂದಲೇ ಸ್ವಾತಂತ್ರ್ಯ ಲಭ್ಯವಾಗುವುದೆಂಬ ಇತಿಹಾಸ ಸತ್ಯ ಅವರಿಗೆ ಗೊತ್ತಿದ್ದರೂ ಮಾನವಪ್ರೇಮಿಯಾದ ಅವರು ಅಹಿಂಸಾತ್ಮಕವಾದ ಚಳುವಳಿಯನ್ನು ಆರಿಸಿಕೊಂಡುದು ಜಗತ್ತಿನ ಇತಿಹಾಸದಲ್ಲೇ ಹೊಸ ವಿಷಯ. ಅವಿದ್ಯಾವಂತರ ಸಂಖ್ಯೆ ಅತಿಯಾಗಿದ್ದ ಅಂದಿನ ಭಾರತದಲ್ಲಿ ಗಾಂಧೀಜಿಯವರ ಎಲ್ಲ ಆಲೋಚನೆಗಳು ಮತ್ತು ವಿಧಾನಗಳು ಜನರ ಹೃದಯಕ್ಕೆ ನಾಟಿದ್ದುವು ಎಂದು ಹೇಳುವುದಕ್ಕಾಗುವುದಿಲ್ಲ. ಆದರೆ ಅಂದಿನ ಸಾವಿರಾರು ವಿದ್ಯಾವಂತರು ಗಾಂಧೀಜಿಯವರನ್ನು ಅರ್ಥಮಾಡಿಕೊಂಡಿದ್ದರು. ಅವರು ಗಾಂಧೀಜಿಯವರ ಚಳುವಳಿಗಳನ್ನು ಕೈಗೆತ್ತಿಕೊಂಡು ಸಹಕಾರ ನೀಡಲು ಮುಂದಾದುದರಿಂದ, ಉಳಿದವರು ಅಂಥ ಮಾರ್ಗವನ್ನು ಸುಲಭವಾಗಿ ಅನುಸರಿಸಲು ಅನುಕೂಲವಾಯಿತು. ಹಾಗಾಗಿ, ಗಾಂಧೀಜಿಯವರ ಚಳುವಳಿಗಳು ಒಂದು ವರ್ಗದ ಜನರಿಗೆ

ಬೇಗ ಮುಟ್ಟುವಂತಾದರೂ ಕ್ರಮೇಣ ಭಾರತೀಯರೆಲ್ಲರ ಮನ, ಮನೆಗಳನ್ನು ಪ್ರವೇಶಿಸಿದವು. ಚಳುವಳಿಗಳು ಕಾಡ್ಗಿಚ್ಚಿನಂತೆ ದೇಶದಲ್ಲೆಲ್ಲಾ ಹರಡಿಕೊಂಡವು.

ಗಾಂಧೀಜಿಯವರ ಚಳುವಳಿ ಪ್ರಾರಂಭದಲ್ಲಿ ಬ್ರಿಟಿಷ್ ಇಂಡಿಯಾದಲ್ಲಿ ಮಾತ್ರ ಕಾಣಿಸಿಕೊಂಡಿತು. ದೇಶೀಯ ಸಂಸ್ಥಾನಗಳಿಗೆ ಚಳುವಳಿಯ ಕಾವು ಬೇಗ ಹರಡಲಿಲ್ಲ. ಕಾರಣ : ದೇಶೀಯ ಸಂಸ್ಥಾನಗಳ ಸ್ಥಿತಿಗತಿಗಳು ಬೇರೆಯಾಗಿದ್ದವು. ಇವು ಬ್ರಿಟಿಷರ ಆಳ್ವಿಕೆಗೆ ಒಳಪಟ್ಟಿದ್ದರೂ ಸ್ವಾಯತ್ತವಾದ ಕೆಲವು ಸೌಲಭ್ಯಗಳನ್ನು ಪಡೆದಿದ್ದವು. ಬ್ರಿಟಿಷ್ ಇಂಡಿಯಾ ಪ್ರದೇಶಗಳು ಸ್ವಾತಂತ್ರ್ಯ ಪಡೆದರೆ, ಅನಂತರ ದೇಶೀಯ ಸಂಸ್ಥಾನಗಳು ಸುಲಭವಾಗಿ ಸ್ವಾತಂತ್ರ್ಯ ಪಡೆಯುವುವು ಎಂದು ಗಾಂಧೀಜಿಯವರು ನಂಬಿದ್ದರು. ಬ್ರಿಟಿಷ್ ಇಂಡಿಯಾದಲ್ಲಿ ಚಳುವಳಿ ಮಾಡುತ್ತಿದ್ದ "ನ್ಯಾಷನಲ್ ಕಾಂಗ್ರೆಸ್"ನ ಎಲ್ಲ ಧುರೀಣರ ಯೋಚನೆಯೂ ಇದೇ ಆಗಿತ್ತು. ಆದರೆ, ದೇಶೀಯ ಸಂಸ್ಥಾನಗಳ ರಾಜರನ್ನು ಸಿಂಹಾಸನದಿಂದ ಇಳಿಸುವುದು ಬ್ರಿಟಿಷರನ್ನು ಅಧಿಕಾರದಿಂದ ಇಳಿಸುವಷ್ಟೇ ಕಷ್ಟವೆಂಬುದು ಅನಂತರ ವೇದ್ಯವಾಯಿತು. ದೇಶೀಯ ಸಂಸ್ಥಾನಗಳಲ್ಲೂ ಚಳುವಳಿ ಅಗತ್ಯವೆಂದು ಕೆಲವರು ಒತ್ತಾಯ ಮಾಡುತ್ತಿದ್ದರು. ಹೀಗೆ ಚಳುವಳಿಯನ್ನು ಆಹ್ವಾನಿಸಿದ ರಾಜ್ಯಗಳಲ್ಲಿ ಮೈಸೂರು ರಾಜ್ಯವೂ ಒಂದು.

ಮೈಸೂರು ಸಂಸ್ಥಾನ ಪ್ರಕೃತಿ ಸಂಪನ್ಮೂಲಗಳಿಂದ, ಪ್ರಕೃತ್ತಿ ಸೌಂದರ್ಯದಿಂದ ಕೂಡಿದ ರಾಜ್ಯ. ಜನಾನುರಾಗಿಗಳಾದ ಮಹಾರಾಜರಿದ್ದಾರೆ ; ಪ್ರಗತಿಗಾಮಿಗಳಾದ ದಿವಾನರಿದ್ದಾರೆ ; ಜನರು ನೆಮ್ಮದಿಯಿಂದ ಇದ್ದಾರೆ ; ಇಂಥ ಕಡೆ ಚಳುವಳಿ ಯಾಕೆ ಎಂದು ಕೇಳುವವರೂ ಇದ್ದರು. ರಾಜ್ಯದ ಪರಿಸ್ಥಿತಿಯನ್ನು ಒಳಹೊಕ್ಕು ನೋಡಿದಲ್ಲದೆ ಚಳುವಳಿ ಯಾಕೆ ಬೇಕು ಎಂಬುದು ತಿಳಿಯದಷ್ಟು ಮೈಸೂರಿನ ಸ್ಥಿತಿ ಸೂಕ್ಷ್ಮವಾಗಿತ್ತು.

ಸಂಸ್ಥಾನಗಳ ಪರಿಸ್ಥಿತಿ

ಸ್ವಾತಂತ್ರ್ಯಪೂರ್ವದ ಭಾರತವನ್ನು ಬ್ರಿಟಿಷರು ತಮ್ಮ ಒಡೆದು ಆಳುವ ನೀತಿಗನುಸಾರವಾಗಿ ಛಿದ್ರಗೊಳಿಸಿದ್ದರು. ಆಗ ಭಾರತದಲ್ಲಿ 11 ಪ್ರಾಂತ್ಯಗಳು, 61 ಸಂಸ್ಥಾನ (**Princely States**) ಗಳು ಇದ್ದುವು. ಪರೋಕ್ಷವಾಗಿ ಸಂಸ್ಥಾನಗಳ ಸಾರ್ವಭೌಮರೂ ಬ್ರಿಟಿಷರೇ ಆಗಿದ್ದರು. ಸಂಸ್ಥಾನದ ರಾಜರುಗಳು ಬ್ರಿಟಿಷರ ಕೈಗೊಂಬೆಗಳಾಗಿದ್ದರು. ಬ್ರಿಟಿಷರನ್ನು ವಿರೋಧ ಮಾಡಿಕೊಂಡರೆ ಅವರ ಕಿರೀಟವೆ ಹೋಗುತ್ತಿತ್ತು. ಜನರನ್ನು ವಿರೋಧ ಮಾಡಿಕೊಂಡರೆ ಆಳುವುದು ಕಷ್ಟವಾಗುತ್ತಿತ್ತು. ತಮ್ಮ ಪ್ರಜೆಗಳಿಗೆ ವಿರೋಧಿಗಳಾಗುವುದಕ್ಕೆ ಸಂಸ್ಥಾನಗಳ ರಾಜರು ಸಿದ್ಧರಿರಲಿಲ್ಲ.

ಸಂಸ್ಥಾನಗಳು ತೊಲಗಬೇಕು. ಅವೂ ಕೂಡ ಭಾರತದ ಅವಿಭಾಜ್ಯ ಅಂಗಗಳಾಗಬೇಕು. ಆಗ ಮಾತ್ರ ಸ್ವಾತಂತ್ರ್ಯದ ಹೋರಾಟಕ್ಕೆ ಉಚಿತವಾದ ರೂಪ ಬರುತ್ತದೆಂದು ಅಂದಿನ ಮುತ್ಸದ್ದಿಗಳು ಯೋಚಿಸಿ, ಅಂಥ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದೂ ಉಂಟು. ಒಂದೆರಡು ಉದಾಹರಣೆಗಳನ್ನು ಗಮನಿಸಿದರೆ ಅಂದಿನ ಪರಿಸ್ಥಿತಿಯು ಅರಿವಾಗುತ್ತದೆ. ಶ್ರೀ ವಿ. ಎಸ್. ಶ್ರೀನಿವಾಸ ಶಾಸ್ತ್ರಿಗಳು 3–10–1926 ರಂದು ಎರ್ನಾಕುಳಂ (ಕೊಚ್ಚಿನ್) ನಲ್ಲಿ "ದೇಶೀಯ ಸಂಸ್ಥಾನಗಳ ಭವಿಷ್ಯತ್ತು"ನ್ನು ಕುರಿತು ಹೀಗೆ ಭಾಷಣ ಮಾಡಿದರು :

ದೇಶೀಯ ಸಂಸ್ಥಾನಗಳ ಭವಿಷ್ಯತ್ತು*

"ಅಂತರ, ಭೇದ–ಪ್ರಭೇದಗಳಿಂದಿರುವ ಸಣ್ಣಪುಟ್ಟ ೫೬೧ ಸಂಸ್ಥಾನಗಳು ಭರತಖಂಡದ ನಕ್ಷೆಯಲ್ಲಿರುವವರೆಗೂ ಭರತಖಂಡದ ಸ್ವಾತಂತ್ರ್ಯದ ದಿನಗಳು ಹಿಂದುಳಿಯುತ್ತವೆ.

ರಾಜಕೀಯ ವಿಚಾರದಲ್ಲಿ ಮುಂದೆ ಭಾರತ ದೇಶವು ಯಾವ ರೂಪವನ್ನು ಹೊಂದುವುದೋ ಅದೇ ರೂಪವನ್ನೇ ಸಂಸ್ಥಾನಗಳೂ ತಾಳಬೇಕು.

ಅನೇಕ ರಾಜರು ಅವರ ರಾಜ್ಯದಲ್ಲೇ ಇರುವುದಿಲ್ಲ. ಪ್ರಜೆಗಳ ಹಣದಿಂದ ಭೋಗ ಜೀವನವನ್ನೆಲ್ಲಿ ನಡೆಸಬಹುದೋ ಅಲ್ಲೇ ಅವರಿರುವರು. ಲಂಡನ್ನಿಗೆ ಹೋಗಿ, ಪ್ಯಾರಿಸ್ಸಿಗೆ ಹೋಗಿ ; ಭೋಗನಗರಗಳಿಗೆಲ್ಲಿಯಾದರೂ ಹೋಗಿ, ಅಲ್ಲಿ ನೀವು ಐರೋಪ್ಯರನ್ನು ಮತ್ತು ದುಂದು ವೆಚ್ಚಗಳಲ್ಲಿ ಮೀರಿಸುವ, ಒಬ್ಬನಲ್ಲ ಮತ್ತೊಬ್ಬ ಹಿಂದೂಸ್ಥಾನದ ರಾಜನನ್ನು ಆ ದೇಶಗಳಲ್ಲಿ ನೋಡುವಿರಿ."

ಅಂದಿನ ಸಂಸ್ಥಾನಗಳ ಅನೇಕ ರಾಜರುಗಳು ತಮ್ಮ ಪ್ರಜೆಗಳ ಯೋಗಕ್ಷೇಮ ನೋಡಿಕೊಳ್ಳುವುದಕ್ಕಿಂತ ತಮ್ಮ ವೈಭವ ಜೀವನದ ತೃಪ್ತಿಯಲ್ಲೇ ನಿರತರಾಗಿದ್ದರು. ಭಾರತದ ರಾಜಕೀಯ ಸ್ವಾತಂತ್ರ್ಯಕ್ಕೆ ಇಂತಹ ಪ್ರಮಾದಗಳು ಅಡ್ಡಿಯಾಗಿದ್ದವು. 41ನೆಯ ರಾಷ್ಟ್ರೀಯ ಮಹಾಸಭೆಯಲ್ಲಿ ಶ್ರೀ ಎಸ್. ಶ್ರೀನಿವಾಸ ಅಯ್ಯಂಗಾರ್ಯರು ತಮ್ಮ ಅಧ್ಯಕ್ಷ ಭಾಷಣದಲ್ಲಿ ಸಂಸ್ಥಾನಗಳ ರಾಜರನ್ನು ಕುರಿತು ಹೀಗೆ ಉಪನ್ಯಾಸಿಸಿದರು :

"ಇಂದಿನ ದೇಶೀಯ ಸಂಸ್ಥಾನಗಳು ಸ್ವಯಮಾಡಳಿತವಿಲ್ಲದ ಸ್ವರಾಜ್ಯಗಳೆಂದು ಅನೇಕರ ಮತ. ನಾನು ಆ ಗುಂಪಿಗೆ ಸೇರಿದವನು. ಅವುಗಳನ್ನು ನೋಡಿದರೆ ಸ್ವರ್ಗದಿಂದ ನರಕಕ್ಕೆ ಉರುಳಿದ ನೆನಪು ಬರುತ್ತದೆ. ಪೂರ್ವಾಚಾರ ವಿಶ್ವಾಸಿಗಳಾದ ನಮಗೆ ಹಿಂದಿನ ಕಾಲದ ರಾಜರ ಆಸ್ಥಾನದ ವ್ಯವಸ್ಥೆಗಳನ್ನು ಅನುಕರಣ ಮಾಡಬೇಕೆಂಬ ಆಸೆಯಾಗುವುದು ಸಹಜವಾಗಿದೆ. ಈ ಚಾಪಲ್ಯಕ್ಕೂ ಸ್ವರಾಜ್ಯ ಸ್ಥಾಪನೆಯ ಗುರಿಗೂ ಅಷ್ಟೇನೂ ವಿರೋಧವಿಲ್ಲ.

---

* ವಿಶ್ವಕರ್ನಾಟಕ, 10-10-1926 ರಿಂದ ಉದ್ಧೃತ

ಪ್ರಭುಗಳು ತಮ್ಮ ತಮ್ಮ ರಾಜ್ಯಗಳಲ್ಲಿ ಪ್ರಜಾಪ್ರಭುತ್ವ ಆಡಳಿತವನ್ನು ಸ್ಥಾಪಿಸಬೇಕು. ರಾಜ್ಯಾಡಳಿತವಲ್ಲಿ ಪ್ರಜೆಗಳಿಗೆ ಪಾಲು ನೀಡಬೇಕು. ತಮ್ಮ ಹಿತದ ದೃಷ್ಟಿಯಿಂದಲೂ ತಮ್ಮ ಪ್ರಜೆಗಳ ಹಿತದ ದೃಷ್ಟಿಯಿಂದಲೂ ಪ್ರಭುಗಳು ವಂಶ ಪಾರಂಪರ್ಯವಾಗಿ ತಮ್ಮ ನಾಡಿನ ಆಡಳಿತಗಾರರಾಗಿರಲು ಮಾತ್ರ ಸಂತೋಷಚಿತ್ತ ದಿಂದ ಒಪ್ಪಲು ಸಿದ್ಧರಾಗಬೇಕು.*

ಆದರೆ, ತಮ್ಮ ಕಿರೀಟಗಳನ್ನು ತೆಗೆದಿಟ್ಟು ತಮ್ಮ ರಾಜ್ಯಗಳಲ್ಲಿ, ಪ್ರಜಾಪ್ರಭುತ್ವ ವನ್ನು ಸ್ಥಾಪಿಸಲು ಅಂದಿನ ರಾಜರು ಸಿದ್ಧರಿರಲಿಲ್ಲ. ಅಂತಹ ಬದಲಾವಣೆಗೆ ಆಳರಸರಾದ ಬ್ರಿಟಿಷರೂ ಸಮ್ಮತಿಸುತ್ತಿರಲಿಲ್ಲ.

ಬ್ರಿಟಿಷರ ಕಪಿಮುಷ್ಟಿ

ಭಾರತದ ಸಂಪತ್ತನ್ನು ಸಂತುಷ್ಟಿಯಿಂದ ಬ್ರಿಟಿಷರು ಅನುಭವಿಸುತ್ತಿದ್ದರು. ಅವರು ಹೇಳಿದಂತೆ ಸಂಸ್ಥಾನದ ರಾಜರುಗಳು ಕೇಳುತ್ತಿದ್ದರು. ಅವರ ಬಂದೂಕು ಗಳ ಮುಂದೆ ಜನಸಾಮಾನ್ಯರು ಉಸಿರೆತ್ತುತ್ತಿರಲಿಲ್ಲ. ಜನರ ಆಸೆ ಆಕಾಂಕ್ಷೆಗಳನ್ನು ಪೂರೈಸುವುದಕ್ಕಿಂತ ಹೆಚ್ಚಾಗಿ ಅವರ ಸಾರ್ವಭೌಮತ್ವ ಶಾಶ್ವತವಾಗಿ ಮುಂದುವರಿ ಯುವ ಕಡೆಗೇ ಗಮನಕೊಡುತ್ತಿದ್ದರು. ಆಗ ಬಿಜಾಪುರದಲ್ಲಿ ಭಯಂಕರವಾದ ಕ್ಷಾಮವಿತ್ತು. ಅದರ ನಿವಾರಣೆಗೆ ಆದ್ಯಗಮನ ಕೊಡಲು ಜನನಾಯಕರು ಕೇಳು ತ್ತಿದ್ದರು. ಹೊಸದೆಹಲಿಯಲ್ಲಿ "ಲೆಜಿಸ್ಲೆಟಿವ್ ಅಸೆಂಬ್ಲಿ" ಅದೇ ಸಮಯದಲ್ಲಿ ಪ್ರಾರಂಭವಾಯಿತು. ಸಾಂಪ್ರದಾಯಿಕವಾಗಿ ಭಾಷಣ ಮಾಡುವಾಗ ವೈಸರಾಯ್ ಲಾರ್ಡ್ ಇರ್ವಿನ್ ಸ್ವಾತಂತ್ರ್ಯ ಚಳುವಳಿಗಾರರನ್ನು, ದೇಶಾಭಿಮಾನಿಗಳನ್ನು ಕೆಣಕಿ, ಅಧಿಕಾರ ಮದದಿಂದ ಹೀಗೆ ಮಾತನಾಡಿದರು :

ವೈಸರಾಯರ ಅರ್ಭಟ †

"ಪಾರ್ಲಿಮೆಂಟನ್ನು ನೀವು ಬೆದರಿಸಲಾರಿರಿ."

"ಭಾರತೀಯರ ಮೇಲೆ ಆಡಳಿತ ಮಾಡುವ ಈ ಸ್ಥಾನವನ್ನು ಚರಿತ್ರೆಯು ಬ್ರಿಟಿಷರಿಗೆ ಕೊಟ್ಟಿದೆ. ಆ ಅಧಿಕಾರವನ್ನು ಮತ್ತೊಬ್ಬರಿಗೆ ಒಪ್ಪಿಸಿದರೆ ಅದು ಒಳ್ಳೆಯದೆಂದು ಪಾರ್ಲಿಮೆಂಟಿಗೆ ತೋರಿಬರುವವರೆಗೆ ತನ್ನ ಅಧಿಕಾರವನ್ನು ಅದು ಮತ್ಯಾರಿಗೂ ಒಪ್ಪಿಸುವಂತಿಲ್ಲ."

"ಇಂಡಿಯಾ ದೇಶವನ್ನು ಯುದ್ಧದಲ್ಲಿ ಗೆದ್ದಿದ್ದೇವೆ. ಅದರ ಆಡಳಿತದಲ್ಲಿ ನಮಗೆ ಆಜನ್ಮ ಹಕ್ಕಿದೆ."

---

* ವಿಶ್ವಕರ್ನಾಟಕ, 9-1-1927
† ವಿಶ್ವಕರ್ನಾಟಕ, 30-9-1927

ಸಂಸ್ಥಾನಗಳ ವಿಚಾರದಲ್ಲಿ ಬ್ರಿಟಿಷರ ನೀತಿ ಭಯಂಕರವಾದುದಾಗಿತ್ತು. ಅಂದಿನ ಲೇಖಕರೊಬ್ಬರ ಹೇಳಿಕೆ ಹೀಗಿದೆ : "ಹಿಂದೂ ದೇಶದಲ್ಲಿ ಬ್ರಿಟಿಷರ ಪೋಷಣೆಯಲ್ಲಿಲ್ಲದ ಅಥವ ಬ್ರಿಟಿಷರ ಇಷ್ಟದಂತೆ ರಾಜ್ಯಭಾರವನ್ನು ನಡೆಸದ ಆಶ್ರಿತ ಸಂಸ್ಥಾನಗಳೊಂದೂ ಈ ದೇಶದಲ್ಲಿ ಇರಕೂಡದು.*

"ಲಾರ್ಡ್ ವೆಲ್ಲೆಸ್ಲಿ ಹೈದರಬಾದಿನ ರೆಸಿಡೆಂಟರಿಗೆ ಬರೆದ ಆಜ್ಞೆ" †

"ಹಿಂದೂ ದೇಶದಲ್ಲಿ ಮುಖ್ಯವಾದ ದೇಶೀಯ ಸಂಸ್ಥಾನಗಳೊಂದಿಗೆ ಸಬ್‌ಸಿಡಿರಿ ಕರಾರನ್ನು ಮಾಡಿಕೊಳ್ಳುವ ಉದ್ದೇಶ್ಯವೇನೆಂದರೆ, ಸಂಸ್ಥಾನಗಳು ಒಂದಕ್ಕೊಂದು ಸೇರಿ ಬ್ರಿಟಿಷ್ ಸರ್ಕಾರಕ್ಕೆ ತೊಂದರೆಯನ್ನುಂಟುಮಾಡುವ ಯಾವ ಕಾರ್ಯಕಲಾಪಗಳನ್ನು ಮಾಡಲು ಸಾಧ್ಯವಾಗದಂತೆ ಅವುಗಳನ್ನು ನಮ್ಮ ಅಧೀನದಲ್ಲಿ ಇಟ್ಟುಕೊಳ್ಳುವುದು. ಈ ರೀತಿ ಮಾಡುವುದರಿಂದ ನಾವು ಎಲ್ಲ ಆಶ್ರಿತ ಸಂಸ್ಥಾನಗಳ ಮೇಲೂ ಸರ್ವಸಾಧಾರಣವಾದ ಮೇಲ್ವಿಚಾರಣೆಯನ್ನು ಇಟ್ಟುಕೊಂಡಂತಾಯಿತು. ದೇಶೀಯ ರಾಜರ ಮೇಲೆ ಸಂಪೂರ್ಣ ಅಧಿಕಾರವನ್ನು ನಡೆಸುವುದರಿಂದ ಮಾತ್ರ ಇದು ಸಾಧ್ಯವಾಗುತ್ತದೆ".

ಸಾರ್ವಭೌಮ ಬ್ರಿಟಿಷರಿಗೂ ಸಂಸ್ಥಾನಗಳ ರಾಜರಿಗೂ ಮನೋಧರ್ಮದಲ್ಲಿ ಮೂಲ ವ್ಯತ್ಯಾಸವಿರಲಿಲ್ಲ. ಇಬ್ಬರದೂ ಅಧಿಕಾರದ ಲಾಲಸೆಯಾಗಿತ್ತು. ಎಲ್ಲ ಸಂಸ್ಥಾನಗಳೂ ಬ್ರಿಟಿಷರಿಗೆ ಪ್ರಿಯವಾಗುವಂತೆಯೇ ರಾಜ್ಯಭಾರ ಮಾಡುತ್ತಿದ್ದವು. ಇದಕ್ಕೆ ಮೈಸೂರು ಸಂಸ್ಥಾನವೂ ಹೊರತಾಗಿರಲಿಲ್ಲ. ಮೈಸೂರಿನ ಮಹಾರಾಜರಾಗಲೀ ದಿವಾನರಾಗಲೀ ಬ್ರಿಟಿಷರ ವಿರೋಧ ಕಟ್ಟಿಕೊಂಡು ಅಧಿಕಾರ ಕಳೆದುಕೊಳ್ಳುವುದಕ್ಕೆ ಇಷ್ಟ ಪಡುತ್ತಿರಲಿಲ್ಲ. ಅಲ್ಲದೆ "ಜವಾಬ್ದಾರಿ ಸರ್ಕಾರದ"ವ ಮಾತೇ ಅವರಿಗೆ ಹಿಡಿಸುತ್ತಿರಲಿಲ್ಲ. ಸರ್ಕಾರವನ್ನು ಪ್ರತಿಭಟಿಸುವ ಚಳುವಳಿಗಾರರನ್ನು ಕಂಡರೆ ಅಂಥವರನ್ನು ಬಗ್ಗುಬಡಿಯಲು ಅಂದಿನ ಸರ್ಕಾರ ಹಿಂದುಮುಂದು ನೋಡುತ್ತಿರಲಿಲ್ಲ. ಬ್ರಿಟಿಷರ ಹೇಳಿಕೆಗಳಂತೆಯೇ ದಿವಾನರ ಹೇಳಿಕೆಗಳೂ ದರ್ಪದಿಂದ ಕೂಡಿರುತ್ತಿದ್ದವು. ಜನ್ನಿಮಿಲ್ಲಿನ ಗಲಾಟೆಗೆ ಸಂಬಂಧಿಸಿದಂತೆ ಅಕ್ಟೋಬರ್ 1926ರಲ್ಲಿ ಪ್ರಜಾಪ್ರತಿನಿಧಿ ಸಭೆಯ 45 ನೇ ದಸರಾ ಅಧಿವೇಶನದಲ್ಲಿ : "ಸರ್ಕಾರವನ್ನು ಪ್ರತಿಭಟಿಸುವ ಛಲವನ್ನೇ ಯಾರಾದರೂ ಹಿಡಿಯುವುದಾದರೆ ದೇಶದ ಏಳಿಗೆಗೆ ಕಲ್ಲೆಳೆದು ದ್ರೋಹ ಚಿಂತನೆ ಮಾಡಿದಂತೆಯೇ ಸರಿ" ಎಂದು ದಿವಾನರು ಹೇಳಿದರು.

---

* ವಿಶ್ವಕರ್ನಾಟಕ, 3-4-1927, Collected papers on International law by John West Lock p. 205.

† ವಿಶ್ವಕರ್ನಾಟಕ, 3-4-1927, Imperial Gazetteer of India, Vol. IV. p. 77.

ಆದ್ದರಿಂದ, ಸಂಸ್ಥಾನಗಳಲ್ಲಿ ಜವಾಬ್ದಾರಿ ಸರ್ಕಾರ ಸ್ಥಾಪಿಸುವುದು ಬ್ರಿಟಿಷರಿಂದ ಸ್ವಾತಂತ್ರ್ಯ ಗಳಿಸುವಷ್ಟೇ ಕಷ್ಟವಾಗಿತ್ತು.

ಇಮ್ಮಡಿ ಗುಲಾಮರು

ಆಗ ಮೈಸೂರು ಸಂಸ್ಥಾನವನ್ನು ಶ್ರೀಮನ್ಮಹಾರಾಜರಾದ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್ ಅವರು ಆಳುತ್ತಿದ್ದರು. ಬ್ರಿಟಿಷರು ಭಾರತವನ್ನು ಆಳುತ್ತಿದ್ದರು. ಮಹಾರಾಜರು ಬ್ರಿಟಿಷರ ಅಧೀನದಲ್ಲಿದ್ದರು. ಹಾಗಾಗಿ ಮೈಸೂರಿನ ಪ್ರಜೆಗಳು ಇಮ್ಮಡಿ ಗುಲಾಮರಾಗಿದ್ದರು. ಮೊದಲಿಂದಲೂ ಮೈಸೂರಿನವರಲ್ಲಿ ರಾಜಭಕ್ತಿ ಹೆಚ್ಚು; ರಾಜಕೀಯ ಪ್ರಜ್ಞೆ ಕಡಮೆ; ವಾಸ್ತವ ಸ್ಥಿತಿಯ ಅರಿವು ಅಷ್ಟಕಷ್ಟೆ. ಮಹಾರಾಜರ ಅದ್ದೂರಿಯ ವೇಷಭೂಷಣ, ರತ್ನದ ಉಂಗುರ, ಆನೆ ಅಂಬಾರಿ, ಅರಮನೆ ದೀಪಗಳನ್ನು ಕಂಡು ದಿಗ್ಭ್ರಮೆಯಿಂದ ಕೈಮುಗಿದುಕೊಂಡು ಸಂತೋಷಪಡುವ ಸ್ವಭಾವ ಜನರದು. 'ಮಹಾರಾಜರಿಗೇಕೆ ಈ ವೈಭವ ?' ಈ ಅದ್ದೂರಿಯಾದ ವೈಭವಕ್ಕೆ ಯಾರ ದುಡಿಮೆ ಕಾರಣವಾಗಿದೆ ? ತಾವೇಕೆ ಹರಕಲು ಬಟ್ಟೆ ಧರಿಸಿ, ಜೋಪಡಿಗಳಲ್ಲಿ ವಾಸಿಸುತ್ತಾ ನಿರ್ಗತಿಕರಂತೆ ಜೀವನ ಸಾಗಿಸಬೇಕು? ರಾಜರ ಆಳ್ವಿಕೆ ಹೋಗಿ ಪ್ರಜಾರಾಜ್ಯ ಬರಬಾರದೇಕೆ ? ಮುಂತಾದ ಸಮಸ್ಯೆಗಳು ಜನರನ್ನು ಕಾಡುತ್ತಿರಲಿಲ್ಲ. ಮೈಸೂರಿನವರು ಆರಕ್ಕೆ ಏರಿದವರಲ್ಲ, ಮೂರಕ್ಕೆ ಇಳಿದವರಲ್ಲ. ಅಪ್ಪ ಹಾಕಿದ ಆಲದ ಮರದ ನೆರಳಿನಲ್ಲಿ ಇದ್ದುದರಲ್ಲೇ ಸರಿದೂಗಿಸಿಕೊಂಡು ಜೀವನ ಸಾಗಿಸುತ್ತಿದ್ದರು. ಜನರು ಆರ್ಥಿಕವಾಗಿ ಬಹಳ ಹಿಂದುಳಿದಿದ್ದರು. ಸುಮಾರು ನಾನೂರು ವರ್ಷಗಳ ಆಡಳಿತದಲ್ಲಿ ಮಹಾರಾಜರು ಸಾಮಾನ್ಯವರ್ಗದ ಜನರನ್ನು ಉನ್ನತ ಅಧಿಕಾರಕ್ಕೆ ತಂದಿರಲಿಲ್ಲ. ಅತ್ಯುನ್ನತ ಅಧಿಕಾರಗಳೆಲ್ಲ, ಸೌಲಭ್ಯಗಳೆಲ್ಲ ಉಚ್ಚ ವರ್ಗದ ಜನರಿಗೆ ಮತ್ತು ಕ್ಷತ್ರಿಯರಿಗೆ ಮೀಸಲಾಗಿದ್ದವು. ಕೆಳವರ್ಗದವರು ಕೇವಲ ದುಡಿಮೆಗಾರರಾಗಿದ್ದರು. ಶೋಷಣೆಗೆ ಮಾತ್ರ ಅರ್ಹರಾಗಿದ್ದರು. ಈ ವಿಷಯಗಳಿಗೂ ಜನಸಾಮಾನ್ಯರು ತಲೆಕೆಡಿಸಿಕೊಳ್ಳುತ್ತಿರಲಿಲ್ಲ.

ಇಷ್ಟಿದ್ದರೂ ಮಹಾತ್ಮ ಗಾಂಧೀಜಿಯವರು ಮೈಸೂರು ಸಂಸ್ಥಾನವನ್ನು ಮೆಚ್ಚಿಕೊಂಡಿದ್ದರು. ಮೈಸೂರಿನ ಜನರ ಸೌಮ್ಯಗುಣ, ಘರ್ಷಣೆಯನ್ನು ಅಪೇಕ್ಷಿಸದ ಪ್ರವೃತ್ತಿ, ಮೈಸೂರಿನ ಆರೋಗ್ಯಕರ ಹವಾಗುಣ, ನಿಸರ್ಗ ಸೌಂದರ್ಯಗಳೆಲ್ಲವೂ ಗಾಂಧೀಜಿಯವರಿಗೆ ಪ್ರಿಯವಾಗಿದ್ದವು. ಮಹಾರಾಜರ ವಂಶಕ್ಕಿದ್ದ ಗೌರವವೂ ಕೆಲವು ದಿವಾನರ ದಕ್ಷ ದುಡಿಮೆಯೂ ಇದಕ್ಕೆ ಕಾರಣವಿರಬಹುದು. ಆಗ ದಿವಾನರಾಗಿದ್ದವರು ಮಿರ್ಜಾ ಸಾಹೇಬರು. ಅವರು ಬೆಣ್ಣೆಯಲ್ಲಿ ಕೂದಲು ತೆಗೆದಂತೆ ಮಾತಾಡುವವರು. ಅವರು ನಾಜೂಕಿನ ಮನುಷ್ಯ, ಜಾಣ ಆಡಳಿತಗಾರ, ನಯವಾದ ಮಾತುಗಾರ ಎಂದು ಹೆಸರು ಪಡೆದಿದ್ದರು. ಗಾಂಧೀಜಿಯವರ ಜೊತೆಯಲ್ಲಿಯೂ ದಿವಾನರು ಆತ್ಮೀಯವಾದ ಸಂಪರ್ಕವನ್ನು ಇಟ್ಟುಕೊಂಡಿದ್ದರು.

ಮೈಸೂರು ರಾಜ್ಯದಲ್ಲಿ ಮಹಾತ್ಮ ಗಾಂಧೀಜಿ

1927 ನೆಯ ಏಪ್ರಿಲ್ ತಿಂಗಳಲ್ಲಿ ಮಹಾತ್ಮ ಗಾಂಧೀಜಿಯವರು ಮೈಸೂರು ರಾಜ್ಯಕ್ಕೆ ಬಂದರು. ಆರೋಗ್ಯ ಸುಧಾರಣೆಗೆ ವಿಶ್ರಾಂತಿ ತೆಗೆದುಕೊಳ್ಳುವುದು ಅವರ ಆಗಮನದ ಮುಖ್ಯ ಉದ್ದೇಶವಾಗಿತ್ತು. ಮಹಾತ್ಮರ ವಾಸಕ್ಕೆ ಮೈಸೂರಿನ ಮಹಾ ರಾಜರು ನಂದಿಬೆಟ್ಟದ ಮಹಲನ್ನು ಬಿಟ್ಟುಕೊಟ್ಟರು. ಮಹಾತ್ಮರು ಕಸ್ತೂರಿಬಾ ಅವರೊಂದಿಗೆ ಡೋಲಿಯಲ್ಲಿ ಕುಳಿತು ಬೆಟ್ಟವನ್ನು ಹತ್ತಿದರು. ಡಾ|| ಜೀವರಾಜ ಮೆಹತಾ ಮಹಾತ್ಮರ ಆರೋಗ್ಯದ ಸಲಹೆಗಾರರಾಗಿದ್ದರು. ಮಹಾತ್ಮರು ಎರಡು ತಿಂಗಳು ವಿಶ್ರಾಂತಿ ಪಡೆಯಬೇಕಾಗಿತ್ತು.

ಚಕ್ರವರ್ತಿ ಸಿ. ರಾಜಗೋಪಾಲಚಾರಿ ಮತ್ತು ಮೂವರು ಸ್ವಯಂಸೇವಕರು ಮುಂಚಿತವಾಗಿ ಹೋಗಿ ನಂದಿಬೆಟ್ಟದ ಕನ್ನಿಂಗ್ ಹ್ಯಾಂ ಭವನದಲ್ಲಿ ಬಿಡಾರದ ವ್ಯವಸ್ಥೆ ನೋಡಿಕೊಂಡರು. ಅನೇಕ ಸ್ಥಳೀಯ ನಾಯಕರೂ ಗಾಂಧೀಜಿಯವ ರೊಡನೆ ಸದಾ ಇರುತ್ತಿದ್ದರು.

ರಾಮರಾಜ್ಯ

ಗಾಂಧೀಜಿಯವರು ಮೈಸೂರು ರಾಜ್ಯಕ್ಕೆ 'ರಾಮರಾಜ್ಯ' ವೆಂದು ಬಿರುದಂ ಕೊಟ್ಟರು ಎಂಬ ಸುದ್ದಿ ಇದೇ ಸಂದರ್ಭದಲ್ಲಿ ಹರಡಿತು. ಅದು ಸಂಭವಿಸಿದ್ದು ಹೀಗೆ * :

ಗಾಂಧೀಜಿಯವರು ನಂದಿಬೆಟ್ಟದಲ್ಲಿ ತಂಗಿದ್ದಾಗ ಒಂದು ದಿನ ಅವರೊಂದಿಗೆ ಶ್ರೀ ರಾಜಾಜಿ, ದಿವಾನ್ ಶ್ರೀ ಮಿರ್ಜಾ, ಶ್ರೀ ಕೆಂಗಲ್ ಹನುಮಂತಯ್ಯ ಮೊದ ಲಾದ ನಾಯಕರು ಇದ್ದರು. ಗಾಂಧೀಜಿಯವರನ್ನು ನೋಡುವ ಆಸೆಯಿಂದ ಒಬ್ಬ ಹಳ್ಳಿಯವನು ಅಲ್ಲಿಗೆ ಬಂದನು. ಅವನನ್ನು ಕಂಡ ಗಾಂಧೀಜಿಯವರು, ವಿಷಯ ಸಂಗ್ರಹಕ್ಕೋ ಕುತೂಹಲಕ್ಕೋ ಹಳ್ಳಿಗನನ್ನು "ನಿಮ್ಮ ರಾಜ್ಯವನ್ನು ಯಾರು ಆಳುತ್ತಾರಪ್ಪಾ ?" ಎಂದು ಪ್ರಶ್ನಿಸಿದರು. ಗಾಂಧೀಜಿಯವರ ಪ್ರಶ್ನೆಯನ್ನು ಹಳ್ಳಿಗನಿಗೆ ತಿಳಿಯುವಂತೆ ರಾಜಾಜಿಯವರು ಅನುವಾದಿಸಿದರು. ರಾಜಭಕ್ತಿಯ ಪರಂಪರೆಯಲ್ಲಿ ಬೆಳೆದುದರಿಂದಲೋ ಅಥವಾ ಮನುಷ್ಯರನ್ನೆಲ್ಲ ದೇವರು ಕಾಪಾಡು ತ್ತಾನೆ ಎಂದು ನಂಬಿದ್ದ ತಾತ್ವಿಕ ಭಾವನೆಯಿಂದಲೋ ಆ ಹಳ್ಳಿಗನು ಮೇಲಕ್ಕೆ ಕೈ ತೋರಿಸುತ್ತಾ "ಆ ನಮ್ಮಪ್ಪ ಕಾಪಾಡುತ್ತಿದ್ದಾನೆ" ಎಂದನು. ರಾಜಾಜಿಯವರು ಗಾಂಧೀಜಿಯವರಿಗೆ ತಿಳಿಯುವಂತೆ ಹಳ್ಳಿಗನ ಅಭಿಪ್ರಾಯವನ್ನು ಅನುವಾದಿಸಿದರು. ಆಗ ಗಾಂಧೀಜಿಯವರು "ದೇವರು, ದೇವರಂಥವರು ಆಳುತ್ತಿದ್ದಾರೆ !" ಎಂದು ಅರ್ಥಮಾಡಿಕೊಂಡರು. ಅದನ್ನು "ರಾಮರಾಜ್ಯ" ಅನ್ನುವಂತೆ ಶ್ರೀ ರಾಜಾಜಿ

---

* ಶ್ರೀ ಕೆ. ಹನುಮಂತಯ್ಯನವರು ಈ ಘಟನೆಯನ್ನು ನಿರೂಪಿಸಿದ್ದಾರೆ.

ಯವರು ಅನುವಾದಿಸಿದರು. ಚಾಣಾಕ್ಷರಾದ ಶ್ರೀ ಮಿರ್ಜಾರವರು "ರಾಮರಾಜ್ಯ" ಎಂಬ ಮಾತನ್ನು ಪಟ್ಟಾಗಿ ಹಿಡಿದುಕೊಂಡರು. ಮೈಸೂರು ರಾಜ್ಯವನ್ನು ಗಾಂಧೀಜಿ ಯವರೇ ರಾಮರಾಜ್ಯ ಎಂದು ಕರೆದರೆಂದು ಹತ್ತಾರು ಕಡೆ ಪ್ರಚಾರ ಮಾಡಿದರು. ಆ ವಿಶೇಷಣ ಹಾಗೆಯೇ ಉಳಿದುಕೊಂಡಿತು. ಗಾಂಧೀಜಿಯವರು ಲೋಕಾಭಿರಾಮ ವಾಗಿ ಆಡಿದ ಮಾತು ರಾಜಾಜಿಯವರ ಅನುವಾದದಲ್ಲಿ 'ರಾಮರಾಜ್ಯ'ವಾಗಿ ಅದು ಕ್ರಮೇಣ ದಿವಾನರು ಮತ್ತು ಮಹಾರಾಜರು ಜನರನ್ನು ಮರಳು ಮಾಡುವುದಕ್ಕೆ ಬಳಸಿಕೊಳ್ಳುವ ಅಸ್ತ್ರವಾಯಿತು. ಈ ವಿಷಯ ಗಾಂಧೀಜಿಯವರ ಗಮನಕ್ಕೆ ಬರಲಿಲ್ಲ. ಮೈಸೂರಿನ ನಾಯಕರು ಯಾರೂ ಇದನ್ನು ಗಾಂಧೀಜಿಯವರಿಗೆ ತಿಳಿಸಲಿಲ್ಲ.

ಮಹಾತ್ಮಗಾಂಧೀಜಿಯವರು ಮೈಸೂರು ರಾಜ್ಯವನ್ನು "ರಾಮರಾಜ್ಯ"ವೆಂದು ಕರೆದರು ಎಂಬ ಸುದ್ದಿಯ ಪ್ರಚಾರದಿಂದ ಅಂದಿನ ಮಹಾರಾಜರಿಗೆ ಮತ್ತು ದಿವಾನ ರಿಗೆ ಕೋಡು ಮೂಡಿದವು. ಗಾಂಧೀಜಿಯವರೇ ಹೀಗೆ ಹೇಳಿದ ಮೇಲೆ ಉಳಿದವರ ಮಾತೇನು ಎಂಬ ಅಹಂಭಾವವೂ ಅವರಲ್ಲಿ ಕಾಣಿಸಿಕೊಂಡಿತು. ಆದ್ದರಿಂದಲೇ ಅಂದು ದೇಶದಲ್ಲಿ ನಡೆಯುತ್ತಿದ್ದ ಚಳುವಳಿಗಳನ್ನೂ ಚಳುವಳಿಯ ನಾಯಕರುಗಳನ್ನೂ ಅವರು ತಿರಸ್ಕಾರದಿಂದ ಕಾಣುತ್ತಿದ್ದರು.

ಮಹಾತ್ಮರಿಗೆ ಬಿನ್ನವತ್ತಳೆ

1927ನೇ ಆಗಸ್ಟ್‌ನಲ್ಲಿ ಬೆಂಗಳೂರು ಲಾಲ್‌ಬಾಗಿನ ಗಾಜಿನ ಮನೆಯಲ್ಲಿ ಸಾರ್ವಜನಿಕ ಸಭೆ ನಡೆಯಿತು. ಬೆಂಗಳೂರಿನ ನಾಗರೀಕರು ಮತ್ತು ಮುಲ್ತಾನಿಗಳು ಖಾದಿ ನಿಧಿಗಾಗಿ 6,000 ರೂಪಾಯಿಗಳನ್ನು ಬಿನ್ನವತ್ತಳೆಯೊಂದಿಗೆ ಅರ್ಪಿಸಿದರು. ಸುಮಾರು 8,000 ಜನರು ಸೇರಿದ್ದ ದೊಡ್ಡ ಸಭೆ ಅದು. 2,000ದಷ್ಟು ಹೆಂಗ ಸರೂ ಸಭೆಯಲ್ಲಿ ಹಾಜರಾಗಿದ್ದರು. ನಿಧಿಯನ್ನು ಸ್ವೀಕರಿಸಿದ ಗಾಂಧೀಜಿಯವರು ಸಾಂಪ್ರದಾಯಕವಾಗಿ ಕೆಲವು ಮಾತುಗಳನ್ನಾಡಿ ಎಲ್ಲರಿಗೂ ಕೃತಜ್ಞತೆಯನ್ನು ಅರ್ಪಿಸಿ ದರು. ಮಹಾತ್ಮರ ಮಾತುಗಳನ್ನು ಶ್ರೀ ಗಂಗಾಧರರಾಯರು ಕನ್ನಡಕ್ಕೆ ಅನು ವಾದಿಸಿದರು. ಬರಹ ರೂಪದಲ್ಲಿದ್ದ ಮಹಾತ್ಮರ ದೀರ್ಘ ಭಾಷಣವನ್ನು ಅನಂತರ ಇತರರು ಸಭೆಯ ಮುಂದೆ ಮಂಡಿಸಿದರು. ಗಾಂಧೀಜಿಯವರ ಭಾಷಣದ ಪೂರ್ಣ ಪಾಠ ಹೀಗಿದೆ.

ಮಹಾತ್ಮ ಗಾಂಧೀಜಿಯವರ ಭಾಷಣ *

ಮೈಸೂರಿನ ಶ್ರೀಮನ್ಮಹಾರಾಜರು, ದಿವಾನರು, ಅಧಿಕಾರಿಗಳು ಮತ್ತು ಜನ

---

* ವಿಶ್ವಕರ್ನಾಟಕ 4-9-1927 ಮಹಾತ್ಮರ ಮೂಲಭಾಷಣವನ್ನು ಇಂಗ್ಲಿಷಿನಲ್ಲಿ ಶ್ರೀ ಸಿ ರಾಜಗೋಪಾಲಚಾರಿಯವರೂ ಅದರ ಕನ್ನಡ ರೂಪವನ್ನು ಶ್ರೀ ತಿ. ತಾ. ಶರ್ಮ ಅವರೂ ಸಭೆಯಲ್ಲಿ ಓದಿದರು.

ಸಾಮಾನ್ಯರು ಮೊದಲುಗೊಂಡು, ನೀವೆಲ್ಲರೂ ನಾನು ಅರ್ಹನಲ್ಲದಿದ್ದರೂ ನನ್ನ ಮೇಲೆ ವರ್ಷಿಸಿರುವ ಪ್ರೇಮಾದರವು ಉಭಯತ್ರರಿಗೂ ಗಾಢವಾದ ಸಂಬಂಧ ವನ್ನುಂಟುಮಾಡಿದೆ. ನೀವು ನನಗೆ ಒಪ್ಪಿಸಿರುವ ಮಾನಪತ್ರಗಳಿಗೂ ಕೊಟ್ಟಿರುವ ಹಣಕ್ಕೂ ನಿಮಗೆ ನಾನು ಕೃತಜ್ಞತೆಯನ್ನು ವ್ಯಕ್ತಪಡಿಸುತ್ತೇನೆ. ಈ ಮಾತನ್ನು ಡಂಭಾಚಾರವೆಂದು ಭಾವಿಸಬಾರದು. ನಾನು ಅತಿಶಯವಾಗಿ ಆರೋಗ್ಯ ಲಾಭ ವನ್ನು ಪಡೆದು, ಕಳೆದ ನಾಲ್ಕು ತಿಂಗಳುಗಳನ್ನು ನಿಮ್ಮ ಮಧ್ಯೆ ಕಳೆದೆನಾದರೂ ಇಷ್ಟ ರಲ್ಲಿಯೇ ನಿಮ್ಮನ್ನಗಲುವುದಕ್ಕೆ ನನ್ನ ಮನಸ್ಸಿಗೆ ದುಃಖವಾಗಿದೆ. ಈ ಸುಂದರವಾದ ದೇಶದ ಪುರೋಭಿವೃದ್ಧಿಯ ವಿಷಯವಾಗಿ ನನ್ನ ಮನಸ್ಸಿನಲ್ಲಿರುವ ವಿಚಾರಗಳಲ್ಲಿ ನಿಮ್ಮನ್ನೂ ಭಾಗಿಗಳನ್ನಾಗಿ ಮಾಡುವದೊಂದೇ ನನ್ನ ಗುರಿ. ನನ್ನ ಆರೋಗ್ಯದ ಸುಧಾರಣೆಗಾಗಿ ಈ ಅಂತಃಕರಣಪೂರ್ವಕವಾದ ಆತಿಥ್ಯವನ್ನು ನನಗೆ ಒಡ್ಡಿದುದ ಕ್ಕಾಗಿ ನಾನು ಶ್ರೀ ಮನ್ಮಹಾರಾಜರಿಗೂ ಅವರ ಪ್ರಜೆಗಳಾದ ನಿಮಗೂ ಋಣಿ ಯಾಗಿರುವೆನು. ಮುಖ್ಯವಾಗಿ ನೀವು ಮುಂದುವರಿದಿರುವುದನ್ನು ನೋಡಿ ನನಗೆ ಆತ್ಮಸಂತುಷ್ಟಿಯಾಗಿದೆ. ನಾನು ಬೆಂಗಳೂರಿನಲ್ಲಿಯೂ ಮತ್ತು ಇತರ ಸ್ಥಳಗಳಲ್ಲಿಯೂ ನಿಮ್ಮ ವಿದ್ಯಾಲಯಗಳನ್ನು ನೋಡಿದ್ದೇನೆ. ಆದಿಕರ್ನಾಟಕರಿ ಗೋಸ್ಕರ ಪ್ರತ್ಯೇಕವಾಗಿ ಏರ್ಪಾಡಾಗಿರುವ ಸಂಸ್ಥೆಗಳನ್ನೂ ನೋಡಿದ್ದೇನೆ. ನಿಮ್ಮ ಪೌರ ಸಂಸ್ಥೆಗಳ ಆಡಳಿತ ವಿಚಾರವಾಗಿಯೂ ತಕ್ಕಮಟ್ಟಿಗೆ ತಿಳಿದುಕೊಂಡಿದ್ದೇನೆ. ಸರ್ ಎಂ. ವಿಶ್ವೇಶ್ವರಯ್ಯನವರ ಶ್ರದ್ಧೆ ಪ್ರವೀಣತೆಗಳ ಹೆಗ್ಗುರುತುಗಳಾದ ಕೃಷ್ಣ ರಾಜ ಸಾಗರ ಮತ್ತು ಭದ್ರಾವತಿ ಕಬ್ಬಿಣದ ಕಾರ್ಖಾನೆಗಳನ್ನು ನೋಡಿ ನನಗೆ ವಿಸ್ಮಯವುಂಟಾಯಿತು. ನಾನು ನೋಡಲು ಸಾಧ್ಯವಾಗದುದರಿಂದ ಇತರರ ಮೂಲಕ ಶಿವನ ಸಮುದ್ರದ ಬಗ್ಗೆ ಅರಿತುಕೊಂಡಿರುವೆನು. ಈ ಮಹಾ ಪ್ರಯತ್ನ ಗಳೆಲ್ಲಕ್ಕೂ ನಿಸ್ಸಂಶಯವಾಗಿ ಸಂಪದಭಿವೃದ್ಧಿಯ ಪ್ರಗತಿಯಲ್ಲಿ ಸ್ಥಾನವಿದೆ. ನಾನು ಹೋದ ಕಡೆಯಲ್ಲೆಲ್ಲಾ ಅಧಿಕಾರವರ್ಗಕ್ಕೂ ಜನಸಾಮಾನ್ಯಕ್ಕೂ ಮಧ್ಯೆ ಅವರ ವಿಶ್ವಾಸವಿರುವುದನ್ನು ನೋಡಿದ್ದೇನೆ. ನಿಮ್ಮಲ್ಲಿ ಹಿಂದೂ ಮುಸಲ್ಮಾನ ಜಗಳಗಳಿಲ್ಲ. ಉತ್ತರ ಹಿಂದೂಸ್ಥಾನದಲ್ಲಿ ನಡೆಯುವ ಗಲಭೆಗಳಿಂದ ಇಲ್ಲಿಯ ಹಿಂದೂ ಮುಸಲ್ಮಾ ನರ ಮಧುರ ಸಂಬಂಧಕ್ಕೆ ಹಾನಿಯಾಗಿಲ್ಲ. ನಾನು ಹೇಳಬಹುದಾದ ಇನ್ನೂ ಅನೇಕ ಸದ್ವಿಷಯವೆಲ್ಲಕ್ಕೂ ನಾನು ಶ್ರೀಮನ್ಮಹಾರಾಜರನ್ನೂ ನಿಮ್ಮನ್ನೂ ಅಭಿನಂದಿಸುತ್ತೇನೆ. ಶ್ರೀಮನ್ಮಹಾರಾಜರ ಪ್ರಜಾಹಿತಕರವಾದ ಆಳ್ವಿಕೆಯ ರಜತೋತ್ಸವ ಕಾಲದಲ್ಲಿ ನಾನು ಈ ಚೆಲುವಿನ ನಾಡಿನಲ್ಲಿದ್ದು ನಿಮ್ಮ ಉತ್ಸವದಲ್ಲಿ ನಾನೂ ಭಾಗಿಯಾಗಿ; ಪ್ರಜೆಗಳು ಶ್ರೀಮನ್ಮಹಾರಾಜರಲ್ಲಿ ಇಟ್ಟಿರುವ ನಿಷ್ಕಪಟವಾಗಿ ವ್ಯಕ್ತಪಡಿಸುವ, ಗೌರವಾದರಗಳನ್ನು, ನೋಡುವ ಅವಕಾಶ ದೊರೆತುದು ನನ್ನ ಸೌಭಾಗ್ಯವೆಂದೇ ಹೇಳುತ್ತೇನೆ.

ಆದರೆ ಈ ಅಭಿವೃದ್ಧಿಯು ಹೆಚ್ಚಿನದಾದರೂ ಇಷ್ಟಕ್ಕೇ ತುಷ್ಟಿ ಹೊಂದುವುದು ಸರಿಯಲ್ಲ. ಹಿಂದೂಸ್ತಾನದ ಇತರ ಭಾಗಗಳಲ್ಲಿರುವಂತೆಯೇ ಮೈಸೂರಿನ ಅಡಿಗಲ್ಲಾದ ರೈತಾಪಿ ಜನರ ಕಡೆಗೆ ಸಾಕಾದಷ್ಟು ಗಮನವನ್ನು ಕೊಟ್ಟಿಲ್ಲವೆಂದು ನನಗೆ ತೋರುತ್ತದೆ. ಖಾದೀ ಪ್ರಚಾರಕ್ಕಾಗಿ ಮೈಸೂರಿನ ಎಲ್ಲ ಕಡೆಯ ಜನರೂ ನನಗೆ ಕೊಟ್ಟಿರುವ ಹಣದಿಂದ ಮೈಸೂರಿನ ಪ್ರಜೆಗಳಿಗೆ ಖಾದೀ ಮತ್ತು ಚರಕದ ಸಂದೇಶದಲ್ಲಿರುವ ವಿಶ್ವಾಸವು ವ್ಯಕ್ತವಾಗುತ್ತದೆ. ಮೈಸೂರು ದೇಶದ ನಾನಾ ಭಾಗಗಳಲ್ಲಿ ಸಂಚಾರ ಮಾಡಿರುವುದರಿಂದ ಮೈಸೂರಿನ ಸರ್ಕಾರದವರೂ ಮತ್ತು ಜನರೂ ಚರಕದ ಕೆಲಸವನ್ನು ವಿಜ್ಞಾನ ರೀತ್ಯಾ ಕ್ರಮದಿಂದ ನಡೆಸಿದರೆ ಈ ಸಂಸ್ಥಾನದಲ್ಲಿ ಖಾದಿಯ ಭವಿಷ್ಯತ್ತು ದಿವ್ಯವಾಗಿರುವದೆಂದು ನನಗೆ ಭರವಸೆಯುಂಟಾಗಿದೆ. ಆಡಳಿತದ ಸುವ್ಯವಸ್ಥೆ ಪ್ರವೀಣತೆಗಳು ಭದ್ರಾವತಿ ಕಬ್ಬಿಣದ ಕಾರ್ಖಾನೆಯಂಥ ದೊಡ್ಡ ಕೈಗಾರಿಕೆಯ ಕೆಲಸಗಳನ್ನು ನಡೆಸುವುದಕ್ಕೆ ಹೇಗೆ ಆವಶ್ಯಕವೋ ಖಾದಿ ಕಾರ್ಯಕ್ಕೂ ಹಾಗೆಯೇ ಆವಶ್ಯಕ. ಪ್ರವೀಣರು ಜಾಗರೂಕತೆಯಿಂದ ನೋಡಿಕೊಳ್ಳದಿದ್ದರೆ ಕಾರ್ಖಾನೆ ಮುಂತಾದವು ಚೂರುಚೂರಾಗಿ ಹೋಗುವಂತೆಯೇ ಖಾದೀ ಪ್ರಚಾರವು ವಿಶೇಷ ಜ್ಞಾನ ಮತ್ತು ಎಡೆಬಿಡದ ಪ್ರಯತ್ನದ ಬೆಂಬಲವಿಲ್ಲದಿದ್ದರೆ ಕುಂದಿಹೋಗುತ್ತದೆ. ಕುಶಲತೆಯಿಂದ ಪೋಷಿಸಿದುದಕ್ಕಾಗಿ ಈ ದೊಡ್ಡ ಚಳುವಳಿಯು ಕ್ಷಯಿಸದಿರಲಿ. ಕೈನೂಲಿಗೆಯು ರೈತರ ಆದಾಯವನ್ನು ಕಡಮೆಯೆಂದರೆ ಶೇಖಡ ೨೦ ರಷ್ಟಾದರೂ ಹೆಚ್ಚಿಸುತ್ತದೆ. ಸ್ವಾಭಾವಿಕವಾಗಿ ಮೈಸೂರಿನವರ ಅಭಿಮಾನಕ್ಕೆ ಪಾತ್ರರಾಗಿರುವ ಈ ಕೆಲವು ದೊಡ್ಡ ಉದ್ಯಮಗಳಿಗಾಗಿ ಹಾಕಿರುವ ಬಂಡವಾಳದೊಡನೆ ಹೋಲಿಸಿ ನೋಡಿದರೆ ಖಾದಿ ಉದ್ಯಮಕ್ಕೆ ಬೇಕಾಗುವ ಬಂಡವಾಳವು ಅತ್ಯಲ್ಪವಾಗಿ ಕಾಣುತ್ತದೆ.

ಆದರೆ ನಾನು ವಿವರಿಸಿರುವ ಅಭಿವೃದ್ಧಿಯು ಮಧ್ಯಮ ತರಗತಿಯ (ಎಂದರೆ ಧನಿಕರೂ ಅಲ್ಲದೆ ಬಡವರೂ ಅಲ್ಲದೆ ಸಾಮಾನ್ಯ ಸ್ಥಿತಿಯುಲ್ಲಿರುವ) ಜನರಿಗೆ ಮಾತ್ರ ಸೇರಿದೆ. ಕೈರಾಟೆಯನ್ನು ಎಲ್ಲ ಕಡೆಗೂ ಹರಡಿದರೆ ಈ ಅಭಿವೃದ್ಧಿಯು ಒಮ್ಮೆಯೇ ಕಡುಬಡವನಾದ ರೈತನನ್ನೂ ಸೇರುತ್ತದೆ. ಅದು ಅವರಿಗೂ ನಿಮಗೂ ಮಧ್ಯೆ ಭೇದಿಸಲಾಗದ ಬಂಧನವನ್ನುಂಟು ಮಾಡುತ್ತದೆ. ವರ್ಷಕ್ಕೆ ನಾಲ್ಕು ತಿಂಗಳು ಕಡಮೆಯಿಲ್ಲದೆ ವಿರಾಮ ಕಾಲದಲ್ಲಿ ರೈತಾಪಿ ಜನರಿಗೆ ಉದ್ಯೋಗಗಳನ್ನು ಕೊಡುತ್ತದೆ. ಕೈಗಾರಿಕೆಯ ಇಲಾಖೆಯೂ ಪರಸ್ಪರ ಸಹಾಯಸಂಘದ ಇಲಾಖೆಯೂ ಈ ವಿಷಯದಲ್ಲಿ ಪ್ರಯತ್ನ ಪಡುತ್ತಿರುವುದು ನನಗೆ ಬಹು ಸಂತೋಷದ ವಿಷಯ. ಏಕೆಂದರೆ ಇದಕ್ಕಿಂತ ಮಹತ್ತರವಾದ ಕೈಗಾರಿಕೆ ಇನ್ನೊಂದಿಲ್ಲ. ಖಾದೀ. ಪ್ರಚಾರವನ್ನೊಳಗೊಂಡಿಲ್ಲದ ಸಹಕಾರ ಪ್ರಯತ್ನವೊಂದೂ ಸಂಪೂರ್ಣವೆನಿಸುವುದಿಲ್ಲ. ನಿಮ್ಮ ಉಡಿಗೆ ತೊಡಿಗೆಗಳಿಗೆ ಖಾದಿಯನ್ನು ಉಪಯೋಗಿಸುವದೊಂದರಿಂದ ನಿಮ್ಮಲ್ಲಿ ಪ್ರತಿಯೊಬ್ಬರೂ ನಿಮ್ಮ ಸಹಕಾರವನ್ನು ಹಳ್ಳಿಯ ಜನರಿಗೆ ನೀಡಬಲ್ಲಿರಿ.

ಚರಕವು ಹಳ್ಳಿಗಳ ಅಭಿವೃದ್ಧಿಗೆ ಕೇಂದ್ರ ಉದ್ದಿಮೆಯಾಗಿದ್ದರೂ ಚರಕದಲ್ಲಿಯೇ ಎಲ್ಲವನ್ನು ಸಾಧಿಸಲಾಗುವುದಿಲ್ಲ. ನಮ್ಮ ದನಕರುಗಳು ನಮ್ಮ ಸಂಪದಭಿವೃದ್ಧಿಗೆ ಅಡಚಣೆಯಾದರೆ ನಾವು ಬದುಕಲಾರೆವು. ರಜತೋತ್ಸವದಲ್ಲಿ ಜನರು ಒಪ್ಪಿಸಿದ ಬಿನ್ನವತ್ತಳೆಗೆ ತಾವು ಕೊಟ್ಟ ಉತ್ತರದಲ್ಲಿ ಮಹಾರಾಜರು ಮೂಕಪ್ರಾಣಿಗಳ ಪರವಾಗಿ ಮನಮುಟ್ಟುವಂತೆ ವ್ಯಕ್ತಪಡಿಸಿದ ಘನವಾದ ಮಾತುಗಳು ನಿಮ್ಮೆಲ್ಲರ ಗಮನಕ್ಕೂ ಬಂದಿವೆಯೋ ಇಲ್ಲವೋ ನಾನು ಕಾಣೆ. ಆ ನಲ್ನುಡಿಗಳನ್ನು ಇಲ್ಲಿ ಮತ್ತೆ ಎತ್ತಿ ಹೇಳುತ್ತೇನೆ.

"ಇದೇ ವಾತ್ಸಲ್ಯವು ಮೂಕ ಪ್ರಾಣಿಗಳಿಗೂ ಸಹ ವಿಸ್ತೃತವಾಗಿ, ತಮ್ಮ ಮನೋಭಾವಗಳನ್ನು ಪ್ರಕಟಿಸಲಾಗದ ಪ್ರಾಣಿಗಳಲ್ಲಿ ಅವರಲ್ಲಿಯೂ ನಾವು ಪವಿತ್ರವಾದವುಗಳೆಂದೆಣಿಸಿರುವುಗಳಲ್ಲಿ ತಮ್ಮ ಅಭಿಮಾನವು ದಿನದಿನಕ್ಕೆ ಹೆಚ್ಚಬೇಕೆಂದು ನಾವು ಪ್ರಾರ್ಥಿಸುತ್ತೇವೆ."

ಮುಸಲ್ಮಾನ, ಈಸಾಯೀ ಮತ್ತು ಆದಿಕರ್ನಾಟಕ ಪ್ರಜೆಗಳು ಗೋಮಾತೆಯನ್ನೂ ಗೋಸಂತಾನವನ್ನೂ ಘಾತದಿಂದ ರಕ್ಷಿಸಬೇಕೆಂಬ ಮಹಾರಾಜರ ಬಯಕೆಯು ಈ ವಾಕ್ಯಗಳಲ್ಲಿ ವ್ಯಕ್ತವಾಗಿದೆಯೆಂದು ನನಗೆ ಕಾಣುತ್ತದೆ. ಆದರೆ ನನ್ನ ಸವಿನಯ ಅಭಿಪ್ರಾಯವೇನೆಂದರೆ, ಗಹನವಾದ ವಿಮರ್ಶೆ ಮತ್ತು ಇನ್ನೂ ಕಠಿಣವಾದ ಶ್ರಮ ಇವುಗಳಿಲ್ಲದೆ ಗೋ ಸಂರಕ್ಷಣೆಯ ತೊಡಕನ್ನು ಬಿಡಿಸಲಾಗುವುದಿಲ್ಲ. ನಾವು ಗೋಹತ್ಯೆಯನ್ನು ಸಂಪದಭಿವೃದ್ಧಿಯ ದೃಷ್ಟಿಯಿಂದ ಲಾಭಕರವಾಗಿದೆಯೆನ್ನುವುದರಲ್ಲಿ ಹುರುಳಿಲ್ಲ. ಸರ್ಕಾರದವರಲ್ಲದೆ ಇತರರು ಈ ಕೇಡನ್ನು ಸಂಪೂರ್ಣವಾಗಿ ತೊಲಗಿಸಲು ಸಾಧ್ಯವಿಲ್ಲ. ಇದು ಧಾರಾಳವಾಗಿ ಸರ್ಕಾರದ ಪ್ರಯತ್ನಕ್ಕೆ ಒಳಪಡತಕ್ಕ ವಿಷಯ. ಈ ಕೆಲಸವನ್ನು ಸಾಧಿಸುವುದಕ್ಕೆ ಜನರಲ್ಲಿ ಪಶುಪಾಲನೆ, ಹಾಲು, ಮೊಸರು, ಬೆಣ್ಣೆ ಮುಂತಾದವುಗಳ ಉತ್ಪತ್ತಿ, ಬೀಜದ ಹೋರಿಗಳ ಆರಿಸುವಿಕೆ ಈ ವಿಷಯಗಳ ಜ್ಞಾನವು ಹರಡಬೇಕು. ಈ ವಿಷಯದಲ್ಲಿ ದೃಢವಾದ ಮತ್ತು ವಿವೇಕಯುತವಾದ ಕ್ರಮದಿಂದ ದೇಶದ ಪಶುಸಂಪತ್ತನ್ನು ರಕ್ಷಿಸುವುದು ಸರ್ಕಾರದ ಕರ್ತವ್ಯವೆಂದು ನಾನು ಅಭಿಪ್ರಾಯ ಪಡುತ್ತೇನೆ. ದೇಶವಲ್ಲಿನ ಮಕ್ಕಳು ಮರಿಗಳಿಗೂ ಜನರಿಗೂ ಸಾಕಾದಷ್ಟು ಒಳ್ಳೆಯ ಹಾಲು ಅಗ್ಗವಾಗಿ ದೊರೆಯುವಂತೆ ಮಾಡುವುದು ಸರ್ಕಾರದ ಪ್ರಧಾನ ಕಾರ್ಯಗಳಲ್ಲಿ ಒಂದೆಂದು ನಾನು ಎಣಿಸುತ್ತೇನೆ. ಅಂಚೆಯ ಚೀಟಿಗಳ ದರ್ಜೆಯೂ ಬೆಲೆಯೂ ಒಂದೇ ಸಮವಾಗಿ ಮಾಡಲ್ಪಟ್ಟಿರುವಂತೆಯೇ ಹಾಲಿನ ಬೆಲೆಯೂ ಗುಣವೂ ಒಂದೇ ಸಮನಾಗಿ ಮಾಡಲ್ಪಡಬೇಕೆಂದು ಬ್ಲಾಚ್‌ಫರ್ಡ್ ಎಂಬಾತನು ಅಭಿಪ್ರಾಯ ಪಡುತ್ತಾನೆ. ನಾನು ಇದನ್ನು ಸಂಪೂರ್ಣವಾಗಿ ಅನುಮೋದಿಸುತ್ತೇನೆ. ಮೈಸೂರಿನಲ್ಲಿ ಗೋಹತ್ಯೆ ಮತ್ತು ಸತ್ತ ದನಗಳ ಚರ್ಮವು ಏನಾಗುತ್ತದೆನ್ನುವದು ನಿಮ್ಮಲ್ಲಿ ಅನೇಕ ಮಂದಿಗೆ ಗೊತ್ತಿಲ್ಲವೆಂದು ತೋರುತ್ತದೆ. ಈ ಪ್ರಶ್ನೆಯನ್ನುನಾನು ವಿಚಾರ ಮಾಡಿರುವಂತೆಯೇ ನೀವೂ ವಿಚಾರ ಮಾಡಿದರೆ

ನಿಮಗೆ ಅನೇಕ ಸಂಕಟಕರವಾದ ವಿಷಯಗಳು ಗೊತ್ತಾಗುತ್ತವೆ. ನಮ್ಮ ಪಾದರಕ್ಷೆಗಳೆಲ್ಲವೂ ಕೊಲೆಗೀಡಾದ ದನಗಳ ತೊಗಲಿನಿಂದ ಮಾಡಲ್ಪಟ್ಟು ಪ್ರತಿವರ್ಷವೂ ಒಂಬತ್ತು ಕೋಟಿರೂಪಾಯಿ ಬೆಲೆಬಾಳುವ ಸತ್ತ ದನಗಳ ತೊಗಲು (ಹೀಗೆ ನಾನು ಕೇಳಿದ್ದೇನೆ)ಹಿಂದೂಸ್ಥಾನದಿಂದ ರಫ್ತಾಗಿ ಹೋಗುವುದು ನಮಗೆ ನಾಚಿಕೆಯ ವಿಷಯ ವಲ್ಲವೆ ? ಆದರೂ ತೊಗಲನ್ನು ಹದಮಾಡುವ ಕೌಶಲಕ್ಕೆ ಯೋಗ್ಯವಾದ ಸ್ಥಾನವನ್ನು ಕೊಟ್ಟು ದೇಶದ ಲಾಭಕ್ಕೂ ತಮ್ಮ ಲಾಭಕ್ಕೂ ಮಾರ್ಗಮಾಡುವುದಕ್ಕೆ ಈ ಕ್ಷೇತ್ರ ದಲ್ಲಿ ರಸಾಯನ ಶಾಸ್ತ್ರಜ್ಞರದೊಂದು ಸೈನ್ಯಕ್ಕೇ ಸಾಕಾದಷ್ಟು ಕೆಲಸವಿದೆ. ಪುನಃ ಪಶುಗಳಿಗೆ ಸಂಬಂಧಪಟ್ಟ ಈ ಅತಿಮುಖ್ಯವಾದ ವಿಷಯವನ್ನು ನಿರ್ವಹಿಸುವುದು ಸರಕಾರಕ್ಕೆ ಮಾತ್ರ ಸಾಧ್ಯ.

ನಿಮ್ಮ ಗಮನಕ್ಕೆ ತರಬೇಕೆಂದಿರುವ ಮುಂದಿನ ವಿಷಯಕ್ಕೆ ನಾನು ಓಡ ಬೇಕು. ಇಲ್ಲಿ ಕೂಡ ನಾನು ಮಹಾರಾಜರ ಮಾತುಗಳನ್ನು ಅವಲಂಬಿಸುತ್ತೇನೆ. ಅದೇನೆಂದರೆ :

"ನಾವೆಲ್ಲರೂ ಭ್ರಾತೃ ಭಾವದಿಂದ ಕೆಲಸ ಮಾಡಿ ಸುವ್ಯವಸ್ಥಿತವಾದ ಆಡಳಿತ ದಿಂದಲೂ ವ್ಯವಸಾಯ, ಕೈಗಾರಿಕೆ ಮತ್ತು ವ್ಯಾಪಾರಗಳಿಗೆ ಸೌಲಭ್ಯಗಳು ಹೆಚ್ಚು ವವರಿಂದಲೂ ಎಲ್ಲರೂ ಸಮಾನರಾದ ಏಳಿಗೆಯ ಮಾರ್ಗಗಳನ್ನು ಪಡೆಯುವುದ ರಿಂದಲೂ ಮುಂದೆ ಮೈಸೂರು ದೇಶವು ಅತ್ಯುನ್ನತ ದೆಸೆಯಲ್ಲಿರುವ ದೇಶಗಳೊಂದಿಗೆ ಸರಿತೂಗುವಂತೆ ಮಾಡಲು ಭಗವಂತನು ನಮ್ಮೆಲ್ಲರಿಗೂ ಶಕ್ತಿಯನ್ನು ದಯಪಾಲಿಸ ಲೆಂದು ಬೇಡುತ್ತೇವೆ. ಹೀನ ಸ್ಥಿತಿಯಲ್ಲಿರುವ ಜನಗಳೂ ಸಹ ನಮ್ಮ ಪ್ರಜಾ ಸಮೂಹಕ್ಕೆ ಸೇರಿದವರು. ಹಾಗೂ ನಮ್ಮ ನಾಡಿನ ಮಕ್ಕಳು. ಆದ್ದರಿಂದ ಅವರ ಏಳಿಗೆಗಾಗಿ ನಾವೆಲ್ಲರೂ ಇದೇ ಭ್ರಾತೃಭಾವದಿಂದ ಕೆಲಸ ಮಾಡಬೇಕೆಂದು ಉತ್ಕಟವಾದ ಅಭಿಲಾಷೆಯಿದೆ."

ಜನರಿಗೆ ಸೋದರಭಾವದಲ್ಲಿ ನಂಬಿಕೆಯಿಲ್ಲದಿದ್ದರೆ ಪ್ರಭುತ್ವದವರು ಒತ್ತಾಯ ಮಾಡಿ ಆ ಭಾತೃಭಾವವನ್ನು ಬಿತ್ತಲಾಗದು. ಸಂಸ್ಥಾನದಲ್ಲಿ ಪೂರ್ಣಪಾಂಡಿತ್ಯ ವುಳ್ಳ ಸಂಸ್ಕೃತ ವಿದ್ವಾಂಸರಿರುವರೆಂದೂ ಅವರೊಬ್ಬರೂ ಆದಿಕರ್ನಾಟಕರಿಗೆ ವೇದ ಪಾಠ ಹೇಳಲು ಒಪ್ಪುವುದಿಲ್ಲವೆಂದೂ "ಅಸ್ಪೃಶ್ಯತೆ" ಎಂಬುದು ಜನ್ಮಸಿದ್ಧವಾದು ದೆಂದು ವಾದಿಸುವರೆಂದೂ ಕೇಳಿ ನನಗೆ ಬಹಳ ವ್ಯಸನವಾಯಿತು. ಪೂಜ್ಯ ಪಂಡಿತ ಮದನ ಮೋಹನ ಮಾಳವೀಯರಿಗೆ ಸಹ ವ್ಯಸನವುಂಟಾಯಿತು. ಅಸ್ಪೃಶ್ಯತೆಯು —ನಾವಿಂದು ತಿಳಿದುಕೊಂಡಿರುವಂತೆ— ಹಿಂದೂಧರ್ಮದ ಪ್ರಧಾನಾಂಗವೆಂದೆಂದು ಸಕಾರಣವಾಗಿ ನನಗೆ ಯಾರಾದರೂ ತಿಳಿಸಿಕೊಟ್ಟಿದ್ದೇ ಆದರೆ ನಾನು ಹಿಂದೂಧರ್ಮ ವನ್ನೂ ತ್ಯಜಿಸಲಿಕ್ಕೆ ಒಂದು ಕ್ಷಣವೂ ಹಿಂದು ಮುಂದು ನೋಡುವುದಿಲ್ಲ. ಆದರೆ ನನ್ನ ಹಿಂದೂ ಬಂಧುಗಳೊಂದಿಗೆ "ನನ್ನ ಅಲ್ಪಮತಿಗೆ ತಕ್ಕಂತೆ ನಾನು ಹಿಂದೂ

ಧರ್ಮವನ್ನು ತಿಳಿದುಕೊಳ್ಳಲೂ ಅಕ್ಷರಶಃ ಮತ್ತು ಶಕ್ತಿಶಃ ಆ ಧರ್ಮವು ಜೀವಿಸಲು ಪ್ರಯತ್ನಮಾಡಿದ್ದಾಗ್ಯೂ ಆ ಧರ್ಮದಲ್ಲಿ ಈ ಅಸ್ಪೃಶ್ಯತಾ ಪೀಡೆಗೆ ಲೇಶವು ಅವಕಾಶವಿಲ್ಲ"ವೆಂದು ಧೈರ್ಯವಾಗಿ ಹೇಳುತ್ತೇನೆ. ಅವನು ಇಂತಹ ಪರಿಸ್ಥಿತಿಯಲ್ಲಿ ಹುಟ್ಟಿದ್ದಾನೆ, ಆದಕಾರಣ ಆ ಮಾನವ ಪ್ರಾಣಿಯು ಅಸ್ಪೃಶ್ಯನೆಂದು ನಾವು ಹೇಳಿದ್ದೇ ಆದರೆ ಅದು ದೈವದ್ರೋಹ, ಮಾನವದ್ರೋಹವಾಗುತ್ತದೆ.

ಅಸ್ಪೃಶ್ಯತೆಗೆ ಸಮೀಪ ಬಂಧುವೇ ಕುಡಿತ. ಮೇಲ್ತರಗತಿಯವರೆಂದೆನಿಸಿಕೊಳ್ಳುವ ಜನರು ಕೀಳ್ತನದವರೊಂದಿಗೆ ಭ್ರಾತೃತ್ವ ಬೆಳೆಸಿದ್ದೇ ಆದರೆ, ಈ ರಮ್ಯವಾದ ನಾಡಿನಿಂದ ಮದ್ಯಪಾನದ ಪೀಡೆಯನ್ನು ಹೊಡೆದೋಡಿಸಬಹುದು. ಆದರೆ ಇಲ್ಲೂ ಸಹ ನನಗೆ ಚೆನ್ನಾಗಿ ಅನುಭವವಿದೆ. ಏಕೆಂದರೆ ಅನೇಕ ವರ್ಷಗಳು ಪಾನವಿರೋಧಕ್ಕಾಗಿ ಶ್ರಮವಹಿಸಿದ್ದೇನೆ. ಆದರೆ ಪ್ರಭುತ್ವದ ಸಹಾಯವಿಲ್ಲದೆ ಹೆಚ್ಚು ಸಹಾಯ ಹೊಂದಲು ಸಾಧ್ಯವಿಲ್ಲ. ಪಾಪ, ಅರಿಯದ ಜನರೇನು ಮಾಡುವರು? ಸುಲಭವಾಗಿ ಸುರೆಯು ಸಿಗುವಂತೆ ಅನುಕೂಲ ಮಾಡಿದರೆ ಕುಡಿದೇ ಕುಡಿಯುವರು. ಪಾನವ್ಯಸನವನ್ನು ನಿರ್ಮೂಲ ಮಾಡಬೇಕಾದರೆ ಭರತಖಂಡ ಬಿಟ್ಟರೆ ಜಗತ್ತಿನಲ್ಲಿ ಇನ್ನಾವ ದೇಶದಲ್ಲೂ ಇಷ್ಟು ಅನುಕೂಲವಿಲ್ಲ. ಏಕೆಂದರೆ ದೇವರ ದಯೆಯಿಂದ ಭರತ ಖಂಡದಲ್ಲಿ ಕುಡಿತಕ್ಕಿನ್ನೂ ಗೌರವ ಮುದ್ರೆ ಬಿದ್ದಿಲ್ಲ. ಕುಡಿತವು ನೀತಿಬಾಹಿರವಾದ ನಡತೆಯೆಂಬುದಿನ್ನೂ ರೂಢಿಯಲ್ಲಿದೆ. ನನ್ನ ಪ್ರವಾಸದಲ್ಲಿ ಸಾವಿರಾರು ಆದಿಕರ್ನಾಟಕರನ್ನು ನಾನು ನೋಡಿದ್ದೇನೆ. ಲಂಬಾಣಿಯವರ ಒಂದು ಗುಂಪನ್ನು ಕಂಡಾಗ ನಾನವರಿಗೆ ಪ್ರಶ್ನೆಗಳನ್ನು ಹಾಕಿದೆನು. ಒಬ್ಬನಾದರೂ ಕುಡಿತವು ಸರಿಯಾದುದು ಎಂದು ಸಾಧಿಸಲು ಕೈಯೆತ್ತಲಿಲ್ಲ. ಅವರಲ್ಲಿ ಬಹುಮಂದಿ ಗೋಮಾಂಸ ಭಕ್ಷಣ, ಸುರಾಪಾನ ಇವೆರಡನ್ನೂ ಬಿಟ್ಟು ಬಿಡುವೆವೆಂದು ಆಣೆಯಿಟ್ಟುಕೊಂಡಿದ್ದಾರೆ. ಅವರು ತಮ್ಮ ಮಾತನ್ನು ಪಾಲಿಸಲು ದೇವರು ಅವರಿಗೆ ತಕ್ಕ ಶಕ್ತಿಯನ್ನೀಯಲಿ. ಆದರೆ ನಿಮ್ಮನ್ನೂ ಪ್ರಭುತ್ವದವರನ್ನೂ ಸಹ "ಅವರಿಗೆ ಸಹಾಯ ಮಾಡಿ" ರೆಂದು ಒತ್ತಿ ಹೇಳುತ್ತೇನೆ. ಮಾರ್ಗದಲ್ಲಿ ಅನೇಕ ತೊಂದರೆಗಳಿವೆ ನಿಜ. ಆದರೇನು? ಮನುಷ್ಯನಾದವನು ಅವುಗಳನ್ನು ಎದುರಿಸಬೇಕು, ಅವುಗಳೊಡನೆ ಯುದ್ಧ ಮಾಡಬೇಕು, ಜಯಿಸಬೇಕು.

ಕಡೆಗೊಂದು ಮಾತು. ಬಾಲವಿತಂತುಗಳ ಮತ್ತು ಶಿಶುವಸತಿಗಳ ವಿಚಾರ ಕೊಂಚ ವಹಿಸಿ ಮಾತನಾಡಲು ಅವಕಾಶ ಕೊಡಿ. ನಮ್ಮ ದುರದೃಷ್ಟ. ನಮಗೆ ನಾಚಿಕೆಯನ್ನುಂಟು ಮಾಡತಕ್ಕ ಮಾತು. ಅವರೂ ಸಹ ಮೂಕ ಪ್ರಾಣಿಗಳ ವರ್ಗಕ್ಕೆ ಸೇರಿಸಲ್ಪಟ್ಟಿದ್ದಾರೆ. ಎಲ್ಲಿದ್ದರೂ ಸರಿಯೇ ಈ ಕಲ್ಮಷವನ್ನು ತೊಡೆದು ಹಾಕದಿದ್ದರೆ ನಮ್ಮ ಜ್ಞಾನ, ನಮ್ಮ ಶಿಕ್ಷಣ ಇವೆಲ್ಲವೂ ಮಣ್ಣಿಗಿಂತಲೂ ಕಡಿಮೆಯೇ ಸರಿ ನಿಮ್ಮ "ಪೌರಸಾಮಾಜಿಕ ಸಮಾಜ" ಕ್ಕಿದೋ ಇಲ್ಲಿದೆ ಕೆಲಸ.

ರಾಮರಾಜ್ಯವೆಂಬ ಹೆಸರು ಸಾರ್ಥಕವಾಗಬೇಕಾದರೆ, ನಿಜವಾಗಿಯೂ ಇದು "ಮಾದರಿಯ ಮೈಸೂರು" ಆಗಬೇಕಾದರೆ, ನಾನೀಗ ನಿಮ್ಮ ಗಮನಕ್ಕೆ ತಂದ ಹಲವು ವಿಚಾರಗಳಿಗೆ ಲಕ್ಷ್ಯ ಕೊಡಬೇಕು. ಹೀಗೆ ನಾನು ಮಾಡಿದ್ದಕ್ಕಾಗಿ ನನ್ನನ್ನು ನೀವು ನಿರ್ಘೃಣನೆಂದು ಕರೆಯಲಾರಿರಿ. ನಾನು ನಿಮ್ಮ ಗಮನಕ್ಕೆ ತಂದ ಕುಂದು ಕೊರತೆಗಳು ಭರತಖಂಡದ ಮತ್ತಿನ್ನಾವ ಭಾಗದಲ್ಲೂ ಇಲ್ಲವೆಂದಲ್ಲ. ಅದೇಕೆ ? ಎಲ್ಲೆಲ್ಲೂ ಇವೆ. ಇಲ್ಲಿರುವುದಕ್ಕಿಂತ ಇನ್ನೂ ಬಲವತ್ತರವಾಗಿವೆ. ಆದರೆ ಅನೇಕ ವಿಚಾರಗಳಲ್ಲಿ ಇತರ ಕಡೆಗಳಿಗಿಂತ ಮೈಸೂರಿನಲ್ಲಿ ಹೆಚ್ಚು ಅಭಿವೃದ್ಧಿ ಕೆಲಸ ನಡೆದಿದೆ. ಆದ್ದರಿಂದಲೇ ಈ ಸಮಸ್ಯೆಗಳಿಗಿಂತ ಉದ್ಯಮಗಳಲ್ಲಿ ಆಸೆಯನ್ನು ಹುಟ್ಟಿಸಿದೆ. ಆದರೂ ನಮ್ಮಿಂದ ಸಮಾಜದ ಸುಧಾರಣೆಯನ್ನು ನಿರೀಕ್ಷಿಸಲ್ಪಡುತ್ತದೆ.

ನಾನು ನಿಮ್ಮ ಸಂಸ್ಥಾನದಲ್ಲಿ ಕಂಡ ಒಳಿತನ್ನು ಯೋಚಿಸಿದರೆ ನೀವೂ ನಿಮ್ಮ ಮಹಾರಾಜರೂ ಒಂದುಗೂಡಿ ಮನಸು ಮಾಡಿದರೆ ನಿಮ್ಮ ರಾಜ್ಯವು ರಾಮರಾಜ್ಯವೇ ಆದೀತೆಂದು ತೋರುತ್ತದೆ.

ಮೇಲಿನ ಭಾಷಣದಿಂದ ಮೈಸೂರಿನ ಬಗೆಗೆ ಮಹಾತ್ಮರಿಗಿದ್ದ ಆತ್ಮೀಯವಾದ ಅಭಿಮಾನವು ಎದ್ದು ಕಾಣುತ್ತದೆ. ಅಂದಮಾತ್ರಕ್ಕೆ ಮೈಸೂರಿನ ಜನರಿಗೆ ಯಾವ ಸಮಸ್ಯೆಗಳೂ ಇಲ್ಲವೆಂದು ಅವರು ಭಾವಿಸಿದ್ದರೆಂದು ಅರ್ಥವಲ್ಲ. ಮೈಸೂರಿನ ಜನರು ರಾಷ್ಟ್ರಪ್ರವಾಹದಲ್ಲಿ ಮಿಳಿತವಾಗಲು ಕೈಗೊಳ್ಳಬೇಕಾದ ಕಾರ್ಯಕ್ರಮಗಳ ಬಗೆಗೂ ಮಹಾತ್ಮರು ಸೂಚನೆ ನೀಡಿದ್ದಾರೆ. ಮೈಸೂರು "ಮಾದರಿ ಮೈಸೂರು" ಆಗುವುದು ಹೇಗೆ ಎಂಬ ಬಗೆಗೆ ಗಾಂಧೀಜಿ ಹೀಗೆ ಅಭಿಪ್ರಾಯ ಪಟ್ಟಿದ್ದಾರೆ.

ಮೈಸೂರಿಗೆ ಮಹಾತ್ಮರ ಸಂದೇಶ

ಮೈಸೂರು ರಾಮರಾಜ್ಯವಾಗುವುದಕ್ಕೆ ನೆರವೇರಿಸಬೇಕೆಂದು ನಾನು ಹೇಳಿರುವ ಕಾರ್ಯಕ್ರಮಗಳನ್ನೆಲ್ಲಾ ಮೈಸೂರುರಾಜ್ಯ ನಡೆಸುವುದೆಂದು ನಾನು ನಿರೀಕ್ಷಿಸುತ್ತೇನೆ. *

ಮೋ. ಕ. ಗಾಂಧೀ.

ಮೈಸೂರಿನಲ್ಲಿದ್ದಾಗ ಗಾಂಧೀಜಿಯವರು ಎರಡು ಮೂರು ಕಡೆ "ರಾಮರಾಜ್ಯ" ಎಂಬ ಮಾತನ್ನು ಬಳಸಿದರು. ಎಲ್ಲ ಸಂದರ್ಭಗಳಲ್ಲೂ ಅವರ ಉದ್ದೇಶ ಸ್ಪಷ್ಟವಾಗಿತ್ತು.

---

* I expect Mysore to satisfy the tests mentioned by me to become Ramarajya.

M. K. Gandhi

ನಾಲ್ಕು ತಿಂಗಳು ಮೈಸೂರು ರಾಜ್ಯದಲ್ಲಿದ್ದ ಗಾಂಧೀಜಿಯವರು 30–8–1927ರ ಬೆಳಗ್ಗೆ "ಕುಮಾರ ಪಾರ್ಕ್" ಬಿಟ್ಟು ವೆಲ್ಲೂರಿಗೆ ಹೊರಡಲು ರೈಲ್ವೆ ನಿಲ್ದಾಣಕ್ಕೆ ಬಂದರು. ಜೊತೆಯಲ್ಲಿ ಶ್ರೀ ಗಂಗಾಧರ್‌ರಾವ್ ದೇಶಪಾಂಡೆ. ಶ್ರೀ ಸಿ. ರಾಜಗೋಪಾಲಾಚಾರಿ, ಸಿ. ಎಫ್. ಆಂಡ್ರೂಸರು ಇದ್ದರು. ಅಂದಿನ ಪ್ರಮುಖ ಸಮಾಜ ಸೇವಕರಾದ ಶ್ರೀ ಕೆ. ಹೆಚ್. ರಾಮಯ್ಯನವರು, ಅನೇಕ ಸ್ಥಳೀಯ ಮುಖಂಡರು ರೈಲ್ವೆ ನಿಲ್ದಾಣದವರೆಗೆ ಗಾಂಧಿಜಿಯವರೊಡನಿದ್ದರು. ಪತ್ರಿಕಾ ಪ್ರತಿನಿಧಿಯೊಬ್ಬರು ಗಾಂಧೀಜಿಯವರ ಹಸ್ತಾಕ್ಷರ ಬಯಸಿದರು. ಆಗ ಗಾಂಧೀಜಿಯವರು "ಮೈಸೂರು ರಾಮರಾಜ್ಯವಾಗಲು............! ಎಂದು ಬರೆದುಕೊಟ್ಟರು.

ಮಹಾತ್ಮ ಗಾಂಧೀಜಿಯವರು ಬಳಸಿದ "ರಾಮರಾಜ್ಯ" ಎಂಬ ಪದವನ್ನು ಅಂದಿನ ದಿವಾನರು ಮತ್ತು ಮಹಾರಾಜರು ತಮ್ಮ ಮೂಗಿನ ನೇರಕ್ಕೆ ಬಳಸಿಕೊಂಡರು. ಗಾಂಧೀಜಿಯವರ "ಸಂದೇಶ"ವನ್ನು ಗಾಳಿಗೆ ತೂರಿಬಿಟ್ಟರು.

ಚಳುವಳಿಗಳ ನೇತಾರರು

ಪ್ರಭುತ್ವದವರು ಗಮನ ಕೊಡಲಿ ಕೊಡದಿರಲಿ ಜನಜಾಗೃತಿಯ ಸಲುವಾಗಿ ನಾನಾ ರೀತಿಯಲ್ಲಿ ಚಳುವಳಿಗಳು ನಡೆಯುತ್ತಿದ್ದುವು.

ಒಂದು ವ್ಯವಸ್ಥಿತವಾದ ರೀತಿಯಿಲ್ಲದಿದ್ದರೂ ಜನಜಾಗೃತಿಯ ಚಟುವಟಿಕೆಗಳು ನಡೆಯುತ್ತಿದ್ದುವು. ಇತರ ದೇಶೀಯ ಸಂಸ್ಥಾನಗಳಿಗೆ ಹೋಲಿಸಿದರೆ ಪ್ರಾರಂಭದಿಂದಲೂ ಮೈಸೂರು ಸಂಸ್ಥಾನದಲ್ಲಿ ರಾಷ್ಟ್ರೀಯ ಭಾವನೆ ಗಣನೀಯ ಪ್ರಮಾಣದಲ್ಲಿ ಕಂಡು ಬರುತ್ತಿತ್ತು. ಮಹಾತ್ಮಗಾಂಧೀಜಿ ಮೊದಲಾದ ರಾಷ್ಟ್ರನಾಯಕರ ಪ್ರಭಾವ ಮೈಸೂರಿನವರ ಮೇಲೂ ಸಾಕಷ್ಟಾಗಿತ್ತು. ಮೈಸೂರಿನ ಶ್ರೀ ಎಂ. ವೆಂಕಟಕೃಷ್ಣಯ್ಯ. ಶ್ರೀ ರಾಘವನ್, ಶ್ರೀ ಸಂಪಿಗೆ ವೆಂಕಟಪತಯ್ಯ, ಶ್ರೀ ತಗಡೂರು ರಾಮಚಂದ್ರರಾವ್, ಶ್ರೀ ವೀರಕೇಸರಿ ಸೀತಾರಾಮಶಾಸ್ತ್ರಿ, ತುಮಕೂರಿನ ಶ್ರೀ ಕೆ. ರಂಗೈಯಂಗಾರ್, ಮಲೆನಾಡಿನ ಹೊಸಕೊಪ್ಪದ ಶ್ರೀ ಕೃಷ್ಣರಾಯರು, ಬೀರೂರಿನ ಶ್ರೀ ಕೆ. ಟಿ. ಸತ್ಯನಾರಾಯಣ ಶೆಟ್ಟಿ ಮೊದಲಾದವರು ತಮಗೆ ತಿಳಿದಂತೆ ಗಾಂಧೀಜಿಯವರ ರಚನಾತ್ಮಕ ಕಾರ್ಯಗಳನ್ನು ತಂತಮ್ಮ ಕ್ಷೇತ್ರಗಳಲ್ಲಿ ಪ್ರಯೋಗಿಸುತ್ತಿದ್ದರು.

ಈ ಹಿನ್ನೆಲೆಯಲ್ಲಿ ಹಳೆಯ ಮೈಸೂರಿಗೆ ಸಂಬಂಧಿಸಿದಂತೆ ಶ್ರೀ ತಗಡೂರು ರಾಮಚಂದ್ರರಾಯರ ಸಾಹಸವನ್ನು ವಿಶೇಷವಾಗಿ ಗಮನಿಸುವುದು ಒಳ್ಳೆಯದು.

ಶ್ರೀ ಮುದವೀಡು ಕೃಷ್ಣರಾಯರಿಂದ ಸ್ಫೂರ್ತಿ ಪಡೆದು ರಾಷ್ಟ್ರಸೇವೆಗೆ ನಿಂತ ಶ್ರೀ ತಗಡೂರು ರಾಮಚಂದ್ರರಾಯರು ಸಾಮಾಜಿಕ ಹಾಗೂ ರಾಜಕೀಯವಾಗಿ ಸಾಕಷ್ಟು ಜನಜಾಗೃತಿಯನ್ನುಂಟು ಮಾಡಿದರು. ತಗಡೂರಿನಲ್ಲಿ ಸ್ವರಾಜ್ಯಮಂದಿರ ಸ್ಥಾಪನೆ, ಕೊಮ್ಮೇರ ಹಳ್ಳಿಯಲ್ಲಿ ಹರಿಜನರು ಕೆರೆಯನೀರು ಬಳಸಲು ಮಾಡಿದ ಚಳುವಳಿ,

ಕಣಿಯುರು ದೇವಾಲಯ ಪ್ರವೇಶಿಸಲು ಮಾಡಿದ ಚಳುವಳಿ, ಮೈಸೂರಿನಲ್ಲಿ ಸೈರ್ವ ಕಮೀಷನ್ನಿನ ಬಹಿಷ್ಕಾರ, ಕ್ರಿಶ್ಚಿಯನ್ ಮತಕ್ಕೆ ಮತಾಂತರ ಹೊಂದಿದ್ದ ಹರಿಜನರ ಶುದ್ಧೀಕರಣ ಚಳುವಳಿ, ನಂಜನಗೂಡು ಶ್ರೀಕಂಠೇಶ್ವರ ದೇವಸ್ಥಾನಕ್ಕೆ ಹರಿಜನರ ಪ್ರವೇಶದ ಚಳುವಳಿ ಮೊದಲಾದವು ಶ್ರೀ ತಗಡೂರರು ಕೈಗೊಂಡ ಕೆಲವು ಕಾರ್ಯ ಚಟುವಟಿಕೆಗಳು.* ಇವರದು ಒಕ್ಕೈಲ ಸಾಹಸ. ಆದರೂ ಇವರಿಂದಾದ ಜನಜಾಗೃತಿ ಕಡಮೆಯೇನಲ್ಲ.

ತಾತಯ್ಯನವರ ಪತ್ರಿಕೆಗಳಿಗೆ ವೈಚಾರಿಕ ಹಾಗೂ ಕ್ರಾಂತಿಕಾರಕ ಲೇಖನ ಗಳನ್ನೂ ತಗಡೂರರು ಬರೆದರು. ಮೈಸೂರು, ಮಂಡ್ಯ, ಹಾಸನ ಮುಂತಾದ ಕಡೆಗಳಲ್ಲಿ ನಡೆಯುತ್ತಿದ್ದ ಜಾತ್ರೆಗಳಿಗೆ ಹೋಗಿ ಅಲ್ಲೆಲ್ಲ ಕ್ರೈಸ್ತ ಪಾದ್ರಿಗಳು ಜನ ರನ್ನು ಮತಾಂತರಿಸಲು ಮಾಡುತ್ತಿದ್ದ ಕುಯುಕ್ತಿಗಳನ್ನು ಕುರಿತು ಮಾಡಿದ ಭಾಷಣ ಗಳು ಮತ್ತು ಬರೆಯುತ್ತಿದ್ದ ಲೇಖನಗಳು ಜನಮನ್ನಣೆ ಗಳಿಸಿದ್ದುವು. ಸರಕಾರದ ಕಣ್ಣು ಉರಿಯುವಂತೆ ತಮ್ಮ ಸ್ವಂತ ಪತ್ರಿಕೆಗಳಲ್ಲೂ ಲೇಖನಗಳನ್ನು ಬರೆಯು ತ್ತಿದ್ದರು. ಸ್ವಾತಂತ್ರ್ಯದ ಘೋಷಣೆಗಳನ್ನು ಕಂಬಳಿಯ ಮೇಲೆ ಬರೆದುಕೊಂಡು ಬೀದಿಗಳಲ್ಲಿ ಸುತ್ತಾಡಿ ಪ್ರಚಾರ ಮಾಡುತ್ತಿದ್ದರು.

ತಿಲಕ್ ಸಂಘದಿಂದ ಕಾಂಗ್ರೆಸ್ಸಿಗೆ

ಬ್ರಿಟಿಷ್ ಇಂಡಿಯಾದಲ್ಲಿ ಕಾಂಗ್ರೆಸ್ ಸಂಸ್ಥೆ ಇದ್ದರೂ ದೇಶೀಯ ಸಂಸ್ಥಾನ ಗಳಲ್ಲಿ ಅದರ ಪಾತ್ರವಿರಲಿಲ್ಲ. ಮೈಸೂರು ಸಂಸ್ಥಾನದಲ್ಲೂ ಕಾಂಗ್ರೆಸ್ ಸಂಸ್ಥೆ ಇರ ಲಿಲ್ಲ. "ತಿಲಕ್ ಸಂಘ" ಅಂತ ಇತ್ತು. ಅದು ತಿಲಕ್ ದಿನಾಚರಣೆ, ಗಣಪತಿ ಉತ್ಸವಗಳಂಥ ಸಣ್ಣ ಪುಟ್ಟ ಕಾರ್ಯಗಳನ್ನು ಮಾಡುತ್ತಿತ್ತು. ಅದೇ ಕ್ರಮೇಣ ಕಾಂಗ್ರೆಸ್ ರೂಪ ತಾಳಿತು. ಅದರಲ್ಲಿದ್ದವರೇ ಕಾಂಗ್ರೆಸ್ಸಿನಲ್ಲೂ ಮುಂದುವರಿದರು.

1920ರಲ್ಲಿ ನಾಗಪುರದಲ್ಲಿ ನಡೆದ ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ ಅಧಿ ವೇಶನದಲ್ಲಿ ದೇಶೀಯ ಸಂಸ್ಥಾನಗಳಲ್ಲೂ ಕಾಂಗ್ರೆಸ್ ಸಮಿತಿ ರಚಿಸಲು ಅವಕಾಶ ಕೊಡಲಾಯಿತು. ಆ ಸೂಚನೆಯಂತೆ 1921 ರಲ್ಲಿ ಬೆಂಗಳೂರಿನಲ್ಲಿ ನ್ಯಾಷನಲ್ ಕಾಂಗ್ರೆಸ್ಸಿನ ಶಾಖೆ ಪ್ರಾರಂಭವಾಯಿತು. ಮೈಸೂರು ಹೈಕೋರ್ಟಿನ ನ್ಯಾಯಾ ಧೀಶರಾದ ಶ್ರೀ ಸೆಟ್ಲೂರರು ಅದರ ಅಧ್ಯಕ್ಷರು. ಶ್ರೀ ಸೆಟ್ಲೂರರು ನ್ಯಾಯಾಧೀಶ ರಾದರೂ ರಾಜಕೀಯದಲ್ಲಿ ಆಸಕ್ತಿ ಇದ್ದವರು. ಅಂದಿನ ಕ್ರಾಂತಿಕಾರಿಗಳ ಸಂಪರ್ಕ ವನ್ನೂ ಇಟ್ಟುಕೊಂಡಿದ್ದರು. ಇದು ಬ್ರಿಟಿಷ್ ಸರಕಾರಕ್ಕೆ ತಿಳಿದು ಸಂಸ್ಥಾನದ ಆಡಳಿತದ ಮೂಲಕ ಆಕ್ಷೇಪಣೆ ಎತ್ತಿದಾಗ ತಮ್ಮ ನೌಕರಿಗೆ ಶ್ರೀ ಸೆಟ್ಲೂರರು ರಾಜೀ

---

*ವಿವರಗಳಿಗೆ ನೋಡಿ : ಕರ್ಮಯೋಗಿ (ಸಂಪಾದಕ ಎಂ. ಎನ್. ಜೋಯಿಸ್), 'ನನ್ನ ಅಳಿಲು ಸೇವೆ' ವಿಭಾಗ.

ನಾಮೆ ಇತ್ತು ಸಂಪೂರ್ಣವಾಗಿ ರಾಜಕೀಯಕ್ಕೆ ಧುಮುಕಿದರು. ಅವರು ದೇಶ ಭಕ್ತರೂ ಪತ್ರಕರ್ತರೂ ಆಗಿ ಪ್ರಸಿದ್ಧರಾದರು.

1924 ರಲ್ಲಿ ಮಹಾತ್ಮ ಗಾಂಧೀಜಿಯವರ ಅಧ್ಯಕ್ಷತೆಯಲ್ಲಿ ಬೆಳಗಾಂನಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದ ಅನಂತರ ಕಾಂಗ್ರೆಸ್ ಕ್ರಿಯಾತ್ಮಕವಾಗಿ ಮೈಸೂರಿಗೆ ಪ್ರವೇಶಿಸಿದಂತಾಯಿತು. ಆ ಸಮಯದಲ್ಲಿ ಅನೇಕ ಸಮಾಜ ಸೇವಕರು, ಸ್ವಾತಂತ್ರ್ಯ ಪ್ರೇಮಿಗಳು ಗಾಂಧೀಜಿಯವರ ಅನುಯಾಯಿಗಳಾದರು.

1927ರಲ್ಲಿ ಮಹಾತ್ಮ ಗಾಂಧೀಜಿ, ಜವಹರಲಾಲ್ ನೆಹರು, ಕಮಲಾದೇವಿ ಚಟ್ಟೋಪಾಧ್ಯಾಯ, ಹರ್ಡೀಕರ್ ಮೊದಲಾದವರು ಮೈಸೂರು ಸಂಸ್ಥಾನದಲ್ಲಿ ಪ್ರವಾಸ ಕೈಗೊಂಡು ಪ್ರಚಾರ ಮಾಡಿದ ಮೇಲೆ ಮೈಸೂರಿನಲ್ಲಿ ರಾಜಕೀಯ ಜಾಗೃತಿ ಹೆಚ್ಚಾಯಿತು. ಜನರ ಕಿವಿಗಳಿಗೆ ಹೊಸ ಹೊಸ ವಿಷಯಗಳು ಬಿದ್ದುವು. 1928ರಲ್ಲಿ ಜವಾಬ್ದಾರಿ ಸರ್ಕಾರಕ್ಕಾಗಿ ಚಳುವಳಿ ಹೂಡುವ ಉದ್ದೇಶದಿಂದ 'ಮೈಸೂರ್ ಸ್ಟೇಟ್ ಕಾಂಗ್ರೆಸ್' ಸ್ಥಾಪನೆಯಾಯಿತು. ಈ ಹೆಸರು ಬದಲಾವಣೆಯಾಗಿ ಶ್ರೀ ಟಿ. ಸಿದ್ಧಲಿಂಗಯ್ಯನವರ ಅಧ್ಯಕ್ಷತೆಯಲ್ಲಿ 'ಕಾಂಗ್ರೆಸ್ ಪಾರ್ಲಿಮೆಂಟರಿ ಬೋರ್ಡ್'ನ್ನು ಪ್ರಾರಂಭಿಸಲಾಯಿತು.

ಪ್ರಾರಂಭದಲ್ಲಿ "ಕಾಂಗ್ರೆಸ್" ಹೆಸರಿಗೆ ಮಾತ್ರ "ಕಾಂಗ್ರೆಸ್" ಆಗಿತ್ತು. ಯಾವ ಕೆಲಸವನ್ನೂ ಚುರುಕಾಗಿ ಮಾಡುತ್ತಿರಲಿಲ್ಲ. ಆಗ ಅದು ಕೇವಲ ಕೆಲವು ಪ್ರತಿಷ್ಠಿತ ವ್ಯಕ್ತಿಗಳ ಸಂಸ್ಥೆಯಾಗಿತ್ತು.

ಪ್ರಜಾಪಕ್ಷ

ಆಗ ಕಾಂಗ್ರೆಸ್ಸಿಗೆ ಪ್ರತಿಸ್ಪರ್ಧಿಯಾಗಿ ಬ್ರಾಹ್ಮಣೇತರರ "ಪ್ರಜಾಪಕ್ಷ" ಭರಾಟೆಯಿಂದ ಕೆಲಸ ಮಾಡುತ್ತಿತ್ತು. ಹೇಳಿ ಕೇಳಿ ಅದು ಬ್ರಾಹ್ಮಣೇತರರ ಪಕ್ಷ. ಅದಕ್ಕೆ ಮದರಾಸಿನ 'ಜೆಸ್ಟೀಸ್ ಪಾರ್ಟಿ'ಯ ಸ್ಫೂರ್ತಿ ಇತ್ತು. ಶ್ರೀಯುತರಾದ ಹೆಚ್. ಬಿ. ಗುಂಡಪ್ಪಗೌಡ, ವಿ. ವೆಂಕಟಪ್ಪ, ಕೆ. ಸಿ. ರೆಡ್ಡಿ, ಬಿ. ಎನ್. ಗುಪ್ತ, ಹೆಚ್. ಸಿ. ದಾಸಪ್ಪ, ಡಿ. ಎಸ್. ಮಲ್ಲಪ್ಪ, ಡಿ. ಹೆಚ್. ಚಂದ್ರಶೇಖರಯ್ಯ, ರಾವ್ ಸಾಹೇಬ್ ಚೆನ್ನಯ್ಯ, ಚಿಕ್ಕಮಗಳೂರಿನ ಬಾಗೇಮನೆ ದೇವೇಗೌಡ, ಶಿವಮೊಗ್ಗದ ಹೆಚ್. ಸಿದ್ದಯ್ಯ, ಒಕ್ಕಲಿಗರ ಸಂಘದ ಅಧ್ಯಕ್ಷರಾಗಿದ್ದ ಸುಬ್ಬಯ್ಯ, ಎಂ. ಬಸವಯ್ಯ ಮೊದಲಾದವರು 'ಪ್ರಜಾಪಕ್ಷ'ದ ಮುಖಂಡರಾಗಿದ್ದರು. ಅನಾದಿ ಕಾಲದಿಂದ ಉಚ್ಚವರ್ಣದವರ ಶೋಷಣೆಗೆ ಒಳಗಾಗಿದ್ದ, ಮಹಾರಾಜರ ಆಳ್ವಿಕೆಯಲ್ಲಿ ಅಧಿಕಾರಗಳಿಂದ ವಂಚಿತರಾಗಿದ್ದ, ಸಮಾಜದಲ್ಲಿ ಸರಿಸಮಾನವಾದ ಸ್ಥಾನಮಾನಗಳನ್ನು ಪಡೆದುಕೊಳ್ಳಲು ಹೋರಾಡುವವರ ಪಕ್ಷವಾಗಿತ್ತು ಅದು. ಪ್ರಾರಂಭದಲ್ಲಿ ಅದರ ಉದ್ದೇಶವೂ ಸೀಮಿತವಾಗಿದ್ದುದರಿಂದ ಅದರಿಂದ ಕೆಲವರು ಹೊರಬಂದು, 1930 ರಲ್ಲಿ "ಪ್ರಜಾ ಮಿತ್ರಮಂಡಲಿ"ಯನ್ನು ಸ್ಥಾಪಿಸಿದರು. ಅದು ಹಿಂದಿನದ

ಕ್ಕಿಂತ ಹೆಚ್ಚು ಪ್ರಗತಿಪರ ಧೋರಣೆಗಳನ್ನು ಹೊಂದಿತ್ತು. ಜವಾಬ್ದಾರಿ ಸರ್ಕಾರ ಸ್ಥಾಪನೆ ತನ್ನ ಗುರಿಯೆಂದು ಮೊದಲ ಬಾರಿಗೆ ಈ ಪಕ್ಷವೂ ಸಾರಿತು. ಸ್ವಲ್ಪ ಹೆಚ್ಚು ಕಡಮೆ ಒಂದೇ ಉದ್ದೇಶದ, ಒಂದೇ ವರ್ಗದ ಜನರಿರುವ ಈ ಎರಡೂ ಸಂಸ್ಥೆಗಳು ಪ್ರತ್ಯೇಕವಾಗಿರುವುದಕ್ಕಿಂತ ಒಂದೇ ಆದರೆ ಒಗ್ಗಟ್ಟು ಹೆಚ್ಚುವುದೆಂದು ಈ ಎರಡೂ ಸಂಸ್ಥೆಗಳು ಕೂಡಿ "ಸಂಯುಕ್ತ ಪ್ರಜಾಪಕ್ಷ"ವನ್ನು ಹುಟ್ಟು ಹಾಕಿದುವು. ಅಂದಿನ 'ಪ್ರಜಾಪ್ರತಿನಿಧಿ ಸಭೆ' ಮತ್ತು 'ನ್ಯಾಯ ವಿಧಾಯಕ ಸಭೆ'ಗಳಲ್ಲಿ ಈ ಪಕ್ಷದ ಸದಸ್ಯರೇ ಹೆಚ್ಚಾಗಿ ಚುನಾಯಿತರಾಗಿ ಭಾಗವಹಿಸುತ್ತಿದ್ದರು. ಶ್ರೀ ಕೆ. ಸಿ. ರೆಡ್ಡಿಯವರು ಅದರ ಅಧ್ಯಕ್ಷರಾಗಿದ್ದರು. ಆಗ 'ಸಂಯುಕ್ತ ಪ್ರಜಾ ಪಕ್ಷ'ವು ಕಾಂಗ್ರೆಸ್ಸಿಗಿಂತ ಪ್ರಭಾವಶಾಲಿಯಾಗಿತ್ತು. ಈ ಪಕ್ಷವೂ ಅಂದಿನ ಸರ್ಕಾರದ ಧೋರಣೆಯನ್ನು ಪ್ರತಿಭಟಿಸುತ್ತಿತ್ತು.

ಬಾಂಧವ್ಯದ ಬಿರುಕು

ಬ್ರಿಟಿಷರ ವಿರುದ್ಧ ಭಾರತದ ನಾನಾ ಕಡೆಗಳಲ್ಲಿ ನೂರಾರು ವರ್ಷಗಳಿಂದ ನಡೆದಿರುವ ದಂಗೆಗಳು ಅಪಾರ.* ಗಾಂಧೀಜಿಯವರ ಚಳುವಳಿಯಿಂದ ಭಾರತದಲ್ಲೆಲ್ಲ ನಾನಾ ರೀತಿಯ ಘಟನೆಗಳು ನಡೆಯಲು ಪ್ರಾರಂಭಿಸಿದುವು. ಮೈಸೂರು ರಾಜ್ಯದಲ್ಲೂ ಇಂತಹ ಅನೇಕ ಸಂಗತಿಗಳು ಸಂಭವಿಸಿದುವು. ಇವು ಒಂದಲ್ಲ ಒಂದು ರೀತಿಯಲ್ಲಿ ಸರ್ಕಾರ ಮತ್ತು ಜನರ ನಡುವಿನ ಬಾಂಧವ್ಯವನ್ನು ಬಿರುಕುಗೊಳಿಸಿದುವು. ಅಂಥ ಸಮಯಗಳಲ್ಲಿ ಸರ್ಕಾರ ದೌರ್ಜನ್ಯಕ್ಕೆ ಕೈಹಾಕಲು ಹಿಂಜರಿಯಲಿಲ್ಲ. ಇದರಿಂದ ಜನರು ಹೆಚ್ಚು ಹೆಚ್ಚು ರೊಚ್ಚಿಗೇಳಲು ಕಾರಣವಾಯಿತು. ಹಲವು ವೇಳೆಗಳಲ್ಲಿ ಸರ್ಕಾರವೇ ಸಣ್ಣ ವಿಷಯಗಳನ್ನು ದೊಡ್ಡದು ಮಾಡಿ ಅನಾಹುತ ತಂದುಕೊಂಡು ಜನರ ಟೀಕೆಗೆ ಒಳಗಾಗುತ್ತಿತ್ತು. ಗಲಾಟೆಗಳು, ಚಳುವಳಿಗಳು ದಿನದಿನಕ್ಕೆ ಹೆಚ್ಚಾದುವು.

ಆನೆ ಅಂಬಾರಿಯ ಮೇಲೆ ದಿವಾನರು

ಜನರ ಮನೋಧರ್ಮಕ್ಕೆ ವಿರುದ್ಧವಾದ ಕ್ರಮಗಳನ್ನು ಅನುಸರಿಸಿ ಪ್ರಭುತ್ವದವರು ಜನರ ದ್ವೇಷಕ್ಕೆ ಕಾರಣರಾದರು. ಅವುಗಳಲ್ಲಿ ಶ್ರೀ ಮಿರ್ಜಾರ ಪ್ರಸಂಗವೂ ಒಂದು. 1926 ರಲ್ಲಿ ಶ್ರೀಮನ್ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರು ಸರ್ ಮಿರ್ಜಾರನ್ನು ದಿವಾನರನ್ನಾಗಿ ನೇಮಿಸಿದರು. ಅದು ಅರಮನೆಯ ಅಧಿಕಾರಿಗಳಿಗೂ ಇಷ್ಟವಿರಲಿಲ್ಲ. ಆದರೂ ಮಹಾರಾಜರು ಅದಕ್ಕೆಲ್ಲ ಕಿವಿಗೊಡಲಿಲ್ಲ. ಹಿಂದಿನ ದಿವಾನರಿಗಿಲ್ಲದ ಅನೇಕ ಸೌಲಭ್ಯಗಳನ್ನೂ ಶ್ರೀ ಮಿರ್ಜಾರಿಗೆ ಕೊಟ್ಟರು. ಶ್ರೀ ನಾಲ್ವಡಿ ಕೃಷ್ಣರಾಜರು ಪಟ್ಟಕ್ಕೆ ಬಂದ ಬೆಳ್ಳಿ ಹಬ್ಬದ ನೆನಪಿಗಾಗಿ ನಡೆದ ಭವ್ಯ ಮೆರವಣಿಗೆಯಲ್ಲಿ ಪಟ್ಟದಾನೆಯ ಅಂಬಾರಿಯಲ್ಲಿ ದಿವಾನ್. ಮಿರ್ಜಾರಿಗೂ ಅವಕಾಶ ಮಾಡಿತು.

*ಕರ್ನಾಟಕದ ದಂಗೆಗಳ ವಿವರಗಳಿಗೆ **ನೋಡಿ: ತಿ. ತಾ. ಶರ್ಮ–ಕರ್ನಾಟಕದಲ್ಲಿ ಸ್ವಾತಂತ್ರ್ಯ ಸಂಗ್ರಾಮ, 1957**

ಹಿಂದಿನ ಸಂಪ್ರದಾಯಕ್ಕೆ ವಿರುದ್ಧವಾದುದರಿಂದ, ವಿಧರ್ಮೀಯನನ್ನು ಅಂಬಾರಿಯ ಮೇಲೆ ಕುಳ್ಳಿರಿಸಿದುದರಿಂದ ಜನರಿಗೆ ಬೇಸರ ಉಂಟಾಯಿತು. ಮುಂದೆ ದಸರಾ ಮೆರವಣಿಗೆಯಲ್ಲಿಯೂ ಇದೇ ಕ್ರಮವನ್ನು ಅನುಸರಿಸಲಾಯಿತು. ಪತ್ರಗಳ ಮೂಲಕ ಪತ್ರಿಕೆಗಳ ಮೂಲಕ ಜನರು ಇದನ್ನು ಪ್ರತಿಭಟಿಸಿದರು. ದಿವಾನ್ ಮಿರ್ಜಾರು ಕೋಮುವಾರು ಭಾವನೆಯಿಂದ ಕೂಡಿದವರೆಂಬ ಆರೋಪವಿತ್ತು. ಅದಕ್ಕೆ ಸಮರ್ಥನೆಯೋ ಎಂಬಂತೆ ಅನೇಕ ಉನ್ನತ ಅಧಿಕಾರಿಗಳು ಮುಸಲ್ಮಾನರೇ ಆಗಿದ್ದರು. ಇದೆಲ್ಲ ಬಹಳ ಮಂದಿಗೆ ಹಿಡಿಸಲಿಲ್ಲ.

ಮೈಸೂರು ಸಂಸ್ಥಾನದಲ್ಲಿ ರಾಜಕೀಯ ಬೆಳವಣಿಗೆಯ ದೃಷ್ಟಿಯಿಂದ, ಜನ ಜಾಗೃತಿಯ ದೃಷ್ಟಿಯಿಂದ 1938ಕ್ಕೆ ಮೊದಲು ನಡೆದ ಚಳುವಳಿಗಳು ಹಾಗೂ ಪ್ರಮುಖ ಘಟನೆಗಳನ್ನು ಸ್ಥೂಲವಾಗಿ ಪರಿಚಯ ಮಾಡಿಕೊಳ್ಳುವುದು ಒಳ್ಳೆಯದು.

ಖಿಲಾಫತ್ ಚಳುವಳಿ

ತುರ್ಕಿಸ್ತಾನದ ಸುಲ್ತಾನ ಅಥವಾ ಖಲೀಫ ಅಲ್ಲಿಯ ಮುಸಲ್ಮಾನರಿಗೆ ಧಾರ್ಮಿಕ ಗುರು. ಭಾರತದ ಮುಸಲ್ಮಾನರೂ ಕೂಡ ಅವನನ್ನೆ ತಮ್ಮ ಧಾರ್ಮಿಕ ಗುರುವೆಂದು ಪರಿಭಾವಿಸಿದರು. ಜಾಗತಿಕ ಯುದ್ಧವಾದ ಮೇಲೆ ತುರ್ಕಿ ದೇಶವನ್ನು ಅನ್ಯರು ಹಂಚಿಕೊಳ್ಳುವ ಸುದ್ದಿ ಹಬ್ಬಿತು. ಬ್ರಿಟಿಷರ ಈ ವರ್ತನೆ ಭಾರತೀಯ ಮುಸಲ್ಮಾನರ ರೊಚ್ಚಿಗೆ ಕಾರಣವಾಯಿತು. ಭಾರತದಲ್ಲಿದ್ದುಕೊಂಡು ತುರ್ಕಿ ದೇಶದ ಖಲೀಫನನ್ನು ಆರಾಧಿಸುತ್ತಿದ್ದ ಮುಸಲ್ಮಾನರಲ್ಲಿ ಏನೇನೋ ಭಾವನೆಗಳಿದ್ದುವು. ಹಿಂದೂಸ್ತಾನದಲ್ಲೇ ಮುಸಲ್ಮಾನರಿಗೆ ಪ್ರತ್ಯೇಕ ಭಾಗವೊಂದನ್ನು ಬ್ರಿಟಿಷರು ಮಾಡಿಕೊಡುತ್ತಾರೆ ಎಂದು ನಂಬಿದ್ದರೋ ಏನೋ ! ಆಗಲೇ ಪ್ರತ್ಯೇಕ ಪಾಕಿಸ್ತಾನದ ಭ್ರಮೆ ಅವರಿಗೆ ಬಂದಿತ್ತೋ ಏನೋ ! ಕಾರಣ ಏನೇ ಇರಲಿ, ಮುಸಲ್ಮಾನರ ಸಿಟ್ಟು ಬ್ರಿಟಿಷರ ಮೇಲೆ ತಿರುಗಿತು. ಈ ಪರಿಸ್ಥಿತಿಯನ್ನು ಬ್ರಿಟಿಷರ ವಿರುದ್ಧವಾಗಿ ಜನರನ್ನು ಒಟ್ಟುಗೂಡಿಸುವುದಕ್ಕೂ ಹಿಂದು ಮುಸಲ್ಮಾನರಲ್ಲಿ ಐಕ್ಯ ಸಾಧಿಸುವುದಕ್ಕೂ ಚಾಣಾಕ್ಷರಾದ ಗಾಂಧೀಜಿಯವರು ಉಪಾಯವಾಗಿ ಬಳಸಿಕೊಂಡರು. ಕಾಂಗ್ರೆಸ್ ಅನುಯಾಯಿಗಳು, ಹಿಂದುಗಳು, ಮುಸಲ್ಮಾನರಿಗೆ ಬೆಂಬಲವಾದರು. ಎಲ್ಲೆಲ್ಲೂ ಇಂಥ ಚಳುವಳಿಗಳು ನಡೆದುವು. ಇವುಗಳಿಗೆ ಖಿಲಾಫತ್ ಚಳುವಳಿಗಳೆಂದು ಹೆಸರಾಯಿತು.

1920 ರಲ್ಲಿ ಬೆಂಗಳೂರು ದಂಡಿನ ರೈಲ್ವೆ ನಿಲ್ದಾಣದ, ದೊಡ್ಡ ಮಾವಿನ ಮರದ ಹತ್ತಿರ ದೊಡ್ಡ ಪ್ರಮಾಣದ ಖಿಲಾಫತ್ ಚಳುವಳಿ ನಡೆಯಿತು. ರಜ್ಜಿಸೋದರರು, ಹಾಜಿ ಉಸ್ಮಾನ್ ಸೇಠ್, ಶ್ರೀ ರಾಮಲಾಲ್ ತಿವಾರಿಯವರು ಅದರ ಮುಖಂಡರಾಗಿದ್ದರು. ಮಹಾತ್ಮ ಗಾಂಧೀಜಿ, ಶ್ರೀ ಸೌಕತ್ ಅಲಿಯವರು ಸೇಲಂ

ನಿಂದ ಬೆಂಗಳೂರಿಗೆ ಬಂದು ಭಾಷಣ ಮಾಡಿದರು. ಹಿಂದು ಮುಸಲ್ಮಾನರು ಸಾರ್ವಜನಿಕವಾಗಿ ಒಟ್ಟಿಗೆ ಸೇರುವುದಕ್ಕೆ, ರಾಜಕೀಯವಾಗಿ ಚಳುವಳಿಗಳನ್ನು ಮಾಡುವುದಕ್ಕೆ, ಅನೇಕ ಜನರು ರಾಜಕೀಯಕ್ಕೆ ಪ್ರವೇಶಿಸುವುದಕ್ಕೆ ಖಿಲಾಫತ್ ಚಳುವಳಿ ಸಾಕಷ್ಟು ಕಾರಣವಾಯಿತು.

ಗಣಪತಿ ಗಲಾಟೆ

1929 ಜುಲೈ 30 ರಲ್ಲಿ ನಡೆದ 'ಗಣಪತಿ ಗಲಾಟೆ' ಹಲವು ಕಾರಣಗಳಿಗಾಗಿ ಗಮನಾರ್ಹವಾದುದು. ಇದಕ್ಕೆ 'ಸುಲ್ತಾನ್ ಪೇಟೆ ಗಣಪತಿ ಗಲಾಟೆ', 'ಸಿದ್ದಿಕಟ್ಟೆ ಗಣಪತಿ ಗಲಾಟೆ' 'ಅಬ್ಬಾಸ್ ಖಾನ್ ಪ್ರಕರಣ' ಎಂಬ ಹೆಸರುಗಳೂ ಇವೆ. 1928ರ ಸುಮಾರಿನಲ್ಲಿ ಸುಲ್ತಾನ್ ಪೇಟೆಯಲ್ಲಿದ್ದ ಖಾಸಗಿ ಶಾಲೆಯೊಂದು ಆರ್ಕಾಟ್ ಶ್ರೀನಿವಾಸಚಾರ್ ರಸ್ತೆಗೆ ಸ್ಥಳಾಂತರವಾಗಿ ಸರಕಾರಿ ಮಾಧ್ಯಮಿಕ ಶಾಲೆಯಾಯಿತು. ಶಾಲೆಯ ಆವರಣದಲ್ಲಿ, ಬಿಡುವಿನ ವೇಳೆಯಲ್ಲಿ ತೋಟ ಮಾಡಲು ವಿದ್ಯಾರ್ಥಿಗಳು ಅಗೆಯುತ್ತಿದ್ದಾಗ ಒಂದು ಪುಟ್ಟ ಗಣಪತಿ ಸಿಕ್ಕಿತು. ದೇವರ ವಿಗ್ರಹ ಬೀಸಾಡುವುದು ಹಿಂದುಗಳ ಪದ್ಧತಿಯಲ್ಲ. ಶಾಲೆಯ ಆವರಣದ ಮಧ್ಯದಲ್ಲಿ ಗಣಪತಿಯನ್ನು ನಿಲ್ಲಿಸಿದರು. ದೇವರು ಕಂಡ ಕಡೆ ಕೈ ಮುಗಿದು ಪೂಜೆ ಮಾಡುವುದು ಹಿಂದುಗಳ ಸಂಪ್ರದಾಯ. ನಿತ್ಯ ಪೂಜೆ ಪ್ರಾರಂಭವಾಯಿತು. ಹುಡುಗರ ಜೊತೆಗೆ ಸಾರ್ವಜನಿಕರು ಕೂಡಿಕೊಂಡರು. ಗಣಪತಿಗೂ ಚಿಕ್ಕದಾಗಿ ರಕ್ಷಣೆ ನಡೆದು ಗೂಡು ಸಿದ್ಧವಾಯಿತು.

ಗಣಪತಿ ಇರುವ ಶಾಲೆಗೆ ಎದುರುಗಡೆಯೇ ಮುಹಮುದ್ ಅಬ್ಬಾಸ್ ಖಾನರ ಮನೆ. ಅವರು ಆ ಕಾಲಕ್ಕೆ ಪ್ರಸಿದ್ಧ ವ್ಯಕ್ತಿ. ಪ್ರಜಾಪ್ರತಿನಿಧಿ ಸಭೆ ಮತ್ತು ನ್ಯಾಯ ವಿಧಾಯಕ ಸಭೆಯ ಸದಸ್ಯರಾಗಿದ್ದರು. ಅವರು ಮುಸಲ್ಮಾನರ ಮುಖಂಡರಾಗಿದ್ದರೂ ಬ್ರಾಹ್ಮಣೇತರರ ಮುಖಂಡರೂ ಆಗಿದ್ದರು. ಸರ್ಕಾರದ ಆಯುವ್ಯಯದ ಮೇಲೆ ಸಮರ್ಥವಾಗಿ ಚರ್ಚಿಸುವುದರಲ್ಲಿ ಅವರು ಹೆಸರಾಗಿದ್ದರು. ಅವರೇನೂ ಜಾತಿವಾದಿಯಾಗಿರಲಿಲ್ಲ. ಆದರೆ ಏಕೋ ಏನೋ ಸ್ವಜಾತಿಯುವರಿಂದ ಕಿವಿ ಹಿಂಡಿಸಿಕೊಂಡು ಗಣಪತಿ ಗಲಾಟೆಗೆ ಕಾರಣರಾದರು. ಹಿಂದೂಗಳ ಗಣಪತಿಯ ಅಲಂಕಾರ, ಪೂಜೆಗಳ ಆರ್ಭಟ, ವೈಭವ ಅವರಿಗೆ ಹಿಡಿಸಲಿಲ್ಲ. ಗಣಪತಿಯನ್ನು ಅಲ್ಲಿಂದ ಕದಲಿಸಲು ಪ್ರಯತ್ನಿಸಿದರು. ವಿದ್ಯಾ ಇಲಾಖೆಯ ಮುಖ್ಯಸ್ಥರಾಗಿದ್ದ ಎನ್. ಎಸ್. ಸುಬ್ಬರಾಯರೊಡನೆ ವ್ಯವಹಾರ ನಡೆಸಿದರು. ದಿವಾನ್ ಮಿರ್ಜಾರನ್ನೂ ಬಳಸಿಕೊಂಡರೆಂದು ಪ್ರತೀತಿ. ವಿದ್ಯಾಧಿಕಾರಿಗಳಿಗೆ ಇಕ್ಕಟ್ಟಿನ ಪರಿಸ್ಥಿತಿ. ಈ ಕಡೆ ಹಿಂದೂಗಳ ದೇವರು. ಆ ಕಡೆ ಪ್ರಸಿದ್ಧ ವ್ಯಕ್ತಿಯೂ ನಗರ ಸಭೆಯ ಅಧ್ಯಕ್ಷರೂ 'ಸೆಂಟ್ರಲ್ ಮುಹಮುಡನ್ ಅಸೋಸಿಯೇಷನ್'ನ ಮುಖಂಡರೂ ಆದ ಅಬ್ಬಾಸ್ ಖಾ. ಇದೆಲ್ಲದರ ಜೊತೆಗೆ ಉನ್ನತ ಅಧಿಕಾರಿಗಳ ಆಜ್ಞೆ. ವಿಧಿಯಿಲ್ಲದೆ ಗಣಪತಿಯು ಸ್ಥಾನಪಲ್ಲಟವಾಗಿ, ಕಣ್ಮರೆಯಾಗಿ, ಪೂಜೆ ನಿಂತಿತು. ಮುಸಲ್ಮಾನರು ಜನರಿಗೆ ರೇಗುವಂತೆ ತಮ್ಮ ಸಂತೋಷವನ್ನು ವ್ಯಕ್ತಪಡಿಸಿದರು.

ಹಿಂದೂ ಯುವಕರಿಗೆ ಪಿತ್ತ ನೆತ್ತಿಗೇರಿತು. ಗಣಪತಿಯನ್ನು ಹುಡುಕಿ ತಂದು ಅಲ್ಲೇ ಪ್ರತಿಷ್ಠಾಪಿಸಿ ಇನ್ನೂ ಅದ್ಧೂರಿಯಾಗಿ ಪೂಜಿಸಲು ಪ್ರಾರಂಭಿಸಿದರು. ಮುಸಲ್ಮಾನ್ ಯುವಕರು ಅಡ್ಡಿಪಡಿಸಲು ತೊಡಗಿದರು. ಗಣಪತಿ ದೇವರ ಗಲಾಟೆ ಹಿಂದೂ ಮುಸಲ್ಮಾನರ ಗಲಾಟೆಯಾಗಿ ಪರಿಣಮಿಸಿತು. ಇದೆಲ್ಲ ಬ್ರಾಹ್ಮಣರ ಪಿತೂರಿ ಎಂದು ಆರೋಪ ಬಂತು. ಕೈ ಕೈ ಮಿಲಾಯಿಸುವ ಘಟ್ಟಕ್ಕೆ ಪರಿಸ್ಥಿತಿ ಹದಗೆಟ್ಟಿತು. ಒಬ್ಬರಿಗೊಬ್ಬರಿಗೆ ಹೊಡೆದಾಟ ಪ್ರಾರಂಭವಾಯಿತು. ಇಡೀ ರಸ್ತೆ ಜನ ಭರಿತವಾಯಿತು. ಈ ಸಮಯವನ್ನು ಎರಡೂ ಕಡೆಯ ಪುಂಡರು ಪೋಕರಿಗಳು ದುರುಪಯೋಗಪಡಿಸಿಕೊಂಡರು. ಯಾರೋ ಪೋಲಿಗಳು ಮುಸಲ್ಮಾನರ ಮನೆಗಳಿಗೆ ನುಗ್ಗಿ ಅವರ ಮನೆಯ ಹೆಂಗಸರು ಮಕ್ಕಳಿಗೆ ಹೊಡೆದರಂತೆ. ಪ್ರತಿಯಾಗಿ ಮುಸಲ್ಮಾನರು ಹಿಂದೂಗಳ ಮನೆಗೆ ದಾಳಿ ಮಾಡಿದರು. ಪೋಲೀಸರು, ಕುದುರೆ ಸವಾರರು, ಬಂದೂಕಧಾರಿಗಳು ಹಾಜರಾದರು. ಅವರನ್ನು ಬರಮಾಡಿಕೊಳ್ಳಲು ಅಬ್ಬಾಸ್‌ಖಾನರೇ ಕಾರಣರು, ಅಂತ ಸುದ್ದಿ ಹಬ್ಬಿತು. ಹಿಂದೂಗಳು ರಾಗಿ ಮೂಟೆಗಳನ್ನು ತಂದು ಬೀದಿಯಲ್ಲಿ ಸುರಿದು ಓಡಿಬರುತ್ತಿದ್ದ ಕುದುರೆ ಸವಾರರು ಜಾರಿಬೀಳುವಂತೆ ಮಾಡಿದರು. ಪಕ್ಕದ ಸೈಕಲ್ ಷಾಪಿನಿಂದ ಪೋಲೀಸರು ಗುಂಡು ಹಾರಿಸಿದರು. ಚಂದ್ರರಾಜು ಎಂಬ ವಿದ್ಯಾರ್ಥಿಗೂ ಅನೇಕರಿಗೂ ತೀವ್ರ ಗಾಯಗಳಾದವು. ಸಿಟ್ಟಿಗೆದ್ದ ಜನರು ಪೋಲೀಸರ ಮೇಲೆ ತಿರುಗಿಬಿದ್ದರು. ದಯಾಳುವೆಂದು ಹೆಸರಾಗಿದ್ದ ಸಿಟಿ ಮಾಜಿಸ್ಟ್ರೇಟ್ ನಾರಾಯಣಸ್ವಾಮಿನಾಯ್ಡು ಅವರ ಪೇಟವನ್ನು ಹಾರಿಸಿ ಅವರ ಕೈಯಲ್ಲಿದ್ದ ಬೆತ್ತವನ್ನೇ ಕಿತ್ತುಕೊಂಡು ರಕ್ತ ಬರುವಂತೆ ತಲೆಯ ಮೇಲೆ ಥಳಿಸಿದರು. ಇದನ್ನು ಕಂಡು, ಶ್ರೀ ಹೆಚ್. ಕೆ. ವೀರಣ್ಣಗೌಡರು ಜನರನ್ನು ಪ್ರಾರ್ಥಿಸಿ ನಾಯ್ಡು ಅವರನ್ನು ಸಾವಿನಿಂದ ತಪ್ಪಿಸಿದರು. ಗಲಭೆ ಜಾಸ್ತಿಯಾದುದನ್ನು ಕಂಡು, ಪೋಲೀಸರ ಮೇಲೆ ಜನರು ಪ್ರತೀಕಾರ ತೀರಿಸಿಕೊಳ್ಳಲು ಪ್ರಾರಂಭಿಸಿದುದರಿಂದ ಗಾಬರಿಗೊಂಡು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್ ತಾಜ್‌ಪಿರಾನ್ ಮತ್ತು ಪೋಲೀಸ್ ಇನ್‌ಸ್ಪೆಕ್ಟರ್ ಜನರಲ್ ಹಿರಿಯಣ್ಣಯ್ಯನವರು ಯಾರಿಗೂ ಕಾಣದಂತೆ ಕಾಲಿಗೆ ಬುದ್ಧಿ ಹೇಳಿದರು. ಅಂದಿನ ಮುಖಂಡರ ಸತತ ಪ್ರಯತ್ನದಿಂದ ಗಲಭೆ ಶಾಂತವಾಯಿತು. ಆಗಾಗ್ಗೆ ತಲೆಯೆತ್ತುತ್ತಿದ್ದ ಈ ಗಲಾಟೆಯ ಪ್ರಾರಂಭದಲ್ಲಿ ಜಮಖಂಡಿ ಶ್ರೀ ಭೀಮರಾವ್, ಶ್ರೀ ರಾಮಲಾಲ್ ತಿವಾರಿ, ಶ್ರೀ ಹೆಚ್. ವಿ. ಸುಬ್ರಮಣ್ಯಂ ಪಾಲ್ಗೊಂಡಿದ್ದರು. ಅವರನ್ನು ಸರಕಾರ ಬಂಧಿಸಿತು. ಅವರನ್ನು ಬಿಡುಗಡೆ ಮಾಡಿಸಲು ಮತ್ತು ಸಂಧಾನ ನಡೆಸಲು ಬೇಲೂರು ಶ್ರೀನಿವಾಸ ಅಯ್ಯಂಗಾರ್, ಶ್ರೀ ಪಾಮಡಿ ಸುಬ್ಬರಾಮಶೆಟ್ಟರು ಪ್ರಯತ್ನಿಸಿದರು. ಕೊನೆ ಕೊನೆಗೆ ಗಲಭೆ ಮಿತಿಮೀರಿದಾಗ ಅನೇಕ ನಾಯಕರು ಜೊತೆಗೂಡಿದರು. ಆ ಸಂದರ್ಭದಲ್ಲಿ ಶ್ರೀ ಹೆಚ್. ಕೆ. ವೀರಣ್ಣಗೌಡ, ಶ್ರೀ ಪಿ. ಆರ್. ರಾಮಯ್ಯ, ಶ್ರೀ ತಿ. ತಾ. ಶರ್ಮ, ಶ್ರೀ ತಗಡೂರು ರಾಮಚಂದ್ರರಾವ್, ಶ್ರೀ ವೀರಕೇಸರಿ ಸೀತಾರಾಮ ಶಾಸ್ತ್ರಿ, ಆನೆಕಲ್ಲಿನ ಶ್ರೀ ಸರ್ಪಭಟ್ಟರು ಮೊದಲಾದ ತೊಂಬತ್ತೆರಡು

ಮಂದಿಯ ಮೇಲೆ ಪೋಲೀಸರು ಕೇಸು ಹಾಕಿದರು. ನಾಯಕರು ಗಲಭೆಯನ್ನು ಹತೋಟಿಗೆ ತರದಿದ್ದರೆ ಎಷ್ಟೋ ಸಾವುಗಳು ಸಂಭವಿಸುತ್ತಿದ್ದವು. ಅಂಥ ನಾಯಕರ ಮೇಲೆ ಸರ್ಕಾರ ವಿನಾಕಾರಣ ಕೋಪಗೊಂಡು ಕೇಸು ಹಾಕಿತು.

ಗಣಪತಿ ಗಲಾಟೆಯ ವಿಚಾರಣೆ ನಡೆಯಬೇಕೆಂದು ಸಂಪಿಗೆ ವೆಂಕಟಪತಯ್ಯನವರು ಪ್ರಬಲವಾಗಿ ಚಳುವಳಿ ಮಾಡಿದರು. ಸಂಪಿಗೆ ವೆಂಕಟಪತಯ್ಯನವರು ಪೋಲೀಸ್ ಪ್ರಾಸಿಕ್ಯೂಟಿಂಗ್ ಇನ್ಸ್‌ಪೆಕ್ಟರೂ ಬ್ರಿಟಿಷರ ಅಧೀನದಲ್ಲಿದ್ದ ಕೋಲಾರ ಚಿನ್ನದ ಗಣಿಯ ವಕೀಲರೂ ಆಗಿದ್ದರು. ಜಾನ್‌ಟೇಲರ್ ಕಂಪನಿಯ ಮುಖ್ಯಸ್ಥ ರಾಲಲ್ಫ್‌ರವರ ಮೇಲೆ ಸರಕಾರ ಒತ್ತಾಯ ಹೇರಿ ವೆಂಕಟಪತಯ್ಯನವರನ್ನು ಅಧಿಕಾರ ಬಿಡುವಂತೆ ಮಾಡಿತು. ಅಂದಿನಿಂದ ವೆಂಕಟಪತಯ್ಯನವರು ರಾಜಕೀಯ ಕ್ಷೇತ್ರದ ಪ್ರಮುಖ ವ್ಯಕ್ತಿಯಾದರು. ಸರ್. ಎಂ. ವಿಶ್ವೇಶ್ವರಯ್ಯನವರ ನೇತೃತ್ವದಲ್ಲಿ ವಿಚಾರಣ ಸಮಿತಿ ನೇಮಕವಾಯಿತು.

ಸರ್ ಎಂ. ವಿಶ್ವೇಶ್ವರಯ್ಯ ಸಮಿತಿಯ ವರದಿ ಸಿದ್ಧವಾಗಿ ಸರಕಾರದ ಕೈ ಸೇರಿತು. ಅದು ದೂರಾಲೋಚನೆಯ, ಪ್ರಗತಿಪರವಾದ ವರದಿ. ಆಡಳಿತದಲ್ಲಿ ಜನತಾ ಪ್ರತಿನಿಧಿಗಳಿಗೆ ಅಧಿಕಾರವಿರಬೇಕು. ಆದಷ್ಟು ಬೇಗ ಜನರ ರಾಜಕೀಯ ದಾಹವನ್ನು ತೃಪ್ತಿಪಡಿಸಬೇಕು. ಇಲ್ಲದಿದ್ದರೆ ಜನರ ಚಳುವಳಿಗಳನ್ನು ತಡೆಗಟ್ಟಲು ಸಾಧ್ಯವಿಲ್ಲ. ಸರಕಾರ ತನ್ನ ಅಸ್ತಿತ್ವವನ್ನು ಕಳೆದುಕೊಳ್ಳುವ ಅವಕಾಶ ಉಂಟು ಎಂದು ವರದಿ ಸಾರಿತು. ಆದರೆ ಸರಕಾರ ಆ ವರದಿಯನ್ನು ವಿಶೇಷವಾಗಿ ಗಮನಕ್ಕೆ ತೆಗೆದುಕೊಳ್ಳಲಿಲ್ಲ. ಅದನ್ನು ಗೋಪ್ಯವಾಗಿಡಲು ಪ್ರಯತ್ನಿಸಿತು. ಸರಕಾರ ರಹಸ್ಯವಾಗಿಟ್ಟುಕೊಂಡಿದ್ದ ಆ ವರದಿಯನ್ನು ಸರಕಾರದ ಅಧಿಕಾರಿಯ ಸಹಾಯದಿಂದಲೇ ಶ್ರೀ ಹೆಚ್. ಕೆ. ವೀರಣ್ಣಗೌಡ ಮತ್ತು ಶ್ರೀ ಬಿ. ಎನ್. ಗುಪ್ತರು ಕಳವುಮಾಡಿ ಪ್ರಚಾರಗೊಳಿಸಿದರು.

ಬೆಂಗಳೂರಿನಲ್ಲಿ ನಡೆದ 'ಗಣಪತಿ ಗಲಾಟೆ' ಜನರ ಮನಸ್ಸಿನಲ್ಲಿ ಅಚ್ಚಳಿಯದೆ ಉಳಿಯಿತು. ರಾಜಕೀಯ ಪಕ್ಷಗಳು ಆ ಪ್ರಸಂಗವನ್ನು ರಾಜಕೀಯಕ್ಕೆ ಬಳಸಿಕೊಂಡರು. ಅದು ಚಳುವಳಿಗಳ ಪ್ರಚಂಡ ಶಕ್ತಿಯನ್ನು ಮುಖಂಡರಿಗೆ ತೋರಿಸಿಕೊಟ್ಟಿತು. ಲಾವಣಿಕಾರರು ಗಣಪತಿ ಗಲಾಟೆಯನ್ನು ಕುರಿತು ಲಾವಣಿಕಟ್ಟಿ ಅದನ್ನು ಜನಸಮೂಹಗಳ ನಡುವೆ ಸುಶ್ರಾವ್ಯವಾಗಿ ಹಾಡಿ ಹಚ್ಚಹಸುರಾಗಿ ಉಳಿಯುವಂತೆ ಮಾಡಿದರು. ಅಂತಹ ಒಂದು ಲಾವಣಿ ಹೀಗಿದೆ :

ಬೆಂಗಳೂರು ಗಣಪತಿ ಸತ್ಯಾಗ್ರಹದ ಲಾವಣಿ*

ಶ್ರೀಕರವೆನಿಸಿದ ಈ ಕರ್ನಾಟಕ ಲೋಕದಿ ಬೆಂಗ್ಳೂರ್ಮೆರೆಯುತಲಿ
ಅಕಾರ್‌ಸಕಾರ ಮಕಾರರೇಕದಿ ಕುಕುಟ ಪರಾಕ್ರಮ ತೋರುತಲಿ ‖ ಪಲ್ಲವಿ ‖
ವಿದ್ಯಾಶಾಲೆಯು ಇದ್ದಿತು ಬೆಂಗ್ಳೂರ್ ಸಿದ್ದಿಕಟ್ಟೆ ಸಮೀಪದಲಿ
ಸಿದ್ಧಿ ಗಣಪತಿಯು ಮೊದಲಿಂದಿದ್ದಿತು ಪ್ರಸಿದ್ಧ ಮಿಡ್ಲಿಸ್ಕೂಲಿನಲಿ ‖

*ರಚನೆ : ಶ್ರೀ ಬಿ. ನೀಲಕಂಠಯ್ಯ

ಇದ್ದ ಗಣೇಶನ ಪೂಜಿಸುತಿದ್ದರು ವಿದ್ಯಾರ್ಥಿಗಳತಿ ಶ್ರದ್ಧೆಯಲಿ
ಮುದ್ದು ಗಣಪತಿಗೆ ಮಂಟಪ ಕಟ್ಟಿಸಿ ಇದ್ದರು ಬಾಲರು ಭಕ್ತಿಯಲಿ ॥

ಎದ್ದು ಬರಲು ಖಾನ್ ಬಹದ್ದೂರರು ಮುದ್ದು ಗಣಪ ಮುಂಭಾಗದಲಿ
ರೌದ್ರವೇರಿತತಿ ಕ್ಷುದ್ರಮನುಜರಿಗೆ ಸಿದ್ಧಿಗಣಪತಿಯು ವಿಷಯದಲಿ ॥

ಖುದ್ದು ನಡೆಸಿದರು ಮಸಲತ್ ವಿದ್ಯವ ವಿದ್ಯಾಶಾಲೆಯ ಮುಖ್ಯರಲಿ
ಭದ್ರಪಡಿಸಿದರು ಸಿದ್ಧಿ ಗಣಪತಿಯು ವಿದ್ಯಾಶಾಲೆಯ ಕೊಠಡಿಯಲಿ ॥

ದಿನದಿನಕೇರಿತು ಖಾನರ ಕಪಟ ಗಣಪತಿಗೆ ಸಲು ಮಸಲತ್ತು
ಜನಗಳ ಕೈವಶ ಮಾಡಿಕೊಂಡರು ಹೀನಕೃತ್ಯಕೆ ಜನ ತುರ್ತ ॥

ದಿನಮಣಿ ಬಾಲರು ಖಾನರ ಕಪಟವ ಅಣಗಿಸಲೊರಟರು ಘೋಷಿಸುತ
ಒಣಗಿತು ಮುಖಕಳೆ ಖಾನರಿಗೀಕ್ಷಣ ದೀನಬಾಲಕರ ದೂಷಿಸುತ ॥

ಹಟವನೇ ಹಿಡಿದರು ಸ್ಕೂಲಿನ ಬಾಲಕರೆಲ್ಲ
ಘಟ ಬಿದ್ದರು ಸಮ್ಮತಿ ಗಣಪತಿ ಬಿಡುವವರಲ್ಲ
ಪಟ ಒಂದನು ಮೆರೆಸುತ ಗಣಪತಿ ವಿಷಯವನ್ನೆಲ್ಲ
ದಿಟವನೇ ಸಾರಿದರು ಬೆಂಗ್ಳೂರ್ ಪ್ರಜೆಗಳಿಗೆಲ್ಲ ॥

ಹುಡುಗರುss ಧ್ಯಾನಿಸಿ ಗಣಪತಿಯು
ನಡೆದರುss ಕೂಗುತ ಪರಿಪರಿಯು
ಹಿಡಿದರುss ಮುಷ್ಕರ ದಿನಚರಿಯುss
ಕೊಡಿಸಿರಿ ಗಣಪನ ನಡೆಸೇವ್ ಪೂಜೆಯು ನೋಡ್ವಿರಿ ವೈಖರಿಯುss ॥

ಹಿಂದು ಬಾಲರು ಬಂದು ಬೇಡಿದರ್ಡಂದು ಕೊಡಿ ನಮ್ ಗಣಪನ
ಎಂದು ಕೇಳಲು ಕೇಳದಂದರು ಹೊಂದಿಕೊಂಡರು ದುರ್ಜನ ॥

ಶೋಕದಿ ಹೊರಟರು ಏಕದಿ ಬಾಲರು ಕೇಕೆಯನಾಕುತ ಬೀದಿಯಲಿ
ಅಕಾರ್ಸಕಾರ್ ಮಕಾರರೇಕದಿ ಕುಕುಟ ಪರಾಕ್ರಮ ತೋರುತಲಿ ॥

ಮಸಲತ್ಮಾಡುತ ಅಬ್ಬಾಸ್ಖಾನರು ಮುಸಲ್ಮಾನರೊಳು ಯೋಚಿಸುತ
ವಸೂಲ್ಮಾಡಿದರು ಚಂದಾ ಹಣವನು ಫೆಸಲ್ಖೋರರನು ಕೂಡಿಸುತ ॥

ವಿಶೇಷ ನೆರೆದರು ಅಸಲ್ಫಾಟ ಜನ ಹೊಸ ಮಜ್ಜನಕೆ ನಿಜ ನಸುನಗುತ
ಮೀಸೆಯ ತಿರುವುತ ಸೇರಿದರತಿಜನ ನಾವ್ ಪರಿಕಿರುವೆವು ನಿಮಗೆನುತ ॥

ಹುಸುರಿ ಬುರುಡೆಯನು ಸ್ಕೂಲಿನ ಗಲಭೆಗೆ ಸುಬ್ರಹ್ಮಣ್ಯರೆ ಮುಂದೆನುತ
ಅಸಮ ತಿವಾರಿಯ ಕೈಸೆರೆ ಹಿಡಿಸಿರಿ ಭೀಮರಾಯರನು ಜೊತೆಲೆನುತ ॥

ಈ ಸಮಯದೆ ಆ ಸ್ಕೂಲಿನ ಬಾಲರು ಗಣಪತಿ ಸೆರೆಯನು ಬಿಡಿರೆನುತ
ಹಸುತೃಷೆ ಅಣಗಿಸಿ ಹಟವನೆ ಹಿಡಿದರು ವಿಷಯ ಕೇಳಿ ಬಹು ಮನಕೊರೆತ ॥

ಹುಡುಕುತ ಬಂದರು ವಡಕುಗಾರರು ಸುಬ್ರಹ್ಮಣ್ಯರ ಬಿರಬಿರಿಯ
ಬಿಡದೆ ಹಿಡಿದರುಽ ಭೀಮರಾಯರನು ಒಡನೆ ರಾಮಲಾಲ್ ತಿವಾರಿಯ ॥

ಹಿಡಿದು ಮೂವ್ವರನು ನುಡಿದರೀಪರಿ ನೋಡಿ ಬನ್ನಿ ನೀವ್ ಸೆರೆಮನೆಯ
ಹುಡುಗರ್ಮ್ಮಖಂಡರ ಹಿಡಿದರೆನ್ನುತಲಿ ಪಡೆದರಿಮಾನೀ ಜನ ಖುಷಿಯ ॥

ಏಕದಿಽ ಹೊರಟರು ಹುಡುಗರನೇಕರು ಕೂಡಿ
ವ್ಯಾಕುಲದಿ ಸೆರೆಮನೆಯ ಅಧಿಕಾರಿಗಳನು ನೋಡಿ
ಯಾಕಿವರನು ಹಿಡಿದಿರಿ ಬಿಡಿಬಿಡಿರೆಂಬುತ ಬೇಡಿ
ಸಾಕಾಗಲು ಸೆರೆಮನೆ ಕನ್ನಡಿ ಹುಡಿ ಹುಡಿ ಮಾಡಿ ॥

ಹುಡುಗರು ದಿವಾನ್ ಬಂಗ್ಲೆ ಕಡೆಗೆ
ನಡೆದರುಽ ಬೇಡಲು ಸಚಿವರಗೆ
ಬಿಡದಲೆ ತಡೆದರು ಗೇಟೊಳಗೆ ॥
ಪುಡಿ ಪುಡಿ ಮಾಡ್ದರು ಚಮನ್ ಕುಂಡಗಳು ದಿವಾನ್ ಬಂಗ್ಲೆಯೊಳಗೆ ॥

ಪೇಳಲಸವಳ ಜೈಲ ಬಳಿಯೊಳು ಬಾಲಕರ ಕೋಲಾಹಲ
ಕೇಳಿ ಬಂದಿತು ಮಿಲ್ಟ್ರಿ ಪೌಜು ಸಾಲು ಕುದುರೆ ಸವಾರ್ದಳ ॥

ಝೋಕಿಲಿ ಬಂದರು ಮಿರ್ಜಾ ವಜೀರರು ವ್ಯಾಕುಲ ತೋರಲು ಬಾಲರಲಿ
ಅಕಾರ್‌ಸಕಾರ ಮಕಾರರೇಕದಿ ಕುಕುಟ ಪರಾಕ್ರಮ ತೋರುತಲಿ ॥

ಬಂದ ದಿವಾನರ ವಂದಿಸಿ ಬಹುತೆರ ಬಂಧ ಬಿಡಿಸಿ ಅತ್ರಿ ಜನರನ
ಎಂದು ಬೇಡಿದರು ಹಿಂದು ಬಾಲಕರು ಮುಂದೆ ಸಾರಿ ಆ ಸಚಿವರನ ॥

ಒಂದು ಕೇಳದಲೆ ಕಂದರ ಕುಂದನು ಮುಂದು ಮಾಡೆ ಮೋಟಾರ್ ಗಮನ
ಒಂದೆರಡೇಟಿಗೆ ಚಿಂದಿಯ ಮಾಡ್ದರು ಮಂದ ಪ್ರಾಜ್ಞನಾ ಸುಲೋಚನ ॥

ಬಂದಿತು ರೋಷವು ತೊಂದರೆ ಮಾಡ್ದರು ಎಂದು ಕರೆದು ಸರದಾರರನ
ಕುಂದು ಮಾಡಿರೆಂದಪ್ಪಣೆ ಕೊಟ್ಟರು ಹಿಂದೂ ಬಾಲರ ಮಂಡಲಿನ ॥

ಅಂದವ್ದೇ ತಡ ದುಂದು ಸವಾರರು ಬಂದು ತೋರೆ ತಮ ವೀರತನ
ಒಂದೇ ಭರದೊಳು ಕುದುರೆಯನ್ಹಾರಿಸಿ ಕೊಂದರು ಭರ್ಜಿಲಿ ಬಾಲರನ ॥

ಬಂದಿತು ಸುದ್ದಿ ಹಿಂದೂ ಜನರಿಗೆ ಬಂದರು ಜೈಲಿನ ಬಳಿ ಬಿರನ
ಕುಂದು ಮಾಡಿದರೆ ಕಂದರೆ ನಿಮ್ಮಾಸು ಎಂದು ಸುರಿಸಿ ಕಣ್ಣೀರು ಜನ ॥

ಬಿಡಿಬಿಡಿರೆನ್ನುತ ಹಿಡಿದ ಮುವ್ವರನು ನಡೆದರು ಜೈಲಿನ ಕಡೆದುಂದ
ಬಿಡುವ ತನಕ ನಾವ್ ನಡೆಸುವದಿಲ್ಲವು ಗಣಪತಿ ಪೂಜೆಯು ಕ್ರಮದಿಂದ
ಗಡಿಬಿಡಿ ತಡೆಯುದೆ ತ್ರಿಮೂರ್ತಿಗಳನೂ ಬಿಡುಗಡೆ ಮಾಡ್ದರು ಸೆರೆಯಿಂದ
ಸಡಗರದಿಂದಲಿ ಮೆರೆಸುತಲವರನು ನಡೆದರು ಸ್ಕೂಲಿಗೆ ಭರದಿಂದ ॥

ಸಂಧಿಯನು ನಡೆಸೆ ಖಾನ್ ತಂದುಕೊಂಡು ಪುಂಡರನ
ಬಂಧನದಿ ಬಿಡುಗಡ್ಯೆ ಹೊಂದಿ ಬಂದ ಮೂವ್ವರನ
ಹಿಂದುಗಳ ಹೊಡೆಯಿರಿ ಚಿಂದಿ ಮಾಡಿ ಗಣಪತಿನ
ಮುಂದೊದಗುವ ದುಂದನು ನೋಡಿಕೊಳ್ವೆ ನಾನದನ ॥

ಕೂಡಿದರು ಪಕ್ಕ ಗುಮಾನಿಯರು
ಕೇಡಿಗಳು ಕೇಪು ಮಾರಿ ಜನರು ।
ಹೇಡಿಗಳು ಹೆಂಡ ಹೊಡೆದು ಜೋರು ॥
ಕೂಡಿಕೊಂಡಿದ್ದರು ಲಡಾಯ್ ಮಾಡಲು ಖಾನ್ ಮಹಡಿಲಿವರು ॥

ಸೆರೆಯು ಬಿಡುಗಡೆ ಹೊಂದಿ ಬಂದರು ಸತ್ಯಾಗ್ರಹ ಪ್ರಾಮುಖ್ಯರು
ಪರಮ ಹರುಷದಿ ಮೆರೆಸುತವರನು ನಡೆದರ್ ಪ್ರಜೆ ಶ್ರೀಮಂತರು ॥

ಕೇಕೆಯನಾಕುತ ಠೀಕಿಲಿ ತಂದರು ಎತ್ತಿ ಮುಖಂಡರ ಮೆರೆಸುತಲಿ
ಚಕಂಚಕೀಬಲೆ ಚಮತ್ಕಾರವಿದೆ ಬೆಂಗಳೂರಿನಾ ಜಂಗಿನಲಿ ॥

ಸೇರಿದರ್ ಸೆರೆಮನೆ ಬಿಡುಗಡೆ ಹೊಂದಿದ ಸತ್ಯಾಗ್ರಹಿಗಳು ಸ್ಕೂಲಿನಲಿ
ಹರುಷದಿ ಲಕ್ಚರ್ ಕೊಟ್ಟರನೇಕರು ಗಣಪತಿ ಪೂಜೆ ವಿಶೇಷದಲಿ ॥

ಇರುತಿರಲೀಪರಿ ಕಲ್ಲು ಜೋಡುಗಳು ಸುರಿಮಳೆ ಸುರಿದಿತು ಭರ್ಸಭೆಲಿ
ಸೇರಿಕೊಂಡಿದ್ದರು ಹರಾಮಖೋರರು ಖಾನ ಬಹದ್ದೂರರ ಮನೆಲಿ ॥

ಅರಿಯದ ಬಾಲರ ಪರಿ ಪರಿ ಹೊಡೆದರು ತುರುಕ ಫಕೀರರು ಕೋಲಿನಲಿ
ಹರ ಹರಯೆನ್ನುತ ಕಿರುಚುತ ಬಿದ್ದರು ತುರುಕರ ಪೆಟ್ಟಿಗೆ ಅರಚುತಲಿ ॥

ತೂರುತ ಬಂದರು ತುರುಕರ ತುಂಟರು ತೋರುತ ಆಯುಧ ಕೈಗಳಲಿ
ತಿರುವಿದರ್ ಕಟ್ಟಿಗೆ ವರಸೆ ಅನೇಕರು ಭೀರಿ ಕಲೀಜನ ಚೂರಿಯಲಿ ॥

ಲಟಲಟಲಟ್ಟಾ ತಿರುವುವನೊಬ್ಬನು ಏಟನು ತಿಂದನು ಹುಡುಗೊಬ್ಬ
ಬೇಟೆಯನಾಡುವ ತುರುಕನು ಒಬ್ಬನು ಓಟವನೋಡೆ ಯುವ ಹುಡುಗೊಬ್ಬ
ದಿಟದಿಟ ದೊಣ್ಣೆಲಿ ಬಡಿಯುವನೊಬ್ಬನು ವಟವಟ ಬೈಯ್ಯುವ ಹುಡುಗೊಬ್ಬ
ಈಟಿಯ ತೋರುತ ತಿವಿಯುವನೊಬ್ಬನು ಘಟವನೆ ಬಿಟ್ಟನು ಹುಡುಗೊಬ್ಬ ॥

ಇಷ್ಟೊತ್ತಿಗೆ ಬಂದಿತು ಕುದುರೆ ಪೌಜು ಗಡಬಡನೆ
ಇಷ್ಟಾಗಲು ಮೊದಲೇ ಪೋಲೀಸ್ ಜನರು ದೌಡನ್ನೆ
ಬಿಟ್ಟಿದ್ದರು ಹಿಡಿಯದೆ ತುರುಕ ತುಂಡ ಜನರನ್ನೆ
ಎಷ್ಟ್ಹೇಳಲು ತೀರದು ದುಷ್ಟ ಜನರ ನಡೆಯನ್ನೇ ॥

ಇಷ್ಟರೊಳು ಡಂ ಡಂ ಶಬ್ದಗಳು
ತಟ್ಟನೆs ಹಾರಿತು ಗುಂಡುಗಳು
ಪಟ್ಟರುs ಹುಡುಗರು ಭೀತಿ ಬಲು
ಕಟ್ಟೆಯ ಮೇಲ್ ಕುಳಿತಿದ್ದ ಚಂದ್ರನಿಗೆ ತಾಗಿತು ಗುಂಡುಗಳು ॥

ಮೊದಲೆ ಮಸಲತ್ ನಡೆದು ಇದ್ದಿತು ಪುಂಡ ಜನರೊಳು ತರ್‌ತರ
ಇದರ ಮೇಲ್ಯಾವ್ ಪೇಳ್ವದೇನಿದೆ ಕೇಳ್ವರ್‍ಯಾರೀ ಅಲ್ಪರs ॥

ಆ ಕಡೆ ಈ ಕಡೆ ತೂರಿ ಪರಾರಿ ಪೋಕರಿ ಪುಂಡರು ಸಂದಿನಲಿ
ಸಕಲರು ಕೇಳಿರಿ ಟಿಕಬಿಕಿ ವೀರರು ಜಂಗು ನಡಿಸೆ ಬೆಂಗ್ಳೂರಿನಲಿ ॥

ಏನ ಹೇಳುವುದು ಖಾನರ ಸಾಹಸs ಮೋಟಾರ್ ಬಂಡಿಲಿ ಬಲೆ ಮೋಸ
ಖೂನಿ ಖೋರರನು ಸಾಗಿಸಿಬಿಟ್ಟರು ಘೋಷ ಘೋಷಯೆಂದಾ ದಿವಸ ॥

ಮುನಿದು ಬಿದ್ದಿತು ಮಂಟಪದ್ವೊರಗಡೆ ಗಣಪತಿ ಪ್ರತಿಮೆಯು ಅತಿಕ್ಲೇಶ
ಹೀನ ಫಕೀರರ ಕೇಳುವರಿಲ್ಲವು ಖಾನರಿಗಾಯಿತು ಮನ ಹರುಷ ॥

ಧೀನ್ ಧೀನ್‌ಯೆನ್ನುತ ಮಜ್ಮ ಒಂದ್ವೊರಟಿತು ಧೀನ್ಧಾರಾವಳಿ ಜಯಘೋಷ
ದೀನೋದ್ಧಾರರು ನೋಡಿದರಿದನುs ಖಾನಾಪೀನರ ಒಣರೋಷ ॥

ದೀನ ಬಾಲಕರ ಹೊಡೆದರೆನ್ನುತಲಿ ಕರ್ನಾಟಕ ಜನ ಬಲು ಬಿರಸ
ಪುನಗಿಟ್ಟಾಡಿಸಿ ಹೊಡೆದು ಕೆಡಹಿದರು ಕಂಡ ಕಡೆಲಿ ಪುಂಡರ ಸಿರಸ ॥

ಏನನರಿಯುದs ಸ್ವಾನುಭವಿಗಳುs ಒದರಿದರೇನಿದೆ ಹೊಲಸ್ಹೊಲಸ
ಘನತೆಯನೇರಲು ಅಕಾರ್ಮಕಾರರು ಮಾಡಿದರ್ ತಿರ್ಕಸ್ಸಿನ ಕೆಲಸ ॥

ಗೊಂದಲವೆಸಗಿದ ಮುಂದಿನ ದಿನವೇ ಸಂದುಗಳಲಿ ಮಿಲ್ಕಿೀ ಪಾರ
ಹಿಂದು ಜನಗಳು ಬಂಧನು ಮಾಡಿವರೊಂದಿನ ಅಂಗಡಿಗಳ ಪೂರ
ಮುಂದಿನ ದುಂದಿಗೆ ನೂರ್ನಲ್ವತ್ನಾಲ್ಕನೆ ಸೆಕ್ಷನ್ ತೋರಿಸೆ ಸರಕಾರ
ಅಂದಿಗೆ ಅಣಗಿತು ದಾಂಧಲೆಯೆಲ್ಲವು ಎಂದಿನಂತೆ ಸಮ ಪುರ ವಿವರ ॥

ದಂಗೆಯುs ವಿಚಾರಣೆ ನಡೆದು ಹೋಯ್ತು ಕೋರ್ಟಿನಲಿ
ಥಂಗಾದರು ಮೂರ್ಖರು ಥೋಂಗಿ ಹೊಡೆದು ನ್ಯಾಯದಲಿ
ಶೃಂಗಾರದಿ ಮೆರೆಯುವ ಬೆಂಗಳೂರು ಶಹರಿನಲಿ
ಮಂಗಳವು ನೆಲೆಸಿ ಶ್ರೀ ಕೃಷ್ಣ ಭೂಪ ರಾಜ್ಯದಲಿ ॥

ಕುಂಭಿಣಿಲಿ ಬೆಂಗಳೂರಿನಲ್ಲಿ
ಸಂಭ್ರಮದಿ ಮಿಡ್ಲಿಸ್ಕೂಲಿನಲ್ಲಿ
ಒಂಭೈನೂರಿಪ್ಪತ್ತೆಂಟರಲ್ಲಿ ॥
ತುಂಬಿದರ್ ಬಹುಜನ ಸೆಪ್ಟಂಬರ್ ಹದಿನೇಳನೆ ತೇದಿಯಲಿ ॥

ಬಿದ್ದ ಗಣಪನ ಸಿದ್ಧ ಪಡಿಸಿದರ್ ವಿದ್ಯಶಾಲೆಯ ಬಾಲರು
ಸಿದ್ಧಿ ಗಣಪನ ಪೂಜೆಗೈದರು ಜಯ ಜಯೆನ್ನುತ ಸರ್ವರು ॥

ಗಣಪತಿಯ ಗಲಾಟೆಯಿಂದ ಚಳುವಳಿಗಳಿಗೆ ಹೊಸ ಆಯಾಮ ಉಂಟಾಯಿತು. ಬ್ರಾಹ್ಮಣೇತರರ ಗುಂಪಿನಲ್ಲಿದ್ದ ಮುಸಲ್ಮಾನರು ಪ್ರತ್ಯೇಕ ಪಂಗಡವಾಗಿ ಉಳಿಯಲು ಯೋಚಿಸಿದರು. ಜನರಿಗೆ ರಾಜಕೀಯ ಆಸಕ್ತಿ ಹೆಚ್ಚಿತು. ದಿನನಿತ್ಯದ ಸುದ್ದಿಗಳಿಗಾಗಿ ಪತ್ರಿಕೆಗಳನ್ನು ಹೆಚ್ಚು ಹೆಚ್ಚಾಗಿ ಓದಲು ಜನ ಬಯಸಿದರು. ಪತ್ರಿಕಾ ಸುದ್ದಿಗಳಿಗೆ ಜನ ಕಾದಿರುತ್ತಿದ್ದರು. ಪತ್ರಿಕೆಗಳ ಸಂಖ್ಯೆಯು ಪ್ರಸಾರವೂ ಜಾಸ್ತಿಯಾಯಿತು. ಪತ್ರಿಕೆಗಳ ಪ್ರಭಾವವನ್ನು ಮನಗಂಡ ಸರಕಾರ ವಿನಾಕಾರಣ ಪತ್ರಿಕೆಗಳ ಮೇಲೆ ಕರಾಳ ಶಾಸನ ತರುವುದು, ಮುಟ್ಟುಗೋಲು ಹಾಕುವುದು ಸಾಮಾನ್ಯವಾಯಿತು.

ಸಂಪೂರ್ಣ ಸ್ವರಾಜ್ಯ ದಿನಾಚರಣೆ

1930ನೇ ಜನವರಿ 26 ರಂದು ರಾಷ್ಟ್ರಾದ್ಯಂತ ಸಂಪೂರ್ಣ ಸ್ವರಾಜ್ಯ ದಿನಾಚರಣೆಯನ್ನು ನಡೆಸಬೇಕೆಂದು ರಾಷ್ಟ್ರನಾಯಕರು ಕರೆಕೊಟ್ಟರು. ಅದರಂತೆ ಸಂಸ್ಥಾ

ನಾದ್ಯಂತ ಸ್ವರಾಜ್ಯ ದಿನಾಚರಣೆ ನಡೆಯಿತು. "ಸಂಪೂರ್ಣ ಸ್ವರಾಜ್ಯವು ಭರತ ಖಂಡವನ್ನು ಪಾರತಂತ್ರ್ಯ ಕೂಪಕ್ಕೆ ತಳ್ಳುತ್ತದೆ" ಎಂದು ದಿವಾನ್ ಮಿರ್ಜಾರವರು ಭಾಷಣ ಮಾಡಿ ಜನರನ್ನು ತಮ್ಮ ಕಡೆಗೆ ಒಲಿಸಿಕೊಳ್ಳಲು ಪ್ರಯತ್ನಿಸಿದರು. ಆದರೆ ಅದರಿಂದ ಪ್ರಯೋಜನವಾಗಲಿಲ್ಲ.

ತೀರ್ಥಹಳ್ಳಿಯಲ್ಲಿ ಬೆಳಗ್ಗೆ ಧ್ವಜವಂದನೆ ನಡೆಯಿತು. ಸುಮಾರು ಅರವತ್ತು ಜನ ಸ್ವಯಂಸೇವಕರು ಭಾಗವಹಿಸಿದ್ದರು. ಡಾ॥ ನರಸಿಂಹಯ್ಯ, ಶ್ರೀಗಳಾದ ಯು. ಮಂಜುನಾಥಯ್ಯ, ಸಿ. ಸುಬ್ಬರಾವ್, ಕಾಳಿಂಗಯ್ಯನ ಪುಟ್ಟೂರಾವ್, ಮುನ್ಸಿಪಲ್ ವೈಸ್ ಪ್ರೆಸಿಡೆಂಟ್ ಶ್ರೀ ಹೆಚ್. ಎಸ್. ವೆಂಕಟಪ್ಪಗೌಡ ಮೊದಲಾದ ಗಣ್ಯರು ಹಾಜರಿದ್ದರು. ಜಮೀನ್ದಾರ್ ವೈ. ದಾಸಪ್ಪನವರು ಧ್ವಜಾರೋಹಣ ಮಾಡಿದರು. ಶ್ರೀ ಮಹಾಶಬ್ದೆಯವರು ಸ್ವಾಗತ ಬಯಸಿದರು.

ದೊಡ್ಡಬಳ್ಳಾಪುರದಲ್ಲಿ 144ನೇ ಸೆಕ್ಷನ್ ಜಾರಿಯಲ್ಲಿತ್ತು. ಸಭೆ ಸೇರದಂತೆ ಜನರಿಗೆ ಕಿರುಕುಳ ಕೊಟ್ಟರು. ಆದರೂ ಮನೆ ಮನೆಗೆ ಹೋಗಿ ಖಾದಿ ಮಾರುವುದರ ಮೂಲಕ ಸ್ವರಾಜ್ಯ ದಿನವನ್ನು ಆಚರಿಸಲಾಯಿತು.

ಬೆಂಗಳೂರಿನ ಗಾಂಧೀ ಮೈದಾನದಲ್ಲಿ ಸಭೆ ನಡೆಯಿತು. 144ನೇ ಸೆಕ್ಷನ್ ಜಾರಿಯಲ್ಲಿದ್ದುದರಿಂದ ಜನರ ಮೇಲೆ ಪೋಲೀಸರು ಲಾಠಿಚಾರ್ಜ್ ಮಾಡಿ, ಶ್ರೀ ತಗಡೂರು ರಾಮಚಂದ್ರರಾಯರನ್ನು ದಸ್ತಗಿರಿ ಮಾಡಿದರು. ಗಾಂಧೀ ಮೈದಾನ ರಣರಂಗವಾಯಿತು. ವೃತ್ತ ಪತ್ರಿಕೆಗಳ ಮೇಲಿನ ಕರಾಳ ಶಾಸನವನ್ನು ತೆಗೆಯಬೇಕೆಂದು ಭಾಷಣ ಮಾಡಿದುದರಿಂದ ಶ್ರೀ ವೀರಕೇಸರಿ ಸೀತಾರಾಮಶಾಸ್ತ್ರಿಗಳನ್ನು ಬಂಧಿಸಿ, 11 ತಿಂಗಳು ಸೆರೆಮನೆ ವಾಸ ಅನುಭವಿಸುವ ಶಿಕ್ಷೆ ವಿಧಿಸಲಾಯಿತು.

ಮೈಸೂರು ಸುಬ್ಬರಾಯನ ಕೆರೆಯ ಮೈದಾನದಲ್ಲಿ ಪೋಲೀಸರು ಜನರ ಮೇಲೆ ದಬ್ಬಾಳಿಕೆ ನಡೆಸಿದರು. ಪೋಲೀಸ್ ಆಕ್ಟ್‌ನ 85ನೇ ವಿಧಿಯನ್ನು ಜಾರಿ ಮಾಡಿದ್ದಲ್ಲದೆ, ಶ್ರೀ ಅಗರಂ ರಂಗಯ್ಯ ಮತ್ತು ಶ್ರೀ ರಾಜಗೋಪಾಲ ಅಯ್ಯಂಗಾರ್ಯರ ಮೇಲೆ ಅಷ್ಟದಿಗ್ಬಂಧನವನ್ನು ಹೇರಲಾಯಿತು.

ತುಮಕೂರಿನಲ್ಲಿ ಪೋಲೀಸ್ ರೆಗ್ಯುಲೇಷನ್‌ನ 29, 45ನೇ ಸೆಕ್ಷನ್ ಜಾರಿಯಲ್ಲಿದ್ದರೂ ಪೌರಸಭಾಧ್ಯಕ್ಷರಾಗಿದ್ದ ಶ್ರೀ ರಂಗಯ್ಯಂಗಾರ್ಯರು ಧ್ವಜಾರೋಹಣ ಮಾಡಿದರು. ಅವರ ಮೇಲೆ ಮತ್ತು ಶ್ರೀ ಸುಬ್ರಹ್ಮಣ್ಯಂರ ಮೇಲೆ ಪೋಲೀಸ್ ಆಕ್ಟ್ 70ರ ಪ್ರಕಾರ ಮೊಕದ್ದಮೆ ಹೂಡಲಾಯಿತು.

ಮಧುಗಿರಿಯಲ್ಲಿ ಧ್ವಜಾರೋಹಣಕ್ಕೆ ಪೋಲೀಸರು ಅಡ್ಡಿ ಮಾಡಿದರು. ಸ್ವರಾಜ್ಯ ದಿನಾಚರಣೆಯ ಸಂದರ್ಭದಲ್ಲಿ ಅನೇಕ ಬಂಧನಗಳಾದವು. ಮಾದರಿ ಮೈಸೂರಿನಲ್ಲಿ ಬಾವುಟಗಳ ಬೇಟೆಯಾಯಿತು. ಎಲ್ಲೆಲ್ಲೂ ಪೋಲೀಸರು ಮುಗ್ಧ ಜನರ ಮೇಲೆ ತಮ್ಮ ದರ್ಪವನ್ನು ತೋರಿಸಿದರು. ಹಲವು ಪತ್ರಿಕೆಗಳ ಪ್ರಕಟಣೆ

ಯನ್ನು ಸರಕಾರ ನಿಲ್ಲಿಸಿತು. ಕರ್ನಾಟಕ ವೈಭವ, ಕನ್ನಡಿಗ, ಕರ್ಮವೀರ, ತರುಣ ಕರ್ನಾಟಕ, ಕರ್ನಾಟಕ ಧುರೀಣ, ಕಾನಡ ವೃತ್ತ ಎಂಬ ಪತ್ರಿಕೆಗಳು ಸರ್ಕಾರದ ಕರಾಳ ಶಾಸನಕ್ಕೆ ಬಲಿಯಾದವು.

ಅಂಕೋಲೆಯ ಉಪ್ಪಿನ ಸತ್ಯಾಗ್ರಹ

ಮಹಾತ್ಮ ಗಾಂಧೀಜಿಯವರ ಉಪ್ಪಿನ ಸತ್ಯಾಗ್ರಹ ಚಳುವಳಿಯ ಕಾವು ಮೈಸೂರು ರಾಜ್ಯಕ್ಕೂ ತಟ್ಟಿತು. ಕಾರವಾರ ಜಿಲ್ಲೆಯ ಅಂಕೋಲದಲ್ಲಿ 1930ನೇ ಏಪ್ರಿಲ್ 13 ರಿಂದ ಒಂದು ತಿಂಗಳವರೆಗ ಉಪ್ಪಿನ ಸತ್ಯಾಗ್ರಹ ನಡೆಯಿತು. ಸಂಸ್ಥಾನದ ಇತರ ಭಾಗಗಳಿಂದಲೂ ಸತ್ಯಾಗ್ರಹಿಗಳು ಆಗಮಿಸಿ ಉಪ್ಪಿನ ಸತ್ಯಾಗ್ರಹದಲ್ಲಿ ಪಾಲ್ಗೊಂಡರು. ಆ ಸಂದರ್ಭದಲ್ಲಿ ಅನೇಕ ಬಂಧನಗಳು ನಡೆದುವು.

ಅತ್ಯಂತ ಯಶಸ್ವಿಯಾಗಿ ನಡೆದ ಅಂಕೋಲೆ ಉಪ್ಪಿನ ಸತ್ಯಾಗ್ರಹದಲ್ಲಿ ಭಾಗವಹಿಸಿದ ಸತ್ಯಾಗ್ರಹಿಗಳು ಮತ್ತು ಅವರ ಶಿಕ್ಷೆಯ ವಿವರ ಹೀಗಿದೆ :

ಕಾರವಾರ ಜಿಲ್ಲೆಯಿಂದ

ಶ್ರೀಯುತರಾದ ಎಂ. ಪಿ. ನಾಡಕರ್ಣಿ (6 ತಿಂಗಳು), ಸ್ವಾಮಿ ವಿದ್ಯಾನಂದ (1 ವರ್ಷ ಕಠಿಣ ಶಿಕ್ಷೆ), ಶ್ಯಾಮರಾವ್ ಕೃಷ್ಣಶೇಣ್ವಿ (1 ವರ್ಷ ಕಠಿಣ ಶಿಕ್ಷೆ), ಸುಬ್ರಾವ ಹಳದೀಪುರ (1 ವರ್ಷ ಕಠಿಣ ಶಿಕ್ಷೆ), ಜಿ. ಎಂ. ನಾಡಕರ್ಣಿ (1 ವರ್ಷ ಕಠಿಣ ಶಿಕ್ಷೆ). ಕೋರ್ಟು ಏಳುವರೆಗೆ ಶಿಕ್ಷೆಗೆ ಒಳಗಾದವರು : ಶ್ರೀಗಳಾದ ವಿಠೋಬಾ ಎ. ಅಂಕೋಲ, ಅನಂತನಾರಾಯಣ ಮಹಾಲೆ, ಎಸ್. ಜಿ. ಮಹಾಲೆ, ಎಸ್. ಬಿ. ದೇವಲಿ, ಎಸ್. ಎಂ. ಶೆಟ್ಟಿ, ಜಗನ್ನಾಥ, ಎಸ್. ನಾಯಿರ್, ಡಿ. ಎನ್. ಮದಾಲೆ, ಎಂ. ಆರ್. ವಾಘಬೂರಣ್ಣ ಬಿ. ನಾಯಿಕ, ದೇವಣ್ಣ ಬಿ. ನಾಯಿಕ, ಬಮ್ಮಯ್ಯ ರಾತಾನಾಯಿಕ. ಜೋಗೀ ಬೀರಣ್ಣ ನಾಯಿಕ (8 ತಿಂಗಳ ಶಿಕ್ಷೆ), ಗಂಗಾಧರಯ್ಯಾ ಶ್ಯಾನಭಾಗ (10 ತಿಂಗಳ ಶಿಕ್ಷೆ), ದಾಮೋದರ ಶ್ಯಾನಭಾಗ (1 ವರ್ಷ 3 ತಿಂಗಳ ಶಿಕ್ಷೆ), ಶ್ರೀನಿವಾಸ ಶ್ಯಾನಭಾಗ (1 ವರ್ಷ ಕಠಿಣ ಶಿಕ್ಷೆ), ಎ. ಎನ್. ಮಹಾಲೆ (1 ವರ್ಷ 2 ತಿಂಗಳು ಶಿಕ್ಷೆ), ಟಿ. ಎನ್. ನಾಯಿಕ (3 ತಿಂಗಳು 3 ವಾರ ಸಾದಾ ಶಿಕ್ಷೆ), ಸಣ್ಣಪ್ಪಾ ಹೊಡೆ (6 ತಿಂಗಳು ಸಾದಾ ಶಿಕ್ಷೆ).

ಮಂಗಳೂರು ಜಿಲ್ಲೆಯಿಂದ

ಶ್ರೀಗಳಾದ ಉಮೇಶ್‌ರಾವ್ (6 ತಿಂಗಳು), ಆರ್. ಕೆ. ಪ್ರಭು (6 ತಿಂಗಳು) ಕೊಂಬ್ರಾಬೈಲ ಶಂಕರರಾವ್ (4 ತಿಂಗಳು), ಪರಮೇಶ್ವರೈ (ಕೋರ್ಟು ಏಳುವವರೆಗೆ), ಉಲ್ಲಾಲ ಕಾತ್ರು (4 ತಿಂಗಳು), ಸೇತ ಇಸಾಬ ಸಾಹೇಬ್ (4 ತಿಂಗಳು),

ಶೇಣ್ವಿ ವಸುದೇವರಾವ್ (4 ತಿಂಗಳು), ರಾಮರಾವ್ ಮಲಿಯ (6 ತಿಂಗಳು), ಖಂಡಗೆ ಕೃಷ್ಣಭಟ್ (5 ತಿಂಗಳು), ಮಂಜುನಾಥ ನಾಯಕ (5 ತಿಂಗಳು), ಅಣ್ಣ ಪ್ಪಾಕರೆಂಟ (5 ತಿಂಗಳು), ವೆಂಕಟರಾಮ ನಾಯಕ (4 ತಿಂಗಳು), ನಾರಾಯಣ ಪೈ (4 ತಿಂಗಳು), ಸದಾಶಿವ ರಾವತಾನೇಡ (15 ತಿಂಗಳು), ಪನಯಾಡಿ (15 ತಿಂಗಳು) ರಾಮನಾಥ ಕಿಣಿ (15 ತಿಂಗಳು), ಬೆಳ್ಳಿಪಡಿ (3 ತಿಂಗಳು ಕಠಿಣ ಶಿಕ್ಷೆ), ನಾರಾಯಣ ಭಂಡಾರಿ (6 ತಿಂಗಳು), ಕೃಷ್ಣರಾವ್ ಕೊಡಗಿ (6 ತಿಂಗಳು), ರಂಗಯ್ಯ ಬಳಗಿ (15 ತಿಂಗಳು), ಶಂಕನಾಗಣ್ಣ ಭಟ್ಟ (4 ತಿಂಗಳು), ಯು. ಲಕ್ಷ್ಮೀನಾರಾಯಣ ರಾವ್ (3 ತಿಂಗಳು), ಪಿ. ರಾಮನಾಯಕ್ (3 ತಿಂಗಳು), ಎ. ಸೀತಾರಾಮ ರಾಜಪ್ಪ (3 ತಿಂಗಳು), ಬಿ. ಸುಬ್ಬರಾಯ ಪೈ (3 ತಿಂಗಳು), ಕೋಟಿ ಮಳಯ (3 ತಿಂಗಳು).

ಅರಣ್ಯ ಸತ್ಯಾಗ್ರಹ

ಅಂಕೋಲದ ಉಪ್ಪಿನ ಸತ್ಯಾಗ್ರಹ ಒಂದು ತಿಂಗಳವರೆಗೆ ನಡೆಸಿದ ಮೇಲೆ ಅದು ಅರಣ್ಯ ಸತ್ಯಾಗ್ರಹ, ಹೆಂಡದಂಗಡಿ ಪಿಕೆಟಿಂಗ್ ಮೊದಲಾದ ಇತರ ಚಳುವಳಿಗಳ ರೂಪದಲ್ಲಿ ತನ್ನ ಚಟುವಟಿಕೆಯನ್ನು ಮುಂದುವರಿಸಿತು. ಸಂಸ್ಥಾನದ ಇತರ ಭಾಗಗಳಲ್ಲಿಯೂ ಇಂತಹ ಸತ್ಯಾಗ್ರಹಗಳು ನಡೆದುವು. ಆಗ ಧಾರವಾಡ, ಹುಬ್ಬಳ್ಳಿ, ಗದಗ, ಹಾನಗಲ್, ಹಾವೇರಿ, ಬಿಜಾಪುರ, ಬಾಗಲಕೋಟೆ, ಕೆರೂರು, ಗುಳೇದಗುಡ್ಡ, ಬೆಳಗಾವಿ, ಬೈಲಹೊಂಗಲ, ಸವದತ್ತಿ, ಕಿತ್ತೂರು, ಬಳ್ಳಾರಿ, ಹಡಗಲಿ, ಹರಪನಹಳ್ಳಿ, ಅಂಕೋಲ, ಶಿರ್ಶಿ, ಸಿದ್ದಾಪುರ, ಕುಮಟಾ, ಹೊನ್ನಾವರ, ಭಟಕಲ, ಕಲಘಟಗಿ ಮೊದಲಾದ ಕಡೆಗಳಲ್ಲಿ ಸತ್ಯಾಗ್ರಹ ಶಿಬಿರಗಳು ನಡೆಯುತ್ತಿದ್ದುವು. ಅಲ್ಲಿ ಕ್ರಮಬದ್ಧವಾಗಿ ತರಬೇತಿ ಪಡೆದ ಸತ್ಯಾಗ್ರಹಿಗಳು ನಾಯಕರು ಸೂಚಿಸಿದ ಕಡೆಗೆ ಹೋಗಿ ಸತ್ಯಾಗ್ರಹಗಳನ್ನು ಯಶಸ್ವಿಯಾಗಿ ನಡೆಸಿದರು. ರಾಷ್ಟ್ರನಾಯಕರು ಸತ್ಯಾಗ್ರಹಿಗಳಿಗೆ ಆಗಾಗ್ಗೆ ಸ್ಫೂರ್ತಿ ನೀಡುತ್ತಿದ್ದರು. ಸ್ವಾತಂತ್ರ್ಯ ಹೋರಾಟಗಾರರನ್ನು ಕುರಿತು ಒಮ್ಮೆ ಶ್ರೀಮತಿ ಕಮಲಾದೇವಿಯವರು ಹೀಗೆ ಕರೆಕೊಟ್ಟರು: "ರಕ್ತ ಶೋಷಕ ಬ್ರಿಟಿಷ್ ಪ್ರಭುತ್ವ ಕೊನೆಗಾಣುವವರೆಗೆ ಯುದ್ಧವನ್ನು ನಿಲ್ಲಿಸಬೇಡಿರಿ. ಭರತಖಂಡದ ಸ್ವಾತಂತ್ರ್ಯವೆಂದರೆ ಅಖಿಲ ಜಗತ್ತಿನ ಸ್ವಾತಂತ್ರ್ಯ."

ಸರ್ಕಾರದ ಆಜ್ಞೆಗಳನ್ನು ಉಲ್ಲಂಘಿಸಿ ಸೆರೆಮನೆಗೆ ಹೋಗುತ್ತಿದ್ದ ದೇಶಪಾಂಡೆ ಗಂಗಾಧರರಾಯರು "ಈ ಸ್ವರಾಜ್ಯ ಸಂಗ್ರಾಮ ರಂಗದಿಂದ ಕಾಲು ಹಿಂದೆಗೆಯಬೇಡಿ" ಎಂದು ಸತ್ಯಾಗ್ರಹಿಗಳಿಗೆ ಘೋಷಿಸಿದರು.

ಅರಣ್ಯ ಶಾಸನದ ಉಲ್ಲಂಘನೆಯಲ್ಲಿ ತೊಡಗಿದ ಕುಮಟವು ಕರ್ನಾಟಕದ ಬರ್ದೋಲಿಯಾಯಿತು. 200 ಮಹಿಳೆಯರು ಕಾನೂನನ್ನು ಭಂಗ ಮಾಡಿದರು. 250ಕ್ಕೂ ಹೆಚ್ಚು ಜನ ಕಾರಾಗೃಹ ಸೇರಿದರು. ಅನೇಕರು ಪೋಲೀಸರಿಂದ ಏಟು

ತಿಂದರು. ಧಾರವಾಡ ಜಿಲ್ಲೆಯಲ್ಲಿ ಸುಮಾರು 75,000 ಈಚಲ ಮರಗಳನ್ನು ಸತ್ಯಾಗ್ರಹಿಗಳು ಕಡಿದು ಹಾಕಿದರು.

15-5-1930ರ ಸಮಯಕ್ಕೆ ಮೈಸೂರು ಸಂಸ್ಥಾನದಲ್ಲಿ ವಿವಿಧ ಸತ್ಯಾಗ್ರಹಗಳಲ್ಲಿ ಭಾಗವಹಿಸಿದ 1836 ಸತ್ಯಾಗ್ರಹಿಗಳು ಸೆರೆಮನೆ ಸೇರಿದರು. ಉಪ್ಪು ಮಾರಿದ್ದಕ್ಕೆ ಶ್ರೀ ದೇಶಪಾಂಡೆ ಗಂಗಾಧರರಾಯರಿಗೆ 6 ತಿಂಗಳು ಶಿಕ್ಷೆಯಾಯಿತು. ಬೆಂಗಳೂರಿನ ವರ್ತಕರು ವಿದೇಶಿ ವಸ್ತ್ರಗಳನ್ನು 6 ತಿಂಗಳವರೆಗೆ ಮಾರಾಟ ಮಾಡುವುದಿಲ್ಲವೆಂದು ಸಂಕಲ್ಪ ಮಾಡಿದರು. ಸೊಲ್ಲಾಪುರದಲ್ಲಿ ರಾಷ್ಟ್ರಧ್ವಜವನ್ನು ಹಿಡಿದು ಚಳುವಳಿ ನಡೆಸಿದ ಈ ಕೆಳಕಂಡ ಸತ್ಯಾಗ್ರಹಿಗಳನ್ನು ಬಂಧಿಸಿ ಅವರಿಗೆ 1 ವರ್ಷ ಶಿಕ್ಷೆ ವಿಧಿಸಿ, ಬಿಜಾಪುರ ಜೈಲಿಗೆ ದೂಡಿದರು. ಅವರುಗಳ ಹೆಸರುಗಳು ಹೀಗಿವೆ: ಶ್ರೀಗಳಾದ, ಟಿ. ಆರ್. ಶಾಮಣ್ಣ, ಕೆ. ವಿ. ಶ್ರೀನಿವಾಸಮೂರ್ತಿ, ಚಂಗಲ್ವರಾಯ ಮೊದಲಿಯಾರ್, ಸಿ. ಕೃಷ್ಣರಾವ್, ವೈ. ವಿ. ರಾಮಚಂದ್ರನ್, ಡಿ. ಕೃಷ್ಣಮೂರ್ತಿ, ಕೆ. ಬಿ. ನಾರಾಯಣಮೂರ್ತಿ, ಕೆ. ಕೃಷ್ಣಸ್ವಾಮಿ, ಆರ್. ಚಂದ್ರಶೇಖರರಾವ್, ಶಾಂತಾರಾಂ ದೇಸಾಯಿ, ರಾಮಚಂದ್ರರಾವ್ ಮತ್ತು ಕೆ. ಜಿ. ಮೂರ್ತಿ.

ಕೊಡಗಿನಲ್ಲಿ ಜನರ ಮೇಲೆ ಸರಕಾರ ಕ್ರೂರ ದಬ್ಬಾಳಿಕೆಯನ್ನು ನಡೆಸಿತು 1-10-1930 ರಂದು ವೀರರಾಜ ಪೇಟೆಯಲ್ಲಿ ಸಾರ್ವಜನಿಕ ಸಭೆ ನಡೆಯಿತು ಶ್ರೀ ಬೆಳ್ಳಿಯಪ್ಪ ದಸ್ತಗಿರಿಯಾದರು. ಶಾಲಾಬಾಲಕರು ಗಾಂಧಿ ಟೋಪಿಯನ್ನು ಹಾಕಬಾರದೆಂದು ಅಧಿಕಾರಿಗಳು ಆಜ್ಞಾಪಿಸಿದರು. "ಕೊಡಗು" ಪತ್ರಿಕೆಯ ಮುದ್ರಣಾಲಯಕ್ಕೆ ಸರಕಾರ ಸೆಕ್ಯುರಿಟಿ ಕೇಳಿತು.

ಮಹಾತ್ಮ ಗಾಂಧೀಜಿಯವರನ್ನು ಬ್ರಿಟಿಷ್ ಸರಕಾರ ಬಂಧಿಸಿತು. ಆ ಸುದ್ದಿ ದೇಶದ ಮೂಲೆ ಮೂಲೆಗೂ ಹಬ್ಬಿತು. ಅದರ ವಿರುದ್ಧವೂ ಅನೇಕ ಚಳುವಳಿಗಳು ನಡೆದುವು. ಆ ಸಂದರ್ಭದಲ್ಲಿ ಸಿದ್ದಾಪುರದ ಮಾಮಲೇದಾರನ ಮುಂದೆ ಒಬ್ಬ ಹಳ್ಳಿಯ ರೈತ ಹೀಗೆ ಹೇಳಿದ: "ಗಾಂಧೀಜಿಯವರ ಬಿಡುಗಡೆಯಾಗುವವರೆಗೆ, ಸ್ವರಾಜ್ಯ ಸ್ಥಾಪನೆಯಾಗುವವರೆಗೆ ನಾವು ಮರ ಹಾಕುವುದಿಲ್ಲ, ಸರಿಗೆ ತೊಡುವುದಿಲ್ಲ."

ಶಿರಸಿಯಲ್ಲಿ 1-11-1930 ರಂದು ಶ್ರೀ ಗಣಪಯ್ಯ ಹೆಗಡೆ, ಕಾಗೇರಿ ಸಾಂಬಯ್ಯ ಹೆಗಡೆ, ಸ್ವಯಂ ಸೇವಕ ಬಳಗಂಡಿಯವರನ್ನು ಬಂಧಿಸಲಾಯಿತು. 22-10-1930 ರಂದು ಬಳ್ಳಾರಿಯಲ್ಲಿ ಶ್ರೀಗಳಾದ ಬಿ. ವೆಂಕೋಬರಾವ್. ಡಿ. ಹೆಚ್. ಕೃಷ್ಣರಾವ್, ಡಿ. ಗೋಪಾಲರಾವ್, ಆರ್. ಹನುಮಂತರಾವ್‌ರನ್ನು ಬಂಧಿಸಿ ಅವರಿಗೆ ತಲಾ ಒಂದು ವರ್ಷ ಶಿಕ್ಷೆಯನ್ನು ವಿಧಿಸಲಾಯಿತು. ಬಳ್ಳಾರಿಯಲ್ಲಿ ಮೈಸೂರಿನ ಶ್ರೀ ಸ್ವಾಮಿ, ಶ್ರೀ ವೆಂಕಟಾಚಾರ್ಯರನ್ನು ಬಂಧಿಸಿ ಒಂದು ವರ್ಷ ಶಿಕ್ಷೆಗೆ ಗುರಿಪಡಿಸಿದರು. 24-9-1930 ರಂದು ಕೆರೂರು ಸ್ವಯಂ ಸೇವಕ ಶಿಬಿರ

ದಲ್ಲಿದ್ದವರನ್ನೆಲ್ಲ ಪೋಲೀಸರು ಬಂಧಿಸಿದರು. ಬಿಜಾಪುರದಲ್ಲಿ ಶ್ರೀಗಳಾದ ಮರುಳಾರಾಧ್ಯ ಬಾಗಲಕೋಟೆ, ಸೀನಪ್ಪ ನೀರಲಕೇರಿ ಅವರನ್ನು ದಸ್ತಗಿರಿ ಮಾಡಲಾಯಿತು. 12-9-1930 ರಂದು ಮೈಸೂರಿನಲ್ಲಿ ಚಳುವಳಿಯಲ್ಲಿ ಭಾಗವಹಿಸಿದ್ದ ವಿದ್ಯಾರ್ಥಿಗಳ ಮೇಲೆ ಪೋಲೀಸರು ಲಾಠಿ ಪ್ರಹಾರ ಮಾಡಿದರು. ಮೈಸೂರು ಸಂಸ್ಥಾನದಲ್ಲಿ ಕಾಂಗ್ರೆಸ್ ಕಮಿಟಿ, ಹಿಂದೂಸ್ತಾನ ಸೇವಾದಳ, ಯುವಜನ ಸಂಘ, ಹುಬ್ಬಳ್ಳಿಯ ತಿಲಕ್ ಗ್ರಂಥಾಲಯ ಮೊದಲಾದ 26 ಸಂಸ್ಥೆಗಳನ್ನು ಅಕ್ರಮ ಕೂಟಗಳೆಂದು ಭಾವಿಸಿ ಸರಕಾರ ಅವುಗಳನ್ನು ಮುತ್ತಿಗೆಮಾಡಿ ಬೀಗ ಮುದ್ರೆ ಹಾಕಿತು. 12-9-1930 ರಂದು ಬೆಂಗಳೂರಿನಲ್ಲಿ ಅದ್ಭುತವಾದ ಹರತಾಳ ನಡೆದು, ಶಾಲಾ ಕಾಲೇಜುಗಳೆಲ್ಲ ಮುಚ್ಚಿದ್ದುವು.

ಸತ್ಯಾಗ್ರಹದಲ್ಲಿ ಭಾಗವಹಿಸಿದ ಬೆಳಗಾಂ ಜಿಲ್ಲೆಯ ಮುರಗೋಡಿನ ಶ್ರೀ ಬಂದೋಪಂತ ಕಾಮಂತರಿಗೆ ಒಂದು ವರ್ಷ ಕಠಿಣ ಶಿಕ್ಷೆ, 500 ರೂಪಾಯಿ ದಂಡ ವಿಧಿಸಲಾಯಿತು. ಗದುಗಿನ ಶ್ರೀ ನಾರಾಯಣರಾವ್ ದಂಬಳ ಅವರಿಗೆ 3 ತಿಂಗಳ ಶಿಕ್ಷೆ, 100 ರೂಪಾಯಿ ಜುಲ್ಮಾನೆ ಆಯಿತು. ಕಾರವಾರದ ಸೆರೆಮನೆಯಲ್ಲಿ ಪೋಲೀಸರ ಕಿರುಕುಳ ತಡೆಯಲಾರದೆ ಶ್ರೀ ರಾಮಚಂದ್ರಶೇಖರ ಸತ್ತು ಹೋದನು. ಉಡುಪಿಯ ಶ್ರೀ ಮಂಜುನಾಥಾಚಾರ್ಯರಿಗೆ, ಡಾ॥ ವೆಂಕಟರಾವ್ ಹುಯಿಲಗೋಳರಿಗೆ, ಹುಬ್ಬಳ್ಳಿಯ ಗೊಬ್ಬೂಣನವರಿಗೆ ಕಠಿಣ ಶಿಕ್ಷೆಯಾಯಿತು. ಬೆಳಗಾಂನಲ್ಲಿ ಶ್ರೀಮತಿಯರಾದ ಅಂಬಾಬಾಯಿ ಬಳಗಾರ, ಸೀತಾಬಾಯಿ, ಲಕ್ಷ್ಮೀಬಾಯಿಯರನ್ನು ಪೋಲೀಸರು ದಸ್ತಗಿರಿ ಮಾಡಿದರು. ಶ್ರೀ ಮುದವೀಡು ಕೃಷ್ಣರಾವ್ ಮತ್ತು ಡಾ॥ ವರ್ಡೇಕರರ ದಸ್ತಗಿರಿಯೂ ಆಯಿತು. 12-12-1930 ರಂದು ಶ್ರೀಮಂತ ಮಲ್ಲಪ್ಪ ಧನಶೆಟ್ಟಿಯವರನ್ನು ಗಲ್ಲಿಗೇರಿಸಲಾಯಿತು.

ಕೋಡಕಣ, ಮಿರಜಾನ, ಬರ್ಗಿ ಹೆಗಡೆ, ಕುಮಟಾ ತಾಲ್ಲೂಕಿನ ಹೊಲೇಗದ್ದೆ ಮೊದಲಾದ ಗ್ರಾಮಗಳಲ್ಲಿ ಸಾವಿರಾರು ಜನ ರೈತರು ಅರಣ್ಯ ಸತ್ಯಾಗ್ರಹ ಮಾಡಿದರು. ಸಿದ್ದಾಪುರ, ಹೊನ್ನಾವರ, ಹುಕ್ಕೇರಿ, ತಾಲ್ಲೂಕುಗಳಲ್ಲೂ ಸತ್ಯಾಗ್ರಹ ನಡೆದು ಅನೇಕರು ಶಿಕ್ಷೆ ಅನುಭವಿಸಿದರು. ಯಲ್ಲಾಪುರದಲ್ಲಿ ಮ್ಯಾಜಿಸ್ಟ್ರೇಟರ "ತಾಲ್ಲೂಕು ಬಿಟ್ಟು ಹೊರಡಿ" ಆಜ್ಞೆಯನ್ನು ಉಲ್ಲಂಘಿಸಿ ಬಂಧನಕ್ಕೊಳಗಾಗಿ 5 ವಾರ ಕಠಿಣ ಶಿಕ್ಷೆ ಅನುಭವಿಸಿದವರು ಇವರು: ಶ್ರೀಗಳಾದ ಎನ್. ಡಿ. ಶಂಕರಪ್ಪ, ಎಸ್. ಎಸ್. ಕೃಷ್ಣಮೂರ್ತಿ, ಬಿ. ಎಚ್. ರಂಗಸ್ವಾಮಿ, ಎನ್. ಪಿ. ರುದ್ರಪ್ಪ, ವಿ. ಅಶ್ವತ್ಥನಾರಾಯಣರಾವ್, ಎಸ್. ಟಿ. ದೇಶಪಾಂಡೆ, ಎಸ್. ಎಸ್. ಸುರದ್, ಎಸ್. ಗೋವಿಂದರಾವ್, ಸತ್ಯನಾರಾಯಣರಾವ್, ಕೆ. ವಿ. ಕುಲಕರ್ಣಿ, ಎಸ್. ವಿ. ನಂಜುಂಡಯ್ಯ ಮತ್ತು ಅದೃಶಪ್ಪ.

1930 ನೇ ಇಸವಿಯಲ್ಲಿ ಲೆಕ್ಕವಿಲ್ಲದಷ್ಟು ದಸ್ತಗಿರಿಯಾದುವು. ಜೈಲುಗಳೆಲ್ಲ ಸತ್ಯಾಗ್ರಹಿಗಳಿಂದ ತುಂಬಿಹೋದುವು. ಸರ್ಕಾರದ ದಮನ ಪ್ರವೃತ್ತಿ ನಿಲ್ಲಲಿಲ್ಲ. ಸತ್ಯಾಗ್ರಹಿಗಳ ಹೋರಾಟವೂ ಮುಂದುವರಿಯಿತು.

ವಿವರವಾಗಿ ಪರಿಶೀಲಿಸಿದರೆ ಉತ್ತರ ಕನ್ನಡ, ದಕ್ಷಿಣ ಕನ್ನಡ, ಕೊಡಗುಗಳಲ್ಲಿ ನಡೆದ ಸತ್ಯಾಗ್ರಹಗಳದೇ ಪ್ರತ್ಯೇಕ ಇತಿಹಾಸವಾಗುತ್ತದೆ. ಶ್ರೀ ಬಾಲಗಂಗಾಧರ ತಿಲಕರ ಪ್ರಭಾವ ಉತ್ತರ ಕನ್ನಡ ಜಿಲ್ಲೆಯಲ್ಲಿ ಮೊದಲಾಯಿತು. ಬಳ್ಳಾರಿಯ ಶ್ರೀ ಕೋಲಾಚಲಂ ವೆಂಕಟರಾವ್, ಬೆಳಗಾವಿಯ ಶ್ರೀ ಭಾಟೆ, ಶ್ರೀ ವಿಶ್ವನಾಥರಾವ್ ಜೋಗ್, ಧಾರವಾಡದ ಶ್ರೀ ಪಾಠಕ್, ಶ್ರೀ ಗೋವಿಂದರಾವ್ ಯಾಳಗಿ, ಶ್ರೀ ಆಲೂರು ವೆಂಕಟರಾಯರು, ಶ್ರೀ ಶ್ರೀನಿವಾಸರಾವ್ ಕೌಜಲಗಿ, ಶ್ರೀ ಅಣ್ಣಾಚಾರ್ಯ ಹೊಸಕೇರಿ, ಶ್ರೀ ಗಂಗಾಧರರಾವ್ ದೇಶಪಾಂಡೆ ಮೊದಲಾದವರು ರಾಷ್ಟ್ರ ನಾಯಕರಿಂದ ಪ್ರಭಾವಿತರಾಗಿ ತಮ್ಮ ಪ್ರದೇಶಗಳಲ್ಲಿ ಜನಜಾಗೃತಿ ಮಾಡುತ್ತಾ ಚಳುವಳಿಗಳಿಗೆ ಜನರನ್ನು ಸಿದ್ಧಗೊಳಿಸಿದರು.

ಮಂಗಳೂರಿನಲ್ಲಿ ಶ್ರೀ ಕಾರ್ನಾಡ್ ಸದಾಶಿವರಾವ್ ರಾಷ್ಟ್ರೀಯ ಚಟುವಟಿಕೆಗಳನ್ನು ಆರಂಭಿಸಿದರು. ರಾಯಚೂರಿನ ಶ್ರೀ ಪಂಡಿತ ತಾರಾನಾಥರು, ಬಳ್ಳಾರಿಯ ಶ್ರೀ ಕೆ. ಸುಬ್ಬರಾವ್, ಟೇಕೂರು ಶ್ರಿ ನಾರಾಯಣ ಶಾಸ್ತ್ರಿಗಳು ಚಳುವಳಿ ನಡೆಸಿ ಶಿಕ್ಷೆ ಅನುಭವಿಸಿದರು. 1921 ರಲ್ಲಿ ಧಾರವಾಡದಲ್ಲಿ ದೊಡ್ಡ ಪ್ರಮಾಣದ ಹರತಾಳ ನಡೆಯಿತು. ಶ್ರೀ ಆರ್. ದಿವಾಕರ್, ಶ್ರೀ ಕಬ್ಬೂರ್, ಶ್ರೀ ವಾಮನರಾವ್ ಜಠಾರ್, ಶ್ರೀ ಮಂದವೀಡಕರ್, ಶ್ರೀ ನರಸಿಂಗರಾವ್ ಭಿಸೇ ಮೊದಲಾದವರು ಬಂಧಿತರಾದರು.

ಉಪ್ಪಿನ ಸತ್ಯಾಗ್ರಹದಲ್ಲಿ ಶ್ರೀ ಕಾರ್ನಾಡ್ ಕೂಡಿಗಿ, ಶ್ರೀ ರಾಮಕೃಷ್ಣ ಕಾರಂತ, ಶ್ರೀ ದಿವಾಕರ್, ಶ್ರೀ ಕರಮರಕರ್ ಮೊದಲಾದವರು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಭಾಗವಹಿಸಿದ್ದರು.

ಕರನಿರಾಕರಣೆ ಚಳುವಳಿ

1931 ರಲ್ಲಿ ಉತ್ತರ ಕನ್ನಡದ ಸಿರಸಿ, ಸಿದ್ಧಾಪುರ, ಅಂಕೋಲಗಳಲ್ಲಿ ನಡೆದ ಕರನಿರಾಕರಣ ಚಳುವಳಿ ಗಮನಾರ್ಹವಾದುದು. ಸಿರಸಿ ತಾಲೂಕಿನ 43 ಮಂದಿ ಪಟೇಲರು ತಮ್ಮ ಕೆಲಸಕ್ಕೆ ರಾಜಿನಾಮೆ ನೀಡಿದರು. ಅಂಕೋಲೆಯ ರೈತರು ಗಡು ಮೀರಿದರೂ ಕಂದಾಯ ಕೊಡಲಿಲ್ಲ. ಪೋಲೀಸರು ಹಳ್ಳಿಗಳಿಗೆ ಬಂದು ಕಂದಾಯ ಬಾಕಿಗಾಗಿ ಸಂಬಂಧಪಟ್ಟವರ ಮನೆಯ ಪದಾರ್ಥಗಳನ್ನು ಹರಾಜು ಹಾಕಿದರೆ ಕೊಂಡುಕೊಳ್ಳುವವರೇ ಇರಲಿಲ್ಲ. ಅಪ್ಪಿ ತಪ್ಪಿ ಯಾರಾದರೂ ಕೊಂಡುಕೊಂಡರೆ ಮನೆಯ ಮುಂದೆ ಸ್ತ್ರೀಯರು ಉಪವಾಸ ಸತ್ಯಾಗ್ರಹ ಮಾಡುತ್ತಿದ್ದರು. ಸಾಮಾನ್ಯ ರೈತರು ಅಸಾಧಾರಣ ಧೈರ್ಯದಿಂದ ಪೋಲೀಸರನ್ನು ಎದುರಿಸಿದರು. ದಬ್ಬಾಳಿಕೆ, ಲಾಠಿ ಏಟು, ಬಂಧನಗಳಿಗೆ ಬೆದರಲಿಲ್ಲ. ಶ್ರೀ ತಿಮ್ಮಪ್ಪ ನಾಯಕ್, ಶ್ರೀ ಶಂಕರ ಗುಲವಾಡಿ, ಶ್ರೀ ಬಾಸಗೋಡು ರಾಮನಾಯ್ಕ, ಶ್ರೀ ನೆಲಗೇರಿ ಜೋಗಿನಾಯ್ಕ, ಶ್ರೀ ವಾಸ್ರೆ ಸುಬ್ಬನಾಯ್ಕ, ಶ್ರೀ ಹಿಚಕಡ ಬೀರಣ್ಣನಾಯ್ಕರು ಪೋಲೀಸರಿಂದ ಕಿರುಕುಳಗಳನ್ನು ಅನುಭವಿಸಿದರು. ಹೀರೇಕೆರೂರು ತಾಲೂಕಿನಲ್ಲಿ ಶ್ರೀ ತಿಮ್ಮಪ್ಪ

ನೇಸ್ವಿ, ಶ್ರೀ ವೀರಣ್ಣಗೌಡ ಪಾಟೀಲ್, ಶ್ರೀ ಹಳ್ಳಿಕೇರಿ, ಶ್ರೀ ಕೆ. ಎಫ್. ಪಾಟೀಲ್ ಮೊದಲಾದವರು ಕರನಿರಾಕರಣ ಚಳುವಳಿ ಮಾಡಿದರು. ಕೊಡಗಿನಲ್ಲಿ ಶ್ರೀ ಬೆಳ್ಳಿಯಪ್ಪ, ಶ್ರೀ ಸಿ. ಎಂ. ಪೂಣಚ್ಚ ಈ ಚಳುವಳಿಯನ್ನು ನಡೆಸಿದರು. ಸಿರಿಸಿ, ಸಿದ್ಧಾಪುರದ ಚಳುವಳಿಗೆ ಹಳೆಯ ಮೈಸೂರಿನಿಂದಲೂ ಸಾಕಷ್ಟುಮಂದಿ ಸತ್ಯಾಗ್ರಹಿಗಳು ಹೋಗಿದ್ದರು. ಈ ಸತ್ಯಾಗ್ರಹ ಇತಿಹಾಸ ಪ್ರಸಿದ್ಧವಾಯಿತು.

ಜವಹರಲಾಲ ನೆಹರೂ ಅವರ ಮೈಸೂರು ಪ್ರವಾಸ

ಪಂಡಿತ ನೆಹರೂ ಅವರು ತಮ್ಮ ಪತ್ನಿ ಕಮಲಾನೆಹರು ಅವರೊಡನೆ ಮೈಸೂರು ರಾಜ್ಯದಲ್ಲಿ ಪ್ರವಾಸ ಕೈಕೊಂಡರು. 31–5–1931 ರಂದು ಅವರು ಮೈಸೂರಿಗೆ ಬಂದಾಗ ಜನತೆಯನ್ನು ಕುರಿತು ಹೀಗೆ ಹೇಳಿದರು: "ಮೈಸೂರಿನವರೆ! ಜವಾಬ್ದಾರಿ ಸರ್ಕಾರ ಸ್ಥಾಪನೆಗೆ ನೀವು ಎಳ್ಳಷ್ಟೂ ಪ್ರಯತ್ನ ಮಾಡಿಲ್ಲ. ನೀವು ಪ್ರಯತ್ನ ಪಡದಿದ್ದರೆ ಹೊರಗಿನವರು ನಿಮ್ಮ ಸಹಾಯಕ್ಕೆ ಬರುವರೆ ?"

ಬೆಂಗಳೂರಿನಲ್ಲಿ ನೆಹರೂ ಅವರಿಗೆ ಬಿನ್ನವತ್ತಳೆ ಅರ್ಪಿಸಿದಾಗ ಅವರು ಕೊಟ್ಟ ಉತ್ತರ ಇದು: "ನಮಗೆ ಸ್ವಾತಂತ್ರ್ಯವು ಇಂದೇ ಬರುವುದೋ ನಾಳೆ ಬರುವುದೋ ನಾನು ಹೇಳಲಾರೆ. ಆದರೆ ಸ್ವಾತಂತ್ರ್ಯವನ್ನು ಸಂಪಾದಿಸಿಕೊಳ್ಳುವ ಶಕ್ತಿಯಂ ನಮಗಿದೆ ಎಂಬುದು ನನಗೆ ಗೊತ್ತಿದೆ. ಲಾಯರುಗಳ ಯುಕ್ತಿವಾದದಿಂದ ಸ್ವರಾಜ್ಯವು ಬರುವುದಿಲ್ಲ; ಜಯ ಜಯಕಾರಗಳಿಂದ ಬರುವುದಿಲ್ಲ; ಆದರೆ ಸ್ಥಿರವಾದ ಕಾರ್ಯಕ್ರಮಗಳಿಂದ ಬರುವುದು. ನಮಗೆ ಧೈರ್ಯ ಸಾಹಸಗಳು ಬೇಕು. 'ಬುಲ್‌ಡಾಗಿ'ಗಿರುವ ಪಟ್ಟುದಲೆಯು ನಮಗೆ ಬೇಕು. ನೀವುಗಳು ಶಕ್ತಿಯನ್ನು ಶೇಖರಿಸಿಕೊಳ್ಳಿ. ಮುಂದೆ ದೇಶಮಾತೆಯು ನಿಮ್ಮನ್ನು ಕರೆದರೆ ನೀವು ಸಿದ್ಧರಾಗಿರಬೇಕು. ಇದೇ ನನ್ನ ಪ್ರಾರ್ಥನೆ."

ನೆಹರೂರವರ ಮಾತುಗಳು ಮೈಸೂರಿನವರು ರಾಜಕೀಯವಾಗಿ ಮಾಡಬೇಕಾದ ಕೆಲಸಗಳ ಕಡೆಗೆ ತೋರ್ಬೆರಳಾಗಿದ್ದುವು. ಅಂದಿನ ಕಾರ್ಯಕರ್ತರಿಗೆ ಮುಂದೆ ಕೈಗೊಳ್ಳಬೇಕಾದ ಸಂಘಟನೆ, ಕಾರ್ಯಯೋಜನೆಗಳ ಬಗೆಗೆ ಸುಳುಹು ದೊರೆತಂತಾಯಿತು. ನೆಹರೂರವರ ಪ್ರವಾಸ ಮೈಸೂರಿನ ಜನರಲ್ಲಿ ಜಾಗೃತಿ ಉಂಟುಮಾಡುವಲ್ಲಿ ಸಾಕಷ್ಟು ಯಶಸ್ವಿಯಾಯಿತು.

ಇರ್ವಿನ್ ನಾಲಾ ರೈತರ ಚಳುವಳಿ

ಮಂಡ್ಯ ಜಿಲ್ಲೆಯ ಗೆಜೆಟ್ಟಿಯರ್‌ನಲ್ಲಿ 'ಬೇಸಾಯಗಾರರ ಚಳುವಳಿ' ಎಂದು ಪ್ರಚಾರವಾದ ಇರ್ವಿನ್ ನಾಲಾ ರೈತರ ಚಳುವಳಿ ಶ್ರೀಯುತರಾದ ಎಚ್. ಕೆ. ವೀರಣ್ಣಗೌಡ ಮತ್ತು ಎಚ್. ಕೆ. ಪುಟ್ಟಣ್ಣನವರ ನೇತೃತ್ವದಲ್ಲಿ ನಡೆಯಿತು. ಅದು ಅತ್ಯಂತ ಸೌಮ್ಯವಾಗಿ, ಅನುಕರಣೀಯವಾಗಿ, ನಡೆದ ಹೊಸ ಮಾದರಿಯ ಚಳುವಳಿ. ಆ ಕಾಲಕ್ಕೆ ಅದು ಮಂಡ್ಯ ತಾಲ್ಲೂಕಿನಲ್ಲಿ ನಡೆದ ದೊಡ್ಡ ಘಟನೆ, ಸುಮಾರು 4,000

ರೈತರು ಅದರಲ್ಲಿ ಭಾಗವಹಿಸಿ ಮದ್ದೂರಿನಿಂದ ಬೆಂಗಳೂರಿನವರೆಗೆ ಕಾಲುನಡಿಗೆಯಲ್ಲಿ ಪ್ರಯಾಣ ಮಾಡಿ ದಿವಾನರನ್ನು ಕಂಡು ಜಯಶೀಲರಾದ ಪ್ರಸಂಗ ಅದು.

ಅದಕ್ಕೆ ಮುಖ್ಯವಾಗಿ ಎರಡು ಕಾರಣಗಳು : (1) ಇರ್ವಿನ್ ನಾಲಾ (ಈಗಿನ ವಿಶ್ವೇಶ್ವರಯ್ಯ ನಾಲೆ) ಪ್ರದೇಶದಲ್ಲಿ ಬ್ಲಾಕ್ ಸಿಸ್ಟಂನಲ್ಲಿ ಬೆಳೆ ತೆಗೆಯಬೇಕೆಂದು ಎಂ. ವಿಶ್ವೇಶ್ವರಯ್ಯನವರು ಸಲಹೆ ಮಾಡಿದ್ದರು. ಸಲಹೆಯನ್ನು ವ್ಯವಸಾಯ ಇಲಾಖೆಯ ನಿರ್ದೇಶಕರಾಗಿದ್ದ ಡಾ॥ ಲೆಸ್ಲಿ ಕೋಲ್ಮನ್ ಸಮರ್ಥಿಸಿದ್ದರು.ಅದು ಕೂಡದು, ಯಾವಾಗ ಬೇಕಾದರೂ ಬೆಳೆಯಲು ರೈತರಿಗೆ ಅವಕಾಶವಿರಬೇಕು. ಮತ್ತು ವ್ಯವಸಾಯ ಇಲಾಖೆಯ ತಜ್ಞರಾದ ಡಾ॥ ಬಿ. ನರಸಿಂಹ ಅಯ್ಯಂಗಾರ್ಯರು ಸಲ್ಲಿಸಿದ್ದ ಒಂಬತ್ತು ವಿಧಿಗಳ ಪದ್ಧತಿಯ ವರದಿಯನ್ನು ಜಾರಿಗೆ ತರಬೇಕು ಎಂಬುದು ರೈತರ ಬೇಡಿಕೆಗಳು. (2) ಕಂಟ್ರಿಬ್ಯೂಷನ್ನಿನ ಮೇಲೆ ವಿಧಿಸಿದ್ದ ಬಡ್ಡಿಯನ್ನು ವಜಾ ಮಾಡಬೇಕು, ಹತ್ತು ವರ್ಷಗಳ ಕಾಲದಲ್ಲಿ ಕಂತಿನ ಮೇಲೆ ಕಂಟ್ರಿಬ್ಯೂಷನ್ ಕೊಡುವುದಕ್ಕೆ ಒಪ್ಪಿಕೊಳ್ಳಬೇಕೆಂಬುದು ರೈತರ ಮತ್ತೊಂದು ಬೇಡಿಕೆ.

ವ್ಯವಸಾಯದ ದೃಷ್ಟಿಯಿಂದ ಉಪಯುಕ್ತವಾಗಿದ್ದ ನರಸಿಂಹ ಅಯ್ಯಂಗಾರ್ಯರ ವರದಿಯನ್ನು ಸರಕಾರ ರಹಸ್ಯವಾಗಿ ಇಟ್ಟುಕೊಂಡಿತು. ಅದನ್ನು ಎಕ್ಸಿಕ್ಯುಟಿವ್ ಇಂಜಿನಿಯರ್ ಆಫೀಸಿನಲ್ಲಿದ್ದ ಎಂ. ಎಲ್. ಲಿಂಗಣ್ಣನವರಿಂದ ಉಪಾಯವಾಗಿ ಪಡೆದುಕೊಂಡು ಎಚ್. ಕೆ. ವೀರಣ್ಣಗೌಡರು ಮತ್ತು ಅವರ ಸ್ನೇಹಿತರು ಜನರಿಗೆ ಪ್ರಚಾರ ಮಾಡಿಬಿಟ್ಟರು. ಅದಕ್ಕಾಗಿ ಮಂತ್ರಿತಾಳೇಶ್ವರನ ತೋಪಿನಿಂದ ಪ್ರಚಾರ ಸಭೆ ಪ್ರಾರಂಭವಾಯಿತು. ಚಿಕ್ಕಅರಸಿನ ಕೆರೆ, ಗೆಜ್ಜಲಗೆರೆ, ಗೌಡಗೆರೆ, ಹೊಳಲು, ಕೆರಗೋಡು, ಮದ್ದೂರು, ಮಂಡ್ಯ, ಮಳವಳ್ಳಿ, ಶ್ರೀರಂಗ ಪಟ್ಟಣ, ಪಾಂಡವಪುರ, ಮುಡುಕುತೊರೆ ಜಾತ್ರೆ, ಚುಂಚನಕಟ್ಟೆಗಳಲ್ಲೆಲ್ಲ 14 ತಿಂಗಳ ಕಾಲ ನೂರಾರು ಸಭೆಗಳನ್ನು ಕೂಡಿಸಿ, ಜನರ ಕಷ್ಟ ನಷ್ಟಗಳನ್ನು ಸಂಗ್ರಹಿಸಿ, ಆ ಬಗೆಗೆ ಸರಕಾರವನ್ನು ಒತ್ತಾಯಿಸಲು ಜನರನ್ನು ಸಿದ್ಧಪಡಿಸಲಾಯಿತು.

31–12–1931 ರಂದು ಸುತ್ತಮುತ್ತಲ ಹಳ್ಳಿಗಳಿಂದ ಬಂದಿದ್ದ ಮಂಡ್ಯ ತಾಲ್ಲೂಕಿನ 4000 ರೈತರು ಕಾಲುನಡಿಗೆಯಲ್ಲಿ ಸಾಲಾಗಿ ಬೆಂಗಳೂರಿಗೆ ಶಿಸ್ತಿನಿಂದ ಹೊರಟರು. ಮಲ್ಲಿಗೆರೆ ಪಾಪಣ್ಣನವರ ನೇತೃತ್ವದಲ್ಲಿ 100 ಜನ ಸೈಕಲ್ ಸವಾರರು ಸಾಲುಗಳನ್ನು ನಿಯಂತ್ರಿಸುತ್ತ ಸಾಗಿದರು. ಮಂಡ್ಯದ ಶ್ರೀ ವೆಂಕಟಗಿರಿಯವರು ಜನರ ಉಪಯೋಗಕ್ಕಾಗಿ ಗಾಡಿಯಲ್ಲಿ ಅಂಗಡಿ ತೆರೆದಿದ್ದರು. ಹೆದ್ದಾರಿಯಲ್ಲಿ ಪ್ರಯಾಣ ಸಾಗಿತು. ಅದು, ಹೋಗಿ ಬರುವ ಪ್ರಯಾಣಿಕರಿಗೆಲ್ಲ ಹೊಸ ಸುದ್ದಿ. ರೈತರು 4–1–1932 ರಂದು ಅಠಾರ ಕಚೇರಿಯಲ್ಲಿ ದಿವಾನ್ ಮಿರ್ಜಾರನ್ನು ಕಂಡು ತಮ್ಮ ಬೇಡಿಕೆಗಳನ್ನು ಒಪ್ಪಿಸಿದರು. ಸಕಾರಣವಾಗಿದ್ದುದರಿಂದ ರೈತರ ಬೇಡಿಕೆಗಳನ್ನು ದಿವಾನರು ಒಪ್ಪಿಕೊಂಡರು. ರೈತರಿಗೆ ಅತ್ಯಂತ ಸಂತೋಷವಾಯಿತು. ಅದೇ ಶಿಸ್ತಿನಿಂದ, ಶಾಂತಿಯಿಂದ ರೈತರು ಹಿಂತಿರುಗಿದರು.

ಈ ಚಳುವಳಿಗೆ ಚಾಲನೆ ಕೊಟ್ಟವರು ಇಂಡವಾಳಿನ ಶ್ರೀ ಎಚ್. ಹೊನ್ನಯ್ಯ ಮತ್ತು ಹೊಸಗೇನಹಳ್ಳಿ ಶ್ರೀ ಕೆ. ಪುಟ್ಟಣ್ಣನವರು. ಅದನ್ನು ವ್ಯವಸ್ಥಿತವಾಗಿ ನಡೆಸಿದವರು ಶ್ರೀ ಎಚ್. ಕೆ. ವೀರಣ್ಣಗೌಡರು. ಅದೇ ಸಂದರ್ಭದಲ್ಲಿ "ಇರ್ವಿನ್ ನಾಲೆಯ ರೈತರ ಕಷ್ಟಗಳು" ಎಂಬ ಪುಸ್ತಕವನ್ನು ಪ್ರಕಟಿಸಲಾಯಿತು.

ಭೇಟಿಯ ಸಮಯದಲ್ಲಿ ರೈತರ ಕುಂದುಕೊರತೆಗಳನ್ನು ಕಣ್ಣಾರ ನೋಡಲು ದಿವಾನರು ತಾವೇ ಒಮ್ಮೆ ಬರುವುದಾಗಿ ಭರವಸೆ ಕೊಟ್ಟಿದ್ದರು. ಆ ದಿನ ಮಂಡ್ಯ ದಲ್ಲಿ 10,000 ಕ್ಕೆ ಮೇಲ್ಪಟ್ಟು ಜನ ಸೇರಿದ್ದರು. ಅದೇ ಸಂದರ್ಭದಲ್ಲಿ ಕೃಷ್ಣರಾಜ ಸಾಗರದ ಮುಖದ್ವಾರದ ಮಂಟಪದಲ್ಲಿರುವ ಟಿಪ್ಪುಸುಲ್ತಾನರ ಹಳೆಯ ಶಾಸನದ ಭಾಷಾಂತರವನ್ನು ಮಾಡಿಸಿದ ಪ್ರತಿಗಳನ್ನು ಜನಗಳಿಗೆ ಹಂಚಿಸಿದರು. ಅದರಲ್ಲಿ ಸರಕಾರ ಸಿಟ್ಟು ಮಾಡಿಕೊಳ್ಳುವಂತೆ ರೈತರು ಕೊಡಬೇಕಾದ ಕಂದಾಯದ ವಿಷಯ ವಿತ್ತು. ಅಂಥದನ್ನು ಜನರ ಗಮನಕ್ಕೆ ತಂದವರ ಮೇಲೆ ಸರಕಾರಕ್ಕೆ ಕೋಪಬಂದಿತು. ದಿವಾನರು ಬಂದು ಏನೂ ಮಾತಾಡದೆ ಮೈಸೂರಿಗೆ ತೆರಳಿದರು. ಅವಕ್ಕೆ ಮೊದಲು ಒಂದು ವಾರದವರೆಗೆ ಮಂಡ್ಯ ನಗರ ಮತ್ತು ಒಂದು ಮೈಲಿ ಸುತ್ತಳತೆಯಲ್ಲಿ ಐದು ಮಂದಿಗಿಂತ ಹೆಚ್ಚು ಜನ ಸೇರಬಾರದೆಂದು ಮ್ಯಾಜಿಸ್ಟ್ರೇಟರು ನಿಷೇದಾಜ್ಞೆ ಹೊರಡಿ ಸಿದ್ದರು. ಅದನ್ನು ಲೆಕ್ಕಕ್ಕಿಟ್ಟುಕೊಳ್ಳದೆ 10,000 ಜನರು ಸೇರಿದ್ದರು.

ಆಜ್ಞೋಲಂಘನೆಯ ನೆಪದಿಂದ ಶ್ರೀ ಎಚ್. ಕೆ. ವೀರಣ್ಣಗೌಡ ಮೊದಲಾದ ವರ ಮೇಲೆ ಕ್ರಿಮಿನಲ್ ಕೇಸು ದಾಖಲೆ ಮಾಡಿದರು. ಇದರಿಂದ ಸರಕಾರದ ಮೇಲೆ ಜನರಿಗೆ ಅಸಮಾಧಾನವಾಯಿತು.

ಇರ್ವಿನ್ ನಾಲಾ ರೈತರ ಚಳುವಳಿಯು ಮಂಡ್ಯ ತಾಲ್ಲೂಕಿಗೆ ಸಂಬಂಧಿಸಿದ ಗಮನಾರ್ಹವಾದ ಸಂಘಟನಾ ಕಾರ್ಯಕ್ರಮವಾಗಿತ್ತು. ರೈತರನ್ನು, ಜನಸಾಮಾನ್ಯ ರನ್ನು ಚಳುವಳಿಗೆ ಸಂಘಟಿಸಬಹುದೆಂಬ ಧೈರ್ಯವನ್ನು ಮುಖಂಡರಿಗೆ ಅದು ತಂದು ಕೊಟ್ಟಿತು. ಅವರಲ್ಲಿ ಭಾಗವಹಿಸಿದ ಮುಖಂಡರೇ ಜನಸಾಮಾನ್ಯರೇ ಮುಂದೆ ಮಂಡ್ಯ ತಾಲ್ಲೂಕಿನ ಶಿವಪುರದಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದ ಕಾರ್ಯಕರ್ತ ರಾದುದು ಒಂದು ವಿಶೇಷ. ಶಿವಪುರ ಅಧಿವೇಶನದ ಸಂಘಟನೆಗೆ ಇರ್ವಿನ್ ನಾಲಾ ರೈತರ ಚಳುವಳಿ ಅಂದಿನ ಮುಖಂಡರಿಗೆ ಸಾಕಷ್ಟು ಸ್ಫೂರ್ತಿ ನೀಡಿದೆ. ಅಷ್ಟು ದೊಡ್ಡ ಪ್ರಮಾಣದ ರೈತರ ಚಳುವಳಿ ಆ ಹಿಂದೆ ಎಂದೂ ನಡೆದಿರಲಿಲ್ಲ.*

---

* ಅದನ್ನು ಜ್ಞಾಪಿಸುವ ರೈತರ ಚಳುವಳಿ 24-11-1977 ರಂದು ನಡೆಯಿತು. ಮಂಡ್ಯ ಜಿಲ್ಲೆಯಿಂದ ಸುಮಾರು 50,000 ಜನರು ಬೆಂಗಳೂರಿಗೆ ಬಂದು ಮುಖ್ಯ ಮಂತ್ರಿಗಳನ್ನು ಕಂಡು "ವರುಣಾ ನಾಲೆ ನಿರ್ಮಾಣ"ವನ್ನು ಪ್ರತಿಭಟಿಸಿದರು. "ಬೆಂಗಳೂರು ಚಲೋ" ಚಳುವಳಿ "ವರುಣಾ ನಾಲಾ ಪ್ರತಿಭಟನಾ ಸಮಿತಿ"ಯ ಮೂಲಕ ನಡೆಯಿತು.

ಮಹಾತ್ಮರ ಹರಿಜನ ನಿಧಿ ಪ್ರವಾಸ

ಮೈಸೂರು ರಾಜ್ಯದಲ್ಲಿ, ಗಾಂಧೀಜಿಯವರಿಗಿಂತ ಮೊದಲೇ, ಶ್ರೀ ಕಲ್ಲೂರು ಸುಬ್ಬರಾಯರು ಹರಿಜನೋದ್ಧಾರ ಕಾರ್ಯಕ್ರಮಗಳಲ್ಲಿ ತೊಡಗಿದ್ದರು. ಅವರನ್ನು 'ಹೊಲೆಯರ ಸುಬ್ಬರಾಯರು' ಎಂದೇ ಜನ ಕರೆಯುತ್ತಿದ್ದರು. ಆದರೆ ಉದ್ದೇಶ ದೊಡ್ಡದಾದರೂ ಅವರದು ಸಣ್ಣ ಪ್ರಮಾಣದ ಪ್ರಯತ್ನವಾಗಿತ್ತು. ಅವರದು ಒಕ್ಕೈಲ ಸಾಹಸ. ಹರಿಜನ ಸಮಸ್ಯೆಯನ್ನು ಗಾಂಧೀಜಿಯವರು ಕೈಗೆತ್ತಿಕೊಂಡ ಮೇಲೆ ಅದು ರಾಷ್ಟ್ರವ್ಯಾಪ್ತಿ ಕಾರ್ಯಕ್ರಮವಾಯಿತು; ಕಾಂಗ್ರೆಸ್ಸಿನ ರಚನಾತ್ಮಕ ಕಾರ್ಯಕ್ರಮಗಳಲ್ಲಿ ಅಗ್ರಮಾನ್ಯವಾದುದಾಯಿತು.

ಹರಿಜನೋದ್ಧಾರ ನಿಧಿಗಾಗಿ ಗಾಂಧೀಜಿಯವರು ದೇಶದ ಎಲ್ಲ ಕಡೆ ಪ್ರವಾಸ ಮಾಡಿದರು. 1934ನೇ ಜನವರಿಯಲ್ಲಿ ಗಾಂಧೀಜಿಯವರು ಮೈಸೂರಿಗೆ ಬಂದು ಶ್ರೀಮನ್ಮಹಾರಾಜರ ಅತಿಥಿಗಳಾಗಿದ್ದರು. 6-1-1934 ರಂದು ತಾವು ತಂಗಿದ್ದ ಮೈಸೂರಿನ 'ಶೇಷಾದ್ರಿ ಭವನ'ವನ್ನು ಬಿಟ್ಟು ಬೆಳಗ್ಗೆ 7 ಘಂಟೆಗೆ ಬೆಂಗಳೂರಿನ ಕಡೆಗೆ ಹೊರಟರು. ಉದ್ದಕ್ಕೂ ಮುಖ್ಯವಾದ ಸ್ಥಳಗಳಲ್ಲಿ ನಿಂತು ಸಂಕ್ಷಿಪ್ತವಾಗಿ ಉಪನ್ಯಾಸ ಮಾಡಿ, ಹರಿಜನ ಕೇರಿಗಳಲ್ಲಿ ಸುತ್ತಾಡಿ, ಕಾಂಗ್ರೆಸ್ ಕಾರ್ಯಕರ್ತರಿಗೆ ಹರಿಜನ ಸಮಸ್ಯೆಗಳ ಬಗೆಗೆ ತಿಳುವಳಿಕೆ ನೀಡಿ, ಹರಿಜನ ನಿಧಿಗಾಗಿ ಹಣ ಸಂಗ್ರಹಿಸಿದರು. ಆಗ ಮೈಸೂರು ಸಂಸ್ಥಾನದಿಂದ 30,000 ರೂಪಾಯಿಗಳ ನಿಧಿಯನ್ನು ಪಡೆದರು.

ಬೇರೆ ಬೇರೆ ಸ್ಥಳಗಳಲ್ಲಿ ಅಸ್ಪೃಶ್ಯತೆಯ ಬಗೆಗೆ ಗಾಂಧೀಜಿಯವರು ಹೇಳಿದ ಮುತ್ತಿನಂತಹ ಮಾತುಗಳು ಹೇಗಿವೆ :

ಮಂಡ್ಯದಲ್ಲಿ: "ಹರಿಜನರನ್ನು ಒಡಹುಟ್ಟಿದವರಂತೆ ಕಾಣಿರಿ." ಮದ್ದೂರಿನಲ್ಲಿ: "ಅಸ್ಪೃಶ್ಯತೆಯನ್ನು ಮೂಲೋತ್ಪಾಟನೆ ಮಾಡಿರಿ." ಸೋಮನಹಳ್ಳಿಯಲ್ಲಿ: "ನಾವೆಲ್ಲ ದೇವರ ಮಕ್ಕಳು. ಅವನ ಕಣ್ಣಿನಲ್ಲಿ ಸಮಾನರು." ಚನ್ನಪಟ್ಟಣದಲ್ಲಿ: "ಅಸ್ಪೃಶ್ಯತಾ ಭೂತವನ್ನು ನಿಮ್ಮ ಹೃದಯಗಳಿಂದ ಹೊರಗಟ್ಟಿರಿ." ಕ್ಲೋಸ್‌ಪೇಟೆಯಲ್ಲಿ: "ಅಸ್ಪೃಶ್ಯತೆ ತೊಲಗುವವರೆಗೆ ಭಾರತಕ್ಕೆ ಮೋಕ್ಷವಿಲ್ಲ."

ಗಾಂಧೀಜಿಯವರ ಪ್ರವಾಸದ ಪ್ರಭಾವದಿಂದ ಮೈಸೂರಿನ ಕಾಂಗ್ರೆಸ್ ಕಾರ್ಯಕರ್ತರು ಹರಿಜನೋದ್ಧಾರ ಕಾರ್ಯಕ್ರಮಗಳನ್ನು ಮುಂದೆ ತಮ್ಮ ರಚನಾತ್ಮಕ ಕಾರ್ಯಕ್ರಮಗಳಲ್ಲಿ ಅಳವಡಿಸಿಕೊಂಡರು.

ದಿವಾನರ ಜನವಿರೋಧಿ ಭಾಷಣ

ಆಂಗ್ಲ ಭಾರತದಲ್ಲಿ ನಡೆಯುತ್ತಿದ್ದ ಸ್ವಾತಂತ್ರ್ಯ ಚಳುವಳಿಯ ಕಾವು, ಆ ಮೂಲಕ ಭಾರತೀಯರಲ್ಲಿ ಬೆಳೆಯುತ್ತಿದ್ದ ದೇಶಭಕ್ತಿಯ ಒಲವು, ಮೈಸೂರು ಸಂಸ್ಥಾನದಲ್ಲಿಯೂ ಕಾಲಕ್ರಮೇಣದಲ್ಲಿ ಕಾಣಿಸಿಕೊಂಡಿತು. ಈ ದಿಸೆಯಲ್ಲಿ ಮೈಸೂರು ಸಂಸ್ಥಾನದ ಅಂದಿನ ಯುವಕರು ವಹಿಸಿದ ಪಾತ್ರ ಗಮನಾರ್ಹವಾದುದು. ಸ್ವಾತಂತ್ರ್ಯ ಚಳುವಳಿಯನ್ನು ತೀವ್ರಗೊಳಿಸುವುದಕ್ಕೆ ಸ್ವಾತಂತ್ರ್ಯ ಯೋಧರನ್ನು

ಸಂಘಟಿಸುವುದಕ್ಕೆ ಅಂದಿನ ಯುವಕರು 1936 ರಲ್ಲಿ 'ಜನ ಜಾಗೃತಿ ಸಂಘ (mass awakners' union)ವನ್ನು ಸ್ಥಾಪಿಸಿದರು. ಶ್ರೀ ಬಿ. ಯಂ. ಶೀನಪ್ಪನವರು ಅದರ ಅಧ್ಯಕ್ಷರಾಗಿದ್ದರು. ಸಂಘದ ಮೂಲಕ ಸಂಸ್ಥಾನದ ಆದ್ಯಂತ ರಾಜಕೀಯ ಪ್ರಚಾರ ತೀವ್ರವಾಗಿ ನಡೆಯಿತು.*

ಪ್ರಪಂಚ ಪರ್ಯಟನೆ ಮುಗಿಸಿ ಭಾರತಕ್ಕೆ ಹಿಂದಿರುಗಿದ ಶ್ರೀ ಜವಹರಲಾಲ್ ನೆಹರು ಅವರು "ಆಲ್ ಇಂಡಿಯ ಸಿವಿಲ್ ಲಿಬರ್ಟೀಸ್ ಯೂನಿಯನ್"ಅನ್ನು ಸ್ಥಾಪಿಸಿ, ಭಾರತದ ಎಲ್ಲ ಕಡೆಗಳಲ್ಲಿ ಅದರ ಶಾಖೆಗಳನ್ನು ತೆರೆಯಬೇಕೆಂದು ಆದೇಶ ನೀಡಿದರು. ಅವರ ಆದೇಶದಂತೆ 'ಜನಜಾಗೃತಿ ಸಂಘ'ದ ಆಶ್ರಮದಲ್ಲಿ "ಮೈಸೂರ್ ಸಿವಿಲ್ ಲಿಬರ್ಟೀಸ್ ಯೂನಿಯನ್" ಪ್ರಾರಂಭವಾಯಿತು. ಅದರ ಮೂಲಕ ಅನೇಕ ತಾಲ್ಲೂಕು ಮತ್ತು ಗ್ರಾಮ ಸಮಿತಿಗಳು ಸ್ಥಾಪನೆಯಾದವು. ಪಟ್ಟಣವಾಸಿಗಳು, ಗ್ರಾಮಸ್ಥರು, ವಿದ್ಯಾರ್ಥಿಗಳು, ಮುಖ್ಯವಾಗಿ ವಿವಿಧ ಕ್ಷೇತ್ರಗಳಿಗೆ ಸಂಬಂಧಿಸಿದ ಯುವಕರು ಅಧಿಕ ಸಂಖ್ಯೆಯಲ್ಲಿ ಸ್ವಾತಂತ್ರ್ಯ ಚಳುವಳಿಗೆ ದುಮುಕಿದರು. ಮೈಸೂರು ಸಂಸ್ಥಾನದಲ್ಲೆಲ್ಲ ಸ್ವಾತಂತ್ರ್ಯ ಚಳವಳಿಯ ಅಂದೋಲನವೇ ಪ್ರಾರಂಭವಾಯಿತು. ಆ ಅಂದೋಲನದ ಪ್ರವಾಹದ ಕಡೆಗೆ ವಿಧಿಯಿಲ್ಲದೆ ಸರಕಾರ ಕಣ್ಣು ತೆರೆಯಬೇಕಾಯಿತು. ಅದನ್ನೆಲ್ಲ ಹತ್ತಿಕ್ಕಲು ಸರಕಾರ ನಾನಾ ಮಾರ್ಗಗಳನ್ನು ಅನುಸರಿಸಿತು.

ಆ ಹಿನ್ನಲೆಯಲ್ಲಿಯೇ ದಿವಾನ್ ಮಿರ್ಜಾರವರು ದಿನಾಂಕ 15-7-1937 ರಂದು ಕ್ಲೋಸ್‌ಪೇಟೆ (ಈಗಿನ ರಾಮನಗರ)ಯಲ್ಲಿ ಜನವಿರೋಧಿಯಾದ ಭಾಷಣವೊಂದನ್ನು ಮಾಡಿದ್ದು. ಅದು ಅವರಿಗೆ ಪುರಸಭೆಯವರು ಬಿನ್ನವತ್ತಳೆ ಅರ್ಪಿಸುವ ಸಮಾರಂಭವಾಗಿತ್ತು. ಜವಾಬ್ದಾರಿ ಸರಕಾರಕ್ಕೆ ಇಷ್ಟವಿಲ್ಲದ ಚಳವಳಿಗಾರರನ್ನು ನಿಕೃಷ್ಟವಾಗಿ ಕಾಣುತ್ತಿದ್ದ ದಿವಾನರು ಚಳವಳಿಗಾರರ ಮೇಲೆ ಜನರನ್ನು ಎತ್ತಿ ಕಟ್ಟುವ ಉದ್ದೇಶದಿಂದ, ಸ್ವಾತಂತ್ರ್ಯ ಪ್ರೇಮಿಗಳಿಗೆ ಸಿಟ್ಟು ಬರುವ ಹಾಗೆ ಉಗ್ರವಾಗಿ ಭಾಷಣಮಾಡಿದರು. ಅವರ ಅಂದಿನ ಭಾಷಣದ ಸಾರಾಂಶ ಹೀಗಿದೆ :

"ಸಾರ್ವಜನಿಕ ಸಂಸ್ಥೆಗಳಲ್ಲಿ ಕೆಲವರು ಅತೃಪ್ತಿಯ ಜನರು ಸಾಮಾನ್ಯವಾಗಿ ಇದ್ದೇ ಇರುತ್ತಾರೆ. ಅವರ ಗುರಿಯೆಲ್ಲಾ ತಾವು ಹೆಚ್ಚಳವನ್ನು ಪಡೆಯಬೇಕೆಂಬುದೊಂದೇ. ಪತ್ರಿಕೆಗಳಲ್ಲಿ ತಮ್ಮ ಹೆಸರು ಪ್ರಕಟವಾಗುವುದಕ್ಕೆ ಅವಕಾಶವನ್ನು ಹೆಚ್ಚು ಹೆಚ್ಚಾಗಿ ಕಲ್ಪಿಸಿಕೊಂಡಷ್ಟೂ ತಮ್ಮ ಘನತೆಯೂ ಹೆಚ್ಚುತ್ತದೆ ಎಂಬುದು ಅವರ ಭಾವನೆ. ಮಹಾಜನರಿಗೆ ನಿಜವಾದ ಸೇವೆಯನ್ನು ಸಮರ್ಪಿಸಿ ದೊಡ್ಡ ಹೆಸರನ್ನು

---

* ಮೈಸೂರು ಕಾಂಗ್ರೆಸ್ ಸ್ಥಾಪನೆಯಾದ ಮೇಲೆ 'ಜನ ಜಾಗೃತ ಸಂಘ'ದ ಚಟುವಟಿಕೆ ನಿಂತುಹೋಯಿತು. ಕೆಲವರ ಹೊರತು ಅದರ ಅನೇಕ ಸದಸ್ಯರು ಮುಂದೆ ಕಮ್ಯೂನಿಸಂನತ್ತ ವಾಲಿದರು,

ಪಡೆಯುವುದಕ್ಕೆ ಅವರಿಗೆ ಮನಸ್ಸಿರುವುದಿಲ್ಲ. ಅದಕ್ಕೆಲ್ಲಾ ದುಡಿಯಲು ಅವರಿಗೆ ಮನಸ್ಸು ಬರುವುದಿಲ್ಲ. ಆಗುವ ಕೆಲಸಕ್ಕೆ ವೃಥಾ ಆಡಚಣೆಯನ್ನು ತಂದೊಡ್ಡಿ ದೊಡ್ಡತನವನ್ನು ಸಂಪಾದಿಸಬೇಕೆಂಬುದು ಅವರ ಕುತೂಹಲ. ಅಷ್ಟೇ ಅಲ್ಲ, ಜನರಲ್ಲಿ ಅತೃಪ್ತಿಯೂ ದ್ವೇಷಾಸೂಯೆಗಳೂ ಉಂಟಾಗುವಂತೆ ಮಾಡುವುದೂ ಮರುಳುತನದ ಮಾತುಗಳಿಂದಲೋ ಅಥವಾ ಅವಿನಯದ ಮಾತುಗಳಿಂದಲೋ ಜನರ ಗಮನವನ್ನು ಸೆಳೆಯುವುದೂ ಸಹ ಅವರು ದೊಡ್ಡತನವನ್ನು ಗಳಿಸಲು ಅನುಸರಿಸುವ ಮಾರ್ಗಗಳು. ಇದೊಂದು ವಿಚಿತ್ರವಾದ ಮಹತ್ವದ ಆಕಾಂಕ್ಷೆ.

ಇಂಥವರಿಗೆ ಮಾತ್ರ ಪ್ರೋತ್ಸಾಹ ಕೊಡಬೇಡಿ. ಇಂಥವರು ಸದಸ್ಯರಾಗಿಬಿಟ್ಟರೆ ಅದು ಆಯಾ ಸಂಸ್ಥೆಯ ದುರದೃಷ್ಟ. ಅದಕ್ಕೂ ಅವರಿಂದ ಭೂಷಣವಿಲ್ಲ, ಸ್ವದೇಶಕ್ಕಂತೂ ಅವರ ವರ್ತನೆಯು ಮಾನವನ್ನು ತರುವುದಿಲ್ಲ."

ದಿವಾನರು ತಮ್ಮ ಭಾಷಣದಲ್ಲಿ ರಾಜಕಾರಣಿಗಳನ್ನೂ ವಕೀಲರನ್ನೂ ತುಚ್ಛವಾಗಿ ಟೀಕಿಸಿದರು. ಅವರ ಭಾಷಣದ ಮೋಡಿಗೆ ಸಾರ್ವಜನಿಕರು ಮೋಸಹೋಗಲಿಲ್ಲ. ದಿವಾನರು ಜನರ ಮನಸ್ಸನ್ನು ಗೆಲ್ಲುವ ಬದಲಾಗಿ ಜನರ ಅತೃಪ್ತಿಯನ್ನೂ ವಿರೋಧವನ್ನೂ ಹಿಂದಿಗಿಂತ ಹೆಚ್ಚಾಗಿ ಗಳಿಸಿಕೊಂಡರು. ಅಂದಿನ ದಿವಾನರ ಭಾಷಣವನ್ನು ಜನಜಾಗೃತಿ ಸಂಘ, ಇತರ ರಾಜಕೀಯ ಪಕ್ಷಗಳು, ಆಗಿನ ಸರಕಾರವನ್ನು ಸೌಮ್ಯವಾಗಿ ಟೀಕಿಸುತ್ತಿದ್ದ ಸೌಮ್ಯವಾದಿಗಳು ಎಲ್ಲರೂ ಒಟ್ಟಾಗಿ ಖಂಡಿಸಿದರು. ಅನೇಕ ಕಡೆಗಳಲ್ಲಿ ಬಹಿರಂಗ ಸಭೆಗಳನ್ನು ಏರ್ಪಡಿಸಿ ಸಾರ್ವಜನಿಕ ಸ್ಥಳಗಳಲ್ಲಿ ದಿವಾನರ ಭಾಷಣದ ಪ್ರತಿಗಳನ್ನು ಸುಡಲಾಯಿತು. ಎಲ್ಲರೂ ದಿವಾನರ ಮನೋಧರ್ಮವನ್ನು ಸರಕಾರದ ಸೊಕ್ಕನ್ನು ಉಗ್ರವಾಗಿ ವಿರೋಧಿಸಿದರು. ಮೆರವಣಿಗೆಗಳನ್ನು ತಡೆಗಟ್ಟಲು ಸರಕಾರ ಬೆಂಗಳೂರು ನಗರದಲ್ಲಿ 45ನೇ ಸೆಕ್ಷನ್ ಅನ್ನು ಜಾರಿಗೆ ತಂದಿತು. ಆದರೂ ಸಭೆಗಳು ನಿಲ್ಲಲಿಲ್ಲ. ಜನಜಾಗೃತಿ ಸಂಘದ ಆಶ್ರಯದಲ್ಲಿ ಸಾರ್ವಜನಿಕ ಸಭೆಯ ಮುಖಂಡತ್ವವನ್ನು ವಹಿಸಿದ್ದ ಶ್ರೀ ಬಿ. ಯಂ. ಶೀನಪ್ಪನವರನ್ನು ಸರಕಾರ ಬಂಧಿಸಿತು. ಇದರಿಂದ ಉದ್ವಿಗ್ನರಾದ ಜನರು ಹೆಚ್ಚುಹೆಚ್ಚಾಗಿ ಸಾರ್ವಜನಿಕ ಸಭೆಗಳನ್ನು ಏರ್ಪಡಿಸಿ ಸರಕಾರದ ದಮನ ನೀತಿಯನ್ನು ಟೀಕಿಸಲು ಪ್ರಾರಂಭಿಸಿದರು. ಇವನ್ನೆಲ್ಲ ತಪ್ಪಿಸಲು ಸರಕಾರ 124ನೇ ಸೆಕ್ಷನ್ ಜಾರಿಗೆ ತಂದಿತು. ಇದರಿಂದ ಚಳುವಳಿ ಸಂಖ್ಯೆ ಹೆಚ್ಚಾಯಿತೇ ಹೊರತು ಸರಕಾರ ಭಾವಿಸಿದಂತೆ ಕಡಮೆಯಾಗಲಿಲ್ಲ. ದಿವಾನರ ಭಾಷಣ ಇಡೀ ಸಂಸ್ಥಾನವನ್ನೇ ಹೊಡೆದೆಬ್ಬಿಸಿತು. ಜನರು ರಾಜಕೀಯವಾಗಿ ಸಂಘಟಿತರಾಗಲು ಮೊದಲು ಮಾಡಿದರು. ಮೈಸೂರು ಸಂಸ್ಥಾನದ ರಾಜಕೀಯದ ಇತಿಹಾಸವನ್ನೇ ಬದಲಾಯಿಸುವುದಕ್ಕೆ ಈ ಘಟನೆಯೂ ಒಂದು ಪ್ರಮುಖ ಕಾರಣವಾಯಿತು.

ನಾಯಕರುಗಳ ದಸ್ತಗಿರಿ

ದೊಡ್ಡಬಳ್ಳಾಪುರದಲ್ಲಿ ರಾಜದ್ರೋಹಕರವಾದ ಭಾಷಣ ಮಾಡಿದರೆಂಬ ಕಾರಣದಿಂದ ಕಾಂಗ್ರೆಸ್ ಧುರೀಣರಾದ ಶ್ರೀ ಕೆ. ಟಿ. ಭಾಷ್ಯಂ ಅಯ್ಯಂಗಾರ್

ಮತ್ತು ದೊಡ್ಡಬಳ್ಳಾಪುರದ ಶ್ರೀ ತಿಮ್ಮಾರೆಡ್ಡಿಯವರನ್ನು 15-10-1937ರಂದು ರಾತ್ರಿ ಪೋಲೀಸರು ದಸ್ತಗಿರಿ ಮಾಡಿದರು. ಈ ಸುದ್ದಿ ಗಾಳಿಯ ವೇಗದಲ್ಲಿ ದೇಶದಲ್ಲೆಲ್ಲಾ ಹಬ್ಬಿತು. ಕೂಡಲೆ ಅವರ ಬಿಡುಗಡೆಗಾಗಿ ಸಭೆಗಳು ನಡೆದವು. ಎಲ್ಲರೂ ಸರಕಾರವನ್ನು ದೂರುವುದಕ್ಕೆ ಮೊದಲು ಮಾಡಿದರು. 8-11-19 37 ರಂದು ದಸ್ತಗಿರಿಯಾದವರಿಗೆ ಸಿಟಿ ಮ್ಯಾಜಿಸ್ಟ್ರೇಟರು 18 ತಿಂಗಳ ಕಠಿಣ ಶಿಕ್ಷೆ, 1,000 ರೂ.ಗಳ ದಂಡ ವಿಧಿಸಿದರು. ದಂಡ ಕೊಡಲು ತಪ್ಪಿದರೆ ಇನ್ನೂ 3 ತಿಂಗಳು ಕಠಿಣ ಶಿಕ್ಷೆ ಎಂದು ಆಜ್ಞೆಯಾಯಿತು. 21-11-1937ರಂದು ದಸ್ತಗಿರಿಯಾದವರನ್ನು ಬೆಂಗಳೂರು ಸೆಂಟ್ರಲ್ ಜೈಲಿನಿಂದ ಬೇರೆ ಬೇರೆ ಕಡೆಗೆ ಸ್ಥಳಾಂತರಿಸಿದರು. ಇದನ್ನೆಲ್ಲ ಕಂಡ ಜನರಿಂದ ಸರಕಾರಕ್ಕೆ ಪ್ರತಿಭಟನೆ ಹೆಚ್ಚಾಯಿತು.

ನಾಯಕರುಗಳ ದಸ್ತಗಿರಿಯನ್ನು, ಸರಕಾರದ ದಬ್ಬಾಳಿಕೆಯನ್ನು ಪ್ರತಿಭಟಿಸುವುದಕ್ಕೋಸ್ಕರ 19-10-1937 ರಂದು ಮೈಸೂರು ಜಗನ್ಮೋಹನ ಬಂಗಲೆಯಲ್ಲಿ ನಡೆಯುತ್ತಿದ್ದ 53ನೆಯ ಪ್ರಜಾಪ್ರತಿನಿಧಿ ಸಭೆಯಲ್ಲಿ ಅಧ್ಯಕ್ಷರಾದ ದಿವಾನರು ಭಾಷಣ ಮಾಡುತ್ತಿದ್ದಾಗ ಸುಮಾರು 90 ಮಂದಿ ಸದಸ್ಯರು ಸಭಾತ್ಯಾಗ ಮಾಡಿದರು. ಇಂಥ ಪ್ರತಿಭಟನೆ ಪ್ರಭುತ್ವಕ್ಕೆ ಹೊಸ ಅನುಭವವಾಯಿತು.

ನಾರಿಮನ್ ಪ್ರಕರಣ

1937ನೆಯ ಅಕ್ಟೋಬರಿನಲ್ಲಿ ನಾರಿಮಾನ್ ಪ್ರಕರಣ ನಡೆಯಿತು.

ಶ್ರೀ ಕೆ. ಎಫ್ ನಾರಿಮನ್ ಬೊಂಬಾಯಿಯ ನಗರ ಸಭೆಯ ಅಧ್ಯಕ್ಷರೂ ಜನಪ್ರಿಯ ಕಾಂಗ್ರೆಸ್ ಮುಖಂಡರೂ ಆಗಿದ್ದರು. ದಸರಾ ಸಮಯದಲ್ಲಿ ಮೈಸೂರು, ಬೆಂಗಳೂರುಗಳಲ್ಲಿ ಸ್ಥಳೀಯ ಸಂಸ್ಥೆಗಳಲ್ಲಿ ಕಾಂಗ್ರೆಸ್ ಪರವಾಗಿ ಉಪನ್ಯಾಸ ಮಾಡಲು ಆಹ್ವಾನದ ಮೇರೆಗೆ ಆಗಮಿಸಿದ್ದರು. ಬೆಂಗಳೂರು ಬಸಪ್ಪಾ ಪಾರ್ಕಿನಲ್ಲಿ ಭಾರಿ ಸಭೆಯ ಮುಂದೆ ಅವರು ಭಾಷಣ ಮಾಡಲು ವೇದಿಕೆಯನ್ನು ಏರುತ್ತಿದ್ದಂತಯೇ ಪೋಲೀಸ್ ಇನ್‌ಸ್ಪೆಕ್ಟರ್ ಶ್ರೀ ಬಸಪ್ಪನವರು ನಾರಿಮನ್‌ರನ್ನು ಕೈಹಿಡಿದು ಕೆಳಕ್ಕೆಳೆದರು. ಪರಸ್ಥಳದಿಂದ ಆಹ್ವಾನದ ಮೇಲೆ ಬಂದ ಗಣ್ಯವ್ಯಕ್ತಿಗೆ ಗೌರವ ಕೊಡದೆ ಕಡೆಗಣಿಸಿದ ಪೋಲೀಸರ ಒರಟುತನ ಕಂಡು ಜನರಿಗೆ ತಾಳ್ಮೆಗೆಟ್ಟಿತು. ಗಲಾಟೆ ಪ್ರಾರಂಭವಾಯಿತು. ನಾರಿಮನ್ನರನ್ನು ಬಂಧಿಸಿ ವ್ಯಾನಿಗೆ ಕರೆದುಕೊಂಡು ಹೋಗಬೇಕಾದರೆ ಪೋಲೀಸರಿಗೆ ಸಾಕುಬೇಕಾಯಿತು. ಪಾರ್ಕಿನಲ್ಲಿದ್ದ ಮರದ ಮೇಲೆ ಯಾರಿಗೂ ಕಾಣದ ಹಾಗೆ ಬಾಕ್ಸ್ ಕ್ಯಾಮೆರಾ ಹಿಡಿದುಕೊಂಡು ಕುಳಿತಿದ್ದವರೊಬ್ಬರು ಪೋಲೀಸ್ ಇನ್‌ಸ್ಪೆಕ್ಟರರು ನಾರಿಮನ್ನರನ್ನು ಕೈಹಿಡಿದು ಎಳೆಯುವ ಸಂದರ್ಭ ಮೂಡುವಂತೆ ಚಿತ್ರ ತೆಗೆದರು. ಅದರಿಂದ ಪೋಲೀಸರ ತಪ್ಪು, ಅಲ್ಲಿದ್ದ ಮುಖಂಡರಿಗೆ ಗೊತ್ತಾಗುವಂತಾಯಿತು.

ನಾರಿಮನ್ನರ ಬಂಧನವನ್ನು ಪ್ರತಿಭಟಿಸಿ ದೊಡ್ಡ ಹರತಾಳ ನಡೆಯಿತು. ಆಗ ಪೋಲೀಸ್ ಇಲಾಖೆಯ ಮುಖ್ಯಸ್ಥರಾದ ಹ್ಯಾಮಿಲ್ಟನ್ನರು ಜನರನ್ನು ಬಾಯಿಗೆ

ಬಂದಂತೆ ಬಯ್ದರಲ್ಲದೆ ನಿಷ್ಕರುಣೆಯಿಂದ ಜನಸಮೂಹದ ಮೇಲೆ ಗೋಲೀಬಾರ್ ಮಾಡಲು ಆಜ್ಞಾಪಿಸಿದರು. ಕಬ್ಬನ್‌ಪೇಟೆಯ ಯುವಕನೊಬ್ಬ ಗೋಲೀಬಾರಿಗೆ ಬಲಿಯಾದನು. ಭಾರಿ ಪ್ರಮಾಣದಲ್ಲಿ ಲಾಠಿಚಾರ್ಜ್ ನಡೆಯಿತು. ಬಿ. ಎನ್. ಭೋರಣ್ಣಗೌಡ, ಸಿ. ಬಿ. ಹೊನ್ನಯ್ಯ, ಎಂ. ರಾಮಮೂರ್ತಿ, ಮರಿಸ್ವಾಮಿ ಹಿರೇಮಠ, ಬಿ. ಯಂ. ಶೀನಪ್ಪ, ಜಿ. ಆರ್. ಸ್ವಾಮಿ, ಜಯಶೀಲನ್ ಮುಂತಾದವರನ್ನು ಪೋಲೀಸರು ಬಂಧಿಸಿದರು.

ಚಳುವಳಿ ಉಗ್ರವಾದ ಮೇಲೆ 25-10-1937 ರ ಸಂಜೆ ನಾರಿಮನ್ನರ ಬಿಡುಗಡೆಯಾಯಿತು.

ಜನಗಳಲ್ಲಿ ರಾಜಕೀಯ ಪ್ರಜ್ಞೆ ಸ್ಪಷ್ಟವಾಗಿ ಒಮ್ಮೊಮ್ಮೆ ತೀವ್ರವಾಗಿ ಬೆಳೆಯಲಾರಂಭಿಸಿತು. ಬೆಂಗಳೂರು ಸುಲ್ತಾನ್ ಪೇಟೆಯ ಗಣಪತಿ ಗಲಾಟೆಯಂತೆಯೇ, ದಾವಣಗೆರೆ ಮತ್ತು ಚಿನ್ನದಗಣಿ ಪ್ರದೇಶಗಳಲ್ಲಿ ನಡೆದ ಕೋಮುವಾರು ಗಲಾಟೆಗಳಲ್ಲಿ ಸರ್ಕಾರ ದೌರ್ಜನ್ಯಕ್ಕೆ ತೊಡಗಿ ಕೆಟ್ಟ ಹೆಸರು ಗಳಿಸಿತು. ಈ ಗಲಾಟೆಗಳು ಕೋಮುವಾರು ಭಾವನೆಗಳನ್ನು ಉಲ್ಬಣಗೊಳಿಸಿದುವು.

ಅಧಿಕ ಚಳುವಳಿಗಳು

ಗಾಂಧೀಜಿಯವರ ಅಸಹಕಾರ ಚಳುವಳಿಗೆ ಓಗೊಟ್ಟು ನಾಯಕರು ಅನೇಕ ಕಡೆ ಪರದೇಶಿ ವಸ್ತ್ರದಹನ, ಹೆಂಡದಂಗಡಿ ಪಿಕೆಟಿಂಗ್. ಅರಣ್ಯ ಸತ್ಯಾಗ್ರಹ, ಕರ ನಿರಾಕರಣ ಚಳುವಳಿಗಳನ್ನು ಮಾಡಿದರು. ಸಿರಸಿ ಸಿದ್ಧಾಪುರದಲ್ಲಿ ನಡೆದ ಕರನಿರಾಕರಣ ಚಳುವಳಿ, ಶಿವಮೊಗ್ಗ ಜಿಲ್ಲೆಯ ಹಜ್ಜೆಯಲ್ಲಿ ಹೆಂಗಸರು ಮಾಡಿದ ಉಪವಾಸ ಸತ್ಯಾಗ್ರಹಗಳು ಪ್ರಸಿದ್ಧವಾದುವು. ಬೆಂಗಳೂರು ಬಿನ್ನಿಮಿಲ್ಲಿನ ಬೋನಸ್ ಗಲಾಟೆ, ಶಿಕಾರಿಪುರದಲ್ಲಿ ನಡೆದ ಕಂದಾಯ ವಿರೋಧಿ ಚಳುವಳಿ, ನಾಯಕರ ದಸ್ತಗಿರಿ, ಗಡೀಪಾರು, ಪತ್ರಿಕೆ ನಿಷೇಧ ಈ ಮೊದಲಾದುವು ಸರಕಾರವನ್ನು ಜನರು ಕೆಕ್ಕರುಗಣ್ಣಿನಿಂದ ನೋಡುವಂತೆ ಮಾಡಿದುವು. ಜೊತೆಗೆ ಶ್ರೀಮನ್ಮಹಾರಾಜರ ಕೃಪಾಶ್ರಯದಲ್ಲಿ ಜವಾಬ್ದಾರಿ ಸರ್ಕಾರದ ಬೇಡಿಕೆಯನ್ನೂ ನಾಯಕರು ಮುಂದಿಟ್ಟರು. ಆದರೆ ಚಳುವಳಿಗಳನ್ನಾಗಲಿ ಬೇಡಿಕೆಗಳನ್ನಾಗಲಿ ಸರಕಾರ ಗಂಭೀರವಾಗಿ ಪರಿಗಣಿಸಲಿಲ್ಲ. ಇದೆಲ್ಲ ಕೆಲವು ಸ್ವಾರ್ಥಿಗಳ, ಪುಂಡರ ಕೂಗಾಟವೆಂದು ಸರ್ಕಾರ ಟೀಕಿಸಿತು. ಸಮಯ ಸಿಕ್ಕಿದಾಗ ಜನರನ್ನು ಅಸ್ತ್ರಗಳಿಂದ ಬೆದರಿಸಿತು: ದಿವಾನ್ ಮಿರ್ಜಾರವರು ಸಾರ್ವಜನಿಕ ಸಭೆಗಳಲ್ಲಿ ರಾಜಕಾರಣಿಗಳನ್ನು ಕಟುವಾಗಿ ಟೀಕಿಸಿದರು. ಕೆಲವು ಸಂದರ್ಭಗಳಲ್ಲಿ ಆಡಿದ ಮಾತಿಗೆ ತಪ್ಪಿದರು. ಸಂಧಾನಕ್ಕೆ ಅವಕಾಶ ಕೊಡಲಿಲ್ಲ. ಅಂದಿನ ಜನಸ್ತೋಮದ ನಾಡಿಯ ಮಿಡಿತವನ್ನು ದಿವಾನರು ಸರಿಯಾಗಿ ಗ್ರಹಿಸಲಿಲ್ಲ. ಸರಕಾರದ ಬೆದರಿಕೆಗೆ ಜನ ಹೆದರಲಿಲ್ಲ. ಸರಕಾರದ ನೀತಿಗಳನ್ನು ಖಂಡಿಸಲು, ಜವಾಬ್ದಾರಿ ಸರ್ಕಾರವನ್ನು ಸ್ಥಾಪಿಸಲು ವ್ಯವಸ್ಥಿತವಾದ ಇನ್ನೂ ಸಮರ್ಥವಾದ ರೀತಿಯಲ್ಲಿ ಚಳುವಳಿಗಳನ್ನು

ಮುಂದುವರಿಸಲು ಜನನಾಯಕರು ತೀರ್ಮಾನಿಸಿದರು. ಸಂಸ್ಥಾನದ ಎಲ್ಲ ಕಡೆ ಲೆಕ್ಕ ವಿಲ್ಲದಷ್ಟು ಚಳುವಳಿಗಳು ನಡೆದುವು.

ಮೈಸೂರು ಸಂಸ್ಥಾನದ ರಾಜಕೀಯ ಪ್ರಜ್ಞೆ

ಹಾಗಾದರೆ, ಮೈಸೂರು ರಾಜ್ಯದಲ್ಲಿ ರಾಜಕೀಯ ಪ್ರಜ್ಞೆ ಜಾಗೃತವಾಗಿರ ಲಿಲ್ಲವೇ ? ಇಂದಿನ ಅರ್ಥದಲ್ಲಿ 'ರಾಜಕೀಯ ಪ್ರಜ್ಞೆ' ಅಂದಿನ ಜನರಲ್ಲಿ ಜಾಗೃತ ವಾಗಿತ್ತು ಎಂದು ಸ್ಪಷ್ಟವಾಗಿ ಹೇಳುವುದಕ್ಕಾಗುವುದಿಲ್ಲ.

ಅವಿದ್ಯಾವಂತರು ಅತಿಯಾಗಿರುವ ರಾಜ್ಯದಲ್ಲಿ, ವೈಚಾರಿಕತೆ ತುಕ್ಕು ಹಿಡಿದಿರುವ ಪರಿಸರದಲ್ಲಿ; ಆಳುವ ಪ್ರಭುತ್ವದ ಕೈಕೆಳಗೆ ಗುಲಾಮರಾಗಿರುವ ಜನರಲ್ಲಿ ಸುಲಭ ವಾಗಿ ರಾಜಕೀಯ ಪ್ರಜ್ಞೆ ಜಾಗೃತವಾಗುವುದು ಸಾಧ್ಯವಿಲ್ಲ. ಆದರೆ ಅಂತಹ ಸೂಚನೆ ಗಳು ಮೈಸೂರಿನಲ್ಲಿ ಆಗಾಗ ಕಂಡುಬಂದಿರುವುದುಂಟು.

ಮೈಸೂರಿನ ಮಹಾರಾಜರಾಗಿದ್ದ ಮುಮ್ಮಡಿ ಕೃಷ್ಣರಾಜ ಒಡೆಯರು ತಮ್ಮ ಸಾತ್ವಿಕ ಆಳ್ವಿಕೆಯಿಂದ ಜನಾನುರಾಗಿಗಳಾಗಿದ್ದರು. ಅವರು ಸ್ವತಂತ್ರವಾಗಿ ಪತ್ರಿಕೆ ಗಳು ಹುಟ್ಟಿ ಜನಜಾಗೃತಿಗೆ ಅವಕಾಶವಾಗಲು ನೆರವಾದ ಉದಾಹರಣೆಯೂ ಉಂಟು. ಅದು ಗಮನಾರ್ಹವಾದ ವಿಷಯವಾದರೂ ವಿದ್ಯಾವಂತರ ಸಂಖ್ಯೆ ಹೆಚ್ಚದೆ ಪತ್ರಿಕೆಗಳ ಉಪಯೋಗ ಅಷ್ಟಕಷ್ಟೆ. 1831 ರಲ್ಲಿ ಮೈಸೂರು ಆಡಳಿತ ಬ್ರಿಟಿಷರ ಕೈ ಸೇರಿ ಆಡಳಿತ ಯಂತ್ರದಲ್ಲಿ ಹೊಸ ಚೇತನ ಕಾಣಿಸಿಕೊಂಡು ಅದು ಜನತೆಯ ಮೇಲೂ ಪರಿಣಾಮ ಬೀರಿತು.. ಪ್ರಜಾಪ್ರತಿನಿಧಿ ಸಭೆ, (1881), ನ್ಯಾಯ ವಿಧಾಯಕ ಸಭೆ (1901) ಗಳ ಸ್ಥಾಪನೆಯಲ್ಲಿ ಜನಜಾಗೃತಿಯ ಅಂಶಗಳನ್ನು ಸ್ವಲ್ಪಮಟ್ಟಿಗಾದರೂ ಕಾಣಬಹುದು. ಆದರೆ ಈ ಸಭೆಗಳು ಹೆಚ್ಚಾಗಿ ಪ್ರಜಾ ಪ್ರಭುತ್ವದ ರೀತಿಯಲ್ಲಿ ಕಾರ್ಯ ನಿರ್ವಹಿಸಲು ಆಗಲಿಲ್ಲ. ಚುನಾವಣೆಗಳಿದ್ದರೂ ಚುನಾವಣೆಗಳಿಂದ ಆರಿಸಿ ಬಂದವರೇ ಅಧಿಕಾರಿಗಳಾಗಿದ್ದರೂ ಅವರು ಒಂದು ಸೀಮಿತವಾದ ಚೌಕಟ್ಟಿನೊಳಗಡೆ ಮಾತ್ರ ವ್ಯವಹರಿಸಬೇಕಾಗಿತ್ತು. ಎಲ್ಲ ಅಧಿಕಾರ ಸೂತ್ರಗಳೂ ಮಹಾರಾಜರ ಕೈಯಲ್ಲಿದ್ದುವು. ಅನೇಕ ವೇಳೆ ಮಹಾರಾಜರಿಗಿಂತ ದಿವಾನರ ಕಾರುಭಾರವೇ ಹೆಚ್ಚಾಗಿ ಕಾಣುತ್ತಿದ್ದುದೂ ಉಂಟು. ಅಲ್ಲದೆ ಮಹಾ ರಾಜರೂ ಪೂರ್ಣ ಸ್ವತಂತ್ರರಾಗಿರಲಿಲ್ಲ. ಅವರು ಬ್ರಿಟಿಷರ ಅಧೀನರು. 'ಅಕ್ಕಿಯ ಮೇಲೆ ಆಸೆ ನೆಂಟರ ಮೇಲೆ ಪ್ರೀತಿ' ಎನ್ನುವಂತೆ ಪ್ರಜೆಗಳಿಗೆ ಮೆಚ್ಚಿಕೆಯಾಗುವಂತೆ ನೇರವಾಗಿ ಅವರು ಕೆಲಸ ಮಾಡಲು ಆಗುತ್ತಿರಲಿಲ್ಲ. ಪ್ರಜೆಗಳಿಗೂ ಉಪಕಾರಿಗಳಾ ಗಿರಬೇಕು, ಬ್ರಿಟಿಷರ ವಿರೋಧವನ್ನೂ ಕಟ್ಟಿಕೊಳ್ಳಬಾರದು. ಈ ರೀತಿಯ ವ್ಯವ ಹಾರದಲ್ಲಿ ರಾಜರುಗಳ ಬುದ್ಧಿವಂತಿಕೆಯೆಲ್ಲಾ ಖರ್ಚಾಗುತ್ತಿತ್ತು. ಕತ್ತರಿಯಲ್ಲಿ ಸಿಕ್ಕಿದ ಅಡಕೆಯ ಸ್ಥಿತಿಯಾಗಿತ್ತು ಅವರದು.

ಮೈಸೂರು ಸರಕಾರ ಪ್ರಕಟಿಸಿದ ಶೀಲ್ ಸಮಿತಿಯ ವರದಿ (1922) ಅಂದಿನ ದಿನಗಳಲ್ಲಿ ಕಂಡು ಬಂದ ಒಂದು ಆಶಾಕಿರಣ. ಆದರೂ ಅದಕ್ಕಿದ್ದ ಮಿತಿಗಳು ಅಪಾರ. ಗ್ರಾಮಪಂಚಾಯ್ತಿ, ಪೌರಸಭೆ ಮುಂತಾದುವುಗಳಿಂದ ಜನಗಳು ಸರಕಾರ ದೊಂದಿಗೆ ಕೆಲಸ ಮಾಡುವ ಅವಕಾಶಗಳು ಸಿಕ್ಕಿದ್ದೂ ಮೆಚ್ಚಬೇಕಾದ ವಿಷಯ.

ಆ ಕಾಲಕ್ಕೆ ಬ್ರಾಹ್ಮಣೇತರರ ಪಕ್ಷಗಳು ಚಳುವಳಿಗಳು ಹಿಂದಿಗಿಂತ ಹೆಚ್ಚಿನ ಜನಜಾಗೃತಿಯನ್ನು ಉಂಟುಮಾಡಿದುವು. ಶತ ಶತಮಾನಗಳಿಂದ ಶೋಷಣೆಗೆ ಒಳ ಗಾಗಿದ್ದ ಜನ, ಉಚ್ಚವರ್ಣದವರಿಗಾಗಿ, ಆಳುವ ಕೆಲವೇ ಮಂದಿಗಾಗಿ ದುಡಿಯುತ್ತಿದ್ದ ಜನ, ಸಂಘಟಿತರಾದುದು ಮೈಸೂರಿನ ಜನರ ಜಾಗೃತಿಯ ಮಹತ್ವದ ಘಟನೆ. ಕೆಲವೇ ಮಂದಿಯ ಭೋಗಕ್ಕಾಗಿ ತಾವು ಕೇವಲ ದುಡಿಯುವ ಗುಲಾಮರಲ್ಲ, ಅಧಿಕಾರದಲ್ಲಿ ತಮಗೂ ಸ್ಥಾನಮಾನ ಬೇಕು ಎಂದು ಆ ಜನ ಅದ್ಭುತವಾಗಿ ಹೋರಾಡಿದರು. ಕೋಮುವಾರು ಭಾವನೆಗಳನ್ನು ಉಂಟುಮಾಡಿತು ಎಂದು ಅಂದಿನ ಪ್ರಜಾಪಕ್ಷವನ್ನು ಕೆಲವರು ಟೀಕಿಸುತ್ತಾರಾದರೂ ಆ ಪಕ್ಷದ ಹೋರಾಟದ ಪರಿಣಾಮವನ್ನು ಯಾರೂ ಮರೆಯುವಂತಿಲ್ಲ. ಅದರ ಮುಂದೆ ಇನ್ನೊಂದು ಪಕ್ಷ ತಲೆಯೆತ್ತದಂತೆ ಅದು ಹೋರಾಟ ಮಾಡಿತು. 'ಪ್ರಜಾಪಕ್ಷ' ಸ್ಥಾಪನೆಯಾಗದಿದ್ದರೆ ಬಹುಶಃ ಬ್ರಾಹ್ಮಣೇತರರ ಸ್ಥಿತಿಗತಿಗಳು ಮೈಸೂರು ರಾಜ್ಯದಲ್ಲಿ ಚಿಂತಾಜನಕವಾ ಗಿರುತ್ತಿದ್ದುವು.

ಮೊದಲು ಮುಸ್ಲಿಮರು ಬ್ರಾಹ್ಮಣೇತರರ ಜೊತೆಯಲ್ಲಿ ಹೋರಾಟ ಮಾಡು ತ್ತಿದ್ದರೂ ಉತ್ತರೋತ್ತರದಲ್ಲಿ ಅವರು ಪ್ರತ್ಯೇಕವಾಗಿ ನಿಂತರು. 'ಮುಸ್ಲಿಂ ಲೀಗ್' ಅವರ ಮೇಲೆ ಪ್ರಭಾವ ಬೀರಿತು. ಮೈಸೂರು ರಾಜ್ಯದಲ್ಲಿ ಕಾಣಿಸಿಕೊಂಡ ಜನ ಜಾಗೃತಿಯ ಮತ್ತೊಂದು ಮುಖ ಇದು.

ಆದರೆ, ವಿಶಾಲವಾದ ಮನೋಧರ್ಮದಲ್ಲಿ ನಿಜವಾಗಿಯೂ ಜನಜಾಗೃತಿ ಕಾಣಿಸಿಕೊಂಡಿದ್ದು ಮಹಾತ್ಮ ಗಾಂಧೀಜಿಯವರು ಮೈಸೂರು ರಾಜ್ಯಕ್ಕೆ ಕಾಲಿಟ್ಟ ಮೇಲೆಯೇ. ಖಾದಿ ಪ್ರಚಾರ, ಹರಿಜನ ಉದ್ಧಾರ ಮುಂತಾದ ರಚನಾತ್ಮಕ ಕಾರ್ಯ ಚಟುವಟಿಕೆಗಳು ಗಾಂಧೀಜಿಯವರನ್ನು ಮತ್ತೆ ಮತ್ತೆ ಮೈಸೂರಿಗೆ ಬರುವಂತೆ ಮಾಡಿದುವು. ಬ್ರಿಟಿಷ್ ಭಾರತದ ರಾಜಕೀಯದ ಕಾವು ಮೈಸೂರಿನಲ್ಲೂ ಹರಡಿತು. ಭಾರತದ ಪ್ರಮುಖ ನಾಯಕರು ಮೈಸೂರು ರಾಜ್ಯದಲ್ಲಿ ಪ್ರವಾಸ ಮಾಡಿ ಪ್ರಚಾರ ಕಾರ್ಯ ಕೈಗೊಂಡಾಗ ಕಾಂಗ್ರೆಸ್‌ಗೆ ಜೀವ ಬಂದಿತು. ಜನರಲ್ಲಿ ಹೊಸ ಜಾಗೃತಿ ಕಾಣಿಸಿಕೊಂಡಿತು. ಶಿವಪುರ ರಾಷ್ಟ್ರಕೂಟವಲ್ಲಿ ಮೈಸೂರಿನ ಜನರ ರಾಜಕೀಯ ಪ್ರಜ್ಞೆ ಪರಾಕಾಷ್ಠೆಗೇರಿತು.

೬. ಸಿದ್ದಲಿಂಗಯ್ಯನವರು ಕಾಂಗ್ರೆಸ್ಸಿಗೆ

1935ರ ವರೆಗೆ ಮೈಸೂರಿನಲ್ಲಿ ಕಾಂಗ್ರೆಸ್ ಮುಖಂಡರೆಲ್ಲ ಬ್ರಾಹ್ಮಣರೇ. ಬ್ರಾಹ್ಮಣೇತರರ ಪಕ್ಷದ ಮುಂದೆ ಕಾಂಗ್ರೆಸ್ ಪಕ್ಷದ ಆಟ ಏನೇನೂ ನಡೆಯುತ್ತಿರ

ಲಿಲ್ಲ. ಸಾರ್ವಜನಿಕವಾಗಿ ಒಳ್ಳೆಯ ಹೆಸರು ಪಡೆಯುವುದು ಕಾಂಗ್ರೆಸ್ಸಿಗೆ ಕಷ್ಟ ವಾಗಿತ್ತು. ಅಂಥ ಸಮಯದಲ್ಲಿ ಕಾಂಗ್ರೆಸ್ ಎಂದರೆ ಬ್ರಾಹ್ಮಣ ಪಕ್ಷ ಎಂಬ ಅಪ ವಾದವನ್ನು ಹೋಗಲಾಡಿಸುವುದಕ್ಕೋಸ್ಕರ, ಕಾಂಗ್ರೆಸ್ ಪಕ್ಷವನ್ನು ಬಲಪಡಿಸು ವುದಕ್ಕೋಸ್ಕರ ಒಬ್ಬ ಬ್ರಾಹ್ಮಣೇತರನ್ನು ಕಾಂಗ್ರೆಸ್‌ಗೆ ಎಳೆಯಬೇಕು ಎಂದು ಮುಖಂಡರು ಯೋಚಿಸುತ್ತಿದ್ದರು. ಯಾರಾದರೆ ಸರಿ ಎಂಬ ಸಮಸ್ಯೆ ಉದ್ಭವ ವಾಯಿತು. ಆಗ ದೊಡ್ಡ ಬಳ್ಳಾಪುರದ ಶ್ರೀ ಟಿ. ಸಿದ್ದಲಿಂಗಯ್ಯನವರು ಕಣ್ಣಿಗೆ ಬಿದ್ದರು. ಶ್ರೀ ಟಿ. ಸಿದ್ದಲಿಂಗಯ್ಯನವರು ಕಾನೂನು ಪದವೀಧರರು. ಸ್ವಂತ ಆಸಕ್ತಿಯಿಂದ ವಿಶ್ವಪರ್ಯಟನೆ ಮಾಡಿ ಅನುಭವಗಳಿಸಿಕೊಂಡಿದ್ದರು. ಪ್ರಜಾ ಪ್ರತಿನಿಧಿಸಭೆಯ ಸದಸ್ಯರಾಗಿ ಒಳ್ಳೆಯ ಹೆಸರು ಗಳಿಸಿದ್ದರು. ವಿದ್ಯಾಭ್ಯಾಸ, ವಿಶ್ವ ಪರ್ಯಟನೆ ಮುಗಿದ ಮೇಲೆ ವಕೀಲರಾಗಿದ್ದರು. ದೊಡ್ಡ ಬಳ್ಳಾಪುರದಲ್ಲಿ 'ಸೇಗಸ್ ಯುವಕ ಸಂಘ'ದ ಅಧ್ಯಕ್ಷರಾಗಿ ಸಾರ್ವಜನಿಕರಿಗೆ ಪರಿಚಯವಾಗಿದ್ದರು. ಡಾ॥ ಹರ್ಡೀಕರ ಹಾಗೂ ಆನಿಬೇಸಂಟ್‌ರ ಅನುಯಾಯಿಯಾಗಿದ್ದರು. ಸಂಪಿಗೆ ವೆಂಕಟ ಪತಯ್ಯ, ಶ್ರೀ ಕೆ.ಟಿ. ಭಾಷ್ಯಂ ಮೊದಲಾದವರು ಶ್ರೀ ಟಿ. ಸಿದ್ದಲಿಂಗಯ್ಯನವರನ್ನು ಬಲವಂತವಾಗಿ ಕಾಂಗ್ರೆಸ್ಸಿಗೆ ಆಹ್ವಾನಿಸಿ 'ಕಾಂಗ್ರೆಸ್ ಪಾರ್ಲಿಮೆಂಟರಿ ಬೋರ್ಡ್'ನ ಅಧ್ಯಕ್ಷನನ್ನಾಗಿ ಮಾಡಿದರು. ಇವರು ಮುಂದೆ ಕಾಂಗ್ರೆಸ್‌ನ ಬಲಸಂವರ್ಧನೆಗೆ ನಿಷ್ಠೆಯಿಂದ ದುಡಿದರು.

ಕೌನ್ಸಿಲ್ ಆಫ್ ಆಕ್ಷನ್

1937 ರಲ್ಲಿ ಸರಕಾರದಿಂದ ನಾಗರಿಕ ಹಕ್ಕುಗಳಿಗೆ ಬಹಳವಾಗಿ ಧಕ್ಕೆ ಬಂದಿತು. ಅದನ್ನು ಪ್ರತಿಭಟಿಸಲು "ಕೌನ್ಸಿಲ್ ಆಫ್ ಆಕ್ಷನ್" ರಚನೆಯಾಯಿತು. ಅದರ ಮುಖ್ಯಸ್ಥರು ಶ್ರೀ ಟಿ. ಸಿದ್ದಲಿಂಗಯ್ಯನವರು. ಶ್ರೀ ವೀರಕೇಸರಿ ಸೀತಾರಾಮಶಾಸ್ತ್ರಿ ಮತ್ತು ಶ್ರೀ ತಗಡೂರು ರಾಮಚಂದ್ರರಾಯರು ಸದಸ್ಯರು. ಮೂವರೂ ಸಂಸ್ಥಾನ ದಲ್ಲಿ ಎಲ್ಲ ಕಡೆ ಸಂಚರಿಸಿ ಜನಜಾಗೃತಿ ಉಂಟುಮಾಡಿದರು. ಇದರಿಂದ ಜನರ ಚಳುವಳಿ ಮತ್ತಷ್ಟು ಉಗ್ರವಾಯಿತು. ಸರಕಾರದ ದಬ್ಬಾಳಿಕೆಯೂ ಹೆಚ್ಚಿತು. ಶ್ರೀ ಟಿ. ಸಿದ್ದಲಿಂಗಯ್ಯನವರು ಮಹಾರಾಜರು ಮತ್ತು ದಿವಾನರನ್ನು ಕಂಡು ಕಾಂಗ್ರೆಸ್ ಬಯಸುವ 'ಮಹಾರಾಜರ ಕೃಪಾಶ್ರಯದಲ್ಲಿ ಜವಾಬ್ದಾರಿ ಸರ್ಕಾರ'ದ ವಿಷಯವನ್ನು ಪ್ರಸ್ತಾಪಿಸಿದರು. ನಮ್ಮ ಕೋರಿಕೆಗೆ ಗಮನ ಕೊಡದಿದ್ದರೆ ಸಂಸ್ಥಾ ನಾದ್ಯಂತ ಉಗ್ರವಾಗಿ ಚಳುವಳಿ ಮಾಡುವುದಾಗಿ ಎಚ್ಚರಿಸಿದರು. ಆದರೆ ಮಹಾ ರಾಜರಾಗಲಿ ದಿವಾನರಾಗಲಿ ಅವರ ಮಾತನ್ನು ಕಿವಿಗೆ ಹಾಕಿಕೊಳ್ಳಲಿಲ್ಲ. ಕಾಂಗ್ರೆಸ್ ಒಂದು ಸಂಸ್ಥೆಯೆಂದಾಗಲೀ ಶ್ರೀ ಸಿದ್ದಲಿಂಗಯ್ಯನವರು ಅದರ ಅಧ್ಯಕ್ಷರೆಂದಾಗಲೀ ಗೌರವ ಕೊಡಲಿಲ್ಲ. ಕಾಂಗ್ರೆಸ್ ಅಧ್ಯಕ್ಷರ ಮಾತನ್ನು ಒಂದು ಸವಾಲಾಗಿ ಭಾವಿಸಿದರು.

ಈ ವಿಷಯದಲ್ಲಿ ವಿಚಾರ ವಿನಿಮಯಮಾಡಲು ಶ್ರೀ ಟಿ. ಸಿದ್ದಲಿಂಗಯ್ಯ ನವರು ಬಯಸಿ ಸಂದರ್ಶನಕ್ಕೆ ಅವಕಾಶ ಮಾಡಿಕೊಡಬೇಕೆಂದು ದೂರವಾಣಿಯಿಂದ

ದಿವಾನರನ್ನು ಕೇಳಿಕೊಂಡರು. ದಿವಾನರು "ಈ ವಿಷಯುವನ್ನು ನಮ್ಮ ಕಾರ್ಯದರ್ಶಿಯೊಂದಿಗೆ ಪ್ರಸ್ತಾಪಿಸಿ" ಎಂದು ಉದಾಸೀನದಿಂದ ಹೇಳಿದರು. "ನಮ್ಮ ಕಾರ್ಯದರ್ಶಿ ನಿಮ್ಮ ಕಾರ್ಯದರ್ಶಿಯೊಂದಿಗೆ ಬೇಕಾದರೆ ಮಾತಾಡುತ್ತಾರೆ. ಆದರೆ ನಾನು ನಿಮ್ಮೊಡನೆ ಮಾತಾಡಬೇಕು" ಎಂದು ಗಡುಸಾಗಿಯೇ ಕೇಳಿದ ಸಿದ್ದಲಿಂಗಯ್ಯನವರನ್ನು ದಿವಾನರು ಲಘುವಾಗಿ ಕಂಡರು. ಸಂದರ್ಶನಕ್ಕೆ ಅವಕಾಶ ಕೊಡಲಿಲ್ಲ. ಇದರಿಂದ ರೋಸಿಹೋದ ಶ್ರೀ ಸಿದ್ದಲಿಂಗಯ್ಯನವರು ತಮ್ಮ ಸ್ನೇಹಿತರೊಂದಿಗೆ ರಾಜ್ಯದಲ್ಲೆಲ್ಲ ಸಂಚರಿಸಿ ಪ್ರಚಾರದಿಂದ ಜನಜಾಗೃತಿಯನ್ನು ಮಾಡುತ್ತಾ ಉಗ್ರ ಚಳುವಳಿಗೆ ಜನರನ್ನು ಸಿದ್ಧಗೊಳಿಸಿದರು. ಈ ಸಂದರ್ಭದಲ್ಲಿ 'ಕೌನ್ಸಿಲ್ ಆಫ್ ಆಕ್ಷನ್'ನ ಸದಸ್ಯರನ್ನು ಸರ್ಕಾರ ದಸ್ತಗಿರಿ ಮಾಡಿತು. ಪ್ರತಿಬಂಧಕಾಜ್ಞೆ ಜಾರಿಗೆ ಬಂತು. ಸರ್ಕಾರದ ಮೇಲಿನ ಜನರ ಸಿಟ್ಟು ಮತ್ತಷ್ಟು ಹೆಚ್ಚಿತು.

1937ನೇ ಇಸವಿಯಲ್ಲಿ ಮೈಸೂರು ಪ್ರಜಾಪ್ರತಿನಿಧಿ ಸಭೆಗೆ ಚುನಾವಣೆ ನಡೆಯಲು ಪ್ರಕಟವಾದಾಗ 'ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿ'ಯವರು ಕಾಂಗ್ರೆಸ್ ಪರವಾಗಿ ಮೈಸೂರಿನಲ್ಲಿ ಚುನಾವಣಾ ಪ್ರಚಾರ ನಡೆಸಲು ಏರ್ಪಡಿಸಿದರು. ಚುನಾವಣಾ ಪ್ರಚಾರ ಸಭೆಯ ಉದ್ಘಾಟನೆಯನ್ನು ಶ್ರೀಮತಿ ಕಮಲಾದೇವಿ ಚಟ್ಟೋಪಾಧ್ಯಾಯರು ನಡೆಸುವರೆಂದೂ ಶ್ರೀ ಕೆ.ಟಿ. ಭಾಷ್ಯಂ ಅವರು ಅಧ್ಯಕ್ಷತೆ ವಹಿಸುವರೆಂದೂ ತಗಡೂರು ರಾಮಚಂದ್ರರಾಯರು ಭಾಷಣಮಾಡುವರೆಂದೂ ಇದ್ದ ಪ್ರಕಟಣೆಯನ್ನು ಕಂಡು ಮೈಸೂರು ಜಿಲ್ಲಾ ಮ್ಯಾಜಿಸ್ಟ್ರೇಟರಾದ ಶ್ರೀ ಟಿ. ಜಿ. ರಾಮಯ್ಯರ್ ಅವರು ನಿಷೇಧಾಜ್ಞೆಯನ್ನು ಹೊರಡಿಸಿದರು. ಮೊದಲು ತೀರ್ಮಾನವಾಗಿದ್ದುದರಿಂದ ಕಾರ್ಯಕ್ರಮ ನಡೆಯದಿದ್ದರೂ ಸರಕಾರ ಊಹಿಸದ ರೀತಿಯಲ್ಲಿ ಶ್ರೀ ಎಚ್. ಕೆ. ವೀರಣ್ಣಗೌಡ ಮೊದಲಾದವರಿಂದ ಅಸಾಧ್ಯ ಜನಸ್ತೋಮದ ಮುಂದೆ ಸಭೆ ನಡೆಯಿತು. ಕಾಂಗ್ರೆಸ್ಸಿನ ಜಾಣ್ಮೆಯನ್ನು ಇನ್ನಷ್ಟು ಚೆನ್ನಾಗಿ ಅರ್ಥಮಾಡಿಕೊಳ್ಳಲು ಸರಕಾರದವರು ಅಭ್ಯಾಸ ಮಾಡಿಕೊಂಡರು.

1937ನೇ ಇಸವಿ ಅಕ್ಟೋಬರ್‌ನಲ್ಲಿ ಮೈಸೂರು ನಗರದಲ್ಲಿ ಪ್ರಜಾಪ್ರತಿನಿಧಿ ಸಭೆ ನಡೆಯುತ್ತಿದ್ದಾಗ ಬ್ರಿಟಿಷ್ ರೆಸಿಡೆಂಟರೂ ಕೌನ್ಸಿಲರುಗಳೂ ಇದ್ದ ಸಭೆಯಲ್ಲಿ ಅಧ್ಯಕ್ಷರಾದ ದಿವಾನ್ ಮಿರ್ಜಾರವರು ಭಾಷಣಮಾಡುತ್ತಿದ್ದಾಗ ಶ್ರೀ ಎಚ್. ಕೆ. ವೀರಣ್ಣಗೌಡರು ತಮ್ಮ ಕಾಂಗ್ರೆಸ್ ಸ್ನೇಹಿತರೊಡನೆ ವಾಕ್ ಔಟ್ ಮಾಡಿದರು. ಅದು ಅನಿರೀಕ್ಷಿತ ಘಟನೆಯಾಗಿ ಸರ್ಕಾರ ಅಧೀರರಾಗುವಂತೆ ಮಾಡಿತು.

15-10-1937 ರಂದು ಮಧ್ಯರಾತ್ರಿಯಲ್ಲಿ ರಾಜದ್ರೋಹದ ಆಪಾದನೆಗಾಗಿ ಶ್ರೀ ಕೆ.ಟಿ. ಭಾಷ್ಯಂ ಅವರನ್ನು ಸರ್ಕಾರ ಬಂಧಿಸಿತು. ಆ ಸಂದರ್ಭದಲ್ಲಿಯೇ ಪ್ರಜಾಪಕ್ಷದ ಮುಖಂಡರೂ ಕಾಂಗ್ರೆಸ್ ಮುಖಂಡರೂ ಅನೇಕ ಭಾರಿ ಸಂದರ್ಶಿಸಿ ವಿಚಾರ ವಿನಿಮಯ ಮಾಡಿ ಕಾಳಮ್ಮನ ಗುಡಿ ಬೀದಿಯಲ್ಲಿರುವ ಯಾಲಕ್ಕಪ್ಪಾಚಾರಿ ಛತ್ರದಲ್ಲಿ ಸೇರಿ ಅಧಿಕೃತವಾಗಿ ಪ್ರಜಾಪಕ್ಷ ಕಾಂಗ್ರೆಸ್ ಪಕ್ಷದಲ್ಲಿ ವಿಲೀನವಾಗಲು ತೀರ್ಮಾನ ಕೈಗೊಂಡಿದ್ದು. ಆಗ ಮೈಸೂರು ರಾಜ್ಯದಲ್ಲಿ ನಡೆದ ಪ್ರಮುಖ ರಾಜಕೀಯ ಘಟನೆ

ಇದು. ಇಲ್ಲಿಂದ ಮುಂದೆ ತೀವ್ರಗತಿಯಲ್ಲಿ ಕಾಂಗ್ರೆಸ್ ಚಳುವಳಿಗಳು ನಡೆಯಲು ಅನುವಾಯಿತು. ಸರಕಾರ ಕೈಗೊಂಡ ದುರಾಡಳಿತ, ದಬ್ಬಾಳಿಕೆ, ಪ್ರತೀಕಾರ ಮನೋಧರ್ಮದ ಚಟುವಟಿಕೆಗಳು, ರಾಜಕೀಯ ಮುಖಂಡರಲ್ಲಿ ಒಗ್ಗಟ್ಟು, ಶಿಸ್ತು, ಕಾರ್ಯತೀವ್ರತೆಗಳು ಉಂಟಾಗಲು ಪರೋಕ್ಷವಾಗಿ ಸಹಾಯಮಾಡಿದವು. ಇದರಿಂದ ಮೈಸೂರು ರಾಜ್ಯದಲ್ಲಿ ಕಾಂಗ್ರೆಸ್ ಸಂಸ್ಥೆ ಒಂದು ಸ್ಪಷ್ಟವಾದ ರೂಪು ಪಡೆಯಲು, ಶಕ್ತ ರಾಜಕೀಯ ಪಕ್ಷವಾಗಲು ನೆರವಾಯಿತು. ಕೌನ್ಸಿಲ್ ಆಫ್ ಆಕ್ಷನ್ ಕಮಿಟಿಯ ಸದಸ್ಯರಾದ ಶ್ರೀ ಕೆ. ಟಿ. ಭಾಷ್ಯಂ ಅವರ ಬಂಧನ, ಉಗ್ರ ಚಳುವಳಿಗಳಿಗೆ, ಕಾಂಗ್ರೆಸ್‌ನ ಪ್ರಚಾರಗಳಿಗೆ ಹೊಸ ಆಯಾಮವನ್ನು ಕೊಟ್ಟುವು. ಇದೇ ಸಂದರ್ಭದಲ್ಲಿ ಎಲ್ಲ ಮುಖಂಡರೂ ರಾಜ್ಯಾದ್ಯಂತ ಪ್ರವಾಸ ಕೈಗೊಂಡು ಕಾಂಗ್ರೆಸ್‌ನ ಪ್ರಚಾರವನ್ನು ಮಾಡಿದರು.

1937ನೇ ಇಸವಿಯ ಕೊನೆಕೊನೆಗೆ ಸರಕಾರಕ್ಕೂ ಜನರಿಗೂ ನಡುವಿನ ಬಿರುಕು ದಿನದಿನಕ್ಕೆ ಹೆಚ್ಚಾಯಿತು. ಅನೇಕ ಪ್ರತಿಬಂಧಕಾಜ್ಞೆ, ದಸ್ತಗಿರಿಗಳು ನಡೆದುವು.* ಪತ್ರಿಕೆಗಳ ಮುಟ್ಟುಗೋಲಿಗೂ ಕೊನೆಮೊದಲಿರಲಿಲ್ಲ. ಅಧಿಕಾರವಿಲ್ಲದವರೂ ನಾಯಕರನ್ನು ಬಂಧಿಸಿದರು. ಜನರ ಬಾಯಿಕಟ್ಟಲು ಸರಕಾರ ಏನೆಲ್ಲ ಕ್ರಮಗಳನ್ನು ಕೈಗೊಂಡರೂ ಫಲಪ್ರದವಾಗಲಿಲ್ಲ. ಸರಕಾರ ಬಿಗಿನೀತಿ ತಾಳಿದಂತೆಲ್ಲಾ ಜನರ ದೇಶಭಕ್ತಿ ಉದ್ವೇಗ ಹೆಚ್ಚುತ್ತಿತ್ತು. ಸರಕಾರ ದಂಗುಬಡಿಯುವಂತೆ ನಾನಾ ರೀತಿಯಲ್ಲಿ ಚಳುವಳಿಗಳು ನಡೆಯುತ್ತಿದ್ದುವು. ಕಾಂಗ್ರೆಸ್ ಮುಖಂಡರು ಮಹಾರಾಜರು ಮತ್ತು ದಿವಾನರೊಡನೆ ಮಾಡಿದ ಸಂಧಿಗಳು ಮುರಿದುಬಿದ್ದುವು. ಅದೇ ಸಮಯಕ್ಕೆ ಸರಿಯಾಗಿ ಸರಕಾರ ಕೈಗೊಂಡ 'ರಾಜಕೀಯ ಸುಧಾರಣೆ ಸಮಿತಿ'ಯ ರಚನೆ ಕೇವಲ ನಾಟಕವೆಂದು ಜನರಿಗೆ ಗೊತ್ತಾಗಿಬಿಟ್ಟಿತು. ಸುಧಾರಣಾ ಸಮಿತಿಯಲ್ಲಿ ಕಾಂಗ್ರೆಸ್ಸಿಗೆ ಸರಿಯಾದ ಪ್ರಾತಿನಿಧ್ಯವಿರಲಿಲ್ಲ. ನೇಮಕಗೊಂಡಿದ್ದ ನಾಲ್ಕು ಜನ ಸದಸ್ಯರು ಸಮಿತಿಗೆ ಹೋಗುವುದೋ ಬೇಡವೋ ಎಂಬುದರ ಬಗೆಗೆ ನಿಶ್ಚಿತ ನಿಲುವು ಇರಲಿಲ್ಲ. ಕಾಂಗ್ರೆಸ್ಸನ್ನು ಕಾಂಗ್ರೆಸ್ ನಾಯಕರನ್ನು ಸರಕಾರ ಸರಿಯಾಗಿ ನಡೆಸಿಕೊಳ್ಳಲಿಲ್ಲ. ಕಾಂಗ್ರೆಸ್ ಚಳುವಳಿಗಳು ಸರಕಾರ ಆಡಳಿತವನ್ನು ಬುಡಮೇಲು ಮಾಡುವ ಚಳುವಳಿ ಎಂದು ಕರೆಯಿತು. ಚಳುವಳಿಗಾರರು ಜನರನ್ನು ತಮ್ಮ ದಾರಿಗೆ ಎಳೆಯುತ್ತಿರುವ ಪುಂಡರು ಎಂದು ಭಾವಿಸಿತು. ಸರಕಾರದ ಪರವಾದ ಪತ್ರಿಕೆಗಳೂ ಇದಕ್ಕೆ ದನಿಗೂಡಿಸಿದ್ದುವು. ಜನರ ಆಶೋತ್ತರಗಳನ್ನು, ದೇಶಾದ್ಯಂತ ಬೀಸುತ್ತಿರುವ ಹೊಸಗಾಳಿಯನ್ನು ಅರ್ಥಮಾಡಿಕೊಳ್ಳುವುದರಲ್ಲಿ ಸರಕಾರ ಸೋತಿತು. ಮಹಾರಾಜರು, ದಿವಾನರು ಮನಸ್ಸು ಮಾಡಿದ್ದರೆ ಪರಿಸ್ಥಿತಿ ಇಷ್ಟೊಂದು ಪ್ರಕೋಪಕ್ಕೆ ಹೋಗುತ್ತಿರಲಿಲ್ಲ. ಆದರೆ ಅಧಿಕಾರದ ವ್ಯಾಮೋಹ ಅವರನ್ನು ಬಹಳವಾಗಿ ಆವರಿಸಿತ್ತು. ಸರಕಾರದ ದಬ್ಬಾಳಿಕೆಯನ್ನು ಕೊನೆಗಾಣಿಸಲು, ಜವಾಬ್ದಾರಿ

* ಹೆಚ್ಚಿನ ವಿವರಗಳಿಗೆ ನೋಡಿ: Repression in Mysore (by V. S. Narayana Rao), 1937

ಸರಕಾರವನ್ನು ಪಡೆಯಲು ಕಾಂಗ್ರೆಸ್ಸಿಗೆ ಉಳಿದ ದಾರಿ ಚಳುವಳಿಯನ್ನು ಮತ್ತಷ್ಟು ತೀವ್ರಗೊಳಿಸುವುದು.

ಕಾಂಗ್ರೆಸ್ಸಿನೊಡನೆ ಸಂಯುಕ್ತ ಪ್ರಜಾಪಕ್ಷದ ವಿಲೀನ

ಆ ಕಾಲಕ್ಕೆ ಕಾಂಗ್ರೆಸ್ಸಿಗಿಂತಲೂ ಬಲಾಢ್ಯವಾಗಿದ್ದ ಹೆಚ್ಚು ಜನಪ್ರಿಯವಾಗಿದ್ದ ಸಂಯುಕ್ತ ಪ್ರಜಾಪಕ್ಷವು ಕಾಂಗ್ರೆಸ್ಸಿನೊಡನೆ ವಿಲೀನವಾದುದು ಅಪೂರ್ವ ಘಟನೆ. ಅದರಿಂದ ಕಾಂಗ್ರೆಸ್ಸಿನ ಇತಿಹಾಸವೇ ಬದಲಾಯಿತು. ಕಾಂಗ್ರೆಸ್ ಹೆಸರಿಗೆ ಮಾತ್ರ ಸಂಸ್ಥೆಯಾಗಿದ್ದ ಕಾಲದಲ್ಲಿ ಸಂಯುಕ್ತ ಪ್ರಜಾಪಕ್ಷ ಹಳ್ಳಿಗಳಲ್ಲೂ ಪಟ್ಟಣಗಳಲ್ಲೂ ಅಸಂಖ್ಯಾತ ಜನರ ಬೆಂಬಲವನ್ನು ಪಡೆದಿತ್ತು. ಅದರ ಕಾರ್ಯಕ್ರಮಗಳನ್ನು ಅಂದಿನ ರಾಷ್ಟ್ರ ನಾಯಕರೇ ಹೊಗಳಿದ್ದರು. ಇಡೀ ರಾಷ್ಟ್ರಮಟ್ಟದಲ್ಲಿ ರಚನಾತ್ಮಕವಾಗಿ ಸೇವೆ ಸಲ್ಲಿಸಲು ಎಲ್ಲ ಪಕ್ಷಗಳೂ ಒಂದು ನೆರಳಿನ ಕೆಳಗೆ ಬರುವುದು ಅನಿವಾರ್ಯವಾಗಿತ್ತು. ಆದ್ದರಿಂದ ಆಗಾಗ್ಗೆ ಪ್ರಮುಖರು ವಿಲೀನದ ಮಾತುಗಳನ್ನು ಆಡುತ್ತಿದ್ದರು. ಕೇವಲ ಕೆಲವು ಹುದ್ದೆಗಳಿಗಾಗಿ ಪ್ರಾರಂಭವಾದ ಪ್ರಜಾಪಕ್ಷದ ಹೋರಾಟ, ಕೋಮುವಾರು ರೂಪವನ್ನು ಹೊಂದಿ, ಕ್ರಮೇಣ ಸರಕಾರದ ಅಧಿಕಾರವೇ ತನ್ನ ಕೈಗೆ ಬರಬೇಕೆಂಬ ಪ್ರಜಾಪ್ರಭುತ್ವ ಗಳಿಕೆಯ ಸದುದ್ದೇಶದ ರೂಪವನ್ನು ಪಡೆದ ಸಂಯುಕ್ತ ಪ್ರಜಾಪಕ್ಷವಾಗಿತ್ತು. ಇದರ ಅಂತಿಮ ಉದ್ದೇಶವೂ ಜವಾಬ್ದಾರಿ ಸರಕಾರ ಬೇಕೆಂಬ ಕಾಂಗ್ರೆಸ್ಸಿನ ಉದ್ದೇಶವೂ ಒಂದೇ ಆಗಿದ್ದುವು. ಎರಡು ಪಕ್ಷಗಳವರಲ್ಲಿಯೂ ರಾಷ್ಟ್ರೀಯ ಭಾವನೆ ಆವಿರ್ಭವಿಸಿತ್ತು. ಅದಕ್ಕೆ ತಕ್ಕ ಹಾಗೆ ಸನ್ನಿವೇಶವೂ ಕೂಡಿ ಬಂದಿತು. ಸರಕಾರದ ದಬ್ಬಾಳಿಕೆಯನ್ನು ಪ್ರತಿಭಟಿಸಲು ಎಲ್ಲರೂ ಒಗ್ಗಟ್ಟಾಗದೆ ವಿಧಿಯಿಲ್ಲ ಎಂಬ ಭಾವನೆ ಮೂಡಿತು.

ಎರಡು ಪಕ್ಷಗಳನ್ನು ಒಟ್ಟುಗೂಡಿಸಿ ರಾಜ್ಯದಲ್ಲಿ ಶಕ್ತವಾದ ಸಂಸ್ಥೆಯನ್ನು ಕಟ್ಟಲು ನಾಯಕರು ಯೋಚಿಸಿದರು. ಎರಡು ಪಕ್ಷಗಳ ನಾಯಕರ ನಡುವೆ ಸಂಧಾನಗಳು ನಡೆದುವು. ಶ್ರೀಗಳಾದ ಬಿ. ಎನ್. ಗುಪ್ತ, ಕೆ. ಸಿ. ರೆಡ್ಡಿ ಮೊದಲಾದವರ ದೂರಾಲೋಚನೆಯಿಂದ, ಪ್ರಯತ್ನದಿಂದ 16–10–1937 ರಲ್ಲಿ ಸಂಯುಕ್ತ ಪ್ರಜಾಪಕ್ಷವು ಕಾಂಗ್ರೆಸ್ಸಿನಲ್ಲಿ ವಿಲೀನವಾಯಿತು. ಮೈಸೂರು ಕಾಳಮ್ಮನ ಗುಡಿ ಬೀದಿಯಲ್ಲಿರುವ ಯಾಲಕಪ್ಪಾಚಾರಿ ಛತ್ರದಲ್ಲಿ ಸೇರಿದ ಸುಮಾರು ಐದುನೂರು ಮಂದಿ ಸದಸ್ಯರ ಸಭೆಯಲ್ಲಿ ಈ ತೀರ್ಮಾನವಾಯಿತು. ಮೈಸೂರಿನ ಕೆಂಪಲಿಂಗಯ್ಯನವರು ಇದಕ್ಕಾಗಿ ಬಹಳವಾಗಿ ಸಹಾಯ ಮಾಡಿದರು. ಆದರೆ ಮದ್ದೂರಿನ ಶ್ರೀ ಎಂ. ಸಿ. ಲಿಂಗೇಗೌಡರು ಮತ್ತು ಶ್ರೀ ಎನ್. ಸಿ. ಮಲ್ಲಯ್ಯನವರು ಇದಕ್ಕೆ ಒಪ್ಪಲಿಲ್ಲ. ಕಾಂಗ್ರೆಸ್ಸಿಗೆ ಸೇರದ ಉಳಿದ ಪಕ್ಷಗಳೆಲ್ಲ ಒಂದುಗೂಡಿ ಕಾಂಗ್ರೆಸ್ಸನ್ನು ಎದುರಿಸಿ ಮುಂದೆ ಬರಬೇಕೆಂಬುದು ಅವರ ವಾದ. ಅಂದಿಗೆ ಅದು ಉಚಿತವಾದ ಕ್ರಮವಾಗಿರಲಿಲ್ಲ. ಅವರಿಬ್ಬರೂ ಕಾಂಗ್ರೆಸ್ಸಿನ ವಿರೋಧಿಗಳಾಗಿಯೇ ಉಳಿದುಕೊಂಡರು, ಮುಂದೆ ಅವರು ದಿವಾನರಿಗೆ ಬೇಕಾದವರೂ ಆದರು.

ಬ್ರಾಹ್ಮಣೇತರರು ಕಾಂಗ್ರೆಸ್ಸಿಗೆ ವಿಲೀನವಾಗಲು ಅನೇಕ ಕಾರಣಗಳು ಇದ್ದುವು. ಅಖಿಲ ಭಾರತ ಕಾಂಗ್ರೆಸ್‌ನ ಪ್ರಭಾವದಿಂದ ಇನ್ನು ಮುಂದೆ ತಾವು ಕಾಂಗ್ರೆಸ್ಸಿಗೆ ಕೆಲಸ ಮಾಡಬೇಕೆಂದು ಜನರು ನಿರ್ಣಯಿಸಿದರು. ಮದರಾಸು ಮತ್ತು ಬೊಂಬಾಯಿಗಳಲ್ಲಿ ಚುನಾವಣೆಗಳು ನಡೆದು ಬ್ರಾಹ್ಮಣರಾದ ರಾಜಾಜಿ ಮತ್ತು ಖರೆಯವರು ಮುಖ್ಯಮಂತ್ರಿಗಳಾದರು. ಬ್ರಿಟಿಷ್ ಇಂಡಿಯಾದಲ್ಲಿ ಕಾಂಗ್ರೆಸ್ ದಿನದಿನಕ್ಕೆ ಪ್ರಬಲವಾಗುತ್ತಿತ್ತು. ಆಗ ಬ್ರಾಹ್ಮಣೇತರರಿಗೆ ಕಾಂಗ್ರೆಸ್ಸಿನೊಂದಿಗೆ ವಿಲೀನವಾಗಿ ಒಗ್ಗಟ್ಟಿನಿಂದ ದುಡಿಯದೇ ಹೋದರೆ ಮೈಸೂರಿನವರು ಇನ್ನೂ ಹಿಂದುಳಿಯಬೇಕಾಗುತ್ತದೆ ಎಂಬ ಅರಿವುಂಟಾಯಿತು. ಕಾಂಗ್ರೆಸ್ಸಿಗೇ ಸೇರಿಕೊಳ್ಳುವ ಉದ್ದೇಶ ಯಾಕೆಂದರೆ, ಅದು ರಾಷ್ಟ್ರಮಟ್ಟದ ಸಂಸ್ಥೆ, ದೇಶೀಯ ಸಂಸ್ಥಾನಗಳಲ್ಲಿ ವಿನಹ ಬ್ರಿಟಿಷ್ ಇಂಡಿಯಾದಲ್ಲಿ ಪ್ರಭಾವಶಾಲಿಯಾಗಿರುವ ಪಕ್ಷ ಎಂಬುದು. ಜೊತೆಗೆ ಮೈಸೂರು ಸಂಸ್ಥಾನದ ಪರಿಸ್ಥಿತಿ ಉಳಿದ ಕಡೆಗಳಿಗಿಂತ ಭಿನ್ನವಾಗಿತ್ತು. ಇಲ್ಲಿ ಜನಗಳೇ ಹೋರಾಡಿ ಜವಾಬ್ದಾರಿ ಸರಕಾರವನ್ನು ಪಡೆಯಬೇಕಾಗಿತ್ತು. ಅದಕ್ಕಾಗಿ ಕಾಂಗ್ರೆಸ್ಸಿನ ಕೆಲವು ಹಿರಿಯ ನಾಯಕರು ಬ್ರಾಹ್ಮಣೇತರರ ಮನ ಒಲಿಸಲು ಪ್ರಯತ್ನಿಸಿದರು. ಬ್ರಾಹ್ಮಣೇತರರ ಪಕ್ಷದಲ್ಲಿ ಆ ಹೊತ್ತಿಗೆ ರಾಷ್ಟ್ರೀಯ ಭಾವನೆ ಪಕ್ವವಾಗಿತ್ತು. ಒಟ್ಟಿನಲ್ಲಿ ಶುಭ ಮುಹೂರ್ತದಲ್ಲಿ ಪ್ರಜಾಸಂಯುಕ್ತ ಪಕ್ಷ ಕಾಂಗ್ರೆಸ್ಸಿನಲ್ಲಿ ವಿಲೀನವಾಯಿತು. ಇದರಿಂದ ಕಾಂಗ್ರೆಸ್ ಬಲವಾದುದಷ್ಟೇ ಅಲ್ಲ ವ್ಯವಸ್ಥಿತವಾಗಿ ಚಳುವಳಿಗಳನ್ನು ನಡೆಸಲು ಅನುಕೂಲವಾಯಿತು.

ಯಮುನಾ ನದಿಯು ಗಂಗಾನದಿಯಲ್ಲಿ ಸೇರಿಕೊಂಡ ಮೇಲೆ ಅದರ ವ್ಯಕ್ತಿತ್ವವೇ ಬದಲಾಗುವ ಹಾಗೆ, ಸಂಯುಕ್ತ ಪ್ರಜಾಪಕ್ಷವು ಕಾಂಗ್ರೆಸ್ಸಿನಲ್ಲಿ ವಿಲೀನವಾದ ಮೇಲೆ ಅದರ ರೂಪ ರೇಖೆಗಳು ಸಂಪೂರ್ಣವಾಗಿ ಬದಲಾವಣೆಯಾಗಿ, ಮೊದಲಿಗಿಂತ ಉದಾತ್ತವಾಗಿ ರಾಷ್ಟ್ರೀಯತ್ವ ಪ್ರಾಪ್ತವಾಯಿತು.* ವಿಲೀನದ ವಿಶೇಷ ಅಧಿವೇಶನ ಶ್ರೀ ವಿ. ವೆಂಕಟಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಿತು. ಶ್ರೀ ಹೆಚ್. ಸಿ. ದಾಸಪ್ಪ ಸ್ವಾಗತಾಧ್ಯಕ್ಷರಾಗಿದ್ದರು. ಶ್ರೀ ಕೆ. ಸಿ. ರೆಡ್ಡಿಯವರು ನಿರ್ಣಯಗಳನ್ನು ಮಂಡಿಸಿದರು. ಎರಡೂ ಪಕ್ಷಗಳ ಮುಖಂಡರು ಸಾಕ್ಷೀಭೂತರಾಗಿ ಸಭೆಯಲ್ಲಿ ಹಾಜರಾಗಿದ್ದರು. ವಿಲೀನದ ಅನಂತರ ಎಲ್ಲರೂ ಕಾಂಗ್ರೆಸ್ ಟೋಪಿ ಧರಿಸುವ ಮೂಲಕ ಕಾಂಗ್ರೆಸ್ಸಿಗರಾದರು. ಮದ್ದೂರಿನ ಶ್ರೀನಿವಾಸ ಅಯ್ಯಂಗಾರ್ಯರು ಕಾರ್ಯಕರ್ತರಿಗೆ ಹೊಸ ಟೋಪಿಗಳನ್ನು ಒದಗಿಸಿದರು. ವಿಲೀನದ ಸಂದರ್ಭದಲ್ಲಿ ಶ್ರೀ ಹೆಚ್. ಸಿ. ದಾಸಪ್ಪನವರು ಮತ್ತು ಶ್ರೀ ವಿ. ವೆಂಕಟಪ್ಪನವರು ಮಾಡಿದ ಭಾಷಣಗಳು ಮುಂದಾಲೋಚನೆಯಿಂದ, ದೇಶಭಕ್ತಿಯಿಂದ, ದೇಶಸೇವೆಯ ಕಳಕಳಿಯಿಂದ, ಕಾರ್ಯಕರ್ತರ ಮನಃ ಪರಿವರ್ತನೆಯ ಅಯಸ್ಕಾಂತ ಶಕ್ತಿಯಿಂದ ಕೂಡಿದ್ದುವು.

* ಸಂಯುಕ್ತ ಪ್ರಜಾಪಕ್ಷವೇ ಕಾಂಗ್ರೆಸ್ ಪಕ್ಷವಾಗಿ ಪರಿವರ್ತನೆಯಾಯಿತು ಎಂದು ಉತ್ಪ್ರೇಕ್ಷೆಯಿಂದ ಹೇಳುವವರೂ ಉಂಟು.

ಸ್ವಾಗತ ಸಭಾಧ್ಯಕ್ಷರಾಗಿದ್ದ ಶ್ರೀ ಹೆಚ್. ಸಿ. ದಾಸಪ್ಪನವರು ಮಾಡಿದ ಭಾಷಣದ ಕೆಲವು ಮಾತುಗಳು ಹೀಗಿವೆ:

"ಪ್ರಸಕ್ತ ಸನ್ನಿವೇಶದಲ್ಲಿ ಪ್ರತ್ಯೇಕ ರಾಜಕೀಯ ಸಂಸ್ಥೆಯ ಅವಶ್ಯಕತೆ ಇಲ್ಲವೆಂದೂ ನಮ್ಮ ಸಂಸ್ಥೆಯು ಅಖಿಲಭಾರತ ಕಾಂಗ್ರೆಸ್ಸಿನೊಡನೆ ಏಕೀಕರಣ ಹೊಂದುವುದು ಸೂಕ್ತವೆಂದೂ ನಮ್ಮ ಸಂಸ್ಥೆಯ ಕಾರ್ಯನಿರ್ವಾಹಕ ಸಮಿತಿಯು ಅಂಗೀಕರಿಸಿದ ನಿರ್ಧಾರಕ್ಕೆ ತಮ್ಮ ಸಮ್ಮತಿಯನ್ನು ಪಡೆಯುವ ಉದ್ದೇಶದಿಂದ ಈ ಅಧಿವೇಶನವನ್ನು ಸೇರಿಸಲಾಗಿದೆ.........ಐಕ್ಯಮತ್ಯವೇ ನಮ್ಮ ಜೀವನದ ಉಸಿರು. ಈ ಭಾವನಾ ಪ್ರೇರಣೆಯಿಂದಲೇ ಕಾಂಗ್ರೆಸ್ಸಿನೊಡನೆ ತಡವಿಲ್ಲದೆ ನಮ್ಮ ಸಂಸ್ಥೆಯು ಸೇರಬೇಕೆಂದು ನಿರ್ಧರಿಸಿದ್ದು.........ಮೈಸೂರು ನಾಡು ಭಾರತ ಭೂಮಿಯ ಒಂದು ಭಾಗ........ಭಾರತ ಭೂಮಿಯ ಸ್ವಾತಂತ್ರ್ಯವನ್ನು ಗಳಿಸಲು ಉದ್ಯುಕ್ತರಾಗಿರುವವರೊಡನೆ ನಾವು ಸೇರಲೇಬೇಕು.

ಶ್ರೀಮಾನ್ ಮಹಾರಾಜರವರ ಕೃಪಾಶ್ರಯದಲ್ಲಿ ಜವಾಬ್ದಾರಿ ಸರ್ಕಾರವನ್ನು ಸ್ಥಾಪಿಸುವುದೇ ನಮ್ಮ ಸದ್ಯದ ರಾಜಕೀಯ ಕಾರ್ಯಕಲಾಪವಾಗಿರಬೇಕೆಂದು ನಾವು ನಿಶ್ಚಯಿಸಿದ್ದೇವೆ. ಇದೇ ಸಂಯುಕ್ತ ಸಂಸ್ಥೆಯ ಗುರಿ. ಇದೇ ಮೈಸೂರು ಕಾಂಗ್ರೆಸ್ಸಿನ ಆಶಯ. ನಮ್ಮ ನಮ್ಮ ಕಾರ್ಯಕ್ರಮಗಳಲ್ಲೂ ವ್ಯತ್ಯಾಸವಿಲ್ಲ. ಹೀಗಿರುವಾಗ ನಾವು ಪ್ರತ್ಯೇಕವಾಗಿ ನಿಲ್ಲುವ ಪ್ರಮೇಯವು ಲವಲೇಶವೂ ಇಲ್ಲ. ಅಂದಮೇಲೆ ಕಾಂಗ್ರೆಸ್ಸಿನೊಡನೆ ಸಮ್ಮಿಳಿತವಾಗುವುದು ನಮ್ಮಗಳ ಕರ್ತವ್ಯವೆಂದು ವ್ಯಕ್ತಪಡುತ್ತದೆ. ಇದರಿಂದ ಇಡೀ ಭಾರತ ಭೂಮಿಯ ಹೋರಾಟದಲ್ಲಿ ಭಾಗವಹಿಸಲವಕಾಶ ದೊರೆತಂತಾಗಿ ಮಾತೃಭೂಮಿಯಲ್ಲಿ ನಮ್ಮ ಕಾಣಿಕೆಯನ್ನು ಸಲ್ಲಿಸಿದೆವೆಂಬ ಸಂತೃಪ್ತ ಭಾವನೆಯು ನಮ್ಮಲ್ಲಿ ಮೂಡುತ್ತದೆ.

ಬಹುಕಾಲ ಯಶಸ್ವಿಯಾಗಿ ಶ್ರಮಿಸಿದ ನಮ್ಮ ಸಂಸ್ಥೆಯನ್ನು ಮುಕ್ತಾಯಗೊಳಿಸುವುದೆಂದರೆ ಸ್ವಲ್ಪ ವಿಷಾದವಾಗುವುದೇ ಸಹಜ. ಆದರೆ ಕಾಂಗ್ರೆಸ್ಸಿನೊಂದಿಗೆ ಸಂಮಿಳಿತವಾಗುವೆವು. ಎಂಬ ಭಾವನೆಯು ನಮ್ಮಲ್ಲಿ ಮೂಡಿ ಆನಂದಾಹ್ಲಾದಗಳನ್ನು ಉಂಟುಮಾಡಿರುತ್ತದೆ. ಇದೆಲ್ಲಾ ದೈವಿಕವಾದುದು."

1937ನೇ ಅಕ್ಟೋಬರ್ 16 ರಲ್ಲಿ ಮೈಸೂರಿನಲ್ಲಿ ನಡೆದ 'ಪ್ರಜಾ ಸಂಯುಕ್ತ ಪಕ್ಷ'ದ ಸಮ್ಮೇಳನದಲ್ಲಿ ಕೆಳಕಂಡ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

"ಬ್ರಿಟಿಷ್ ಭಾರತ ಮತ್ತು ದೇಶೀಯ ಸಂಸ್ಥಾನಗಳು ಸಮ್ಮಿಳಿತವಾಗಿ ಒಂದೇ ಒಂದು ಸಂಸ್ಥೆಯೆಂದು ತೋರಿಸಲೂ; ಭಾರತವು ಅವಿಭಕ್ತ, ಒಂದೇ ಒಂದು ಜನತೆ, ಒಂದೇ ಒಂದು ಪಕ್ಷವೆಂದು ತೋರಿಸಲೂ; ರಾಷ್ಟ್ರೀಯ ಮಹಾಸಭೆ ಮತ್ತು 'ಪ್ರಜಾಸಂಯುಕ್ತ ಪಕ್ಷ'ದ ಕಾರ್ಯಕ್ರಮಗಳೊಂದೇ ಎಂಬುದನ್ನು ತೋರಿಸಲೂ;

'ಪ್ರಜಾಸಂಯುಕ್ತ ಪಕ್ಷ'ವು ಕಾಂಗ್ರೆಸ್ಸಿನಿಂದ ಬೇರೆಯಾಗಿರದೆ, ಕಾಂಗ್ರೆಸ್ಸನ್ನು ಬಲ ಪಡಿಸಲು, ಕಾಂಗ್ರೆಸ್ಸನ್ನು ಸೇರುತ್ತದೆ."

ತನ್ನ ಇತಿಮಿತಿಯಲ್ಲಿ ಯಶಸ್ವಿಯಾಗಿ ಜನಸೇವೆಯನ್ನು ಮಾಡಿದ 'ಪ್ರಜಾ ಸಂಯುಕ್ತ ಪಕ್ಷ'ವು ಕಣ್ಮರೆಯಾಯಿತು. ಆದರೆ ಆದರಿಂದ ಮೈಸೂರು ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷವು ಬಲಿಷ್ಠವಾಗಿ ಊರ್ಜಿತವಾಗಿ ನಿಲ್ಲಲು ಸಹಾಯವಾಯಿತು. ಸಂಯುಕ್ತ ಪ್ರಜಾಪಕ್ಷವನ್ನು ವಿಲೀನ ಮಾಡಿಕೊಂಡ ಕಾಂಗ್ರೆಸ್ ಪಕ್ಷದ ಚಳು ವಳಿಯು ಹಿಂದಿಗಿಂತ ಉಗ್ರವಾಯಿತು. ಇದರಿಂದ ಸರಕಾರಕ್ಕೆ ತಲೆನೋವು ಅಧಿಕ ವಾಯಿತು. ಪ್ರಥಮ ಸಚಿವರಾಗಿದ್ದ ರಾಜಮಂತ್ರ ಪ್ರವೀಣ ಎಸ್. ಸಿ. ರಾಜ ಗೋಪಾಲಾಚಾರಿಯವರು ಮಿರ್ಜಾ ಅವರಿಗೆ ತಿಳುವಳಿಕೆ ಹೇಳಿ ದಸ್ತಗಿರಿಯಾಗಿದ್ದ ಎಲ್ಲ ಸತ್ಯಾಗ್ರಹಿಗಳನ್ನೂ ಬಿಡುಗಡೆ ಮಾಡಿಸಿದರು. ಶ್ರೀ ಟಿ. ಸಿದ್ದಲಿಂಗಯ್ಯನವರು ಜೈಲಿನಿಂದ ಹೊರ ಬಂದಮೇಲೆ ಹರಿಪುರ ಕಾಂಗ್ರೆಸ್ ಅಧಿವೇಶನದಲ್ಲಿ ಭಾಗವಹಿಸಲು ತೆರಳಿದರು. ಶ್ರೀ ಕೆ. ಹನುಮಂತಯ್ಯ, ಶ್ರೀ ಕೆ. ಸಿ. ರೆಡ್ಡಿ, ಶ್ರೀ ಭೂಪಾಳಂ ಚಂದ್ರ ಶೇಖರಯ್ಯ, ಶ್ರೀ ವಿ. ವೆಂಕಟಪ್ಪ, ಶ್ರೀ ಬಿ. ಎಸ್. ಗುಪ್ತ ಮೊದಲಾದವರೂ ಹೊರಟರು. ಅಲ್ಲಿ ಉಪಯುಕ್ತವಾದ ಒಂದು ಘಟನೆ ನಡೆಯಿತು.

ಹರಿಪುರ ಕಾಂಗ್ರೆಸ್ ಅಧಿವೇಶನದಲ್ಲಿ

ಅಖಿಲ ಭಾರತ ರಾಷ್ಟ್ರೀಯ ಕಾಂಗ್ರೆಸ್‌ನ 51ನೆಯ ಮಹಾಧಿವೇಶನ ಗುಜ ರಾತಿನ ಹರಿಪುರದಲ್ಲಿ 1938ನೇ ಫೆಬ್ರುವರಿಯಲ್ಲಿ ನಡೆಯಿತು. ಆಗ ಅದರ ಅಧ್ಯಕ್ಷರು ನೇತಾಜಿ ಸುಭಾಷ್ ಚಂದ್ರಬೋಸ್. ಆ ಅಧಿವೇಶನದಲ್ಲಿ ದೇಶೀಯ ಸಂಸ್ಥಾನಗಳಲ್ಲಿನ ರಾಜಕೀಯ ಚಟುವಟಿಕೆಗಳಿಗೆ ಅಖಿಲ ಭಾರತ ರಾಷ್ಟ್ರೀಯ ಕಾಂಗ್ರೆಸ್ ಹೆಸರನ್ನು ಬಳಸಬಾರದೆಂಬ ನಿರ್ಣಯ ಪ್ರಧಾನವಾಗಿತ್ತು. ವಾಸ್ತವವಾಗಿ ಇದು ಪ್ರಗತಿ ವಿರೋಧಿ ನಿರ್ಣಯ. ಇದರಿಂದ ಈ ರೀತಿಯ ಸಂಸ್ಥಾನಗಳಲ್ಲಿ ಚಳುವಳಿಗಳನ್ನು ಸಂಘಟಿಸುವುದು ಕಷ್ಟವಾಗಿತ್ತು. ಇದಕ್ಕೆ ತಿದ್ದುಪಡಿ ತರಲು ಮೈಸೂರಿನ ಕಾಂಗ್ರೆಸ್ ಮುಖಂಡರು ಬಹಳವಾಗಿ ಶ್ರಮಿಸಿದರು. ದೇಶೀಯ ಸಂಸ್ಥಾನದ ಪ್ರತಿನಿಧಿಗಳೆಲ್ಲ ಸಂಘಟಿತರಾಗಿ ನಿರ್ಣಯವನ್ನು ವಿರೋಧಿಸಿದರು. ಸ್ವಲ್ಪಮಟ್ಟಿಗೆ ಮೂಲ ನಿರ್ಣಯ ತಿದ್ದುಪಡಿಯಾಯಿತು. ಆದರೆ ಮೌಲಾನ ಆಜಾದರು ವಿಷಯ ನಿಯಾಮಕ ಸಮಿತಿಯಲ್ಲಿ ಮೂಲ ನಿರ್ಣಯವನ್ನು ಮಾತ್ರ ಪ್ರತಿಪಾದಿಸಿದರು. ಗಾಂಧೀಜಿ ಯವರ ಅಭಿಪ್ರಾಯವೂ ಅದೇ ಆಗಿತ್ತು. ಶ್ರೀ ಕೆ. ಚಂಗಲರಾಯ ರೆಡ್ಡಿಯವರು ಸಂಸ್ಥಾನಗಳ ಜನರ ಉದ್ದೇಶವನ್ನು ಸಮರ್ಥಿಸಿಕೊಂಡು ವಾದಿಸಿದರೂ ಪ್ರಯೋಜನ ವಾಗಲಿಲ್ಲ. ಈ ವಿಷಯದ ಬಗೆಗೆ ಶ್ರೀ ಟಿ. ಸಿದ್ದಲಿಂಗಯ್ಯನವರೂ ಶ್ರೀ ಕೆ. ಹನು ಮಂತಯ್ಯನವರೂ ಜವಹರಲಾಲ್ ನೆಹರು ಅವರೊಡನೆ ಸಮಾಲೋಚಿಸಿದರು.

"ಒಳ್ಳೆಯದು ನೆಹರೂಜಿ, ಕಾಂಗ್ರೆಸ್ಸಿನಲ್ಲಿ ಸೇರುವುದಕ್ಕೂ ಸ್ವಾತಂತ್ರ್ಯ ಚಳು ವಳಿಯಲ್ಲಿ ಧುಮುಕುವುದಕ್ಕೂ ಇಂದಿನವರೆಗೆ ಕಾಂಗ್ರೆಸ್ ಪ್ರೋತ್ಸಾಹಿಸುತ್ತ

ಬಂದಿದ್ದು ಈಗೇಕೆ ಅವರ (ದೇಶೀಯ ಸಂಸ್ಥಾನದ ಜನರ) ಕೈ ಬಿಡುತ್ತಿದೆ" ಎಂದು ಸಿದ್ದಲಿಂಗಯ್ಯನವರು ಕೇಳಿದರು.

"ಕಾಂಗ್ರೆಸ್ಸಿನ ಎದುರು ಬಂದಿರುವ ನಿರ್ಣಯದ ಸಂಪೂರ್ಣ ಹೊಣೆಯು ನನ್ನದು. ಅದಕ್ಕಾಗಿ ನಾನು ದಿನಗಳನ್ನೂ ರಾತ್ರಿಗಳನ್ನೂ ವಿಚಾರಮಾಡುತ್ತಾ ಕಳೆದಿದ್ದೇನೆ. ಈ ನಿರ್ಣಯದಿಂದ ಎಲ್ಲ ದೇಶೀಯ ರಾಜ್ಯಗಳ ಸಂಸ್ಥೆಗಳು ಬಲ ಗೊಂಡು ಚೈತನ್ಯ ಹೊಂದುವಂತಾಗುವುದು" ಎಂದರು ನೆಹರೂಜಿ.

"ಕಾಂಗ್ರೆಸ್ಸಿಗರಾದ ನಮ್ಮ ವಿಷಯದಲ್ಲಿ ನಮ್ಮ ದಿವಾನರಾದ ಸರ್ ಮಿರ್ಜಾ ರವರು ಏನೆಂದು ಭಾವಿಸಿಯಾರು ?" ಶ್ರೀ ಸಿದ್ದಲಿಂಗಯ್ಯನವರು ಪುನಃ ಕೇಳಿದರು.

"ದಿವಾನ್ ಮಿರ್ಜಾರವರು ಸದಾ ನಿಮ್ಮ ಮೆದುಳಿನಲ್ಲಿ ತುಂಬಿಕೊಂಡಿರುವ ರೆಂಬುದು ನನಗೆ ಗೊತ್ತು" ಎಂದು ಶ್ರೀ ನೆಹರು ಅವರು ಮಾರುತ್ತರ ಕೊಟ್ಟು ನಾಯಕರ ಬಾಯಿ ಮುಚ್ಚಿಸಿದರು.

ಶ್ರೀ ನೆಹರೂ ಅವರು ಮೈಸೂರು ಸಂಸ್ಥಾನದ ನಾಯಕರು ತಮ್ಮ ಬೇಡಿಕೆ ಯನ್ನು ನೆರವೇರಿಸಿಕೊಳ್ಳದಂತೆ ಉತ್ತರಿಸಲು ಕಾರಣಗಳಿದ್ದುವು. ಅವುಗಳಲ್ಲಿ ಮುಖ್ಯವಾದುದು ಮೈಸೂರು ನಾಯಕರಿಗೆ ಚಳುವಳಿ ಮಾಡುವ ಶಕ್ತಿಯಿಲ್ಲ ಎಂಬುದು. ದೇಶೀಯ ಸಂಸ್ಥಾನಗಳಲ್ಲಿ ಚಳುವಳಿಗಳ ಅಗತ್ಯವೂ ಇಲ್ಲವೆಂದು ಅಂದಿನ ಎಲ್ಲ ರಾಷ್ಟ್ರನಾಯಕರೂ ನಂಬಿದ್ದರು. ಯಾಕೆಂದರೆ ಬ್ರಿಟಿಷರನ್ನು ದೇಶ ದಿಂದ ಓಡಿಸಿಬಿಟ್ಟರೆ ಬ್ರಿಟಿಷರ ಅಧೀನದಲ್ಲಿರುವ ದೇಶೀಯ ರಾಜರು ತಾವಾಗಿಯೇ ಸಿಂಹಾಸನದಿಂದ ಕೆಳಗೆ ಇಳಿಯುತ್ತಾರೆ ಎಂಬ ತಪ್ಪು ಗ್ರಹಿಕೆ ಅವರದಾಗಿತ್ತು.

ರಾಜರುಗಳ ರಾಜರು ತೊಲಗಿದರೆ ರಾಜರುಗಳು ಸಹಜವಾಗಿಯೇ ತೊಲಗು ವರು ಎಂಬುದು ಅವರ ಘೋಷಣೆಯಾಗಿತ್ತು.* ಮೈಸೂರು ಸಂಸ್ಥಾನದ ಕಾಂಗ್ರೆಸ್ ನಾಯಕರಿಗೆ ಸಂಬಂಧಿಸಿದಂತೆ ಜವಹರಲಾಲ ನೆಹರು, ರಾಜಾಜಿ ಮೊದಲಾದವರ ತಲೆಯಲ್ಲಿ ದಿವಾನ್ ಮಿರ್ಜಾ ಅವರು ಸಾಕಷ್ಟು ತಪ್ಪು ಗ್ರಹಿಕೆಗಳನ್ನು ನಾಟಿ ಹಾಕಿದ್ದರು. ಹರಿಪುರ ಕಾಂಗ್ರೆಸ್ ಅಧಿವೇಶನದ ಸಮಯದಲ್ಲಿ ಮೈಸೂರು ಸಂಸ್ಥಾನದ ಕಾಂಗ್ರೆಸ್ಸಿಗರು ಬಹುಮಂದಿ ಬ್ರಾಹ್ಮಣೇತರ ಕೋಮಿಗೆ ಸೇರಿದವರಾಗಿ ದ್ದರು. ಸಂಯುಕ್ತ ಪ್ರಜಾಪಕ್ಷದಲ್ಲಿದ್ದವರೂ ಆಗತಾನೇ ಕಾಂಗ್ರೆಸ್ಸಿಗೆ ಸೇರಿದ್ದರು, ಅವರೆಲ್ಲ ಜಾತಿವಾದಿಗಳು, ಪುಂಡರು. ಶುದ್ಧ ಕಾಂಗ್ರೆಸ್ಸಿಗರಲ್ಲ ಎಂದು ದಿವಾನ್, ಮಿರ್ಜಾ ಸಾಹೇಬರು ಮತ್ತು ಕೆಲವು ಬ್ರಾಹ್ಮಣ ಮುಖಂಡರು ರಾಷ್ಟ್ರ ನಾಯಕರ

---

* ಈ ಮಾತು ಆಗ ಬಹಳ ರೂಢಿಯಾಗಿತ್ತು: 'If the King of Kings goes the King automatically goes.'

ಕಿವಿ ಊದಿದ್ದರು. ಮಿರ್ಜಾ ಅವರು ನಿರಂತರವಾಗಿ, ಬಹಳ ಜಾಣ್ಮೆಯಿಂದ ಅಪಪ್ರಚಾರ ಮಾಡುತ್ತಿದ್ದರು. ದಿವಾನರ ಬಗೆಗೆ ಒಲವಿದ್ದ ನೆಹರು, ರಾಜಾಜಿ ಮೊದಲಾದವರು ಮೈಸೂರು ಕಾಂಗ್ರೆಸ್ ನಾಯಕರನ್ನು ಸಂಶಯದಿಂದ ನೋಡುತ್ತಿದ್ದರು. ಅಲ್ಲದೆ ಬ್ರಿಟಿಷರ ಮತ್ತು ದೇಶೀಯ ಸಂಸ್ಥಾನಗಳ ರಾಜರ ವಿರುದ್ಧವಾಗಿ ಏಕ ಕಾಲದಲ್ಲಿ ಹೋರಾಡುವುದು ಬುದ್ಧಿವಂತಿಕೆಯಲ್ಲ ಎಂದು ತೀರ್ಮಾನಿಸಿಕೊಂಡಿದ್ದರು. ಆದ್ದರಿಂದ ಶ್ರೀ ನೆಹರು ಅವರು ಶ್ರೀ ಟಿ. ಸಿದ್ದಲಿಂಗಯ್ಯನವರ ಮಾತಿಗೆ ಅಷ್ಟಾಗಿ ಕಿವಿಗೊಡಲಿಲ್ಲ.

ಶ್ರೀ ನೆಹರೂರೊಡನೆ ನಡೆದ ಸಂಭಾಷಣೆಯಿಂದ ನಿರಾಶೆಯಾದರೂ ದೇಶೀಯ ಸಂಸ್ಥಾನದ ಪ್ರತಿನಿಧಿಗಳು ಅಧೀರರಾಗದೆ ದೇಶಭಕ್ತಿ ಮತ್ತು ಉತ್ಸಾಹಗಳಿಂದ ಮತ್ತಷ್ಟು ಪ್ರಯತ್ನಪಟ್ಟರು. ಶಿವಮೊಗ್ಗೆಯ ಡಾ॥ ಪಾರ್ಥನಾರಾಯಣ ಪಂಡಿತರು ಮೂಲ ನಿರ್ಣಯಕ್ಕೆ ಒಂದು ತಿದ್ದುಪಡಿ ಸೂಚಿಸಿ ಅದಕ್ಕೆ 490 ಪ್ರತಿನಿಧಿಗಳ ಸಹಿ ಹಾಕಿಸಿದರು. ಅದನ್ನು ಧಾರವಾಡದ ಡಾ॥ ಎನ್. ಬಿ. ಕಬ್ಬೂರ ಅವರು ಮಹಾಧಿವೇಶನದಲ್ಲಿ ಮಂಡಿಸಿದರು. ಶ್ರೀ ಕೆ. ಸಿ. ರೆಡ್ಡಿಯವರು ಅನುಮೋದಿಸಿದರು. ಕೇರಳದ ಶ್ರೀ ರಾಮಚಂದ್ರ ಅವರು, ಉದ್ವೇಗದಿಂದ ವಾದಿಸಿದರು. ಆದರೆ ಸರ್ದಾರ್ ವಲ್ಲಭಾಯಿ ಪಟೇಲರು ಒಪ್ಪಲಿಲ್ಲವಾಗಿ ಅದು ಬಿದ್ದುಹೋಯಿತು. ಅಸಮಧಾನಗೊಂಡ ಪ್ರತಿನಿಧಿಗಳು ಕೊನೆಯ ಪ್ರಯತ್ನವಾಗಿ ಮಹಾಧಿವೇಶನದ ಅಧ್ಯಕ್ಷರಾದ ಸುಭಾಷ್ ಚಂದ್ರಬೋಸರನ್ನು ಕಂಡು ತಿದ್ದುಪಡಿಯ ಅಗತ್ಯವನ್ನು ಒತ್ತಿಹೇಳಿ ಪ್ರಾರ್ಥಿಸಿಕೊಂಡಾಗ ಅವರು ಒಪ್ಪಿಗೆಕೊಟ್ಟರು.

ಅಂದರೆ ಹರಿಪುರ ಕಾಂಗ್ರೆಸ್ ಅಧಿವೇಶನದ ರೀತ್ಯಾ ದೇಶೀಯ ಸಂಸ್ಥಾನಗಳಲ್ಲಿ ಅಖಿಲಭಾರತ ರಾಷ್ಟ್ರೀಯ ಕಾಂಗ್ರೆಸ್ಸಿನ ಶಾಖೆಗಳಿರಬಹುದು. ಆದರೆ ಸತ್ಯಾಗ್ರಹ, ಚಳುವಳಿ, ಕಾನೂನು ಭಂಗ ಮಾಡಬೇಕಾದರೆ ಸ್ವತಂತ್ರ ರಾಜಕೀಯ ಪಕ್ಷವನ್ನು ಸ್ಥಾಪನೆ ಮಾಡಿಕೊಳ್ಳಬೇಕು. ಈ ಸಂಸ್ಥೆಗೆ ಸದಸ್ಯರಾಗುವವರು ರಾಷ್ಟ್ರ ಮಹಾಸಭೆಗೆ ಸದಸ್ಯರಾಗಲೇಬೇಕು.

ಹರಿಪುರ ಅಧಿವೇಶನದ ನಿರ್ಣಯ ದೇಶೀಯ ಸಂಸ್ಥಾನಗಳಲ್ಲಿ ಸ್ವತಂತ್ರ ರಾಜಕೀಯ ಸಂಸ್ಥೆಗಳು ಹುಟ್ಟಿಕೊಳ್ಳಲು ಕಾರಣವಾಯಿತು. ದೇಶೀಯ ಸಂಸ್ಥಾನಗಳ ಹಣೆಬರಹ ಬದಲಾಗುವಂತಾಯಿತು. ಈ ವಿಷಯದಲ್ಲಿ ಮೈಸೂರಿನ ಮುಖಂಡರು ಮಾಡಿದ ಪ್ರಯತ್ನ ಸ್ತುತ್ಯಾರ್ಹವಾದುದು.

ಹರಿಪುರ ಅಧಿವೇಶನದಲ್ಲಿ ರಾಷ್ಟ್ರನಾಯಕರೊಡನೆ ದೇಶೀಯ ಸಂಸ್ಥಾನಗಳ ನಾಯಕರುಗಳು ನಡೆಸಿದ ಮೌಲಿಕ ಚರ್ಚೆಯಿಂದ ದೇಶೀಯ ಸಂಸ್ಥಾನಗಳ ಚಳುವಳಿಗಳಿಗೆ ಒಂದು ಹೊಸ ಚೈತನ್ಯ ಬಂದಿತು. ರಾಷ್ಟ್ರನಾಯಕರ ಅಭಿಪ್ರಾಯಗಳು ಬದಲಾವಣೆಯಾದುವು. ಭಾರತ ರಾಷ್ಟ್ರೀಯ ಕಾಂಗ್ರೆಸ್ಸಿನ ಧ್ಯೇಯ ಉದಾತ್ತ

ವಾಯಿತು. ಈ ಹಿನ್ನೆಲೆಯಲ್ಲಿ ಮೈಸೂರಿನ ಹೆಸರು ಪ್ರಮುಖವಾಯಿತು. ಹರಿಪುರ ಅಧಿವೇಶನದಲ್ಲಿಯೇ ವಿವಿಧ ನಾಯಕರುಗಳಿಂದ ಈ ವಿಷಯ ಪ್ರಕಟವಾಯಿತು. ಮೈಸೂರು ಸಂಸ್ಥಾನದ ರಾಜಕೀಯ ಚಟುವಟಿಕೆಗೆ ಸಂಬಂಧಿಸಿದಂತೆ ಅಖಿಲಭಾರತ ಕಾಂಗ್ರೆಸ್ ಕಮಿಟಿಯ ಕಾರ್ಯದರ್ಶಿಗಳ ವಾರ್ಷಿಕ ವರದಿಯಲ್ಲಿ ಹೀಗೆ ಉಲ್ಲೇಖಿತ ವಾಗಿದೆ: "ಪ್ರಜೆಗಳ ನಾಗರಿಕ ಹಕ್ಕುಗಳನ್ನು ಮತ್ತು ಸಹಜವಾದ ರಾಜಕೀಯ ಚಟುವಟಿಕೆಗಳನ್ನು ಹತ್ತಿಕ್ಕುವಲ್ಲಿ ಮೈಸೂರು ಸರಕಾರದ ಹೆಸರು ಈಚೆಗೆ ಸ್ವಲ್ಪ ಮುಂದೆ ಬಂದಿದೆ." *

ರಾಷ್ಟ್ರೀಯ ಕಾಂಗ್ರೆಸ್ ಮತ್ತು ದೇಶೀಯ ಸಂಸ್ಥಾನಗಳ ಸಂಬಂಧದ ಮೇಲೆ ಬೆಳಕು ಚೆಲ್ಲುವಂತೆ ಶ್ರೀ ಜವಹರಲಾಲ್ ನೆಹರೂ ಅವರು ತಮ್ಮ ವರದಿಯಲ್ಲಿ ಹೀಗೆ ಉಲ್ಲೇಖಿಸಿದ್ದಾರೆ: "(ಸಂಸ್ಥಾನಗಳಿಂದ) ಕಾಂಗ್ರೆಸ್ ದೂರ ಇರುವುದು ಸಾಧ್ಯವೂ ಇಲ್ಲ ಸಾಧುವೂ ಅಲ್ಲ. ಸಂಸ್ಥಾನಗಳಲ್ಲಿ ನಡೆಯುವ ಪ್ರತಿಯೊಂದು ಚಳುವಳಿಗಳ ಬಗೆಗೂ ಕಾಂಗ್ರೆಸ್ಸಿಗೆ ತೀವ್ರವಾದ ಆಸಕ್ತಿ ಇದೆ. ಸಾಧ್ಯವಿದ್ದ ಕಡೆಗಳಲ್ಲಿ ಬೆಂಬಲ ನೀಡುತ್ತದೆ.†"

ದೇಶೀಯ ಸಂಸ್ಥಾನಗಳ ಚಳುವಳಿಗಾರರಿಗೆ ಹೊಸ ಹುರುಪು ನೀಡುವಂತೆ ಹರಿಪುರ ಅಧಿವೇಶನದ ಅಧ್ಯಕ್ಷರಾಗಿದ್ದ ಭಾರತದ ವೀರಕೇಸರಿ ಶ್ರೀ ಸುಭಾಷ್ ಚಂದ್ರ ಬೋಸರು ತಮ್ಮ ಅಧ್ಯಕ್ಷ ಭಾಷಣದಲ್ಲಿ ಹೀಗೆ ಘೋಷಿಸಿದರು: "ಸಂಸ್ಥಾನದ ಪ್ರಜೆಗಳ ಚಳುವಳಿಯಲ್ಲಿ ಕಾಂಗ್ರೆಸ್ ಇನ್ನೂ ಹೆಚ್ಚಿನ ರೀತಿಯಲ್ಲಿ ಭಾಗವಹಿಸ ಬೇಕೆಂದು ನನ್ನಂತೆ ಅಭಿಪ್ರಾಯ ಪಡುವವರು ಕಾಂಗ್ರೆಸ್ಸಿನಲ್ಲಿ ಇದ್ದಾರೆ. ಸಂಸ್ಥಾನ ಗಳ ನಮ್ಮ ಸಹೋದ್ಯೋಗಿ ಹೋರಾಟಗಾರರ ಆಂದೋಲನದಲ್ಲಿ ಭಾರತ ರಾಷ್ಟ್ರೀಯ ಕಾಂಗ್ರೆಸ್ ಒಂದು ಹೆಜ್ಜೆ ಮುಂದಿಟ್ಟು ತನ್ನ ಸಹಾಯದ ಹಸ್ತವನ್ನು ನೀಡುವ ಕಾಲವು ಬಹಳ ಬೇಗ ಬರುತ್ತದೆಂದು ನಾನು ವೈಯಕ್ತಿಕವಾಗಿ ಆಶಿಸಿದ್ದೇನೆ. ‡"

---

*Of late Mysore has had some notoriety in the matter of suppression of civil liberties and normal political activity.

† It is neither possible nor desirable for the congress to keep aloof (from the states)....The congress is vastly interested in every struggle for freedom in the states and wherever possible it has to give its suppoit.

‡ There are people in the congress like myself who would like to see the congress participating more activily in the move ment of the state subjects. I personally hope that in the near future it will be possible for the Indian National Congress to take a forward step and after a helping hand to our fellow fighters in the states.

ಮೊದಲ ಬಾರಿಗೆ ಭಾರತ ರಾಷ್ಟ್ರೀಯ ಕಾಂಗ್ರೆಸ್ ದೇಶೀಯ ಸಂಸ್ಥಾನಗಳ ಚಳುವಳಿಗಳ ಕಡೆಗೆ ಗಮನ ಕೊಡುವುದಕ್ಕೆ ಮೈಸೂರು ಸಂಸ್ಥಾನದ ರಾಜಕೀಯ ಚಟುವಟಿಕೆಗಳು ಸಾಕಷ್ಟು ಕಾರಣವಾದುವು ಎಂದರೆ ತಪ್ಪಲ್ಲ. ಆದ್ದರಿಂದಲೇ ಹರಿಪುರ ಅಧಿವೇಶನದಲ್ಲಿ ದೇಶೀಯ ಸಂಸ್ಥಾನಗಳ ಭವಿಷ್ಯದ ಬಗೆಗೆ ವಿಷಯ ನಿಯಾಮಕ ಸಮಿತಿಯಲ್ಲಿ ಇಡೀ ಒಂದು ದಿನವೂ ಅಧಿವೇಶನದಲ್ಲಿ ಎರಡು ಮೂರು ಗಂಟೆಯವರೆಗೂ ಚರ್ಚೆ ನಡೆಯಿತು. ಆ ಮೊದಲು ಭಾರತ ಕಾಂಗ್ರೆಸ್ಸಿನ ಧೋರಣೆಯ ಬಗೆಗೆ ಸಂಸ್ಥಾನಗಳ ಕಾಂಗ್ರೆಸ್ ಕಾರ್ಯಕರ್ತರಲ್ಲಿ ಅನೇಕ ಅನುಮಾನಗಳಿದ್ದುವು. ಕಾಂಗ್ರೆಸ್ಸಿಗೆ ಸಂಸ್ಥಾನದ ಚಳುವಳಿ, ನಾಯಕರ ಬಗೆಗೆ ನಿಜವಾದ ಸಹಾನುಭೂತಿ, ನಂಬಿಕೆಗಳು ಇವೆಯೋ ಇಲ್ಲವೋ ? ಸಂಸ್ಥಾನಗಳಲ್ಲಿ ಹೇಗೆ ಚಳುವಳಿ ನಡೆಯಬೇಕು ? ಹಾಗೆ ನಡೆದರೆ ರಾಷ್ಟ್ರೀಯ ಕಾಂಗ್ರೆಸ್ ಹೇಗೆ ಬೆಂಬಲ ನೀಡುತ್ತದೆ ? ಸಂಸ್ಥಾನಗಳ ಕಾಂಗ್ರೆಸ್ ಕಮಿಟಿಗಳ ಸ್ಥಾನಮಾನಗಳೇನು ? ಸಂಸ್ಥಾನಗಳಲ್ಲಿ ಚಳುವಳಿ ನಡೆದರೆ ಯಾವ ಹೆಸರಿನಲ್ಲಿ ನಡೆಯಬೇಕು ? ಇತ್ಯಾದಿ ಪ್ರಶ್ನೆಗಳಿಗೆ ಸರಿಯಾದ ಉತ್ತರ ಸಿಕ್ಕಿರಲಿಲ್ಲ. ದೇಶೀಯ ಸಂಸ್ಥಾನಗಳಿಗೆ ಸಂಬಂಧಿಸಿದಂತೆ ಹರಿಪುರ ಅಧಿವೇಶನದಲ್ಲಿ ಅಂಗೀಕೃತವಾದ ಗೊತ್ತುವಳಿಗಳು ಮೇಲಿನ ಸಮಸ್ಯೆಗಳನ್ನು ನಿವಾರಿಸಿದುವು. ಭಾರತ ರಾಷ್ಟ್ರೀಯ ಕಾಂಗ್ರೆಸ್ ಮತ್ತು ಸಂಸ್ಥಾನಗಳ ಕಾಂಗ್ರೆಸ್‌ಗಳ ಧ್ಯೇಯ ಧೋರಣೆಗಳಿಗೆ ಸ್ಪಷ್ಟ ರೂಪು ದೊರೆಯಿತು. ಆ ನಿರ್ಣಯಗಳು ಹೀಗಿವೆ :

ಮುಖ್ಯವಾದ ಗೊತ್ತುವಳಿಗಳು

(1) ಕಾಂಗ್ರೆಸ್ಸಿನ ಪೂರ್ಣ ಸ್ವರಾಜ್ಯ ಧ್ಯೇಯವು ದೇಶೀಯ ಸಂಸ್ಥಾನಗಳನ್ನೊಳಗೊಂಡ ಒಟ್ಟು ಭಾರತಕ್ಕೆ ಸಂಬಂಧಿಸಿದೆ.*

(2) ದಾಸ್ಯದಲ್ಲಿ ಹೇಗೋ ಹಾಗೆಯೇ ಸ್ವಾತಂತ್ರ್ಯದಲ್ಲಿ ಬ್ರಿಟಿಷ್ ಭಾರತ ಮತ್ತು ದೇಶೀಯ ಭಾರತ ಸಮಭಾಗಿಗಳು. †

ಬ್ರಿಟಿಷ್ ಇಂಡಿಯಾದ ಪ್ರಜೆಗಳ ಹಾಗೆ, ಪೂರ್ಣ ಹಕ್ಕುಗಳನ್ನು ಹೊಂದಿರುವ ಪ್ರಜೆಗಳ ಜವಾಬ್ದಾರಿ ಸರಕಾರವುಳ್ಳ ಸಂಸ್ಥಾನಗಳು ಸೇರಿರುವ ಸಂಯುಕ್ತ ರಾಜ್ಯಾಂಗ ಪದ್ಧತಿಯನ್ನು ಮಾತ್ರ ಕಾಂಗ್ರೆಸ್ ಒಪ್ಪಿಕೊಳ್ಳುತ್ತದೆ. ‡

---

* The Purna Swaraj, which is the objective of the Congress, is for the whole of India, inclusive of the states.

† The integrity and unity of India must be maintained in freedom as it has been maintained in subjection.

‡ The only kind of federation that can be acceptable to the Congress is one in which the states participate as free units enjoying the same measure of democratic freedom as the rest of India.

ಆದ್ದರಿಂದ, ಸಂಸ್ಥಾನಗಳಲ್ಲಿ ಪೂರ್ಣ ಜವಾಬ್ದಾರಿ ಸರಕಾರ ಮತ್ತು ಪ್ರಜೆಗಳಿಗೆ ಖಚಿತವಾದ ನಾಗರಿಕ ಹಕ್ಕುಗಳು ಸಿಗಲೇಬೇಕೆಂದು ಕಾಂಗ್ರೆಸ್ ಸಮರ್ಥಿಸುತ್ತದೆ.*

ಸಂಸ್ಥಾನಗಳ ಪ್ರಜೆಗಳ ಸ್ವಾತಂತ್ರ್ಯಕ್ಕಾಗಿ ಹೋರಾಡುವುದು ತನ್ನ ಹಕ್ಕೆಂದೂ ಮತ್ತು ಅದು ಗೌರವವೆಂದೂ ಕಾಂಗ್ರೆಸ್ ತಿಳಿದುಕೊಂಡಿದೆ. §

ಸಂಸ್ಥಾನಗಳಲ್ಲಿ ಸ್ವತಂತ್ರವಾಗಿ ನಡೆಯುವ ಚಳುವಳಿಗಳನ್ನು ಸ್ವಾಗತಿಸುವುದೆಂದೂ ಇಂತಹ ಶಾಂತಿ ಮತ್ತು ನ್ಯಾಯಬದ್ಧವಾದ ಚಳುವಳಿಗಳಿಗೆ ಯಾವಾಗಲೂ ತನ್ನ ಹಾರೈಕೆ ಮತ್ತು ಬೆಂಬಲಗಳನ್ನು ನೀಡುವುದೆಂದೂ ಕಾಂಗ್ರೆಸ್ ಆಶ್ವಾಸನೆ ಕೊಡುತ್ತದೆ.†

ಹೊರಗಿನ ಕಾಂಗ್ರೆಸ್ ಕಾರ್ಯಕರ್ತರು ಸ್ವಂತ ಸಾಮರ್ಥ್ಯದಿಂದ ಚಳುವಳಿಯಲ್ಲಿ ಭಾಗವಹಿಸಲು ಅನುಮತಿ ಕೊಡಲಾಗುವುದು. ‡

(ಸಂಸ್ಥಾನಗಳ) ವಿಮೋಚನಾ ಕಾಲವು ಬಹಳ ದೂರವಿಲ್ಲ**

ಹರಿಪುರ ಅಧಿವೇಶನದಲ್ಲಿಯೇ ಮೈಸೂರ್ ಕಾಂಗ್ರೆಸ್ ಬೋರ್ಡ್ ತನ್ನ ಹಾಲೀ ಹೆಸರಿನಿಂದಲೇ ಕೌನ್ಸಿಲ್ ಚುನಾವಣೆ (ಮಾರ್ಚ್ 1938)ಯಲ್ಲಿ ಭಾಗವಹಿಸಬಹುದೆಂದು ತೀರ್ಮಾನವಾಯಿತು. ಮೈಸೂರಿನ ರಾಜಕೀಯ ಪರಿಸ್ಥಿತಿಯನ್ನು ಪರಿಶೀಲಿಸಲು ಶ್ರೀಪ್ರಕಾಶಂ ಅವರನ್ನು ನೇಮಕ ಮಾಡಲಾಯಿತು. ಒಟ್ಟಿನಲ್ಲಿ, ಹರಿಪುರ ಅಧಿವೇಶನದ ತೀರ್ಮಾನಗಳಿಂದ ದೇಶೀಯ ಸಂಸ್ಥಾನಗಳ ಚಳುವಳಿಗೆ ಹೊಸ ಹುರುಪು, ಹೊಸ ಶಕ್ತಿ ಮೂಡಿತು.

---

* The congress therefore, stands for full responsible Government and the guarantee civil liberties in the states.

§ The Congress considers it its right and privilege to work for the attainment of this objective in the states.

† The Congress welcomes much movements........always extend its good-will and support to such struggles carried on in a peaceful and legitimate manner.

‡ Individual congressmen however will be free to render further assistance in their personal capacities.

** It (Congress) trust the day of their (states) deliverance is not far distant.

ಹರಿಪುರದಿಂದ ಹಿಂದಿರುಗುವ ಸಂದರ್ಭದಲ್ಲಿ ಶ್ರೀ ಟಿ. ಸಿದ್ದಲಿಂಗಯ್ಯನವರು ಸೇವಾಗ್ರಾಮದಲ್ಲಿ ಮಹಾತ್ಮಗಾಂಧೀಜಿಯವರನ್ನು ಭೇಟಿಮಾಡಿದರು. ಮೈಸೂರಿನ ರಾಜಕೀಯ ಪರಿಸ್ಥಿತಿಯನ್ನು ವಿವರಿಸಿ, ಸತ್ಯಾಗ್ರಹ ಮಾಡುವ ತಮ್ಮ ಉದ್ದೇಶವನ್ನು ಮುಂದಿಟ್ಟರು. ರಾಮರಾಜ್ಯವಾದ ಮೈಸೂರಿನಲ್ಲಿ, ಬ್ರಿಟಿಷ್ ಇಂಡಿಯಾ ವ್ಯವಸ್ಥೆಯಲ್ಲಿ ಹೊಂದಿಕೊಂಡಿದ್ದ ಮೈಸೂರಿನಲ್ಲಿ, ಸತ್ಯಾಗ್ರಹ ಮಾಡುವುದು ಗಾಂಧೀಜಿಯವರಿಗೆ ಹಿಡಿಸಲಿಲ್ಲ. ಅಲ್ಲದೆ ಸತ್ಯಾಗ್ರಹ ಮಾಡುವ ಶಕ್ತಿ ಮೈಸೂರಿನ ಜನತೆಗೆ ಇದೆ ಎಂಬ ನಂಬಿಕೆ ಅವರಿಗಿರಲಿಲ್ಲ. ಮಹಾತ್ಮರ ಮನಸ್ಸನ್ನು ಒಲಿಸಿ, ಸತ್ಯಾಗ್ರಹಕ್ಕೆ ಅನುಗ್ರಹ ಪಡೆಯಲು ಮಹಾತ್ಮರೊಡನೆ ಶ್ರೀ ಸಿದ್ದಲಿಂಗಯ್ಯನವರು ನಾನಾ ರೀತಿಯಾಗಿ ವಾದ ವಿವಾದ ಮಾಡಿದರು : "ನೀವು ಮಹಾರಾಜರ ಹತ್ರ ಹೋಗಿ ಒಳ್ಳೆ ಆತಿಥ್ಯ ತೊಗೊಂಡು ಶಭಾಸ್‌ಗಿರಿ ಕೊಟ್ಬಿಟ್ಟು ಬರ್ತೀರಿ. ಇಲ್ಲಿ ಸತ್ಯ–ಅಹಿಂಸೆ ಅಂದ್ಕೊಂಡು ಸತ್ಯಾಗ್ರಹಾನೂ ಮಾಡ್ಬೇಕು ಅಂತೀರಿ"—ಅಂತ ವ್ಯಾಜ್ಯ ಮಾಡಿದರು.

"ನಿಮಗಿನ್ನೂ ಚಳುವಳಿ ಮಾಡುವ ಶಕ್ತಿ ಇಲ್ಲ"—ಮಹಾತ್ಮರು ಹೇಳಿದರು.

"ನಮ್ಗೆ ಶಕ್ತಿಯಿಲ್ದಿದ್ರೆ ಇನ್ಯಾರಿಗಿರೋದು ? ಸೇವಾದಳ ಪ್ರಾರಂಭವಾದ್ದೇ ಮೈಸೂರಿನೋರಿಂದ. (ಮೈಸೂರು ರಾಜ್ಯದಲ್ಲಿ ಡಾ. ನಾ. ಸು. ಹರ್ಡೀಕರರು ದೇಶಕ್ಕಾಗಿ ತ್ಯಾಗ ಬಲಿದಾನಗಳೊಡನೆ ಆತ್ಮಪೂರ್ವಕವಾಗಿ ದುಡಿಯುವ ಒಂದು ಸಾವಿರ ಯುವಕರನ್ನು ತಯಾರು ಮಾಡಿ ಸೇವಾದಳವನ್ನು ಸಿದ್ಧಪಡಿಸಿದ್ದರು. ಈ ಯುವಕರು ಅನೇಕ ಸತ್ಯಾಗ್ರಹಗಳಿಗೆ ಹೋಗಿ ಭಾಗವಹಿಸುತಿದ್ದರು.) ಈಗ್ಲೂ ಬೊಂಬಾಯಿ ಕಡೆ ಸತ್ಯಾಗ್ರಹ ನಡೆಸೋರು ಮೈಸೂರಿನೋರೆ. ಅವರು ನಮ್ಮೋರು ಅಂತ ಹೆಮ್ಮೆಯಿಂದ ಮಾತಾಡ್ತೇನೆ. ನಾವು ಇತರರಿಗಿಂತ ಚೆನ್ನಾಗಿ ಸತ್ಯಾಗ್ರಹ ನಡೆಸ್ತೇವೆ. ನಮಗೆ ಸತ್ಯಾಗ್ರಹ ನಡೆಸೋ ಶಕ್ತಿ ಜಾಸ್ತಿಯಿದೆ. ಅದೂ ಅಲ್ದೆ ರೀಸನಬಲ್ ಆಗೂ ಇದೆ. ಬ್ರಿಟಿಷ್ ಇಂಡಿಯಾದಲ್ಲಿ ಚಳುವಳಿ ನಡೆಸೋಕೆ ಮುಂಚೆ ಮೈಸೂರಿನಲ್ಲಿ ಚಳುವಳಿ ನಡಿಸ್ಬೇಕು. ಯಾಕೇಂದ್ರೆ ಬ್ರಿಟಿಷ್ ಇಂಡಿಯಾದಲ್ಲಿ ಒಬ್ಬನ ಕೈಕೆಳಗೆ ಎಲ್ಲಾ ಗುಲಾಮರಾದ್ರೆ ಇಲ್ಲಿ (ಮೈಸೂರಿನಲ್ಲಿ) ಬ್ರಿಟಿಷ್‌ನೋರ ಕೈಕೆಳಗೆ ಮಹಾರಾಜರು, ಮಹಾರಾಜರ ಕೈಕೆಳಗೆ ನಾವು, ಹೀಗೆ ಡಬಲ್ ಸ್ಲೇವರಿ ನಮ್ಮದು. ಆದ್ರಿಂದ ಸತ್ಯಾಗ್ರಹಾನ ನೀವು ಮೊದ್ಲು ನೇಟೀವ್ ಸ್ಟೇಟ್‌ನಲ್ಲೆ ನಡಿಸ್ಬೇಕು."

ಗಾಂಧೀಜಿಯವರಿಗೆ ನಗುವೂ ಬಂತು ಕೋಪವೂ ಬಂತು. ಶ್ರೀ ಸಿದ್ಧಲಿಂಗಯ್ಯನವರನ್ನು ದೀರ್ಘವಾಗಿ ನೋಡುತ್ತಾ "ನೀನು ಇಂಡಿಯಾದೇಶದ ಇಂಗ್ಲೀಷ್ ಅಧ್ಯಕ್ಷ" ಅಂದರು. (ಸಿದ್ದಲಿಂಗಯ್ಯನವರು ಪಾಶ್ಚಾತ್ಯರಂತೆ ಉಡುಪು ತೊಟ್ಟಿದ್ದರು). ತಮ್ಮ ಮೊರೆಗೆ ಗಾಂಧೀಜಿಯವರು ನಕ್ಕಿದ್ದರಿಂದ ಸಿದ್ಧಲಿಂಗಯ್ಯನವರು ಮತ್ತಷ್ಟು ಗಂಭೀರವಾಗಿ ಹೇಳಿದರು : 'ಇದನ್ನ ಸೀರಿಯಸ್ ಆಗಿ ಹೇಳ್ತಿದೀನಿ. ಇದನ್ನು ನಡಸ್ದೆ

ಹೋದ್ರೆ ನೀವೇ ನಮ್ಮನ್ನ ಹಾಳುಮಾಡಿದ ಹಾಗಾಗುತ್ತೆ. ಅಲ್ಲಿ (ಮೈಸೂರಿಗೆ) ಬರೋದು, ತೊಟ್ಲೊ ತೂಗೋದು, ಮಗೂನು ಜಿಗುಟೋದು."

ಶ್ರೀ ಸಿದ್ದಲಿಂಗಯ್ಯನವರ ಮಾತಿನ ಧೋರಣೆ, ಸತ್ಯಾಗ್ರಹದ ಹಟ, ಉತ್ಸಾಹಗಳು ಮಹಾತ್ಮರಿಗೂ ಹಿಡಿಸಿದುವು ಅಂತ ಕಾಣುತ್ತೆ. "ನಿನ್ನ ಮಾತ್ನ ಒಪ್ಕೊಂಡೆ. ನಾನೊಂದು ಕಾಗ್ದ ಕೊಡ್ತೀನಿ. ತೊಗೊಂಡ್ಹೋಗಿ ಮಹಾರಾಜರಿಗೆ ಕೊಡು. ಅವರ ಮೇಲೆ ನೀನು ಬೇಕಾದ ಸತ್ಯಾಗ್ರಹ ನಡೆಸ್ಕೊ" ಅಂದರು.

"ಆಗಲಿ ಕೊಡಿ."

ಮಹಾತ್ಮರು ಮೈಸೂರು ಮಹಾರಾಜರಿಗೆ ಕೊಟ್ಟ ಪತ್ರವನ್ನು ತೆಗೆದುಕೊಂಡು ಶ್ರೀ ಸಿದ್ದಲಿಂಗಯ್ಯನವರು ಉದಕಮಂಡಲಕ್ಕೆ ಬಂದರು. ಆಗ ಬೇಸಿಗೆ ಕಾಲವಾದ್ದರಿಂದ ಮಹಾರಾಜರು ಮತ್ತು ದಿವಾನರು ಅಲ್ಲಿದ್ದರು. ಕಾಗದ ಪಡೆದುಕೊಂಡ ಅವರು ಶ್ರೀ ಸಿದ್ದಲಿಂಗಯ್ಯನವರನ್ನು ಲಕ್ಷ್ಯಕ್ಕೇ ತೆಗೆದುಕೊಳ್ಳಲಿಲ್ಲ. ಯಾವುದೇ ಉತ್ತರವನ್ನೂ ಕೊಡಲಿಲ್ಲ. ಸೌಜನ್ಯವನ್ನೂ ತೋರಲಿಲ್ಲ. ಶ್ರೀ ಸಿದ್ದಲಿಂಗಯ್ಯನವರು ಬರಿಗೈಯಲ್ಲಿ ಮೈಸೂರಿಗೆ ಹಿಂದಿರುಗಿ ನಡೆದ ಸಂಗತಿಯನ್ನು ತಮ್ಮ ಕಾಂಗ್ರೆಸ್ ಮುಖಂಡರಿಗೆ ತಿಳಿಸಿದರು. ಮತ್ತಷ್ಟು ಸಂಘಟಿತರಾಗುವುದಕ್ಕೆ, ಚಳುವಳಿಯನ್ನು ತೀವ್ರಗೊಳಿಸುವುದಕ್ಕೆ, ಕಾಂಗ್ರೆಸ್ ನಾಯಕರು ತೀರ್ಮಾನಿಸಿದರು.

ಮೈಸೂರ್ ಕಾಂಗ್ರೆಸ್ ಸ್ಥಾಪನೆ

ಮಹಾಶಿವರಾತ್ರಿಯಂದು (28–2–1938) ಮೈಸೂರಿನಲ್ಲಿ ಮಿರ್ಲೆ ಲಕ್ಷ್ಮೀನಾರಾಯಣರಾವ್ ಮನೆಯಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಸಭೆ ಸೇರಿದರು. ಶ್ರೀ ಟಿ. ಸಿದ್ದಲಿಂಗಯ್ಯನವರು ಸಭೆಯ ಅಧ್ಯಕ್ಷತೆ ವಹಿಸಿದ್ದರು. ಸಂಸ್ಥಾನದ ಎಂಟು ಜಿಲ್ಲೆಗಳಿಂದ ಪ್ರತಿನಿಧಿಗಳು ಆಗಮಿಸಿದ್ದರು. ಸಂಜೆ ಐದು ಗಂಟೆಯ ವರೆಗೆ ದೀರ್ಘವಾಗಿ ಚರ್ಚೆ ನಡೆಯಿತು. ಕೊನೆಗೆ, ಅಧಿಕೃತವಾಗಿ ಮೈಸೂರ್ ಕಾಂಗ್ರೆಸ್ ಸ್ಥಾಪನೆಯಾಯಿತು. ಜವಾಬ್ದಾರಿ ಸರಕಾರವನ್ನು ಸ್ಥಾಪಿಸುವುದಕ್ಕೆ ಹೋರಾಟ ನಡೆಸುವುದು ಸಂಸ್ಥೆಯ ಗುರಿ. ಆದಷ್ಟು ಬೇಗ ಒಂದು ರಾಷ್ಟ್ರಕೂಟ ಕರೆಯಬೇಕೆಂದೂ ಅಲ್ಲಿ ಕಾಂಗ್ರೆಸ್ ಸಂಸ್ಥೆಯ ಧ್ಯೇಯಧೋರಣೆಗಳು ತೀರ್ಮಾನವಾಗಬೇಕೆಂದೂ ಆವರೆಗೆ ಕಾಯಿದೆ ಭಂಗ ಚಳುವಳಿಯನ್ನು ಮುಂದೂಡಬೇಕೆಂದೂ ಐತನ್ಮಧ್ಯೆ ಅಧ್ಯಕ್ಷರು ದಿವಾನರೊಡನೆ ಸಂಧಾನ ನಡೆಸಬಹುದೆಂದೂ ತೀರ್ಮಾನಿಸಲಾಯಿತು. ದಿವಾನ್ ಮಿರ್ಜಾರವರ ಆಪ್ತಸ್ನೇಹಿತರಾದ ಸೇಲಂನ ವೆಂಕಟಪ್ಪಚೆಟ್ಟಿಯವರು ಕಾಂಗ್ರೆಸ್ ಸಂಸ್ಥೆಯ ಪ್ರಾರಂಭೋತ್ಸವವನ್ನು ನೆರವೇರಿಸಿದರು.

ದಿವಾನ್ ಮಿರ್ಜಾ — ಟಿ. ಸಿದ್ದಲಿಂಗಯ್ಯ

1938ನೆಯ ಫೆಬ್ರುವರಿ ತಿಂಗಳಿನಲ್ಲಿ, ಮೈಸೂರು ಸಂಸ್ಥಾನದ ರಾಜಕೀಯ ಸುಧಾರಣೆಯ ಸಮಿತಿಯ ನೇಮಕದ ಬಗೆಗೆ ನ್ಯಾಯ ವಿಧಾಯಕ ಸಭೆಯಲ್ಲಿ ಪ್ರಥಮ ಸಚಿವ

ರಾದ ಶ್ರೀ ಎಸ್. ಪಿ. ರಾಜಗೋಪಾಲಾಚಾರಿಯವರು ತಿಳಿಯ ಪಡಿಸಿದ್ದರು. ಅದಕ್ಕೆ ಪೂರಕವಾಗಿ, ಬೆಂಗಳೂರು ಲಾಲ್‌ಬಾಗಿನಲ್ಲಿ ನಡೆದ ಪುರ ಪ್ರಮುಖರ ಕೇಂದ್ರ ಸತ್ಕಾರ ಕೂಟದಲ್ಲಿ ದಿವಾನ್ ಮಿರ್ಜಾರವರು, ಸಮರ್ಥನೆ ನೀಡಿದ್ದರು. ಅದರಂತೆ ಸಮಿತಿಯ ಕೆಲವು ಹೆಸರುಗಳೂ ಕೇಳಿಬಂದವು. ಅದರಲ್ಲಿ ಕಾಂಗ್ರೆಸ್ಸಿನ ಅಧಿಕೃತ ವ್ಯಕ್ತಿಗಳಿರಲಿಲ್ಲ. ಅಷ್ಟಕ್ಕೂ ಸರಕಾರ ಕಾಂಗ್ರೆಸ್ ಸಂಸ್ಥೆಯನ್ನು ಮಾನ್ಯ ಮಾಡಿರಲಿಲ್ಲ.

ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಸಮಾರಂಭವೊಂದರಲ್ಲಿ ದಿವಾನ್ ಮಿರ್ಜಾರವರು ಮಾತಾಡುತ್ತಾ ಕಾಂಗ್ರೆಸ್ ಚಳುವಳಿಯನ್ನು ಟೀಕಿಸಿದರು. "ಮೈಸೂರಿನಲ್ಲಿ ಮಹತ್ತರವಾದ ದಬ್ಬಾಳಿಕೆ ಇದೆ" ಎಂದು ಜವಹರಲಾಲ್ ನೆಹರೂ ಅವರು ಹೇಳಿದ್ದ ಮಾತುಗಳನ್ನು ಮಿರ್ಜಾರವರು ಪ್ರಸ್ತಾಪಿಸಿ "ಇದನ್ನು ಮರೆಯಿರಿ" ಎಂದು ಹೇಳಿದರು. "ನೆಹರು ಮಾತು ಅಕ್ಷರಶಃ ನಿಜ" ಎಂದು ಶ್ರೀ ಟಿ. ಸಿದ್ದಲಿಂಗಯ್ಯನವರು ದಿವಾನರಿಗೆ (3–3–1938) ಪ್ರತ್ಯುತ್ತರ ಕೊಟ್ಟರು.

ದಿನಾಂಕ 5–3–1938 ರಂದು ಟಿ. ಸಿದ್ದಲಿಂಗಯ್ಯನವರು ದಿವಾನ್ ಮಿರ್ಜಾ ಅವರನ್ನು ಸೆಕ್ರಟೇರಿಯೇಟ್‌ನಲ್ಲಿ ಸಂದರ್ಶಿಸಿದರು. ರಾಜಕೀಯ ಸುಧಾರಣ ಪರಿಶೀಲನಾ ಸಮಿತಿಯ ಸದಸ್ಯರ ವಿವರ, ಸಮಿತಿಯ ಬೇಡಿಕೆ, ಸಂಸ್ಥಾನದ ಬೇರೆ ಬೇರೆ ಸುಧಾರಣೆ, ಕಾಂಗ್ರೆಸ್ಸಿನ ಸೂಚನೆಗಳನ್ನು ಕುರಿತು ಸುಮಾರು 2 ಗಂಟೆ ಸಮಾಲೋಚನೆ ನಡೆಸಿದರು. ಆದರೆ ಅದರಿಂದ ಏನೂ ಪ್ರಯೋಜನವಾಗಲಿಲ್ಲ. ಕಾಂಗ್ರೆಸ್ ಬೋರ್ಡಿನ ಒಪ್ಪಿಗೆ ಪ್ರಕಾರ ಸಮಿತಿಯವರಿಗೆ ಷರತ್ತುಗಳನ್ನು ಹಾಕಿಕೊಡುವುದಕ್ಕೆ ದಿವಾನರು ಒಪ್ಪಲಿಲ್ಲ. ಕಾಂಗ್ರೆಸ್ಸಿಗೆ, ಕಾಂಗ್ರೆಸ್ ನಾಯಕರಿಗೆ ಮತ್ತೊಮ್ಮೆ ಮುಖ ಭಂಗವಾಯಿತು. "ದಿವಾನರು ಹಾಡಿದ್ದನ್ನೆ ಹಾಡಿದರು" ಎಂದು ಶ್ರೀ ಸಿದ್ದಲಿಂಗಯ್ಯನವರು ತಮ್ಮ ಅಸಮಧಾನವನ್ನು ವ್ಯಕ್ತಪಡಿಸಿದರು.

ತಮ್ಮ ಉದ್ದೇಶ ಸಾಧನೆಗೆ ವ್ಯವಸ್ಥಿತವಾದ ಉಗ್ರವಾದ ಚಳುವಳಿಯೊಂದೇ ಸಿದ್ಧೌಷಧವೆಂದು ಕಾಂಗ್ರೆಸ್ ಮುಖಂಡರು ತೀರ್ಮಾನಿಸಿಕೊಂಡರು.

ಮುಖಂಡರ ಭಾಷಣಗಳು

ಸರಕಾರದ ದಬ್ಬಾಳಿಕೆ, ಸುಧಾರಣ ಸಮಿತಿಯ ನಾಟಕ, ಜವಾಬ್ದಾರಿ ಸರಕಾರದ ಅಗತ್ಯಗಳನ್ನು ಕುರಿತು ಕಾಂಗ್ರೆಸ್ ನಾಯಕರು ಸಂಸ್ಥಾನದಲ್ಲೆಲ್ಲಾ ಮಿಂಚಿನ ವೇಗದಲ್ಲಿ ಸಂಚರಿಸಿ ಸಕಾಲಿಕವಾದ ತರ್ಕಬದ್ಧವಾದ ಉಜ್ವಲ ಭಾಷಣಗಳಿಂದ ಜಾಗೃತಿಯನ್ನು ಉಂಟುಮಾಡಿದರು. "ಸಂಸ್ಥಾನಗಳಲ್ಲಿ ಸಮರವು ತಪ್ಪದು," "ಹೊಣೆಗಾರ ರಾಜ್ಯಪದ್ಧತಿಯಿಂದಲೇ ಶಾಂತಿ" ಎಂದು ಮುಖಂಡರು ಮೈಸೂರಿನಲ್ಲಿ (28–2–1938) ಭಾಷಣ ಮಾಡಿದರು.

ಸಂಸ್ಥಾನದ ಮುಖಂಡರಿಗೆ ಉತ್ತೇಜನ ಕೊಡುವ ಹಾಗೆ, "ಸಂಸ್ಥಾನವು ಪ್ರಜೆಗಳಿಂದಲೇ ಸಾಗಿಸಲ್ಪಡಬೇಕು" ಎಂದು ಮಹಾತ್ಮ ಗಾಂಧೀಜಿಯವರು ಹೇಳಿಕೆ ಕೊಟ್ಟರು. ಕಾಂಗ್ರೆಸ್ಸಿನ ಅದೃಷ್ಟವೋ ಎನ್ನುವಂತೆ ಮಾರ್ಚಿಯಲ್ಲಿ (1938) ನಡೆದ

ಕೌನ್ಸಿಲ್ ಚುನಾವಣೆಯಲ್ಲಿ ಕಾಂಗ್ರೆಸ್ಸಿಗೆ ಭಾರಿ ಜಯ ಲಭಿಸಿತು. "ಕಾಂಗ್ರೆಸ್ ಚಳುವಳಿ ನಾಲ್ಕು ಜನ ಬೇಜವಾಬ್ದಾರಿ ಜನರ ಚಳುವಳಿ. ಇದಕ್ಕೆ ಜನತೆಯ ಬೆಂಬಲವಿಲ್ಲ" ಎಂದು ದಿವಾನರು ಮಾಡಿದ ಅಪಪ್ರಚಾರದಿಂದ ಕಾಂಗ್ರೆಸ್ಸಿಗೆ ನಷ್ಟವಾಗಲಿಲ್ಲ.

ಮೈಸೂರಿನ ಜನರಲ್ ಗ್ರೌಂಡಿನಲ್ಲಿ ಪ್ರಚಂಡ ಸಭೆ ನಡೆಯಿತು(7-3-1938). ಶ್ರೀ ಕೃಷ್ಣಪ್ಪಗೌಡ, ಶ್ರೀ ಪಾಲಹಳ್ಳಿ ಸೀತಾರಾಮಯ್ಯ, ಮುದವೀಡು ಕೃಷ್ಣರಾವ್, ಶ್ರೀಮತಿ ಕೃಷ್ಣಬಾಯಿ ಪಂಜೀಕರ, ಶ್ರೀಮತಿ ಯಶೋಧರಮ್ಮನವರು ಭಾಷಣಕಾರರಾಗಿದ್ದರು. ಎಲ್ಲರ ಘೋಷಣೆಯೂ ಒಂದೇ : "ಬರೇ ಸುಧಾರಣ ಸಮಿತಿಯಿಂದ ಪ್ರಯೋಜನವಿಲ್ಲ. ಜವಾಬ್ದಾರಿ ಸರಕಾರ ಸ್ಥಾಪಿಸುವುದೇ ಸಂಸ್ಥಾನದ ಘೋಷಣೆಯಾಗಬೇಕು."

ಬೆಂಗಳೂರಿನಲ್ಲಿಯೂ ಮುಖಂಡರ ಭಾಷಣ ನಡೆದುವು. (6-3-1938) ಶ್ರೀಗಳಾದ ಕೆ. ಚಂಗಲರಾಯ ರೆಡ್ಡಿ, ಪಟ್ಟಾಭಿ ಸೀತಾರಾಮಯ್ಯ, ಮಂಜಪ್ಪ ಹರ್ಡೀಕರ್, ಟಿ. ಎಸ್. ರಾಜಗೋಪಾಲ ಅಯ್ಯಂಗಾರ್ ಅವರುಗಳು ಸರಕಾರಕ್ಕೆ ಹೀಗೆ ಸೂಚನೆ ನೀಡಿದರು : "ಜವಾಬ್ದಾರಿ ಸರಕಾರವನ್ನು ದಯಪಾಲಿಸುವುದು ಸರಕಾರದ ಕರ್ತವ್ಯ. ಅದನ್ನು ಕೇಳಿದರೆ ಅಪರಾಧವಾಗುವುದಿಲ್ಲ." ಶ್ರೀ ಕೆ. ಟಿ. ಭಾಷ್ಯಂ ಜನತೆಗೆ ಕೊಟ್ಟ ಕರೆ ಹೀಗಿತ್ತು : "ರಾಜಿಗೆಂದರೆ ರಾಜಿಗೆ, ಚಳುವಳಿಗೆಂದರೆ ಚಳುವಳಿಗೆ; ಎಲ್ಲರೂ ಸಿದ್ಧರಾಗಿರಬೇಕು.''

ದಿನಾಂಕ 18-3-1938 ರಂದು ಮೈಸೂರು ಕಾಂಗ್ರೆಸ್ ಕಮಿಟಿಯ ಗುಪ್ತ ಸಭೆ ಶ್ರೀ ಟಿ. ಸಿದ್ಧಲಿಂಗಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು. ದೀರ್ಘ ಚರ್ಚೆಯಾದ ಮೇಲೆ, ಸುಧಾರಣ ಸಮಿತಿಯಲ್ಲಿ ಜವಾಬ್ದಾರಿ ಸರಕಾರದ ಮಾತಿಲ್ಲದುದರಿಂದ ಆ ಸಮಿತಿಯನ್ನು ಬಹಿಷ್ಕರಿಸಬೇಕೆಂದು ಎಲ್ಲರೂ ಒಮ್ಮತಕ್ಕೆ ಬಂದರು.

'ಎಲ್ಲಕ್ಕೂ ಪ್ರಜಾಸ್ವಾತಂತ್ರ್ಯಬೇಕು' ಎಂದು ಶ್ರೀ ಕೆ. ಟಿ. ಭಾಷ್ಯಂ ಒಂದು ಪ್ರಕಟಣೆಯನ್ನು (18-3-1938) ಹೊರಡಿಸಿದರು. ಅದು ಹೀಗಿದೆ : "ಫೆಡರಲ್ ಮತ್ತು ರಾಜಕಾರಣ ಸಮಿತಿಯ ಉಪಯುಕ್ತತೆಯಲ್ಲಿ ನನಗೆ ಎಳ್ಳಷ್ಟೂ ವಿಶ್ವಾಸವಿಲ್ಲ. ಆ ಸಮಿತಿಗಳಲ್ಲಿ ಸರಕಾರದಿಂದ ನೇಮಕ ಹೊಂದಿದ ಸದಸ್ಯರಿದ್ದು ಅದು ಕೇವಲ ಅಮಲ ಬಜಾವಣೆ ಖಾತೆಯವರು ನಿರ್ಮಿಸಿದ ಒಂದು ಸಮಿತಿಯೆಂಬುದು ಸ್ಪಷ್ಟವಾಗಿದೆ. ಆ ಸಮಿತಿಯು ಕಾನನದ ಬೆಳುದಿಂಗಳಂತೆ ; ಅದರಿಂದ ಏನಾದರೂ ಹಿತವಾಗುವದೆಂದು ಬಯಸುವುದು ತೀರಾ ತಪ್ಪು."

ರಾಜಕೀಯ ಸುಧಾರಣಾ ಸಮಿತಿ

ಕಾಂಗ್ರೆಸ್ ಮುಖಂಡರ ಭಾಷಣಗಳಿಂದ ಸಾಕಷ್ಟು ಜನಜಾಗೃತಿಯಾದರೂ ಸರಕಾರ ಜಾಗೃತಗೊಳ್ಳಲಿಲ್ಲ. ಜನರ ಕಣ್ಣೊರಸುವ ಸರಕಾರದ ಕೆಲಸ ಎಂದಿನಂತೆ

ಮುಂದುವರಿಯಿತು. ಕಾಂಗ್ರೆಸ್ ಸಂಸ್ಥೆಯನ್ನು ಗಮನಕ್ಕೆ ತೆಗೆದುಕೊಳ್ಳದೆಯೇ "ಸರಕಾರ ಸುಧಾರಣ ಸಮಿತಿ"ಯನ್ನು ಘೋಷಿಸಿತು. ಕೆಳಕಂಡವರು ಅದರ ಪದಾಧಿಕಾರಿಗಳಾಗಿದ್ದರು : ಅಧ್ಯಕ್ಷರು : ರಾಜಸಭಾಭೂಷಣ ದಿವಾಣ ಬಹದ್ದೂರ್ ಕೆ. ಆರ್. ಶ್ರೀನಿವಾಸ ಅಯ್ಯಂಗಾರ್. ಸರಕಾರಿ ಸಭಾಸದರು : ರಾಜಕಾರ್ಯ ಪ್ರಸಕ್ತ ಎನ್. ಎಸ್. ಸುಬ್ಬರಾವ್, ಶ್ರೀ ಕೆ. ವಿ. ಅನಂತರಾಮನ್ (ರೆವಿನ್ಯೂ ಕಮೀಶನರ್). ಸರಕಾರೇತರ ಸದಸ್ಯರು : ಶ್ರೀಗಳಾದ ಕೆ. ಚಂಗಲರಾಯರೆಡ್ಡಿ (ಕಾಂಗ್ರೆಸ್), ಬಿ. ಚಂದ್ರಶೇಖರ ಶೆಟ್ಟಿ (ಕಾಂ), ಡಿ. ಎಚ್. ಚಂದ್ರಶೇಖರಯ್ಯ (ಕಾಂ), ಡಾ|| ಎಫ್. ಎಕ್ಸ್. ಡಿಸೌಜ, ಡಿ. ವಿ. ಗುಂಡಪ್ಪ, ರಾಜಚರಿತ ವಿಶಾರದ ರಾವ್‌ಸಾಹೇಬ್ ಹಯವದನರಾವ್, ರಾಜಸೇವಾಸಕ್ತ ಹಿರಿಯಣ್ಣಯ್ಯ, ಜೆ. ಮಹಮದ್ ಇಮಾಂ, ರಾವ್‌ಬಹದ್ದೂರ್ ಅಬ್ಬಾಸ್‌ಖಾನ್, ಸಿ. ನರಸಿಂಹಯ್ಯ, ಬಿ. ಎಸ್. ಪುಟ್ಟಸ್ವಾಮಿ, ಟಿ. ರಾಮಚಂದ್ರ, ರಾವ್‌ಬಹದ್ದೂರ್ ಎಂ. ಸಿ. ರಂಗೈಯ್ಯಂಗಾರ್, ಕೆ. ಡಿ. ರುಕ್ಮಿಣಿಯಮ್ಮ, ಪಿ. ಸುಬ್ರಾಮ ಚೆಟ್ಟಿ, ರೆ|| ಟಾಮ್ಲಿನ್‌ಸನ್, ವಿ. ವೆಂಕಟಪ್ಪ (ಕಾಂ), ಕೆ. ಗುರುದತ್ತ (ಸೆಕ್ರೆಟರಿ), ಎಂ. ಕೆ. ವರದರಾಜನ್ (ಅಸಿಸ್ಟೆಂಟ್ ಸೆಕ್ರೆಟರಿ).

ಈ ಸಮಿತಿಯಲ್ಲಿ ನಾಲ್ವರು ಕಾಂಗ್ರೆಸ್ ಕಾರ್ಯಕರ್ತರು ಇದ್ದರೂ ಇವರನ್ನು ಕಾಂಗ್ರೆಸ್ಸಿನ ಒಪ್ಪಿಗೆಯಿಂದ ಸರಕಾರ ಆಯ್ಕೆ ಮಾಡಿಕೊಂಡಿರಲಿಲ್ಲ. ತನ್ನ ಇಷ್ಟದಂತೆ ಆಯ್ಕೆ ಮಾಡಿಕೊಂಡಿತ್ತು ಅಷ್ಟೆ. ಈಗಲೂ ಸಹ ಕಾಂಗ್ರೆಸ್ ಸಂಸ್ಥೆಯನ್ನು ಸರಕಾರ ಗಮನಕ್ಕೆ ತೆಗೆದುಕೊಳ್ಳಲಿಲ್ಲ. ಈ ಮನೋಭಾವವನ್ನು ಕಾಂಗ್ರೆಸ್ ಉಗ್ರವಾಗಿ ಪ್ರತಿಭಟಿಸಿತು. ಸುಧಾರಣ ಸಮಿತಿಯ ಅಧ್ಯಕ್ಷರು ಅಸೋಸಿಯೇಟೆಡ್ ಪ್ರೆಸ್ ಪ್ರತಿನಿಧಿಯ ಮೂಲಕ (31–3–1938) "ಸಂಸ್ಥಾನದ ಪರಿಸ್ಥಿತಿಗೆ ತಕ್ಕಂತಹ ಜವಾಬುದಾರಿ ಸರಕಾರವನ್ನು ಸ್ಥಾಪಿಸಬೇಕೆಂದು ರಾಜ್ಯಘಟನಾ ಸಮಿತಿಯು ಸೂಚಿಸಲು ಯಾವ ಅಡ್ಡಿಯೂ ಇಲ್ಲ"ವೆಂದು ಹೇಳಿದರು. ಇದೆಲ್ಲ ಬೂಟಾಟಿಕೆಯೆಂದು ಕಾಂಗ್ರೆಸ್ಸಿಗೆ ತಿಳಿಯುವುದು ಕಷ್ಟವಾಗಲಿಲ್ಲ. ಪತ್ರಿಕೆಗಳೂ ಕೂಡ ಸರಕಾರದ ಧೋರಣೆಯನ್ನು ಖಂಡಿಸಿ, ಕಾಂಗ್ರೆಸ್ಸಿನ ಬೇಡಿಕೆಯನ್ನು ನ್ಯಾಯವಾದುದೆಂದು ಸಾರಿದುವು. ಆಗ 'ಸಂಯುಕ್ತ ಕರ್ನಾಟಕ' ಪತ್ರಿಕೆಯ ಸಂಪಾದಕರು ಹೀಗೆ ಬರೆದರು :

ಕಜ್ಜಾಯ ಬೇಡಿದರೆ ಕಲ್ಲು ಕೊಟ್ಟರಂತೆ*

"ಮೈಸೂರು ಸಂಸ್ಥಾನದಲ್ಲಿ ಜವಾಬ್ದಾರೀ ರಾಜ್ಯಪದ್ಧತಿಯನ್ನು ನೆಲೆಗೊಳಿಸಬೇಕೆಂದು ಅಲ್ಲಿಯ ಪ್ರಜೆಗಳು ಅನೇಕ ವರ್ಷಗಳಿಂದ ಅಲ್ಲಿಯ ಸರಕಾರಕ್ಕೆ ಕೇಳಹತ್ತಿರುವರು. ಮತ್ತು ಇತ್ತೀಚೆಗೆ ಪ್ರಜೆಗಳ ಬೇಡಿಕೆಗಳಿಗೆ ಸರಕಾರವು ತಲೆಬಾಗುವಂತೆ ಮಾಡುವ ಸಲುವಾಗಿ ಪ್ರಚಂಡ ಚಳುವಳಿಯನ್ನಾದರೂ ಅವರು ಹೂಡಿರುವರು. ದಿವಾನ ಸಾಹೇಬರು ಮೊನ್ನೆ ಮೊನ್ನೆ ರಾಜಕೀಯ ಸುಧಾರಣೆಗಳ ವಿಚಾರ ವಿಷಯ

---

* ಸಂಯುಕ್ತ ಕರ್ನಾಟಕ, 23-3-1938

ದಲ್ಲಿ ಒಂದು ಕಮಿಟಿಯನ್ನು ನೇಮಿಸಿದ್ದಾರೆ. ಈ ಕಮಿಟಿಯ ಕಾರ್ಯಕ್ಷೇತ್ರವನ್ನು ನೋಡಿದರೆ ಮೈಸೂರ ಸಂಸ್ಥಾನದ ಪ್ರಜೆಗಳಿಗೆ ಸಂಪೂರ್ಣ ನಿರಾಶೆಯಾಗುವಂತಿದೆ. ಜವಾಬ್ದಾರೀ ರಾಜ್ಯ ಪದ್ಧತಿಯನ್ನು ಸ್ಥಾಪಿಸುವುದು ಸರಕಾರದ ಉದ್ದೇಶವಿರುತ್ತ ದೆಂಬುದನ್ನು ಆ ಪ್ರಕಟಣೆಯಲ್ಲಿ ಸ್ಪಷ್ಟಪಡಿಸಲಿಲ್ಲ. ಆದರೆ ಆ ವಿಷಯವು ಕಮಿಟಿಯ ಕಾರ್ಯಕ್ಷೇತ್ರಕ್ಕೊಳಪಡಬಹುದೆಂದು ಊಹಿಸಲು ಅವಕಾಶವುಂಟೆಂದು ಕೆಲವರು ಹೇಳುವರು. ಮೈಸೂರ ಸರಕಾರದವರು ಮಾಡಬೇಕಾಗಿರುವ ಸುಧಾರಣೆಗಳ ರೂಪ ರೇಷೆಯನ್ನು ಆ ಪ್ರಕಟನೆಯ ಮೇಲಿಂದ ನಿರ್ಧರಿಸಲು ಶಕ್ಯವಿಲ್ಲ ಪ್ರಜೆಗಳು ಬೇಡಿದ್ದೇನು, ಸರಕಾರದವರು ಕೊಟ್ಟಿದ್ದೇನು ? ಮೈಸೂರ ಕಾಂಗ್ರೆಸ್ಸು ಶಿವಪುರ ದಲ್ಲಿ ಬೇಗನೆ ಕೂಡತಕ್ಕದ್ದಿರುತ್ತದೆ. ಅದರ ಅನುಮತಿಯನ್ನು ಪಡೆಯದ ಹೊರತು ಕಾಂಗ್ರೆಸ್ ಮುಂದಾಳುಗಳು ಆ ಸುಧಾರಣಾ ಕಮಿಟಿಯ ಕಾರ್ಯಕಲಾಪಗಳಲ್ಲಿ ಭಾಗ ವಹಿಸಕೂಡದೆಂದು ವಿಧಿಸಿದ್ದು ಯಥಾಯೋಗ್ಯವಿದೆ.

ಕಾಂಗ್ರೆಸ್ಸಿನ ಹೊರತು ಬೇರೆ ಪಂಗಡಗಳೇ ಸಂಸ್ಥಾನದಲ್ಲಿಲ್ಲವೆಂದು ಧಾರಾಳ ವಾಗಿ ಹೇಳಬಹುದು. ಆದುದರಿಂದ ಕಾಂಗ್ರೆಸ್ಸಿನ ಬೇಡಿಕೆಗಳನ್ನು ಮೈಸೂರ ಸರ ಕಾರದವರು ತಾತ್ಸಾರ ಮಾಡುವುದು ಯೋಗ್ಯವಾಗಲಿಕ್ಕಿಲ್ಲ."

ಶಿವಪುರ ರಾಷ್ಟ್ರಕೂಟ

ಸರಕಾರದ ದಬ್ಬಾಳಿಕೆಯನ್ನು ಪ್ರತಿಭಟಿಸಲು, ಕಾಂಗ್ರೆಸ್ಸಿನ ಧ್ಯೇಯ ಧೋರಣೆ ಗಳನ್ನು ನಿಷ್ಕರ್ಷಿಸಲು, ಕಾಂಗ್ರೆಸ್ಸಿನ ವ್ಯಕ್ತಿತ್ವವನ್ನು ಸಂಸ್ಥಾನದಲ್ಲಿ ಸ್ಥಾಪಿಸಲು, ಜವಾಬ್ದಾರಿ ಸರಕಾರದ ಕನಸನ್ನು ನನಸಾಗಿಸಲು ಮೈಸೂರ್ ಕಾಂಗ್ರೆಸ್ ಆದಷ್ಟು ಬೇಗ ಒಂದು ರಾಷ್ಟ್ರಕೂಟವನ್ನು ಸೇರಿಸಲು ಉದ್ದೇಶಿಸಿತು. ವಿಚಾರ ವಿನಿಮಯಂ ಕ್ಕಾಗಿ ಮೈಸೂರಿನಲ್ಲಿ ಸಾಹುಕಾರ್ ಚೆನ್ನಯ್ಯನವರ ಮನೆಯಲ್ಲಿ ಪ್ರಮುಖರು ಸಭೆ ಸೇರಿದರು. ಶ್ರೀಗಳಾದ ಪಿ. ತಿರುಮಲೇಗೌಡ, ಇಂಡನಾಳಿನ ಹೊನ್ನಯ್ಯ, ಪಾಲ ಹಳ್ಳಿ ಸೀತಾರಾಮಯ್ಯ, ಎಚ್. ಕೆ. ವೀರಣ್ಣಗೌಡ ಮೊದಲಾದವರು ಅಂದು ಹಾಜ ರಿದ್ದರು.

ಆದರೆ ರಾಷ್ಟ್ರಕೂಟವನ್ನು ಎಲ್ಲಿ, ಯಾವಾಗ ಸೇರಿಸುವುದು ? ಎಂಬ ಸಮಸ್ಯೆ ಗಳು ತಲೆಹಾಕಿದುವು. 1938ನೇ ಜನವರಿಯಲ್ಲಿ ಚಿತ್ರದುರ್ಗದಲ್ಲಿ ಸೇರಿದ್ದ 'ಮೈಸೂರು ಕಾಂಗ್ರೆಸ್ ಬೋರ್ಡ್' ಮುಂದಿನ ಅಧಿವೇಶನವನ್ನು ಮೈಸೂರು ಜಿಲ್ಲೆ ಯಲ್ಲಿ ನಡೆಸಲು ಉದ್ದೇಶಿಸಿತ್ತು. ಈಗ ಅದಕ್ಕೆ ಕಾಲ ಕೂಡಿ ಬಂತು. ಮೈಸೂರು ಜಿಲ್ಲೆಯಲ್ಲಿ ಎಂದಾದರೆ ಎಲ್ಲಿ ನಡೆಸುವುದು ? ನಂಜನಗೂಡು ಅಥವಾ ಪಶ್ಚಿಮ ವಾಹಿನಿಯಲ್ಲಿ ಆಗಬಹುದು. ಆದರೆ ನಂಜನಗೂಡಿನ ಅಂದಿನ ಮುಖಂಡರಾದ ಕೆ. ವಿಶ್ವೇಶ್ವರಗೌಡರು ತಮ್ಮಿಂದ ಸಾಧ್ಯವಿಲ್ಲವೆಂದರು. ಪಶ್ಚಿಮ ವಾಹಿನಿಯಲ್ಲಾದರೆ ವಕೀಲರಾದ ಎ. ಜಿ. ಬಂದೀಗೌಡರು ಮುಂದೆ ಬರಬೇಕು. ತಿಂಗಳಾನುಗಟ್ಟಲೆ ವಕೀಲ ವೃತ್ತಿ ಬಿಟ್ಟು ಸಮ್ಮೇಳನಕ್ಕೆ ದುಡಿಯಲು ಅವರು ಸಿದ್ಧರಿರಲಿಲ್ಲ. ಆಗ

ಶಿವಪುರದಲ್ಲಾದರೆ ತಾವು ಜವಾಬ್ದಾರಿ ತೆಗೆದುಕೊಳ್ಳುವುದಾಗಿ ಶ್ರೀ ಪಿ. ತಿರುಮಲೇ ಗೌಡರು ಮುಂದಾದರು. ಜೊತೆಗೆ ಶ್ರೀ ಹೆಚ್. ಹೊನ್ನಯ್ಯ, ಶ್ರೀ ಎಚ್. ಕೆ. ವೀರಣ್ಣಗೌಡರೂ ಸಿದ್ಧರಾದರು. ಅವರು ಮಂಡ್ಯದ ಪ್ರಮುಖ ಮುಖಂಡರಾಗಿದ್ದರು. ಇರ್ವಿನ್ ನಾಲಾರೈತರ ಚಳುವಳಿ ಮಾಡಿ ಅನುಭವ ಪಡೆದಿದ್ದರು. ಶಿವಪುರ ಗ್ರಾಮವು ವಾಹನ, ನೀರಿನ ಸೌಕರ್ಯಕ್ಕೆ ಅನುಕೂಲವಾದ ಸ್ಥಳ. ಹಣ ಸಂಗ್ರಹಕ್ಕೂ ಕಷ್ಟವಾಗದು. ಶಿವಪುರದ ಹೆಸರನ್ನು ಆಯ್ಕೆ ಮಾಡುವಾಗ ಸೌಕರ್ಯಗಳ ಜೊತೆಗೆ 'ಹರಿಪುರ' ಹೆಸರಿನ ಛಾಯೆಯೂ ಮುಖಂಡರಿಗೆ ಹೊಳೆದಿರಬಹುದು. ಏನೇ ಇರಲಿ, ಊರೇನೋ ತೀರ್ಮಾನವಾಯಿತು. ಆದರೆ ಆ ಊರಿನಲ್ಲಿ ಎಲ್ಲಿ ರಾಷ್ಟ್ರಕೂಟ ನಡೆಸುವುದು ? ಎಂಬ ಸಮಸ್ಯೆ ಎದುರಾಯಿತು. ಯಾಕೆಂದರೆ 'ಕಾಂಗ್ರೆಸ್' ಎಂದರೇ ಸರಕಾರಕ್ಕೆ ಬೆಂಕಿ ! ಇನ್ನು ಕಾಂಗ್ರೆಸ್ ನಡೆಸುವ ರಾಷ್ಟ್ರಕೂಟಕ್ಕೆ ಸರಕಾರ ಒಪ್ಪಿಗೆ ಕೊಟ್ಟೀತೆ ? ಕಾಂಗ್ರೆಸಿನ ಕೆಲಸಕ್ಕೆ ಸರಕಾರದಿಂದ ಒಂದು ಗೇಣು ನೆಲವೂ ಸಿಗುವಂತಿಲ್ಲ. ರಾಷ್ಟ್ರಕೂಟವೆಂದರೆ ಸಾಮಾನ್ಯವಾದುದಲ್ಲ. ಸಾವಿರಾರು ಜನರು ಸೇರುವಂಥಾದ್ದು. ಅಷ್ಟೊಂದು ಜನರು ಸೇರುವಂಥ ವಿಶಾಲವಾದ ಖಾಸಗಿ ಜಮೀನು ಬೇಕು. ಹಿಂದೊಮ್ಮೆ ನ್ಯಾಯ ವಿಧಾಯಕ ಸಭೆಯಲ್ಲಿ ಪ್ರಥಮ ಸಚಿವರು ಖಾಸಗಿ ಜಮೀನಿನಲ್ಲಿ ಸಭೆ ಸಮಾರಂಭಗಳನ್ನು ನಡೆಸಿದರೆ ಸರಕಾರದ ಆಕ್ಷೇಪವಿಲ್ಲ ಎಂಬರ್ಥದ ಮಾತುಗಳನ್ನಾಡಿದ್ದರು. ಆ ಮಾತು ಊರ್ಜಿತವಲ್ಲವಾದರೂ ಯಾವಾಗ ಬೇಕಾದರು ಸರಕಾರ ತನ್ನ ಹೇಳಿಕೆಯನ್ನು ಬದಲಾಯಿಸಿಕೊಳ್ಳುತ್ತದೆ ಎಂಬ ಸತ್ಯ ಗೊತ್ತಿದ್ದರೂ ಸರಕಾರಿ ಜಮೀನಿಗಿಂತ ಖಾಸಗಿ ಜಮೀನಿನಲ್ಲಿ ರಾಷ್ಟ್ರಕೂಟ ಸೇರಿಸುವುದು ಉಚಿತವೆಂದು ಮುಖಂಡರು ಭಾವಿಸಿದರು. ರಾಷ್ಟ್ರಕೂಟದ ವಿಷಯವನ್ನು ಚರ್ಚಿಸುವಾಗ ಶಿವಪುರದ ಭಾರೀ ಜಮೀನುದಾರರೂ ಕಂಟ್ರಾಕ್ಟರೂ ಶ್ರೀಮಂತರೂ ಆಗಿದ್ದ ಶ್ರೀ ಪಿ. ತಿರುಮಲೇಗೌಡರು ಹಾಜರಿದ್ದರು. ಅವರ ಮನೆಗೆ ಹೊಂದಿಕೊಂಡಂತೆ ಅವರ ವಿಶಾಲವಾದ ಜಮೀನೂ ಇತ್ತು. ಅವರು ರಾಷ್ಟ್ರಕೂಟಕ್ಕೆ ಜಮೀನು ಕೊಡುವ ಭರವಸೆ ನೀಡಿದರು. ಸರಕಾರಕ್ಕೆ ವಿರುದ್ಧವಾಗಿ ವರ್ತಿಸಲು ಎಂಥವರೂ ಹೆದರುತಿದ್ದ ಆ ಕಾಲದಲ್ಲಿ ಸರಕಾರಕ್ಕೆ ವಿರುದ್ಧವಾಗಿದ್ದ ಕಾಂಗ್ರೆಸ್ ಸಂಸ್ಥೆಯ ರಾಷ್ಟ್ರಕೂಟಕ್ಕೆ ತಮ್ಮ ಮನೆ, ಜಮೀನು ಬಿಟ್ಟುಕೊಡಲು ಮುಂದೆ ಬಂದುದು ಕಾಂಗ್ರೆಸ್ಸಿನ ಸುಯೋಗ. ಶ್ರೀ ತಿರುಮಲೇಗೌಡರ ದೇಶಭಕ್ತಿ, ಜನಹಿತಭಾವನೆ, ಕಾಂಗ್ರೆಸ್ ಬಗೆಗೆ ಅವರಿಗಿದ್ದ ನಂಬಿಕೆ ಅನುಪಮವಾದುದು ಹಾಗೂ ಅನುಕರಣೀಯವಾದುದು. ಶ್ರೀ ಗೌಡರ ಉದಾರ ಮನಸ್ಸಿನಿಂದ ಸ್ಥಳದ ಸಮಸ್ಯೆ ಪರಿಹಾರವಾಯಿತು. ಅವರು ತಮ್ಮ ಸ್ವಂತ ಜಮೀನನ್ನು ಬಿಟ್ಟುಕೊಡದಿದ್ದರೆ ಸರ್ಕಾರದ ಜಮೀನಿನಲ್ಲಿ ಧ್ವಜಸತ್ಯಾಗ್ರಹ ನಡೆಸುವುದು ಅಂದು ಸಾಧ್ಯವಿರಲಿಲ್ಲ. 1938 ನೇ ಇಸವಿಯ ಏಪ್ರಿಲ್ ತಿಂಗಳನಲ್ಲಿ ಶಿವಪುರದಲ್ಲಿ ಮೈಸೂರ್ ಕಾಂಗ್ರೆಸ್‌ನ ಪ್ರಥಮ ಅಧಿವೇಶನ ನಡೆಯಲು ತೀರ್ಮಾನವಾಯಿತು.

ಮಹಾತ್ಮ ಗಾಂಧೀಜಿಯವರ ಸಂದರ್ಶನ

ಹರಿಪುರ ಕಾಂಗ್ರೆಸ್ ಅಧಿವೇಶನದ ಸ್ಫೂರ್ತಿಯಿಂದ, ಮೈಸೂರು ಸಂಸ್ಥಾನದ ಹೋರಾಟದ ಅಗತ್ಯದಿಂದ 'ಮೈಸೂರ್ ಕಾಂಗ್ರೆಸ್' ಸ್ಥಾಪನೆಯಾಯಿತು. "ಕಾಂಗ್ರೆಸ್" ಎನ್ನುವ ಪದವನ್ನು ಸಂಸ್ಥಾನಕ್ಕೆ ಬಳಸಿಕೊಳ್ಳಲು ಅಂದಿನ ರಾಷ್ಟ್ರನಾಯಕರ ಒಪ್ಪಿಗೆಯನ್ನು ಪಡೆದಿರಲಿಲ್ಲ. ಮಹಾತ್ಮ ಗಾಂಧೀಜಿ ಮೊದಲಾದ ರಾಷ್ಟ್ರನಾಯಕರ ಆಶೀರ್ವಾದ ರೂಪದ ಒಪ್ಪಿಗೆ ಪಡೆಯುವ ಅಗತ್ಯವೂ ಮೈಸೂರಿನ ಮುಖಂಡರಿಗೆ ಕಾಣಿಸಿತು. ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಮತ್ತು ಮೈಸೂರು ಕಾಂಗ್ರೆಸ್ಸಿನ ಸಂಬಂಧದ ಬಗೆಗೆ ಸ್ಪಷ್ಟತೆಯು ಬೇಕಿತ್ತು. ಕಾಂಗ್ರೆಸ್ಸಿನ ಸಹಾನುಭೂತಿಯ ಅಥವಾ ಒಪ್ಪಿಗೆಯ ಪರಿಗಣನೆಯೇ ಇಲ್ಲದೆ ಸರಕಾರ ಸುಧಾರಣ ಸಮಿತಿಯನ್ನು ಘೋಷಿಸಿತ್ತು. ಇದರ ಸಾಧಕ ಬಾಧಕಗಳ ಬಗೆಗೆ ಗಂಭೀರವಾಗಿ ಆಲೋಚಿಸಬೇಕಾಗಿತ್ತು. ಶಿವಪುರ ರಾಷ್ಟ್ರಕೂಟ, ಧ್ವಜ ಸತ್ಯಾಗ್ರಹಗಳಿಗೆ ಮಹಾತ್ಮರ ಅನುಗ್ರಹಬೇಕು. ಈ ಎಲ್ಲ ವಿಷಯಗಳ ಹಿನ್ನೆಲೆಯಲ್ಲಿ ಮಹಾತ್ಮಾಜಿಯವರೊಡನೆ ವಿಚಾರ ವಿನಿಮಯ ಮಾಡಲು ಮೈಸೂರ್ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಟಿ. ಸಿದ್ಧಲಿಂಗಯ್ಯನವರು ಡೆಲಾಂಗಿಗೆ ಹೊರಟರು. ಅವರ ಜೊತೆಯಲ್ಲಿ ಶ್ರೀ ಭೂಪಾಳಂ ಚಂದ್ರಶೇಖರಯ್ಯನವರೂ ಹೋದರು. ಇಬ್ಬರೂ ದಿನಾಂಕ 26–3–1938 ರಂದು ಮಹಾತ್ಮ ಗಾಂಧೀಜಿಯವರನ್ನು ಭೇಟಿಮಾಡಿದರು. ಅಂದಿನ ಸಮಸ್ಯೆಗಳ ಬಗೆಗೆ ಚರ್ಚೆ ನಡೆಯಿತು. ಆಗ ಉತ್ಕಲದ ಡೆಲಾಂಗಿನಲ್ಲಿ ಗಾಂಧೀ ಸೇವಾ ಸಂಘದ 4ನೇ ಅಧಿವೇಶನ ನಡೆಯುತ್ತಿದ್ದುದರಿಂದ ಗಾಂಧೀಜಿಯವರು ಅಲ್ಲಿದ್ದರು.

ಮೈಸೂರು ಸಂಸ್ಥಾನದ ರಾಜಕೀಯ ಪರಿಸ್ಥಿತಿಯನ್ನೂ ಸರಕಾರ ಘೋಷಿಸಿರುವ ಸುಧಾರಣಾ ಸಮಿತಿಯ ವಿಷಯವನ್ನೂ ವಿವರಿಸಿ ಶ್ರೀ ಟಿ. ಸಿದ್ಧಲಿಂಗಯ್ಯನವರು, "ಬಾಪೂಜಿ ಸುಧಾರಣ ಸಮಿತಿಯ ಬಗೆಗೆ ನಿಮ್ಮ ಸಲಹೆ ಏನು ?" ಎಂದು ಕೇಳಿದರು. ಗಾಂಧೀಜಿ : "ಇಂಥ ಸಂದರ್ಭಗಳಲ್ಲಿ ಕೇವಲ ವೈಯಕ್ತಿಕ ಆಶ್ವಾಸನೆಗಳು ಸಾಕಾಗುವುದಿಲ್ಲವೆಂದು ದಿವಾನರಿಗೆ ನೀವು ಸ್ಪಷ್ಟವಾಗಿ ಹೇಳಬೇಕು. ನಾಳೆಯ ದಿನ ಪ್ರಸಿದ್ಧವಾಗುವ ರಾಜ್ಯಘಟನಾ ಸಮಿತಿಯ ವಿಷಯ ವಿವೇಚನೆಯಲ್ಲಿ ಜವಾಬ್ದಾರಿ ಸರಕಾರವನ್ನು ಕೊಡುವ ವಿಚಾರವೇ ಮುಂತಾದವು ಅಡಕವಾಗಿವೆಯೆಂದು ದಿವಾನರು ಲಿಖಿತರೂಪವಾಗಿ ಆಶ್ವಾಸನೆ ಕೊಡಬೇಕು. ಕೇವಲ ಘೋಷಣೆ ಮಾಡಬೇಕಾದ ಅಗತ್ಯವಿಲ್ಲ. ದಿವಾನರು ಗವರ್ನರರಂಥ ಉಚ್ಚ ಪದವಿಗೆ ಏರಬಹುದು. ಮುಂದೆ ಅವರ ಸ್ಥಳಕ್ಕೆ ಬರುವವರು ಬಾಯಿಂದ ಹೇಳಿದ ಆಶ್ವಾಸನಗಳನ್ನು ಪಾಲಿಸಲು ಬದ್ಧರಾಗುವರೆಂದು ನಂಬುವುದಕ್ಕಾಗುವುದಿಲ್ಲ. ಸಮಿತಿಯ ಸದಸ್ಯರು ಜನತೆಯ ನಿಜವಾದ ಪ್ರತಿನಿಧಿಗಳಾಗಿರಬೇಕು. ಅವರು ಕೇವಲ ಸರಕಾರದವರಿಂದ ನೇಮಿಸಲ್ಪಟ್ಟ ಸದಸ್ಯರಾಗಿರಬಾರದು." ಟಿ. ಸಿದ್ಧಲಿಂಗಯ್ಯ : "ಸದ್ಯದ ಪರಿಸ್ಥಿತಿಯಲ್ಲಿ ಸರಕಾರ ನಮ್ಮ ಕಾಂಗ್ರೆಸ್‌ಗೆ ಮನ್ನಣೆ ಕೊಡುತ್ತದೆಯೇ ?"

ಗಾಂಧೀಜಿ : ಸರಕಾರದವರು ಮೈಸೂರ್ ಕಾಂಗ್ರೆಸ್ಸಿಗೆ ಮನ್ನಣೆ ಕೊಡ ಬಲ್ಲರು. ಪರಸ್ಪರ ವಿನಿಮಯದಿಂದ ಸುಧಾರಣಾ ಸಮಿತಿಗೆ ಕಾಂಗ್ರೆಸ್ ಪ್ರತಿನಿಧಿಗಳನ್ನು ಆರಿಸಬಹುದು. ಆದರೆ ಮೈಸೂರ್ ಕಾಂಗ್ರೆಸ್ಸಿನವರು ಒಮ್ಮೆಲೇ ಹೋರಾಟ ಹೂಡದೆ ಜನತೆಯನ್ನು ಸುಶಿಕ್ಷಿತರನ್ನಾಗಿ ಮಾಡಬೇಕು. ಚುನಾವಣೆಯಲ್ಲಿ ವಿಜಯ ಸಂಪಾದಿಸಿದ ಮಾತ್ರಕ್ಕೆ ಜನತೆಯ ಬೆಂಬಲವಿದೆ ಎಂದು ಹೇಳುವುದಕ್ಕಾಗುವುದಿಲ್ಲ. ಹರಿಪುರ ಕಾಂಗ್ರೆಸ್ ಅಧಿವೇಶನದಲ್ಲಿ ಲಕ್ಷಾವಧಿ ಜನರು ಸೇರಿರಲಿಲ್ಲವೆ? ಅವರೆಲ್ಲ ಗುಂಡಿನ ಮುಂದೆ ಧೈರ್ಯವಾಗಿ ನಿಲ್ಲಲಾರರು. ಸುಧಾರಣಾ ಸಮಿತಿಯಲ್ಲಿ ಯೋಗ್ಯ ಜನರಿದ್ದರೆ ಅವರೊಂದಿಗೆ ಸಹಕಾರ ಮಾಡಬಹುದು. ಆದರೆ ಸಮಿತಿ ಬಹಿಷ್ಕಾರ ಹಾಕದೆ ಸರಕಾರದ ಜೊತೆಯಲ್ಲಿ ಒಂದು ಬಗೆಯ ಸಂಧಾನಕ್ಕೆ ಬರಬೇಕು.

ಭೂಪಾಳಂ : ಸುಧಾರಣಾ ಸಮಿತಿಯಲ್ಲಿ ಕಾಂಗ್ರೆಸ್ ಸದಸ್ಯರು ಕೆಲಸ ಮಾಡ ಬಹುದೆ ?

ಗಾಂಧೀಜಿ : ಆಯಾ ಸದಸ್ಯರು ವೈಯಕ್ತಿಕವಾಗಿ ಸಮಿತಿಯ ಕೆಲಸ ಮಾಡ ಬಾರದು. ಆದರೆ ಕಾಂಗ್ರೆಸ್ ಸಂಸ್ಥೆಯ ಪ್ರತಿನಿಧಿಗಳೆಂದು ಒಪ್ಪಿಗೆ ಪಡೆದು ಸಮಿತಿಯೊಂದಿಗೆ ಸಹಕರಿಸಬಹುದು.

ಸಿದ್ದಲಿಂಗಯ್ಯ : ಮೈಸೂರಿನಲ್ಲಿ ಸಂಸ್ಥೆಗೆ "ಕಾಂಗ್ರೆಸ್" ಎಂದು ಹೆಸರಿಟ್ಟು ಕೊಳ್ಳಲು ನಿಮ್ಮ ಆಕ್ಷೇಪವಿದೆಯೆ ?

ಗಾಂಧೀಜಿ : ಮೈಸೂರ್ ಕಾಂಗ್ರೆಸ್ ಎಂದು ಹೆಸರಿಟ್ಟುಕೊಳ್ಳುವುದಕ್ಕೆ ನನ್ನ ದೇನೂ ಆಕ್ಷೇಪವಿಲ್ಲ. ಆದರೆ ರಾಷ್ಟ್ರೀಯ ಮಹಾಸಭೆಯ ಸದಸ್ಯರಾದವರು ಮಾತ್ರ ಮೈಸೂರ್ ಕಾಂಗ್ರೆಸ್‌ನ ಸದಸ್ಯರಾಗಬೇಕು ಎಂಬುದಕ್ಕೆ ನನ್ನ ಆಕ್ಷೇಪವಿದೆ. ಯಾಕೆಂದರೆ ಹೀಗೆ ಮಾಡುವುದರಿಂದ ರಾಷ್ಟ್ರೀಯ ಕಾಂಗ್ರೆಸ್, ಸಂಸ್ಥಾನದ ರಾಜಕಾರಣದಲ್ಲಿ ತಲೆಹಾಕಬೇಕಾಗುವುದು. ಇದು ನನಗೆ ಬೇಕಿಲ್ಲ.

ಸಿದ್ದಲಿಂಗಯ್ಯ : ನಾವು ರಾಷ್ಟ್ರಧ್ವಜ ಬಳಸುವುದಕ್ಕೆ ನಿಮ್ಮ ಪ್ರತಿಕ್ರಿಯೆ ಏನು ?

ಗಾಂಧೀಜಿ : ಹಿಂದೀ ರಾಷ್ಟ್ರೀಯ ಮಹಾಸಭೆಯ ಸಹಾಯ ಸಹಾನುಭೂತಿಗಳಿಲ್ಲದೆ ರಾಷ್ಟ್ರಧ್ವಜದ ಮಾನವನ್ನು ರಕ್ಷಿಸುವುದು ನಿಮಗೆ ಶಕ್ಯವಿಲ್ಲದ್ದರಿಂದ ನೀವು ರಾಷ್ಟ್ರಧ್ವಜವನ್ನು ಉಪಯೋಗಿಸಬಾರದೆಂಬುದು ನನ್ನ ವೈಯಕ್ತಿಕ ಅಭಿಪ್ರಾಯ. ಹೆಚ್ಚು ಮಹತ್ವದ ಸಮಸ್ಯೆಗಳ ಬಗೆಗೆ ಎಲ್ಲ ಶಕ್ತಿಯನ್ನು ಕೇಂದ್ರೀಕರಿಸುವುದು ಅವಶ್ಯವಿರುವಾಗ ರಾಷ್ಟ್ರಧ್ವಜದ ಪ್ರಶ್ನೆಯಲ್ಲಿಯೇ ಮೈಸೂರಿನವರು ತಮ್ಮ ಉತ್ಸಾಹ ಶಕ್ತಿಯನ್ನು ವ್ಯಯಮಾಡುವುದು ನನಗೆ ಸರಿಯೆನಿಸುವುದಿಲ್ಲ.

ಸಿದ್ದಲಿಂಗಯ್ಯ : ಮೈಸೂರಿನಲ್ಲಿ ರಾಷ್ಟ್ರಧ್ವಜದ ಮರ್ಯಾದೆಯನ್ನು ರಕ್ಷಿಸುವ ಹೊಣೆಯನ್ನು ನಾವು ಹೊರುತ್ತೇವೆ.

ಗಾಂಧೀಜಿ : ಇದನ್ನು ಅಖಿಲ ಭಾರತದ ಸಮಸ್ಯೆಯನ್ನಾಗಿ ಮಾಡಬೇಡಿ !

ಭೂಪಾಳಂ : ಸಂಯುಕ್ತ ರಾಜ್ಯ ಘಟನೆಯಲ್ಲಿ ಕಾಂಗ್ರೆಸ್ಸಿನವರು ಭಾಗವಹಿಸ ಬಹುದೆ ?

ಗಾಂಧೀಜಿ : ನಾಗರೀಕರ ಹಕ್ಕು ಬಾಧ್ಯತೆ ಮತ್ತು ಹೊಣೆಗಾರ ರಾಜ್ಯ ಪದ್ಧತಿಯನ್ನು ಕೊಡುವವರೆಗೆ ಸಂಯುಕ್ತ ರಾಜ್ಯ ಘಟನೆಗೆ ನಾವು ಸಂಪೂರ್ಣವಾಗಿ ವಿರುದ್ಧವಾಗಿರುವೆವೆಂದು ಸರಕಾರಕ್ಕೆ ಸ್ಪಷ್ಟವಾಗಿ ಹೇಳಬೇಕು.

ಭೂಪಾಳಂ : ನಮ್ಮ ಕಾರ್ಯದ ಬಗೆಗೆ ನಿಮ್ಮ ಸಲಹೆಯೇನು ?

ಗಾಂಧೀಜಿ : ನಾನು ಕಾಲಿಡಕೂಡದೆಂದು ಹೇಳುವ ಹಲವು ಸಂಸ್ಥಾನಗಳು ಹಿಂದೂಸ್ಥಾನದಲ್ಲಿವೆ. ಆದರೆ ಮೈಸೂರಿನ ಮಹಾರಾಜರು ಮತ್ತು ದಿವಾನರು ನನಗೆ ವಿಚಾರವಿನಿಮಯ ಮಾಡುವ ಸ್ವಾತಂತ್ರ್ಯವನ್ನು ಕೊಟ್ಟಿದ್ದರು. ಅನೇಕ ಸಂಸ್ಥಾನಗಳಲ್ಲಿ 'ಕಾಂಗ್ರೆಸ್' ಎಂಬ ಶಬ್ದಕ್ಕೇ ಪ್ರತಿಬಂಧವಿದೆ! ಆದ್ದರಿಂದ ನೀವು ಮೈಸೂರಿನಲ್ಲಿ ಹೆಚ್ಚು ಜಾಣತನದಿಂದ ಕಾರ್ಯಮಾಡಬೇಕು. ಈ ಬಗೆಗೆ ನಾನು ಮೈಸೂರಿನ ದಿವಾನರೊಡನೆ ಪತ್ರ ವ್ಯವಹಾರ ಮಾಡಲು ನಿಮ್ಮ ಆಕ್ಷೇಪಣೆ ಇದೆಯೆ ?

ಸಿದ್ದಲಿಂಗಯ್ಯ, ಭೂಪಾಳಂ : ನಮ್ಮದೇನೂ ಆಕ್ಷೇಪವಿಲ್ಲ.

ಸಿದ್ದಲಿಂಗಯ್ಯ : ಬಾಪೂಜಿ, ನಾವು ಮೈಸೂರಿನಲ್ಲಿ ಹೋರಾಟ ಮುಂದು ವರಿಸಲು ನಿರ್ಧರಿಸಿದ್ದೇವೆ.

ಗಾಂಧೀಜಿ : ಒಳ್ಳೆಯದು, ಒಂದು ಹೋರಾಟಕ್ಕೆ ಮೈಸೂರಿನಲ್ಲಿ ನಿಮ ಗಿರುವ ಬಲವೆಷ್ಟು ?

" ನಾವು ಸಭೆಗಳನ್ನು ನಡೆಸಿದಾಗ ಸಹಸ್ರಾರು ಜನರು ನಮ್ಮ ಭಾಷಣ ಕೇಳಲು ಬರುತ್ತಾರೆ. ಮತ್ತು ಮೆಚ್ಚಿಕೆ ವ್ಯಕ್ತಪಡಿಸುತ್ತಾರೆ. ಸಹಸ್ರಾರು ಜನರು ಸತ್ಯಾಗ್ರಹಕ್ಕೆ ಸಿದ್ಧರಿದ್ದಾರೆ, ಜೈಲಿಗೆ ಹೋಗಲು ತಯಾರಿದ್ದಾರೆ." ಸಿದ್ದಲಿಂಗಯ್ಯನವರು ಉತ್ತರಿಸಿದರು.

"ಸುಮ್ಮನೆ ಜನರ ಗುಂಪು ಕೂಡಿದರೆ ಏನೂ ಆಗದು. ಹರಿಪುರದ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನ ನೋಡುವುದಕ್ಕೂ ಮುಖಂಡರ ಭಾಷಣ ಕೇಳುವುದಕ್ಕೂ ಅನೇಕ ಲಕ್ಷ ಜನ ಸೇರುತ್ತಿದ್ದರು. ಆದರೆ ಕೆಲವೇ ಜನ ಪೋಲೀಸರು ಲಾಠಿ ಸಮೇತ ಬಂದು ಚದುರಿಸಲು ಶುರು ಮಾಡಿದರೆ ಅವರೆಲ್ಲ ಅಲ್ಲಿ ನಿಲ್ಲುತ್ತಿದ್ದರೇನು?"

" ಆದರೆ ಬಾಪೂಜಿ, ಮೈಸೂರಿನಲ್ಲಿ ಒಂದು ಚಳುವಳಿಯನ್ನು ಯಶಸ್ವಿಯಾಗಿ ನಡೆಸಲು ನಮಗೆ ಸಾಕಷ್ಟು ಶಕ್ತಿ ಇದೆ."

"ಮಹಾರಾಜರನ್ನು ಉರುಳಿಸಲಿಕ್ಕೂ ದಿವಾನರನ್ನು ವಜಾ ಮಾಡುವುದಕ್ಕೂ ನಿಮಗೆ ಶಕ್ತಿ ಸಾಕಷ್ಟಿದೆಯಲ್ಲವೆ ?"

"ನಿಜ ಬಾಪೂಜಿ, ಮಹಾರಾಜರನ್ನು ಇಳಿಸಲಿಕ್ಕೂ ದಿವಾನರನ್ನೂ ವಜಾ ಮಾಡಲಿಕ್ಕೂ ಸಾಕಷ್ಟು ಶಕ್ತಿ ಇದೆ."

"ನಿಮಗೆ ನನ್ನ ಹಿತೋಪದೇಶವೆಂದರೆ, ನೀವು ಪ್ರಥಮ ದರ್ಜೆಯ ಪಂಡಿತರಾಗಬೇಕು. ಎಲ್ಲ ಪ್ರಶ್ನೆಗಳನ್ನು ಆಳವಾಗಿ ಅಭ್ಯಾಸ ಮಾಡಬೇಕು. ಸಮಸ್ಯೆಗಳನ್ನು ಚೆನ್ನಾಗಿ ತಿಳಿದುಕೊಂಡಿರಬೇಕು. ಮೈಸೂರಿನಲ್ಲಿ ನಿಮ್ಮ ಸರಕಾರವು ಅವಶ್ಯವೆಂದೂ ಅತಿ ಮೌಲ್ಯವೆಂದೂ ಸರಕಾರವು ಕೂಡ ಭಾವಿಸುವಂತಾಗಬೇಕು. ಸರಕಾರವು ನಿಮ್ಮ ಸಹಾಯ ಸಹಕಾರಗಳಿಲ್ಲದೆ ಏಕಾಂಗಿಯಾಗಿ ಏನನ್ನೂ ಮಾಡಲೂ ಸಾಧ್ಯವಿಲ್ಲವೆಂಬುದನ್ನು ನಿಮ್ಮ ಕಾರ್ಯದಿಂದ ನೀವು ತೋರಿಸಬೇಕು. ನಿಮ್ಮ ಸಹಕಾರ ಅಪರಿಹಾರ್ಯವೆಂದು ಸರಕಾರಕ್ಕೆ ಮನದಟ್ಟು ಮಾಡಿಕೊಡಿರಿ."

ಮಹಾತ್ಮರ ಸಂದರ್ಶನ ಮುಗಿಯಿತು. ಸತ್ಯಾಗ್ರಹವನ್ನು ವ್ಯವಸ್ಥಿತವಾಗಿ ನೆರವೇರಿಸುವ ದೃಢ ಸಂಕಲ್ಪದಿಂದ ಟಿ. ಸಿದ್ದಲಿಂಗಯ್ಯನವರು ಸ್ನೇಹಿತರೊಂದಿಗೆ ಹಿಂದಿರುಗಿದರು.

ಮಹಾತ್ಮ ಗಾಂಧೀಜಿಯವರ ಸಂದರ್ಶನದಿಂದ, ವಿಚಾರ ವಿಮರ್ಶೆಯಿಂದ ಮೈಸೂರಿನ ಮುಖಂಡರಿಗೆ ತಮ್ಮ ಜವಾಬ್ದಾರಿಯ ಅರಿವು ಮತ್ತಷ್ಟು ಸ್ಪಷ್ಟವಾಯಿತು. ಡೆಲಾಂಗಿನಿಂದ ಹಿಂದಿರುಗಿದ ನಾಯಕರು ಮಹಾತ್ಮರ ಅಭಿಪ್ರಾಯಗಳನ್ನು ಕಾಂಗ್ರೆಸ್ ಕಾರ್ಯಕರ್ತರಿಗೆ ತಿಳಿಸಿದರು. ಧ್ವಜಸತ್ಯಾಗ್ರಹದ ಬಗೆಗೆ, ಸುಧಾರಣಾ ಸಮಿತಿಯ ಬಗೆಗೆ ಮಹಾತ್ಮರ ಪ್ರತಿಕ್ರಿಯೆಗಳನ್ನು ಮೆಲುಕು ಹಾಕಿದ ಕಾಂಗ್ರೆಸ್ ಕಾರ್ಯಕರ್ತರು ಮಹಾತ್ಮರು ಮೆಚ್ಚುವ ಹಾಗೆ ಧ್ವಜಸತ್ಯಾಗ್ರಹ ನಡೆಸಿ ತೋರಿಸಬೇಕೆಂದು ದೃಢಸಂಕಲ್ಪ ಮಾಡಿದರು. ಕಾಂಗ್ರೆಸ್ ಸಂಸ್ಥೆಯ ಎಲ್ಲ ಆಶೋತ್ತರಗಳ ಸಾಧನೆಗೆ ರಾಷ್ಟ್ರಕೂಟದ ಅಗತ್ಯ ಪ್ರಧಾನವಾಗಿ ಕಂಡಿತು. ಎಲ್ಲರೂ ರಾಷ್ಟ್ರಕೂಟದ ಸಿದ್ಧತೆಗೆ ಟೊಂಕ ಕಟ್ಟಿ ನಿಂತರು.

ಶಿವಪುರ ರಾಷ್ಟ್ರಕೂಟದ ಸಿದ್ಧತೆ

ಕೇವಲ ಒಂದು ತಿಂಗಳ ಕಾಲಾವಕಾಶವಿದ್ದುದರಿಂದ ಶಿವಪುರ ರಾಷ್ಟ್ರಕೂಟದ ಸಿದ್ಧತೆ ಭರದಿಂದ ನಡೆಯಿತು. ಹರಿಪುರ ಅಧಿವೇಶನವನ್ನು ಮಾದರಿಯಾಗಿಟ್ಟು ಕೊಂಡು ಕಾರ್ಯಕರ್ತರು ದುಡಿದರು. ಸಂಸ್ಥಾನಾದ್ಯಂತ ಜನರಿಗೆ ವಿಷಯ ತಿಳಿಯಲು ಪ್ರಕಟಣೆಗೆ ಹೆಚ್ಚು ಗಮನಕೊಟ್ಟರು. ಸಂಯುಕ್ತ ಕರ್ನಾಟಕ, ವಿಶ್ವಕರ್ನಾಟಕ, ನವಜೀವನ, ತಾಯಿನಾಡು, ಜನವಾಣಿ, ಇಂಡಿಯನ್ ಎಕ್ಸ್‌ಪ್ರೆಸ್, ದಿ ಹಿಂದೂ ಪತ್ರಿಕೆಗಳು ರಾಷ್ಟ್ರಕೂಟದ ವಿಷಯಗಳನ್ನು ವಿವರವಾಗಿ ಪ್ರಕಟಿಸಿದುವು.

ಶಿವಪುರ ರಾಷ್ಟ್ರಕೂಟದ ಪ್ರತಿನಿಧಿಗಳು ಮತ್ತು ವಿಷಯ ನಿಯಾಮಕ ಸಮಿತಿಯ ಸದಸ್ಯರ ಆಯ್ಕೆಗೆ ಸಂಬಂಧಿಸಿದಂತೆ ಒಂದು ಪ್ರಕಟಣೆಯ ಮೂಲಕ ಮಹಾಜನರ ಗಮನವನ್ನು ಸೆಳೆಯಲಾಯಿತು. ಆ ಪ್ರಕಟಣೆ ಹೀಗಿದೆ: "ಹಿಂದೀ ರಾಷ್ಟ್ರೀಯ ಮಹಾ ಸಭೆ ಹಾಗೂ ಮೈಸೂರ್ ಕಾಂಗ್ರೆಸ್‌ನ ಸಭಾಸದರಾದ 18 ವರ್ಷದ ಮೇಲಿನ ಸ್ತ್ರೀ ಪುರುಷರೆಲ್ಲರೂ ಶಿವಪುರ ರಾಷ್ಟ್ರಕೂಟದ ಪ್ರತಿನಿಧಿಗಳಾಗಬಹುದು. ಪ್ರತಿನಿಧಿಗಳ ಫೀಜು 1 ರೂಪಾಯಿ ಇದ್ದು ಮಾರ್ಚಿ 31 ರೊಳಗಾಗಿ ಮೈಸೂರ್ ಕಾಂಗ್ರೆಸ್ ಕಚೇರಿಗೆ ಆ ಹಣವು ಬಂದು ಮುಟ್ಟಬೇಕು. ಇನ್ನೂ ಸಭಾಸದರಾಗದಿದ್ದವರು ಹೆಚ್ಚಿಗೆ ನಾಲ್ಕಾಣೆಯನ್ನು ಕಳುಹಿಸಿ ಇವೆರಡೂ ಸಂಸ್ಥೆಗಳ ಸದಸ್ಯರಾಗುವ ತಮ್ಮ ಇಚ್ಛೆಯನ್ನು ಬರೆದು ತಿಳಿಸಬೇಕು.

ಪ್ರತಿನಿಧಿಗಳು ತಮ್ಮ ತಮ್ಮ ಜಿಲ್ಲೆಯ ಮುಖ್ಯ ಸ್ಥಳಗಳಲ್ಲಿ ಏಪ್ರಿಲ್ 3ನೇ ತಾರೀಖಿನ ದಿವಸ ಸಭೆ ಸೇರಿ ವಿಷಯ ನಿಯಾಮಕ ಸಮಿತಿಯ ಸದಸ್ಯರನ್ನು ಆರಿಸ ಬೇಕು. ಆಯಾ ಜಿಲ್ಲೆಯವರು ಆರಿಸತಕ್ಕ ವಿಷಯ ನಿಯಾಮಕ ಸಮಿತಿಯ ಸದಸ್ಯರು : ಬೆಂಗಳೂರು ಜಿಲ್ಲೆ 10, ಮೈಸೂರು ಜಿಲ್ಲೆ 14, ಹಾಸನ 8, ಕೋಲಾರ 11, ತುಮಕೂರು 10, ಶಿವಮೊಗ್ಗ 9, ಚಿತ್ರದುರ್ಗ 9, ಕಡೂರು 7, ಬೆಂಗಳೂರು ನಗರ 5, ಮೈಸೂರು ನಗರ 4, ಉಳಿದ ಜಿಲ್ಲೆಗಳವರು ಇಬ್ಬರಂತೆ ಪ್ರತಿನಿಧಿಗಳನ್ನು ಆರಿಸಬೇಕು. ಒಟ್ಟಿಗೆ 100 ಜನರನ್ನು ವಿಷಯ ನಿಯಾಮಕ ಸಮಿತಿಗೆ ಆರಿಸಬೇಕು. ಇವರಲ್ಲದೆ ಸದ್ಯಕ್ಕೆ ಕಾರ್ಯಕಾರಿ ಮಂಡಲದಲ್ಲಿದ್ದ ಸದಸ್ಯರೂ

ವಿಷಯ ನಿಯಾಮಕ ಸಮಿತಿಯು ಸದಸ್ಯರಾಗುವರು. ಇವರು ಮದ್ದೂರಿನ ಹತ್ತಿರದ ಶಿವಪುರದಲ್ಲಿ ಏಪ್ರಿಲ್ 11 ರ ಮುಂಜಾನೆ ಸಭೆ ಸೇರುವರು.

ಏಪ್ರಿಲ್ 3ನೇ ತಾರೀಖಿನ ದಿವಸ ಪ್ರತಿನಿಧಿಗಳೆಲ್ಲರೂ ಕೂಡಿ ಅಧ್ಯಕ್ಷರನ್ನು ಆರಿಸುವರು. ಶಿವಪುರ ಅಧಿವೇಶನದ ಅಧ್ಯಕ್ಷರೇ ಮೈಸೂರ್ ಕಾಂಗ್ರೆಸ್ ಅಧ್ಯಕ್ಷರಾಗುವರು.

ಈ ರಾಷ್ಟ್ರಕೂಟದಲ್ಲಿ ವಿಚಾರ ಮಾಡತಕ್ಕ ಸೂಚನೆ ವಿಷಯ ಮುಂತಾದದ್ದೆಲ್ಲ ಏಪ್ರಿಲ್ 5 ರೊಳಗಾಗಿ ಮೈಸೂರು ಕಾಂಗ್ರೆಸ್ ಬೋರ್ಡಿಗೆ ಬಂದು ಮುಟ್ಟಬೇಕು."

ಈ ಪ್ರಕಟಣೆಯ ಪ್ರಾರಂಭದಲ್ಲಿ ಬಂದ 'ಪ್ರತಿನಿಧಿ'ಗಳಿಗೆ ಸಂಬಂಧಿಸಿದಂತೆ ಅಧ್ಯಕ್ಷರಾದ ಶ್ರೀ ಟಿ. ಸಿದ್ದಲಿಂಗಯ್ಯನವರು ಒಂದು ಪತ್ರಿಕಾ ಹೇಳಿಕೆಯನ್ನು ನೀಡಿ (2-4-1938) ಪ್ರಾಪ್ತ ವಯಸ್ಕರಾದ ಯಾವ ಮೈಸೂರಿನ ಪ್ರಜೆಯಾದರೂ ಶಿವಪುರ ರಾಷ್ಟ್ರಕೂಟದ ಪ್ರತಿನಿಧಿಗಳಾಗಬಹುದೆಂದು ತಿಳಿಸಿದರು. ಅದರಂತೆ ಅತ್ಯಲ್ಪ ಕಾಲದಲ್ಲಿ ಅನೇಕರು ತಾವಾಗಿ ಮುಂದೆ ಬಂದು ಪ್ರತಿನಿಧಿಗಳಾದರು.

ರಾಷ್ಟ್ರಕೂಟದ ಅಧ್ಯಕ್ಷರ ಆಯ್ಕೆ

ಶಿವಪುರ ರಾಷ್ಟ್ರಕೂಟದ ಮಹಾಧಿವೇಶನಕ್ಕೆ ಶ್ರೀ ಟಿ. ಸಿದ್ದಲಿಂಗಯ್ಯನವರೇ ಅಧ್ಯಕ್ಷರೆಂದು ಬಹುಮಂದಿ ಅಭಿಪ್ರಾಯಪಟ್ಟರು. ಶ್ರೀ ಕೆ. ಟಿ. ಭಾಷ್ಯಂ ಅಯ್ಯಂಗಾರ್ ಮತ್ತು ಶ್ರೀ ಹೆಚ್. ಸಿ. ದಾಸಪ್ಪನವರ ಹೆಸರುಗಳೂ ಕೇಳಿಬಂದುವು. ಆಗ ಪ್ರಜಾಪ್ರಭುತ್ವದ ರೀತಿಯಲ್ಲಿ ಚುನಾವಣೆ ನಡೆಯಬೇಕಾಯಿತು. ಬೆಂಗಳೂರು, ಮೈಸೂರು, ಹಾಸನ, ಚಿತ್ರದುರ್ಗ, ಕಡೂರು, ಶಿವಮೊಗ್ಗ ಜಿಲ್ಲಾ ಕಾಂಗ್ರೆಸ್ ಕಮಿಟಿಗಳು ಶ್ರೀ ಸಿದ್ದಲಿಂಗಯ್ಯನವರಿಗೂ; ಕೋಲಾರ, ತುಮಕೂರು ಜಿಲ್ಲಾ ಕಾಂಗ್ರೆಸ್ ಕಮಿಟಿಗಳು ಶ್ರೀ ಕೆ. ಟಿ. ಭಾಷ್ಯಂ ಅವರಿಗೂ ಮಂಡ್ಯ ತಾಲ್ಲೂಕು ಕಾಂಗ್ರೆಸ್ ಕಮಿಟಿ ಶ್ರೀ ದಾಸಪ್ಪನವರಿಗೂ ಬೆಂಬಲ ಸೂಚಿಸಿದುವು. ಬಹುಮತ ಗಳಿಸಿದ ಶ್ರೀ ಸಿದ್ದಲಿಂಗಯ್ಯನವರು ಮೈಸೂರು ರಾಜ್ಯದ ಪ್ರಥಮ ರಾಷ್ಟ್ರಕೂಟದ ಅಧ್ಯಕ್ಷರಾಗಿ ಆಯ್ಕೆಯಾದರು.

ಮತ್ತೆ ದಿವಾನರ ಭೇಟಿ

ಮೈಸೂರ್ ಕಾಂಗ್ರೆಸ್ ಸರಕಾರದೊಂದಿಗೆ ತನ್ನ ಸಂಧಾನವನ್ನು ಮುಂದುವರಿಸಿತು. ರಾಜಕೀಯ ಸುಧಾರಣ ಸಮಿತಿಯ ಬಗೆಗೆ ಮಹಾತ್ಮ ಗಾಂಧೀಜಿಯವರ ಅಭಿಪ್ರಾಯವನ್ನು ದಿವಾನರಿಗೆ ತಿಳಿಸಲು ಶ್ರೀ ಟಿ. ಸಿದ್ದಲಿಂಗಯ್ಯನವರು ಉದಕ ಮಂಡಲಕ್ಕೆ ಹೋದರು (6-4-1938). ಬಂದ ದಾರಿಗೆ ಸುಂಕವಿಲ್ಲವೆಂಬಂತೆ ಕಾಂಗ್ರೆಸ್ ಅಧ್ಯಕ್ಷರು ಬರಿಗೈಯಲ್ಲಿ ಹಿಂದಿರುಗಿದರು. ದಿವಾನರು ಶ್ರೀ ಸಿದ್ದಲಿಂಗಯ್ಯನವರ ಮಾತಿಗೆ ಕಿವಿಗೊಡಲಿಲ್ಲ. ಮಹಾತ್ಮ ಗಾಂಧೀಜಿಯವರ ಅಭಿಪ್ರಾಯವೂ ಅವರಿಗೆ ರುಚಿಸಲಿಲ್ಲ. ವಿಧಿಯಿಲ್ಲದೆ ಸುಧಾರಣ ಸಮಿತಿಯ ಬಹಿಷ್ಕಾರಕ್ಕೆ ಕಾಂಗ್ರೆಸ್ ತೀರ್ಮಾನಿಸಬೇಕಾಯಿತು. ರಾಷ್ಟ್ರಕೂಟದ ಸಿದ್ಧತೆ ಮುಂದುವರಿಯಿತು.

ಶಿವಪುರ

ಶಿವಪುರವು ಮೈಸೂರು ರಾಜ್ಯದ ಸತ್ಯಾಗ್ರಹ ಚಳುವಳಿಗಳಲ್ಲಿ ಅಗ್ರಸ್ಥಾನ ಪಡೆಯುವ, ಮೈಸೂರು ಕಾಂಗ್ರೆಸ್ಸಿನ ಪ್ರಥಮ ಅಧಿವೇಶನ ಕೂಡುವ, ಮೈಸೂರು ಕಾಂಗ್ರೆಸ್ ಇತಿಹಾಸದಲ್ಲಿ ಸುವರ್ಣಾಕ್ಷರದಲ್ಲಿ ಬರೆದಿಡುವ ಶಾಶ್ವತವಾದ ಹೆಸರಾಗುವುದೆಂದು ಅಂದು ಯಾರು ಕಂಡಿದ್ದರು? ಜನಸಾಮಾನ್ಯರಲ್ಲಿ ಜನಜಾಗೃತಿ ಉಂಟುಮಾಡಿ ಭಾರತ ಸ್ವಾತಂತ್ರ್ಯ ಹೋರಾಟದ ಮಹಾಪ್ರವಾಹಕ್ಕೆ ತನ್ನ ಕಾಣಿಕೆಯನ್ನು ಗಮನೀಯವಾಗಿ ಅರ್ಪಿಸಿದ ಇತಿಹಾಸ ಪ್ರಸಿದ್ಧವಾದ ಊರಾಯಿತು ಶಿವಪುರ. ಇದು ಮದ್ದೂರಿನ ಪಕ್ಕದಲ್ಲಿ, ಮೈಸೂರು ಬೆಂಗಳೂರುಗಳ ಹೆದ್ದಾರಿಯಲ್ಲಿ, ಶಿಂಷಾನದಿಯ ದಂಡೆಯಲ್ಲಿ ಇದೆ. ಇಲ್ಲಿರುವ ಸೌಲಭ್ಯಗಳೇ ಇಲ್ಲಿ ಅಧಿವೇಶನ ಮಾಡಲು ಉತ್ತೇಜಿಸಿದ್ದು.

ಶಿವಪುರಕ್ಕೆ ಎಂಟು ಕಡೆಯ ರಸ್ತೆಗಳ ಸೌಲಭ್ಯವಿದೆ: ಬೆಂಗಳೂರು ಮತ್ತು ಮೈಸೂರುಗಳಿಂದ ಬರುವ ಹೆದ್ದಾರಿ ಮತ್ತು ರೈಲುದಾರಿಗಳು; ಕಸಬ ಕೋಡಿಹಳ್ಳಿ ಕಡೆಯಿಂದ ಬರುವ ಕಾಲುದಾರಿ, ವೈದ್ಯನಾಥಪುರದ ಕಡೆಯಿಂದ ಬರುವ ಹೊಳೆ ಹನುಮಂತರಾಯ ದೇವಾಲಯದ ರಸ್ತೆ, ಹಲ್ಲೇಗೌಡ ಕೊಪ್ಪದ ಕಡೆಯಿಂದ ಬರುವ ರಸ್ತೆ. ಪಕ್ಕದಲ್ಲೇ ಶಿಂಷಾನದಿ ಹರಿಯುವುದರಿಂದ ನೀರಿನ ಸೌಲಭ್ಯಕ್ಕೆ ಕೊರತೆಯಿಲ್ಲ. ಎಲ್ಲ ವ್ಯವಸಾಯದ ಜಮೀನಾಗಿದ್ದು, ಅಧಿವೇಶನ ನಡೆಯಬೇಕಾಗಿದ್ದುದು ಬೆಳೆಯಿಲ್ಲದ ಸಮಯವಾದುದರಿಂದ ಜಾಗಕ್ಕೂ ಅಡ್ಡಿಯಿಲ್ಲ. ಶ್ರೀಮಂತರಿರುವುದರಿಂದ ಹಣ ಕೂಡಿಸುವುದಕ್ಕೂ ಹೆಚ್ಚು ಕಷ್ಟವಿಲ್ಲ. ಹೀಗಿದ್ದುದರಿಂದಲೇ ಜನನಾಯಕರುಗಳು ಇಲ್ಲಿ ರಾಷ್ಟ್ರಕೂಟದ ಸಿದ್ಧತೆ ಮಾಡಲು ಒಪ್ಪಿಕೊಂಡಿದ್ದು.

ಮುಂದಿನ ಸಿದ್ಧತೆಗೆ ಅಂದಿನ ರಾಜಕೀಯ ಮುಖಂಡರಾಗಿದ್ದ ಶ್ರೀ ಎಚ್. ಕೆ. ವೀರಣ್ಣಗೌಡರು ಹೆಗಲು ಕೊಟ್ಟರು. ಅವರು ಪ್ರಾರಂಭದಲ್ಲಿ ಕಾಂಗ್ರೆಸ್ ಸಂಸ್ಥೆ ಕಟ್ಟಲು, ಪ್ರಚಾರ ಮಾಡಲು ಸಾಕಷ್ಟು ದುಡಿದವರು. ಆದ್ದರಿಂದ, 1938 ನೇ ಮಾರ್ಚಿ 11ನೇ ತಾರೀಖಿನಂದು ಮೈಸೂರು ಶ್ರೀ ಗೋಪಾಲಶೆಟ್ಟರ ಮಹಡಿಯಲ್ಲಿ ಸೇರಿದ್ದ ಜಿಲ್ಲಾ ಪ್ರತಿನಿಧಿಗಳ ಸಭೆ ಶಿವಪುರ ರಾಷ್ಟ್ರಕೂಟದ ಸಿದ್ಧತೆಯ ಸಂಪೂರ್ಣ ಜವಾಬ್ದಾರಿಯನ್ನು ಶ್ರೀ ಎಚ್. ಕೆ. ವೀರಣ್ಣಗೌಡರಿಗೆ ವಹಿಸಿತು.

ಮೈಸೂರಿನ ಸಂಸ್ಥಾನದಲ್ಲೇ ಇಂಥ ದೊಡ್ಡ ಸಭೆ ಮೊದಲನೆಯದಾದುದರಿಂದ, ಇನ್ನಿಲ್ಲದಂತೆ ಸಮ್ಮೇಳನ ನಡೆಯಬೇಕೆಂಬ ಉದ್ದೇಶದಿಂದ ಶ್ರೀ ವೀರಣ್ಣಗೌಡರು ಮತ್ತು ಇತರ ಹಿರಿಯ ಕಾರ್ಯಕರ್ತರು ಕಾರ್ಯತತ್ಪರರಾಗಿ ಕೆಲಸವನ್ನು ಚೆನ್ನಾಗಿ ನಿರ್ವಹಿಸುವ, ಎಲ್ಲ ರೀತಿಯ ಸಹಾಯ ಸಹಕಾರಗಳನ್ನು ನೀಡುವ ವ್ಯಕ್ತಿಗಳನ್ನು ಹುಡುಕಿ ಸ್ವಾಗತ ಸಮಿತಿಯನ್ನು ರಚಿಸಿದರು. ಆ ಸಮಯದಲ್ಲೇ ವ್ಯಾಪಾರಗಾರರಾಗಿದ್ದ ಸಾಹುಕಾರ್ ಚೆನ್ನಯ್ಯನವರು ಸಕ್ರಿಯವಾಗಿ ರಾಜಕೀಯದ ಮುಂಚೂಣಿಗೆ ಇಳಿದುದು. ಆವರೆಗೆ ಅವರು ಹಿಂಚೂಣಿಯಲ್ಲಿದ್ದುಕೊಂಡು ರಾಜಕೀಯ

ಮುಖಂಡರಿಗೆ ಕುಮ್ಮಕ್ಕು ಕೊಡುತ್ತಿದ್ದರು. ಅನಂತರ ಅವರು ಮೈಸೂರು ರಾಜಕೀಯದಲ್ಲಿ ಬಹಳ ಕಾಲದವರೆಗೆ ಅನಿಭಿಷಿಕ್ತ ರಾಜರಾಗಿ ಮೆರೆದರು. ಶ್ರೀ ಎಚ್. ಕೆ. ವೀರಣ್ಣ ಗೌಡರು ಮೈಸೂರಿನಲ್ಲಿ ಎರಡು ಮೂರು ದಿನ ಇದ್ದು ಶ್ರೀ ಹೆಚ್. ಸಿ. ದಾಸಪ್ಪ ಮೊದಲಾದ ಕಾಂಗ್ರೆಸ್ ಮುಖಂಡರನ್ನು ಭೇಟಿಯಾಗಿ ಸಾಹುಕಾರ ಚನ್ನಯ್ಯನವರನ್ನು ಒಪ್ಪಿಸಿ ಸ್ವಾಗತ ಸಮಿತಿಯನ್ನು ಸಿದ್ಧಪಡಿಸಿದರು.

ಸ್ವಾಗತ ಸಮಿತಿ

ಶಿವಪುರ ರಾಷ್ಟ್ರಕೂಟದ ಸ್ವಾಗತ ಸಮಿತಿಯ ರಚನೆ ಹೀಗಿತ್ತು:

ಅಧ್ಯಕ್ಷರು: ಶ್ರೀ ಎಸ್. ಚನ್ನಯ್ಯ. ಉಪಾಧ್ಯಕ್ಷರು: ಶ್ರೀಯುತರಾದ ಪಿ. ತಿರುಮಲೇಗೌಡ, ಹೆಚ್. ಸಿ. ದಾಸಪ್ಪ, ಎಸ್. ರಂಗರಾಮಯ್ಯ. ಖಜಾಂಚಿ: ಶ್ರೀ ಕೆ. ಜೋಗೀಗೌಡ. ಕಾರ್ಯದರ್ಶಿಗಳು: ಶ್ರೀಗಳಾದ ಎಚ್. ಕೆ. ವೀರಣ್ಣ ಗೌಡ, ಎ. ಜಿ. ಬಂದೀಗೌಡ. ಜಿ. ಒ. ಸಿ. (ಜನರಲ್ ಆಫೀಸರ್ ಕಮಾಂಡಿಂಗ್): ಶ್ರೀ ಎಂ. ಎನ್. ಜೋಯಿಸ್. ಸದಸ್ಯರು: ಶ್ರೀಗಳಾದ ಹೆಚ್. ಹೊನ್ನಯ್ಯ, ಪಿ. ವೆಂಕಟಗಿರಿ ಶೆಟ್ಟಿ, ಎನ್. ಪಿ. ಲಿಂಗೇಗೌಡ, ಪಿ. ತಮ್ಮಯ್ಯ, ಯು. ಚನ್ನೇಗೌಡ, ಎನ್. ಪಿ. ಶ್ರೀನಿವಾಸ ಅಯ್ಯಂಗಾರ್ ಮೊದಲಾದವರು.

ಸ್ವಾಗತ ಸಮಿತಿ ಸಿದ್ಧವಾದ ಮೇಲೆ ಶಿವಪುರ ರಾಷ್ಟ್ರಕೂಟಕ್ಕೆ ಸಂಬಂಧಿಸಿದಂತೆ ಅದರ ಮಹತ್ವ, ಪ್ರತಿನಿಧಿಗಳ ವಿವರ, ಮೊದಲಾದವುಗಳನ್ನು ಕುರಿತು ಮತ್ತೊಂದು ಪ್ರಕಟಣೆಯನ್ನು ಹೊರಡಿಸಲಾಯಿತು. ಅದು ಹೀಗಿದೆ.

ಮೈಸೂರು ಕಾಂಗ್ರೆಸ್ ರಾಷ್ಟ್ರಕೂಟ-ಶಿವಪುರದ ಅಧಿವೇಶನ

ಮೈಸೂರು ಮಹಾಜನರಲ್ಲಿ ವಿಜ್ಞಾಪನೆಗಳು :—

ಮೈಸೂರು ಸಂಸ್ಥಾನದಲ್ಲಿ ಜವಾಬ್ದಾರಿ ಸರ್ಕಾರವನ್ನು ಸ್ಥಾಪಿಸುವ ಉದ್ದೇಶದಿಂದ ಹೋರಾಟವನ್ನು ನಡೆಸುವುದಕ್ಕಾಗಿ "ಮೈಸೂರು ಕಾಂಗ್ರೆಸ್" ಎಂಬ ಹೆಸರಿನ ಒಂದು ಸ್ವತಂತ್ರ ಸಂಸ್ಥೆಯನ್ನು ಸ್ಥಾಪಿಸಬೇಕೆಂದು, ಕಳೆದ ಶಿವರಾತ್ರಿ (28–2–38) ದಿನ ರಾಜಧಾನಿಯಲ್ಲಿ ಸಭೆ ಸೇರಿದ್ದ ಮೈಸೂರು ಸಂಸ್ಥಾನದ ಕಾಂಗ್ರೆಸ್ ಪ್ರಮುಖರು ನಿರ್ಧರಿಸಿರುವರು. ಆ ಪ್ರಕಾರ, ಹೊಸ ಸಂಸ್ಥೆಯನ್ನು ಸ್ಥಾಪಿಸುವುದು, ಅದರ ನಿಯಮ, ನಿಬಂಧನೆಗಳನ್ನು ರಚಿಸುವುದಕ್ಕಾಗಿ ನೇಮಕವಾಗಿರುವ ಉಪಸಮಿತಿಯವರ ಸಲಹೆಗಳನ್ನು ಪರ್ಯಾಲೋಚಿಸುವುದು, ದೇಶದ ಇಂದಿನ ರಾಜಕೀಯ ಪರಿಸ್ಥಿತಿಯ ದೃಷ್ಟಿಯಿಂದ ಮುಂದಿನ ಕಾರ್ಯಕ್ರಮವನ್ನು ನಿರ್ಧರಿಸುವುದು ಇವೇ ಮೊದಲಾದ ಉದ್ದೇಶಗಳಿಂದ ಏಪ್ರಿಲ್ ತಿಂಗಳು 7 ಮತ್ತು 8ನೇ* ತಾರೀಖುಗಳಲ್ಲಿ

* ಹೀಗೆಂದು ಪ್ರಕಟಿಸಿದ್ದರೂ ಶಿವಪುರ ಅಧಿವೇಶನವು 1938ನೇ ಏಪ್ರಿಲ್ 10 ರಿಂದ ಪ್ರಾರಂಭವಾಯಿತು.

ಮೈಸೂರು ರಾಷ್ಟ್ರಕೂಟವು ಮದ್ದೂರು ಬಳಿ ಶಿಂಷಾ ತೀರದಲ್ಲಿರುವ ಶಿವಪುರದಲ್ಲಿ (ಮದ್ದೂರು ರೈಲ್ವೆ ಸ್ಟೇಷನ್ ಬಳಿ) ನಡೆಯುವುದಾಗಿದೆ.

ರಾಷ್ಟ್ರಕೂಟದ ಈ ಅಧಿವೇಶನವು ಬಹಳ ಮಹತ್ವ ಉಳ್ಳದ್ದೆಂದು ಬೇರೆ ಹೇಳಬೇಕಾಗಿಲ್ಲ. ಹಿಂದೂದೇಶದ ಹಾಗೂ ದೇಶೀಯ ಸಂಸ್ಥಾನಗಳ ಚರಿತ್ರೆಯಲ್ಲಿ ಇದು ಒಂದು ಸಂದಿಗ್ಧ ಸಮಯವಾಗಿದೆ. ದೇಶೀಯ ಸಂಸ್ಥಾನಗಳಲ್ಲಿ ಪ್ರಜಾಸತ್ತಾಧಿಕಾರವು ಆಚರಣೆಗೆ ಬರಬೇಕೆಂಬ ಪ್ರಸ್ತಾಪವು ಎಲ್ಲೆಲ್ಲೂ ಕೇಳಿಬರುತ್ತಿದೆ. ದೇಶೀಯ ಸಂಸ್ಥಾನಗಳಲ್ಲಿ ಜವಾಬ್ದಾರಿ ಸರ್ಕಾರ ಪದ್ಧತಿಯು ಸ್ಥಾಪಿತವಾದ ಹೊರತು ಅಖಿಲ ಭಾರತ ಸಂಯುಕ್ತ ರಾಜ್ಯಾಂಗ ವ್ಯವಸ್ಥೆಯು ಯಶಸ್ವಿಯಾಗಲಾರದೆಂದು ಎಲ್ಲೆಲ್ಲೂ ರಾಜಕಾರಣ ಪಟುಗಳು ಅಭಿಪ್ರಾಯ ಪಡುತ್ತಿದ್ದಾರೆ. ದೇಶೀಯ ಸಂಸ್ಥಾನಗಳಲ್ಲಿ ಜವಾಬ್ದಾರಿ ಸರ್ಕಾರ ಪದ್ಧತಿಯನ್ನು ಸ್ಥಾಪಿಸಲು ಅವಕಾಶವಿದೆಯೇ ಇಲ್ಲವೇ ಎಂಬ ಸಂಶಯಗಳೆಲ್ಲಾ ಇತ್ತೀಚೆಗೆ ಪಾರ್ಲಿಮೆಂಟಿನಲ್ಲಿ ಅರ್ಲ್‌ವಿಂಟರ್‌ಟನ್‌ರವರು ಕೊಟ್ಟ ಹೇಳಿಕೆಯಿಂದ ನಿವಾರಣೆಯಾಗಿವೆ. ಈ ಹೇಳಿಕೆಯನ್ನು ಇಂಡಿಯಾ ದೇಶದ ವೈಸರಾಯರು ಸಹ ಅನುಮೋದಿಸಿದ್ದಾರೆ. ಅಲ್ಲದೆ ದೇಶೀಯ ಸಂಸ್ಥಾನಗಳ ಆಡಳಿತವು ಪ್ರಜಾಭಿಪ್ರಾಯಾನುಸಾರ ನಡೆಯುವಂತೆ ಏರ್ಪಡಿಸುವುದಕ್ಕಾಗಿ ವೈಸ್‌ರಾಯರು ಆಸಕ್ತಿ ವಹಿಸುವರೆಂದು ಸಹ ತಿಳಿದು ಬಂದಿದೆ.

ಈ ವಿಚಾರಗಳಲ್ಲಿ ಮೈಸೂರಿನ ಮಹಾಜನರು ತಮ್ಮ ನಿರ್ದಿಷ್ಟವಾದ ಅಭಿಪ್ರಾಯವನ್ನು ಹೊರಗೆಡುಹಿ, ಜವಾಬ್ದಾರಿ ಸರ್ಕಾರ ಪದ್ಧತಿಯನ್ನು ಸ್ಥಾಪಿಸುವುದಕ್ಕಾಗಿ ಒಗ್ಗಟ್ಟಾಗಿ ಕೆಲಸಮಾಡುವುದು ಅತ್ಯಗತ್ಯವಾಗಿದೆ. ದೇಶೀಯ ಸಂಸ್ಥಾನಗಳಲ್ಲೆಲ್ಲಾ ಮೈಸೂರು ಸಂಸ್ಥಾನವು ರಾಜಕೀಯ ವಿಚಾರದಲ್ಲಿ ಈಗ ಎಲ್ಲೆಲ್ಲೂ ಪ್ರಾಮುಖ್ಯತೆಯನ್ನು ಹೊಂದಿದೆ. ಅಂದಮೇಲೆ ಮೈಸೂರಿನಲ್ಲಿ ನಡೆಯುತ್ತಿರುವ ರಾಜಕೀಯ ಚಳುವಳಿಯನ್ನು ಬ್ರಿಟಿಷ್ ಇಂಡಿಯಾ ಮತ್ತು ಇತರ ದೇಶೀಯ ಸಂಸ್ಥಾನಗಳ ಜನರು ಅತ್ಯಂತ ಕುತೂಹಲದಿಂದ ನೋಡುತ್ತಿದ್ದಾರೆ. ಮೈಸೂರು ಮಹಾಜನರು ನಡೆಸುತ್ತಿರುವ ಹೋರಾಟದ ಜಯಾಪಜಯಗಳ ಪರಿಣಾಮವು ಉಳಿದ ದೇಶೀಯ ಸಂಸ್ಥಾನಗಳ ಮೇಲೆ ಉಂಟಾಗುವುದಾಗಿದೆ. ಅಂದಮೇಲೆ ನಮ್ಮ ಜವಾಬ್ದಾರಿಯು ಹೆಚ್ಚಿನದಾಗಿದೆ.

ಶಿವಪುರದಲ್ಲಿ ನಡೆಯುವುದಕ್ಕಿರುವ ಅಧಿವೇಶನದಲ್ಲಿ ಮೈಸೂರಿನ ಮುಂದಿನ ಅದೃಷ್ಟವು ನಿರ್ಧರವಾಗತಕ್ಕದ್ದಿದೆ. ಆದ್ದರಿಂದ ಈ ಅಧಿವೇಶನಕ್ಕೆ ಮೈಸೂರಿನ ಮಹಾಜನರು, ಅಧಿಕ ಸಂಖ್ಯೆಯಿಂದ ಪ್ರತಿನಿಧಿಗಳಾಗಿಯೂ, ಪ್ರೇಕ್ಷಕರಾಗಿಯೂ ಬಂದು ಪ್ರತ್ಯಕ್ಷವಾಗಿ ನಮ್ಮ ದೇಶದ, ಹಾಗೂ ಪರೋಕ್ಷವಾಗಿ ದೇಶೀಯ ಸಂಸ್ಥಾನಗಳ ಆಗುಹೋಗನ್ನು ನಿರ್ಧರಿಸುವ ಮಹತ್ಕಾರ್ಯದಲ್ಲಿ ಭಾಗವಹಿಸಬೇಕಾಗಿ ಈ ಮೂಲಕ ಆಹ್ವಾನಿಸಲಾಗಿದೆ.

ವಿಶೇಷ ಸೂಚನೆ :—

ಸ್ವಾಗತ ಸಮಿತಿ ಸದಸ್ಯರು 3 ರೂ.ಗೆ ಕಡಿಮೆ ಇಲ್ಲದಂತೆಯೂ ಪ್ರತಿನಿಧಿಗಳು (ಡೆಲಿಗೇಟರು) ಒಂದು ರೂ. ನಂತೆಯೂ ಚಂದ ಕೊಡಬೇಕು. ಬಹಿರಂಗಸಭೆಗೆ ಪ್ರೇಕ್ಷಕರ ಪ್ರವೇಶಧನ 0-1-0 ಮಾತ್ರ. ಒಂದು ರೂ. ಪ್ರವೇಶಧನ ಕೊಡುವ ಪ್ರೇಕ್ಷಕರಿಗೆ ಮುಖಂಡರೊಡನೆ ಸ್ಥಳವಸತಿ ಏರ್ಪಡಿಸಲಾಗುವುದು. ಸಬ್‌ಜೆಕ್ಟ್ಸ್ ಕಮಿಟಿಗೆ ಪ್ರೇಕ್ಷಕರ ಪ್ರವೇಶ ದರ 8 ಆಣೆ. ಪ್ರತಿನಿಧಿಗಳಿಗೂ ಪ್ರೇಕ್ಷಕರಿಗೂ ಊಟವಸತಿಗಳಿಗೆ ಏರ್ಪಡಿಸಿದೆ. ಪೂರ್ತಿ ಅಧಿವೇಶನದಲ್ಲಿ ಊಟ ತಿಂಡಿಗಳಿಗಾಗಿ 1 ರೂ ಕೊಡಬೇಕು. ಒಂದೊಂದು ಊಟಕ್ಕೆ 0-3-0. ಊಟವಸತಿಗಳಿಗೆ ಸೌಕರ್ಯ ಬೇಕಾದವರು ಈ ತಿಂಗಳು ಅಂತ್ಯದೊಳಗಾಗಿ ಬರೆದುಕೊಳ್ಳಬೇಕು. ಸುಮಾರು 50 ಸಾವಿರ ಮಂದಿಯವರೆಗೂ ಜನ ಸಂದಣಿ ಇರುವುದೆಂದು ನಿರೀಕ್ಷಿಸಿರುವುದರಿಂದ ಕಾಲಾತೀತವಾಗಿ ಬರೆದುಕೊಳ್ಳುವವರ ಊಟವಸತಿಗಳಿಗೆ ಏರ್ಪಡಿಸಲು ಕಷ್ಟವಾಗುವುದು. "ಮೈಸೂರು ಕಾಂಗ್ರೆಸ್"ಗೆ ಸದಸ್ಯರಾಗಿರುವರು ಪ್ರತಿ 50 ಮಂದಿಗೆ ಒಬ್ಬೊಬ್ಬರಂತೆ ಪ್ರತಿನಿಧಿ (ಡೆಲಿಗೇಟರ್) ಗಳನ್ನು ಆರಿಸಿ ಕಳುಹಿಸಬೇಕಾಗಿದೆ. ಎಲ್ಲಾ ಪತ್ರ ವ್ಯವಹಾರವನ್ನು ಕಾರ್ಯದರ್ಶಿ, ಸ್ವಾಗತ ಸಮಿತಿ, ಮೈಸೂರು ಕಾಂಗ್ರೆಸ್ ರಾಷ್ಟ್ರಕೂಟ, ಶಿವಪುರ, ಮದ್ದೂರು ಎಂಬ ವಿಳಾಸಕ್ಕೆ ಬರೆಯಬೇಕು.

ಶಿವಪುರ, (ಮದ್ದೂರು ರೈಲ್ವೆಸ್ಟೇಷನ್)
15-3-1938

ಎಸ್. ಚನ್ನಯ್ಯ,
ಅಧ್ಯಕ್ಷ, ಸ್ವಾಗತ ಸಮಿತಿ

ಎಚ್. ಕೆ. ವೀರಣ್ಣಗೌಡ,
ಎ. ಜಿ. ಬಂದೀಗೌಡ,
ಕಾರ್ಯದರ್ಶಿಗಳು, ಸ್ವಾಗತ ಸಮಿತಿ.

ಶಿವಪುರದ ಶ್ರೀ ಪಿ. ತಿರುಮಲೇಗೌಡರ ವಿಶಾಲವಾದ ಮನೆಯಲ್ಲಿ ವಿವಿಧ ಕಚೇರಿಗಳು ಪ್ರಾರಂಭವಾದುವು. ಮಹಡಿಯ ಮೇಲೆ ಸ್ವಾಗತ ಸಮಿತಿಯ ಕಚೇರಿ ಇತ್ತು. ಮನೆಯ ಮುಂಭಾಗದಲ್ಲಿ ವಿಷಯ ನಿಯಾಮಕ ಸಮಿತಿ, ಹಿಂಭಾಗದಲ್ಲಿ ಭೋಜನ ಶಾಲೆಗಳಿದ್ದುವು. ವಿಶಾಲವಾದ ಮಹಡಿ ಮನೆಯ ಮುಂದಿನ ಮತ್ತೊಂದು ಮನೆ ಸ್ವಯಂ ಸೇವಕಿಯರ ಬಿಡಾರವಾಗಿತ್ತು. ಈ ಮನೆಯನ್ನು ಶ್ರೀ ತಿರುಮಲೇಗೌಡರು ಗ್ರಾಮಸೇವ ವಿದ್ಯಾರ್ಥಿ ನಿಲಯಕ್ಕೆ ಉಚಿತವಾಗಿ ಬಿಟ್ಟುಕೊಟ್ಟಿದ್ದರು. ಅದನ್ನು ತಾತ್ಕಾಲಿಕವಾಗಿ ರಾಷ್ಟ್ರಕೂಟದ ಕೆಲಸಕ್ಕೆ ತೆರವು ಮಾಡಿಕೊಟ್ಟರು. ಶ್ರೀ ತಿರುಮಲೇಗೌಡರ ದೊಡ್ಡ ಕುಟುಂಬಕ್ಕೆ ಸೇರಿದ ಎಲ್ಲ ಮನೆಗಳೂ ರಾಷ್ಟ್ರಕೂಟದ ಕೆಲಸಕ್ಕೆ ಮೀಸಲಾದುವು. ಈ ಮನೆಗಳ ಮುಂದಿನ ಶ್ರೀ ತಿರುಮಲೇಗೌಡರ ವಿಶಾಲ

ವಾದ ಜಮೀನಿನಲ್ಲೇ ಧ್ವಜಸತ್ಯಾಗ್ರಹದ ವೇದಿಕೆ ಮತ್ತು ಪ್ರೇಕ್ಷಕಾಂಗಣ ಸಿದ್ಧವಾಗಿದ್ದುವು.

ಶ್ರೀ ತಿರುಮಲೇಗೌಡರ ಮಹಡಿಯ ಮೇಲೆ ರಾಷ್ಟ್ರಕೂಟ ಸ್ವಾಗತ ಸಮಿತಿಯ ಕಚೇರಿ ಸ್ಥಾಪನೆಯಾದ ಮೇಲೆ ಖರ್ಚಿನ ಸಮಸ್ಯೆ ಎದುರಾಯಿತು. ಮುದ್ರಣ ಲೆಕ್ಕದ ಪುಸ್ತಕಗಳಿಗೂ ಪ್ರಾರಂಭದ ಸಾಮಾನ್ಯ ಖರ್ಚಿಗೂ ಸಂಸ್ಥೆಯಲ್ಲಿ ಹಣವಿರಲಿಲ್ಲ. ಕಾಂಗ್ರೆಸ್ ವಿರೋಧಿಗಳಾದ ಶ್ರೀ ಎಂ. ಸಿ. ಲಿಂಗೇಗೌಡರಿಗೂ ಅವರ ಸೋದರ ಶ್ರೀ ಎಂ. ಸಿ. ತಮ್ಮಣ್ಣಗೌಡರಿಗೂ ಆಕಸ್ಮಿಕವಾಗಿ ಗೃಹಕಲಹವಾಗಿ ತಮ್ಮಣ್ಣಗೌಡರು ಕಾಂಗ್ರೆಸ್‌ನ ಕಡೆಗೆ ಬಂದು ಮೊದಲು 50 ರೂಪಾಯಿಗಳನ್ನು ಚಂದಾ ಕೊಟ್ಟರು. ಶ್ರೀ ಎಚ್. ಕೆ. ವೀರಣ್ಣಗೌಡರ ಕೋರಿಕೆಯಂತೆ ದೇಶಹಳ್ಳಿ ಶ್ರೀ ಶಿವಲಿಂಗಯ್ಯನವರು 101 ರೂಪಾಯಿಗಳನ್ನು ಕೊಟ್ಟರು. ಈ 151 ರೂಪಾಯಿಗಳ ಚಂದಾದಿಂದ ಸ್ವಾಗತ ಸಮಿತಿಯ ಕೆಲಸ ಮೊದಲಾಯಿತು.

ಶಿವಪುರ ರಾಷ್ಟ್ರಕೂಟ ನಡೆಯದಂತೆ ತಡೆಯಲು ಸರಕಾರ ನಾನಾ ರೀತಿಯ ಕುತಂತ್ರಗಳನ್ನು ಬಳಸಿತು. ಅದಕ್ಕಾಗಿ ಕಾಂಗ್ರೆಸ್ ವಿರೋಧಿಗಳನ್ನು ವಿಶೇಷವಾಗಿ ಬಳಸಿಕೊಂಡಿತು. ದಿವಾನ್ ಮಿರ್ಜಾರವರು ಆಗಾಗ ಸೋಮನಹಳ್ಳಿಗೆ ಭೇಟಿ ಕೊಟ್ಟು ಕಾಂಗ್ರೆಸ್ ವಿರೋಧಿಗಳನ್ನು ಕಂಡು ಶಿವಪುರದಲ್ಲಿ ಅಧಿವೇಶನ ನಡೆಯದಂತೆ ಮಾಡಲು ಕಿತಾಪತಿ ನಡೆಸುತ್ತಿದ್ದರು. ಮುಖ್ಯ ಕಾರ್ಯಕರ್ತರ ಹಿಂದೆ ಗೂಢಚಾರರನ್ನು ನೇಮಿಸಿ ವಿಷಯಗಳನ್ನು ಕಲೆಹಾಕುತ್ತಿದ್ದರು. ಶ್ರೀ ವೀರಣ್ಣಗೌಡರ ಬೆಂಬಲಿಗರನ್ನು ಗದರಿಸಿ ಬೆದರಿಸಿದುದೂ ಉಂಟು. ಶ್ರೀ ವೀರಣ್ಣಗೌಡರ ಹತ್ತಿರ ಲೇವಾದೇವಿ ಮಾಡುತ್ತಿದ್ದವರನ್ನು ಎತ್ತಿ ಕಟ್ಟಿ ಗೌಡರಿಗೆ ಸಿವಿಲ್ ವಾರೆಂಟ್ ಕೊಡಿಸಲು ಪ್ರಯತ್ನಗಳು ನಡೆದುವು. ಅವರಿಗೂ ಅಧಿವೇಶನಕ್ಕೆ ಸ್ಥಳಕೊಟ್ಟ ತಿರುಮಲೇಗೌಡರಿಗೂ ದಿನಕ್ಕೊಂದು ವಾರೆಂಟ್ ಬರುತ್ತಿತ್ತು. ವೀರಣ್ಣಗೌಡರು ಚಾಣಾಕ್ಷರಾಗಿದ್ದುದರಿಂದ, ದಕ್ಷರೆಂದು ಪ್ರಸಿದ್ಧರಾಗಿದ್ದುದರಿಂದ, ಹಳ್ಳಿಯ ರೈತರನ್ನು ಚೆನ್ನಾಗಿ ಅಭ್ಯಾಸ ಮಾಡಿದ್ದುದರಿಂದ ಅವರನ್ನು ಕಾರ್ಯವಿಮುಖರನ್ನಾಗಿ ಮಾಡಲು ಆಗಲಿಲ್ಲ. ಅಧಿವೇಶನಕ್ಕೆ ಕೆಲವು ಪಾತ್ರೆಗಳನ್ನು ಕೊಡಲು ವಾಗ್ದಾನ ಮಾಡಿದ ದೇವಸ್ಥಾನದ ಪಾರುಪತ್ತೇಗಾರ ಶ್ರೀ ಎಸ್. ಅನಂತರಾಮಯ್ಯನವರನ್ನು ಕೆಲಸದಿಂದ ವಜಾ ಮಾಡಿದರು. ಅಧಿವೇಶನಕ್ಕೆ ಯಾರ್ಯಾರು ಸಹಾಯಮಾಡುತ್ತಿದ್ದರೋ ಅವರಿಗೆಲ್ಲ ಏನಾದರೂ ಒಂದು ತೊಂದರೆ ಇರುತ್ತಿತ್ತು. ಅಧಿವೇಶನಕ್ಕೆ ಸಹಾಯ ಮಾಡುವ ಜನರನ್ನು ಪತ್ತೆಹಚ್ಚಲು ಸರ್ಕಾರ ಅನೇಕ ಗೂಢಚಾರರನ್ನು ನೇಮಿಸಿತ್ತು. ಆದರೂ ಕಾರ್ಯಕರ್ತರು ಜಗ್ಗಲಿಲ್ಲ.

ಮದ್ದೂರು ತಾಲ್ಲೂಕಿನ ಅಮಲ್ದಾರರು ಈಗಿನ ಸ್ಥಳಬಿಟ್ಟು ನಂಜನಗೂಡಿನಲ್ಲಿ ರಾಷ್ಟ್ರಕೂಟ ನಡೆಸಿದರೆ ತಾವು ಸಹಾಯ ಮಾಡುವುದಾಗಿ ಶ್ರೀ ವೀರಣ್ಣಗೌಡರನ್ನು ಪುಸಲಾಯಿಸಿದರು. ಶಿವಪುರದಲ್ಲಿ ರಾಷ್ಟ್ರಕೂಟ ನಡೆಯುವುದು ಖಚಿತವೆಂದಾದ ಮೇಲೆ ಮೈಸೂರು ಜಿಲ್ಲಾ ಮ್ಯಾಜಿಸ್ಟ್ರೇಟರಾದ ಶ್ರೀ ಜಿ. ಎಂ. ಮೇಕ್ರಿಯವರು

ಮಂದ್ದೂರಿನ ಸುತ್ತಲೂ ಎರಡು ಮೈಲಿಗಳ ವ್ಯಾಪ್ತಿಯಲ್ಲಿ ಒಂದು ತಿಂಗಳವರೆಗೆ ಸಭೆ ಮೆರವಣಿಗೆ ಮೊದಲಾದುವು ನಡೆಯಬಾರದೆಂದೂ ರಾಷ್ಟ್ರ ಧ್ವಜಾರೋಹಣ ಮಾಡಕೂಡದೆಂದೂ ನಿಷೇಧಾಜ್ಞೆಯನ್ನು ಜಾರಿಗೆ ತಂದರು. ಎಲ್ಲಕ್ಕೂ ಸಿದ್ಧರಾಗಿದ್ದ, ಯಾವುದಕ್ಕೂ ಜಗ್ಗದ ಕಾಂಗ್ರೆಸ್ ಕಾರ್ಯಕರ್ತರು ಸಿದ್ಧತೆಯನ್ನು ಮುಂದುವರಿಸಿದರು.

14ನೇ ಮಾರ್ಚಿ 1938ರಂದು ಶ್ರೀ ತಿರುಮಲೇಗೌಡರ ಮನೆಯಲ್ಲಿ ಸ್ವಾಗತ ಸಮಿತಿಯವರು ಸಭೆ ಸೇರಿ ಕಾರ್ಯಕಾರಿ ಸಮಿತಿ, ವಿಷಯ ನಿಯಾಮಕ ಸಮಿತಿ, ಹಾಗೂ ಅನೇಕ ಉಪ-ಸಮಿತಿಗಳನ್ನು ರಚಿಸಿದರು. ಕಾಲಾವಕಾಶ ಕಡಮೆಯಿದ್ದುದರಿಂದ ಕಾರ್ಯಕಾರಿ ಸಮಿತಿ ಸಭೆಗಳು ನಡೆದು, ಸ್ವಯಂಸೇವಕರ ಉಡುಪು, ರಾಷ್ಟ್ರ ಕೂಟಕ್ಕೆ ಸಂಬಂಧಿಸಿದಂತೆ ಮಹಾಜನರಲ್ಲಿ ಮಾಡಿಕೊಳ್ಳಬೇಕಾದ ವಿಜ್ಞಾಪನಾ ಪತ್ರ, ಧ್ವಜ ಸತ್ಯಾಗ್ರಹದ ಸ್ಥಳ, ಕಾಲ, ಭೋಜನವಸತಿ, ಬಹಿರಂಗಸಭೆ, ಅಧ್ಯಕ್ಷರ ಮೆರವಣಿಗೆ, ಚಂದಾವಸೂಲಿ, ಪ್ರಚಾರ, ನೀರು, ದೀಪದ ಏರ್ಪಾಡು, ಖಾದಿ ಪ್ರಚಾರ ಮತ್ತಿತರ ವ್ಯವಸ್ಥೆಗಳ ಬಗೆಗೆ ಚರ್ಚಿಸಿ ತೀರ್ಮಾನ ಕೈಗೊಳ್ಳಲಾಯಿತು. ವಸತಿ ವ್ಯವಸ್ಥೆ ಮತ್ತು ನೈರ್ಮಲ್ಯ ಸಮಿತಿ (ಶ್ರೀ ಹೆಚ್. ಸಿ. ದಾಸಪ್ಪ, ಅಧ್ಯಕ್ಷರು), ಸ್ವಯಂಸೇವಕರ ವ್ಯವಸ್ಥೆ (ಶ್ರೀ ಎಂ. ಎನ್. ಜೋಯಿಸರು, ಅಧ್ಯಕ್ಷರು), ಊಟದ ವ್ಯವಸ್ಥೆ (ತಿರುಮಲೇಗೌಡರು, ಮುಖ್ಯಸ್ಥರು), ಪ್ರಕಟಣಾ ಶಾಖೆಯ ಉಪಸಮಿತಿ (ಶ್ರೀ ಕೆ. ಜೀವಣ್ಣರಾಯರ ನೇತೃತ್ವ), ಅಲಂಕಾರ ಉಪಸಮಿತಿ (ಶ್ರೀ ಎಂ. ಎನ್. ಸೂರ್ಯನಾರಾಯಣರಾವ್, ಮುಖ್ಯಸ್ಥರು), ಮೈಸೂರು ಕಾಂಗ್ರೆಸ್ಸಿನ ಅಂಗರಚನೆಯ ಉಪಸಮಿತಿ (ಶ್ರೀ ಟಿ. ಎಸ್. ರಾಜಗೋಪಾಲ ಅಯ್ಯಂಗಾರ್, ನಿರ್ದೇಶಕರು) ಮೊದಲಾದ ಸಮಿತಿಗಳು ಅಸ್ತಿತ್ವಕ್ಕೆ ಬಂದುವು.

ಸ್ವಾಗತ ಸಮಿತಿಯ ಕಚೇರಿಯ ಕೆಲಸವನ್ನು ನಿರ್ವಹಿಸಲು ಶ್ರೀ ವಿ.ಎಸ್. ನಾರಾಯಣರಾವ್, ದೊಡ್ಡಬಳ್ಳಾಪುರದ ಅಡ್ವೊಕೇಟರುಗಳಾದ ಶ್ರೀ ಕೆ. ಸಂಪಂಗಿ ರಾಮಯ್ಯ ಮತ್ತು ಸಂಪತ್ ಕುಮಾರನ್ ಅವರನ್ನು ಬರಮಾಡಿಕೊಳ್ಳಲಾಯಿತು. ಶ್ರೀಗಳಾದ ಅಗರಂ ನಾಗರಾಜ, ದೊಡ್ಡಬಳ್ಳಾಪುರದ ಚಂದ್ರಣ್ಣ, ಎಸ್. ಎನ್. ಗುಪ್ತರು ಅವರಿಗೆ ಸಹಾಯಕರಾಗಿ ಕೆಲಸಮಾಡಿದರು. ವಿಶೇಷ ಆಹ್ವಾನದ ಮೇರೆಗೆ ಡಾ|| ಪಾರ್ಥನಾರಾಯಣಪಂಡಿತ್, ಶ್ರೀ ತಗಡೂರು ರಾಮಚಂದ್ರರಾವ್, ಶ್ರೀ ರಾಮಚಂದ್ರ ಜೋಯಿಸ್, ಶ್ರೀ ಸೂರ್ಯನಾರಾಯಣಪಂಡಿತ್, ಶ್ರೀ ಕೆ. ಟಿ. ಭಾಷ್ಯಂ ಅಯ್ಯಂಗಾರ್, ಶ್ರೀ ಹೆಚ್. ಆರ್. ಗುರುವಾರೆಡ್ಡಿ, ಶ್ರೀ ಸೀತಾರಾಮ ಶಾಸ್ತ್ರಿ, ಶ್ರೀ ಆರ್. ಮಾಧವರಾಯರು ಮೊದಲಾದವರು ಬಂದು ಸಲಹೆಗಳನ್ನು ಕೊಡುತ್ತಿದ್ದರು.

ಪ್ರಾರಂಭದಲ್ಲಿ ಕಾರ್ಯಕಾರಿ ಸಮಿತಿಯವರು ರಾಷ್ಟ್ರಕೂಟಕ್ಕೆ ನಾಲ್ಕೈದು ಸಾವಿರ ಜನ ಸೇರಬಹುದೆಂದು ಅಂದಾಜು ಮಾಡಿದರು. ಸುದ್ದಿ ಹರಡಿ, ಪ್ರಚಾರ ಕಾರ್ಯ ಪ್ರಾರಂಭವಾದ ಕೆಲವೇ ದಿನಗಳಲ್ಲಿ ಪ್ರೇಕ್ಷಕರ ಸಂಖ್ಯೆ 50 ಸಾವಿರ ಆಗ

ಬಹುದೆಂದು ಗೊತ್ತಾಯಿತು. ಆ ಸಂಖ್ಯೆಗೆ ತಕ್ಕಂತೆ ವಸತಿ ವ್ಯವಸ್ಥೆಯನ್ನು ಮಾಡಬೇಕಾಯಿತು. ಮೈಸೂರು–ಬೆಂಗಳೂರು ಹೆದ್ದಾರಿಯ ಪಕ್ಕದಲ್ಲಿರುವ ಶ್ರೀ ತಿರುಮಲೇಗೌಡರ 8 ಎಕರೆ ವಿಸ್ತೀರ್ಣದ ಗದ್ದೆಯಲ್ಲಿ ಧ್ವಜ ಮೈದಾನ, ಬಹಿರಂಗ ಅಧಿವೇಶನ ಸಭಾಂಗಣ, ಪಾಕ ಮತ್ತು ಭೋಜನ ಶಾಲೆಗಳ ನಿರ್ಮಾಣವಾಯಿತು. ಶಿವಪುರ ಗ್ರಾಮದಲ್ಲಿರುವ ಶ್ರೀ ತಿರುಮಲೇಗೌಡರ 4 ಎಕರೆ ಗದ್ದೆಯಲ್ಲಿ ಪ್ರತಿನಿಧಿಗಳ ಬಿಡಾರ, ಸ್ವಯಂಸೇವಕರ ಶಿಬಿರ, ಅಂಗಡಿ ಸಾಲು, ಪತ್ರಿಕಾ ಪ್ರತಿನಿಧಿಗಳ ಬಿಡಾರ, ವಿಷಯ ನಿಯಾಮಕ ಸಮಿತಿಯ ಸಭಾಂಗಣಗಳನ್ನು ಕಟ್ಟಲಾಯಿತು. ಇವುಗಳನ್ನು ನಿರ್ಮಿಸಲು ದಿನವೊಂದಕ್ಕೆ ಸುಮಾರು 300 ಮಂದಿ 15 ದಿನಗಳವರೆಗೆ ಸತತವಾಗಿ ದುಡಿದರು. ಏಪ್ರಿಲ್ ತಿಂಗಳ ಪ್ರಾರಂಭದಲ್ಲೇ ಶ್ರೀ ಹೆಚ್. ಸಿ. ದಾಸಪ್ಪ, ಚಿಕ್ಕಮಗಳೂರಿನ ಕಾಫಿ ಪ್ಲಾಂಟರ್ ಶ್ರೀ ಬಾಗೆಮನೆ ದೇವೇಗೌಡ, ಶ್ರೀ ಪಾಲಳ್ಳಿ ಸೀತಾರಾಮಯ್ಯನವರು ಶಿವಪುರಕ್ಕೆ ಬಂದು ಅಲ್ಲೇ ತಂಗಿ ಕಟ್ಟಡಗಳ ಕಾರ್ಯಗಳನ್ನು ನೋಡಿಕೊಂಡರು. ಎಂಜಿನೀಯರ್ ಶ್ರೀ ಎಂ. ಕೆ. ಸುಬ್ರಹ್ಮಣ್ಯಂ, ಮೈಸೂರಿನ ರಾಜು ಊಟ ನಿದ್ರೆಗಳನ್ನು ಬಿಟ್ಟು ಶ್ರಮಿಸಿದರು. ದೇಶಹಳ್ಳಿ ಶ್ರೀ ಚೌಡಯ್ಯ, ಉನಗನಹಳ್ಳಿ ಶ್ರೀ ಹೆಳವಯ್ಯನವರು ಆಳುಗಳನ್ನು ಕರೆತಂದು ಕೆಲಸ ಮಾಡಿಸಿದರು. ಅನೇಕ ರೈತರು ಕಟ್ಟಡಗಳ ಸಾಮಾನುಗಳನ್ನು ಉಚಿತವಾಗಿ ಕೊಟ್ಟರು. ಕೆಲವನ್ನು ಮೈಸೂರಿನಿಂದ ಕೊಂಡು ತರಲಾಯಿತು.

ಸುಮಾರು 40 ಸಾವಿರ ಜನ ಕುಳಿತುಕೊಳ್ಳುವಷ್ಟು ವಿಸ್ತೀರ್ಣದ ಬಹಿರಂಗ ಅಧಿವೇಶನದಲ್ಲಿ 6 ಅಡಿ ಎತ್ತರದ ಸಾಕಷ್ಟು ವಿಶಾಲವಾದ ವೇದಿಕೆಯನ್ನು ನಿರ್ಮಿಸಿ, ರಾಷ್ಟ್ರಧ್ವಜ ಮತ್ತು ಬಣ್ಣಬಣ್ಣದ ವಿದ್ಯುದ್ದೀಪಗಳಿಂದ ಅಲಂಕರಿಸಲಾಯಿತು. ಭೋಜನಶಾಲೆ ಒಂದು ಸಾರಿಗೆ 2,000 ಮಂದಿ ಊಟ ಮಾಡುವಷ್ಟು ವಿಶಾಲವಾಗಿತ್ತು. ಪ್ರತಿನಿಧಿಗಳಿಗೆ ಪ್ರತ್ಯೇಕವಾಗಿ ಬಿಡಾರಗಳನ್ನು ಕಟ್ಟಲಾಯಿತು. ಖಾದಿ ಪ್ರದರ್ಶನ, ಔಷಧಶಾಲೆ, ಅಂಗಡಿಸಾಲು, ವಿಚಾರಣಾಕಚೇರಿ, ಟಿಕೆಟ್ ಮಾರುವ ಬುಕ್ಕಿಂಗ್ ಆಫೀಸುಗಳೂ ವ್ಯವಸ್ಥೆಯಾದುವು.

ಸುಮಾರು 10 ಸಾವಿರ ರೂಪಾಯಿಗಳವರೆಗೂ ಖರ್ಚಾಗುವ ರಾಷ್ಟ್ರಕೂಟಕ್ಕೆ ಹಣ ಕೂಡಿಸುವ ಜವಾಬ್ದಾರಿಯನ್ನು ಸಾಹುಕಾರ್ ಚನ್ನಯ್ಯ, ಶ್ರೀ ಎಚ್. ಕೆ. ವೀರಣ್ಣಗೌಡರು ವಹಿಸಿಕೊಂಡರು. ಇವರು ಮತ್ತು ಇವರ ಸ್ನೇಹಿತರು ಹಳ್ಳಿಗಳಿಗೆ ಹೋಗಿ ರಾಷ್ಟ್ರಕೂಟದ ಉದ್ದೇಶವನ್ನು ವಿವರಿಸಿ, ಸ್ವಯಂಸೇವಕರನ್ನು ಆಹ್ವಾನಿಸಿ ಚಂದಾವಸೂಲಿ ಮಾಡಿದರು. ಹಳ್ಳಿಗರು ಉತ್ಸಾಹದಿಂದ ಹಣ ಕೊಡಲು ಮುಂದೆ ಬಂದರು. ತಮ್ಮ ಊರಿನ ವಿಶೇಷವಾದ ಹಬ್ಬವೊಂದರಲ್ಲಿ ಭಾಗವಹಿಸುವ ಸಂಭ್ರಮ ಅವರಲ್ಲಿ ಕಾಣುತ್ತಿತ್ತು. ಕಾಂಗ್ರೆಸ್ ಮುಖಂಡರಿಂದ ಹೊಸ ಹೊಸ ವಿಷಯಗಳನ್ನು ಕೇಳಲು, ರಾಜಕೀಯ ಪ್ರಜ್ಞೆಗೆ ಹೊಂದಿಕೊಳ್ಳಲು ಜನರು ತಾವಾಗಿ ಮುಂದೆ ಬರುತ್ತಿದ್ದರು. ಮುಖಂಡರು ಹೋಗಿ ಕೇಳಿದ ಯಾವ ಊರಿನವರೂ ಬರಿಕೈಲಿ ಕಳಿಸಲಿಲ್ಲ. ಮದ್ದೂರು ತಾಲ್ಲೂಕಿನ ಮಲ್ಲನಾಯ್ಕನ ಹಳ್ಳಿಯ ಶ್ರೀ ಎಂ. ಬಿ.

ತಮ್ಮಯ್ಯನವರು 50 ರೂಪಾಯಿ ಮತ್ತು 50 ಸೇರು ಅಕ್ಕಿಯನ್ನು ಕೊಟ್ಟರು. ಮಂಡ್ಯ ತಾಲ್ಲೂಕಿನ ಒಳಗೆರೆ ಹಳ್ಳಿ, ಗೆಜ್ಜಲಗೆರೆ, ಕುದುರು ಗುಂಡಿ, ಸಾದರಳು, ಗೌಡ ಗೆರೆ, ಗೊರುವನಹಳ್ಳಿ, ಚನ್ನಸಂಧ್ರ, ನಗರಕೆರೆ, ದೇಶಹಳ್ಳಿ, ಕೆಸ್ತೂರು ಮೊದಲಾದ ಗ್ರಾಮಗಳಲ್ಲಿ ಶಿವಪುರ ರಾಷ್ಟ್ರಕೂಟದ ಪ್ರಚಾರ ಕಾರ್ಯ ಮತ್ತು ಧನಸಂಗ್ರಹ ನಡೆ ಯಿತು. ಎಚ್. ಕೆ. ವೀರಣ್ಣಗೌಡರ ನೇತೃತ್ವದಲ್ಲಿ ಮೈಸೂರು ಕಾಂಗ್ರೆಸ್ ವರ್ಕಿಂಗ್ ಕಮಿಟಿ, ಸ್ವಾಗತ ಸಮಿತಿಯ ಸದಸ್ಯರು, ಶ್ರೀಮತಿ ಬಳ್ಳಾರಿ ಸಿದ್ದಮ್ಮ, ಶ್ರೀ ಎಂ. ಎನ್. ಜೋಯಿಸ್, ಶ್ರೀಮತಿಯರಾದ ಸುಬ್ಬಮ್ಮ ಜೋಯಿಸ್, ಟಿ. ಸುನಂದಮ್ಮ ಮೊದಲಾದ ಸ್ತ್ರೀಯರು, ಶ್ರೀ ವೀರಕೇಸರಿ ಸೀತಾರಾಮಶಾಸ್ತ್ರಿ, ಶ್ರೀ ಕೆ.ಟಿ. ಭಾಷ್ಯಂ ಅಯ್ಯಂಗಾರ್, ಶ್ರೀ ಟಿ. ಸಿದ್ದಲಿಂಗಯ್ಯ ಮೊದಲಾದ ಮುಖಂಡರು ಪ್ರಚಾರ ಕಾರ್ಯದಲ್ಲಿ ಪಾಲ್ಗೊಂಡರು. ಅರಕೆರೆ ಹೋಬಳಿಯ ಕೊಡಿಯಾಲದ ಸಾಹುಕಾರರು 100 ರೂಪಾಯಿಗಳನ್ನು ಕೊಟ್ಟು ರಾಷ್ಟ್ರಕೂಟಕ್ಕೆ ಯಶಸ್ಸು ಕೋರಿದರು. ಮದ್ದೂರು ತಾಲ್ಲೂಕಿನ ಕೆಲವು ಗ್ರಾಮಗಳ ಜನರು ಇನ್ನೊಂದು ಗ್ರಾಮಕ್ಕಿಂತ ಹಿಂದೆ ಬೀಳಬಾರ ದೆಂದ ಪೈಪೋಟಿಯಿಂದ ಹಣಕೊಟ್ಟರು. ದಾಸೇಗೌಡರ ತಿಮ್ಮಯ್ಯನವರ ಮುಂದಾ ಳುತನದಲ್ಲಿ ಒಳಗೆರೆ ಹಳ್ಳಿ ಕಾಂಗ್ರೆಸ್ ಕೆಲಸಗಳಿಗೆ ಸ್ಫೂರ್ತಿಯ ನೆಲೆಯೆಂದು ಪ್ರಸಿದ್ಧಿ ಯಾಗಿತ್ತು. ಆ ಊರಿನ ಜನರು ಧಾರಾಳವಾಗಿ ಚಂದಾ ಕೊಟ್ಟುದಲ್ಲದೆ ಬಹಿರಂಗ ಅಧಿ ವೇಶನದ ರಂಗಮಂಟಪ ಮತ್ತು ವೇದಿಕೆಯನ್ನು ನಿರ್ಮಿಸಿಕೊಟ್ಟರು. ತಿರುಪತಿ ಯಾತ್ರೆಗೆ ಹೊರಟಿದ್ದ ಗೌಡಗೆರೆಯವರು ತಮ್ಮ ಮುಡುಪಿನ ಹಣವನ್ನೇ ದಾನಮಾಡಿ ದರು. ಗೆಜ್ಜಲಗೆರೆಯಲ್ಲಿ ಊರಿನ ಮುಖಂಡರು ನಿಂತು ಹಣ ಸಂಗ್ರಹಿಸಿಕೊಟ್ಟರು. ವರ್ತಕರು ಶ್ರೀಮಂತರು ಉದಾರವಾಗಿ ಧನಸಹಾಯ ಮಾಡಿದರು.

ಸ್ವಾಗತ ಸಮಿತಿಯ ಅಧ್ಯಕ್ಷರಾದ ಶ್ರೀ ಎಸ್. ಚನ್ನಯ್ಯನವರು, ಕಾರ್ಯ ದರ್ಶಿಗಳಾದ ಶ್ರೀ ಎಚ್. ಕೆ. ವೀರಣ್ಣಗೌಡರು ಇತರ ಕೆಲಸಗಳನ್ನು ಜವಾಬ್ದಾರಿ ಯಿಂದ, ಮುತುವರ್ಜಿಯಿಂದ ನೋಡಿಕೊಂಡುದಲ್ಲದೆ ಪ್ರತ್ಯೇಕವಾಗಿ ಗಣನೀಯ ಮೊತ್ತದ ಹಣ ಸಂಗ್ರಹಿಸಿದರು. ಮದ್ದೂರು ನಗರದ ಶ್ರೀ ಯು. ಚನ್ನೇಗೌಡ ಮತ್ತು ಶ್ರೀ ಎಂ. ಸಿ. ಮಾದಯ್ಯನವರೂ ಹಣ ಸಂಗ್ರಹದಲ್ಲಿ ಸಹ ಕರಿಸಿದರು. ಮೈಸೂರಿನ ಶ್ರೀ ಕೆ. ಎಂ. ಕೃಷ್ಣಪ್ಪಗೌಡ, ಶ್ರೀ ಹೆಚ್. ಸಿ. ದಾಸಪ್ಪ, ಶ್ರೀ ಟಿ. ಮರಿಯಪ್ಪ, ಶ್ರೀ ಪಿ. ಗೋಪಾಲಕೃಷ್ಣ ಶೆಟ್ಟಿ, ಶ್ರೀ ಟಿ ಎಸ್. ರಾಜಗೋಪಾಲ ಐಯ್ಯಂಗಾರ್, ಶ್ರೀ ಎಸ್. ರಂಗರಾಮಯ್ಯ, ಶ್ರಿ ಎ. ಎನ್. ಸೂರ್ಯನಾರಾಯಣರಾವ್, ಶ್ರೀ ಎಂ. ಎನ್. ಜೋಯಿಸ್ ಅವರೂ ; ಮಂಡ್ಯದ ಶ್ರೀ ಹೆಚ್. ಹೊನ್ನಯ್ಯ, ಶ್ರೀ ಕೆ. ಚಿಕ್ಕಲಿಂಗಯ್ಯ ಅವರೂ ; ಕೊಪ್ಪದ ಶ್ರೀ ಜೋಗೀಗೌಡ, ಶಿವಪುರದ ಶ್ರೀ ಪಿ. ತಿರುಮಲೇಗೌಡ ಅವರೂ ; ಅರ ಕೆರೆಯ ಶ್ರೀ ಎ. ಜಿ. ಬಂದೀಗೌಡ ಅವರೂ ಅನೇಕ ಕಡೆಗಳಲ್ಲಿ ಸಂಚರಿಸಿ ಧನ ಸಂಗ್ರಹ ಮಾಡಿದರು. ಚನ್ನರಾಯ ಪಟ್ಟಣ ಮತ್ತು ಚನ್ನಪಟ್ಟಣ ತಾಲ್ಲೂಕುಗಳ

ಕೆಲವು ಮಹನೀಯರೂ ಧನ ಸಹಾಯ ಮಾಡಿದರು. ಸುಮಾರು ಒಂಬತ್ತು ಸಾವಿರ ಹಣವನ್ನು ಕಾರ್ಯಕರ್ತರು ಅತ್ಯಲ್ಪ ಕಾಲದಲ್ಲಿ ಸಂಗ್ರಹಿಸಿದರು.

ಜನರು ಉದಾರವಾಗಿ, ಹುಮ್ಮಸ್ಸಿನಿಂದ, ಸದ್ಭಾವನೆಯಿಂದ ಹಣ ನೀಡಿದುದರಿಂದ ಕಾರ್ಯಕರ್ತರಿಗಿದ್ದ ಆರ್ಥಿಕ ಚಿಂತೆ ಬಹಳ ಬೇಗ ನಿವಾರಣೆಯಾಯಿತು. ಧನ ಸಹಾಯ ಮಾಡಿದವರಷ್ಟೇ ಅಲ್ಲ ಇತರ ಹಳ್ಳಿಗರೂ ಶಿವಪುರ ರಾಷ್ಟ್ರಕೂಟದ ದಿನವನ್ನು ಎದುರು ನೋಡತೊಡಗಿದರು. ಎಲ್ಲ ಕಡೆಯೂ ಎಲ್ಲರಲ್ಲೂ ಒಂದು ಹೊಸ ನಿರೀಕ್ಷೆ ಕಾಣುತ್ತಿತ್ತು.

ಇನ್ನಿತರ ಏರ್ಪಾಡುಗಳೂ ಸಾಂಗೋಪಾಂಗವಾಗಿ ನೆರವೇರಿದುವು. ಶಿವಪುರದ ಪೂರ್ವಕ್ಕೆ ಶಿಂಷಾನದಿ, ಪಶ್ಚಿಮಕ್ಕೆ ದೊಡ್ಡ ಕೋಡಿಹಳ್ಳ, ಉತ್ತರಕ್ಕೆ ನಾಲೆ ಇರುವುದರಿಂದ, ಬೇಸಿಗೆಯಾದುದರಿಂದ ಪುರುಷರ ಸ್ನಾನಾದಿಗಳಿಗೆ ಬೇರೆ ಏರ್ಪಾಡು ಬೇಕಿರಲಿಲ್ಲ. ಶಿವಪುರದ ಮಾರೇಗೌಡರ ಮನೆ ಮುಂದಿನ ಬಾವಿಗೆ ಎಲೆಕ್ಟ್ರಿಕ್ ಪಂಪ್ ಇಟ್ಟು ನೀರೆತ್ತಿ ನಲ್ಲಿಗಳ ಮೂಲಕ ಪಾಕಶಾಲೆಗೆ, ಪ್ರತಿನಿಧಿಗಳ ಬಿಡಾರಕ್ಕೆ ನೀರನ್ನು ಒದಗಿಸಲಾಯಿತು. ರೈಲ್ವೆ ಸ್ಟೇಷನ್ ಬಳಿ ರೈಲ್ವೆ ಇಲಾಖೆಯವರು ಹೆಚ್ಚು ಕೊಳಾಯಿಗಳನ್ನು ಹಾಕಿಸಿದರು. ಸ್ತ್ರೀಯರಿಗೆ ಬಿಡಾರಗಳಿಗೇ ನೀರು ಒದಗಿಸಲಾಯಿತು. ಶ್ರೀ ಮೋಹನಸ್ವಾಮಿ ಮೊದಲಿಯಾರ್ ಅವರು ನೀರಿನ ವ್ಯವಸ್ಥೆಗೆ ಹೆಚ್ಚು ದುಡಿದರು.

ಟಿಕೆಟ್ ಬುಕ್ಕಿಂಗ್ ಆಫೀಸಿನ ಕೆಲಸವನ್ನು ದೊಡ್ಡಬಳ್ಳಾಪುರದ ಶ್ರೀ ಸಂಪತ್ ಕುಮಾರನ್ ಮತ್ತು ಶ್ರೀ ಪಿ. ನಾರಾಯಣರಾವ್ ನೋಡಿಕೊಂಡರು.

ಒಂದೇ ಸಾರಿಗೆ 2,000 ಜನರು ಊಟಮಾಡುವ ವಿಶಾಲ ಚಪ್ಪರ, ಪ್ರತಿನಿಧಿಗಳಿಗೆ, ಸ್ವಾಗತ ಸಮಿತಿಯ ಸದಸ್ಯರಿಗೆ, ಪೋಷಕರಿಗೆ ಪ್ರತ್ಯೇಕ ವ್ಯವಸ್ಥೆಗಳನ್ನು ಸ್ವಾಗತ ಸಮಿತಿಯವರೇ ನೋಡಿಕೊಂಡರು. ಮೈಸೂರು ಜಿಲ್ಲಾ ಹರಿಜನ ಸೇವಕ ಸಂಘದವರು ರಾಷ್ಟ್ರಕೂಟ ಸಮಾರಂಭದಲ್ಲಿ ಅಸ್ಪೃಶ್ಯತಾ ನಿವಾರಣೆ, ಮದ್ಯಪಾನ ನಿರೋಧದ ಬಗೆಗೆ ಪ್ರಚಾರ ನಡೆಸಲು ವ್ಯವಸ್ಥೆ ಮಾಡಿದರು. ಖಾದಿ ಮಾರಾಟ, ರಾಷ್ಟ್ರೀಯ ಪುಸ್ತಕ ಮಾರಾಟ, ಸ್ವದೇಶಿ ವಸ್ತುಗಳ ಹಾಗೂ ಇತರ ಅಗತ್ಯ ವಸ್ತುಗಳ ಮಾರಾಟಕ್ಕಾಗಿ ಸ್ವಾಗತ ಸಮಿತಿಯವರು ಅನೇಕ ಅಂಗಡಿಗಳನ್ನು ನಿರ್ಮಿಸಿ ಬಾಡಿಗೆಗೆ ಕೊಟ್ಟಿದ್ದರು. ಸಣ್ಣ ಅಂಗಡಿಗೆ 10 ರೂ. ಮತ್ತು ದೊಡ್ಡ ಅಂಗಡಿಗೆ 18 ರೂ. ಬಾಡಿಗೆಯನ್ನು ನಿಗದಿ ಮಾಡಲಾಗಿತ್ತು. ಕಟ್ಟಡಗಳ ನಿರ್ಮಾಣದ ಮೇಲ್ವಿಚಾರಣೆಯನ್ನು ಶ್ರೀ ಎಂ. ಕೆ. ಸುಬ್ರಹ್ಮಣ್ಯಂ ವಹಿಸಿಕೊಂಡಿದ್ದರು.

ರಾಷ್ಟ್ರಕೂಟದ ಸಿದ್ಧತೆಗಳು ಪ್ರಾರಂಭವಾದ ಸಮಯದಿಂದ ಪೂರ್ಣವಾಗುವವರೆಗೆ ಮೈಸೂರು ಬೆಂಗಳೂರು ಮುಂತಾದ ಕಡೆಗಳಿಂದ ಜನನಾಯಕರು ಬಂದು ಸ್ಥಳೀಯ ಕಾರ್ಯಕರ್ತರಿಗೆ ಸ್ಫೂರ್ತಿ ನೀಡಿ ಸಲಹೆ ಸೂಚನೆಗಳನ್ನು ನೀಡಿದರು. ಕೆಲವರು ಶಿವಪುರದಲ್ಲೇ ಬಿಡಾರ ಮಾಡಿದರೆ ಮತ್ತೆ ಕೆಲವರು ಆಗಾಗ್ಗೆ ಬಂದು

ಹೋಗುತ್ತಿದ್ದರು. ಶ್ರೀಮತಿ ಯಶೋಧರ ದಾಸಪ್ಪ ಮತ್ತು ಶ್ರೀಮತಿ ವೆಂಕಮ್ಮ ಸೀತಾರಾಮಯ್ಯನವರು ಆಗಾಗ್ಗೆ ಬಂದು ಸ್ವಯಂ ಸೇವಿಕೆಯರ ವ್ಯವಸ್ಥೆಗಳನ್ನು ಪರಿಶೀಲಿಸಿದರು. ಬೆಂಗಳೂರು ಡಿಸ್ಟ್ರಿಕ್ಟ್ ಬೋರ್ಡಿನ ಅಧ್ಯಕ್ಷರಾದ ಶ್ರೀ ಗುರುವಾ ರೆಡ್ಡಿ, ಶ್ರೀ ಕೆ. ಟಿ. ಭಾಷ್ಯಂ, ಶ್ರೀ ವೀರಕೇಸರಿ ಸೀತಾರಾಮಶಾಸ್ತ್ರಿ, ಶ್ರೀ ಸಿ. ಎನ್. ನರಸಿಂಗರಾವ್, ವಿದ್ಯಾಭೂಷಣ ಶ್ರೀ ವಿ. ಎಸ್. ಸಂಜೀವರಾವ್. ಶ್ರೀ ಟಿ. ಸಿದ್ದ ಲಿಂಗಯ್ಯ, ಶ್ರೀ ತಗಡೂರು ರಾಮಚಂದ್ರರಾವ್, ಶ್ರೀ ಹೆಚ್. ಸಿ. ದಾಸಪ್ಪ ಮೊದ ಲಾದವರು ಅನೇಕ ಬಾರಿ ಶಿವಪುರಕ್ಕೆ ಬಂದು ಸಿದ್ಧತೆಯ ಪ್ರಗತಿಯನ್ನು ಕಣ್ಣಾರೆ ಕಂಡರು.

ಶಿವಪುರ ರಾಷ್ಟ್ರಕೂಟದ ಬಗೆಗೆ ಬಿಸಿಬಿಸಿ ಸುದ್ದಿಗಳು

ಶಿವಪುರ ರಾಷ್ಟ್ರಕೂಟದ ಪ್ರಕಟಣಾ ಶಾಖೆ ಆಕರ್ಷಕವಾಗಿ ಕೆಲಸ ಮಾಡಿತು. ರಾಷ್ಟ್ರಕೂಟದ ಸಿದ್ಧತೆಯ ಬಗೆಗೆ ಪ್ರತಿನಿತ್ಯ ಪತ್ರಿಕೆಗಳಿಗೆ ಸುದ್ದಿಗಳನ್ನು ನೀಡುವುದರ ಮೂಲಕ ಜನರನ್ನು ಆಕರ್ಷಿಸಿತು. ಸ್ವಾಗತ ಸಮಿತಿ ತಾನೇ ಸ್ವತಃ ಕೆಲವು ಕೆಲಸ ಗಳನ್ನು ನಿರ್ವಹಿಸಿತು. ತನಗೆ ಮೀರಿದ ಕೆಲವು ಕೆಲಸಗಳನ್ನು ಸಂಬಂಧಪಟ್ಟ ಧಿಅ ಕಾರಿಗಳನ್ನು ಕಂಡು ಅವರ ಮನವೊಲಿಸಿ ಕೆಲಸಗಳನ್ನು ಆಗುಮಾಡಿಕೊಂಡಿತು. ರಾಷ್ಟ್ರಕೂಟದ ಬಗೆಗೆ ಸರಕಾರಕ್ಕೆ ವಿರೋಧವಿದ್ದರೂ ಮುಖಂಡರ ಮನವಿಗೆ ಸರ ಕಾರದ ಅಧಿಕಾರಿಗಳೇ ಮಣಿದು ತಮ್ಮಿಂದಾಗುವ ಸಹಾಯವನ್ನು ಉದಾರವಾಗಿ ನೀಡಿದರು. ಕೆಲವು ಖಾಸಗಿ ಸಂಸ್ಥೆಗಳೂ ಇದಕ್ಕಾಗಿ ದುಡಿದುವು. ಈ ಎಲ್ಲ ಸುದ್ದಿಗಳು ಪತ್ರಿಕೆಗಳಲ್ಲಿ ಆಕರ್ಷಕವಾದ ಶೀರ್ಷಿಕೆಗಳ ಮೂಲಕ ಪ್ರಕಟವಾಗು ತ್ತಿದ್ದುವು. ಆ ಕಾಲದ ಜನರಿಗೆ ಇದೆಲ್ಲ ಹೊಸ ಅನುಭವ.

ಧ್ವಜ ಸತ್ಯಾಗ್ರಹದ ದಿನ ಸಮೀಪಿಸುತ್ತಿದ್ದಂತೆ ಇದೊಂದು ಚರಿತ್ರಾರ್ಹವಾದ ರಾಷ್ಟ್ರಕೂಟವಾಗುವ ಸೂಚನೆಗಳು ಸ್ಪಷ್ಟವಾದುವು. ಹೊಸ ಸಿದ್ಧತೆಗಳಿಂದ ಶಿವ ಪುರ ಗ್ರಾಮವು ಕಳಕಳಿಸುತ್ತಿತ್ತು. ಅಲ್ಲಿಯ ರೈತರ ಉತ್ಸಾಹ ಇಮ್ಮಡಿಯಾಗಿತ್ತು. ಲೆಕ್ಕವಿಲ್ಲದಷ್ಟು ವಿಚಾರಣ ಪತ್ರಗಳು ಸಂಸ್ಥಾನದ ಮೂಲೆ ಮೂಲೆಗಳಿಂದ ಸ್ವಾಗತ ಸಮಿತಿಗೆ ಬರುತ್ತಿದ್ದುವು. ಎಲ್ಲಕ್ಕೂ ಪ್ರತ್ಯೇಕವಾಗಿ ಉತ್ತರಿಸುವ ತೊಂದರೆಯನ್ನು ಕಡಮೆ ಮಾಡಿಕೊಳ್ಳಲು ಕರಪತ್ರಗಳ ಜೊತೆಗೆ ಪತ್ರಿಕೆಗಳ ಹೇಳಿಕೆಗಳ ಮೂಲಕ ಜನರಿಗೆ ವಿಷಯಗಳನ್ನು ತಿಳಿಸಿದರು. ಸ್ವಯಂಸೇವಕರು, ದೇಶ ಸೇವಿಕೆಯರು ಗಣ ನೀಯ ಸಂಖ್ಯೆಯಲ್ಲಿ ಬಂದು ತರಬೇತಿ ಪಡೆದು ಸೇವೆ ಸಲ್ಲಿಸಿದರು. ಪತ್ರಿಕಾ ಪ್ರತಿ ನಿಧಿಗಳಿಗೆ ಪ್ರತ್ಯೇಕ ಬಿಡಾರಗಳನ್ನು ವ್ಯವಸ್ಥೆ ಮಾಡಿ, ಒಂದು ಪತ್ರಿಕೆಗೆ ಒಬ್ಬೊಬ್ಬ ಪ್ರತಿನಿಧಿಯಂತೆ ಅವಕಾಶ ಮಾಡಿಕೊಡಲಾಗಿತ್ತು. ಸಂಯುಕ್ತ ಕರ್ನಾಟಕ, ವಿಶ್ವ ಕರ್ನಾಟಕ, ಸಾಧ್ವಿ, ನವಜೀವನ, ದಿ ಹಿಂದು, ಇಂಡಿಯನ್ ಎಕ್ಸ್‌ಪ್ರೆಸ್, ಟೈಮ್ಸ್ ಆಫ್ ಇಂಡಿಯ, ಅಸೋಸಿಯೇಟೆಡ್ ಮೊದಲಾದ ಪತ್ರಿಕೆಗಳ ಪ್ರತಿನಿಧಿಗಳು ಅಧಿ ವೇಶನದ ಸಿದ್ಧತೆಯಿಂದ ಮುಕ್ತಾಯದವರೆಗೂ ಶಿವಪುರದಲ್ಲಿ ಬಿಡಾರ ಮಾಡಿದ್ದರು.

ರಾಷ್ಟ್ರಕೂಟಕ್ಕೆ ಬರುವ ಜನರ ಅನುಕೂಲಕ್ಕಾಗಿ ಉಚಿತ ವಾಚನಾಲಯ ವೊಂದನ್ನು ತೆರೆಯಲಾಗಿತ್ತು. ಖಾದಿ, ಪುಸ್ತಕ, ಹಣ್ಣಿನ ಅಂಗಡಿಗಳೂ, ಹೋಟಲು ಗಳೂ ನಿರ್ಮಾಣವಾಗಿದ್ದುವು. ಹೀಗೆ ಪ್ರತಿಯೊಂದು ವಿಷಯಕ್ಕೂ ಹೆಚ್ಚು ಗಮನ ಕೊಟ್ಟು ರಾಷ್ಟ್ರಕೂಟದ ಯಶಸ್ಸಿಗಾಗಿ ಕಾರ್ಯಕರ್ತರು ನಿಷ್ಠೆಯಿಂದ ದುಡಿ ದರು.

ಪ್ರತಿದಿನ ಎರಡು ಊಟ ಎರಡು ತಿಂಡಿಗಳ ಏರ್ಪಾಟಾಗಿತ್ತು. ಚಿಕ್ಕಮಗ ಳೂರಿನ ಬಾಗೇಮನೆ ದೇವೇಗೌಡರು ಬಡಿಸುವ ಕೆಲಸದ ಮುಖ್ಯಸ್ಥರಾಗಿದ್ದರು. ದೊಡ್ಡ ಬಳ್ಳಾಪುರದ ಶ್ರೀ ನರಸಿಂಹ ಅಯ್ಯಂಗಾರ್, ಮೈಸೂರಿನ ಶ್ರೀ ರಾಮ ಚಂದ್ರ ಜೋಯಿಸರು ಸಹಾಯಕರಾಗಿದ್ದರು. ಎಲ್ಲ ಕೆಲಸಗಳೂ ವ್ಯವಸ್ಥಿತವಾಗಿ ನಡೆದುವು.

ಮೈಸೂರು ಎಲೆಕ್ಟ್ರಿಕಲ್ ಎಂಜಿನೀಯರಿಂಗ್ ಕಂಪೆನಿಯವರು ಸಾವಿರಾರು ದೀಪಗಳಿಂದ ಸಭಾಂಗಣವನ್ನೆಲ್ಲ ಅಲಂಕರಿಸಿದರು. ಇಂಥ ದೀಪೋತ್ಸವವನ್ನು ಈವರೆಗೆ ಇಲ್ಲಿಯ ಜನ ನೋಡಿರಲಿಲ್ಲ. ಕಣ್ಮನ ತಣಿಸುವ ಈ ವೈಭವವನ್ನು ನೋಡಲು ಬರುವವರಿಗೂ ಮಿತಿ ಇರಲಿಲ್ಲ. ವಿದ್ಯುಚ್ಛಕ್ತಿ ಇಲಾಖೆಯ ಶಿವನಸಮು ದ್ರದ ಜನರಲ್ ಸೂಪರಿನ್‌ಟೆನ್‌ಡೆಂಟ್‌ರವರು ಬಂದು ಸ್ಥಳಾವಲೋಕನ ಮಾಡಿ ಸಲಹ ಸೂಚನೆ ನೀಡಿದರು.

ಯಾರೂ ಅನಾರೋಗ್ಯಕ್ಕೆ ಈಡಾಗದಂತೆ ಆರೋಗ್ಯ ಮತ್ತು ನೈರ್ಮಲ್ಯಕ್ಕೆ ವಿಶೇಷ ಗಮನ ಕೊಡಲಾಯಿತು. ಮಲಮೂತ್ರ ವಿಸರ್ಜನೆಗೆ ಆಳವಾಗಿ ಚರಂಡಿ ತೆಗೆದು ಸುತ್ತಲೂ ತಟ್ಟಿಗಳಿಂದ ಮರೆಮಾಡಿ ಮಲಮೂತ್ರ ವಿಸರ್ಜಿಸುವವರು. ಅದರ ಮೇಲೆ ಮಣ್ಣು ಎರಚುವುದಕ್ಕೆ ಪಕ್ಕದಲ್ಲಿ ಮಣ್ಣು ರಾಶಿ ಹಾಕಿತ್ತು. ಅಲ್ಲದೆ ಮಲ ಮೂತ್ರಗಳ ಮೇಲೆ ಮಣ್ಣು ಎರಚಲು ಕನ್ನಡ ಅಕ್ಷರಗಳಲ್ಲೂ ಚಿತ್ರಗಳಲ್ಲೂ ಬರೆದ ಬೋರ್ಡುಗಳನ್ನು ನೇತು ಹಾಕಿಸಲಾಗಿತ್ತು. ಇಡೀ ಕ್ಯಾಂಪ್ ಶುಚಿಯಾಗಿತ್ತು. ಮೈಸೂರು ಜಿಲ್ಲೆಯ ಮುಖ್ಯ ಆರೋಗ್ಯಾಧಿಕಾರಿಗಳು ಇದಕ್ಕಾಗಿ ಸೂಕ್ತ ಸಲಹೆ ಗಳನ್ನು ನೀಡಿದರು. ಮೈಸೂರು ಜಿಲ್ಲಾ ಬೋರ್ಡಿನವರು ತಮ್ಮ ಸ್ಯಾನಿಟರಿ ಅಧಿಕಾರಿಯನ್ನು ಕಳಿಸಿಕೊಟ್ಟಿದ್ದರು.

ಮೈಸೂರು ಜಿಲ್ಲಾ ಮೆಡಿಕಲ್ ಆಫೀಸರು, ಮದ್ದೂರು ಆಸ್ಪತ್ರೆಯ ವೈದ್ಯರು ಮತ್ತು ಮೈಸೂರಿನ ಕೆಲವು ಖಾಸಗಿ ವೈದ್ಯರು ತಮ್ಮ ಔಷಧಾಲಯ ಗಳನ್ನು ತೆರೆದು ಪ್ರತಿನಿಧಿಗಳಿಗೆ ಉಚಿತವಾಗಿ ಔಷಧೋಪಚಾರ ಮಾಡಿದರು.

ಸಭಾಂಗಣದ ಬೋರ್ಡುಗಳು, ಅಧ್ಯಕ್ಷರ ಮೆರವಣಿಗೆಯ ವೇದಿಕೆಯ ಅಲಂಕಾರಗಳು ಮೊದಲಾದುವುಗಳನ್ನು ಮೈಸೂರಿನ ಕಲಾಭವನದ ಶ್ರೀ ಎ. ಎಸ್. ಸೂರ್ಯನಾರಾಯಣರಾವ್ ಮತ್ತು ಅವರ ಸಿಬ್ಬಂದಿಯವರುನೋಡಿಕೊಂಡರು. ಕೊಂಡೂರಿನ ಶ್ರೀ ಅನಂತರಾಜು ಬಹಳವಾಗಿ ಶ್ರಮಿಸಿದರು.

ಸ್ವಾಗತ ಸಮಿತಿಯ ಉಪಾಧ್ಯಕ್ಷರಾದ ಶ್ರೀ ಹೆಚ್. ಸಿ. ದಾಸಪ್ಪನವರ ಕೋರಿಕೆಯಂತೆ ರೈಲ್ವೆ ಟ್ರಾಫಿಕ್ ಮೇನೇಜರ್ ಶ್ರೀ ಗುಂಡಪ್ಪನವರು ಕಾರ್ಯಕಾರಿ ಸಮಿತಿಯವರೊಡನೆ ಮಾತುಕತೆ ನಡೆಸಿ, ಶಿವಪುರಕ್ಕೆ ಬರಲಿರುವ ಪ್ರತಿನಿಧಿಗಳ, ಪ್ರೇಕ್ಷಕರ ಅಂದಾಜು ಸಂಖ್ಯೆ ಪಡೆದು, ವಿಶೇಷ ರೈಲುಗಳನ್ನು ಓಡಿಸುವ, ಮಾಮೂಲಿ ರೈಲುಗಳಿಗೆ ಡಬಲ್ ಎಂಜಿನ್ ಹಾಕಿ ಹೆಚ್ಚು ಬೋಗಿಗಳನ್ನು ಜೋಡಿಸುವ ಏರ್ಪಾಟು ಮಾಡಿ, ಎಲ್ಲರಿಗೂ ಪ್ರಯಾಣದ ಸೌಕರ್ಯವನ್ನು ಕಲ್ಪಿಸುವ ಭರವಸೆ ಕೊಟ್ಟು, ಅದರಂತೆಯೇ ನಡೆದುಕೊಂಡರು.

ಹಳ್ಳಿಯವರಿಗೆ ಧ್ವನಿವರ್ಧಕ ವ್ಯವಸ್ಥೆ ಹೊಸದು. ಬೆಂಗಳೂರಿನ ಹಿಮಾಮ್ಸ್ಸಿ ಕಂಪನಿಯವರು ಧ್ವನಿವರ್ಧಕ ವ್ಯವಸ್ಥೆಯನ್ನು ಮಾಡಿದರು. ಹಳ್ಳಿಗರು ಇದನ್ನು ಕುತೂಹಲದಿಂದ ನೋಡಿ ಆಶ್ಚರ್ಯದಿಂದ ಆಲಿಸಿದರು.

ಮೂರ್‍ನಾಲ್ಕು ದಿನಗಳಿಗೆ ಆಗುವಷ್ಟು ಅಕ್ಕಿ, ಬೇಳೆ, ಹಾಲು, ಮೊಸರು ಮೊದಲಾದ ಅಡಿಗೆ ಪದಾರ್ಥಗಳನ್ನು ಭಾರಿ ಪ್ರಮಾಣದಲ್ಲಿ ಸಂಗ್ರಹಿಸಲಾಯಿತು. ಈ ವಿಷಯದಲ್ಲಿ ಶ್ರೀ ತಿರುಮಲೇಗೌಡರಿಗೆ ಶ್ರೀ ರಾಮಚಂದ್ರ ಜೋಯಿಸರು ಸಹಾಯ ಮಾಡಿದರು. ಸ್ತ್ರೀ ಸ್ವಯಂಸೇವಿಕೆಯರ ಸಹಾಯವೂ ದೊರೆಯಿತು.

ದೊಡ್ಡ ಪ್ರಮಾಣದ ಸಾರ್ವಜನಿಕ ಸಭೆಗಳಿಗೆ ಸ್ವಯಂ ಸೇವಕರ ಅಗತ್ಯ ಹೆಚ್ಚು. ರಾಷ್ಟ್ರಕೂಟಕ್ಕೆ 10–15 ದಿನಗಳ ಮೊದಲೇ ಶಿವಪುರದಲ್ಲಿ ಸ್ವಯಂ ಸೇವಕರ ಶಿಬಿರ ಪ್ರಾರಂಭವಾಯಿತು. ಸ್ವಯಂಸೇವಕರ ನಾಯಕರಾದ ಶ್ರೀ ಎಂ .ಎನ್. ಜೋಯಿಸರು ಪ್ರಾರಂಭದಲ್ಲಿ ಸ್ವಯಂ ಸೇವಕರ ಶಿಕ್ಷಣಕ್ಕೆ ಬೆಂಗಳೂರಿನ ಶ್ರೀ ರಾಮಚಂದ್ರ ರಾವ್ ಮತ್ತು ಶ್ರೀ ಎನ್. ಆರ್. ರಾಘವೇಂದ್ರಮೂರ್ತಿಯವರನ್ನು ನೇಮಿಸಿದರು. ಇವರ ನೇತೃತ್ವದಲ್ಲಿ ಸ್ವಯಂ ಸೇವಕರು ಬೆಳಗ್ಗೆ ಮತ್ತು ಸಂಜೆ ಕವಾಯಿತು ಮಾಡುವುದು, ರಾಷ್ಟ್ರಗೀತೆ ಹಾಡುವುದು, ರಾಷ್ಟ್ರಧ್ವಜಾರೋಹಣ ಅವರೋಹಣಗಳನ್ನು ಅಭ್ಯಾಸಮಾಡುವುದು, ಸ್ವಾಗತ ಸಮಿತಿ ಕಚೇರಿಯ ಕೆಲಸ ನೋಡಿಕೊಳ್ಳುವುದು, ಸಾಮಾನುಗಳನ್ನು ಕಾಯುವುದು, ಪ್ರತಿನಿಧಿಗಳು ಬಂದಾಗ ಹೇಗೆ ಸಹಾಯ ಮಾಡಬೇಕು, ಕಾರ್ಯಕಲಾಪಗಳ ಸಂದರ್ಭದಲ್ಲಿ ಹೇಗೆ ನಡೆದುಕೊಳ್ಳಬೇಕು ಮೊದಲಾದ ಹಲವು ಹತ್ತು ವಿಷಯಗಳ ಬಗೆಗೆ ಶಿಕ್ಷಣ ಪಡೆದರು. ಏಪ್ರಿಲ್ ತಿಂಗಳ ಮೊದಲಲ್ಲಿ ಬೆಂಗಳೂರಿನ ಶ್ರೀ ಸುಬ್ರಹ್ಮಣ್ಯಂ ರವರನ್ನು ಸ್ವಯಂ ಸೇವಕರ ಕ್ಯಾಪ್ಟನ್ ಆಗಿ ಜಿ.ಓ. ಸಿ. ಯವರು ನೇಮಿಸಿದರು. 100 ಮಂದಿ ಸ್ವಯಂ ಸೇವಕರು ವ್ಯವಸ್ಥಿತವಾಗಿ ಶಿಕ್ಷಣ ಪಡೆದರು. ಕಾರ್ಯಸಮಿತಿಯವರ ಸೂಚನೆಯಂತೆ ಸ್ವಯಂ ಸೇವಕರು ತಮ್ಮ ಸಮ ವಸ್ತ್ರಗಳನ್ನು ತಾವೇ ಹೊಲಿಸಿಕೊಂಡರು. ಇವರ ಜೊತೆಗೆ ಮತ್ತೆ 100 ಸ್ವಯಂ ಸೇವಕರು ಅಧಿವೇಶನದ ಸಂದರ್ಭದಲ್ಲಿ ಸೇರಿಕೊಂಡರು.

ಅಮೃತೂರಿನ ಶ್ರೀ ಶೇಷಾದ್ರಿ ಅಯ್ಯಂಗಾರ್ಯರ ಮುಖಂಡತ್ವದಲ್ಲಿ 25 ಜನ ಸ್ವಯಂ ಸೇವಕರೂ ಚಿತ್ರದುರ್ಗದ ಶ್ರೀ ಭೀಮಪ್ಪನಾಯಕರ ಸಂಗಡಿಗರಾದ ಶ್ರೀ ಭೀಮ

ಕುಮಾರರೂ ಮತ್ತು ಅವರ ಸಂಗಡಿಗರೂ ಆಗಮಿಸಿದರು. ಬೆಂಗಳೂರಿನಿಂದ ಶ್ರೀ ಬಿ. ಯಂ. ಶೀನಪ್ಪನವರು ಕೆಲವು ಸ್ವಯಂ ಸೇವಕರೊಡನೆ ಬಂದು ಕಾರ್ಯಗಳನ್ನು ನಿರ್ವಹಿಸಿದರು.

ಮೈಸೂರಿನಲ್ಲಿ ಶ್ರೀ ಪಾಲಹಳ್ಳಿ ಸೀತಾರಾಮಯ್ಯನವರ ಹೆಂಡತಿ ಶ್ರೀಮತಿ ವೆಂಕಮ್ಮನವರು 24 ಮಂದಿ ಮಹಿಳೆಯರಿಗೆ ಸ್ವಯಂ ಸೇವೆಯ ತರಬೇತು ನೀಡಿದರು. ಶ್ರೀಮತಿ ಜಯಲಕ್ಷಮ್ಮನವರು ಉಪನಾಯಕಿಯಾಗಿ ಕೆಲಸ ಮಾಡಿದರು. ಇವರಲ್ಲಿ ವಿದ್ಯಾರ್ಥಿನಿಯರೂ ಶ್ರೀಮಂತರ ಕುಟುಂಬದವರೂ ಸೇರಿದ್ದರು. ಇವರೆಲ್ಲ ಏಪ್ರಿಲ್ ಮೊದಲ ವಾರದಲ್ಲೇ ಶಿವಪುರಕ್ಕೆ ಬಂದು ಶ್ರೀ ತಿರುಮಲೇಗೌಡರ ಮಹಡಿ ಮನೆಯ ಬಿಡಾರದಲ್ಲಿದ್ದುಕೊಂಡು ಕಾರ್ಯಕಲಾಪಗಳಲ್ಲಿ ಭಾಗವಹಿಸಿದರು. ಸಾಹುಕಾರ್ ಚನ್ನಯ್ಯನವರ ಮಗಳೂ (ಕುಮಾರಿ ಪ್ರಮೀಳೆ), ಪಾಲಹಳ್ಳಿ ಸೀತಾರಾಮಯ್ಯನವರ ಮಗಳೂ ಶ್ರೀ ಹೆಚ್. ಸಿ. ದಾಸಪ್ಪ ಮತ್ತು ಶ್ರೀ ಟಿ. ಸಿದ್ದಲಿಂಗಯ್ಯನವರ ಗಂಡು ಮಕ್ಕಳೂ ಸ್ವಯಂ ಸೇವಿಕೆ ಸೇವಕರಾಗಿ ತಮಗೆ ವಹಿಸಿದ ಕೆಲಸಗಳನ್ನು ಶ್ರದ್ಧೆಯಿಂದ, ಶಿಸ್ತಿನಿಂದ ನಿರ್ವಹಿಸಿದರು. ಸ್ವಯಂ ಸೇವಕರ ಹಾಗೂ ಸ್ವಯಂ ಸೇವಿಕೆಯರ ಶಿಸ್ತಿನ ಕವಾಯಿತು, ಕಾರ್ಯಚಟುವಟಿಕೆಗಳು, ಹಳ್ಳಿಗರಿಗೆ ತೀರ ಹೊಸತು. ಸ್ವಯಂ ಸೇವಕರನ್ನು ಹಲವು ಗುಂಪುಗಳಾಗಿ ವಿಂಗಡಿಸಿ ಪ್ರತಿಯೊಂದು ಗುಂಪನ್ನೂ ರಾಷ್ಟ್ರನಾಯಕರ ಹೆಸರಿನಿಂದ ಕರೆಯುತ್ತಿದ್ದರು. ಉದಾಹರಣೆ ತಿಲಕ್‌ದಸ್ತ, ಭಗತ್‌ಸಿಂಗ್‌ದಸ್ತ, ಪಟೇಲ್ ದಸ್ತ ಇತ್ಯಾದಿ.

ಪ್ರಸ್ತುತ ಪರಿಸ್ಥಿತಿಗಳನ್ನು ಕುರಿತು ಲಾವಣಿಗಳನ್ನು ಕಟ್ಟಿ ಹಾಡಲು ಚಿಕ್ಕಮಗಳೂರಿನ ಶ್ರೀ ಸಿ. ಆರ್. ರಾಜಣ್ಣ, ಬೆಂಗಳೂರಿನ ಶ್ರೀ ಬಿ. ನೀಲಕಂಠಯ್ಯ ಮತ್ತು ಮೈಸೂರಿನ ಶ್ರೀ ಎನ್. ವಿಷಕಂಠರಾವ್ ಮುಂದೆ ಬಂದರು.

ಶಿವಪುರ ರಾಷ್ಟ್ರಕೂಟದ ಸಿದ್ಧತೆಯಲ್ಲಿ ಸ್ಥಳೀಕರ ದುಡಿಮೆ ಹೆಚ್ಚು. ಕೊಪ್ಪದ ಶ್ರೀ ಜೋಗೀಗೌಡರ ಮಗ ಶ್ರೀ ಕೆ. ರಮೇಶ್, ಬೇಸರಗರಹಳ್ಳಿ ಶ್ರೀ ತಮ್ಮಯ್ಯ ಮೊದಲಾದವರು ಕಾರ್ಯಕರ್ತರೊಡನೆ ಸದಾ ಇದ್ದುಕೊಂಡು ಕೈಲಾದ ಸೇವೆ ಮಾಡಿದರು. ಮುದುಕರಾಗಿದ್ದರೂ ಹನುಮಂತಪುರದ ಶ್ರೀ ಸೊತ್ತೆಲಿಂಗೇಗೌಡರು ಅಧಿವೇಶನಕ್ಕಾಗಿ ಬಹಳವಾಗಿ ದುಡಿದರು. ಗುರುದೇವರ ಹಳ್ಳಿ ಶ್ರೀ ಕೆಂಪಯ್ಯ, ಶ್ರೀ ನರಸಿಂಹೇಗೌಡ, ಕೊತ್ತನಹಳ್ಳಿ ಪಟೇಲ್ ಮಲ್ಲಯ್ಯ ಮತ್ತು ಸೋದರರು ಬೆಲ್ಲಪ್ಪನ ಕೊಪ್ಪದ ಶ್ರೀ ಚಿಕ್ಕಬಿಳೀಗೌಡ, ಶ್ರೀ ದೊಡ್ಡಬಿಳೀಗೌಡ, ವಳಗರೆ ಹಳ್ಳಿ ಶ್ರೀ ತಮ್ಮಯ್ಯ, ಶ್ರೀ ಕರಡಣ್ಣಯ್ಯ, ಗೆಜ್ಜಲಗೆರೆ ಶ್ರೀ ಮರಿಸ್ವಾಮಿಗೌಡ, ಕುದುರು ಗುಂಡಿ ಶ್ರೀ ಮರಿಯಪ್ಪ, ನಗರಕೆರೆ ಶ್ರೀ ಎನ್. ಪಿ. ಲಿಂಗೇಗೌಡ ಮೊದಲಾದವರ ಶ್ರಮಪೂರ್ವಕ ದುಡಿಮೆ ಮತ್ತು ಹೃತ್ಪೂರ್ವಕ ಸಹಾಯ ಅಪೂರ್ವವಾದುದು.

9–4–38 ರಂದು ಸ್ವಾಗತ ಸಮಿತಿಯ ಕಚೇರಿಯಲ್ಲಿ ಶ್ರೀ ಟಿ. ಸಿದ್ದಲಿಂಗಯ್ಯ, ತಗಡೂರು ರಾಮಚಂದ್ರರಾವ್, ಶ್ರೀ ವೀರಕೇಸರಿ ಸೀತಾರಾಮಶಾಸ್ತ್ರೀ ಮೊದಲಾದ

ಮುಖಂಡರು ಕೂಡಿ ಕೆಲವು ಸಿದ್ಧತೆಗಳ ಬಗೆಗೆ ಕಾರ್ಯಕರ್ತರೊಡನೆ ಮಾತುಕತೆ ಯಾಡುತ್ತಿದ್ದರು. ಆಗ ಅಧ್ಯಕ್ಷರ ಮೆರವಣಿಗೆಯಲ್ಲಿ ಸಾರಥಿಯಾಗುವವರು ಯಾರು ಎಂಬ ಸಮಸ್ಯೆ ಬಂತು. ಅಲ್ಲಿಯವರೆಗೆ ಅದು ಅಷ್ಟು ಮುಖ್ಯವಾದ ವಿಷಯ ವಾಗಿದ್ದಂತೆ ಕಂಡಿರಲಿಲ್ಲ. ಈಗ ಅದಕ್ಕು ಒಂದು ಗಂಭೀರ ಛಾಯೆ ಬಂತು. ಅಲ್ಲಿ ಇದ್ದ ಅವ್ವೇರಹಳ್ಳಿ ದಾಸೇಗೌಡರು "ಭೈರಾಪಟ್ಟಣದ ಶ್ರೀ ಅಂಕೂಗೌಡರು ಸಾರಥಿ ಯಾಗಬೇಕು" ಎಂದರು.

" ಅಂಕೂಗೌಡರೇ ಯಾಕೆ ಸಾರಥಿಯಾಗಬೇಕು ?" ತಗಡೂರು ರಾಮಚಂದ್ರ ರಾವ್ ಪ್ರಶ್ನಿಸಿದರು.

"ಅಂಕೂಗೌಡರು ರೈತ ಮುಖಂಡರು. ಸರಕಾರದ ನಿಷೇದಾಜ್ಞೆ ಉಲ್ಲಂಘಿಸಿ ಜೈಲಿಗೆ ಹೋಗಿದ್ದರು. ಸುತ್ತಮುತ್ತಲ ಹಳ್ಳಿಗಳಲ್ಲೆಲ್ಲ ಚಿರಪರಿಚಿತರು. ಹಳ್ಳಿಗರ ಪರವಾಗಿ ಹಳ್ಳಿಯ ರೈತ ಸಾರಥಿಯಾಗುವುದು ಸೂಕ್ತ" ಎಂದು ಶ್ರೀ ದಾಸೇಗೌಡರು ಸಮರ್ಥಿಸಿದರು.

'ಇದೊಂದು ಧರ್ಮಯುದ್ಧ. ಇದಕ್ಕೆ ಗಣನೀಯ ವ್ಯಕ್ತಿಯೇ ಸಾರಥಿಯಾಗು ವುದು ಒಳ್ಳೆಯದು' ಎಂದು ಹಲವರು ಅಭಿಪ್ರಾಯಪಟ್ಟರು. ಭೈರಾಪಟ್ಟಣದ ಶ್ರೀ ಅಂಕೂಗೌಡರು ಅಂದಿನ ದಿವಾನರ ಹೇಳಿಕೆಗಳಿಗೆ ಸೊಪ್ಪು ಹಾಕದೆ ಸರಕಾರದ ಆಜ್ಞೆ ಗಳನ್ನು ಉಲ್ಲಂಘಿಸಿ ಧೈರ್ಯಸ್ಥರೆಂದು ಹೆಸರಾಗಿದ್ದರು. ರೈತರ ಮುಖಂಡರಲ್ಲಿ ಅಗ್ರಗಣ್ಯರು ಎಂದೂ ಹೆಸರು ಗಳಿಸಿದ್ದರು. ಅವರ ಧೈರ್ಯ ದೇಶಭಕ್ತಿ ಸರಕಾರದ ದಬ್ಬಾಳಿಕೆಗಳನ್ನು ನಿರ್ಭೀತಿಯಿಂದ ಪ್ರತಿಭಟಿಸುವ ಅವರ ಕೆಚ್ಚು ಮನೆಮಾತಾಗಿ ದ್ದುವು. ಆದ್ದರಿಂದ ಅವರು ಸಾರಥಿಯಾಗುವುದು ಉಚಿತವಾಗಿದೆ ಎಂದು ಕಾರ್ಯಕರ್ತರು ತೀರ್ಮಾನಿಸಿದರು.

ಸರಕಾರದ ಸಿದ್ಧತೆಗೂ ಕೊರತೆಯಿರಲಿಲ್ಲ. ಶಿವಪುರದ ತುಂಬ ಗೂಢಚಾರರು ನೇಮಕವಾಗಿದ್ದರು. ಸುಮಾರು ಒಂದು ಸಾವಿರ ಸಾಮಾನ್ಯ ಪೋಲೀಸರು ಶಿವಪುರ ದಲ್ಲಿದ್ದರು. ಧ್ವಜಾರೋಹಣದ ದಿನಕ್ಕೆ ಬಳಸಲು 600 ಜನ ಶಸ್ತ್ರಸಜ್ಜಿತ ಪೋಲೀ ಸರು ಸಿದ್ಧರಾಗಿದ್ದರು. ಜಿಲ್ಲಾ ಮ್ಯಾಜಿಸ್ಟ್ರೇಟರಾದ ಶ್ರೀ ಮೇಕ್ರಿಯವರು ಮದ್ದೂರಿನ ಪ್ರವಾಸಿಗರ ಬಂಗಲೆಯಲ್ಲಿ ಮೊಕ್ಕಾಂ ಮಾಡಿದ್ದರು. ಉನ್ನತ ಪೋಲೀಸ್ ಅಧಿಕಾರಿಗಳು ಶಿವಪುರದಲ್ಲಿ ಶಿಬಿರ ಸ್ಥಾಪಿಸಿದ್ದರು.

ಕಾಲಾವಕಾಶ ಕಡಮೆಯಿದ್ದರೂ ಕಾರ್ಯಕರ್ತರ ದಕ್ಷತೆ ನಿಷ್ಠೆ ಉತ್ಸಾಹ ಗಳಿಂದ, ಸ್ಥಳೀಕರ ಸಹಾಯ ಸಹಕಾರಗಳಿಂದ ಎಲ್ಲವೂ ನಿರೀಕ್ಷೆಗೆ ಮೀರಿ ಚೆನ್ನಾಗಿ ಸಿದ್ಧವಾಯಿತು. ಈ ನಡುವೆ ರಾಷ್ಟ್ರಕೂಟದಲ್ಲಿ ಚರ್ಚಿತವಾಗಬೇಕಾಗಿದ್ದ ನಿರ್ಣಯ ಗಳು, ಕಾಂಗ್ರೆಸ್ ರಚನಾ ಕ್ರಮಗಳೂ ಸಮರ್ಥ ರೀತಿಯಲ್ಲಿ ಸಿದ್ಧವಾದುವು. ಸಿದ್ಧತೆ ಗಳೆಲ್ಲ ಮುಗಿದುವು ಎಂದುಕೊಂಡಾಗ ರಾಷ್ಟ್ರಕೂಟದ ದಿನವೂ ಬಂದೇಬಿಟ್ಟಿತು.

ವಕೀಲರ ಸಮ್ಮೇಳನ

ಜನಜಾಗೃತಿಯಲ್ಲಿ, ಜವಾಬ್ದಾರಿ ಸರಕಾರದ ಹೋರಾಟದಲ್ಲಿ ಅಂದಿನ ವಕೀಲರ ಪಾತ್ರ ಮಹತ್ವವಾದುದು. ಏಪ್ರಿಲ್ 9, 1938ರಲ್ಲಿ ಮಂಡ್ಯದ ಶ್ರೀ ಜಯಚಾಮ ರಾಜೇಂದ್ರ ಟೌನ್ ಹಾಲಿನಲ್ಲಿ ಮೈಸೂರು ರಾಜ್ಯ ವಕೀಲರ 14ನೇ ಸಮ್ಮೇಳನ ನಡೆಯಿತು. ಅಸಂಖ್ಯಾತ ಪ್ರತಿನಿಧಿಗಳು ಹಾಗೂ ಪ್ರೇಕ್ಷಕರು ಭಾಗವಹಿಸಿದ್ದ ಆ ಸಮ್ಮೇಳನದ ಅಧ್ಯಕ್ಷತೆಯನ್ನು ಶ್ರೀ ಕೆ. ಟಿ. ಭಾಷ್ಯಂ ಅಯ್ಯಂಗಾರ್ ವಹಿಸಿದ್ದರು. ಅಧ್ಯಕ್ಷ ಭಾಷಣದಲ್ಲಿ ಶ್ರೀ ಭಾಷ್ಯಂ ವಕೀಲರ ಜವಾಬ್ದಾರಿಯ ಬಗೆಗೆ ಕಳಕಳಿಯಿಂದ ಮಾತನಾಡಿದರು. "ಜನಸೇವೆ ಮಾಡಲು ವಕೀಲರಿಗೆ ಹೆಚ್ಚು ಅವಕಾಶವಿದೆ. ಸ್ವಾತಂತ್ರ್ಯ ಕ್ಕಾಗಿ ನಡೆಯುತ್ತಿರುವ ಹೋರಾಟಕ್ಕೆ ಚಾಲನೆ ಕೊಡುವುದು ನಮ್ಮ ಆದ್ಯ ಕರ್ತವ್ಯ; ಪ್ರತಿಯೊಬ್ಬ ಪ್ರಜೆಗೂ ಅಗತ್ಯವಾಗಿರುವ ಹಾಗೂ ಮೂಲಭೂತ ಹಕ್ಕಾಗಿರುವ, ಆರ್ಥಿಕ ಸಮಾನತೆ, ಜವಾಬ್ದಾರಿ ಸರಕಾರದ ಪ್ರಾಪ್ತಿಗೆ ವಕೀಲರು ಹೋರಾಡ ಬೇಕು" ಎಂದು ಶ್ರೀ ಭಾಷ್ಯಂ ವಕೀಲ ಸಮೂಹಕ್ಕೆ ಕರೆಕೊಟ್ಟರು.

ಸಮ್ಮೇಳನದ ಸ್ವಾಗತ ಸಮಿತಿಯ ಅಧ್ಯಕ್ಷರಾದ ಶ್ರೀ ಜಿ. ದೇವಾಜಿರಾವ್ ಅವರು ಸ್ವಾಗತಭಾಷಣ ಮಾಡಿದರು.

ಹರಿಪುರವೋ ಶಿವಪುರವೋ

ಹರಿಪುರದಲ್ಲಿ ನಡೆದ ಅಖಿಲಭಾರತ ರಾಷ್ಟ್ರೀಯ ಕಾಂಗ್ರೆಸ್ ಮಹಾಧಿವೇಶನದ ನಿರ್ಣಯದಂತೆಯೇ 'ಮೈಸೂರು ಕಾಂಗ್ರೆಸ್' ಸ್ಥಾಪನೆಯಾಗಿ 'ಶಿವಪುರ ರಾಷ್ಟ್ರಕೂಟ' ನಡೆಯಲು ತೀರ್ಮಾನವಾದುದು. ಹರಿಪುರ ಅಧಿವೇಶನಕ್ಕೂ ಶಿವಪುರ ಅಧಿವೇಶನಕ್ಕೂ ಕೆಲವು ಸಾಮ್ಯಗಳಿವೆ. ಹರಿಪುರದ ಮಹಾಧಿವೇಶನ ಇಡೀ ರಾಷ್ಟ್ರಕ್ಕೆ ಸಂಬಂಧಿಸಿದ್ದು. ಲಕ್ಷೋಪ ಲಕ್ಷ ಜನ ಸೇರಿದ ಮಹಾಧಿವೇಶನ ಅದು. ಶಿವಪುರದ್ದು ಕೇವಲ ಒಂದು ಸಂಸ್ಥಾನಕ್ಕೆ ಸೇರಿದ್ದು. ಆದರೆ ಹರಿಪುರದ ಉತ್ಸಾಹ ಕ್ರಿಯಾಶೀಲತೆ ಇಲ್ಲೂ ಕುಡುಬರುತ್ತಿತ್ತು. ಲಕ್ಷವಲ್ಲದಿದ್ದರೂ ಹತ್ತಾರು ಸಾವಿರ ಜನರನ್ನು ತಂಡೋಪತಂಡವಾಗಿ ಆಕರ್ಷಿಸಿತು ಇದು. ರಾಷ್ಟ್ರಮಟ್ಟದ ಮಹಾನಾಯಕರು ಅಲ್ಲಿ ಸೇರಿದ್ದರೆ ಒಂದು ಸಂಸ್ಥಾನ ಮಟ್ಟದ ಜನನಾಯಕರು ಇಲ್ಲಿ ಕಲೆತರು. ಹರಿಪುರದ ಆ ಮಹಾಧಿವೇಶನದ ಪರಿಣಾಮಕ್ಕೆ ಯಾವ ರೀತಿಯಲ್ಲೂ ಕಡಮೆ ಇಲ್ಲದಂತೆ ಶಿವಪುರ ಅಧಿವೇಶನದ ಕಾರ್ಯಕಲಾಪಗಳು ನಡೆದುವು.

ಹರಿಪುರದಂತೆಯೇ ಶಿವಪುರ ಹೆಸರೂ ವಿಶಿಷ್ಟವಾದುದು. ಹರಿಪುರಕ್ಕೆ ಬಂದ ಕೀರ್ತಿಯೇ ಮುಂದೆ ಶಿವಪುರಕ್ಕೆ ಬಂದುದು ಇತಿಹಾಸ ಸತ್ಯ. ಸೌಕರ್ಯಗಳ ದೃಷ್ಟಿಯಿಂದ ಮದ್ದೂರಿನ ಹತ್ತಿರ ರಾಷ್ಟ್ರಕೂಟ ನಡೆಸಲು ನಿರ್ಧರಿಸಿದ ಮೇಲೆ ಸ್ಥಳ ಪರಿಶೀಲನೆ ಮಾಡಿದ ನಾಯಕರು ಮೊದಲು ಆಯ್ಕೆ ಮಾಡಿದ ಸ್ಥಳ ಚಾಮನಹಳ್ಳಿ, ಇದೂ ಮದ್ದೂರಿನ ಶಿವಪುರದ ಹತ್ತಿರವೇ ಇದೆ. ಇಲ್ಲಿಯೂ ಶ್ರೀ ತಿರುಮಲೇ ಗೌಡರ ಜಮೀನಿತ್ತು. ಅಷ್ಟು ವಿಶಾಲವಾದ ಸ್ಥಳವಲ್ಲ. ಹಳ್ಳ ದಿನ್ನೆ ಹೆಚ್ಚಾಗಿತ್ತು. ನೀರಿಗೆ ಸಾಕಷ್ಟು ದೂರಕ್ಕೆ ಹೋಗಬೇಕಾಗಿತ್ತು. ಹೆಚ್ಚು ಜನ ಬಂದರೆ ಸ್ಥಳಾಭಾವವಾಗುತ್ತಿತ್ತು. ಮೈಸೂರಿನ ಕಲಾಭವನದ ಶ್ರೀ ಸೂರ್ಯನಾರಾಯಣರಾವ್ ಮೊದಲಾದವರು ಈ ಸ್ಥಳವನ್ನು ಒಪ್ಪಿಕೊಳ್ಳಲಿಲ್ಲ.

ರಾಷ್ಟ್ರಕೂಟವನ್ನು ಸೇರಿಸುವ ಸ್ಥಳ ಹರಿಪುರದಂತೆಯೇ ವಿಶಾಲವಾಗಿರಬೇಕು. ಜನರು ಸೇರಿದಾಗ ನೋಡುವುದಕ್ಕೆ ಸುಂದರವಾಗಿರಬೇಕು. ಎಷ್ಟು ಜನರು ಬಂದರೂ ಸ್ಥಳಾವಕಾಶಕ್ಕೆ ತೊಂದರೆಯಾಗಬಾರದು. ದಾರಿಗೆ, ನೀರಿಗೆ ಯಾವ ಆತಂಕಗಳೂ ಇರಬಾರದು. ಧ್ವಜಸ್ತಂಭ

ವನ್ನು ನೆಟ್ಟರೆ ಅದರ ಮೇಲಿನ ಬಾವುಟ ಸುತ್ತಲೂ ಐದು ಮೈಲಿಗಳವರೆಗೆ ಕಾಣು ವಂತಿರಬೇಕು. ಹೆದ್ದಾರಿಗೆ ಹತ್ತಿರವಾಗಿರಬೇಕು. ಹೀಗೆಲ್ಲಾ ಆಲೋಚಿಸಿದ ಕಾರ್ಯಕರ್ತರು ಕೊನೆಗೆ ಶಿವಪುರವನ್ನು ಆಯ್ಕೆ ಮಾಡಿದರು. ರಾಷ್ಟ್ರಕೂಟಕ್ಕೆ ಹೇಳಿ ಮಾಡಿಸಿದಂತೆ ಶ್ರೀ ತಿರುಮಲೇಗೌಡರ ದೊಡ್ಡ ಮನೆ, ಮನೆಗೆ ಹೊಂದಿ ಕೊಂಡಂತೆ ವಿಶಾಲವಾದ ಜಮೀನುಗಳು ಸಿದ್ಧವಾಗಿದ್ದುವು.

ಆಗತಾನೇ ಮೈಸೂರಿನ ಕಾರ್ಯಕರ್ತರು ಹರಿಪುರದ ಅಧಿವೇಶನವನ್ನು ಕಣ್ಣಾರೆ ಕಂಡು ಬಂದಿದ್ದರು. ಅದರ ವೈಭವ, ಉದ್ದೇಶ, ಕಾರ್ಯಕರ್ತರ, ಸ್ವಯಂ ಸೇವಕರ ಚಟುವಟಿಕೆಗಳು ಮೈಸೂರಿನ ಕಾರ್ಯಕರ್ತರ ಮೇಲೆ ಪ್ರಭಾವ ಬೀರಿ ದ್ದುವು. ಮೈಸೂರು ಸಂಸ್ಥಾನದಲ್ಲಿ ಅಂಥ ದೊಡ್ಡ ಸಮ್ಮೇಳನ ನಡೆದಿರಲಿಲ್ಲ. ಆ ತರಹ ಮಾಡುವ ಕಲ್ಪನೆಯೂ ಇಲ್ಲಿಯವರಿಗಿರಲಿಲ್ಲ. ಆದ್ದರಿಂದ ಶಿವಪುರ ರಾಷ್ಟ್ರ ಕೂಟಕ್ಕೆ ಹರಿಪುರದ ಅಧಿವೇಶನ ಹೆಜ್ಜೆ ಹೆಜ್ಜೆಗೂ ಮಾದರಿಯಾಗಿ ನಿಂತಿತು. ಹರಿಪುರದ ಅಧಿವೇಶನದಂತೆಯೇ ಶಿವಪುರ ಅಧಿವೇಶನವನ್ನು ಕಾಂಗ್ರೆಸ್ ಕಾರ್ಯ ಕರ್ತರು ವ್ಯವಸ್ಥೆ ಮಾಡಿದರು. ರಾಷ್ಟ್ರಕೂಟದ ಪ್ರತಿಯೊಂದು ಘಟನೆಗಳೂ ಹರಿ ಪುರದ ಅಧಿವೇಶನವನ್ನು ನೆನಪು ಮಾಡುತ್ತಿದ್ದುವು. ಎರಡೂ ಅಧಿವೇಶನಗಳನ್ನು ನೋಡಿದವರಿಗೆ ಯಾವ ವ್ಯತ್ಯಾಸವೂ ಕಾಣಲಿಲ್ಲ.

10–4–1938ರ ಬೆಳಗ್ಗೆ ಮತ್ತು ಆ ಹಿಂದಿನ ರಾತ್ರಿ ಶಿವಪುರ ಒಂದು ಯಾತ್ರಾಸ್ಥಳದಂತೆ ಭಾಸವಾಗುತ್ತಿತ್ತು. ಸಾವಿರಾರು ಸಂಖ್ಯೆಯ ಜನ ಸುತ್ತಮುತ್ತಲ ಊರುಗಳಿಂದ ಕಾಲು ನಡಿಗೆಯಿಂದ, ಎತ್ತಿನ ಗಾಡಿಗಳಿಂದ ಬಂದು ಸೇರಿದರು. ಎತ್ತಿನಗಾಡಿ, ರೈಲುಗಾಡಿ, ಬಸ್ಸುಗಳ ಮೇಲೆಲ್ಲ "ಶಿವಪುರ ರಾಷ್ಟ್ರಕೂಟಕ್ಕೆ" ಎಂಬ ಬ್ಯಾನರ್‌ಗಳು ತೂಗುತ್ತಿದ್ದುವು. ಎಲ್ಲರ ಕೈಯಲ್ಲೂ ಕರಪತ್ರಗಳಿದ್ದುವು. ಎಲ್ಲರ ಮೈಮೇಲೆ ಖಾದಿಯ ಶ್ವೇತವಸ್ತ್ರವಿತ್ತು. ತಲೆಯಮೇಲೆ ಖಾದಿ ಟೋಪಿ ಹೊಳೆ ಯುತ್ತಿತ್ತು. ಇದೇ ಸಂದರ್ಭದಲ್ಲಿ ಅವ್ವೇರಹಳ್ಳಿ ಶ್ರೀ ಎ. ಆರ್. ದಾಸೇಗೌಡರು ಖಾದಿ ಟೋಪಿ ಸಿದ್ಧಪಡಿಸಿ ಅಧಿವೇಶನದಲ್ಲಿ ಭಾಗವಹಿಸಿದವರಿಗೆ ಮಾರಿದರು. ಶಿವಪುರದ ಹಾದಿ ಬೀದಿಗಳಲ್ಲೆಲ್ಲ ಜನ ! ಜನ ! ಸುತ್ತಮುತ್ತಲ ಗ್ರಾಮಾಂತರ ಪ್ರದೇಶಗಳಿಂದ ಲ್ಲದೆ ರಾಜ್ಯದ ಮೂಲೆ ಮೂಲೆಗಳಿಂದಲೂ ಜನ ಬಂದರು. ಎಲ್ಲಾ ಕಡೆ ಗಳಿಂದಲೂ ಬಂದ ಜನ ಸಮುದ್ರದೋಪಾದಿಯಲ್ಲಿ ಸೇರಿದರು. ಇವರಲ್ಲಿ ಹರಿಪುರ ಅಧಿವೇಶನವಲ್ಲಿ ಭಾಗವಹಿಸಿದವರೂ ಇದ್ದರು. ಇರ್ವಿನ್ ನಾಲಾ ರೈತರ ಚಳುವಳಿಯಲ್ಲಿದ್ದವರೂ ಇದ್ದರು. ಸರಕಾರದ ದಬ್ಬಾಳಿಕೆಗೆ ಈಡಾಗಿ ಕಷ್ಟ ಅನುಭವಿಸಿ ಜೈಲು ಕಂಡು ಬಂದಿದ್ದವರೂ ಇದ್ದರು. ಹೆಚ್ಚಾಗಿ ನಾನಾ ಕಾರಣ ಗಳಿಂದ ಆಕರ್ಷಿತರಾಗಿದ್ದ ಹಳ್ಳಿಯ ಸ್ತ್ರೀ ಪುರುಷರಿದ್ದರು. ಮಂಡ್ಯದ ಸುತ್ತ ಮುತ್ತ ಒಕ್ಕಲಿಗರು, ಕುರುಬರು, ಹರಿಜನರು, ಲಿಂಗಾಯಿತರೇ ಹೆಚ್ಚಾಗಿರುವವರು. ಉಳಿದ ಜಾತಿಯವರೂ ಅಲ್ಪ ಪ್ರಮಾಣದಲ್ಲಿದ್ದಾರೆ. ಎಲ್ಲ ಜಾತಿಯ ಜನರೂ ಸಡಗರದಿಂದ ಗೊಂಪೆ ಗೊಂಪೆಯಾಗಿ ಶಿವಪುರಕ್ಕೆ ಬಂದರು. ಈ ಜನಪ್ರವಾಹವನ್ನು

ಅಧಿವೇಶನದ ವೈಭವವನ್ನು ಕಂಡು ಇದು ಹರಿಪುರವೋ ಶಿವಪುರವೋ ಎಂದು ಮುಖಂಡರು ವಿಸ್ಮಯ ಪಡುತ್ತಿದ್ದರು.

ಮೈಸೂರು ಸಂಸ್ಥಾನದ ಇತಿಹಾಸದಲ್ಲಿ ಇಷ್ಟೊಂದು ಜನ ಒಂದು ಕಡೆ ಸೇರಿದ್ದುದು ಇದೇ ಮೊದಲು. ಕಾರ್ಯಕರ್ತರಿಗೆ ಸ್ವಯಂ ಸೇವಕರಿಗೆ ಬಿಡುವಿಲ್ಲದಷ್ಟು ಕೆಲಸವಿತ್ತು. ರೈಲ್ವೆ ನಿಲ್ದಾಣಗಳಿಂದ ಹೊರಗಡೆಯಿಂದ ಬಂದ ಅತಿಥಿಗಳಿಗೆ ಪ್ರತಿನಿಧಿಗಳಿಗೆ ಸ್ವಯಂಸೇವಕರು ಶಿಸ್ತಿನಿಂದ ಪ್ರೀತಿ ಗೌರವಗಳಿಂದ ಸ್ವಾಗತಿಸಿ ಅವರವರಿಗೆ ಕಾದಿರಿಸಿದ್ದ ಸ್ಥಳಗಳನ್ನು ತೋರಿಸಿ ಸಹಾಯ ಮಾಡಿದರು. ಎಲ್ಲೆಲ್ಲೂ ಒಂದು ಹೊಸ ವಾತಾವರಣ ಸೃಷ್ಟಿಯಾಗಿತ್ತು. ಕಾರ್ಯಕರ್ತರಲ್ಲಿ ಕರ್ತವ್ಯದ ಸಡಗರ, ಸ್ವಯಂ ಸೇವಕರಲ್ಲಿ ಶಿಸ್ತು, ಪ್ರಮುಖರಲ್ಲಿ ಗಾಂಭೀರ್ಯ, ಜನಸಾಮಾನ್ಯರಲ್ಲಿ ಕಂತೂಹಲಗಳು ಎದ್ದು ಕಾಣುತ್ತಿದ್ದುವು. ಕಿಕ್ಕಿರಿದ ಜನಜಂಗುಳಿಯ ನಡುವೆ ಲಾಠಿ ತಿರುಗಿಸುತ್ತಾ ಪೋಲೀಸರು ಸುಳಿದಾಡುತ್ತಿದ್ದರು. ಪೋಲೀಸರ ಕೈಯಲ್ಲಿ ನರ್ತನ ಮಾಡುತ್ತಿದ್ದ ಲಾಠಿಯನ್ನು ಕಂಡು ಬೆದರಿದ ಹಳ್ಳಿಗರಿಗೂ ಕೊರತೆಯಿರಲಿಲ್ಲ. ಇಂಥ ಸಂದರ್ಭಗಳಲ್ಲಿ ಸಾಮಾನ್ಯವಾಗಿ ನಡೆಯುವ ಗಲಾಟೆ, ಲಾಠಿಪ್ರಹಾರ, ಸಾವು ನೋವುಗಳ ಅನುಭವವಿದ್ದ ಸತ್ಯಾಗ್ರಹಿಗಳ ಮುಖದಲ್ಲಿ ಉದ್ವೇಗ, ಏನಾದರೂ ಅನುಭವಿಸಲು ಸಿದ್ಧರೆಂಬ ದೃಢನಿಲುವು ಮನೆಮಾಡಿದ್ದುವು. ಯಾವ ಕ್ಷಣದಲ್ಲಿ ಏನೋ ಎನ್ನುವ ಸ್ಥಿತಿಯೂ ಬಹಳಷ್ಟು ಮಂದಿಯಲ್ಲಿ ಕಾಣುತ್ತಿತ್ತು. ಆದರೂ ತಂಡ ತಂಡವಾಗಿ ಬರುವ ಜನಕ್ಕೆ, ಶಿವಪುರಕ್ಕೆ ಕಾಲಿಟ್ಟ ಜನರ ಸಡಗರಕ್ಕೆ ಕೊರತೆಯಿರಲಿಲ್ಲ.

ಹಿಂದಿನ ದಿನವೇ ತೀರ್ಮಾನವಾಗಿದ್ದಂತೆ ಕಾರ್ಯಕ್ರಮಗಳು ಪ್ರಾರಂಭವಾದುವು.

ಯುವಜನ ಸಮ್ಮೇಳನ

ಶಿವಪುರಕ್ಕೆ ತಂಡ ತಂಡವಾಗಿ ಸಾವಿರಾರು ಸಂಖ್ಯೆಯಲ್ಲಿ ಆಗಮಿಸಿದ ಜನರು ಸ್ವಯಂ ಸೇವಕರ ಆದೇಶದಂತೆ ಭವ್ಯವಾಗಿ ನಿರ್ಮಿಸಿದ್ದ ವಿಶಾಲವಾದ ಬಹಿರಂಗ ಅಧಿವೇಶನದ ಸಭಾಂಗಣದಲ್ಲಿ ಸೇರಿದರು. 10–4–1938ರ ಬೆಳಿಗ್ಗೆ * ಮೈಸೂರು ಸಂಸ್ಥಾನದ ಯುವಜನ ಸಮ್ಮೇಳನ ಪ್ರಾರಂಭವಾಯಿತು. 1930ರಲ್ಲಿ ಬೆಂಗಳೂರಿನಲ್ಲಿ ಮೈಸೂರು ಸಂಸ್ಥಾನದ ಯುವಕ ಸಮ್ಮೇಳನ ನಡೆದಿತ್ತು. ಇನ್ನೂ ಒಂದೆರಡು ಸಂದರ್ಭಗಳಲ್ಲಿ ಯುವಜನ ಸಮ್ಮೇಳನ ನಡೆದಿರುವ ದಾಖಲೆಗಳಿವೆ. ಆದರೆ ಶಿವಪುರದ್ದು ದೊಡ್ಡ ಪ್ರಮಾಣದ ಹಾಗೂ ಮಹತ್ವಪೂರ್ಣವಾದ ಅಧಿವೇಶನವಾಗಿತ್ತು. ನಂಜನಗೂಡಿನ ಶ್ರೀ ಕೆ. ವಿಶ್ವೇಶ್ವರ ಗೌಡರು ಯುವಜನ ಸಮ್ಮೇಳನದ ಸ್ವಾಗತ ಸಮಿತಿಯ ಅಧ್ಯಕ್ಷರಾಗಿದ್ದರು. ಶ್ರೀ ಹೆಚ್. ಸಿ. ದಾಸಪ್ಪನವರು ಯುವಜನ ಸಮ್ಮೇಳನವನ್ನು ಉದ್ಘಾಟಿಸಿದರು. 1920ರಿಂದ ತಗಡೂರಿನಲ್ಲಿ ಮತ್ತು ರಾಜ್ಯದ ಇತರ ಕಡೆಗಳಲ್ಲಿ ಮಹಾತ್ಮ ಗಾಂಧೀಜಿಯವರ ಸಿದ್ಧಾಂತಗಳಿಗನುಗುಣವಾಗಿ ಅನೇಕ ಚಳುವಳಿಗಳನ್ನು ಮಾಡಿ ಪ್ರಖ್ಯಾತರಾಗಿದ್ದ ತಗಡೂರು ರಾಮಚಂದ್ರ ರಾಯರು ಯುವಜನ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಶ್ರೀಮತಿ ಟಿ. ಸುನಂದಮ್ಮನವರು ಸುಶ್ರಾವ್ಯವಾಗಿ ತಮ್ಮ ಕಂಚಿನ ಕಂಠದಿಂದ, ಇಡೀ ಭಾರತೀಯರಲ್ಲಿ ಸ್ವಾತಂತ್ರ್ಯದ ಸ್ಫೂರ್ತಿಯನ್ನು ನೀಡಿದ ಬಂಕಿಮಚಂದ್ರರ "ವಂದೇ ಮಾತರಂ" ಗೀತೆಯನ್ನು ಹಾಡುವುದರಲ್ಲಿ ಪ್ರಸಿದ್ಧರಾಗಿದ್ದರು. ಆ ಗೀತೆಯ ಪ್ರಾರ್ಥನೆಯೊಡನೆ ಶಿವಪುರ ರಾಷ್ಟ್ರಕೂಟದ ಯುವಜನ ಸಮ್ಮೇಳನ ಪ್ರಾರಂಭವಾಯಿತು. ಇದರಲ್ಲಿ ಅನೇಕ ಯುವಜನರು ಸಕ್ರಿಯವಾಗಿ ಭಾಗವಹಿಸಿ, ತಮಗಿರುವ ಸ್ವಾತಂತ್ರ್ಯ ಪ್ರೇಮವನ್ನೂ ಅದಕ್ಕಾಗಿ ಮಾಡಬೇಕಾಗಿರುವ ತ್ಯಾಗ ಬಲಿದಾನಗಳನ್ನೂ ದೇಶದ ಸ್ಥಿತಿಗತಿಗಳ ಸ್ಪಷ್ಟ ಚಿತ್ರಗಳನ್ನೂ ಮಹಾ ಜನತೆಯ ಮುಂದೆ ಅಭಿವ್ಯಕ್ತಿಸಿದರು. ಈ ಸಂದರ್ಭದಲ್ಲಿ ವೇದಿಕೆಯ ಮೇಲೆ ಕಾಣಿಸಿಕೊಂಡ ಶ್ರೀ ಕೆ. ಹನುಮಂತಯ್ಯನವರು ತಮ್ಮ ವಿಶಿಷ್ಟ ಶೈಲಿಯಲ್ಲಿ ಪ್ರಜಾಪ್ರಭುತ್ವ, ಸಮತಾವಾದ, ಸರ್ವಾಧಿಕಾರಿಗಳ ಅಂತರವನ್ನು ಎಳೆ

---

* ಯುವಜನ ಸಮ್ಮೇಳನ 10–4–38ರ ಭಾನುವಾರದ ರಾತ್ರಿ ನಡೆಯಿತೆಂದು 'ದಿ ಹಿಂದು' ಪತ್ರಿಕೆ ವರದಿ ಮಾಡಿದೆ.

ಎಳೆಯಾಗಿ ಹಿಂಜಿ ವಿಶ್ಲೇಷಿಸಿ ಉತ್ತಮವಾಗಿ ಭಾಷಣ ಮಾಡಿ ತಾವೊಬ್ಬ ಮೈಸೂರಿನ ಭಾವೀ ಮುಖಂಡರೆಂಬುದನ್ನು ಪ್ರತ್ಯಕ್ಷವಾಗಿ ಪ್ರದರ್ಶಿಸಿ ತೋರಿಸಿಕೊಟ್ಟರು. ಹಲವು ಯುವಕ ನಾಯಕರ ಭಾಷಣಗಳಿಂದ ಜನಸಮುದಾಯಕ್ಕೆ ಹೊಸ ಹೊಸ ವಿಷಯಗಳು ತಿಳಿದುವು.

ಯುವಜನ ಸಮ್ಮೇಳನದ ಅಧ್ಯಕ್ಷರಾದ ತಗಡೂರು ರಾಮಚಂದ್ರರಾಯರು ತಮ್ಮ ಗಂಡು ಧ್ವನಿಯಲ್ಲಿ ನಿರ್ಭೀತ ವಾಕ್ಝರಿಯಲ್ಲಿ ಯುವಕರ ಕರ್ತವ್ಯಗಳನ್ನು ಮತ್ತು ದೇಶದ ಹೀನಾಯ ಸ್ಥಿತಿಗತಿಗಳನ್ನು ಕುರಿತು ಅಮೋಘವಾಗಿ ಉಪನ್ಯಾಸಿಸಿದರು. ಅವರ ದೀರ್ಘ ಭಾಷಣದಲ್ಲಿ ಕಂಡು ಬಂದ ಮುಖ್ಯಾಂಶಗಳು ಹೀಗಿವೆ: ಶಿವಪುರ ಕಾಂಗ್ರೆಸ್ ಅಧಿವೇಶನದ ಉದ್ದೇಶ; ಯುವಕರು 2ನೇ ಪ್ರಪಂಚದ ಯುದ್ಧಕ್ಕೆ ಸೇರಬಾರದು. (ಹಿಂದೆ ಒಂದನೇ ಮಹಾಯುದ್ಧದಲ್ಲಿ ಗಾಂಧೀಜಿಯವರ ಆದೇಶದಂತೆ ಭಾರತೀಯರು ಬ್ರಿಟಿಷರಿಗೆ ಸಹಾಯ ಮಾಡಿದರು. ಆದರೆ ಯುದ್ಧ ಮುಗಿದ ಮೇಲೆ ಬ್ರಿಟಿಷರು ಮಾತಿಗೆ ತಪ್ಪಿದರು. ಇದನ್ನು ವಿರೋಧಿಸಿದುದರಿಂದ ಜಲಿಯನ್‌ವಾಲಾಬಾಗ್ ಹತ್ಯಾಕಾಂಡ ನಡೆದುದು ಇತಿಹಾಸ ಸತ್ಯ); ಪ್ರತಿಯೊಬ್ಬ ಯುವಕನೂ ಸತ್ಯಾಗ್ರಹ ಶಾಂತಿ ಶಿಬಿರಕ್ಕೆ ಸೇರಬೇಕು; ಯುವಕರು ಗ್ರಾಮಸೇವೆಗೆ ಸಿದ್ಧರಾಗಬೇಕು; ಬಡವರ ಸ್ಥಿತಿ ಸುಧಾರಿಸಲು ಯುವಕರು ಶ್ರಮಿಸಬೇಕು: ಇತ್ಯಾದಿ, ತಗಡೂರು ರಾಮಚಂದ್ರರಾಯರು ಮಾಡಿದ ಭಾಷಣದ ಪೂರ್ಣ ಪಾಠ ಹೀಗಿದೆ:

ಶಿವಪುರದಲ್ಲಿ ನಡೆದ ಮೈಸೂರು ಸಂಸ್ಥಾನದ ಯುವಜನ ಸಮ್ಮೇಳನದ ಅಧ್ಯಕ್ಷ ಭಾಷಣ

ಮಹಾಶಯರೆ ಮತ್ತು ಸೋದರ ಸೋದರಿಯರೇ,

ಹಿಂದೂಸ್ಥಾನದ ದೇಶೀಯ ಸಂಸ್ಥಾನಗಳ ಪ್ರಶ್ನೆಯನ್ನು ಬಿಡಿಸುವ ಸಂಯೋಗವು ಮೈಸೂರಿಗೇ ಸೇರಿದ್ದರಿಂದ ಮೈಸೂರ್ ಕಾಂಗ್ರೆಸ್ ಮಹಾಸಭೆಯ ಜವಾಬ್ದಾರಿಯು ಬಹಳ ಮಹತ್ವದ್ದಾಗಿದೆ. ಮೈಸೂರು ಸಂಸ್ಥಾನದ ಅರವತ್ತೈದು ಲಕ್ಷ ಪ್ರಜೆಗಳ ಜವಾಬ್ದಾರಿಯ ಹೊರೆಯನ್ನು ಹೊತ್ತಿರುವ ಮೈಸೂರು ಕಾಂಗ್ರೆಸ್ ಮಹಾಸಭೆಯು ನಾಳೆ ಇದೇ ಆವರಣವಲ್ಲಿ ತನ್ನ ಕರ್ತವ್ಯವನ್ನೂ ಜವಾಬ್ದಾರಿಯನ್ನೂ ನಿರ್ಧರಿಸುತ್ತದೆ. ಅದು ನಮ್ಮ ಮೈಸೂರು ಸಂಸ್ಥಾನದ ಭವಿಷ್ಯವನ್ನು ವ್ಯಕ್ತಪಡಿಸುತ್ತದೆ. ಆ ಮಹಾಸಭೆಯ ನಿರ್ಣಯವನ್ನು ಮೈಸೂರು ಸಂಸ್ಥಾನವೂ ಮತ್ತು ಹಿಂದೂಸ್ಥಾನವೂ ಸಹ ಎದುರು ನೋಡುತ್ತಿದೆ. ಮೈಸೂರು ಸರಕಾರದವರೂ ಇಂಡಿಯಾ ಸರ್ಕಾರದವರೂ ಮತ್ತು ಶ್ರೀಮನ್ಮಹಾರಾಜರವರೂ ನಿರೀಕ್ಷಿಸುತ್ತಿದ್ದಾರೆ.

ಮೈಸೂರು ಯುವಜನ ಸಂಘದವರು ಇಂಥ ಸುಸಮಯದಲ್ಲಿ ಮೈಸೂರು ಸಂಸ್ಥಾನದ ಯುವಜನ ಸಮ್ಮೇಳನವು ನಡೆಯುವಂತೆ ಏರ್ಪಾಡು ಮಾಡಿದ್ದು ಬಹಳ ಯುಕ್ತಿಯುಕ್ತವಾಗಿದೆ. ಆದರೆ ಈ ಸಮ್ಮೇಳನದ ಅಧ್ಯಕ್ಷಸ್ಥಾನಕ್ಕೆ ನನಗಿಂತಲೂ ಶಕ್ತಿ

ಸಾಮರ್ಥ್ಯ ಉಳ್ಳ ಬಹು ಮಂದಿ ಮುಖಂಡರು ನಮ್ಮ ಸಂಸ್ಥಾನದಲ್ಲಿದ್ದಾರೆ. ಅವರುಗಳನ್ನೆಲ್ಲಾ ಬಿಟ್ಟು ನನ್ನನ್ನು ಸಂಸ್ಥಾನದ ಯುವಜನ ಸಂಘದವರು ಆರಿಸಿರುವುದು ನನಗೆ ಆಶ್ಚರ್ಯವನ್ನುಂಟು ಮಾಡಿದೆ ಮತ್ತು ನನ್ನ ಜವಾಬ್ದಾರಿಯನ್ನು ಹೆಚ್ಚಿಸಿದೆ. ನನ್ನ ಶಕ್ತಿಯ ಪರೀಕ್ಷಾ ಕಾಲವೂ ಆಗಿದೆ. ಈ ಪರೀಕ್ಷೆಯಲ್ಲಿ ತೇರ್ಗಡೆಯನ್ನು ಹೊಂದಲು ತಮ್ಮಗಳ ಸಹಕಾರವನ್ನು ಬಯಸಿ ನನ್ನ ಅನುಭವವನ್ನೂ ಅಭಿಪ್ರಾಯಗಳನ್ನೂ ತಮ್ಮಗಳ ಮುಂದಿಡುತ್ತೇನೆ.

ಪ್ರಪಂಚದ ಯುದ್ಧಕ್ಕೆ ಯುವಕರುಗಳು ಸೇರಬಾರದು

ಪ್ರಪಂಚದ ಎಲ್ಲ ಚಕ್ರಾಧಿಪತ್ಯದವರು, ರಾಜಮಹಾರಾಜರುಗಳು, ಶ್ರೀಮಂತರುಗಳು, ಜಮೀನ್ದಾರರುಗಳು, ಜಹಗೀರುದಾರರುಗಳು. ವಿದ್ಯಾವಂತರು ಮತ್ತು ಮೇಧಾವಿಗಳು ಇವರುಗಳ ಸಹಕಾರದಿಂದ ಸಾಮ್ರಾಜ್ಯವನ್ನು ಕಟ್ಟಿದರು. ಈ ಸಾಮ್ರಾಜ್ಯಗಳನ್ನುಳಿಸಿಕೊಳ್ಳಲು ಸಾಮ್ರಾಜ್ಯವಾದವನ್ನು ಹೂಡಿದರು. ಅದಕ್ಕನುಗುಣವಾದ ಕಾನೂನುಗಳನ್ನೇರ್ಪಡಿಸಿದರು. ಜಗತ್ತಿನ ಕೋಟಿ ಕೋಟಿ ಪ್ರಜೆಗಳ ನ್ಯಾಯಬದ್ಧವಾದ ಮತ್ತು ಆಜನ್ಮಸಿದ್ಧವಾದ ಐಶ್ವರ್ಯವನ್ನೆಲ್ಲಾ ಕಾನೂನು ಶಿಸ್ತುಗಳ ಹೆಸರಿನಿಂದ ಶೇಖರಿಸಿದರು. ಮದ್ದು, ಗುಂಡು, ಸೈನ್ಯ, ಪೋಲೀಸ್, ಜೈಲುಗಳನ್ನಿಟ್ಟು ಸಾಮಾನ್ಯ ಪ್ರಜೆಗಳನ್ನು ಬೆದರಿಸಿ, ತಮ್ಮ ಚಕ್ರಾಧಿಪತ್ಯದ ಪ್ರತಿಷ್ಠೆಯನ್ನು ಸ್ಥಾಪಿಸಿದರು. ಈ ಪದ್ಧತಿಯ ಬೆಳವಣಿಗೆಯನ್ನು ಹೆಚ್ಚಿಸಿ ಜಗತ್ತಿನ್ನಲ್ಲೆಲ್ಲಾ ಬಡವರು ಭಾಗ್ಯವಂತರೆಂಬ ಭೇದವನ್ನು ಕಲ್ಪಿಸಿದರು. ಭಾಗ್ಯವಂತರ ಪಕ್ಷವನ್ನು ವಹಿಸಿದರು. ಬಡವರನ್ನು ಪ್ರಾಣಿಗಳಿಗಿಂತಲೂ ಕಡೆಯಾಗಿ ತುಳಿದರು. ಜನರು ತಮ್ಮ ಜೀವನಕ್ಕೆ ಅತ್ಯಂತ ಅಗತ್ಯವಾದ ಪದಾರ್ಥಗಳನ್ನು ಅವರೇ ತಯಾರಿಸಿ ಉಪಯೋಗಿಸಿಕೊಳ್ಳುತ್ತಿದ್ದರೂ ಅವರ ಉದ್ಯೋಗವನ್ನೆಲ್ಲಾ ತಪ್ಪಿಸಿ ಕೋಟಿ ಕೋಟಿ ರೂ.ಗಳ ಬಂಡವಾಳದಿಂದ ಮಿಲ್ಲುಗಳನ್ನಿಟ್ಟು ನಿರುದ್ಯೋಗಿಗಳನ್ನಾಗಿ ಮಾಡಿದರು. ನಿತ್ಯಜೀವನಕ್ಕೆ ಧಕ್ಕೆ ತಗಲುವಂತೆ ಮಾಡಿದರು. ಹಸಿವಿನ ಬಾಧೆಗಾಗಿ ಸದಾ ಗುಲಾಮರು, ಹೇಡಿಗಳು, ಅಂಜುಬುರುಕರುಗಳು ಆಗುವಂತೆ ಮಾಡಿದರು. ಆತ್ಮಶಕ್ತಿಯನ್ನು ಕುಂದಿಸಿದರು. ಮನುಷ್ಯತ್ವವನ್ನು ನಾಶಮಾಡಿದರು. ಈ ಪದ್ಧತಿಯನ್ನೇ ಸದಾ ಅನುಷ್ಠಾನದಲ್ಲಿ ತರುವ ಸಲುವಾಗಿ ಗುಲಾಮಗಿರಿ ವಿದ್ಯಾಭ್ಯಾಸವನ್ನು ಸ್ಥಾಪಿಸಿದರು. ಇದರ ಪರಿಣಾಮವಾಗಿ ಜಗತ್ತಿನ ಅಸಂಖ್ಯಾತ ಬಡಜನರು ಬಡತನವನ್ನು ಸಹಿಸಲಾರದೆ ತಲ್ಲಣಿಸುತ್ತಿದ್ದಾರೆ. ಸಮತಾವಾದವನ್ನು ಬಯಸುತ್ತಿದ್ದಾರೆ. ಈ ಪರಿಸ್ಥಿತಿಗೆ ಜಗತ್ತನ್ನು ಗುರಿ ಮಾಡಿದ್ದರೂ ಸಾಮ್ರಾಜ್ಯಗಳ ಚಕ್ರವರ್ತಿಗಳೂ ಡಿಕ್ಟೇಟರುಗಳೂ ತಮ್ಮ ದಾಹವನ್ನು ನೀಗಿಸಿಕೊಳ್ಳುವ ಸಲುವಾಗಿ ಅಸಂಖ್ಯಾತ ಸೈನ್ಯಗಳನ್ನು ಕೂಡಿಸಿದ್ದಾರೆ. ಚಕ್ರಾಧಿಪತ್ಯವನ್ನು ನಿರ್ಮೂಲ ಮಾಡಿ ರಾಜ್ಯವಿಸ್ತಾರ ಮಾಡಿಕೊಳ್ಳಲು ಹವಣಿಸುತ್ತಿದ್ದಾರೆ. ಈಗಾಗಲೇ ಕೆಲವು ಚಕ್ರವರ್ತಿಗಳೂ ಹಲವು ರಾಜರುಗಳೂ ಯೂರೋಪ್‌ಖಂಡದಲ್ಲಿ ಭ್ರಷ್ಟರಾಗಿ ಭಿಕಾರಿ

ಗಳಾದರು. ಆ ರಾಜ್ಯದ ಪ್ರಜೆಗಳ ಕಷ್ಟಗಳನ್ನು ವರ್ಣನೆ ಮಾಡುವುದೂ ಕೇಳು ವುದೂ ನೋಡುವುದೂ ಅಸಾಧ್ಯವಾಗಿದೆ. ಈ ಪ್ರಯತ್ನದಿಂದ ಯೂರೋಪ್ ಖಂಡವು ಭಯ ಭ್ರಾಂತಿಗಳಿಂದ ತಲ್ಲಣಿಸುತ್ತಿದೆ. ಯುದ್ಧದ ಉತ್ಸಾಹವು ಎಲ್ಲೆ ಮೀರಿದೆ. ಯಾವ ಕ್ಷಣದಲ್ಲಿ ಪ್ರಪಂಚದ ಯುದ್ಧವು ಆರಂಭವಾಗುವುದೋ ಅದನ್ನು ಊಹಿಸುವುದೂ ಅಸಾಧ್ಯವಾಗಿದೆ. ಪ್ರಪಂಚದ ಶಕ್ತಿಸಾಮರ್ಥ್ಯಗಳೆಲ್ಲಾ ರಣಕ್ಷೇತ್ರಕ್ಕೆ ಸೇರುತ್ತಿವೆ. ನಿರಪರಾಧಿಗಳಾದ ಏನೂ ತಿಳಿಯದ ಕೋಟಿ ಕೋಟಿ ಪ್ರಜೆಗಳು ಜಗತ್ತನ್ನೇ ಸೂರೆಮಾಡುವ ಲೋಕಕಂಟಕರಾದ ಈ ಸಾಮ್ರಾಜ್ಯವಾದಿಗಳ ಮಾಯಾ ಜಾಲಕ್ಕೆ ಸಿಕ್ಕಿ ಪ್ರಾಣವನ್ನು ಆಹುತಿಕೊಡಲು ಸೈನ್ಯಕ್ಕೆ ಸೇರಿದ್ದಾರೆ. ಈ ವಿದ್ಯ ಮಾನಗಳೆಲ್ಲಾ ಯುವಕರಾದ ತಮ್ಮಗಳಿಗೆ ಚೆನ್ನಾಗಿ ಗೊತ್ತಿದೆ. ಈ ಬಿಕ್ಕಟ್ಟು ಬ್ರಿಟಿಷ್ ಚಕ್ರಾಧಿಪತ್ಯದಿಂದ ಹಿಂದೂಸ್ಥಾನಕ್ಕೂ ಪ್ರಾಪ್ತವಾಗಿದೆ. ಈ ಬಿಕ್ಕಟ್ಟಿ ನಿಂದ ಪಾರಾಗಲು ಹಿಂದೂಸ್ಥಾನದ ರಾಜಮಹಾರಾಜರುಗಳೂ ಶ್ರೀಮಂತರೂ ಮೇಧಾವಿಗಳೂ ಇವರೇ ಮುಂತಾದ ಸಾಮ್ರಾಜ್ಯವಾದಿ ಸಹಕಾರಿಗಳಿಂದಲೂ ಸಾಧ್ಯ ವಿಲ್ಲ. ಇವರುಗಳನ್ನು ಚಕ್ರಾಧಿಪತ್ಯದವರು ಗಣನೆಗೆ ತೆಗೆದುಕೊಳ್ಳುವುದೂ ಇಲ್ಲ. ಬ್ರಿಟಿಷ್ ಚಕ್ರವರ್ತಿಗಳು ಹೂಡಿದ ಯುದ್ಧಕ್ಕೆ ಇವರುಗಳು ಸಿದ್ಧರಾಗಲೇಬೇಕು. ಇಲ್ಲದಿದ್ದರೆ ರಾಜ್ಯ ಭ್ರಷ್ಟರಾಗಿ ಭಿಕಾರಿಗಳಾಗಬೇಕು. ಈ ಯುದ್ಧಕ್ಕೆ ಕಾಂಗ್ರೆಸ್ ಮಹಾಸಭೆಯು ಯಾವ ಬೆಂಬಲವನ್ನೂ ಕೊಡುವುದಿಲ್ಲ. ಅಷ್ಟೇ ಅಲ್ಲ; ಈ ಯುದ್ಧವನ್ನು ಪ್ರತಿಭಟಿಸುತ್ತದೆ. ಸೈನ್ಯಕ್ಕೆ ಯಾರೂ ಸೇರಕೂಡದೆಂದು ಸಾರುತ್ತದೆ. ತಾವುಗಳೂ ಸೇರಕೂಡದು. ಪ್ರಜಾಬೆಂಬಲವಿಲ್ಲದ ಈ ಯುದ್ಧದಿಂದ ಸಾಮ್ರಾಜ್ಯ ವಾದದ ನಾಶವು ಖಂಡಿತ.

ಸತ್ಯಾಗ್ರಹ ಶಾಂತಿಸಮರಕ್ಕೆ ಪ್ರತಿಯೊಬ್ಬ ಯುವಕನೂ ಸೇರಬೇಕು.

ಈ ಮಹಾ ಪ್ರಳಯ ಕಾಲದಲ್ಲಿಯೇ ಹಿಂದೂಸ್ಥಾನದಲ್ಲಿ ಶಾಂತಿಮಯವಾದ ಅಹಿಂಸಾತ್ಮಕವಾದ ಸತ್ಯಾಗ್ರಹ ಸಮರವು ಯಶಸ್ವಿಯಾಗಿ ಮೇಧಾವಿಗಳನ್ನೂ ಶ್ರೀಮಂತರುಗಳನ್ನೂ ಒಲಿಸಿಕೊಂಡು ಹಲವು ಪ್ರಾಂತ್ಯಗಳಲ್ಲಿ ಸರ್ಕಾರವನ್ನು ತನ್ನ ಹಸ್ತಗತವನ್ನಾಗಿ ಮಾಡಿಕೊಂಡಿದೆ. ಬ್ರಿಟಿಷ್ ಸಾಮ್ರಾಜ್ಯವಾದದ ಶಕ್ತಿಯನ್ನು ಕುಗ್ಗಿಸಿದೆ. ಹಿಂದೂಸ್ಥಾನದಲ್ಲಿ ಸಂಯುಕ್ತ ರಾಜ್ಯಾಂಗ ಪದ್ಧತಿಯನ್ನು ಜಾರಿಗೆ ತರಬೇಕಾದರೆ ಹಿಂದೂಸ್ಥಾನದ ರಾಜಮಹಾರಾಜರುಗಳು ಕಾಂಗ್ರೆಸ್ಸಿನ ನೀತಿಯನ್ನು ಅನುಸರಿಸಿ ತಮ್ಮ ತಮ್ಮ ರಾಜ್ಯದಲ್ಲಿ ಸಂಪೂರ್ಣ ಜವಾಬ್ದಾರಿ ಸರ್ಕಾರವನ್ನು ಸ್ಥಾಪಿಸಬೇಕು. ಇಲ್ಲವೇ ಮುಂದೆ ಅಹಿಂಸಾತ್ಮಕವಾದ ಶಾಂತಿಸಮರವು ಸಿದ್ಧವೆಂಬು ದಾಗಿ ಹರಿಪುರದ ಕಾಂಗ್ರೆಸ್ ಮಹಾಸಭೆಯು ನಿರ್ಣಯ ಮಾಡಿದೆ. ಈಗ ದೇಶೀಯ ರಾಜರುಗಳು ಚಕ್ರವರ್ತಿಗಳಿಂದಲೂ ಬೆಂಬಲವನ್ನು ಪಡೆಯುವ ಹಾಗಿಲ್ಲ. ಪಡೆಯುವ ಶಕ್ತಿಯೂ ಅವರಿಗಿಲ್ಲ. ರಾಷ್ಟ್ರದ ಪ್ರಜೆಗಳೇ ರಾಜರುಗಳಿಗೆ ಬೆಂಬಲವನ್ನು ಕೊಡ ತಕ್ಕ ಮಹಾಶಕ್ತಿಯುಳ್ಳವರು. ಆ ಶಕ್ತಿಯನ್ನು ದೂರಾಲೋಚನೆ ಇಲ್ಲದೆ ರಾಜರು

ಗಳು ಕಳೆದುಕೊಳ್ಳಬಾರದು. ರಾಜರುಗಳು ತಮ್ಮ ಸಿಂಹಾಸನವನ್ನು ರಕ್ಷಿಸುಕೊಳ್ಳುವುದಕ್ಕೂ ಪುರಾತನವಾದ ವಂಶಪಾರಂಪರ್ಯದ ರಾಜತನವನ್ನುಳಿಸಿಕೊಳ್ಳುವುದಕ್ಕೂ ಕಾಂಗ್ರೆಸ್ಸಿನ ಸಲಹೆಯನ್ನು ಅಂಗೀಕಾರಮಾಡಿ ಮಹಾಜನರ ಪ್ರೀತಿಪಾತ್ರರಾಗುವುದು ಒಳ್ಳೆಯದು. ರೌಂಡ್ ಟೇಬಲ್ ಕಾನ್‌ಫರೆನ್ಸಿನ ಅಧ್ಯಕ್ಷರಾಗಿದ್ದ ಲಾರ್ಡ್ ಲೋಥಿಯನ್‌ರವರು ಈಗತಾನೇ ಹಿಂದೂಸ್ಥಾನದಲ್ಲಿ ಸಂಚಾರ ಮಾಡಿ ಇಂಗ್ಲೆಂಡಿಗೆ ದಯಮಾಡಿಸಿ ಹಿಂದೂಸ್ಥಾನದ ರಾಜರುಗಳಿಗೆ ಮೇಲ್ಕಂಡಂತೆ ಎಚ್ಚರಿಕೆಯನ್ನು ಕೊಟ್ಟಿದ್ದಾರೆ. ಪಾರ್ಲಿಮೆಂಟಿನ ಪಕ್ಷವನ್ನು ವಹಿಸಿ ವಾದಿಸುವ ಲಂಡನ್ ಟೈಮ್ಸ್ ಪತ್ರಿಕೆಯ ಸಂಪಾದಕರೂ ಈ ಅರ್ಥವನ್ನು ಸೂಚಿಸಿದ್ದಾರೆ. ಅಂದಮೇಲೆ ಈ ಬಿಕ್ಕಟ್ಟು ಮೈಸೂರು ಸರ್ಕಾರದವರನ್ನೂ ಶ್ರೀಮನ್ಮಹಾರಾಜರವರನ್ನೂ ಸಹ ಬಂಧಿಸುತ್ತದೆ. ಶ್ರೀಮನ್ಮಹಾರಾಜರವರು ದಯಾಳುಗಳೆಂದೂ ಧರ್ಮಪ್ರಭುಗಳೆಂದೂ ರಾಜರ್ಷಿಗಳೆಂದೂ ಪ್ರಖ್ಯಾತಿಯನ್ನು ಪಡೆದಿದ್ದಾರೆ. ಅವರೇ ಹಿಂದೂಸ್ಥಾನಕ್ಕೆ ಮೇಲ್ಪಂಕ್ತಿಯನ್ನು ಹಾಕಿ ಕೀರ್ತಿಯನ್ನು ಗಳಿಸುವರೆಂದು ನಂಬಿದ್ದೇನೆ. ಮೈಸೂರು ಕಾಂಗ್ರೆಸ್ಸಿಗೆ ಸಂಪೂರ್ಣ ಸಹಕಾರವನ್ನು ಕೊಟ್ಟು ಮಹಾಜನರ ಕೂಡ ಸಹಕರಿಸಿ ಜವಾಬ್ದಾರಿ ಸರ್ಕಾರವನ್ನು ಕೊಟ್ಟು ಸುಖಶಾಂತಿಯನ್ನುಂಟುಮಾಡುತ್ತಾರೆಂದು ಆಶಿಸುತ್ತೇನೆ. ಹಾಗಲ್ಲದೆ ಪ್ರಜೆಗಳನ್ನು ತುಳಿಯುವ ಬಲಾತ್ಕಾರವು ಪ್ರಾಪ್ತಿಯಾದರೆ ಆಗ ಪ್ರತಿಯೊಬ್ಬ ಯುವಕನೂ ಸತ್ಯಾಗ್ರಹ ಸಮರಕ್ಕೆ ಸೇರಿ ಸರ್ಕಾರದ ಕ್ರೂರ ಅಸ್ತ್ರಗಳಿಗೆ ತುತ್ತಾಗಬೇಕು. ಪ್ರಾಣವನ್ನು ಆಹುತಿಯನ್ನಾಗಿ ಕೊಡಬೇಕು. ಆಸ್ತಿಪಾಸ್ತಿಗಳನ್ನು ಸೂರೆಕೊಡಬೇಕು. ಈ ತ್ಯಾಗದ ಬಲದಿಂದಲಾದರೂ ಜವಾಬ್ದಾರಿ ಸರ್ಕಾರವನ್ನು ಪಡೆಯಬೇಕು.

ಇದುವರೆಗೂ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ರಾಜಕೀಯ ವಿಚಾರ ಕುರಿತು ಆಲೋಚಿಸಿದ್ದಾಯಿತು. ಇನ್ನು ಮುಂದೆ ಮೈಸೂರು ಸಂಸ್ಥಾನದ ಗ್ರಾಮಾಂತರಗಳ ರೈತರ ಸ್ಥಿತಿಗತಿಗಳನ್ನು ಕುರಿತು ವಿಚಾರ ಮಾಡೋಣ.

ಗ್ರಾಮಾಂತರಗಳಲ್ಲಿ ನೂರಕ್ಕೆ ತೊಂಬತ್ತರಷ್ಟು ಜನ ರೈತರು ಸಾಲ ಮಾಡಿದ್ದಾರೆ. ಸುಮಾರು ಹತ್ತು ಹನ್ನೆರಡು ವರುಷಗಳ ಹಿಂದಿನವರೆಗೆ ತಮ್ಮ ತಮ್ಮ ಶಕ್ತಿ ಮೀರಿ ಸಾಲ ಮಾಡಿದ್ದಾರೆ. ಅಂದಿನಿಂದೀಚೆಗೆ ಸಾಲಕ್ಕಾಗಿ ಆಧಾರ ಭೋಗ್ಯಗಳಿಗೆ ಈಡು ಮಾಡಲು ರೈತರಲ್ಲಿ ಜಮೀನುಗಳಿಲ್ಲ, ಮನೆಗಳಿಲ್ಲ. ಅಥವಾ ಬೆಲೆಬಾಳುವ ಇನ್ನಾವ ಚರ ಸ್ಥಿರ ಸ್ವತ್ತುಗಳೂ ಇಲ್ಲ. ಸಾಮಾನ್ಯವಾಗಿ ಅಸಲಿಗೆ ಅಸಲಿನಷ್ಟು ಬಡ್ಡಿಯು ಬೆಳದು ಈಡಾಗಿರುವ ಸಕಲ ಆಸ್ತಿಗಳೂ ಶ್ರೀಮಂತನಿಗೆ ಸೇರಿಹೋಗುವ ಸ್ಥಿತಿಯಲ್ಲಿ ಸಾಲಮಾಡಿದ್ದಾರೆ. ಈಗ ಅಸಲಿಗಿಂತಲೂ ಬಡ್ಡಿಯೇ ಅಧಿಕವಾಗಿದೆ. ಭೂಮಿಯ ಬೆಲೆಯೂ ಅರ್ಧಕ್ಕಿಂತಲೂ ಇಳಿದು ಹೋಗಿದೆ. ಆದುದರಿಂದ ಶ್ರೀಮಂತನೇ ಅಸಲು ಮತ್ತು ಬಡ್ಡಿ ಪೂರ್ತಾ ಕೇಳುವ ಸ್ಥಿತಿಯಲ್ಲಿಲ್ಲ. ಆಸ್ತಿಯನ್ನು ಸ್ವಾಧೀನಪಡಿಸಿಕೊಳ್ಳುವುದೊಂದೇ ಮಾರ್ಗವಾಗಿದೆ. ಈಗಿನ ಕಾನೂನಿನ ಪ್ರಕಾರ ರೈತನು ಮಾತ

ನಾಡದೆ ಶ್ರೀಮಂತನಿಗೆ ಆಸ್ತಿಗಳನ್ನೆಲ್ಲಾ ಒಪ್ಪಿಸಿಬಿಡಬೇಕು. ಆತನು ಒಪ್ಪದಿದ್ದರೆ ಕೋರ್ಟು ಕೊಟ್ಟೇಕೊಡಿಸಿಬಿಡುತ್ತದೆ. ಹೀಗಿರುವಲ್ಲಿ ಅನೇಕ ಜನ ರೈತರು ಜಮೀನುಗಳನ್ನೆಲ್ಲಾ ಒಪ್ಪಿಸಿಬಿಟ್ಟಿದ್ದಾರೆ. ಉಳಿದ ಕೆಲವರು ಬಲಾತ್ಕಾರದಿಂದ ಬಿಟ್ಟುಬಿಡುತ್ತಾರೆ.

ಉಳುವುದಕ್ಕಾಗಿ ಎತ್ತುಗಳನ್ನೂ ರೇಷ್ಮೆಹುಳು ಸಾಕುವುದಕ್ಕಾಗಿ ಸೊಪ್ಪಿನ ತೋಟಗಳನ್ನೂ ಗುತ್ತಿಗೆಗಾಗಿ ತೋಟ ಗದ್ದೆಗಳನ್ನೂ ರೈತರು ತೆಗೆದುಕೊಂಡರೆ ಆತನು ಸಾಹುಕಾರನಿಗೆ ಕೊಡಬೇಕಾದುದನ್ನು ಸಕಾಲದಲ್ಲಿ ಕೊಡದಿದ್ದರೆ ಆ ಮೊಬಲಗುಗಳಿಗೆಲ್ಲಾ ಪ್ರೋನೋಟ್ ಬರೆಸಿಕೊಳ್ಳುತ್ತಾರೆ. ಬಡ್ಡಿಗಾಗಿಯೂ ಸಹ ಪ್ರೋನೋಟ್ ಬರೆಸಿಕೊಳ್ಳುತ್ತಾರೆ. ಈ ಪದ್ಧತಿಯಿಂದ ನಗದು ಸಾಲ ಕೊಟ್ಟಿರುವುದಕ್ಕಿಂತಲೂ ಫಸಲು, ರಾಸುಗಳು ಮತ್ತು ಬಡ್ಡಿಗಳಿಗಾಗಿ ಬರೆದುಕೊಟ್ಟ ಪ್ರೋನೋಟುಗಳು ಬಹಳ ಬೇಗ ಶ್ರೀಮಂತರಿಗೆ ದುಡ್ಡಾಗಿಬಿಡುತ್ತವೆ. ರೈತನಿಗೆ ಕೈಗಾರಿಕೆಗಳಿಲ್ಲ. ವ್ಯಾಪಾರಗಳಿಲ್ಲ. ಅವನ ವ್ಯವಸಾಯಕ್ಕೆ ರಕ್ಷಣೆಯಿಲ್ಲ. ರೈತನು ಮತ್ತು ಆತನ ಸಂಸಾರವು ವರ್ಷವೆಲ್ಲಾ ಭೂಮಿಯ ವ್ಯವಸಾಯ ಮಾಡುತ್ತಿದ್ದರೂ ಆತನ ಕಷ್ಟಕ್ಕೆ ಬೆಲೆ ಇಲ್ಲ. ರೈತನು ಬೆಳೆದ ಫಸಲಿಗೆ ಗೊತ್ತಾದ ಧಾರಣೆಯಿಲ್ಲ. ಹೀಗಾಗಿ ಅವನ ಬದುಕುವಿಕೆಯೇ ಅವನಿಗೆ ಬೇಜಾರಾಗಿ ಹೋಗಿದೆ. ಎಲ್ಲದರಲ್ಲಿಯೂ ಉದಾಸೀನನಾಗಿದ್ದಾನೆ. ಆತನ ಕಷ್ಟಗಳನ್ನು ಕೇಳುವವರೇ ಇಲ್ಲ. ವಿದ್ಯಾವಂತರು ಬುದ್ಧಿವಂತಿಕೆಯಿಂದ ಜೀವಿಸುತ್ತಿದ್ದಾರೆ. ಶ್ರೀಮಂತರು ಕಾನೂನುಗಳ ರಕ್ಷಣೆಯಿಂದ ಬದುಕುತ್ತಿದ್ದಾರೆ.

ಅಧಿಕಾರಿಗಳಿಗೆ ಸರ್ಕಾರಿ ಕಂದಾಯ ಕೊಟ್ಟೇಕೊಡಬೇಕು. ಇಲ್ಲದಿದ್ದರೆ ಮನೆ, ತೋಟ, ಗದ್ದೆ ಮತ್ತು ರಾಸುಗಳನ್ನು ಹರಾಜುಮಾಡುವರು. ಅವೆಲ್ಲಾ ಪ್ರಯೋಜನವಿಲ್ಲವೆಂದು ಮನೆಯ ಬಾಗಿಲನ್ನು ಕೀಳುವುದು, ಹೆಂಚು ತೆಗೆಸುವುದು, ಭಾವಿಯಿಂದ ನೀರು ತರುವುದನ್ನು ಅಡ್ಡಿಪಡಿಸುವುದು, ವ್ಯವಸಾಯಕ್ಕೆ ಹೋಗುವ ರಾಸುಗಳನ್ನು ಹಿಡಿಸುವುದು, ಪ್ರಾಣಾಧಾರಕ್ಕಾಗಿ ಇಟ್ಟುಕೊಂಡಿರುವ ದವಸಧಾನ್ಯಗಳನ್ನು ಜಪ್ತಿ ಮಾಡಿಸುವುದು, ಜಮೀನಿನ ಮೇಲಿನ ಫಸಲನ್ನೂ ಅಥವಾ ಫಸಲು ಕತ್ತರಿಸಿ ಮೆದೆಗಳಾಗಿದ್ದರೆ ಅವುಗಳನ್ನೂ ಜಪ್ತಿಮಾಡಿಸಿ ಕಂದಾಯವನ್ನು ವಸೂಲಿ ಮಾಡುತ್ತಿದ್ದಾರೆ. ಈ ವಿಷಯವು ಪ್ರತಿಯೊಬ್ಬ ಅಧಿಕಾರಿಗಳಿಗೂ ಪ್ರಜಾಪ್ರತಿನಿಧಿ ಸಭೆಯ ಸದಸ್ಯರಿಗೂ ಚೆನ್ನಾಗಿ ಗೊತ್ತಿದೆ. ಪ್ರಜಾಪ್ರತಿನಿಧಿ ಸಭೆ ಮತ್ತು ನ್ಯಾಯವಿಧಾಯಕ ಸಭೆಯ ಸದಸ್ಯರುಗಳಲ್ಲಿ ನೂರಕ್ಕೆ ಐವತ್ತರಷ್ಟು ಮಂದಿ ಶ್ರೀಮಂತರೆ ಇದ್ದಾರೆ. ಉಳಿದವರಲ್ಲಿ ಕೆಲವರು ವಿದ್ಯಾವಂತರೂ ಅಧಿಕಾರಿಗಳೂ ವಕೀಲರೂ, ಇದ್ದಾರೆ. ಶ್ರೀಮಂತರುಗಳು ಸಾಲಕೊಟ್ಟು ವಸೂಲಿಕ್ರಮ ಜರುಗಿಸಿ ಸ್ವತಃ ರೈತರ ಶಕ್ತಿಯನ್ನು ತಿಳಿದುಕೊಂಡಿದ್ದಾರೆ. ಕಂದಾಯದ ವಸೂಲಿಗಾಗಿ ಹೋಗಿ ಅಧಿಕಾರಿಗಳು ಸ್ವತಃ ಮೇಲ್ಕಂಡ ಕ್ರಮಗಳನ್ನೆಲ್ಲಾ ಜರುಗಿಸಿ ರೈತನ ದುಃಖಸ್ಥಿತಿಯನ್ನು ತಿಳಿದುಕೊಂಡಿದ್ದಾರೆ. ವಕೀಲರಿಗಂತೂ ಎಲ್ಲ ವಿಷಯಗಳಲ್ಲಿಯೂ ವಾದಿಸಿ

ಮನದಟ್ಟಾಗಿದೆ, ಆ ತಿಳಿವಳಿಕೆಯು ಮತ್ತು ಅನುಭವದ ಮೇಲೆ ರೈತರ ಕಷ್ಟ ಪರಿಹಾರ ಮಸೂದೆಯನ್ನು ಮಾಡಿದರು. ಅಡವಮಾನ ಬ್ಯಾಂಕ್‌ಗಳನ್ನು ಏರ್ಪಡಿಸಿದರು. "ಸಾಲ ತೀರಿಸುವ ಪಂಚಾಯಿತಿ ಬೋರ್ಡುಗಳ ಮಸೂದೆ"ಯು ಕಾನೂನಾಗಿ ಜಾರಿಗೆ ಬಂದಿರುತ್ತದೆ. ಈ ಕಾನೂನಿನ ವಿವರಣೆಯನ್ನು ಓದಿ ನೋಡಲಾಗಿ ಅದರಲ್ಲಿ ಯಾವ ಜವಾಬ್ದಾರಿಯು ಇಲ್ಲ. ಈ ಕಾನೂನು ಇಲ್ಲದಿದ್ದಾಗ ರೈತನಿಗೆ ಎಷ್ಟು ತೊಂದರೆಗಳಿದ್ದವೋ ಕಾನೂನು ಆದಮೇಲೂ ರೈತನಿಗೆ ಅದರಿಂದ ಒಂದು ಕಾಸಿನಷ್ಟು ತೊಂದರೆಯೂ ಕಡಿಮೆಯಾಗುವುದಿಲ್ಲ. ಆದುದರಿಂದ ಈ ಕಾನೂನು ವ್ಯರ್ಥವಾದದ್ದೂ ಪ್ರಯೋಜನವಿಲ್ಲದ್ದೂ ಆಗಿದೆ.

ಜವಾಬ್ದಾರಿ ಅಧಿಕಾರಿಗಳೂ ಪ್ರತಿನಿಧಿ ಸಭೆಯ ಸದಸ್ಯರುಗಳೂ ರೈತರ ಹಿತದ ಜವಾಬ್ದಾರಿಯನ್ನು ತೆಗೆದುಕೊಳ್ಳದೆ ಬರೀ ಒಳ್ಳೆಯ ಮಾತುಗಳನ್ನಾಡುತ್ತಾ ಕಾನೂನುಗಳಿಗೆ ಒಳ್ಳೇ ಹೆಸರುಗಳನ್ನು ಕೊಡುತ್ತಾ ಹೊರಗಡೆಯ ಕೀರ್ತಿಯ ಕಡೆ ಗಮನಕೊಡುತ್ತಾ ಇದ್ದಾರೆ. ಇದರಿಂದಲೇ ರೈತರ ಕಷ್ಟವು ಪರಿಹಾರವಾಗುವುದಿಲ್ಲ. ಸಾಲ ತೀರುವುದಿಲ್ಲ. ಅವರು ಸಭ್ಯ ಪ್ರಜೆಗಳಾಗಿರಲು ಸಾಧ್ಯವಿಲ್ಲ. ಹಸಿವಿನ ಬಾಧೆಗಾಗಿ ಎಲ್ಲೆಲ್ಲೂ ಕಿರುಕುಳ, ದರೋಡೆ ದೊಂಬಿಗಳು ನಡೆಯುವುದು ಹೆಚ್ಚುತ್ತದೆ. ರೈತರು ನಿರುದ್ಯೋಗಿಗಳಾಗಿರುವುದರಿಂದಲೂ ಹಸಿವಿನ ಬಾಧೆಯು ಅವರನ್ನು ಪೀಡಿಸುತ್ತಿರುವುದರಿಂದಲೂ ಸಹಜ ಮಾರ್ಗವು ದೊರೆಯದೆ ಇರುವುದರಿಂದಲೂ ಪ್ರಾಣವು ತನ್ನಷ್ಟಕ್ಕೆ ತಾನೇ ಹಾರಿಹೋಗದೆ ಇರುವುದರಿಂದಲೂ ಪ್ರಾಣಾಧಾರಕ್ಕಾಗಿ ಇರುವ ಕಡೆ ತಂದು ತಿನ್ನುವುದೇ ಧರ್ಮವಾಗಿ ಪರಿಣಮಿಸುವುದು. ಈ ತತ್ವವು ಈಗಾಗಲೇ ಹಳ್ಳಿಗಳಲ್ಲಿ ಸಾಮಾನ್ಯವಾಗಿ ಅನುಷ್ಠಾನಕ್ಕೆ ಬರುತ್ತಿದೆ. ಇದು ವಿಪರೀತಕ್ಕೆ ಬಂದರೆ ಶಾಂತಿಭಂಗವಾಗುತ್ತದೆ. ಅದನ್ನು ತಪ್ಪಿಸಲು ಯಾರಿಂದಲೂ ಸಾಧ್ಯವಿಲ್ಲ. ಆಮೇಲೆ ರೈತರನ್ನು ತಿದ್ದಲು ಬಹಳ ಕಷ್ಟವಾಗುತ್ತದೆ. ಎಲ್ಲ ಆಶೆಗಳು ತನ್ನಷ್ಟಕ್ಕೆ ತಾನೇ ನಾಶವಾಗಿರುವಾಗ ಸಾಯಲು ಹಿಂತೆಗೆಯುವುದಿಲ್ಲ. ಆ ಕಾಲಕ್ಕೆ ಕಾನೂನುಗಳೂ ಮದ್ದುಗುಂಡುಗಳು ಪ್ರಯೋಜನಕ್ಕೆ ಬರುವುದಿಲ್ಲ, ನಿರಪರಾಧಿಗಳಾದ ರೈತರು ಹಸಿವಿನ ಬಾಧೆಗಾಗಿ ಆಹಾರವನ್ನು ಹುಡುಕಿ ಹುಡುಕಿ ತೆಗೆದುಕೊಂಡು ಬರಲು ಅಲೆದಾಡುತ್ತಿದ್ದರೆ ಅಂಥವರ ಮೇಲೆ ಗುಂಡು ಹಾರಿಸಿದರೆ ಪ್ರಭುತ್ವಕ್ಕೆ ಕೀರ್ತಿ ಬರುವುದಿಲ್ಲ. ಹೀಗಾದ ಮೇಲಾದರೂ ಯೋಗ್ಯ ವ್ಯವಸ್ಥೆಯನ್ನು ಮಾಡಬೇಕಾಗುತ್ತದೆ. ಅಷ್ಟು ಪರೀಕ್ಷೆಯನ್ನು ಮಾಡದೆ ಈಗಲೇ ಅಧಿಕಾರಿಗಳು, ಪ್ರತಿನಿಧಿಗಳು, ವಕೀಲರುಗಳು ಚೆನ್ನಾಗಿ ಪರಿಶೀಲಿಸಬೇಕು. ಆಗ ಎಲ್ಲವೂ ಸರಿಹೋಗುತ್ತದೆ. ಸರ್ಕಾರದವರೇ ಸಂಪೂರ್ಣ ಜವಾಬ್ದಾರಿಯಿಂದ ರೈತರ ಸಾಲವನ್ನು ತೀರಿಸಿ ಅವರ ಜಮೀನನ್ನು ಅವರಿಗೆ ಬಿಡಿಸಿಕೊಡುವ ಮತ್ತು ಗ್ರಾಮ ಕೈಗಾರಿಕೆಗಳಿಗೆ ಪೂರ್ಣ ಬೆಂಬಲಕೊಟ್ಟು ಅವುಗಳ ವ್ಯಾಪಾರಕ್ಕೆ ಯೋಗ್ಯವ್ಯವಸ್ಥೆಯನ್ನು ಮಾಡುವ ಕಾನೂನನ್ನು ಮಾಡಿ ರೈತರಿಗೆ ಧೈರ್ಯವನ್ನು ಕೊಟ್ಟು ಬಡತನದ ಬಾಧೆ

ಯಿಂದಲೂ ಹಸಿವಿನ ಅವಾಂತರದಿಂದಲೂ ಪಾರುಮಾಡಬೇಕಾಗಿ ಪ್ರಾರ್ಥಿಸಿದ್ದೇನೆ.

ಗ್ರಾಮಾಂತರಗಳ ನಿರಾಶಾವಾದಿಗಳ ಕೂಟವು ಪ್ರಳಯದ ಸಿದ್ಧತೆಯನ್ನು ಮಾಡುತ್ತಿದೆ.

ನಮ್ಮ ಸಂಸ್ಥಾನದ ಪ್ರತಿಯೊಂದು ಗ್ರಾಮದಲ್ಲಿಯೂ ಸಾಲದ ಬಾಧೆಯಿಂದ ಆಸ್ತಿಯನ್ನು ಕಳಕೊಂಡವರೂ ಸರ್ಕಾರದಿಂದಲೂ ಶ್ರೀಮಂತರಿಂದಲೂ ಉದ್ಯೋಗವಿಲ್ಲದೆ ಬಿಟ್ಟವರೂ ವಿದ್ಯಾವಂತರಾಗಿ ನಿರುದ್ಯೋಗಿಗಳಾಗಿರುವವರೂ ಹಸಿವಿನ ಬಾಧೆಗೆ ತುತ್ತಾಗಿರುವವರೂ ಕೋಮುವಾರು ಭಾವನೆಗಳನ್ನೆಲ್ಲಾ ತೊರೆದು ಒಂದುಗೂಡಿದ್ದಾರೆ. ಅವರ ಸಂಖ್ಯೆಯು ದಿನೇ ದಿನೇ ಅಧಿಕವಾಗಿ ಪ್ರಚಾರ ಕಾರ್ಯವನ್ನು ಮಾಡಿ ಪ್ರಳಯಕ್ಕೆ ಸಿದ್ಧತೆಯನ್ನು ಮಾಡುತ್ತಿದ್ದಾರೆ. ಬೀದಿ ಬೀದಿ ಜಗಲಿಯ ಮೇಲೆ, ಮನೆಯ ಹಿಂಭಾಗದ ಹಿತ್ತಲಿನಲ್ಲಿ, ಹೊಲ, ಗದ್ದೆ, ತೋಟಗಳಲ್ಲಿ, ಮದುವೆ ಪ್ರಸ್ಥಗಳಿಗಾಗಿ ಸೇರಿದ ಬಂಧುವರ್ಗದ ಕೂಟಗಳಲ್ಲಿ ಸಮತಾವಾದವು ಜ್ಞಾನದಿಂದಲೋ ಅಜ್ಞಾನದಿಂದಲೋ ಪ್ರಚಾರವಾಗುತ್ತಿದೆ. ಅವರು ಪ್ರಚಾರಕ್ಕೆ ಒಂದು ಹೆಸರನ್ನು ಕೊಟ್ಟು ಅದನ್ನು ಸಮತಾವಾದವೆಂದು ಹೇಳುತ್ತಿಲ್ಲ. ಹಳ್ಳಿಗಳಲ್ಲಿನ ಬೆಂಬಲದಿಂದಲೂ ಕೈರಾಟೆ, ಕೈಮಗ್ಗ, ಕೈಗಾಣ, ಉಪ್ಪು ತಯಾರಿಸುವುದು, ಕುಟ್ಟುವುದು, ಬೀಸುವುದು ಇತ್ಯಾದಿ ಗ್ರಾಮ ಕೈಗಾರಿಕೆಗಳನ್ನೆಲ್ಲಾ ಶ್ರೀಮಂತರು ನಮ್ಮಿಂದ ಕಿತ್ತುಕೊಂಡು ಮಿಲ್ಲುಗಳನ್ನಿಟ್ಟು ನಮ್ಮಗಳನ್ನು ನಿರುದ್ಯೋಗಿಗಳನ್ನಾಗಿ ಮಾಡಿದರು. ನಮ್ಮ ವ್ಯಾಪಾರಗಳನ್ನು ಹಾಳುಮಾಡಿ ತಾವೇ ವ್ಯಾಪಾರಿಗಳಾದರು. ಇಷ್ಟು ಮಾಡಿದರೂ ಸಾಲದೇ ಲೇವಾದೇವಿಯ ಹೆಸರಿನಿಂದ ನಮ್ಮ ಮನೆಗಳನ್ನೂ ಆಸ್ತಿಗಳನ್ನೂ ಆಕ್ರಮಿಸುತ್ತಿದ್ದಾರೆ. ಅವರ ದಾಹವನ್ನು ನಿವೃತ್ತ ಮಾಡುವ ಸಲುವಾಗಿ ಅದನ್ನೂ ಬಿಟ್ಟು ಬಿಡಲಾಗಿದೆ. ಇದಕ್ಕೆಲ್ಲಾ ಸರ್ಕಾರದವರು ಬೆಂಬಲವನ್ನು ಕೊಟ್ಟಿದ್ದಾರೆ ; ಆ ನೀತಿಯನ್ನೇ ಸಮರ್ಥನೆ ಮಾಡುತ್ತಾ ಬಂದಿದ್ದಾರೆ. ಶ್ರೀಮಂತರು ಅಪಾರವಾದ ಅಪರಾಧ ಮಾಡಿದ್ದಾರೆ ; ಶತಮಾನಗಳಿಂದಲೂ ಕಿರುಕುಳವನ್ನು ಕೊಡುತ್ತಾ ಬಂದಿದ್ದಾರೆ. ಅಪರಾಧಿಗಳು ನಾವಲ್ಲ. ಅಪರಾಧವು ನಮ್ಮದಲ್ಲ. ಕೊಡುವ ಹಿಂಸೆಗಳನ್ನೆಲ್ಲಾ ಶಾಂತಿಯಿಂದ ಅನುಭವಿಸಿದ್ದೇವೆ. ಮಾನಮರ್ಯಾದೆಗಳನ್ನೆಲ್ಲ ಕಳೆದುಕೊಂಡಿದ್ದೇವೆ. ಜೀವಚ್ಛವಗಳಾಗಿ ಬದುಕಿ ಬಾಳುತ್ತಿದ್ದೇವೆ. ಹಗಲು ರಾತ್ರಿಯೂ ಮಾತನಾಡದೆ ದುಡಿಯುತ್ತಿದ್ದೇವೆ. ಉಳಿದ ಅಲ್ಪಸ್ವಲ್ಪ ಆಸ್ತಿಗಳನ್ನೂ ಶ್ರೀಮಂತರಿಗೆ ಒಪ್ಪಿಸಿಬಿಡುತ್ತೇವೆ ; ಭಿಕಾರಿಗಳಾಗುತ್ತೇವೆ. ಆಗ ನಮಗೂ ಶ್ರೀಮಂತರಿಗೂ ಸರ್ಕಾರಕ್ಕೂ ಬಾಂಧವ್ಯವು ಕಳೆದುಹೋಗುತ್ತದೆ. ನಮಗೂ ಈಶ್ವರನಿಗೂ ನೇರವಾದ, ಸಹಜವಾದ ಬಾಂಧವ್ಯವು ಇದ್ದೇ ಇರುತ್ತದೆ. ಅದನ್ನು ತಪ್ಪಿಸಲು ಯಾರಿಂದಲೂ ಸಾಧ್ಯವಿಲ್ಲ, ಇದು ಈಶ್ವರನ ರಾಜ್ಯ : ನಾವು ಈಶ್ವರನ ಮಕ್ಕಳು. ಮಳೆಯು ತಾನಾಗಿಯೇ ಬೀಳುತ್ತದೆ. ಭೂಮಿಯು ತಾನಾಗಿಯೇ ಬೆಳೆಯುತ್ತದೆ.

ನಾವು ಬಾಹುಬಲ ಪ್ರಯೋಗಮಾಡಿ ಬೇಸಾಯ ಮಾಡುತ್ತೇವೆ. ಆದುದರಿಂದ ಭೂಮಿಯಲ್ಲಿ ಬೆಳೆದ ದವಸ ಧಾನ್ಯಗಳನ್ನು ತಿನ್ನಲು ನಮಗೆ ಪೂರ್ಣಾಧಿಕಾರ ಉಂಟು. ನಮಗಾಗಿ ಮಿಕ್ಕುದನ್ನು ಯಾರಿಗೆ ಬೇಕಾದರೂ ಕೊಡುತ್ತೇವೆ. ಅದನ್ನು ಭೋಗ್ಯವೆನ್ನಿ, ಕಂದಾಯವೆನ್ನಿ, ಬೇಕಾದ್ದು ಕರಕೊಳ್ಳಿ. ಎಲ್ಲರಿಗೂ ಎಷ್ಟು ಅವಶ್ಯಕವೋ ನಮಗೂ ಅಷ್ಟೇ ಅವಶ್ಯಕ. ಅದಕ್ಕಿಂತ ಅಧಿಕವಾಗಿ ನಾವು ಉಪಯೋಗಿಸುವುದಿಲ್ಲ. ಭೂಮಿಯು ಬಡವರದಲ್ಲ. ಶ್ರೀಮಂತರದೂ ಅಲ್ಲ ; ಈಶ್ವರನದು ಅದು ಇದ್ದ ಜಾಗವನ್ನು ಬಿಟ್ಟು ಕದಲುವುದಿಲ್ಲ. ಅದನ್ನು ಸಾಗಿಸುವುದಕ್ಕೆ ಯಾರಿಂದಲೂ ಸಾಧ್ಯವಿಲ್ಲ. ಆದ್ದರಿಂದ ನಾವುಗಳು ಹೆದರುವುದಿಲ್ಲ. ವಾಸಕ್ಕಾಗಿ ಒಂದು ಗುಡಿಸಿಲಿದ್ದರೆ ಮುಗಿಯಿತು. ಜೈಲಿನಲ್ಲಿ ವಾಸಮಾಡುವ ಅಭ್ಯಾಸವು ಇದ್ದೆ ಇದೆ. ಶ್ರೀಮಂತರೂ ಸರ್ಕಾರದವರೂ ಹೆಚ್ಚಿಗೆ ಭೋಗ ಪಡತಕ್ಕವರು. ಅವರ ಭೋಗಕ್ಕೆ ಈಗ ಚ್ಯುತಿಯು ಪ್ರಾಪ್ತವಾಗುತ್ತಿರುವುದು. ನಮ್ಮ ಪಾಡು ಯಾವಾಗಲೂ ಒಂದೆ. "ಅವರಿಗೆ ಬೇಕಾದರೆ ಸರಿಯಾದ ವ್ಯವಸ್ಥೆ ಮಾಡಿಕೊಳ್ಳಲಿ, ಇಲ್ಲದಿದ್ದರೆ ಬಿಡಲಿ" ಎಂಬುದಾಗಿ ಅವರು ಹೇಳುತ್ತಾರೆ.

ಯುವಕರುಗಳು ಗ್ರಾಮಸೇವೆ ಮಾಡಲು ಸಿದ್ಧರಾಗಬೇಕು

ಗ್ರಾಮಾಂತರಗಳ ರೈತನ ಸ್ಥಿತಿಗತಿ, ರೈತರ ಪ್ರಳಯ ಸಿದ್ಧತೆ ಮತ್ತು ಸರ್ಕಾರಕ್ಕೂ ರೈತರೇ ಗತಿ ಎಂಬ ವಿಷಯಗಳನ್ನೆಲ್ಲಾ ಸಂಪೂರ್ಣವಾಗಿ ಆಲೋಚಿಸಿ ಸರ್ಕಾರದ ಗಮನಕ್ಕೂ ತಂದು ಈ ಕೆಳಗೆ ಕಂಡ ಕಾರ್ಯಕ್ರಮವನ್ನು ಕೈಕೊಂಡು ಸರ್ಕಾರದಲ್ಲಿ ಅಂಗೀಕಾರ ಮಾಡಿಸಿದ್ದೇನೆ.

ಗ್ರಾಮಾಂತರಗಳಲ್ಲಿ ಆರ್ಥಿಕ ಪರಿಸ್ಥಿತಿಯನ್ನು ಪರಿಹಾರಮಾಡುವ ಸಲುವಾಗಿಯೂ ನಿರುದ್ಯೋಗವನ್ನು ನಿವೃತ್ತಿ ಮಾಡುವ ಸಲುವಾಗಿಯೂ ಸೋಂಬೇರಿತನವನ್ನೂ ಆಲಸ್ಯವನ್ನೂ ನಿರ್ಮೂಲ ಮಾಡುವ ಸಲುವಾಗಿಯೂ ಪ್ರತಿಯೊಂದು ಮನೆಯನ್ನೂ ಉದ್ಯೋಗ ಮಂದಿರವನ್ನಾಗಿ ಮಾಡುವ ಸಲುವಾಗಿಯೂ ಗ್ರಾಮಗಳಿಗೆ ಸ್ವಾವಲಂಬನವನ್ನುಂಟುಮಾಡುವ ಸಲುವಾಗಿಯೂ ಗ್ರಾಮಗಳ ವಿಶಿಷ್ಟ ಆಡಳಿತವನ್ನು ಗ್ರಾಮಪಂಚಾಯಿತಿಗಳವರೆ ನಡೆಸಿಕೊಳ್ಳುವಂಥ ಸ್ವಾತಂತ್ರ್ಯವನ್ನು ಉಂಟುಮಾಡುವ ಸಲುವಾಗಿಯೂ ತಗಡೂರು ಗ್ರಾಮ ಪಂಚಾಯಿತಿಯ ಪರವಾಗಿ ಗ್ರಾಮಕೈಗಾರಿಕೆಗಳ ಸರ್ವೆಯನ್ನು ಮಾಡಿ ಸರ್ಕಾರದ ಎಲ್ಲ ಅಧಿಕಾರಿಗಳಿಗೂ ಸಾರ್ವಜನಿಕ ಸಂಸ್ಥೆಗಳಿಗೂ ಕಳುಹಿಸಿದ್ದೆನು. ಅಲ್ಲದೆ ಮಾಜಿ ದಿವಾನರಾದ ಸರ್. ಯಂ. ವಿಶ್ವೇಶ್ವರಯ್ಯನವರು, ಈಗಿನ ದಿವಾನರು, ಪ್ರಥಮ ಮತ್ತು ದ್ವಿತೀಯ ಸಚಿವರು, ಕೈಗಾರಿಕೆಗಳ ಇಲಾಖೆಯ ಡೈರೆಕ್ಟರು, ಡೆಪ್ಯುಟಿ ಕಮಿಷನರು, ಸಬ್‌ಡಿವಿಷನ್ ಆಫೀಸರ್, ಅಮಲ್ದಾರರು ಇವರೇ ಮುಂತಾದ ಎಲ್ಲ ಅಧಿಕಾರಿಗಳಲ್ಲಿಯೂ ನಾನೇ ಖುದ್ದಾಗಿ ಹೋಗಿ ಈ ಹೊಸ ಸ್ಕೀಮಿನ ಅರ್ಥವನ್ನು ಮನದಟ್ಟಾಗುವಂತೆ ವಿವರಿಸಿದ್ದೇನೆ. ಎಲ್ಲ ಅಧಿಕಾರಿಗಳೂ ನಾನು ಭೇಟಿಮಾಡಿದಾಗ ಒಳ್ಳೆಯ ಅಭಿಪ್ರಾಯ

ಗಳನ್ನೇ ಕೊಟ್ಟಿದ್ದಾರೆ. ಅದನ್ನು ಆಗಾಗ್ಗೆ ಪತ್ರಿಕೆಗಳ ಮುಖಾಂತರ ಮಹಾಜನರ ಮುಂದಿಟ್ಟಿದ್ದೇನೆ. ತಾ॥ ಅಮಲ್ದಾರರು, ಸಬ್‌ಡಿವಿಜನ್ ಆಫೀಸರು, ಡೆಪ್ಯುಟಿ ಕಮಿಷನರು ಇವರುಗಳು ಖುದ್ದು ತಗಡೂರಿಗೆ ದಯಮಾಡಿಸಿ ಎಲ್ಲ ವಿದ್ಯಮಾನಗಳನ್ನೂ ತಿಳಿದುಕೊಂಡಿದ್ದಾರೆ. ಅನಂತರ ಡೆಪ್ಯುಟಿ ಕಮಿಷನರಾದ ಶ್ರೀಮಾನ್ ಮೇಕ್ರಿಯವರು ವರದಿಯನ್ನೂ ಸ್ಕೀಮನ್ನೂ ಸಂಪೂರ್ಣವಾಗಿ ಅಂಗೀಕಾರಮಾಡಿ ಜಾರಿಗೆ ಅನುಮತಿ ಕೊಟ್ಟಿದ್ದಾರೆ. ತಾ॥ ಅಮಲ್ದಾರವರಾದ ಶ್ರೀಮಾನ್ ಸೀತಾರಾಮಯ್ಯನವರು ಇದೇ ತಿಂಗಳು 5ನೇ ತಾರೀಖಿನ ದಿವಸ ತಗಡೂರು ಗ್ರಾಮ ಪಂಚಾಯಿತಿಯಲ್ಲಿ ಸ್ಕೀಮನ್ನು ಜಾರಿಗೂ ಸಹ ತಂದಿದ್ದಾರೆ. ತಗಡೂರು ಗ್ರಾಮ ಪಂಚಾಯಿತಿಯಲ್ಲಿ ಈ ಹೊಸ ಸ್ಕೀಂ ಯಾವ ರೀತಿಯಾಗಿ ಮುಂದುವರಿಸುತ್ತದೆಂಬುದಕ್ಕೆ ಆಗಾಗ್ಗೆ ವರದಿಯನ್ನು ಕಳುಹಿಸಬೇಕೆಂಬುದಾಗಿ ಸರ್. ಯಂ. ವಿಶ್ವೇಶ್ವರಯ್ಯನವರು ಅಪೇಕ್ಷಿಸಿದ್ದಾರೆ. ಈ ಅಮೂಲ್ಯವಾದ ಅವಕಾಶವನ್ನು ಪ್ರತಿಯೊಬ್ಬ ಯುವಕನೂ ಉಪಯೋಗಿಸಿಕೊಳ್ಳಬೇಕು. ನಮ್ಮ ಸಂಸ್ಥಾನದಲ್ಲಿ ಸುಮಾರು 10,000 ಗ್ರಾಮ ಪಂಚಾಯಿತಿಗಳಿವೆ. ಪ್ರತಿಯೊಂದು ಪಂಚಾಯಿತಿಯಲ್ಲಿಯೂ ಈ ಸ್ವಾವಲಂಬನದ ಸ್ಕೀಮನ್ನು ಜಾರಿಗೆ ತರಬೇಕು. ಗ್ರಾಮಾಂತರ ರೈತರ ಸ್ಥಿತಿಗಳನ್ನು ಉತ್ತಮಪಡಿಸಬೇಕು. "ಹಗಲು ರಾತ್ರಿ ದುಡಿಯಬೇಕು. ದುಡಿಯುವ ಪ್ರತಿಯೊಬ್ಬ ಮನುಷ್ಯನಿಗೂ ಉದ್ಯೋಗವನ್ನು ಕೊಡುತ್ತೇವೆ. ಪ್ರತಿದಿವಸವೂ ಅವರವರ ಮನೆಯಲ್ಲೇ ಕೂಲಿಯು ದೊರೆಯುವಂತೆ ಮಾಡಿದ್ದೇವೆ. ಜೀವನಕ್ಕೂ ಬಡತನಕ್ಕೂ ಹೆದರಬೇಡಿರೆಂದು ಧೈರ್ಯಕೊಡುತ್ತೇವೆ" ಎಂಬುದಾಗಿ ಪ್ರತಿಯೊಂದು ಗ್ರಾಮದಲ್ಲೂ ಸಾರುವಂತಾಗಬೇಕು. ಗ್ರಾಮಾಂತರಗಳಲ್ಲಿ ರಾಷ್ಟ್ರಾಭಿಮಾನವನ್ನೂ, ಸ್ವಾವಲಂಬನವನ್ನೂ ಜವಾಬ್ದಾರಿ ಸರ್ಕಾರದ ತತ್ವವನ್ನೂ ಸಾರಲು ಮತ್ತು ಅನುಷ್ಠಾನಕ್ಕೆ ತರಲು ಸಾಹಸಪಡಬೇಕು. ಸಾಮಾಜಿಕ ಅಂಧಪದ್ಧತಿಗಳನ್ನು ಕಿತ್ತೊಗೆದು ಇಂದಿನ ಕಾಲಕ್ಕನುಗುಣವಾಗುವಂತೆ ವ್ಯವಸ್ಥೆ ಮಾಡಬೇಕು. ದೇಶಸೇವೆಗೆಂದು ಹಾಹಾಕಾರ ಪಡುವ ಯುವಕರೆಷ್ಟು ಮಂದಿ ದೇಶಸೇವೆಗೆ ಸಿದ್ಧರಾಗಿದ್ದೀರಿ ? ನಾನು ತಮ್ಮಗಳ ಭಾಷಣವನ್ನು ಗಮನಿಸುವುದಿಲ್ಲ. ಉಪದೇಶವನ್ನು ಲಕ್ಷಿಸುವುದಿಲ್ಲ, ಕರ್ಮವನ್ನು ಮಾತ್ರ ಅಪೇಕ್ಷಿಸುತ್ತೇನೆ. ಜೀವಮಾನವೆಲ್ಲ ದುಡಿದರೂ ಮುಗಿಯದ ಸ್ಕೀಮನ್ನು ತಮ್ಮಗಳ ಮುಂದಿಟ್ಟಿದ್ದೇನೆ. ಒಂದು ನೂರು ಗ್ರಾಮಪಂಚಾಯಿತಿಗಳನ್ನು ಕೈಗೆ ತೆಗೆದುಕೊಂಡು ಮಹಾಜನಕ್ಕೂ ಶ್ರೀಮನ್ಮಹಾರಾಜರವರಿಗೂ ಕಾರ್ಯತಃ ಮಾಡಿ ತೋರಿಸಿದರೆ ಅದರ ಮರುದಿವಸವೇ ಜವಾಬ್ದಾರಿ ಸರ್ಕಾರ ಬರುವುದು ಖಂಡಿತ. ಹಾಗೆ ಮಾಡುವುದಕ್ಕಾಗಿ ಸದ್ಯದಲ್ಲೇ ತಗಡೂರಲ್ಲಿ ಒಂದು ಆಶ್ರಮವನ್ನು ತೆರೆಯುತ್ತೇನೆ. ಆಗ ತಮ್ಮಗಳಲ್ಲಿ ಅನೇಕರು ಬಂದು ಅಲ್ಲಿ ಸೇವೆ ಮಾಡುವಿರೆಂದು ನಂಬಿದ್ದೇನೆ. ಈ ಕಾರ್ಯವನ್ನು ಕೈಕೊಳ್ಳುವುದರಿಂದ ವಿದ್ಯಾವಂತರಾದ ಯುವಕರುಗಳ ನಿರುದ್ಯೋಗವು ನಿವೃತ್ತಿಯಾಗುವುದು. ಗ್ರಾಮಗಳ ಪುನರುಜ್ಜೀವನವಾಗುವುದು. ರಾಷ್ಟ್ರಕಾರ್ಯವು ಮುಂದುವರಿಯುವುದು.

ಬಡವರ ಜೀವನದ ಅಂತಸ್ತನ್ನು ಹೆಚ್ಚಿಸಬೇಕು

ನಮ್ಮ ವಿದ್ಯಾಭ್ಯಾಸದ ಇಲಾಖೆಯವರು ಮಕ್ಕಳ ಕೈಪಿಡಿ ಎಂಬ ಪುಸ್ತಕವನ್ನು ಪ್ರೈಮರಿ ಸ್ಕೂಲುಗಳಲ್ಲಿ ಪಠ್ಯಪುಸ್ತಕವನ್ನಾಗಿಟ್ಟಿದ್ದಾರೆ. ಆ ಪುಸ್ತಕದಲ್ಲಿ ಹಳ್ಳಿಗಳ ವರ್ಣನೆ ಮಾಡುವಾಗ ನಮ್ಮದು ಬಡರಾಜ್ಯವೆಂದೂ ರೈತನ ಸರಾಸರಿ ಉತ್ಪತ್ತಿಯು ವರ್ಷಕ್ಕೆ ಐವತ್ತಾರು ಅಥವಾ ಅರವತ್ತು ರೂಪಾಯಿಗಳೆಂದೂ ತಿಳಿಸಿದ್ದಾರೆ. ಈ ಲೆಕ್ಕವನ್ನು ಸರ್ವೆ ಮಾಡಿ ತೆಗೆದಿರುವುದಾಗಿಯೂ ತಿಳಿಸಿದ್ದಾರೆ. ಸರ್ಕಾರದವರ ಲೆಕ್ಕ ದಿಂದಲೇ ರೈತನ ಸಂಸಾರಕ್ಕೆ ದಿನ ಒಂದಕ್ಕೆ ಎರಡು ಆಣೆ ಒಂಭತ್ತು ಪೈಗಳು, ಅಮಲ್ದಾರ್ರವರಿಗೆ 7 ರೂಗಳು, ಡೆಪ್ಯುಟಿ ಕಮಿಷನರಿಗೆ 40 ರೂ.ಗಳು, ದಿವಾನರಿಗೆ 166 ರೂ.ಗಳು, ಮಹಾರಾಜರಿಗೆ 7000 ರೂ.ಗಳು ಪ್ರತಿದಿವಸವೂ ಸಲ್ಲುತ್ತಿವೆ ಎಂಬುದಾಗಿಗೊತ್ತಾಗಿದೆ. ಈ ಲೆಕ್ಕವನ್ನು ನೋಡಿದರೆ ಪ್ರಜೆಗಳಿಗೂ ಅಧಿಕಾರಿ ಪ್ರಭು ಗಳಿಗೂ ಎಷ್ಟು ಅಂತರವಿದೆ ಎಂಬುದು ಸ್ಪಷ್ಟವಾಗುತ್ತದೆ. ಇದು ನ್ಯಾಯ, ಸತ್ಯ, ಧರ್ಮ, ಇವುಗಳ ಎಲ್ಲೆಯನ್ನು ಮೀರಿಹೋಗಿದೆ. ಈ ಅಂತರವು ಸಹಿಸುವುದಕ್ಕೆ ಅಸಾಧ್ಯವಾದಷ್ಟು ಭಯಂಕರವಾಗಿದೆ. ರೈತನ ಸಂಸಾರಕ್ಕೆ ದಿನ ಒಂದಕ್ಕೆ ಸರಾಸರಿ ಒಂದು ರೂಪಾಯಿಯೂ ದಿವಾನರಿಗೆ 16 ರೂ.ಗಳೂ ಅಧಿಕಾರಿಗಳಿಗೆ ಅದಕ್ಕೆ ತಕ್ಕಂತೆಯೂ ಮಹಾರಾಜರಿಗೆ ಹಿಂದೂಸ್ಥಾನದ ವೈಸ್‌ರಾಯರಿಗೆ ಕೊಡುವಷ್ಟು ಅಂದರೆ 750 ರೂ.ಗಳು ಸಲ್ಲುವಂತೆ ವ್ಯವಸ್ಥೆ ಮಾಡಿ ಹೆಚ್ಚು ಅಂತರವನ್ನು ತಗ್ಗಿಸ ಬೇಕೆಂಬುದಾಗಿ ಯುವಕರು ಪ್ರಚಂಡ ಪ್ರಚಾರಕಾರ್ಯವನ್ನು ಮಾಡಿ ಜನಜಾಗೃತಿ ಯನ್ನುಂಟುಮಾಡಬೇಕು. ಈ ರೀತಿಯಾಗಿ ನನಗೆ ತೋರಿದ ಸರಿಯೆನಿಸಿದ ಅತ್ಯಂತ ಮುಖ್ಯವಾದ ಕೆಲವು ಮಾರ್ಗಗಳನ್ನು ತಮ್ಮಗಳ ಮುಂದಿಟ್ಟಿದ್ದೇನೆ. ತಾವುಗಳೂ ಆಲೋಚಿಸಿ ತಮಗೆ ಸಾಧ್ಯವಾದ ಮಾರ್ಗದಲ್ಲಿ ಅತ್ಯಂತ ಆಸಕ್ತಿಯಿಂದ ಕಾರ್ಯವನ್ನು ಕೈಕೊಳ್ಳುವಿರೆಂದು ಬಯಸುತ್ತೇನೆ. ತಾವುಗಳು ನನ್ನಮೇಲೆ ಅತ್ಯಂತ ವಿಶ್ವಾಸವಿಟ್ಟು ಈ ಅಧ್ಯಕ್ಷ ಸ್ಥಾನವನ್ನು ಕೊಟ್ಟಿದ್ದೀರಿ. ತಮ್ಮಗಳ ವಿಶ್ವಾಸಕ್ಕಾಗಿ ನನ್ನ ವಂದನೆ ಯನ್ನರ್ಪಿಸಿ ಭಾಷಣವನ್ನು ಪರಿಸಮಾಪ್ತಿ ಮಾಡುತ್ತೇನೆ.

ಗಾಂಧೀ ರಾಮಚಂದ್ರರಾಯರು (ಹೀಗೆಂದು ಜನ ಶ್ರೀ ತಗಡೂರರನ್ನು ಕರೆಯುವುದು ರೂಢಿಯಲ್ಲಿದೆ) ಮಾಡಿದ ಭಾಷಣದಲ್ಲಿ ಅವರ ಅನುಭವ ಶ್ರೀಮಂತಿಕೆ, ಗಾಂಧೀಜಿಯವರ ತತ್ವಗಳನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಅನುಷ್ಠಾನಕ್ಕೆ ತರ ಬೇಕೆಂಬ ಕಳಕಳಿ, ಗ್ರಾಮ ಪುನರ್ನಿರ್ಮಾಣ ಕಾರ್ಯದಲ್ಲಿ ಯುವಕರ ಶಕ್ತಿಯ ಬಗೆಗೆ ಇರುವ ಭರವಸೆ ಮುಂತಾದ ಹಲವು ಹತ್ತು ವಿಷಯಗಳು ಎದ್ದು ಕಾಣುತ್ತವೆ. ಹಳ್ಳಿಗಳ, ಹಳ್ಳಿಗರ ಸ್ಥಿತಿ ಉತ್ತಮವಾಗದೆ ಭಾರತದ ಉದ್ಧಾರ ಸಾಧ್ಯವಿಲ್ಲವೆಂಬು ದರಲ್ಲಿ ಭಿನ್ನಾಭಿಪ್ರಾಯವಿಲ್ಲ.

ಈ ಭಾಷಣವನ್ನು ಮುಂದೆ ಮೈಸೂರು ರಾಜ್ಯದಲ್ಲಿ ಪ್ರವಾಸ ಮಾಡಿದ ಆಚಾರ್ಯ ವಿನೋಬಾ ಭಾವೆಯವರು ಓದಿಸಿ ಕೇಳಿ ಸಂತೋಷಪಟ್ಟು ಸತ್ಯಾಂಶಗಳಿಗೆ

ಬೆನ್ನುತಟ್ಟಿ ಶ್ರೀ ರಾಮಚಂದ್ರರಾಯರನ್ನು ಹುರಿದುಂಬಿಸಿದರೆಂಬುದು ಗಮನಾರ್ಹವಾದ ಸಂಗತಿಯಾಗಿದೆ. ಉತ್ಸಾಹಿ ಯುವಕ ನಾಯಕರ ಪ್ರಗತಿಪರ ವಿಚಾರಧಾರೆಯ ಉಪಯುಕ್ತ ಭಾಷಣಗಳಿಂದ ಶಿವಪುರ ರಾಷ್ಟ್ರಕೂಟದ ಯುವಜನ ಸಮ್ಮೇಳನ ಯಶಸ್ವಿಯಾಗಿ ನೆರವೇರಿತು.

ಯುವಜನ ಸಮ್ಮೇಳನದಲ್ಲಿ ಕೆಲವು ನಿರ್ಣಯಗಳಾದುವು. ಅವುಗಳ ಸಾರಾಂಶ ಹೀಗಿದೆ: "ಮೈಸೂರು ಸರ್ಕಾರ ವಾರ್ಧಾ ಶಿಕ್ಷಣ ಪದ್ಧತಿಯನ್ನು ಜಾರಿಗೆ ತರಬೇಕು. ಮೈಸೂರು ಸರ್ಕಾರ ಮಾಡಿರುವ ರಾಜಕೀಯ ಸುಧಾರಣಾ ಸಮಿತಿ ಮತ್ತು ಫೆಡರೇಷನ್ ಕಮಿಟಿಗಳನ್ನು ಮೈಸೂರಿನ ಜನ ತಿರಸ್ಕರಿಸಬೇಕು. ವಿಶ್ವವಿದ್ಯಾಲಯದ ಪದವೀಧರರಿಗೆ ಗ್ರಾಮಾಭಿವೃದ್ಧಿಯ ಬಗೆಗೆ ಕಡ್ಡಾಯವಾಗಿ ತರಬೇತಿ ನೀಡಬೇಕು. 'ಆಲ್ ಇಂಡಿಯ ಫೆಡರೇಷನ್' ಅನ್ನು ಬಹಿಷ್ಕರಿಸಬೇಕು." ಈ ನಿರ್ಣಯಗಳು ಆ ಕಾಲಕ್ಕೆ ಅಗತ್ಯವಾಗಿದ್ದುವು.

ಯುವಜನ ಸಮ್ಮೇಳನ ಮುಗಿದ ಮೇಲೆ ಅತಿಥಿಗಳಿಗೆ, ಪ್ರತಿನಿಧಿಗಳಿಗೆ, ಕಾರ್ಯಕರ್ತರಿಗೆ ಭೋಜನಶಾಲೆಯಲ್ಲಿ ಊಟ ಉಪಹಾರಗಳು ನಡೆದುವು. ಜಾತ್ಯಾತೀತ ಭಾವನೆಯನ್ನು ಉಂಟುಮಾಡುವುದಕ್ಕೋಸ್ಕರ ಮೊದಲೇ ಕಾರ್ಯಕಾರಿ ಸಮಿತಿಯವರು ತೀರ್ಮಾನಿಸಿದ್ದಂತೆ ಸಾಲು ಭೋಜನ ನಡೆಯಿತು. ಇದು ಒಂದು ಹೊಸ ಅನುಭವ. ಏಕೆಂದರೆ ಜಾತೀಯತೆ ಶತಮಾನಗಳಿಂದ ನಮ್ಮ ಜನರ ಬೆನ್ನು ಹತ್ತಿರುವ ಅಂಟು ಜಾಡ್ಯ.ಉಚ್ಚ ವರ್ಣದವರಾದ ಬ್ರಾಹ್ಮಣರು ಉಳಿದವರ ಮನೆಯಲ್ಲಿ ಊಟ ಮಾಡುವುದಿಲ್ಲ. ಲಿಂಗಾಯಿತರು ಒಕ್ಕಲಿಗರ ಮನೆಯಲ್ಲಿ ಒಕ್ಕಲಿಗರು ಲಿಂಗಾಯಿತರ ಮನೆಯಲ್ಲಿ ಊಟಮಾಡುವುದಿಲ್ಲ. ಹರಿಜನರ ಮನೆಯಲ್ಲಿ ಉಳಿದ ಜಾತಿಯವರಾರೂ ಊಟಮಾಡುವುದಿಲ್ಲ. ಒಕ್ಕಲಿಗರು ಶೆಟ್ಟರ ಮನೆಯಲ್ಲಿ ಊಟ ಮಾಡುವುದು ಅವಮಾನ ಎಂಬ ನಂಬಿಕೆ. ಎಷ್ಟೋ ಜನ ಲಿಂಗಾಯಿತರು ಸತ್ಯಾಗ್ರಹ ನಡೆಯುವ ಕಡೆಗೆ ಅಲ್ಲಿ ಊಟ ಮಾಡಬೇಕಾಗುತ್ತದೆ ಎಂದು ಮನೆಯಿಂದಲೇ ಬುತ್ತಿ ತರುತ್ತಿದ್ದರು. ಇಂಥದ್ದೆಲ್ಲ ಹೋಗಬೇಕು ಅಥವಾ ಕಡಮೆಯಾಗಬೇಕು ಅಥವಾ ಇದು ಅವಿವೇಕ ಎಂಬ ಭಾವನೆ ಜನರಲ್ಲಿ ಮೂಡಬೇಕು ಎಂಬ ಉದ್ದೇಶದಿಂದ ಶಿವಪುರ ರಾಷ್ಟ್ರಕೂಟದಲ್ಲಿ ಎಲ್ಲ ಜಾತಿಯವರಿಗೂ ಒಂದೇ ಕಡೆ, ಒಂದೇ ಪಂಕ್ತಿಯಲ್ಲಿ ಊಟದ ಏರ್ಪಾಡು ಮಾಡಿತ್ತು. ಇದಕ್ಕಾಗಿ ನೇಮಿಸಿದ್ದ ಸ್ವಯಂಸೇವಿಕೆಯರು ಬಡಿಸುವುದರಲ್ಲಿ ಸಹಾಯ ಮಾಡಿದರು. ಹರಿಜನ ಹುಡುಗಿಯರು ಕುಡಿಯುವುದಕ್ಕೆ ನೀರನ್ನು ಒದಗಿಸಿದರು. ದೇಶದ ಯಾವ ಯಾವುದೋ ಮೂಲೆಯಿಂದ ಬಂದಿದ್ದ, ಯಾವ ಯಾವುದೋ ಆಚಾರ ವಿಚಾರ ಸಂಪ್ರದಾಯಗಳಲ್ಲಿ ಬೆಳೆದಿದ್ದ ಜನರು ಒಂದು ಮನೆಯವರಂತೆ ಒಟ್ಟಿಗೆ ಒಂದು ಕಡೆ ಕುಳಿತು ಊಟಮಾಡಿದರು.

ಸಾಯಂಕಾಲವಾಗುತ್ತಿದ್ದಂತೆ ಅಧ್ಯಕ್ಷರ ಮೆರವಣಿಗೆಯು ಸಡಗರ ಕಾಣಿಸಿಕೊಂಡಿತು.

ಅಧ್ಯಕ್ಷರ ಮೆರವಣಿಗೆ

ಹಿಂದಿನ ದಿನ ಶಿವಪುರಕ್ಕೆ ಬರಲು ಪ್ರಾರಂಭಿಸಿದ ಜನರ ಸಂಖ್ಯೆ ಗಂಟೆ ಗಂಟೆಗೂ ಹೆಚ್ಚಾಗುತ್ತಲೇ ಇತ್ತು. ಮುಖ್ಯ ಅತಿಥಿಗಳು ಕಾರ್ಯಕರ್ತರು ಸ್ವಯಂಸೇವಕರು ಶಿವಪುರಕ್ಕೆ ಆಗಮಿಸಿ ತಂತಮ್ಮ ಬಿಡಾರಗಳನ್ನು ಸೇರಿದ್ದರು. ಆದರೆ ಅಕ್ಕಪಕ್ಕದ ಹಳ್ಳಿಗಳ ಜನರು ಇನ್ನೂ ಬರುತ್ತಲೇ ಇದ್ದರು. ಮದ್ದೂರು, ಮಂಡ್ಯ, ಚನ್ನ ಪಟ್ಟಣ, ಮಳವಳ್ಳಿ, ಅರಕೆರೆ, ಪಾಂಡವಪುರ ಮೊದಲಾದ ಕಡೆಗಳಿಂದ ಸಾವಿರಾರು ಜನರು ಕಾಲುನಡಿಗೆಯಲ್ಲಿ, ಎತ್ತಿನ ಗಾಡಿಗಳಲ್ಲಿ, ಬಸ್ಸುಗಳಲ್ಲಿ, ರೈಲುಗಳಲ್ಲಿ ಬಂದು ಶಿವಪುರವನ್ನು ಸೇರುತ್ತಿದ್ದರು. ಸಾಯಂಕಾಲದ ಹೊತ್ತಿಗೆ ಶಿವಪುರ ಮತ್ತು ಮದ್ದೂರು ಪಟ್ಟಣಗಳ ಬೀದಿಗಳಲ್ಲಿ ಎಲ್ಲೆಲ್ಲಿ ನೋಡಿದರೂ ಖಾದಿ ಟೋಪಿ ಗಳೇ ಕಾಣುತ್ತಿದ್ದುವು. ಖಾದಿಯ ಆಕರ್ಷಣೆ ಕಾಂಗ್ರೆಸ್‌ನ ಒಲವಿನಿಂದ ಹಳ್ಳಿಗರೂ ಕೂಡ ಖಾದಿ ಟೋಪಿಯನ್ನು ಧರಿಸಿ ಆಗಮಿಸಿದರು. ಎಲ್ಲೆಲ್ಲೂ ಹೊಸ ಮುಖಗಳ ಪ್ರದರ್ಶನ ಕಾಣುತಿತ್ತು; ಗಾಂಧೀಜಿ, ಸತ್ಯಾಗ್ರಹ, ಸ್ವಾತಂತ್ರ್ಯ ಮೊದಲಾದ ವಿಷ ಯಗಳ ಮಾತುಕತೆ ಮೊಳಗುತ್ತಿದ್ದುವು. ಶಿವಪುರ ಹಳ್ಳಿಯು ಅಲಂಕರಿಸಿದ ಪಟ್ಟಣ ವಾಗಿತ್ತು.

ಶಿವಪುರ ರಾಷ್ಟ್ರಕೂಟದ ಮಹಾಧಿವೇಶನದ ಅಧ್ಯಕ್ಷರ ಮೆರವಣಿಗೆ ಸುವ್ಯವ ಸ್ಥಿತವಾಗಿ ವರ್ಣರಂಜಿತವಾಗಿ ನಡೆಯಿತು. ಮೆರವಣಿಗೆಯ ರಥವು ವಿಶೇಷವಾಗಿ ನಿರ್ಮಾಣವಾಗಿತ್ತು. ಅದು ಎರಡು ಗಾಲಿಯ ಜೋಡೆತ್ತಿನ ಗಾಡಿ. ಅದರ ಮೇಲೆ ಮಂಟಪ ; ಮೆಟ್ಟಿಲುಗಳುಳ್ಳ ವೇದಿಕೆ ರಚನೆಯಾಗಿತ್ತು. ಎಲ್ಲಾ ಕಡೆ ಬಾಳೆಯ ಕಂಬ, ವಿವಿಧ ರೀತಿಯ ಬಣ್ಣದ ಖಾದಿ ಬಟ್ಟೆ ಹಾಗೂ ರಾಷ್ಟ್ರಧ್ವಜಗಳಿಂದ ಅಲಂಕಾರ ಮಾಡಲಾಗಿತ್ತು. ಅಧ್ಯಕ್ಷ ಪೀಠದ ಎಡ, ಬಲ ಮತ್ತು ಹಿಂಬದಿಯಲ್ಲಿ ಶಿಸ್ತು, ಅಹಿಂಸೆ, ಸತ್ಯಗಳ ಸೂಕ್ತಿಗಳು ಎದ್ದು ಕಾಣುವ ಫಲಕಗಳು ಇದ್ದುವು. ಸಂಕ್ರಾಂತಿಯ ಹಬ್ಬದಲ್ಲಿ ಕಿಚ್ಚುಹಾಯಿಸುವಾಗ ಹಳ್ಳಿಗರು ಎತ್ತುಗಳನ್ನು ಅಲಂಕರಿಸುವಂತೆ ಆಕರ್ಷಕವಾಗಿ ಅಲಂಕರಿಸಿದ್ದ ಮೈತುಂಬಿದ ಎಂಟು ಜತೆ ಎತ್ತುಗಳು, ಒಂದೊಂದು

ಜಿಲ್ಲೆಗೆ ಒಂದೊಂದು ಜೊತೆಯ ಸಂಕೇತದಂತೆ ರಥಕ್ಕೆ ಹೂಡಿದ್ದುವು.* ಅವುಗಳ ಮುಂದೆ ಅದೇ ರೀತಿ ಅಲಂಕರಿಸಿದ ನೂರೊಂದು ಜೊತೆ ಎತ್ತುಗಳು ಸಾಲಾಗಿದ್ದುವು. ಇದಕ್ಕಾಗಿ ಸ್ವತಃ ಉತ್ಸಾಹದಿಂದ ತಮ್ಮನ್ನೂ ತಮ್ಮ ಎತ್ತುಗಳನ್ನೂ ಅಲಂಕರಿಸಿಕೊಂಡು ತಾವಾಗಿ ಬಂದಿದ್ದ ರೈತರೆಲ್ಲರಿಗೆ ಅವಕಾಶ ಮಾಡಿಕೊಡುವುದೇ ದೊಡ್ಡ ಸಮಸ್ಯೆಯಾಯಿತು. ಸಾಲು ಜೋಡೆತ್ತುಗಳ ಮುಂದೆ ಡೋಲು, ನಗಾರಿ, ಹೆಬ್ಬಾರೆ, ಕೊಂಬು ಕಹಳೆಗಳ ಸಹಿತ ತಾವಾಗಿ ಸಜ್ಜಾಗಿ ಬಂದಿದ್ದ ಹಳ್ಳಿಯ ವಾದಕರಿದ್ದರು. ಅವರ ಮುಂದೆ ಜಿ.ಓ.ಸಿ. ಯವರ ನೇತೃತ್ವದಲ್ಲಿ ಜಯಘೋಷ ಮಾಡುತ್ತ ರಾಷ್ಟ್ರಗೀತೆ, ಭಕ್ತಿಗೀತೆಗಳನ್ನು ಹಾಡುತ್ತಾ ನಾಲ್ಕು ನಾಲ್ಕು ಜನರಂತೆ ಶಿಸ್ತಿನಿಂದ ಸಾಗುವ ಸ್ವಯಂಸೇವಕರು ಮತ್ತು ಸ್ವಯಂ ಸೇವಿಕೆಯರು ಇದ್ದರು. ಜೊತೆಗೆ ಸುಮಾರು 20–30 ಸಾವಿರಕ್ಕೂ ಮಿಕ್ಕಿದ ಜನಸಮೂಹ ಸೇರಿತ್ತು.

10–4–1938 ರ ಸಂಜೆ 6 ಗಂಟೆಗೆ ಮದ್ದೂರಿನ ಪಶ್ಚಿಮದ್ವಾರದ ಆಚೆಗಿರುವ ಸರ್. ಎಂ. ಕಾಂತರಾಜೇ ಅರಸಿನವರ ಮಾವಿನ ತೋಟದ ಹತ್ತಿರದಿಂದ ಅಧ್ಯಕ್ಷರ ಮೆರವಣಿಗೆ ಪ್ರಾರಂಭವಾಯಿತು. ಇಲ್ಲಿಂದ ಶಿವಪುರಕ್ಕೆ 2 ಮೈಲಿ ದೂರ. ರಥಾರೋಹಣಕ್ಕೆ ಮೊದಲು ಶ್ರೀಮಂತಿ ಪಾರ್ವತಮ್ಮನವರು ತಮ್ಮ ಪತಿ ಶ್ರೀ ಟಿ. ಸಿದ್ದಲಿಂಗಯ್ಯನವರ ಪಾದಪೂಜೆ ಮಾಡಿ ಮಂಗಳಾರತಿ ಬೆಳಗಿದರು. ಪಾದೋದಕವನ್ನು ಸ್ವೀಕರಿಸಿ ಮಂಗಳ ಪುಷ್ಪಗಳನ್ನು ತಮ್ಮ ಮುಡಿಗಿಟ್ಟುಕೊಂಡರು. ಅನಂತರ ತಮ್ಮ ಪತಿಯ ಎರಡೂ ಕೈಗಳನ್ನು ಹಿಡಿದು ಅವರನ್ನು ಸ್ವಾಗತಾಧ್ಯಕ್ಷ ಎಸ್. ಚನ್ನಯ್ಯನವರಿಗೆ ಒಪ್ಪಿಸಿದರು. ಅದೊಂದು ರೋಮಾಂಚನಗೊಳಿಸುವ ಸನ್ನಿವೇಶವಾಗಿತ್ತು. ಆಗ ಜನರ ಕಣ್ಣಿನಲ್ಲಿ ಆನಂದಾಶ್ರುಗಳು ಕಾಣಿಸಿಕೊಂಡುವು. ಅಧಿವೇಶನದ ಅಧ್ಯಕ್ಷರಾದ ಶ್ರೀ ಟಿ. ಸಿದ್ದಲಿಂಗಯ್ಯನವರು ರಥಾರೋಹಣಕ್ಕೆ ಸಿದ್ಧರಾದ ಮೇಲೆ ಸ್ವಾಗತಾಧ್ಯಕ್ಷರಾದ ಶ್ರೀ ಎಸ್. ಚನ್ನಯ್ಯನವರು ಅಧ್ಯಕ್ಷರಿಗೆ ಹಾರ ತುರಾಯಿಗಳನ್ನು ಅರ್ಪಿಸಿ, ಹಸ್ತಲಾಘವಕೊಟ್ಟು ಅವರನ್ನು ರಥದ ಮೇಲಕ್ಕೆ ಹತ್ತಿಸಿದರು. ಆಗ ಉತ್ಸಾಹಗೊಂಡ ಜನಸಮೂಹದ ಕರತಾಡನದ ನಿನಾದ ಮುಗಿಲು ಮುಟ್ಟಿತು. ಜಯಘೋಷಗಳು ಭೋರ್ಗರೆದುವು. ಸಾಮಾನ್ಯವಾಗಿ ಶ್ರೀ ಟಿ. ಸಿದ್ದಲಿಂಗಯ್ಯನವರು ಸೂಟು ಬೂಟು ಧರಿಸುತ್ತಿದ್ದವರು. ಆದರೆ ಅಂದು ಅಚ್ಚ ಬಿಳಿಯ ಖಾದಿ ಪೈಜಾಮ, ಜುಬ್ಬ, ಟೋಪಿಗಳನ್ನು ಧರಿಸಿದ್ದರು. ಹೆಗಲ ಮೇಲೆ ಖಾದಿಯ ಉತ್ತರೀಯವಿತ್ತು. ರಥಾರೋಹಣ ಮಾಡಿದ ಶ್ರೀ ಸಿದ್ದಲಿಂಗಯ್ಯನವರು ನಮ್ರ ಭಾವನೆಯಿಂದ ಗಂಭೀರವಾಗಿ ಭಕ್ತಿಯಿಂದ ಎರಡೂ ಕೈಗಳನ್ನು ಜೋಡಿಸಿ ಕುಳಿತುಕೊಂಡರು. ಹಾರಾರ್ಪಣೆಯ ಅನಂತರ ಖಾದಿಯ ಶ್ವೇತ ವಸ್ತ್ರಧಾರಿ ಅಂಕೂಗೌಡರು

* ಹರಿಪುರದ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನದಲ್ಲಿ ಅಧ್ಯಕ್ಷರ ಮೆರವಣಿಗೆಗೆ ಎತ್ತುಗಳನ್ನು ಬಳಸಲಾಗಿತ್ತು. ಅದನ್ನು ಅನುಕರಿಸಿ ಶಿವಪುರದಲ್ಲಿಯೂ ಮೆರವಣಿಗೆಗೆ ಎತ್ತುಗಳನ್ನು ಬಳಸಿದರು. ಆಗ ಮೈಸೂರು ಸಂಸ್ಥಾನದಲ್ಲಿ, ಮೈಸೂರು, ಬೆಂಗಳೂರು, ಕೋಲಾರ, ತುಮಕೂರು, ಹಾಸನ, ಕಡೂರು, ಶಿವಮೊಗ್ಗ ಮತ್ತು ಚಿತ್ರದುರ್ಗ—ಈ ಎಂಟು ಜಿಲ್ಲೆಗಳು ಮಾತ್ರ ಇದ್ದುವು. ಈಗಿನ ಮಂಡ್ಯ ಜಿಲ್ಲೆ ಅಂದಿನ ಮೈಸೂರು ಜಿಲ್ಲೆಯ ಭಾಗವಾಗಿತ್ತು.

ರಥವೇರಿ ಎತ್ತುಗಳ ಹಗ್ಗಗಳನ್ನು ಕೈಗೆತ್ತಿಕೊಂಡು ದಿಟ್ಟ ನಿಲುವಿನಿಂದ ಗಂಭೀರವಾಗಿ ಕುಳಿತು ಸಾರಥ್ಯವನ್ನು ವಹಿಸಿಕೊಂಡರು. ನಿಧಾನವಾಗಿ ರಥ ಚಲಿಸಿತು.

ದಾರಿಯುದ್ದಕ್ಕೂ ಮಾರು ಮಾರಿಗೆ ತಳಿರು ತೋರಣಗಳು ಕಂಗೊಳಿಸುತ್ತಿದ್ದುವು. ಹೆಜ್ಜೆ ಹೆಜ್ಜೆಗೂ ಜನರು ಅರ್ಪಿಸಿದ ಹಾರ ತುರಾಯಿಗಳಿಗೆ ಲೆಕ್ಕವಿಲ್ಲ. ಮದ್ದೂರು ಪಟ್ಟಣದ ಪ್ರತಿಯೊಂದು ಮನೆಯುವರೂ ಅಂಗಡಿಗಳವರೂ ರಥವನ್ನು ನಿಲ್ಲಿಸಿ ಹಾರಗಳನ್ನು ಅರ್ಪಿಸುವುದರ ಮೂಲಕ ತಮ್ಮ ಭಕ್ತಿ ಗೌರವಗಳನ್ನು ತೋರಿಸಿಕೊಂಡರು. ಹೆಂಗಳೆಯರು ಅಧ್ಯಕ್ಷರಿಗೆ, ರಥಕ್ಕೆ, ಜೋಡೆತ್ತುಗಳಿಗೆ ಮಂಗಳಾರತಿ ಬೆಳಗಿದರು. ಎಲ್ಲ ಜಾತಿಯ ಜನರೂ ಅಧ್ಯಕ್ಷರಿಗೆ ಗೌರವ ತೋರಿಸಿದರು. ಮದ್ದೂರಿನ ಮಹಮದೀಯರು ತಮ್ಮ ಅಂಗಡಿಗಳ ಮುಂದೆ ಹಾರಗಳನ್ನು ಅರ್ಪಿಸಿದರು. ಮೈಸೂರಿನ ಮಹಮದ್ ಸೇಟರೂ ಇದರಲ್ಲಿ ಪಾಲ್ಗೊಂಡರು. ಮದ್ದೂರು ಬಿಟ್ಟಮೇಲೆ, ದಾರಿಯ ನಡುವೆ ಎಂಟು ಜಿಲ್ಲೆಯ ಪರವಾಗಿ ಹಾರಗಳನ್ನು ಅರ್ಪಿಸಿದರು.

ಮೆರವಣಿಗೆಯ ರಥದ ಪಕ್ಕದಲ್ಲಿದ್ದ ಸ್ವಾಗತ ಸಮಿತಿಯ ಸದಸ್ಯರು ಹಾಗೂ ಪ್ರಮುಖರು ಶಾಂತಿ ಶಿಸ್ತಿನಿಂದ ನಡೆದುಕೊಳ್ಳಬೇಕೆಂದು ಜನರನ್ನು ಪ್ರಾರ್ಥಿಸುತ್ತಿದ್ದರು. 'ಏನೇ ಬರಲಿ ಒಗ್ಗಟ್ಟಿರಲಿ', 'ಮಹಾತ್ಮ ಗಾಂಧೀಕಿ ಜೈ' 'ಕಾಂಗ್ರೆಸ್‌ಗೆ ಜಯವಾಗಲಿ' 'ಸರಕಾರದ ದಬ್ಬಾಳಿಕೆ ಅಳಿಯಲಿ' 'ಭೋಲೋ ಭಾರತಮಾತಾಕಿ ಜೈ' ಮೊದಲಾದ ಘೋಷಣೆಗಳು ಜೋರಾಗಿ ಕೇಳಿಬರುತ್ತಿದ್ದುವು. ಶ್ರೀಮತಿ ಟಿ. ಸುನಂದಮ್ಮನವರು ಹೇಳಿಕೊಟ್ಟ 'ವಂದೇ ಮಾತರಂ' ಗೀತೆಯನ್ನು ಕ್ಯಾಪ್ಟನ್ ವೆಂಕಮ್ಮನವರ ನಾಯಕತ್ವದ ಸ್ವಯಂ ಸೇವಿಕೆಯರೂ ಜಿ.ಒ.ಸಿ. ಎಂ. ಎನ್. ಜೋಯಿಸರ ನೇತೃತ್ವದ ಸ್ವಯಂ ಸೇವಕರೂ ಪ್ರೇಕ್ಷಕರೂ ಹಾಡಿದರು. 'ಝುಂಡಾ ಉಂಚಾ ರಹೇ ಹಮಾರಾ' ಗೀತೆಯೂ ಕಾಂಗ್ರೆಸ್ ಪರವಾದ ಲಾವಣಿಗಳೂ ಉದ್ದಕ್ಕೂ ಕೇಳಿಬಂದುವು. ಸಂಭ್ರಮದ ಮೆರವಣಿಗೆ ಶಿವಪುರದ ಗಾಂಧಿವೃತ್ತವನ್ನು ಸೇರುವ ಹೊತ್ತಿಗೆ ಮಧ್ಯರಾತ್ರಿ 11 ಗಂಟೆಯಾಯಿತು. ನಿಶ್ಚಿತ ಸ್ಥಳವನ್ನು ತಲುಪಿದ ಮೇಲೆ ಅಧ್ಯಕ್ಷರಾದ ಶ್ರೀ ಟಿ. ಸಿದ್ದಲಿಂಗಯ್ಯನವರು ತಮ್ಮ ಪುಟ್ಟ ಭಾಷಣದಲ್ಲಿ ಸರಕಾರದ ದಬ್ಬಾಳಿಕೆಯನ್ನು ಖಂಡಿಸಿದರು. ಜನರೆಲ್ಲ ಶಾಂತಿಯಿಂದ ಯಾವ ಗಲಾಟೆಗೂ ಅವಕಾಶ ಕೊಡದಂತೆ ನಡೆದುಕೊಳ್ಳಬೇಕೆಂದು ಪ್ರಾರ್ಥಿಸಿ ಜನರಿಗೆ ವಂದಿಸಿದರು. ಅನಂತರ ಅವರು ಜಿ.ಒ.ಸಿ.ಗಳ ಜೊತೆಯಲ್ಲಿ ತಮ್ಮ ಬಿಡಾರಕ್ಕೆ ತೆರಳಿದರು. ಜನರ ಮನಸ್ಸಿನಲ್ಲಿ ಅಚ್ಚಳಿಯದ ಅನುಭವವನ್ನು ಉಂಟುಮಾಡಿದ ಮೆರವಣಿಗೆ ಮುಕ್ತಾಯವಾಯಿತು.

ರಾಷ್ಟ್ರಧ್ವಜಾರೋಹಣಕ್ಕೆ ಪ್ರತಿಬಂಧ

ಶಿವಪುರ ರಾಷ್ಟ್ರಕೂಟದ ಬೆಳವಣಿಗೆಯನ್ನು ಸರಕಾರ ಕಣ್ಣಲ್ಲಿ ಕಣ್ಣಿಟ್ಟು ನೋಡುತ್ತಿತ್ತು. ಶಿವಪುರಕ್ಕೆ ಬರುತ್ತಿದ್ದ ಜನಪ್ರವಾಹ ಸರಕಾರದ ಧೋರಣೆಗೆ

ಸವಾಲಿನಂತಿತ್ತು. ಪ್ರತಿಯೊಂದು ಕೆಲಸಗಳಲ್ಲೂ ಶಿಸ್ತು ಕಾಣುತ್ತಿತ್ತು. ಸರಕಾರದ ಆದೇಶದಂತೆ ಕೆಲಸ ಮಾಡಬೇಕಾಗಿದ್ದ ಪೋಲೀಸರ ಸ್ಥಿತಿ ಇಕ್ಕಟ್ಟಿನದಾಗಿತ್ತು. ರಾಷ್ಟ್ರಕೂಟದಲ್ಲಿ ಧ್ವಜಾರೋಹಣ ಪ್ರಧಾನ ಕಾರ್ಯವಾಗಿದ್ದುದರಿಂದ ಕಾನೂನಿನ ನೆಪದಿಂದ ಅದನ್ನು ತಡೆಗಟ್ಟಿ ರಾಷ್ಟ್ರಕೂಟ ವಿಫಲವಾಗುವಂತೆ ಮಾಡಲು ಸರಕಾರ ಯೋಚಿಸಿತು. ಏಪ್ರಿಲ್ 10, 1938 ರಂದು ಅಧ್ಯಕ್ಷರ ಮೆರವಣಿಗೆ ಮುಗಿಯುತ್ತಿದ್ದಂತೆಯೇ ಮೈಸೂರು ಜಿಲ್ಲಾ ಮ್ಯಾಜಿಸ್ಟ್ರೇಟರು ಪೋಲೀಸ್ ಕಾಯಿದೆಯ 39ನೆಯ ನಿಯಮದ ಪ್ರಕಾರ ಒಂದು ಆಜ್ಞೆಯನ್ನು ಹೊರಡಿಸಿ, ಮದ್ದೂರು ತಾಲ್ಲೂಕಿನ ಶಿವಪುರ ಹಳ್ಳಿಯ ಸುತ್ತುಮುತ್ತಲಿನ 5 ಮೈಲಿ ಪ್ರದೇಶದಲ್ಲಿ ಎಲ್ಲಿಯೂ "ಕಾಂಗ್ರೆಸ್ ಧ್ವಜವೆಂಬುದನ್ನು ಆರೋಹಣ" ಮಾಡಬಾರದೆಂದು ವಿಧಿಸಿದರು. ರಾಷ್ಟ್ರಧ್ವಜಾರೋಹಣದಿಂದ ಪ್ರತ್ಯೇಕ ಧ್ವಜವುಳ್ಳ ಮೈಸೂರು ಮಹಾರಾಜರ ಆಧಿಪತ್ಯಕ್ಕೆ ಆತಂಕವೆನಿಸುವುದು ಎಂದು ಆಜ್ಞೆಯಲ್ಲಿ ತಿಳಿಸಿತ್ತು. ಆ ಆಜ್ಞೆ 1938ನೇ ಏಪ್ರಿಲ್ ಹತ್ತನೇ ತಾರೀಖಿನಿಂದ ಒಂದು ತಿಂಗಳ ವರೆಗೆ ಜಾರಿಯಲ್ಲಿರುವುದು ಎಂದೂ ತಿಳಿಸಿದ್ದರು.*

ಆ ಆಜ್ಞೆಯನ್ನು ಕೆಳಕಂಡ 25 ಜನ ಮುಖಂಡರ ಮೇಲೆ ಪ್ರಯೋಗಿಸಲಾಯಿತು: ಶ್ರೀಯುತರಾದ ಹೆಚ್. ಸಿ. ದಾಸಪ್ಪ, ಕೆ. ಟಿ. ಭಾಷ್ಯಂ, ಎಂ. ಎನ್. ಜೋಯಿಸ್, ಟಿ. ಸಿದ್ದಲಿಂಗಯ್ಯ, ಎಚ್. ಕೆ. ವೀರಣ್ಣಗೌಡ, ಕೆ. ಎಂ. ಕೃಷ್ಣಪ್ಪಗೌಡ, ಎ. ಜಿ. ಬಂದೀಗೌಡ, ಎಸ್. ಚೆನ್ನಯ್ಯ, ಪಾಲಹಳ್ಳಿ ಸೀತಾರಾಮಯ್ಯ,

---

*ಅಂದಿನ ಮೈಸೂರು ಜಿಲ್ಲಾ ಮ್ಯಾಜಿಸ್ಟ್ರೇಟರಾದ ಶ್ರೀ ಮೇಕ್ರಿಯವರು ಹೊರಡಿಸಿದ ಪ್ರತಿಬಂಧಕಾಜ್ಞೆಯ ಪೂರ್ಣ ಪಾಠ ಹೀಗಿದೆ:

'Where as it appears to be that the creation of the Flag Staff and the hoisting there on what is generally known as the Congress Flag in any public place within the limits of Sivapura village, Maddur taluk and in the vicinity thereof is likely to lead to a disturbance of public tranquility as exhibition of such flag might be construed by the public as derogatory to the sovereignty of Maharaja of Mysore which has a recognised flag of its own. I, in exercise of the powers affirm by Sec. 39, Mysore Poclic Act No. 5 of 1908 and of other powers enabling me in this behalf do hereby prohibit exhibition or hoisting of Congress Flag in any public place or places open to the public within Sivapura village and five miles around it for a period of one month from Sunday, Extract from 10th April 1938.'

(The Hindu, 12-4-1938)

ಎಸ್. ರಂಗರಾಮಯ್ಯ, ಟಿ. ಮರಿಯಪ್ಪ, ಟಿ. ಎಸ್. ರಾಜಗೋಪಾಲ ಅಯ್ಯಂಗಾರ್, ಎನ್. ಸಿ. ತಿಮ್ಮಾರೆಡ್ಡಿ, ವೀರಕೇಸರಿ ಸೀತಾರಾಮಶಾಸ್ತ್ರಿ, ತಗಡೂರು ರಾಮಚಂದ್ರರಾವ್, ಎಚ್. ಹೊನ್ನಯ್ಯ, ಸಾಲಿಗ್ರಾಮದ ಗಣಪತಿಶಾಸ್ತ್ರಿ, ಪಿ. ಗೋಪಾಲಕೃಷ್ಣ ಶೆಟ್ಟಿ, ಪಿ. ಸುಬ್ಬರಾವ್ ಉಪಾಧ್ಯ, ಅಗರಂ ರಂಗಯ್ಯ, ಎಂ. ಶಂಕರಯ್ಯ, ಚಂಗಲರಾಯರೆಡ್ಡಿ, ವಿ. ವೆಂಕಟಪ್ಪ, ವೈ. ಪಾರ್ಥನಾರಾಯಣ ಪಂಡಿತ್ ಮತ್ತು. ಪಿ. ತಿರುಮಲೇಗೌಡ.

ಮ್ಯಾಜಿಸ್ಟ್ರೇಟರ ಆಜ್ಞೆಯನ್ನು ಶಿವಪುರದ ಬೀದಿಗಳಲ್ಲಿ ಜನಜಂಗುಳಿ ಇದ್ದ ಕಡೆಗಳಲ್ಲೆಲ್ಲಾ ಟಾಂ ಟಾಂ ಹೊಡಿಸಿ ಪ್ರಚುರಪಡಿಸಲಾಯಿತು.

ರಾತ್ರಿಯ ಊಟ ಮುಗಿಯುತ್ತಿದ್ದಂತೆ ಜನರಲ್ಲಿ ಕಾತರ ಭಯ ಉಂಟು ಮಾಡುವ ಘಟನೆ ಸಂಭವಿಸಿತು. ಸುಮಾರು 600 ಜನ ಮೀಸಲು ಪಡೆಯ ಪೋಲೀಸರು ಬಂದೂಕಗಳ ಸಹಿತ ಶಿವಪುರಕ್ಕೆ ಪ್ರವೇಶಿಸಿದರು. ಈವರೆಗೆ ಸಾಮಾನ್ಯ ಪೋಲೀಸರು ಮಾತ್ರ ಇದ್ದರು. ರಿಜರ್ವ್ ಪೋಲೀಸ್ ಕಂಡಾಗ ಸಹಜವಾಗಿಯೇ ಭೀತಿಯ ವಾತಾವರಣ ಕವಿಯಿತು. ಅಲ್ಲದೆ ಶಿವಪುರದ ಸುತ್ತಳತೆ 2 ಮೈಲಿಗಳ ಒಳಗೆ ರಾಷ್ಟ್ರಧ್ವಜಾರೋಹಣ ಮಾಡಕೂಡದು, ಉಪನ್ಯಾಸ ಮಾಡಕೂಡದು ಎಂದು ಜಿಲ್ಲಾಧಿಕಾರಿಗಳು ಹೊರಡಿಸಿದ ಪ್ರತಿಬಂಧಕಾಜ್ಞೆಯನ್ನು ಪೋಲೀಸ್ ಅಧಿಕಾರಿಗಳು ಕಾರ್ಯಕಾರಿ ಸಮಿತಿಯವರ ಗಮನಕ್ಕೆ ತಂದರು. 25 ಮುಖಂಡರ ಮೇಲೆ ಬಂಧನದ ಆಜ್ಞೆ ಜಾರಿಮಾಡಿದರು. "ನಾವು ಸತ್ಯಾಗ್ರಹ ಮಾಡುತ್ತಿರುವುದು ಸರಕಾರದ ಸ್ಥಳವಲ್ಲ, ಖಾಸಗಿ ಜಮೀನು. ಧ್ವಜಾರೋಹಣ ಮಾಡುವುದು ನಮ್ಮ ಹಕ್ಕು. ನಮ್ಮ ಹಕ್ಕುಗಳನ್ನು ಮುರಿಯುವ ಸರಕಾರದ ಆಜ್ಞೆಗೆ ಧಿಕ್ಕಾರ. ನಾವು ಸತ್ಯಾಗ್ರಹವನ್ನು ಮುಂದುವರಿಸುತ್ತೇವೆ. ಧ್ವಜಾರೋಹಣ ಮಾಡುತ್ತೇವೆ. ಈಗಿರುವ ಯಾವ ಕಾರ್ಯಕ್ರಮವನ್ನೂ ನಿಲ್ಲಿಸುವುದಿಲ್ಲ. ನಮ್ಮ ಧರ್ಮವನ್ನು ನಾವು ಪಾಲಿಸುತ್ತೇವೆ, ನಿಮ್ಮ ಕರ್ತವ್ಯವನ್ನೂ ನೀವು ಮಾಡಿ" ಎಂದು ಮುಖಂಡರು ಪೋಲೀಸು ಅಧಿಕಾರಿಗಳಿಗೆ ಖಡಾಖಂಡಿತವಾಗಿ ಹೇಳಿಬಿಟ್ಟರು. ಈ ಸುದ್ದಿ ಕ್ಷಣಮಾತ್ರದಲ್ಲಿ ಎಲ್ಲ ಕಡೆಗೂ ಹರಡಿತು. ಜನರು ಅಲ್ಲಲ್ಲೇ ಗುಂಪು ಕೂಡಿ ಗುಸುಗುಸು ಚರ್ಚೆ ನಡೆಸಿದರು. ಮುಂದೇನಾಗುವುದೋ ಎಂದು ಎಲ್ಲರಿಗೂ ಭಯ, ಕುತೂಹಲ. ಮುಂದೇನು ಮಾಡಬೇಕೆಂತ ಮುಖಂಡರಿಗೂ ಯೋಚನೆಗಿಟ್ಟುಕೊಂಡಿತು.

ರಾತ್ರಿ ಒಂದು ಘಂಟೆಗೆ ಕಾರ್ಯಕಾರಿ ಸಮಿತಿಯ ಸಭೆ ಸೇರಿತು. ಪ್ರತಿಬಂಧಕಾಜ್ಞೆಯ ಬಗೆಗೆ ಎರಡು ಘಂಟೆಗಳ ದೀರ್ಘ ಕಾಲ ಚರ್ಚೆ ನಡೆಯಿತು. "ಶ್ರೀಮನ್ಮಹಾರಾಜರ ಕೃಪಾಶ್ರಯದಲ್ಲಿ ಜವಾಬ್ದಾರಿ ಸರ್ಕಾರ ಸ್ಥಾಪನೆಯೇ ಕಾಂಗ್ರೆಸ್ಸಿನ ಉದ್ದೇಶವಾಗಿದೆ. ಆದ್ದರಿಂದ ರಾಷ್ಟ್ರಧ್ವಜಾರೋಹಣದಿಂದ ಮಹಾರಾಜರ ಅಧಿಕೃತ ಧ್ವಜಕ್ಕೆ ಅವಮಾನ ಮಾಡಿದಂತಾಗುವುದಿಲ್ಲ. ರಾಷ್ಟ್ರಧ್ವಜ ಕಾಂಗ್ರೆಸ್ಸಿನ ಅವಿಭಾಜ್ಯ ಅಂಗ" ಎಂದು ಸಭೆ ತೀರ್ಮಾನಿಸಿತು. ಅನಂತರ ಒಂದು ಗೊತ್ತುವಳಿ

ಯನ್ನು ಸಿದ್ಧ ಮಾಡಲಾಯಿತು. "ರಾಷ್ಟ್ರಧ್ವಜವು ಮೈಸೂರು ಕಾಂಗ್ರೆಸ್ಸಿನ ಚಟು ವಟಿಕೆಗಳಿಗೆ ಮೊದಲಿಂದಲೂ ಸಂಬಂಧಿಸಿದೆ. ಇದು ಭಾರತ ರಾಷ್ಟ್ರೀಯ ಕಾಂಗ್ರೆಸ್ಸಿನ ಅಂಗವಾಗಿದೆ. ಕಾಂಗ್ರೆಸ್ಸಿನ ಅಧಿಕೃತ ಸಮಾರಂಭಗಳಲ್ಲೆಲ್ಲ ರಾಷ್ಟ್ರಧ್ವಜದ ಆರೋ ಹಣ ನಡೆಯುತ್ತಿದೆ. ಮೈಸೂರ್ ಕಾಂಗ್ರೆಸ್ ಸಂಪೂರ್ಣ ಜವಾಬ್ದಾರಿ ಸರ್ಕಾರ ಕ್ಕಾಗಿ ಹೋರಾಡುತ್ತಿದೆ. ಆದ್ದರಿಂದ ಕಾಂಗ್ರೆಸ್ ಬಳಸುತ್ತಿರುವ ರಾಷ್ಟ್ರಧ್ವಜಾ ರೋಹಣದಿಂದ ಮೈಸೂರಿನ ರಾಜರ ಸ್ವಾತಂತ್ರ್ಯಕ್ಕಾಗಲೀ ಅವರ ಧ್ವಜಕ್ಕಾಗಲೀ ಯಾವ ರೀತಿಯಿಂದಲೂ ಅಡ್ಡಿಪಡಿಸಿದಂತಾಗುವುದಿಲ್ಲ. ರಾಷ್ಟ್ರಕೂಟಕ್ಕೆ ಅವಮಾನ ವಾಗದಂತೆ ಕಾಪಾಡುವುದು ಪ್ರಜೆಗಳ ಕರ್ತವ್ಯವಾಗಿದೆ" ಆದ್ದರಿಂದ ಮೊದಲೇ ನಿಗದಿಪಡಿಸಿದ್ದಂತೆ ಕಾರ್ಯಕ್ರಮವನ್ನು ಮುಂದುವರಿಸಬೇಕು. ಏನೇ ಅಡ್ಡಿ ಆತಂಕಗಳು ಬಂದರೂ ರಾಷ್ಟ್ರಧ್ವಜಾರೋಹಣ ಮಾಡಲೇಬೇಕು ಎಂದು ಕಾರ್ಯ ಕಾರಿ ಸಮಿತಿಯಲ್ಲಿ ನಿರ್ಣಯವಾಯಿತು.

ಪ್ರಾರಂಭದಲ್ಲಿ ಸ್ವಾರಸ್ಯಕರವಾದ ಚರ್ಚೆ ನಡೆಯಿತು. "ಪ್ರತಿಬಂಧಕಾಜ್ಞೆ ಇರುವುದರಿಂದ ಧ್ವಜಾರೋಹಣ ಬೇಡ, ಬರೀ ಸಭೆ ನಡೆಸೋಣ" ಎಂದು ಕೆಲವರು ವಾದಿಸಿದರು. ಆದರೆ ಇಂಥವರ ಸಂಖ್ಯೆ ಕಡಮೆ ಇತ್ತು. ಇದಕ್ಕೆ ವಿರೋಧ ವಾಗಿದ್ದವರೇ ಹೆಚ್ಚು. "ನಾವು ಸರಕಾರ ಏನು ಆಜ್ಞೆ ಮಾಡುತ್ತೋ ಅದನ್ನು ಮುರಿಯೋದಕ್ಕೆ ಇರೋ ಸತ್ಯಾಗ್ರಹಿಗಳು. ಸರಕಾರಕ್ಕೆ ಹೆದರಿಕೊಂಡರೆ ನಾವು ಅಧಿವೇಶನ ಕರೆದು ಪ್ರಯೋಜನವಿಲ್ಲ. ನಾವು ಸರಕಾರದ ಆಜ್ಞೆಯನ್ನು ಉಲ್ಲಂಘಿ ಸಲೇಬೇಕು, ಧ್ವಜಾರೋಹಣವನ್ನು ಮಾಡಲೇಬೇಕು" ಎಂದು ಶ್ರೀ ಎಂ. ಎನ್. ಜೋಯಿಸರು ಗುಡಗಿದರು.

"ಸೆಕ್ಷನ್ ಜಾರಿಮಾಡಿದ್ದರೂ ಬ್ಯಾನ್ ಮುರಿಯಲೇಬೇಕು. ಅದನ್ನು ನಿಲ್ಲಿಸ ಬಾರದು" ಎಂದು ಶ್ರೀಮತಿಯರಾದ ಟಿ. ಸುನಂದಮ್ಮ, ಯಶೋಧರಮ್ಮ ದಾಸಪ್ಪ ಮೊದಲಾದ ಸ್ತ್ರೀಯರು ದನಿಗೂಡಿಸಿದರು. "ಧ್ವಜಾರೋಹಣ ಮಾಡಬೇಕೆಂದಿರುವ ಸ್ಥಳ ಸರಕಾರದ್ದಲ್ಲ, ಖಾಸಗಿ ಸ್ಥಳ. ಪ್ರತಿಬಂಧಕಾಜ್ಞೆ ಕರಾಳವಾದದು. ಅದು ಜನರ ಹಕ್ಕು ಬಾಧ್ಯತೆಯನ್ನು ಹತ್ತಿಕ್ಕುತ್ತದೆ. ಆದ್ದರಿಂದ ಮೊದಲೇ ತೀರ್ಮಾ ನಿಸಿದಂತೆ ಧ್ವಜಾರೋಹಣ ಮಾಡುವುದೇ ಸರಿ" ಎಂಬುದಕ್ಕೆ ಬಹುಮತ ಸಿಕ್ಕಿತು. ಈ ತೀರ್ಮಾನವನ್ನು ದಾವಣಗೆರೆಯ ಶ್ರೀ ಡಿ. ಎಚ್. ಚಂದ್ರಶೇಖರಯ್ಯನವರು ಒಪ್ಪ ಲಿಲ್ಲ. ಆದರೂ ಸಮಿತಿಯವರು ತಮ್ಮ ನಿರ್ಧಾರವನ್ನು ಬದಲಿಸಲಿಲ್ಲ.

"ನಾನು ಬಾವುಟ ಹಾರಿಸುತ್ತೇನೆ. ಮುಂದಿನ ಕಾರ್ಯಕ್ರಮಗಳನ್ನು ನೀವು ನೋಡಿಕೊಳ್ಳಿ" ಎಂದು ಶ್ರೀಮತಿ ಟಿ. ಸುನಂದಮ್ಮನವರು ಅಧ್ಯಕ್ಷರಲ್ಲಿ ಪ್ರಾರ್ಥಿಸಿ ಕೊಂಡರು.

"ನಿಮಗೆ ಆ ಧೈರ್ಯವಿದೆಯೇ ?" ಶ್ರೀ ಟಿ. ಸಿದ್ಧಲಿಂಗಯ್ಯನವರು ಕೇಳಿ ದರು.

ಆವೇಶದಿಂದ ಸುನಂದಮ್ಮ ಹೇಳಿದರು: "ಇದೆ. ಧೈರ್ಯವಿದೆ. ನಾನೇ ಧ್ವಜಾರೋಹಣ ಮಾಡ್ತೀನಿ. ಈಗಿರುವ ಯಾವ ಕಾರ್ಯಕ್ರಮಾನು ನಿಲ್ಲಿಸ್ಬೇಡಿ. ಧ್ವಜಾರೋಹಣ ಯಾಕ್ಮಾಡ್ಬಾರ್ದು? ಮಾಡಿದ್ರೆ 144ನೇ ಸೆಕ್ಷನ್ ಜಾರಿ ಮಾಡ್ತಾರೆ. ಮಾಡ್ಲಿ. ನಾನು ಬ್ರೇಕ್ ಮಾಡ್ತೇನೆ. ಅರೆಸ್ಟ್ ಮಾಡಿದ್ರೆ ನಾನೊಬ್ಬಳು ಅರೆಸ್ಟ್ ಆಗ್ತೇನೆ. ನೀವೆಲ್ಲ ಇರೋದರಿಂದ ಕಾರ್ಯಕ್ರಮಗಳೆಲ್ಲ ಸುಸೂತ್ರವಾಗಿ ನಡೆಯುತ್ತೆ. ಅರೆಸ್ಟಾಗಿ ನಾನೊಬ್ಬಳು ಜೈಲಿಗೆ ಹೋದ್ರೆ ಕಾರ್ಯನಿಯಾಮಕ ಸಮಿತಿಗಾಗಲೀ ಕಾಂಗ್ರೆಸ್ ಅಧಿವೇಶನಕ್ಕಾಗಲೀ ಏನೂ ತೊಂದರೆ ಆಗಲ್ಲ. ಇದರಿಂದ ನಮ್ಮ ಕೆಲಸಾನೂ ಮಾಡಿದ ಹಾಗಾಗುತ್ತೆ. ನಾನೇ ಧ್ವಜಾರೋಹಣ ಮಾಡ್ತೇನೆ."

ಶ್ರೀಮಂತಿ ಟಿ. ಸುನಂದಮ್ಮನವರ ದಿಟ್ಟ ನಿಲುವು, ದೇಶಾಭಿಮಾನ ಸ್ತ್ರೀ ಪುರುಷರಿಬ್ಬರಿಗೂ ಮೆಚ್ಚಿಕೆಯಾಯಿತು. ಸತ್ಯಾಗ್ರಹಕ್ಕೆ ತೀರ್ಮಾನ ಮಾಡಿದಾಗಲೇ ಇಂಥದ್ದೆಲ್ಲ ಸಂಭವಿಸಬಹುದೆಂಬ ಕಲ್ಪನೆ ಎಲ್ಲರಿಗೂ ಇತ್ತು, ಅದಕ್ಕೆಲ್ಲ ಸಿದ್ಧವಾಗಿಯೇ ಎಲ್ಲರೂ ಮುಂದೆ ಬಂದಿದ್ದರು, ಸುನಂದಮ್ಮನವರು ಹೇಳಿದ ಹಾಗೆ ಸ್ತ್ರೀಯರೇ ಧ್ವಜಾರೋಹಣ ಮಾಡಿದರೆ ಹೇಗೆ ಎಂಬುದರ ಬಗೆಗೆ ಚರ್ಚೆಯಾಯಿತು. ಶ್ರೀಮತಿಯರಾದ ಸುನಂದಮ್ಮ, ಯಶೋಧರಮ್ಮ ದಾಸಪ್ಪ ಮೊದಲಾದ ಸ್ತ್ರೀಯರ ಧೈರ್ಯ ಅಸಾಧಾರಣವಾದುದು. ಅವರೆಲ್ಲ ಯಾವುದಕ್ಕೂ ಹೆದರದೆ ಮುಂದಾಗಿ ಏನೇ ಅಡ್ಡಿಗಳು ಬಂದರೂ ಎದುರಿಸುವುದಕ್ಕೆ ಸಿದ್ಧರಾಗಿದ್ದರು. ಹಾಗೆಂದು ಅವರನ್ನೇ ಮುಂದೆ ಬಿಟ್ಟರೆ ಹೇಗೆ? ಸ್ತ್ರೀಯರಂತೆಯೇ ಹೆಚ್ಚು ಧೈರ್ಯಶಾಲಿಗಳೂ ಪ್ರಸಿದ್ಧ ಮುಖಂಡರೂ ಸಾಕಷ್ಟಿದ್ದರು. ಪ್ರಮುಖ ಮುಖಂಡರನ್ನೇ ಮುಂದೆ ಬಿಟ್ಟರೆ ಚಳುವಳಿಗೆ ಒಂದು ಬಲ ಬರುತ್ತದೆ; ಅಂಥವರನ್ನು ದಸ್ತಗಿರಿ ಮಾಡುವುದಕ್ಕೆ, ಅವರ ಮೇಲೆ ಗೋಲಿಬಾರ್ ಮಾಡುವುದಕ್ಕೆ ಸರಕಾರ ಹೆದರಬಹುದು. ಒಂದು ವೇಳೆ ಅನಾಹುತ ಸಂಭವಿಸಿದರೂ ಚಳುವಳಿಯು ಕಾವು ಕಾಳ್ಗಿಚ್ಚಿನಂತೆ ಹಬ್ಬುವುದು ಖಂಡಿತ. ಅಲ್ಲದೆ ಧ್ವಜಾರೋಹಣದ ಕಾರ್ಯಕ್ರಮ ಇಡೀ ಅಧಿವೇಶನದಲ್ಲೇ ಬಹಳ ಮುಖ್ಯವಾದ ಕಾರ್ಯಕ್ರಮ 1931ರಲ್ಲಿ ಬೆಂಗಳೂರು ಸುಭಾಷ್ ನಗರದ ಕೆರೆಯ ಅಂಗಳದಲ್ಲಿ ಜವಹರ್‌ಲಾಲ್ ನೆಹರೂ ಅವರು ಧ್ವಜಾರೋಹಣ ಮಾಡಿಹೋದ ಮೇಲೆ ರಾತ್ರಿಯ ಹೊತ್ತು ಪೋಲೀಸರು ಧ್ವಜಸ್ತಂಭ ಉರುಳಿಸಿ ರಾಷ್ಟ್ರಧ್ವಜಕ್ಕೆ ಅವಮಾನ ಮಾಡಿದ್ದರು. ಹಾಗೇನಾದರೂ ಇಲ್ಲೂ ಆದರೆ ರಾಷ್ಟ್ರಮಟ್ಟದಲ್ಲಿ ಸತ್ಯಾಗ್ರಹವನ್ನು ಸರಿಯಾಗಿ ಮಾಡಲಿಲ್ಲ. ಧ್ವಜಗೌರವವನ್ನು ಕಾಪಾಡಲಿಲ್ಲ ಎಂದು ಕೆಟ್ಟ ಹೆಸರು ಬಂದು, ಮುಖಂಡರು ತಲೆತಗ್ಗಿಸಬೇಕಾಗುತ್ತದೆ. ಮೊದಲೇ ಮೈಸೂರಿನವರಿಗೆ ಸತ್ಯಾಗ್ರಹ ಮಾಡುವ ಶಕ್ತಿಯಿಲ್ಲ ಎಂಬ ಅಪವಾದವಿದೆ. ಸ್ತ್ರೀಯರನ್ನು ಧ್ವಜಾರೋಹಣಕ್ಕೆ ಮುಂದೆ ಬಿಟ್ಟು ಮುಖಂಡರು ಹಿಂದೆ ಉಳಿದರೆ ಮಹಾತ್ಮ ಗಾಂಧೀಜಿಯವರು ತಪ್ಪು ತಿಳಿದುಕೊಳ್ಳಬಹುದು. ಧ್ವಜಸತ್ಯಾಗ್ರಹ ಯಶಸ್ವಿಯಾದರೆ ದೇಶೀಯ ಸಂಸ್ಥಾನಗಳಲ್ಲಷ್ಟೇ ಅಲ್ಲ ಅಖಿಲ ಭಾರತದ ಮಟ್ಟದಲ್ಲಿ ಹೆಮ್ಮೆಪಡುವ ವಿಷಯವಾಗುತ್ತದೆ. ಆದ್ದರಿಂದ ಗಂಡಸರೇ

ಧ್ವಜಾರೋಹಣ ಮಾಡುವುದು ಸರಿ. ಒಂದು ವೇಳೆ ಸಾವು ಸಂಭವಿಸಿದರೂ ಅದಕ್ಕೆ ಸಿದ್ಧರಾಗಿರುವವರು ಆಗಬೇಕು. ಒಬ್ಬರಿಂದ ಅದು ನೆರವೇರದಿದ್ದರೆ ಅದಕ್ಕೆ ಬೇರೆ ಯಂವರು ಸಿದ್ಧರಾಗಿ ಮುಂದೆ ಬರಬೇಕು ಎಂದು ಕಾರ್ಯನಿರ್ವಾಹಕ ನಿಯಾಮಂಕ ಸಮಿತಿಯಂವರು ಕೂಲಂಕಷವಾಗಿ ಚರ್ಚಿಮಾಡಿ ಅಧಿವೇಶನದ ಅಧ್ಯಕ್ಷರಾದ ಶ್ರೀ ಟಿ. ಸಿದ್ದಲಿಂಗಯ್ಯನವರೇ ಧ್ವಜಾರೋಹಣ ಮಾಡುವುದೆಂದು ತೀರ್ಮಾನಿಸಿದರು. ಶ್ರೀ ಸಿದ್ದಲಿಂಗಯ್ಯನವರು ದಸ್ತಗಿರಿಯಾದರೆ ಅವರ ಸ್ಥಾನವನ್ನು ಯಾರು ಅಲಂಕರಿಸಬೇಕು, ಧ್ವಜಸತ್ಯಾಗ್ರಹ ನಡೆಯುವವರೆಗೆ ಪ್ರತಿನಿತ್ಯ ಯಾರ್‍ಯಾರು ಧ್ವಜಾರೋಹಣದ ಕಾರ್ಯಕ್ರಮವನ್ನು ನೆರವೇರಿಸಬೇಕು, ಪ್ರತಿನಿತ್ಯ ಹೇಗೆ ಧ್ವಜಕಾಯಬೇಕು, ಪರಿಸ್ಥಿತಿ ಬಿಗಡಾಯಿಸಿದಾಗ ಸ್ವಯಂ ಸೇವಕರು, ಸ್ವಯಂ ಸೇವಿಕೆಯರು, ಕಾರ್ಯಕರ್ತರು, ಮುಖಂಡರು ಹೇಗೆ ನಡೆದುಕೊಳ್ಳಬೇಕು ಮೊದಲಾದ ವಿಷಯಗಳ ಬಗೆಗೆ ನಿಶ್ಚಿತವಾದ ತೀರ್ಮಾನಗಳನ್ನು ಕೈಗೊಳ್ಳಲಾಯಿತು.

ಕಾರ್ಯನಿರ್ವಾಹಕ ಸಮಿತಿಯ ತೀರ್ಮಾನಗಳಿಂದ ಸತ್ಯಾಗ್ರಹಿಗಳಿಗೆ ಹೊಸ ಹುರುಪು ಬಂದಿತು ; ಏನೇ ಬಂದರೂ ಒಂದು ಕೈನೋಡಿಯೇ ಬಿಡೋಣ ಎಂಬ ಧೈರ್ಯ ಬಂತು. ಏನೋ ಒಂದು ರೀತಿಯ ಸಮರ ಸಿದ್ಧತೆಯ ವಾತಾವರಣ ಕಾಣಿಸಿಕೊಂಡಿತು. ಯಾವ ಕ್ಷಣದಲ್ಲಿ ಏನಾಗುವುದೋ ಎಂಬ ಭಯ ಮಾತ್ರ ಎಲ್ಲರನ್ನೂ ಒಳಗೊಳಗೇ ಕೊರೆಯುತ್ತಿತ್ತು.

ಮಧ್ಯ ರಾತ್ರಿಯ ಸಮಯದಲ್ಲಿ ಬಂದೂಕಧಾರಿಗಳಾದ 600 ಜನ ರಿಜರ್ವ್ ಪೋಲೀಸ್‌ನವರು, ಬಲವಾದ ಲಾಠಿಯನ್ನು ಹಿಡಿದುಕೊಂಡಿದ್ದ 1,000ಜನ ಪೋಲೀಸರನ್ನು ಶಿವಪುರದಲ್ಲಿ ಕೂಡಿಕೊಂಡ ಸ್ವಲ್ಪಹೊತ್ತಿಗೆಲ್ಲ ಅನೇಕ ಸುದ್ದಿಗಳು ಬಿರುಗಾಳಿಯಂತೆ ಹರಡಿದುವು. ಪೋಲೀಸರು ಅಸಂಖ್ಯವಾಗಿ ಬಂದಿರುವುದರಿಂದ ಗೋಳಿಬಾರು ಆಗುವುದೆಂದೂ ಜನರು ಶಿವಪುರವನ್ನು ಬಿಟ್ಟು ಹೋಗಬೇಕೆಂದೂ ಜನರಿಗೆ ಭಯ ಹುಟ್ಟಿಸುವ ಸುಳ್ಳುಸುದ್ದಿ ಹರಡುವ ವಿಫಲ ಪ್ರಯತ್ನ ನಡೆದುದುಂಟು. ಜನರಿಗೆ ಧೈರ್ಯಹೇಳಿ, ಯಾವ ಗಲಾಟೆಯನ್ನೂ ಮಾಡದೆ ಶಾಂತಿಯಿಂದಿರಬೇಕೆಂದು ಮುಖಂಡರು ಕೇಳಿಕೊಂಡರು. ಏನೇ ಆದರೂ ಶಿವಪುರದಿಂದ ಹೊರಟುಹೋಗುವುದಕ್ಕೆ ಜನರು ಸಿದ್ಧರಿರಲಿಲ್ಲ. ಮೀಸಲು ಪಡೆಯ ಪೋಲೀಸರು ಧ್ವಜಸ್ತಂಭವನ್ನು ಉರುಳಿಸುವರು, ಧ್ವಜ ಮೈದಾನದ ಸುತ್ತ ಪೋಲೀಸರು ಕಾವಲು ನಿಂತು ಧ್ವಜ ರಕ್ಷಣೆಗೆ ಯಾರೂ ಬರದಂತೆ ತಡೆಯುವರು, ಅತಿಕ್ರಮಿಸಿದರೆ ಸುಟ್ಟುಬಿಡುವರು ಎಂಬ ಭಯಂಕರವಾದ ಸುದ್ದಿಗಳು ಹರಡಿದುವು. ಇವು ಜನಸಾಮಾನ್ಯರಿಗಿಂತ ಜನ ನಾಯಕರನ್ನು ತಳಮಳಗೊಳಿಸಿದುವು. ಸುದ್ದಿ ನಿಜವಿರಲಿ ಸುಳ್ಳಿರಲಿ ನಮ್ಮ ಎಚ್ಚರದಲ್ಲಿ ನಾವಿರುವುದು ಒಳ್ಳೆಯದೆಂದು ಧ್ವಜ ರಕ್ಷಣೆಗೆ ಕ್ರಮ ಕೈಗೊಂಡರು.

ಅಧಿವೇಶನಕ್ಕಾಗಿ ಮಹಿಳಾ ವಿಭಾಗವೊಂದು ಸ್ಥಾಪನೆಯಾಗಿತ್ತು. ಇದರ ಮುಖಂಡರು ಶ್ರೀಮತಿ ಯಶೋಧರಮ್ಮ ದಾಸಪ್ಪ ಅವರು. ಅವರ ನೇತೃತ್ವದಲ್ಲಿ

ಸ್ತ್ರೀ ಸತ್ಯಾಗ್ರಹಿಗಳು, ಸ್ವಯಂ ಸೇವಿಕೆಯರು ಧ್ವಜಸ್ತಂಭಕ್ಕೆ ಅಪಾಯವಾಗದಂತೆ, ಯಾರೂ ಹತ್ತಿರಕ್ಕೆ ಬರದಂತೆ ಧ್ವಜದ ಸುತ್ತಲೂ ಕಾವಲು ಕುಳಿತರು. ಧ್ವಜ ಮತ್ತು ಸ್ತ್ರೀ ಸತ್ಯಾಗ್ರಹಿಗಳ ರಕ್ಷಣೆಗಾಗಿ ಸುತ್ತಲೂ ಸತ್ಯಾಗ್ರಹಿಗಳು, ಸ್ವಯಂ ಸೇವಕರು ಕಾವಲು ಕುಳಿತರು. ಅವರ ಸುತ್ತಲೂ ಅನೇಕ ಜನರು ರಕ್ಷಣೆಗೆ ಸಿದ್ಧರಾದರು. ಈ ಮೂರು ಕೋಟೆಗಳನ್ನು ಭೇದಿಸಿ ಧ್ವಜದ ಹತ್ತಿರಕ್ಕೆ ಹೋಗಲು ಯಾರಿಂದಲೂ ಸಾಧ್ಯವಾಗುವಂತಿರಲಿಲ್ಲ. ಮಲಗಿಬಿಟ್ಟರೆ ಎಲ್ಲಿ ಅನಾಹುತ ನಡೆಯುವುದೋ ಎಂದು ಇಡೀ ರಾತ್ರಿ ಎಲ್ಲರೂ ಎಚ್ಚೆತ್ತು ಕುಳಿತರು. ಬೇಸಗೆಯ ಸಮಯ. ಮಳೆ ಗಾಳಿ ಇರಲಿಲ್ಲ. ರಾತ್ರಿಯ ಹೊತ್ತಾದುದರಿಂದ ಸ್ವಲ್ಪ ತಂಗಾಳಿಯು ಬೀಸುತ್ತಿತ್ತು. ಸಾವಿರಾರು ಜನ ಧ್ವಜ ಮೈದಾನದಲ್ಲಿ ಸೇರಿದರು. ದೂರದಿಂದ ನಡೆದುಕೊಂಡು ಬಂದು ಆಯಾಸಗೊಂಡಿದ್ದ ಕೆಲವು ಪ್ರೇಕ್ಷಕರು ಅಲ್ಲೇ ಮಲಗಿಕೊಂಡರು. ಯಾವ ಕ್ಷಣದಲ್ಲಿ ಏನಾಗುವುದೋ ಎಂಬ ಭಯವಿದ್ದ ಜನರು ಅರೆನಿದ್ದೆ ಅರೆ ಎಚ್ಚರದಲ್ಲಿ ರಾತ್ರಿಯನ್ನು ಕಳೆದರು.

ಕೊನೆಗೂ ಧ್ವಜಾರೋಹಣದ ದಿನ ಕಾಲಿಟ್ಟಿತು.

ಬಂದೂಕಗಳ ಮುಂದೆ ಧ್ವಜಾರೋಹಣ

ಹಿಂದಿನ ರಾತ್ರಿ ಹರಡಿದ ಸುಳ್ಳು ಸುದ್ದಿಗಳು ನಿಜವಾಗಲಿಲ್ಲ. ಧ್ವಜ ಸ್ತಂಭಕ್ಕೆ ಅಪಾಯವಾಗಲಿಲ್ಲ. ಅಸಂಖ್ಯಾತ ಜನರನ್ನು ಎದುರುಹಾಕಿಕೊಳ್ಳುವುದಕ್ಕೆ ಪೋಲೀಸು ಅಧಿಕಾರಿಗಳು ಧೈರ್ಯಮಾಡಲಿಲ್ಲ. ಇಲ್ಲದಿದ್ದರೆ ಏನೆಲ್ಲ ಅನಾಹುತಗಳು ಸಂಭವಿಸುತ್ತಿದ್ದುವು. ರಾತ್ರಿಯೆಲ್ಲ ಹೆಚ್ಚು ಕಡಮೆ ಎಚ್ಚರಾಗಿದ್ದ ಶಿವಪುರಕ್ಕೆ ಬೆಳಗಾಯಿತು.

ಏಪ್ರಿಲ್ 11, 1938 : ಧ್ವಜಸತ್ಯಾಗ್ರಹ

11-4-1938, ಮೈಸೂರಿನ ಇತಿಹಾಸದಲ್ಲಿ ಚಿರಸ್ಮರಣೀಯವಾದ ದಿನ ; ಸಾವಿರಾರು ಸತ್ಯಾಗ್ರಹಿಗಳಿಗೆ ಸ್ಫೂರ್ತಿ ನೀಡಿದ ದಿನ ; ಮೈಸೂರಿನ ಇತಿಹಾಸವನ್ನೇ ಬದಲಾಯಿಸಿದ ದಿನ ; ಮೈಸೂರಿನ ಜನರ ಶಕ್ತಿ ಸಾಮರ್ಥ್ಯ ದಕ್ಷತೆ ದೇಶಪ್ರೇಮ ಸಂಘಟನಾ ಶಕ್ತಿಯನ್ನು ಇಡೀ ದೇಶಕ್ಕೆ ಪ್ರದರ್ಶಿಸಿದ ದಿನ ; ಜನಜಾಗೃತಿಯಲ್ಲಿ ಸತ್ಯಾಗ್ರಹ ಚಳುವಳಿಗಳಲ್ಲಿ ಮೈಸೂರಿಗೆ ವಿಶಿಷ್ಟ ಸ್ಥಾನವನ್ನು ದೊರಕಿಸಿ ಕೊಟ್ಟ ದಿನ.

ಹೊತ್ತು ಹುಟ್ಟುವುದಕ್ಕೆ ಮೊದಲೇ ಜನರೆಲ್ಲ ತಮ್ಮ ಬೆಳಗಿನ ವಿಧಿಗಳನ್ನು ಮುಗಿಸಿಕೊಂಡು ಧ್ವಜ ಮೈದಾನಕ್ಕೆ ಧಾವಿಸಿದರು. ಧ್ವಜದ ಕಾವಲಿಗೆ ಕುಳಿತಿದ್ದವರೂ ಕೂಡ ಸರದಿಯ ಮೇಲೆ ಬೇರೆಯವರನ್ನು ನೇಮಿಸಿ ಹೋಗಿ ತಮ್ಮ ದಿನ ನಿತ್ಯದ ಕ್ರಿಯೆಗಳನ್ನು ಮುಗಿಸಿ ಬಂದರು. ಮುಖಂಡರೆಲ್ಲ ಸಿದ್ಧವಾದರು. ಸ್ವಯಂ ಸೇವಕರೂ ಸಿದ್ಧರಾಗಿ ಧ್ವಜ ಮೈದಾನಕ್ಕೆ ಬಂದರು.

ಬಹಿರಂಗ ಅಧಿವೇಶನದ ಮುಂಭಾಗದಲ್ಲೇ ಧ್ವಜ ಮೈದಾನ. ಮಟ್ಟಸವಾದ ವಿಶಾಲವಾದ ಸ್ಥಳದಲ್ಲಿ ಧ್ವಜ ಮೈದಾನ ಸಿದ್ಧವಾಗಿತ್ತು. ಸುತ್ತಲೂ ರೇಖೆಗಳನ್ನು ಎಳೆದು ಅದರಿಂದ ಒಳಗಡೆಗೆ ಯಾರೂ ಪ್ರವೇಶಿಸದಂತೆ ಗುರುತು ಮಾಡಿತ್ತು. ಪ್ರೇಕ್ಷಕರಾಗಿ ಬಂದಿದ್ದ ಮುಗ್ಧ ಹಳ್ಳಿಗರು ತೊಂದರೆಗೆ ಸಿಕ್ಕಿಕೊಳ್ಳಬಾರದೆಂಬುದು ಉದ್ದೇಶ. ಆದಷ್ಟು ದೂರದಲ್ಲಿ ಅವರು ನಿಲ್ಲುವಂತೆ ಏರ್ಪಡಿಸಿತ್ತು. ಧ್ವಜ

ವೇದಿಕೆಯನ್ನಿಡುವ ಸ್ಥಳ, ಅಧ್ಯಕ್ಷರು ಧ್ವಜಾರೋಹಣ ಮಾಡುವ ಸ್ಥಳ, ಸ್ವಯಂ ಸೇವಕರು, ಮುಖಂಡರು ಮೊದಲಾದವರು ನಿಲ್ಲುವ ಸ್ಥಳಗಳನ್ನು ಸೂಚಿಸಲಾಗಿತ್ತು. ಧ್ವಜ ಮೈದಾನದ ಮಧ್ಯದಲ್ಲಿ ಸಕಲ ಪೂಜಾ ಮರ್ಯಾದೆಗಳೊಡನೆ ಕಲಶ ಸಮೇತ ವಾಗಿ 60 ಅಡಿ ಎತ್ತರದ ಧ್ವಜಸ್ತಂಭವನ್ನು ನೆಟ್ಟಿತ್ತು. ಇದು ಅಡಿಕೆ ಮರದ್ದು. ಮೇಲಿನ ತುದಿಯಲ್ಲಿ ಪುಷ್ಪ ಸಮೂಹದೊಡನೆ ಮಡಿಸಿ ಕಟ್ಟಿದ್ದ ರಾಷ್ಟ್ರಧ್ವಜ. ಆರೋಹಣಕ್ಕೆ ಅನುಕೂಲವಾಗಿದ್ದಂತೆ ಕಟ್ಟಿದ್ದ ನೂಲಿನ ಹಾರದ ಮತ್ತೊಂದು ತುದಿಯಲ್ಲಿ ಕೆಳಭಾಗದಲ್ಲಿ ಮರಕ್ಕೆ ಸುತ್ತಿತ್ತು. ಧ್ವಜಸ್ತಂಭದ ಸುತ್ತಲೂ ಒಂದೂವರೆ ಅಡಿ ಎತ್ತರದ ವಿಶಾಲವಾದ ವೇದಿಕೆ. ಇದರ ಮೇಲೆ ನಿಂತುಕೊಂಡು ಅಧ್ಯಕ್ಷರು ಧ್ವಜಾರೋಹಣ ಮಾಡಬೇಕು. ಧ್ವಜಸ್ತಂಭ ಮತ್ತು ವೇದಿಕೆಯನ್ನು ಖಾದಿ ಒಟ್ಟೆಯಿಂದ ಅಲಂಕಾರ ಮಾಡಿತ್ತು. ಈಗಲೂ ಧ್ವಜಾರೋಹಣ ಮಾಡುವುದಕ್ಕೆ ಪೋಲೀಸರು ಅವಕಾಶ ಕೊಡುವುದಿಲ್ಲ ಎಂಬ ಭೀತಿ ಕೆಲವರಲ್ಲಿತ್ತು. ಧ್ವಜಾರೋಹ ಣದ ಸಂದರ್ಭದಲ್ಲಿ ಯಾರ್ಯಾರು ಹೇಗೆ ಹೇಗೆ ನಡೆದುಕೊಳ್ಳಬೇಕೆಂಬುದರ ಬಗೆಗೆ ಮೊದಲೇ ಮಾರ್ಗದರ್ಶನ ನೀಡಲಾಗಿತ್ತು.

ಬೆಳಗ್ಗೆ 8 ಗಂಟೆಗೆ ಧ್ವಜಾರೋಹಣ ಇದು ಯಶಸ್ವಿಯಾದರೆ ಎಲ್ಲವೂ ಯಶಸ್ವಿಯಾದಂತೆಯೇ. ಇದು ನಡೆಯದಿದ್ದರೆ ಎಲ್ಲವೂ ವ್ಯರ್ಥವಾಗುವುದು. ಹಿಂದಿನ ದಿನ ಪ್ರತಿಬಂಧಕಾಜ್ಞೆಯನ್ನು ಹೊರಡಿಸಿದ್ದರೂ ಧ್ವಜಸತ್ಯಾಗ್ರಹದ ಏರ್ಪಾಟುಗಳು ಸದ್ದಿಲ್ಲದಂತೆ ಆದರೆ ಉತ್ಸಾಹ ಉದ್ವೇಗಗಳ ಸಹಿತವಾಗಿ ನಡೆಯು ತ್ತಿದ್ದುವು. ಹಿಂದಿನ ದಿನ ಮಧ್ಯರಾತ್ರಿಯಲ್ಲಿ ಸೇರಿ ಕೂಲಂಕಷವಾಗಿ ಚರ್ಚಿಸಿದ ಕಾರ್ಯಕಾರಿ ಸಮಿತಿಯವರು ಏನೇ ಆಗಲಿ ರಾಷ್ಟ್ರಧ್ವಜವನ್ನು ಹಾರಿಸಲೇಬೇಕೆಂದೂ ತಮ್ಮ ಆತ್ಮಗೌರವವನ್ನು ಕಾಪಾಡಿಕೊಳ್ಳಬೇಕೆಂದೂ ತೀರ್ಮಾನಿಸಿದ್ದರು. ಧ್ವಜ ಸತ್ಯಾಗ್ರಹದ ಸಂದರ್ಭದಲ್ಲಿ ಹುಟ್ಟಬಹುದಾದ ಸಮಸ್ಯೆಗಳಿಗೆಲ್ಲ ನಿರ್ದಿಷ್ಟವಾದ ಪರಿ ಹಾರಗಳನ್ನೂ ಪರ್ಯಾಲೋಚಿಸಿದ್ದರು. ಎಂತಹ ಪರಿಸ್ಥಿತಿಗೂ ಕಾಂಗ್ರೆಸ್ ಕಾರ್ಯ ಕರ್ತರು ಸಿದ್ಧರಾಗಿದ್ದರು.

ಬೆಳಗ್ಗೆ 8 ಗಂಟೆಗೆ ಸ್ವಲ್ಪ ಸಮಯವಿದೆ ಎನ್ನುವಾಗ ಪೋಲೀಸ್ ಅಧಿಕಾರಿ ಗಳು ಧ್ವಜ ಮೈದಾನದ ಹತ್ತಿರಕ್ಕೆ ಬಂದು ನಿಂತರು. ಫ್ರೆಂಚ್ ರಾಕ್ (ಈಗಿನ ಪಾಂಡವಪುರ) ಪೋಲೀಸ್ ಸೂಪರಿನ್‌ಟೆನ್‌ಡೆಂಟ್ ಶ್ರೀ ಮತ್ತೋಜಿರಾವ್ ಸಿಂಧ್ಯ, ಮಂಡ್ಯದ ಸಬ್ ಡಿವಿಜನ್ ಆಫೀಸರ್ ಶ್ರೀ ಬಿ. ಬೀರಪ್ಪ, ಸಬ್ ಇನ್‌ಸ್ಪೆಕ್ಟರ್ ಶ್ರೀ ರಾಜಶೇಖರಯ್ಯ, ಸಬ್ ಇನ್‌ಸ್ಪೆಕ್ಟರ್ ಶ್ರೀ ಬಸವರಾಜೇ ಅರಸ್, ರಿಜರ್ವ್ ಪೋಲೀಸ್ ಇನ್‌ಸ್ಪೆಕ್ಟರ್ ಶ್ರೀ ಎ. ಎ. ಪರಡೂರ್ ಅವರುಗಳು ಶಸ್ತ್ರ ಸಜ್ಜಿತರಾಗಿ ಹಾಜರಾಗಿದ್ದರು. ಬೆಳಗ್ಗೆ 8 ಘಂಟೆಗೆ 10 ನಿಮಿಷವಿರುವಾಗ ಎರಡು ಪೋಲೀಸ್ ಬಸ್ಸುಗಳ ತುಂಬ ರಿಜರ್ವ್ ಪೋಲೀಸಿನವರು ಬಂದು ಸಾಲಾಗಿ ನಿಂತರು. ಪೋಲೀಸ್ ಬಸ್ಸುಗಳು ರಸ್ತೆಯಲ್ಲಿ ನಿಂತುವು. ರಿಜರ್ವ್ ಪೋಲೀಸರನ್ನು

ಕಂಡಕೂಡಲೇ ಜನಸಮೂಹದಲ್ಲಿ ಉದ್ರೇಕದ ಚಿಹ್ನೆಗಳು ಕಾಣಿಸಿದುವು. ಕೆಲವರು ಕಾಂಗ್ರೆಸ್ ಪರವಾಗಿ ಜಯಕಾರ ಮಾಡಿದರು. ಇದು ಹೀಗೆಯೇ ಮುಂದುವರಿದರೆ ಪರಿಸ್ಥಿತಿ ಕೈಮೀರಿಹೋಗಬಹುದೆಂದು ಭಾವಿಸಿದ ಮುಖಂಡರು ಧ್ವನಿವರ್ಧಕಗಳ ಮೂಲಕ ಮಹಾಜನರನ್ನು ಹೀಗೆ ಪ್ರಾರ್ಥಿಸಿಕೊಂಡರು: "ಅಧ್ಯಕ್ಷರು ಇಷ್ಟರಲ್ಲೇ ಬರುತ್ತಾರೆ. ಯಾರೂ ಅವರು ಬಂದ ಕಾಲದಲ್ಲಿ ಚಪ್ಪಾಳೆ ಹೊಡೆಯಕೂಡದು. ತಮ್ಮ ಸ್ಥಳಗಳಲ್ಲಿ ಎದ್ದು ನಿಲ್ಲಬಾರದು. ಎಲ್ಲರೂ ಕುಳಿತೇ ಇರಬೇಕು. ತಮ್ಮ ತಮ್ಮ ಸ್ಥಳಗಳಲ್ಲಿಯೇ ಕುಳಿತುಕೊಂಡು ಶಾಂತಿಯಿಂದ ವರ್ತಿಸಿ ಶಿಸ್ತನ್ನು ಕಾಪಾಡಿಕೊಂಡು ಕಾಂಗ್ರೆಸ್ಸಿನ ಪ್ರಭಾವ ಎಂಥದು ಎಂಬುದನ್ನು ತೋರಿಸಿಕೊಡಬೇಕು. ದಯವಿಟ್ಟು ಎಲ್ಲರೂ ಸಹಕರಿಸಿರಿ."

ಧ್ವಜಾರೋಹಣಕ್ಕಾಗಿ ಅಧ್ಯಕ್ಷ ಶ್ರೀ ಸಿದ್ದಲಿಂಗಯ್ಯನವರನ್ನು ಸ್ವಯಂ ಸೇವಕರು ಮುಖಂಡರ ಜೊತೆಯಲ್ಲಿ ಧ್ವಜ ವೇದಿಕೆಯ ಹತ್ತಿರಕ್ಕೆ ಕರೆತಂದರು. ಜಿ.ಒ.ಸಿ. ಗಳಾದ ಶ್ರೀ ಎಂ. ಎಸ್ ಜೋಯಿಸರು ಧ್ವಜಾರೋಹಣ ಮಾಡಬೇಕೆಂದು ಸಾಂಪ್ರದಾಯಿಕವಾಗಿ ಕೇಳಿಕೊಂಡರು. ಖಾದಿಯ ಶ್ವೇತ ವಸ್ತ್ರಧಾರಿಗಳಾದ ಅಧ್ಯಕ್ಷರು ಗಂಭೀರವಾಗಿ ಧ್ವಜವೇದಿಕೆಯನ್ನು ಏರಿ ಸುತ್ತಲೂ ಒಮ್ಮೆ ಕಣ್ಣಾಡಿಸಿದರು.

ವೇದಿಕೆಯ ಹತ್ತಿರ ಶ್ರೀಯುತರಾದ ಎಸ್. ಚನ್ನಯ್ಯ, ಕೆ. ಟಿ. ಭಾಷ್ಯಂ, ಕೆ. ಸಿ. ರೆಡ್ಡಿ, ಹೆಚ್. ಸಿ. ದಾಸಪ್ಪ, ಹೆಚ್. ಬಿ. ಗುಂಡಪ್ಪಗೌಡ, ಕೆ. ವಿಶ್ವೇಶ್ವರ ಗೌಡ, ಎಚ್. ಕೆ. ವೀರಣ್ಣಗೌಡ, ಕೆ. ಹನುಮಂತಯ್ಯ, ಮಳವಳ್ಳಿ ವೀರಪ್ಪ, ಹೆಚ್. ಸಿದ್ದಯ್ಯ ಮೊದಲಾದ ಮುಖಂಡರೂ ಶ್ರೀಮತಿಯರಾದ ಯಶೋಧರಮ್ಮ ದಾಸಪ್ಪ, ಪಾರ್ವತಮ್ಮ ಸಿದ್ದಲಿಂಗಯ್ಯ, ವೆಂಕಮ್ಮ ಸೀತಾರಾಮಯ್ಯ, ಸುಬ್ಬಮ್ಮ ಜೋಯಿಸ್, ಇಂದಿರಾ ಕೃಷ್ಣಮೂರ್ತಿ, ಟಿ. ಸುನಂದಮ್ಮ ಮೊದಲಾದ ಮಹಿಳಾ ಮುಖ್ಯರೂ ನೂರಾರು ಸತ್ಯಾಗ್ರಹಿಗಳೂ ಸ್ವಯಂ ಸೇವಕರೂ ಸ್ವಯಂಸೇವಿಕೆಯರೂ ಶಿಸ್ತಿನಿಂದ ನಿಂತಿದ್ದರು. ಶ್ರೀ ತಿರುಮಲೇ ಗೌಡರ ಆರೇಳು ಎಕರೆ ಗದ್ದೆ ಬಯಲಿನ ತುಂಬ ಶಿಂಷಾನದಿಯ ದಡೆಯವರೆಗೆ ಗಿಜಿಗಿಜಿ ಅಂತ ಕಿಕ್ಕಿರಿದ ಸುಮಾರು 40,000 ಜನ ಪ್ರೇಕ್ಷಕರು ಸೇರಿದ್ದರು. ಮೈಸೂರು-ಬೆಂಗಳೂರು ರಸ್ತೆಯ ಪಕ್ಕದಲ್ಲಿ ಪೋಲೀಸ್ ಅಧಿಕಾರಿಗಳು ಇದ್ದರು. ಅಲ್ಲಿಯೇ ಶಸ್ತ್ರಸಜ್ಜಿತ ಪಡೆಗಳು, ಪೋಲೀಸರ ಬಿಡಾರಗಳು ಇದ್ದುವು. ಇವರಿಗೆಲ್ಲ ಮುಖ್ಯರಾಗಿ ಜಿಲ್ಲಾಧಿಕಾರಿ ಶ್ರೀ ಮೇಕ್ರಿಯವರು, ಜಿಲ್ಲಾ ಮ್ಯಾಜಿಸ್ಟ್ರೇಟರ ಆದೇಶವನ್ನು ಕಾರ್ಯಗತಗೊಳಿಸಲು ಸಿದ್ಧರಾಗಿದ್ದ ಡಿ.ಎಸ್.ಪಿ. ಶ್ರೀ ಬೀರಪ್ಪನವರು ಎಲ್ಲರೂ ಸಿದ್ಧರಾಗಿದ್ದರು. ಬೇಸಗೆ ಕಾಲವಾದ್ದರಿಂದ ಮೈಸೂರಿನ ಮಹಾರಾಜರು ಮತ್ತು ದಿವಾನರು ತಂಪು ಹವೆಯ ಉದಕಮಂಡಲದಲ್ಲಿ ತಂಗಿದ್ದರು. ಶಿವಪುರದಲ್ಲಿ ಬೆಂಕಿ ಹತ್ತಿ ಉರಿಯುತ್ತಿದ್ದರೆ ಮೈಸೂರು ಸಂಸ್ಥಾನದ

ಮಹಾರಾಜರು ಮತ್ತು ದಿವಾನರು ಊಟಿಯಲ್ಲಿ ತಣ್ಣಗಿದ್ದರು. ಶಿವಪುರದಂಥ ದೊಡ್ಡ ಅಧಿವೇಶನವನ್ನೂ ಗಮನಿಸದಷ್ಟು ಬೇಜವಾಬ್ದಾರಿ ಅವರದು. ಉಗ್ರ ಚಳುವಳಿಯನ್ನು ಬಂದೂಕಗಳಿಂದ ನಾಶಮಾಡಬಹುದೆಂಬ ತಪ್ಪು ಕಲ್ಪನೆ ಬೇರೆ ಅವರಿಗೆ.

ಶಿವಪುರ ಧ್ವಜ ಸತ್ಯಾಗ್ರಹದ ವಿಶಾಲವಾದ ಮೈದಾನ ರಣರಂಗವನ್ನು ಜ್ಞಾಪಿಸುತ್ತಿತ್ತು. ಒಂದು ಕಡೆ ಸುಮಾರು 40,000 ಪ್ರೇಕ್ಷಕ ವೃಂದ. ಎಲ್ಲರೂ ಅಸಹಾಯಕ ಸ್ತ್ರೀಪುರುಷರು, ನಿರಾಯುಧರು. ಬಹಳಷ್ಟು ಮಂದಿ ಏನೂ ಅರಿಯದ ಮುಗ್ಧರಾದ ಹಳ್ಳಿಗರು. ಸಾವಿರಾರು ಜನ ಸತ್ಯಾಗ್ರಹಿಗಳು. ಇವರ ಕೈಯಲ್ಲೂ ಆಯುಧಗಳಿಲ್ಲ. ಇದ್ದ ಆಯುಧಗಳೇದರೆ ಸತ್ಯ ಅಹಿಂಸೆ ಅಷ್ಟೆ. ಈ ಜನಸಮುದಾಯದ ಎದುರಿಗೆ, ಇನ್ನೊಂದು ಕಡೆ, ಮಾರಕ ಅಸ್ತ್ರಗಳನ್ನು ಹಿಡಿದು ನಿಂತಿರುವ 600 ಜನ ಪೋಲೀಸ್ ಮೀಸಲು ಪಡೆ. ಆದೇಶ ಬಂದಕೂಡಲೇ ಸಿಕ್ಕಿದವರನ್ನು ಸಿಕ್ಕಿದ ಕಡೆ ಕೆಚ್ಚಲು ಕಾದಿರುವ ಲಾಠಿಧಾರಿಗಳಾದ 1,000 ಪೋಲೀಸರು. ಪೋಲೀಸ್ ಅಧಿಕಾರಿಗಳು ಸ್ವಲ್ಪ ಆತುರಪಟ್ಟರೆ, ಸರ್ಕಾರದ ಆಜ್ಞೆಯನ್ನು ಮನಸ್ಸಿನಲ್ಲಿಟ್ಟುಕೊಂಡು ಕಲ್ಲು ಹೃದಯದವರಾದರೆ ಕಣ್ಣುಮುಚ್ಚಿ ಕಣ್ಣು ಬಿಡುವಷ್ಟರಲ್ಲಿ ಬಂದೂಕಗಳಿಂದ ಸಾವಿರಾರು ನಿಸ್ಸಹಾಯಕರಾದ ಸ್ತ್ರೀಪುರುಷರನ್ನು ಸುಟ್ಟುಬಿಡಬಹುದು. ನಾಯಕರ ಉಪದೇಶಗಳನ್ನು, ಗಾಂಧೀಜಿಯವರ ಸತ್ಯ ಅಹಿಂಸೆಗಳನ್ನು ಮರೆತು ಪ್ರತೀಕಾರ ಮನೋಭಾವದಿಂದ ಜನಸಮೂಹ ಪೋಲೀಸರ ಮೇಲೆ ಬಿದ್ದರೆ ಪೋಲೀಸರು ನುಚ್ಚುನುರಿಯಾಗುವುದು ಖಂಡಿತ. ಮೊದಲು ಯಾರೇ ದುಡುಕಿದರೂ ಇಬ್ಬರಿಗೂ ಅಪಾಯ. ಮೈನವಿರೇಳಿಸುವ ವಿಚಿತ್ರ ಪ್ರಸಂಗ ಪ್ರಾಪ್ತವಾಯಿತು.

ಸರಕಾರ ಪ್ರತಿಬಂಧಕಾಜ್ಞೆ ಹೊರಡಿಸಿದೆ. ಸುಮ್ಮನಿದ್ದರೆ ಆಳುವ ಸರಕಾರದ ಗೌರವ ಹರಾಜಾಗುತ್ತದೆ. ಸತ್ಯಾಗ್ರಹಿಗಳಿಗೆ ಅಳಿವು ಉಳಿವಿನ ಪ್ರಶ್ನೆ. ಹಿಂದೆಗೆದರೆ ಕಾರ್ಯಸಾಧನೆಯಾಗುವುದಿಲ್ಲ. ಇಬ್ಬರಿಗೂ ತೊಡಕಿನ ಸಮಯ.

ಅಧ್ಯಕ್ಷರಾದ ಶ್ರೀ ಸಿದ್ದಲಿಂಗಯ್ಯನವರು ವೇದಿಕೆ ಹತ್ತಿದ ಕೂಡಲೇ ಡಿಸ್ಟ್ರಿಕ್ಟ್ ಪೋಲೀಸ್ ಸೂಪರಿನ್‌ಟೆನ್‌ಡೆಂಟರು, ಮಂಡ್ಯ ಸಬ್‌ಡಿವಿಜನ್ ಆಫೀಸರು, ಸಬ್ ಇನ್‌ಸ್ಪೆಕ್ಟರುಗಳು ಧ್ವಜವೇದಿಕೆಯ ಒಳಾಂಗಣದಲ್ಲಿ ಸತ್ಯಾಗ್ರಹಿಗಳು ಇದ್ದರೂ ನುಗ್ಗಿ ಧ್ವಜಸ್ತಂಭದ ಬಳಿಗೆ ಬಂದರು. ಫ್ರೆಂಚ್‌ರಾಕ್ಸ್ ಪೋಲೀಸ್ ಸೂಪರಿನ್ ಟೆಂಡೆಂಟ್ ಶ್ರೀ ಮತ್ತೋಜಿರಾವ್ ಸಿಂಧ್ಯಾ ಅವರು ಶ್ರೀ ಟಿ. ಸಿದ್ದಲಿಂಗಯ್ಯನವರ ಹತ್ತಿರ ಬಂದು ಪ್ರತಿಬಂಧಕಾಜ್ಞೆಯನ್ನು ಜ್ಞಾಪಿಸಿ ಧ್ವಜಾರೋಹಣ ಮಾಡಕೂಡದು ಎಂದರು. ಅಧ್ಯಕ್ಷರು ಧ್ವಜಾರೋಹಣ ಮಾಡುವ ತಮ್ಮ ನಿರ್ಧಾರವನ್ನು ಸ್ಪಷ್ಟಪಡಿಸಿದರು. ಅವರಿಬ್ಬರಲ್ಲಿ ಚರ್ಚೆ ನಡೆಯುತ್ತಿದ್ದಂತೆಯೇ, ಪೋಲೀಸ್



ಶ್ರೀ ಟಿ. ಸಿದ್ದಲಿಂಗಯ್ಯ



ಧ್ವಜ ವೇದಿಕೆಯ ಮೇಲೆ ಯಶೋಧರಮ್ಮ ದಾಸಪ್ಪ ಮತ್ತು
ಟಿ. ಸಿದ್ದಲಿಂಗಯ್ಯನವರು.



ಟಿ. ಸಿದ್ದಲಿಂಗಯ್ಯನವರೊಡನೆ ಪೊಲೀಸ್ ಅಧಿಕಾರಿಗಳ ಸಂಭಾಷಣೆ.



ಶ್ರೀ ಟಿ. ಸಿದ್ದಲಿಂಗಯ್ಯನವರೊಡನೆ ಪೊಲೀಸ್ ಅಧಿಕಾರಿಗಳ ಸಂಭಾಷಣೆ



"ಪ್ರತಿಬಂಧಕಾಜ್ಞೆಯನ್ನು ಉಲ್ಲಂಘಿಸುತ್ತೇನೆ"



ಧ್ವಜವೇದಿಕೆ ಸಿದ್ಧತೆಯ ಮೊದಲು ನಾಯಕರಿಂದ ಸ್ಥಳಾವಲೋಕನ



ಧ್ವಜಾರೋಹಣದ ಪೂರ್ವಸಿದ್ಧತೆಯಲ್ಲಿ ಸ್ವಯಂಸೇವಕರು, ಸೇವಿಕೆಯರಿಗೆ ತಿಳುವಳಿಕೆ



ಆರೋಹಣಕ್ಕೆ ಸಿದ್ಧವಾಗಿರುವ ರಾಷ್ಟ್ರಧ್ವಜ



ಕೆ. ಜೋಗಿ ಗೌಡ



ಎ. ಜಿ. ಬಂದೀಗೌಡ



ಎಚ್. ಕೆ. ವೀರಣ್ಣಗೌಡ



ಎಂ. ಎನ್. ಜೋಯಿಸ್




ಹೆಚ್. ಸಿ. ದಾಸಪ್ಪ



ಪಿ. ತಿರುಮಲೇಗೌಡ



ಸಂಪಿಗೆ ವೆಂಕಟಪತಯ್ಯ



ತಗಡೂರು ರಾಮಚಂದ್ರರಾವ್



ವೆಂಕಟಪ್ಪ ಚೆಟ್ಟಿಯಾರ್



ವೀರಕೇಸರಿ ಸೀತಾರಾಮಶಾಸ್ತ್ರಿ, ಟಿ. ಸಿದ್ದಲಿಂಗಯ್ಯ, ತಗಡೂರು ರಾಮಚಂದ್ರರಾವ್
ಕೌನ್ಸಿಲ್ ಆಫ್ ಆಕ್ಷನ್ ಮುಖಂಡರು.



ಅಧ್ಯಕ್ಷರ ಮೆರವಣಿಗೆ. ಸಾರಥಿ : ಅಂಕೂಗೌಡರು

ಮೈಸೂರು ಸಂಸ್ಥಾನದ ಶ್ರೀಮನ್ಮಹಾರಾಜರವರಾದ

ಶ್ರೀಮಜ್ಜಯಚಾಮರಾಜೇಂದ್ರ ಒಡೆಯರ್ ಬಹದೂರ್

ಮಹಾಸ್ವಾಮಿಯವರು ದಯಪಾಲಿಸಿದ

ರಾಜಶಾಸನ ಪತ್ರಿಕೆ

ನಮ್ಮ ರಾಜ್ಯಭಾರದ ಹತ್ತನೆಯ ವರ್ಷದಲ್ಲಿ, ಸಾವಿರದ ಒಂಭೈನೂರ ನಲವತ್ತೊಂಭತ್ತನೆಯ ಇಸವಿ ನವೆಂಬರು ತಿಂಗಳು ಇಪ್ಪತ್ತೈದನೆಯ ತಾರೀಖಿನ ದಿನ ನಾವು,

೧೯೪೭ನೆಯ ಇಸವಿ ಅಕ್ಟೋಬರು ತಿಂಗಳು ೨೯ನೆಯ ತಾರೀಖಿನ ದಿನ ಹಾಕಲಾದ ರಾಜಶಾಸನಪತ್ರಿಕೆಯಲ್ಲಿ, ನಮ್ಮ ಸಚಿವ ಮಂಡಲಿಯವರು ಪ್ರಜೆಗಳ ಚುನಾಯಿತ ಪ್ರತಿನಿಧಿಗಳಿಂದ ಕೂಡಿದ ಒಂದು ರಾಜ್ಯಾಂಗರಚನಾ ಸಭೆಯನ್ನು ಸ್ಥಾಪಿಸಿ, ಮೈಸೂರು ಸಂಸ್ಥಾನಕ್ಕಾಗಿ ರಾಜ್ಯಾಂಗ ವ್ಯವಸ್ಥೆಯ ಕಾನೂನಿನ ಮಸೂದೆಯೊಂದನ್ನು ರಚಿಸುವ ಕಾರ್ಯವನ್ನು ಆ ಸಭೆಗೆ ವಹಿಸಬೇಕೆಂದು ನಾವು ವಿಧಾಯಕವಾಗಿ ಆಜ್ಞಾಪಿಸಿರುವುದರಿಂದಲೂ; ಮತ್ತು

ಆ ರೀತಿ ಸ್ಥಾಪಿತವಾದ ರಾಜ್ಯಾಂಗರಚನಾ ಸಭೆಯು, ಕ್ರಮವಾಗಿ ನೇಮಕ ಮಾಡಲ್ಪಟ್ಟ ಮೈಸೂರು ಸಂಸ್ಥಾನದ ಪ್ರತಿನಿಧಿಗಳನ್ನು ಒಳಗೊಂಡಿರುವ ಭಾರತ ರಾಜ್ಯಾಂಗರಚನಾ ಸಭೆಯಿಂದ ಈಗ ರಚಿಸಲ್ಪಡುತ್ತಿರುವ ಭಾರತ ರಾಜ್ಯಾಂಗ ವ್ಯವಸ್ಥೆಯಲ್ಲಿ, ಮೈಸೂರು ಸಂಸ್ಥಾನದ ಆಡಳಿತಕ್ಕಾಗಿ ಮತ್ತು ಮೈಸೂರು ಸಂಸ್ಥಾನದ ಆಡಳಿತಕ್ಕೆ ಸಂಬಂಧಪಟ್ಟಂತೆ, ಆ ಸಭೆಯವರಿಂದ ಅನುಮೋದಿಸಲ್ಪಟ್ಟಂಥ ರಾಜ್ಯಾಂಗ ವ್ಯವಸ್ಥೆಯ ಸಂಬಂಧವಾದ ನಿಯಮಗಳನ್ನು ಸೇರಿಸಬೇಕೆಂದೂ ಮತ್ತು ಆ ರೀತಿ ರಚಿತವಾದ ರಾಜ್ಯಾಂಗ ವ್ಯವಸ್ಥೆಯನ್ನು ಮೈಸೂರು ಸಂಸ್ಥಾನವು ಅಂಗೀಕರಿಸಬೇಕೆಂದೂ ಸೂಚನೆ ಮಾಡಿರುವುದರಿಂದಲೂ;

ಮುಂದೆ ಸೂಚಿಸಿರುವಂತೆ ವಿಧಾಯಕವಾಗಿ ಈ ಮೂಲಕ ಈಗ ಆಜ್ಞಾಪಿಸುತ್ತೇವೆ:

ಭಾರತ ರಾಜ್ಯಾಂಗರಚನಾ ಸಭೆಯಿಂದ ಸಮ್ಮತಿಸಲ್ಪಟ್ಟು ಅಂಗೀಕರಿಸಲ್ಪಡುವುದಾಗಿರುವ ಭಾರತ ರಾಜ್ಯಾಂಗ ವ್ಯವಸ್ಥೆಯು ಇಂಡಿಯಾದೇಶದ ಇತರ ಭಾಗಗಳಂತೆಯೇ ಮೈಸೂರು ಸಂಸ್ಥಾನಕ್ಕೂ ಅನ್ವಯಿಸುವ ರಾಜ್ಯಾಂಗ ವ್ಯವಸ್ಥೆಯಾಗಿರತಕ್ಕದ್ದಾಗಿದೆ; ಮತ್ತು ಅಂಥ ರಾಜ್ಯಾಂಗ ವ್ಯವಸ್ಥೆಯಾಗಿ ಅದು, ಅದರ ನಿಯಮಗಳ ಅನುಸಾರವಾಗಿ ನಮ್ಮಿಂದಲೂ, ನಮ್ಮ ಉತ್ತರಾಧಿಕಾರಿಗಳಿಂದಲೂ ಮತ್ತು ನಮ್ಮ ತರುವಾಯ ಅಧಿಕಾರಕ್ಕೆ ಬರತಕ್ಕವರಿಂದಲೂ ಜಾರಿಗೆ ತರಲ್ಪಡತಕ್ಕದ್ದಾಗಿದೆ;

ಮೇಲೆ ಹೇಳಿದ ರಾಜ್ಯಾಂಗ ವ್ಯವಸ್ಥೆಯು ಜಾರಿಗೆ ಬರುವುದು ಪ್ರಾರಂಭವಾದ ತಾರೀಖಿನಿಂದಾಯಿತು ಅದರ ನಿಯಮಗಳು, ಈಗ ಮೈಸೂರು ಸಂಸ್ಥಾನದಲ್ಲಿ ಜಾರಿಯಲ್ಲಿರತಕ್ಕ ಮತ್ತು ಆ ನಿಯಮಗಳಿಗೆ ಅಸಂಗತವಾಗಿರತಕ್ಕ ಇತರ ಎಲ್ಲ ರಾಜ್ಯಾಂಗ ವ್ಯವಸ್ಥೆಯ ಸಂಬಂಧವಾದ ನಿಯಮಗಳನ್ನೂ ರದ್ದುಪಡಿಸಿ ಅವುಗಳಿಗೆ ಬದಲಾಗಿ ಜಾರಿಗೆ ಬರತಕ್ಕದ್ದಾಗಿವೆ;

ಈಗ ವ್ಯವಸ್ಥಿತವಾಗಿರತಕ್ಕ ರೀತ್ಯಾ, ಉಭಯ ಶಾಸನ ಸಭೆಗಳೂ, ಎಂದರೆ ಮೈಸೂರು ಪ್ರಜಾಪ್ರತಿನಿಧಿ ಸಭೆಯೂ ಮತ್ತು ಮೈಸೂರು ನ್ಯಾಯವಿಧಾಯಕ ಸಭೆಯೂ ೧೯೪೯ನೆಯ ಇಸವಿ ಡಿಸೆಂಬರು ತಿಂಗಳು ಹದಿನೈದನೆಯ ತಾರೀಖಿನ ದಿನ ರದ್ದಾಗತಕ್ಕದ್ದಾಗಿವೆ;

ಆ ತರುವಾಯ, ಮತ್ತು ಭಾರತ ರಾಜ್ಯಾಂಗ ವ್ಯವಸ್ಥೆಯ ನಿಯಮಗಳ ಮೇರೆಗೆ ಮೈಸೂರು ಸಂಸ್ಥಾನದಲ್ಲಿ ಶಾಸನ ಸಭೆಯು ಅಥವಾ ಶಾಸನ ಸಭೆಗಳು ಕ್ರಮವಾಗಿ ವ್ಯವಸ್ಥೆಗೊಳಿಸಲ್ಪಟ್ಟು, ಮೊದಲನೆಯ ಸಲ ಅಧಿವೇಶನಕ್ಕೆ ಬರುವವರೆಗೂ, ಮೈಸೂರು ಶಾಸನವಿಧಾಯಕ ಸಭೆಯೆಂಬ ಹೆಸರಿನಿಂದ ಒಂದೇ ಒಂದು ಶಾಸನಸಭೆ ಇರತಕ್ಕದ್ದಾಗಿದೆ.

ಮೇಲೆ ಹೇಳಿದ ಮೈಸೂರು ಶಾಸನವಿಧಾಯಕ ಸಭೆಯ ವ್ಯವಸ್ಥೆಯು ಎಲ್ಲ ವಿಷಯಗಳಲ್ಲಿಯೂ ಮೈಸೂರು ರಾಜ್ಯಾಂಗ ರಚನಾ ಸಭೆಯ ವ್ಯವಸ್ಥೆಯಂತೆಯೇ ಇರತಕ್ಕದ್ದಾಗಿದೆ ಮತ್ತು ಮೈಸೂರು ರಾಜ್ಯಾಂಗ ರಚನಾ ಸಭೆಯ ಎಲ್ಲ ಸದಸ್ಯರುಗಳೂ ೧೯೪೯ನೆಯ ಇಸವಿ ಡಿಸೆಂಬರು ತಿಂಗಳು ಹದಿನಾರನೆಯ ತಾರೀಖಿನ ದಿನ ಮೇಲೆ ಹೇಳಿದ ಮೈಸೂರು ಶಾಸನವಿಧಾಯಕ ಸಭೆಯ ಸದಸ್ಯರುಗಳಾಗಿ ಏರ್ಪಡತಕ್ಕದ್ದಾಗಿದೆ.

ಮೊಹರು.

ಜಯಚಾಮರಾಜ ಒಡೆಯರ್.



ಶಿವಪುರ ಧ್ವಜ ಸತ್ಯಾಗ್ರಹ ಟ್ರಸ್ಟಿನ ಧರ್ಮದರ್ಶಿಗಳಾದ ಶ್ರೀ ಹೆಚ್. ಎಂ. ಚನ್ನ
ಬಸಪ್ಪ, ಶ್ರೀ ಡಿ. ದೇವರಾಜ ಅರಸ್, ಶ್ರೀ ಕೆ. ಹನುಮಂತಯ್ಯ, ಶ್ರೀ ಸಚ್ಚಿದಾನಂದ
ರವರುಗಳು



ಶಿವಪುರ ರಾಷ್ಟ್ರಕೂಟದ ಸ್ವಾಗತ ಸಮಿತಿ ಸದಸ್ಯರ ಬ್ಯಾಡ್ಜ್



ಶಿವಪುರ ರಾಷ್ಟ್ರಕೂಟದ ವಸತಿ ಟಿಕೆಟ್ಟಿನ ಮಾದರಿ



ವಂದೇ ಮಾತರಂ

ಮೈಸೂರು ಕಾಂಗ್ರೆಸ್ ಮಹಾಧಿವೇಶನ

ಶಿವಪುರ

ಏಪ್ರಿಲ್ ೧೯೩೮

ಶ್ರೀ .... ಅವರಿಗೆ

ನೀವು ಮೈಸೂರು ಕಾಂಗ್ರೆಸ್ಸಿನ ಧ್ಯೇಯವನ್ನನುಸರಿಸಿ ಶಾಂತಿ ಮತ್ತು ಶಿಸ್ತುಗಳಿಂದ ಸ್ವಯಂ ಸೇವಕರಾಗಿ ಅನುಪಮ ಸೇವೆಯನ್ನು ಸಲ್ಲಿಸಿದ್ದೀರಿ. ಇದಕ್ಕಾಗಿ ನಿಮ್ಮನ್ನು ನಾವು ಅಭಿನಂದಿಸುತ್ತೇವೆ. ನಿಮ್ಮಿಂದ ಉತ್ತರೋತ್ತರ ಇನ್ನೂ ಹೆಚ್ಚಿನ ರಾಷ್ಟ್ರಸೇವೆ ಲಭಿಸಲೆಂದು ಹಾರೈಸುತ್ತೇವೆ.

ಎಸ್. ಚೆನ್ನಯ್ಯ,
(ಅಧ್ಯಕ್ಷ.)

ಎಚ್. ಕೆ. ವೀರಣ್ಣಗೌಡ,
[illegible],
(ಕಾರ್ಯದರ್ಶಿಗಳು.)

ಎಂ. ಎನ್. ಜೋಯಿಸ್,
(ದಳಪತಿ.)

ತಾ॥ ೧೫ ಏಪ್ರಿಲ್ ೧೯೩೮.

ಶಿವಪುರ ರಾಷ್ಟ್ರಕೂಟದ ಪ್ರಶಸ್ತಿಪತ್ರ



ಬೆಂಗಳೂರು ಸೆಂಟ್ರಲ್ ಜೈಲಿನಿಂದ ಸತ್ಯಾಗ್ರಹಿಗಳನ್ನು ಬಿಡುಗಡೆ ಮಾಡಿದಾಗ



ಧ್ವಜರಕ್ಷಣೆಯಲ್ಲಿ ಸತ್ಯಾಗ್ರಹಿಗಳು




ಸ್ವಯಂ ಸೇವಿಕೆಯರು




ಎನ್. ವಿಷಕಂಠರಾವ್



ಎನ್. ಈಶ್ವರರಾವ್



ಪಿ. ಎನ್. ಜವರಪ್ಪಗೌಡ



ಹೆಚ್. ಕೆ. ಪುಟ್ಟಣ್ಣಗೌಡ



ಡಿ. ಲಕ್ಷ್ಮಯ್ಯ



ಡಿ. ರಾಮಯ್ಯ



ಎಚ್. ಎಸ್. ಸುಬ್ಬೇಗೌಡ



ಕೆ. ಎಲ್. ಅಣ್ಣೇಗೌಡ



ಅಪ್ಪೇರಹಳ್ಳಿ ದಾಸೇಗೌಡ




ದೊಳ್ಳಯ್ಯ




ಲಿಂಗಯ್ಯ




ಸಿ. ಎಂ. ವೆಂಕಟಪ್ಪ



ಎಂ. ಬಿ. ತಮ್ಮಯ್ಯ




ಕೆ. ಹನುಮಂತರೆಡ್ಡಿ




ಟಿ. ಆರ್. ಚಿಕ್ಕಸುಬ್ಬಣ್ಣ



ಕೆ. ಎಸ್. ರಾಮೇಗೌಡ



ವಾಸಪ್ಪ ಗೋಗಿ



ಎನ್. ನರಸಿಂಹೇಗೌಡ



ಸಾಹುಕಾರ್ ಚನ್ನಯ್ಯ



ಟಿ. ಎಸ್. ರಾಜಗೋಪಾಲ ಅಯ್ಯಂಗಾರ್



ಪಾಲಹಳ್ಳಿ ಸೀತಾರಾಮಯ್ಯ



ಬಳ್ಳಾರಿ ಸಿದ್ದಮ್ಮ



ಶ್ರೀ ನಾರಿಮನ್ ಅವರು ಮೈಸೂರಿಗೆ ಬಂದಿದ್ದಾಗ



ಧ್ವಜಾರೋಹಣ ಮಾಡಿ ದಸ್ತಗಿರಿಯಾದ ನಾಯಕರು: ಶ್ರೀ ಕೆ.ಸಿ. ರೆಡ್ಡಿ, ಶ್ರೀ ಹೆಚ್. ಸಿ.

ಧ್ವಜರಕ್ಷಣೆಯ ಬಗೆಗೆ ನಾಯಕರ ಉಪನ್ಯಾಸ



ದಾಸಪ್ಪ, ಶ್ರೀ ವಿ. ವೆಂಕಟಪ್ಪರವರುಗಳು [ಪೊಲೀಸ್ ವ್ಯಾನಿಗೆ ಹೋಗುವ ಮೊದಲು].



ಸತ್ಯಾಗ್ರಹಿಗಳು ಮತ್ತು ಪೊಲೀಸರು

ಇನ್‌ಸ್ಪೆಕ್ಟರ್ ಶ್ರೀ ರಾಜಶೇಖರಯ್ಯನವರೂ ಕೆಲವು ಪೋಲೀಸ್ ಅಧಿಕಾರಿಗಳೂ ವೇದಿಕೆಯ ಮೇಲೆ ಹತ್ತಿ ನಿಂತು ಬಾವುಟದ ಹಗ್ಗವನ್ನು ಹಿಡಿದುಕೊಂಡರು. ಪೋಲೀಸರು ಬಾವುಟದ ಹಗ್ಗವನ್ನು ಕತ್ತರಿಸದ ಹಾಗೆ ಸ್ವಯಂ ಸೇವಕರಾದ ಶ್ರೀ ಬಿ. ಯಂ. ಶೀನಪ್ಪನವರು ಹಗ್ಗದ ಸಮೇತ ಬಾವುಟದ ಕಂಬವನ್ನು ತಬ್ಬಿಕೊಂಡರು. ಶ್ರೀಮತಿ ಬಳ್ಳಾರಿ ಸಿದ್ದಮ್ಮನವರು ಮತ್ತು ಜಿ.ಒ.ಸಿ. ಗಳಾದ ಶ್ರೀ ಜೋಯಿಸರು ಪೋಲೀಸ್ ಅಧಿಕಾರಿಗಳನ್ನು ಧ್ವಜವೇದಿಕೆಯಿಂದ ಕದಲಿಸಲು ಹೆಚ್ಚು ಕಡಮೆ ನೂಕಿಯೇ ಬಿಟ್ಟರು. ಧ್ವಜವೇದಿಕೆಯ ಮೇಲೆ ಪೋಲೀಸರಿಗೂ ಸತ್ಯಾಗ್ರಹಿಗಳಿಗೂ ಸ್ವಲ್ಪಕಾಲ ನೂಕಾಟವಾಯಿತು. ಸ್ವಯಂ ಸೇವಕರ, ನಾಯಕರ ಪ್ರಾರ್ಥನೆಯಿಂದ ಶಾಂತವಾಗಿ ಕುಳಿತಿದ್ದ ಜನರಲ್ಲಿ ಶಾಂತಿಯ ಸ್ಥಿತಿ ಕಡಮೆಯಾಗಿ ಗುಸುಗುಸು ಗದ್ದಲ ಪ್ರಾರಂಭವಾಯಿತು. ಪರಿಸ್ಥಿತಿ ಬಿಗಡಾಯಿಸುವ ಚಿಹ್ನೆ ಸ್ಪಷ್ಟವಾಯಿತು. ಶ್ರೀಮತಿ ಯಶೋಧರಮ್ಮ ದಾಸಪ್ಪನವರು, "ಪೋಲೀಸರು ಬಾವುಟದ ಹಗ್ಗವನ್ನು ಬಿಟ್ಟು ವೇದಿಕೆಯಿಂದ ಇಳಿದು ದೂರ ನಿಂತರೆ ಜನರ ಉದ್ರೇಕ ಕಡಮೆಯಾಗುತ್ತದೆ. ಎಲ್ಲರೂ ಅವರವರ ಕಾರ್ಯ ಮಾಡಲು ಸಾಧ್ಯವಾಗುತ್ತದೆ; ಪೋಲೀಸರು ಸಹಕರಿಸ ಬೇಕು" ಎಂದು ಅಧಿಕಾರಿಗಳನ್ನು ಪ್ರಾರ್ಥಿಸಿಕೊಂಡರು. ಶ್ರೀ ಎಸ್. ಚನ್ನಯ್ಯ, ಶ್ರೀ ಟಿ. ಸಿದ್ದಲಿಂಗಯ್ಯ ಮೊದಲಾದವರೂ ಕೂಡ ಪೋಲೀಸ್ ಅಧಿಕಾರಿಗಳನ್ನು ವಿನಯದಿಂದ ಕೇಳಿಕೊಂಡರು: "ಪೋಲೀಸರನ್ನು ಧ್ವಜವೇದಿಕೆ ಬಿಟ್ಟು ದೂರ ಕಳಿಸಿರಿ. ಶಿಸ್ತಿನಿಂದಿರುವ ನಾವು ಅಧಿಕಾರಿಗಳ ಆಜ್ಞೆಯನ್ನು ಮನ್ನಿಸುತ್ತೇವೆ. ಘರ್ಷಣೆ ಬೇಡ. ನಿರಪರಾಧಿಗಳಾದ ಜನರಿಗೆ ತೊಂದರೆಯಾಗುವುದು ಬೇಡ." ಮುಖಂಡರುಗಳ ಮನವಿಯಂತೆ ಅಧಿಕಾರಿಗಳು ತಮ್ಮ ತಮ್ಮ ವಿಭಾಗದ ಪೋಲೀಸರನ್ನು ಹಿಂದಕ್ಕೆ ಕಳುಹಿಸಿದರು. ಜನಸಮೂಹ ಶಾಂತವಾಗಬೇಕೆಂದು ಮುಖಂಡರು ಮತ್ತೆ ಮತ್ತೆ ಪ್ರಾರ್ಥಿಸಿಕೊಂಡರು. ಅಶಾಂತವಾಗಿದ್ದ ಜನಸ್ತೋಮ ಶಾಂತವಾಯಿತು. ಎಲ್ಲರೂ ತಂತಮ್ಮ ಸ್ಥಳದಲ್ಲಿ ಕುಳಿತುಕೊಂಡರು.

ಶ್ರೀಮತಿ ಟಿ. ಸುನಂದಮ್ಮನವರು 'ವಂದೇಮಾತರಂ' ರಾಷ್ಟ್ರಗೀತೆಯನ್ನು ಸುಶ್ರಾವ್ಯವಾಗಿ ಹಾಡಿದರು. ಅನಂತರ ಶ್ರೀ ಟಿ. ಸಿದ್ದಲಿಂಗಯ್ಯನವರು ಧ್ವಜಾ ರೋಹಣ ಮಾಡಲು ಯತ್ನಿಸಿದರು. ಧ್ವಜಾರೋಹಣ ಮಾಡಕೂಡದೆಂದು ಪೋಲೀಸ್ ಅಧಿಕಾರಿಗಳು ಪುನಃ ಅವರಿಗೆ ತಿಳಿಸಿದರು.

ಜಿಲ್ಲಾಧಿಕಾರಿಗಳು ಪ್ರತಿಬಂಧಕಾಜ್ಞೆ ಹೊರಡಿಸಿರುವುದರಿಂದ ಧ್ವಜಾರೋಹಣ ಮಾಡಕೂಡದೆಂದರು. ಅಧ್ಯಕ್ಷರು ನಿಶ್ಚಿತ ಧ್ವನಿಯಲ್ಲಿ: "ನಾವು ಆಜ್ಞೋಲ್ಲಂಘನೆ ಮಾಡುವುದು ಖಂಡಿತ. ಶಾಂತ ರೀತಿಯಿಂದ ನಿಮ್ಮ ಕರ್ತವ್ಯವನ್ನು ನೀವು ಮಾಡಿ. ಬಲಪ್ರದರ್ಶನಕ್ಕೆ ಅವಕಾಶ ಮಾಡಿಕೊಡಬೇಡಿ. ಆಗ ಪೋಲೀಸರು ಹಿಂದಿರುಗಿ ದರು. ಜನರು ಶಾಂತ ರೀತಿಯಿಂದ ಕುಳಿತುಕೊಳ್ಳಬೇಕು ಎಂದು ಶ್ರೀ ಸಿದ್ದ ಲಿಂಗಯ್ಯನವರೂ ಸ್ವಯಂ ಸೇವಕರೂ ಪ್ರಾರ್ಥಿಸಿಕೊಂಡರು. ಜನರು ಶಾಂತ

ರಾದರು. ಇನ್ನು ಹೆಚ್ಚು ಹೊತ್ತು ಕಾಯುವಂತಿಲ್ಲ. 8 ಗಂಟೆ ಸಮೀಪಿಸುತ್ತಿತ್ತು. ಇನ್ನೇನು ಧ್ವಜಾರೋಹಣವಾಗಬೇಕು ಎನ್ನುವ ಸಮಯಕ್ಕೆ ಸರಿಯಾಗಿ 600 ಜನ ಪೋಲೀಸರೂ ಧ್ವಜಸ್ತಂಭದ ಕಡೆಗೆ ಬಂದೂಕಗಳನ್ನು ನೀಡಿ ಗುಂಡು ಹಾರಿಸಲು ಸಿದ್ಧರಾಗಿ ಬಂದೂಕದ ಟ್ರಿಗ್ಗರ್‌ಮೇಲೆ ಬೆರಳಿಟ್ಟು ಮೇಲಧಿಕಾರಿಗಳ ಆದೇಶಕ್ಕಾಗಿ ಕಾದುನಿಂತಿದ್ದರು. ಧ್ವಜ ಮೈದಾನದ ಹತ್ತಿರ 600 ಜನ ಬಂದೂಕಧಾರಿಗಳು! ವೇದಿಕೆಯ ಮೇಲೆ ಶ್ರೀ ಸಿದ್ದಲಿಂಗಯ್ಯ ಮತ್ತು ಶ್ರೀ ಎಂ. ಎನ್. ಜೋಯಿಸ್!

ಉಸಿರಾಡುವುದೂ ಕೇಳಿಸುವಷ್ಟು ನಿಶಬ್ದವಾಗಿತ್ತು ಬೃಹತ್ ಜನಸ್ತೋಮ. ಧ್ವಜಾರೋಹಣಕ್ಕೆ ಮೊದಲು ಅಧ್ಯಕ್ಷರು ನೆಲಕ್ಕುರುಳುವರೆಂಬ ಭಾವನೆ ಜನರಿಗೆ ಬಂತು. ಎಲ್ಲರಲ್ಲೂ ಭಯ, ಕಾತರ. ಅನೇಕರ ಕಣ್ಣಲ್ಲಿ ನೀರು. ಶ್ರೀಮತಿ ಪಾರ್ವತಮ್ಮ ಸಿದ್ದಲಿಂಗಯ್ಯನವರು ಉದ್ವೇಗದಿಂದ ಕಂಪಿಸುತ್ತಿದ್ದರು. ಅಧ್ಯಕ್ಷರು ಬಂದೂಕಗಳ ಕಡೆಗೆ ಮುಖಮಾಡಿ ನಿಶ್ಚಲ ಭಾವದಿಂದ ನಿಂತಿದ್ದರು. ಜನಸಮೂಹ ವೇದಿಕೆಯ ಕಡೆಗೊಮ್ಮೆ, ಬಂದೂಕಗಳ ಕಡೆಗೊಮ್ಮೆ ಬೆಕ್ಕಸ ಬೆರಗಾಗಿ ನೋಡುತ್ತಿತ್ತು. ಮೌನವಾಗಿ ಪ್ರಾರ್ಥನೆ ಮಾಡುತ್ತಿತ್ತು. ಇಷ್ಟು ಮಾತ್ರ ಸಾಧ್ಯವೇ ಎನ್ನುವಷ್ಟು, ನಂಬುವುದಕ್ಕೇ ಆಗದಷ್ಟು ನಿಶಬ್ದ ಸ್ಥಿತಿ ಉಂಟಾಯಿತು. ಜನಸಾಮಾನ್ಯರು ಮಾತ್ರ ಮುಗ್ಧರಾಗಿದ್ದರು. ಪ್ರತಿಯೊಬ್ಬ ಸತ್ಯಾಗ್ರಹಿಗೂ ಸ್ವಾತಂತ್ರ್ಯ ಯೋಧನ ಆವೇಶ ಪ್ರಾಪ್ತವಾಯಿತು. ಇಂದಿನ ಧರ್ಮಯುದ್ಧದಲ್ಲಿ ಜಯಶೀಲರಾದರೆ ಅವರ ಜನ್ಮ ಸಾರ್ಥಕವಾಗುತ್ತಿತ್ತು. ಧರ್ಮಕ್ಕೆ ಜಯ ಎಂಬ ನಂಬಿಕೆಯಿದ್ದರೂ ಫಲಿತಾಂಶ ಅನಿಶ್ಚಿತವಾಗಿತ್ತು. ಸತ್ಯಾಗ್ರಹಕ್ಕಾಗಿ ಬಂದೂಕಗಳಿಗೆ ಎದೆಯೊಡ್ಡುವ ಸ್ಥಿತಿ ತಮಗೆ ಬರಬಾರದಿತ್ತೇ ಎಂದು ಹಂಬಲಿಸಿದ ಸತ್ಯಾಗ್ರಹಿಗಳಿಗೂ ಕೊರತೆಯಿರಲಿಲ್ಲ. ಧ್ವಜ ಸ್ತಂಭದ ವೇದಿಕೆಯ ಮೇಲೆ ನಿಂತಿದ್ದ ಶ್ರೀ ಸಿದ್ದಲಿಂಗಯ್ಯನವರ ದಿಟ್ಟ ನಿಲುವನ್ನು ಕಂಡು ಸತ್ಯಾಗ್ರಹಿಗಳಿಗೆ ಹೆಮ್ಮೆಯಾಯಿತು. ಜೊತೆಗೆ ಕಳವಳವೂ ಬಾಧಿಸಿತು. ಎಲ್ಲರ ಕಣ್ಣುಗಳೂ ಎಲ್ಲ ಬಂದೂಕಗಳೂ ಸಿದ್ದಲಿಂಗಯ್ಯನವರ ಕಡೆಗೆ ಕೇಂದ್ರೀಕೃತ ವಾಗಿದ್ದುವು.

ಜನಸಮೂಹದ ಮೇಲೆ ಹಕ್ಕಿನೋಟ ಬೀರಿದ ಶ್ರೀ ಸಿದ್ದಲಿಂಗಯ್ಯನವರು ಸಾಂಪ್ರದಾಯಿಕವಾಗಿ ನಾಲ್ಕು ಮಾತುಗಳನ್ನು ಹೇಳಿ "ನಾನೀಗ ಧ್ವಜಾರೋಹಣ ಮಾಡುತ್ತೇನೆ" ಎಂದು ಘೋಷಿಸಿ, ಧ್ವಜಸ್ತಂಭಕ್ಕೆ ಕೈಯಿಟ್ಟು ದಾರವನ್ನು ಎಳೆದರು. "ಧ್ವಜಾರೋಹಣ ಮಾಡಕೂಡದು" ಎಂದು ಪೋಲೀಸ್ ಅಧಿಕಾರಿಗಳು ಮತ್ತೆ ಎಚ್ಚರಿಸಿದರು. "ನಾನು ಧ್ವಜಾರೋಹಣ ಮಾಡಲು ನಿರ್ಧರಿಸಿದ್ದೇನೆ" ಎಂದರು ಅಧ್ಯಕ್ಷರು.

"ನಿಮ್ಮನ್ನು ದಸ್ತಗಿರಿ ಮಾಡಿದ್ದೇವೆ" ಎಂದು ಪೋಲೀಸ್ ಅಧಿಕಾರಿಗಳು ಹೇಳಿ ಧ್ವಜಾರೋಹಣ ಮಾಡದಂತೆ ಶ್ರೀ ಸಿದ್ದಲಿಂಗಯ್ಯನವರ ಕೈ ಹಿಡಿದರು.

"ಆಗಬಹುದು". ಅಧ್ಯಕ್ಷರು ಹಸನ್ಮುಖರಾಗಿ ಹೇಳಿದರು. ಧ್ವಜದ ದಾರ ಬಿಚ್ಚಿದರು. ಆದರೆ ಧ್ವಜ ಹರಡಿಕೊಳ್ಳುವ ಮೊದಲೇ ಅಧ್ಯಕ್ಷರನ್ನು ಪೋಲೀಸರು ಬಂಧಿಸಿದರು. ಸ್ವಯಂ ಸೇವಕರ ನಾಯಕರಾದ ಶ್ರೀ ಎಂ. ಎಸ್. ಜೋಯಿಸರಿಗೆ ಆವೇಶ ಬಂದಂತಾಯಿತು. 'ಅಧ್ಯಕ್ಷರು ದಸ್ತಗಿರಿಯಾದುದರಿಂದ ಮುಂದೆ ಧ್ವಜ ಹಾರಿಸುವ ಹೊಣೆ ನನ್ನದಾಗಿದೆ. ನಾನು ಧ್ವಜಾರೋಹಣ ಮಾಡುತ್ತೇನೆ' ಎಂದು ಸ್ತಂಭದ ಬಳಿಗೆ ಬಂದರು. ಸಮಯಕ್ಕೆ ಸರಿಯಾಗಿ ಧ್ವಜಾರೋಹಣ ನಡೆಯಲೇ ಬೇಕೆಂದುಕೊಂಡು, ಸಂಪ್ರದಾಯಕ್ಕೆ ವಿರುದ್ಧವಾದರೂ ಇನ್ನೊಬ್ಬರನ್ನು ನೇಮಿಸಿ ವುದಕ್ಕೂ ಕಾಯದೆ, ಸಿದ್ಧಲಿಂಗಯ್ಯನವರು ಬಿಟ್ಟಿದ್ದ ಧ್ವಜದ ದಾರವನ್ನು ಎಳೆದು ಬಿಟ್ಟರು. ಪುಷ್ಪವೃಷ್ಟಿ ಮಾಡುತ್ತಾ ತ್ರಿವರ್ಣರಾಷ್ಟ್ರ ಧ್ವಜ ಪಟಪಟನೆ ಹರಡಿ ಕೊಂಡಿತು. ಕೂಡಲೇ ಶ್ರೀ ಜೋಯಿಸರು ಧ್ವಜಕ್ಕೆ ವಂದನೆ ಸಲ್ಲಿಸಿದರು. ಎಲ್ಲರ ದೃಷ್ಟಿಯೂ 60 ಅಡಿಗಳ ಮೇಲೆ ಹಾರಾಡುತ್ತಿದ್ದ ರಾಷ್ಟ್ರಧ್ವಜದ ಕಡೆಗೆ ಹೋಯಿತು. ಶ್ರೀಮತಿ ಟಿ. ಸುನಂದಮ್ಮನವರು "ಧ್ವಜ" ಗೀತೆಯನ್ನು ಆವೇಶ ದಿಂದ ಹಾಡಿದರು. ಆ ಗೀತೆ ಎಲ್ಲರಿಗೂ ಹೊಸ ಸ್ಫೂರ್ತಿಯನ್ನು ನೀಡಿತು ಹರ್ಷದಿಂದ ಜನರ ಜಯಘೋಷಗಳು ಮೊಳಗಿದುವು. ಪೋಲೀಸ್ ಅಧಿಕಾರಿಗಳು ಶ್ರೀ ಎಂ. ಎಸ್. ಜೋಯಿಸರಿಗೆ "ನಿಮ್ಮನ್ನು ದಸ್ತಗಿರಿ ಮಾಡಿದ್ದೇವೆ" ಎಂದರು.

"ಆಗಬಹುದು". ಶ್ರೀ ಜೋಯಿಸರು ಹೇಳಿದರು.

ಜನರು ಅಂದುಕೊಂಡಿದ್ದುದೇ ಒಂದಾದರೆ ನಡೆದದ್ದೇ ಮತ್ತೊಂದಾಯಿತು. ಧ್ವಜಾರೋಹಣ ಸಂದರ್ಭದಲ್ಲಿ ಗುಂಡುಹಾರಿ ಅಧ್ಯಕ್ಷರು ಉರುಳಬಹುದೆಂದು ಅಂದುಕೊಂಡಿದ್ದು ತಪ್ಪಿ ಕೇವಲ ದಸ್ತಗಿರಿಯಲ್ಲಿ ಪರ್ಯವಸಾನವಾಯಿತು. ಜನರಿಗೂ ಪೋಲೀಸರಿಗೂ ಹೋರಾಟ ಪ್ರಾರಂಭವಾಗಬಹುದು, ಹೆಣಗಳ ರಾಶಿ ಬೀಳಬಹುದು ಎಂದು ಕಲ್ಪಿಸಿಕೊಂಡಿದ್ದುದು ಸುಳ್ಳಾಯಿತು. ಹೀಗಾಗುವುದೆಂದು ಯಾರೂ ಭಾವಿಸಿರಲಿಲ್ಲ. ಮೇಲಿನ ಅಧಿಕಾರಿಗಳ ಆಜ್ಞೆಗೆ ಪೋಲೀಸರು ಸಿದ್ಧರಾಗಿ ದ್ದರು. ಆದರೆ ಹತ್ಯಾಕಾಂಡಕ್ಕೆ ಕಾರಣವಾಗುವ ಆಜ್ಞೆಯನ್ನು ಅಧಿಕಾರಿಗಳು ಮಾಡಲಿಲ್ಲ. ದಿವಾನ್ ಮಿರ್ಜಾ ಸಾಹೇಬರು, ಶಿವಪುರ ಅಧಿವೇಶನದಲ್ಲಿ ಜನರ ಸೊಕ್ಕನ್ನು ಅಡಗಿಸಲು, ಗೋಲಿಬಾರ್ ಮಾಡಬೇಕೆಂದು ಐ. ಜಿ. ಪಿ. ಹ್ಯಾಮಿ ಲ್ಟನ್‌ಗೆ ಆದೇಶಿಸಿದ್ದರಂತೆ. ಹ್ಯಾಮಿಲ್ಟನ್ ಮದರಾಸಿನಲ್ಲಿ ಕುಖ್ಯಾತ ಅಡಳಿತಗಾರ ನಾಗಿದ್ದನು. ಅಲ್ಲದೆ ಕ್ರೂರ ಪೋಲೀಸ್ ಅಧಿಕಾರಿಯೆಂದು ಹೆಸರಾಗಿದ್ದನು; ಅವನನ್ನು ಐ. ಜಿ. ಪಿ. ಯಾಗಿ ದಿವಾನರು ಕರೆತಂದಿದ್ದರು. ಸರಕಾರದ ಪ್ರತಿಷ್ಠೆ ಯನ್ನು ಉಳಿಸಿಕೊಳ್ಳಲು, ಕಾಂಗ್ರೆಸ್ ಅಧಿವೇಶನವನ್ನು ಭಗ್ನಗೊಳಿಸಲು, ಶಿವಪುರ ದಲ್ಲಿ ಗೋಲಿಬಾರ್ ಮಾಡಬೇಕೆಂದು ದಿವಾನರು ಹೇಳಿದ್ದನ್ನು ಹ್ಯಾಮಿಲ್ಟನ್ ಜಿಲ್ಲಾ ಮ್ಯಾಜಿಸ್ಟ್ರೇಟರಿಗೆ ಹೇಳಿದ್ದನು. ಶ್ರೀ ಮೇಕ್ರಿಯವರು ಇದಕ್ಕೆ ಒಪ್ಪಲಿಲ್ಲ.

ಶಾಂತರೀತಿಯಿಂದ ಅಧಿವೇಶನ ಮಾಡಿದರೆ ಮುಗ್ಧ ಜನರ ಮೇಲೆ ಕಾರಣವಿಲ್ಲದೆ ಹೇಗೆ ಗೋಲಿಬಾರಿಗೆ ಆಜ್ಞೆ ಮಾಡಲಿ ಎಂದರು.. ದಿವಾನರ ಆದೇಶವಿದೆ. ನೀವು ಗೋಲಿಬಾರಿಗೆ ಆಜ್ಞೆ ಮಾಡಲೇ ಬೇಕು ಎಂದು ಹ್ಯಾಮಿಲ್ಟನ್ ಹಟ ಹಿಡಿದನಂತೆ. ದಿವಾನರು ಹಾಗೆಂದು ಬರವಣಿಗೆಯಲ್ಲಿ ಕೊಟ್ಟರೆ ಆಜ್ಞೆ ಮಾಡುತ್ತೇನೆ ಎಂದರಂತೆ ಶ್ರೀ ಮೇಕ್ರಿಯವರು. ಈ ಸಂಭಾಷಣೆ ಉದಕಮಂಡಲದಿಂದ ದೂರವಾಣಿ ಮೂಲಕ ನಡೆಯಿತಂತೆ. ಈ ವಿಷಯ ಅನಂತರ ದಿವಾನರ ಆಪ್ತವಲಯದಿಂದ ಕಾಂಗ್ರೆಸ್ ಮುಖಂಡರಿಗೆ ತಿಳಿಯಿತು. *

ಒಂದು ವೇಳೆ ದಿವಾನರ ಆದೇಶದಂತೆ, ಐ.ಜಿ.ಪಿ.ಗಳ ಬಲವಂತದಂತೆ ನೆಪ ಸಿಕ್ಕಿದ ಕೂಡಲೇ ಗೋಲಿಬಾರ್ ಪ್ರಯೋಗಿಸುವ ಆಜ್ಞೆಯನ್ನು ಜಿಲ್ಲಾಧಿಕಾರಿ ಶ್ರೀ ಮೇಕ್ರಿಯವರು ಕೈಗೊಂಡಿದ್ದರೆ ಭಯಂಕರವಾದ ಅನಾಹುತವಾಗುತ್ತಿತ್ತು.

ಜಿಲ್ಲಾಧಿಕಾರಿ ಶ್ರೀ ಮೇಕ್ರಿಯವರು ದಕ್ಷರು, ಸಹೃದಯರು, ಮಾನವತಾ ಪ್ರೇಮಿಗಳು. ಸತ್ಯಾಗ್ರಹ ಚಳುವಳಿಯನ್ನು ದೂರಾಲೋಚನೆಯಿಂದ ಪರಿಭಾವಿಸಿದವರು ಅವರು. ದಿವಾನರ ಅಪ್ಪಣೆಗೆ ಮಣಿದು ಮುಂದಾಲೋಚನೆಯಿಲ್ಲದೆ ದುಡುಕಿದ್ದರೆ ಏನೆಲ್ಲ ದುಷ್ಪರಿಣಾಮಗಳಾಗುತ್ತಿದ್ದುವೋ. ಅವರು ಗಂಭೀರವಾಗಿ ದೊಡ್ಡ ಮನುಷ್ಯರಂತೆ ನಡೆದುಕೊಂಡರು. ಪೋಲೀಸ್ ಅಧಿಕಾರಿಗಳನ್ನು ರೊಚ್ಚಿಗೆಬ್ಬಿಸದಂತೆ ಜನರೂ ಶಿಸ್ತಿನಿಂದ ಶಾಂತಿಯಿಂದ ನಡೆದುಕೊಂಡರು. ಆಗಬಹುದಾಗಿದ್ದ ಸಾವು ನೋವುಗಳು ತಪ್ಪಿದುವು.

ದಸ್ತಗಿರಿಯಾದವರನ್ನು ಪೋಲೀಸ್ ವ್ಯಾನಿಗೆ ಕರೆದಾಗ ಜನರಲ್ಲಿ ಅಸಮಾಧಾನ, ಹೆಚ್ಚಿನ ಗಲಭೆ ಉಂಟಾಯಿತು. ಪೋಲೀಸಿನವರು ದಸ್ತಗಿರಿಯಾದವರನ್ನು ಮುಟ್ಟುವುದು ಜನರಿಗೆ ಹಿಡಿಸಲಿಲ್ಲ. ಜನರಿಗೂ ಪೋಲೀಸರಿಗೂ ತಿಕ್ಕಾಟ ಪ್ರಾರಂಭವಾಯಿತು. ಜನಗಳ ಕೋಪ ಹೆಚ್ಚಿ ಪರಿಸ್ಥಿತಿ ಬಿಗಡಾಯಿಸುವ ಮೊದಲೇ ಜಿಲ್ಲಾಧಿಕಾರಿ ಶ್ರೀ ಮೇಕ್ರಿಯವರು ಮುಂದೆ ಬಂದು ಜನರು ಶಾಂತವಾಗಿರಬೇಕೆಂದು ಕೇಳಿಕೊಂಡರು. ಜನರನ್ನು ಸಮಾಧಾನ ಪಡಿಸುವಂತೆ ಮುಖಂಡರಿಗೆ ಸೂಚಿಸಿದರು. ಶ್ರೀ ಮೇಕ್ರಿಯವರ ಸದ್ವರ್ತನೆ ಮುಖಂಡರಿಗೆ ಮೆಚ್ಚಿಕೆಯಾಯಿತು. ಮುಖಂಡರು ಸ್ವಯಂ ಸೇವಕರೂ ನಾನಾ ರೀತಿಯಲ್ಲಿ ಜನರನ್ನು ಪ್ರಾರ್ಥಿಸಿಕೊಂಡರು. ಸ್ವಲ್ಪ ಹೊತ್ತಿನಲ್ಲೇ ಜನಸಮೂಹ ನಿಶಬ್ದವಾಯಿತು.

---

* ಆಗ ಐ.ಜಿ.ಪಿ. ಗಳಾಗಿದ್ದ ಹ್ಯಾಮಿಲ್ಟನ್ ಶಿವಪುರ ಅಧಿವೇಶನಕ್ಕೆ ಬಂದಿರಲಿಲ್ಲ ಎಂದು ಕೆಲವರು ಹೇಳಿದ್ದಾರೆ. ಹ್ಯಾಮಿಲ್ಟನ್ ಬಂದು ಶಿವಪುರದ ರೈಲ್ವೆಸ್ಟೇಷನ್ನಿನಲ್ಲಿ ಕ್ಯಾಂಪ್ ಮಾಡಿದ್ದುಂಟು ಎಂದು ಒಬ್ಬಿಬ್ಬರು ನೆನಪಿಸಿಕೊಂಡಿದ್ದಾರೆ. ಇದಕ್ಕೆ ಲಿಖಿತ ಆಧಾರ ಸಿಗಲಿಲ್ಲ. ಆದರೆ ದಿವಾನರು ಹ್ಯಾಮಿಲ್ಟನ್ ಮೂಲಕ ತಿಳಿಸಿದ್ದ ಗೋಲಿಬಾರ್ ವಿಷಯವನ್ನು ಬಹಳ ಮಂದಿ ಒಪ್ಪಿಕೊಂಡಿದ್ದಾರೆ.

ಮಹಾತ್ಮ ಗಾಂಧೀಜಿಯವರ ತತ್ವದಂತೆ ಜನರು ಅಹಿಂಸಾತ್ಮಕವಾಗಿ ಶಾಂತಿಯಿಂದ ನಡೆದುಕೊಳ್ಳಬೇಕು. ಪ್ರತೀಕಾರ ಭಾವನೆಯನ್ನು ಯಾವ ಸಂದರ್ಭದಲ್ಲೂ ಹೊಂದಬಾರದು. ಹಾಗೆ ಮಾಡುವುದರಿಂದ ಮಾತ್ರ ನಾವು ನಿಜವಾದ ಸತ್ಯಾಗ್ರಹಿಗಳಾಗುತ್ತೇವೆ. ನಮ್ಮ ಸತ್ಯಾಗ್ರಹ ಯಶಸ್ವಿಯಾಗುತ್ತದೆ. ಪ್ರಾಣವನ್ನು ಅರ್ಪಿಸುವ ಸಂದರ್ಭ ಬಂದರೂ ಹೆದರದೆ ರಾಷ್ಟ್ರಧ್ವಜದ ಮಾನವನ್ನು ಕಾಪಾಡಿರಿ ಎಂದು ಶ್ರೀ ಟಿ. ಸಿದ್ದಲಿಂಗಯ್ಯನವರು ಕಳಕಳಿಯಿಂದ ಜನರಲ್ಲಿ ಬಿನ್ನವಿಸಿಕೊಂಡರು. ತಾವು ದಸ್ತಗಿರಿಯಾದುದರಿಂದ, ಶ್ರೀ ಹೆಚ್. ಸಿ. ದಾಸಪ್ಪನವರನ್ನು ತಮ್ಮಿಂದ ತೆರವಾದ ಅಧ್ಯಕ್ಷ ಸ್ಥಾನಕ್ಕೆ ನೇಮಿಸಿರುವುದಾಗಿ ಘೋಷಿಸಿ ಧ್ವಜ ಸ್ತಂಭದ ವೇದಿಕೆ ಬಿಟ್ಟು ಕೆಳಗಿಳಿದರು. ಶ್ರೀ ಎಂ. ಎಸ್. ಜೋಯಿಸರು ತಮ್ಮ ಸ್ಥಾನಕ್ಕೆ ಡಾ|| ಪಾರ್ಥನಾರಾಯಣ ಪಂಡಿತರನ್ನು ನೇಮಿಸಿರುವುದಾಗಿ ಘೋಷಿಸಿ, ಸಿದ್ದಲಿಂಗಯ್ಯನವರನ್ನು ಅನುಸರಿಸಿದರು.

ಶ್ರೀ ಮೇಕ್ರಿಯವರ ಸಲಹೆಯಂತೆ ಪೋಲೀಸರು ಹಿಂದೆ ಸರಿದುದರಿಂದ ಮುಖಂಡರು ಮತ್ತು ಜನರು ಜಯಘೋಷಗಳನ್ನು ಕೂಗುತ್ತಾ ದಸ್ತಗಿರಿಯಾದವರನ್ನು ಪೋಲೀಸ್ ವ್ಯಾನ್ ಬಳಿಗೆ ಕರೆದುತಂದರು. ಅನಂತರ ಪೋಲೀಸರು ಅವರನ್ನು ವ್ಯಾನಿನಲ್ಲಿ ಕೂಡಿಸಿಕೊಂಡು ಮಂಡ್ಯಕ್ಕೆ ಕರೆದುಕೊಂಡು ಹೋದರು. ಅವರಿಗೆ ಎಂಥ ಶಿಕ್ಷೆಯಾಗುತ್ತೋ ಎಷ್ಟು ದಿವಸ ಜೈಲಿನಲ್ಲಿ ಕೊಳೆಯಬೇಕಾಗುತ್ತೋ ಎಂದು ಜನ ದುಃಖಿಸಿದರು. ಶ್ರೀಮತಿ ಪಾರ್ವತಮ್ಮ ಸಿದ್ದಲಿಂಗಯ್ಯನವರನ್ನು ಮಹಿಳಾ ಮುಖಂಡರು ಸಮಾಧಾನ ಮಾಡಿದರು.

ಮೀಸಲು ಪೋಲೀಸ್ ಪಡೆಯನ್ನು ಹಿಂದಕ್ಕೆ ಕರೆದುಕೊಂಡು ಅಧಿಕಾರಿಗಳು ಹೊರಟುಹೋದುದರಿಂದ ಜನರು ಶಾಂತಿಯಿಂದ ಕುಳಿತುಕೊಂಡರು. ಸಾಮಾನ್ಯ ಪೋಲೀಸರು ಮಾತ್ರ ಅಲ್ಲಿ ಇದ್ದರು. ಧ್ವಜವನ್ನು ಇಳಿಸುವವರೆಗೆ ಕಣ್ಣಲ್ಲಿ ಕಣ್ಣಿಟ್ಟು ಕಾಯುವ ಹೊಣೆ ಮುಖಂಡರದಾಗಿತ್ತು. ಧ್ವಜ ಸ್ತಂಭದ ವೇದಿಕೆಯ ಮೇಲೆ ಸ್ತ್ರೀ ಸ್ವಯಂ ಸೇವಿಕೆಯರೂ ಹಲವು ಮುಖಂಡರೂ ಧ್ವಜದ ಸುತ್ತಲೂ ಸ್ವಯಂ ಸೇವಕರೂ ಕಾವಲು ಕುಳಿತರು. ಬೇಸಗೆಯ ಉರಿಬಿಸಿಲನ್ನೂ ಲೆಕ್ಕಿಸದೆ ಜನರು ಕಾರ್ಯಕ್ರಮದಲ್ಲಿ ಪಾಲ್ಗೊಂಡರು.

ನೂತನ ಅಧ್ಯಕ್ಷರಾದ ಶ್ರೀ ಹೆಚ್. ಸಿ. ದಾಸಪ್ಪನವರು ಜನರನ್ನು ಕುರಿತು ಹೀಗೆ ಮನವಿ ಮಾಡಿಕೊಂಡರು : "ರಾಷ್ಟ್ರಧ್ವಜದ ಗೌರವವನ್ನು ಕಾಪಾಡುವ ಭಾರ ಜನರನ್ನವಲಂಬಿಸಿದೆ. ಏನೇ ಆದರೂ ಎಲ್ಲರೂ ಶಾಂತಿಯಿಂದಿರಬೇಕು. ಎಂಥ ಕಷ್ಟವನ್ನಾದರೂ ಸಹಿಸಿಕೊಳ್ಳಲು ಸಿದ್ಧರಾಗಿರಬೇಕು. ಲಾಠಿ ಏಟು, ಗುಂಡಿನೇಟುಗಳಿಗೂ ಹೆದರಬಾರದು. ಸಾಯಂಕಾಲದವರೆಗೂ ಧ್ವಜ ರಕ್ಷಣೆಗೆ ನಾನು ಇಲ್ಲೇ ಕುಳಿತುಕೊಳ್ಳುತ್ತೇನೆ. ನೀವೆಲ್ಲರೂ ಸಹಕರಿಸಬೇಕು" ಎಂದು ಹೇಳಿ ವೇದಿಕೆಯ ಮೇಲೆ ಕುಳಿತುಕೊಂಡರು.

ಇದೇ ಸಂದರ್ಭದಲ್ಲಿ ಶ್ರೀಮತಿ ಯಶೋಧರಮ್ಮ ದಾಸಪ್ಪ, ಶ್ರೀ ವೀರಣ್ಣ ಗೌಡ, ಶ್ರೀ ಭಾಷ್ಯಂ ಅಯ್ಯಂಗಾರ್, ಶ್ರೀ ವೆಂಕಟಪ್ಪ, ಶ್ರೀ ಹೆಚ್. ಸಿದ್ದಯ್ಯ, ಶ್ರೀ ಟಿ. ಮರಿಯಪ್ಪ, ಶ್ರೀ ಪುಳವಳ್ಳಿ ವೀರಪ್ಪ, ಶ್ರೀ ಎ. ಜಿ. ಬಂದೀಗೌಡ, ಶ್ರೀ ಎಸ್. ಚನ್ನಯ್ಯ, ಶ್ರೀ ಗುಂಡಪ್ಪಗೌಡ ಮೊದಲಾದವರು ಭಾಷಣ ಮಾಡಿದರು. ಎಲ್ಲರೂ ಸರಕಾರವನ್ನು ಉಗ್ರವಾಗಿ ಟೀಕಿಸಿದರು. ಪ್ರತಿಬಂಧಕಾಜ್ಞೆ ಮತ್ತು ಮುಖಂಡರ ದಸ್ತಗಿರಿ ಪ್ರಧಾನ ವಿಷಯಗಳಾಗಿದ್ದುವು. ಶ್ರೀ ವೀರಕೇಸರಿ ಸೀತಾ ರಾಮ ಶಾಸ್ತ್ರಿಗಳು ಧ್ವನಿವರ್ಧಕದ ಮುಂದೆ ನಿಂತು ಎಲ್ಲರಿಗೂ ಕೇಳುವಂತೆ ಗಟ್ಟಿಯಾಗಿ "ಏನೇ ಬರಲಿ, ಒಗ್ಗಟ್ಟಿರಲಿ" ಘೋಷಣೆಯನ್ನು ಕೂಗಿಸಿದರು. ಶಾಂತಿ, ಶಿಸ್ತು ಇರ ಬೇಕು ಎಂದು ಆಗಾಗ ಜನರಿಗೆ ತಿಳಿಸಿದರು.

ಹೊತ್ತುಹೋಗುವುದಕೋಸ್ಕರ ಚಿಕ್ಕಮಗಳೂರಿನ ಶ್ರೀ ಸಿ. ಆರ್. ರಾಮಣ್ಣ ನವರು ಮತ್ತು ಮೈಸೂರಿನ ಶ್ರೀ ಎನ್. ವಿಷಕಂಠರಾವ್ ಅವರು ಲಾವಣಿಗಳನ್ನೂ ಸ್ವಯಂ ಸೇವಿಕೆಯರು ದೇಶಭಕ್ತಿಗೀತೆಗಳನ್ನೂ ಹಾಡಿದರು. ಇವುಗಳನ್ನೆಲ್ಲಾ ಜನರು ಆಸಕ್ತಿಯಿಂದ ಕೇಳಿದರು. ಮುಖಂಡರ ಸೂಚನೆಯಂತೆ ಮಹಾಜನರು ಒಟ್ಟೊಟ್ಟಾಗಿ ಹೋಗಿ ಊಟ ಮುಗಿಸಿ ಮತ್ತೆ ಧ್ವಜ ಮೈದಾನಕ್ಕೆ ಬಂದು ಕುಳಿತುಕೊಂಡರು. ಧ್ವಜ ರಕ್ಷಣೆಗೆ ಕುಳಿತಿದ್ದವರು ಹಸಿವಾದರೂ ಊಟಕ್ಕೆ ಹೋಗಲಿಲ್ಲ. ಅವರಿಗೆ ಕುಳಿತ ಕಡೆಗೇ ಫಲಾಹಾರ ಒದಗಿಸಲಾಯಿತು. ಮೈಸೂರಿನ ಹಣ್ಣಿನಂಗಡಿ ಶ್ರೀ ಶಿವಣ್ಣನವರು ಹಣ್ಣಿನ ರಸಾಯನ ಮಾಡಿ ಸತ್ಯಾಗ್ರಹಿಗಳಿಗೆ ಕೊಟ್ಟರು. ಮೂತ್ರ ವಿಸರ್ಜನೆಗೆ ಎದ್ದು ಹೋಗಬೇಕಾಗುತ್ತೆ ಅಂತ ಶ್ರೀಮತಿ ಯಶೋಧರಮ್ಮ ದಾಸಪ್ಪ ಮೊದಲಾದ ಸ್ತ್ರೀ ಸತ್ಯಾಗ್ರಹಿಗಳು ಹೆಚ್ಚಿಗೆ ನೀರು ಕುಡಿಯಲಿಲ್ಲ. ಬಿಸಿಲಿನಲ್ಲಿ ಕುಳಿತು ಬಾಯಾರಿದವರಿಗೆ ಸ್ವಯಂ ಸೇವಿಕೆಯರು ನೀರು, ಮಜ್ಜಿಗೆಯನ್ನು ಒದಗಿಸಿ ದರು. ಸಂಜೆಯವರೆಗೆ ಧ್ವಜಕ್ಕೆ ಯಾವ ಅಪಾಯವೂ ಆಗಲಿಲ್ಲ. ಇದರಿಂದ ಸತ್ಯಾ ಗ್ರಹಿಗಳಿಗೆ ಎಷ್ಟೋ ಸಮಾಧಾನವಾಯಿತು. ಸಂಜೆ 6 ಗಂಟೆಗೆ ಸರಿಯಾಗಿ ಗೌರವ ಪೂರ್ವಕವಾಗಿ ಧ್ವಜವನ್ನು ಇಳಿಸಿಕೊಳ್ಳಲಾಯಿತು.

ಧ್ವಜ ಸತ್ಯಾಗ್ರಹಿಗಳಿಗೆ ಶಿಕ್ಷೆ

ಜಿಲ್ಲಾ ಮ್ಯಾಜಿಸ್ಟ್ರೇಟರು ಹೊರಡಿಸಿದ ಆಜ್ಞೆಯನ್ನು ಉಲ್ಲಂಘಿಸಿ ಶಿವಪುರ ದಲ್ಲಿ ರಾಷ್ಟ್ರ ಧ್ವಜಾರೋಹಣ ಮಾಡಿದ ಶ್ರೀ ಟಿ. ಸಿದ್ದಲಿಂಗಯ್ಯ ಮತ್ತು ಶ್ರೀ ಎಂ. ಎಸ್. ಜೋಯಿಸರನ್ನು ದಸ್ತಗಿರಿ ಮಾಡಿ ಮಂಡ್ಯದ ಮೊದಲನೇ ವರ್ಗದ ಮ್ಯಾಜಿ ಸ್ಟ್ರೇಟರ ಮುಂದೆ ಹಾಜರು ಪಡಿಸಲಾಯಿತು. ವಿಚಾರಣೆಯ ಅನಂತರ ಬಂಧಿತ ರನ್ನು ತಪ್ಪಿತಸ್ಥರೆಂದು ಮ್ಯಾಜಿಸ್ಟ್ರೇಟರು ತೀರ್ಪಿತ್ತು, ಶ್ರೀ ಟಿ. ಸಿದ್ದಲಿಂಗಯ್ಯನವ ರಿಗೆ 2½ ತಿಂಗಳು ಮತ್ತು ಶ್ರೀ ಎಂ. ಎಸ್. ಜೋಯಿಸರಿಗೆ 3½ ತಿಂಗಳು ಸಾದಾ ಶಿಕ್ಷೆಯನ್ನು ವಿಧಿಸಿದರು.

ವಿಷಯ ನಿಯಾಮಕ ಸಮಿತಿಯ ಸಭೆ

ಈ ನಡುವೆ ಬೆಳಗ್ಗೆ 10 ಗಂಟೆಗೆ 'ವಿಷಯ ನಿಯಾಮಕ ಸಮಿತಿ' ಅದಕ್ಕಾಗಿ ನಿರ್ಮಾಣವಾಗಿದ್ದ ಸಭಾಂಗಣದಲ್ಲಿ ನಡೆಯಿತು. ಅಧ್ಯಕ್ಷರಾದ ಶ್ರೀ ಹೆಚ್. ಸಿ. ದಾಸಪ್ಪನವರು ಧ್ವಜ ರಕ್ಷಣೆಗೆ ಕುಳಿತಿದ್ದುದರಿಂದ ಅವರ ಪರವಾಗಿ ಅಧ್ಯಕ್ಷತೆ ವಹಿಸಲು ಶ್ರೀ ಕೆ.ಟಿ. ಭಾಷ್ಯಂ ಅಯ್ಯಂಗಾರರನ್ನು ಕೋರಿಕೊಳ್ಳಲಾಗಿ ಅದರಂತೆ ಭಾಷ್ಯಂ ಅವರು ಅಧ್ಯಕ್ಷತೆ ವಹಿಸಿ ಕಾರ್ಯಕಲಾಪವನ್ನು ಆಗುಮಾಡಿಕೊಟ್ಟರು. ಬಹಳ ಕಾಲದವರೆಗೆ ಅನೇಕ ವಿಷಯಗಳು ಚರ್ಚೆಯಾಗಿ ಬಹಿರಂಗ ಅಧಿವೇಶನದಲ್ಲಿ ಮಂಡಿಸಲು ಕೆಲವು ನಿರ್ಣಯಗಳು ಸಿದ್ಧವಾದುವು. ದೀರ್ಘ ಚರ್ಚೆಗೆ ಒಳಗಾದ ವಿಷಯಗಳು ಇವು :

(1) ಮೈಸೂರು ಕಾಂಗ್ರೆಸ್ ಎಂದು ಜನ್ಮತಾಳಿದ ಈ ರಾಜಕೀಯ ಸಂಸ್ಥೆಯ ಅಸ್ತಿತ್ವವನ್ನು ಇದರ ಅಂಗರಚನೆಯೊಡನೆ ಸರಕಾರ ಒಪ್ಪಿಕೊಳ್ಳತಕ್ಕದ್ದು.

ಈವರೆಗೆ ಮೈಸೂರು ಸಂಸ್ಥಾನದ ಸರಕಾರ ಕಾಂಗ್ರೆಸ್ ಸಂಸ್ಥೆಯನ್ನು ಅಧಿಕೃತ ಸಂಸ್ಥೆಯೆಂದು ಪರಿಗಣಿಸಿರಲಿಲ್ಲ. ಕಾಂಗ್ರೆಸ್ ಮುಖಂಡರನ್ನು ಗೌರವಿಸಿರಲಿಲ್ಲ. ಅದಕ್ಕಾಗಿ ಮೇಲಿನ ನಿರ್ಣಯ ಬರಬೇಕಾಯಿತು. ಶ್ರೀ ಕೆ. ಸಿ. ರೆಡ್ಡಿ, ಶ್ರೀ ಹೆಚ್. ಸಿ. ದಾಸಪ್ಪ ಮೊದಲಾದ ಅನೇಕರು ಈ ಬಗೆಗೆ ವಾದವಿವಾದ ಮಾಡಿ ನಿರ್ಣಯ ಮಾಡಿದರು. ಮೈಸೂರು ಕಾಂಗ್ರೆಸ್ ವರ್ಕಿಂಗ್ ಕಮಿಟಿ ನೇಮಿಸಿದ ಶ್ರೀ ಟಿ. ಎಸ್. ರಾಜಗೋಪಾಲ ಅಯ್ಯಂಗಾರ್ಯರು ಮತ್ತು ಸ್ನೇಹಿತರು ಮೈಸೂರು ಕಾಂಗ್ರೆಸ್‌ನ ಅಂಗರಚನೆಯನ್ನು ಸಿದ್ಧಪಡಿಸಿದರು.

(2) ಶ್ರೀಮನ್ಮಹಾರಾಜರ ಕೃಪಾಶ್ರಯದಲ್ಲಿ ಜವಾಬ್ದಾರಿ ಸರ್ಕಾರವನ್ನು ಸ್ಥಾಪಿಸುವುದು ಮೈಸೂರು ಕಾಂಗ್ರೆಸ್‌ನ ಗುರಿ.

ಈ ವಿಷಯವನ್ನು ಶ್ರೀ ಟಿ. ಮರಿಯಪ್ಪನವರು ವಿಷಯ ನಿಯಾಮಕ ಸಮಿತಿಯ ಮುಂದಿಟ್ಟರು. ನಿರ್ಣಯವನ್ನು ಸಮರ್ಥಿಸಿ ಶ್ರೀ ಕೆ. ಟಿ. ಭಾಷ್ಯಂ, ಶ್ರೀ ವಿ. ವೆಂಕಟಪ್ಪ, ಶ್ರೀ ಎಚ್. ಕೆ. ವೀರಣ್ಣಗೌಡ, ಶ್ರೀ ಎ. ಜಿ. ಬಂದೀಗೌಡ, ಶ್ರೀ ಕೆ. ಹನುಮಂತಯ್ಯನವರು ಮಾತಾಡಿದರು.

(3) ಫೆಡರೇಷನ್ ವಿಚಾರವನ್ನು ಪರಿಶೀಲಿಸಲು ಮೈಸೂರು ಸರ್ಕಾರ ನೇಮಿಸಿರುವ ಸಮಿತಿಯನ್ನು ಕಾಂಗ್ರೆಸ್ ಒಪ್ಪುವುದಿಲ್ಲ. ಇತ್ಯಾದಿ.

ಮೈಸೂರ್ ಕಾಂಗ್ರೆಸ್ಸಿನ ಹಾಗೂ ಶಿವಪುರ ಅಧಿವೇಶನದ ಅಧ್ಯಕ್ಷರೆಂದು ಶ್ರೀ ಟಿ, ಸಿದ್ದಲಿಂಗಯ್ಯನವರು ನಾಮಕರಣ ಮಾಡಿದ್ದ ಶ್ರೀ ಹೆಚ್. ಸಿ. ದಾಸಪ್ಪ

ನವರಿಂದ ವಿಧಿವತ್ತಾಗಿ ರಾಷ್ಟ್ರಧ್ವಜದ ಅವರೋಹಣವು ಸಂಜೆ 6 ಗಂಟೆಗೆ ಸರಿಯಾಗಿ ನಡೆದ ಮೇಲೆ, ಮೈಸೂರ್ ಕಾಂಗ್ರೆಸ್ ರಾಷ್ಟ್ರಕೂಟದ ಬಹಿರಂಗ ಅಧಿವೇಶನ ಅದಕ್ಕಾಗಿ ನಿರ್ಮಿಸಿದ ಧ್ವಜ ಮೈದಾನದ ಸಭಾಂಗಣದಲ್ಲಿ ಪ್ರಾರಂಭವಾಯಿತು. ಬಹಿರಂಗ ಅಧಿವೇಶನ ಕಣ್ಮನ ತಣಿಸುವ ನಯನಮನೋಹರ ದೃಶ್ಯವಾಗಿತ್ತು. ಇಪ್ಪತ್ತು ಸಾವಿರಕ್ಕೂ ಹೆಚ್ಚು ಜನರು ಸೇರಿದ್ದರು. ರೈತರ ಸಂಖ್ಯೆಯೇ ಅಪಾರವಾಗಿತ್ತು. ಒಂದು ಸಾವಿರಕ್ಕೂ ಮೇಲ್ಪಟ್ಟು ಸ್ತ್ರೀಯರು ಹಾಜರಿದ್ದರು. ಬಣ್ಣ ಬಣ್ಣದ ವಿದ್ಯುದ್ದೀಪಗಳು, ದೇಶಸೇವಿಕೆಯರ ಕೇಸರಿ ಬಣ್ಣದ ಉಡುಪುಗಳು ಆಕರ್ಷಕವಾಗಿದ್ದುವು.

ಸಂಜೆ 6 ಗಂಟೆಯ ಬಹಿರಂಗ ಅಧಿವೇಶನದಲ್ಲಿ ಪಾಲ್ಗೊಳ್ಳಲು ಒಂದೆರಡು ಗಂಟೆಗಳಿಗೂ ಮೊದಲೇ ಸಾವಿರಾರು ಜನರು ಬಹಿರಂಗ ಅಧಿವೇಶನದ ಸಭಾಂಗಣಕ್ಕೆ ಬಂದು ಕುಳಿತುಕೊಂಡರು. ಸ್ವಾಗತ ಸಮಿತಿಯ ಪೋಷಕರಿಗೆ, ಸದಸ್ಯರಿಗೆ ಪ್ರತಿನಿಧಿಗಳಿಗೆ, ವಿಷಯ ನಿಯಾಮಕ ಸಮಿತಿಯ ಸದಸ್ಯರಿಗೆ, ಪ್ರತ್ಯೇಕ ಸ್ಥಳಗಳಿದ್ದುವು. ಆಯಾಯ ಸ್ಥಳಗಳಲ್ಲಿ ಆಯಾಯ ಜನರು ಕುಳಿತುಕೊಳ್ಳಲು ಸ್ವಯಂ ಸೇವಿಕೆಯರು ಸಹಾಯ ಮಾಡಿದರು. ಮತ್ತು ಸಭಾಂಗಣದಲ್ಲೆಲ್ಲಾ ನೀಲಿ ನಿಕ್ಕರ್, ಬಿಳಿ ಷರಟು ಮತ್ತು ಟೋಪಿಗಳನ್ನು ಧರಿಸಿದ ಸ್ವಯಂಸೇವಕರು, ಕೇಸರಿ ಬಣ್ಣದ ಸೀರೆ, ಹಸುರು ಕುಪ್ಪಸವನ್ನು ತೊಟ್ಟಿದ್ದ ಸ್ವಯಂ ಸೇವಿಕೆಯರು ಎದ್ದು ಕಾಣುತ್ತಿದ್ದರು. ಅವರ ಶಿಸ್ತು ಕಾರ್ಯದಕ್ಷತೆ ಎಲ್ಲರನ್ನೂ ಆಕರ್ಷಿಸಿತ್ತು. ಅವರ ಗುಂಪಿನ ವಿಭಾಗದ ಹೆಸರು ಮತ್ತು ಅವರ ಹೆಸರುಗಳನ್ನೊಳಗೊಂಡ ದುಂಡನೆಯ ಬ್ಯಾಡ್ಜ್‌ಗಳನ್ನು ಅವರು ಧರಿಸಿದ್ದರು. ಇಂಥ ಬ್ಯಾಡ್ಜ್‌ಗಳು ಬೇರೆ ಬೇರೆ ಆಕಾರ ಮತ್ತು ಅಲಂಕಾರದಲ್ಲಿ ಎಲ್ಲ ಕಾರ್ಯಕರ್ತರಲ್ಲೂ ಕಂಡು ಬರುತ್ತಿದ್ದುವು. ಶಾಂತಿಯಿಂದಿರುವುದನ್ನು ಜನರು ಆಗಲೇ ಅಭ್ಯಾಸ ಮಾಡಿಕೊಂಡಿದ್ದರು.

ದೇಶಸೇವಿಕೆಯರು ಮುಳುಗುವ ಸೂರ್ಯನಿಗೆ ಅಭಿಮುಖವಾಗಿ ನಿಂತು ಕೈ ಮುಗಿದುಕೊಂಡು ಶಿಸ್ತಿನಿಂದ ರಾಷ್ಟ್ರಗೀತೆಯನ್ನು ಸುಶ್ರಾವ್ಯವಾಗಿ ಗಾನಮಾಡಿ ಮಂಗಳಾಚರಣೆ ಮಾಡಿದರು. ಅನಂತರ ಮೈಸೂರಿನ ಶ್ರೀ ಎನ್. ವಿಷಕಂಠರಾಯರು ರಾಷ್ಟ್ರೀಯ ಭಾವನೆಗಳನ್ನು ಉದ್ದೀಪಿಸುವ ಲಾವಣಿಗಳನ್ನು ಹಾಡಿದರು. ಶ್ರೀ ಹೆಚ್. ಸಿ. ದಾಸಪ್ಪನವರನ್ನುಳಿದು ಉಳಿದ ಮುಖಂಡರು ವೇದಿಕೆಯ ಮೇಲಿದ್ದರು.

ರಾಷ್ಟ್ರಕೂಟದ ಸ್ವಾಗತಾಧ್ಯಕ್ಷರಾದ ಶ್ರೀ ಎಸ್. ಚನ್ನಯ್ಯನವರು ಸ್ವಾಗತ ಭಾಷಣ ಮಾಡುವ ಮೊದಲು ಬೆಳಗ್ಗೆ ಧ್ವಜಸತ್ಯಾಗ್ರಹದ ಸಂದರ್ಭದಲ್ಲಿ ನಡೆದ ಅಸಂಗತ ಘಟನೆಯನ್ನು ಕುರಿತು ವಿವರವಾಗಿ ಪ್ರಸ್ತಾಪಿಸಿ, ಜನಸಮೂಹಕ್ಕೆ ಕಣ್ಣಿಗೆ ಕಟ್ಟುವಂತೆ ವರ್ಣಿಸಿದರು. "ತಮಗೆಲ್ಲರಿಗೂ ಈ ಮೈಸೂರು ಕಾಂಗ್ರೆಸ್ ಸಭೆಯ ಪ್ರಥಮ ಅಧಿವೇಶನಕ್ಕೆ ಸ್ವಾಗತ ಬಯಸುವ ಮುನ್ನ ಈ ದಿವಸ ಪ್ರಾತಃಕಾಲ

ಧ್ವಜಾರೋಹಣ ಸಮಯದಲ್ಲಿ ನಡೆದ ಸಂಘಟನೆಯ ವಿಷಯವಾಗಿ ಒಂದೆರಡು ಮಾತುಗಳನ್ನು ಆಡದೆ ಇರಲು ಸಾಧ್ಯವಿಲ್ಲ. ಭಾರತ ಭೂಮಿಯ ಏಕಮಾತ್ರ ಧ್ವಜವನ್ನು ಮೈಸೂರಿನ ರಾಷ್ಟ್ರಪತಿಯವರಾದ ಶ್ರೀ ಟಿ. ಸಿದ್ದಲಿಂಗಯ್ಯನವರು ಹಾರಿಸಬೇಕಾಗಿದ್ದ ವಿಷಯ ಎಲ್ಲರಿಗೂ ತಿಳಿದಿತ್ತು. ಆದರೆ, ನಿನ್ನೆಯ ದಿವಸ ಮೈಸೂರು ಜಿಲ್ಲಾ ಮ್ಯಾಜಿಸ್ಟ್ರೇಟರು ಧ್ವಜಾರೋಹಣ ಮಾಡುವುದು, ಶ್ರೀಮನ್ಮಹಾರಾಜರ ರಾಜತ್ವಕ್ಕೆ ಲೋಪ ತರುತ್ತದೆಂಬ ಕಾರಣದಿಂದ ಸಾರ್ವಜನಿಕರು ಆಕ್ಷೇಪಿಸುತ್ತಾರೆಂದು ಕಾರಣ ನಮೂದಿಸಿ, ಪೋಲೀಸ್ ಶಾಸನ 39ನೆಯ ನಿಯಮದ ಪ್ರಕಾರ ಪ್ರತಿಬಂಧಕಾಜ್ಞೆಯನ್ನು 25 ಜನ ಮುಖಂಡರುಗಳ ಮೇಲೆ ಪ್ರಯೋಗ ಮಾಡಿದ್ದಲ್ಲದೆ, ಡಂಗುರ ಸಹ ಹಾಕಿಸಿದರು. ಆದರೆ, ಧ್ವಜಾರೋಹಣವನ್ನು ನಿಲ್ಲಿಸುವುದು ಕಾಂಗ್ರೆಸ್ಸಿನ ಗೌರವಕ್ಕೂ ಮತ್ತು ಭರತಭೂಮಿಯ ಗೌರವಕ್ಕೂ ತಕ್ಕದ್ದಲ್ಲವೆಂದು ತಿಳಿಸಿ ಧ್ವಜಾರೋಹಣವನ್ನು ಮಾಡಲೇಬೇಕೆಂದು ನಿರ್ಧರಿಸಲಾಯಿತು. ಅದೇ ಪ್ರಕಾರ ಈ ದಿನ ಪ್ರಾತಃಕಾಲ ಸಾವಿರಾರು ಜನರ, ಮೇಲ್ಕಂಡ 25 ಜನ ಮುಖಂಡರ ಮತ್ತು 'ಮೈಸೂರ್ ಕಾಂಗ್ರೆಸ್ ವರ್ಕಿಂಗ್ ಕಮಿಟಿ'ಯ ಸದಸ್ಯರುಗಳ ಸಮ್ಮುಖದಲ್ಲಿ ಶ್ರೀ ಟಿ. ಸಿದ್ದಲಿಂಗಯ್ಯನವರು ಧ್ವಜವನ್ನು ವಂದಿಸಿ ಹಾರಿಸುವ ಸಮಯದಲ್ಲಿ ಅವರನ್ನು ಪೋಲೀಸರು ದಸ್ತಗಿರಿ ಮಾಡಿದರು. ತಕ್ಷಣ ಸ್ವಯಂ ಸೇವಕ ದಳದ ಸೇನಾಪತಿಯಾದ ಶ್ರೀ ಎಂ. ಎನ್. ಜೋಯಿಸ್‌ರವರು ಜನಾಂಗದ ಪ್ರಾಣವಾಯುವಾದ ಧ್ವಜವನ್ನು ಹಾರಿಸಿ ದಸ್ತಗಿರಿಯಾದರು. ಇಬ್ಬರಿಗೂ ಶಿಕ್ಷೆ ವಿಧಿಸಲ್ಪಟ್ಟಿತು. ಈ ರೀತಿ ಪ್ರತಿಬಂಧಕಾಜ್ಞೆಯನ್ನು ಉಲ್ಲಂಘಿಸಿ ರಾಷ್ಟ್ರಧ್ವಜದ ಗೌರವವನ್ನು ಕಾಪಾಡಿದ ಕೀರ್ತಿಯು ಇಂದು ಮೈಸೂರಿನವರದು. ರಾಷ್ಟ್ರಧ್ವಜವನ್ನು ಆರೋಹಣ ಮಾಡಿದುದರಿಂದ ನಮ್ಮನ್ನಾಳುವ ವ್ಯಕ್ತಿತ್ವಕ್ಕಾಗಲಿ, ಆಡಳಿತಕ್ಕಾಗಲಿ ಎಳ್ಳಷ್ಟೂ ಕುಂದಕ ಬರುವುದಿಲ್ಲವೆಂಬುದನ್ನು ನಾನು ಖಚಿತವಾಗಿ ಹೇಳಬಯಸುತ್ತೇನೆ. ಸ್ವಾಗತ ಸಮಿತಿಯ ಅಭಿವಂದನೆಗಳು ಶ್ರೀ ಸಿದ್ದಲಿಂಗಯ್ಯನವರಿಗೂ ಶ್ರೀ ಜೋಯಿಸರಿಗೂ ಸಲ್ಲಬೇಕಾಗಿದೆ.........." ಎಂದು ಶ್ರೀ ಚನ್ನಯ್ಯನವರು ಪ್ರಾರಂಭದ ಮಾತುಗಳನ್ನು ಆಡುತ್ತಿದ್ದಂತೆ, ಧ್ವಜ ಅವರೋಹಣವನ್ನು ಮುಗಿಸಿದ ಶ್ರೀ ಹೆಚ್. ಸಿ. ದಾಸಪ್ಪನವರು ಬಹಿರಂಗಾಧಿವೇಶನದ ವೇದಿಕೆಗೆ ದಯಮಾಡಿಸಿದರು. ಅಸಂಖ್ಯಾತ ಜನರು ಕರತಾಡನ ಮಾಡಿ ಜಯಘೋಷ ಮೊಳಗಿಸಿದರು. ಮುಖಂಡರುಗಳು ಶ್ರೀ ದಾಸಪ್ಪನವರನ್ನು ಬರಮಾಡಿಕೊಂಡರು. ಜಿ.ಒ.ಸಿ.ಗಳಾದ ಡಾ॥ ವೈ. ಪಾರ್ಥನಾರಾಯಣ ಪಂಡಿತರು ಅಧ್ಯಕ್ಷರಿಗೆ ವಂದನೆ ಮಾಡಿ ಗೌರವ ಸಲ್ಲಿಸಿದರು. ಶ್ರೀ ದಾಸಪ್ಪನವರು ವಿಶೇಷವಾಗಿ ಅಲಂಕರಿಸಿದ್ದ ವೇದಿಕೆಯ ಮೇಲೆ ಕುಳಿತುಕೊಂಡರು.

ಅನಂತರ ಸ್ವಾಗತಾಧ್ಯಕ್ಷರಾದ ಶ್ರೀ ಎಸ್. ಚನ್ನಯ್ಯನವರು ಮೊದಲೇ ಸಿದ್ಧಪಡಿಸಿಕೊಂಡು ಬಂದಿದ್ದ ಸ್ವಾಗತಭಾಷಣವನ್ನು ಬಹಿರಂಗ ಅಧಿವೇಶನದ ಮುಂದೆ

ಸ್ಪಷ್ಟವಾಗಿ ದಿಟ್ಟವಾಗಿ ಓದಿದರು. ಶ್ರೀ ಎಸ್. ಚನ್ನಯ್ಯನವರು ಅಂದಿನ ಶಕ್ತ ರಾಜಕಾರಣಿಯಾಗಿದ್ದರು. ಸರಕಾರದ ರೀತಿನೀತಿಗಳನ್ನು ಸಮರ್ಥವಾಗಿ ಧೈರ್ಯದಿಂದ ವಿಮರ್ಶಿಸುವ ಕೆಚ್ಚನ್ನು ಗಳಿಸಿಕೊಂಡಿದ್ದರು. ಅಂದಿನ ರಾಜಕೀಯ ಪರಿಸ್ಥಿತಿಯನ್ನು, ಮುಂದಿನ ಜನರ ಜವಾಬ್ದಾರಿಯನ್ನು ಚೆನ್ನಾಗಿ ಮನಗಂಡಿದ್ದರು. ಅವರು ತಮ್ಮ ಸ್ವಾಗತ ಭಾಷಣದಲ್ಲಿ ಹಲವು ಮುಖ್ಯ ವಿಷಯಗಳನ್ನು ಪ್ರಸ್ತಾಪಿಸಿದರು. ಅವರದು ಕೇವಲ ಸಾಂಪ್ರದಾಯಿಕ ಭಾಷಣವಲ್ಲ.

ಶಿವಪುರ ರಾಷ್ಟ್ರಕೂಟದ ಉದ್ದೇಶ, ಅಂದಿನ ಸರಕಾರದ ಜನ ವಿರೋಧಿ ಕಾರ್ಯಚಟುವಟಿಕೆ, ಅಂಗರಚನೆಯ ಅಂಗೀಕಾರ ಮೊದಲಾದುವುಗಳ ಬಗೆಗೆ ಶ್ರೀ ಚನ್ನಯ್ಯನವರ ನಿಶ್ಚಿತ ನಿಲುವು ಅವರ ಸ್ವಾಗತ ಭಾಷಣದಲ್ಲಿ ಕಂಡು ಬಂದುವು. ಅವರದೇ ಆದ ಗಂಡು ಶೈಲಿಯಲ್ಲಿ ರಚನೆಯಾಗಿರುವ, ಸಂಕ್ಷಿಪ್ತವೂ ಉಪಯುಕ್ತವೂ ಆದ ಸ್ವಾಗತ ಭಾಷಣವನ್ನು ಇಡಿಯಾಗಿ ಅವಲೋಕಿಸುವುದರಿಂದ ಹೆಚ್ಚು ಉಪಯೋಗವಿದೆ :

ಶ್ರೀ ಎಸ್. ಚನ್ನಯ್ಯನವರ ಸ್ವಾಗತ ಭಾಷಣ

"ಪ್ರಿಯ ಸ್ನೇಹಿತರೇ,

ಸ್ವಾಗತಸಮಿತಿಯ ಪರವಾಗಿ ತಮ್ಮೆಲ್ಲರಿಗೂ ಈ ಮೈಸೂರು ಕಾಂಗ್ರೆಸ್ ಸಭೆಯ ಪ್ರಥಮ ಅಧಿವೇಶನಕ್ಕೆ ಹೃತ್ಪೂರ್ವಕ ಸಾದರ ಸ್ವಾಗತವನ್ನು ಅತ್ಯಂತ ಹರ್ಷದಿಂದ ಬಯಸುತ್ತೇನೆ. ಹೋದ ಜನವರಿಯಲ್ಲಿ ಚಿತ್ರದುರ್ಗದಲ್ಲಿ ಮೈಸೂರಿನ ಕಾಂಗ್ರೆಸ್‌ನ ರಾಷ್ಟ್ರಕೂಟವು ನಡೆದಾಗ (ಆಗ ಮೈಸೂರು ಕಾಂಗ್ರೆಸ್ ಅಖಿಲ ಭಾರತ ಕಾಂಗ್ರೆಸ್ಸಿನ ಅಂಗ ಸಂಸ್ಥೆಯಾಗಿತ್ತು) ಮುಂದಣ ರಾಷ್ಟ್ರಕೂಟದ ಅಧಿವೇಶನವು ಮೈಸೂರು ಡಿಸ್ಟ್ರಿಕ್ಟ್‌ನಲ್ಲಿ ನಡೆಯಬೇಕೆಂದು ಆಹ್ವಾನವಿತ್ತೆವು. ಆಗ ಸಭೆಯು ಇಷ್ಟು ಶೀಘ್ರದಲ್ಲಿ ಮೂರು ತಿಂಗಳೊಳಗಾಗಿಯೇ ಸೇರುವುದೆಂದು ನಾವು ನಿರೀಕ್ಷಿಸಿರಲಿಲ್ಲ. ಸಾಧಾರಣವಾಗಿ ಈ ವರ್ಷದ ಡಿಸೆಂಬರ್ ತಿಂಗಳಲ್ಲೋ ಅಥವಾ ಮುಂದಣ ಜನವರಿಯಲ್ಲೋ ಸಮ್ಮೇಳನವು ನಡೆಯಬೇಕಾಗಿತ್ತು. ನಾವು ಸಿದ್ಧರಾಗಿರಲಿ ಇಲ್ಲದಿರಲಿ ಸನ್ನಿವೇಶಗಳು ತ್ವರಿತವಾಗಿಯೂ ಅನಿರೀಕ್ಷಿತವಾಗಿಯೂ ಒಟ್ಟುಗೂಡಿ ಅವಸರದಿಂದ ಈ ಸಮಯದಲ್ಲಿ ಸಮ್ಮೇಳನವು ನಡೆಯುವಂತೆ ಮಾಡಿವೆ. ಇಷ್ಟು ಅವಸರದಿಂದ ಅಲ್ಪಕಾಲದ ಅವಧಿಯೊಳಗೆ ಸಮ್ಮೇಳನವು ಸೇರಬೇಕಾಗಿ ಬಂದಿರುವುದರಿಂದ ಈ ಸಮ್ಮೇಳನದ ಸಿದ್ಧತೆಗಳಲ್ಲಿ ಕುಂದುಕೊರತೆಗಳು ಬೇಕಾದಷ್ಟಿವೆಯೆಂಬುದನ್ನು ಬಲ್ಲೆವು. ಮಹನೀಯರೇ, ತಾವು ಇಲ್ಲಿರುವಾಗ ತಮಗೆ ಪ್ರಾಪ್ತವಾಗಬಹುದಾದ ಅಸೌಖ್ಯಗಳಿಗಾಗಿ ನಮ್ಮನ್ನು ಕ್ಷಮಿಸಬೇಕೆಂದೂ ತಾವು ಇಲ್ಲಿಂದ ತೆರಳುವಾಗ ಆ ನ್ಯೂನತೆಗಳನ್ನು ಮರೆತು ಹರ್ಷಚಿತ್ತರಾಗಿ ಹಿಂದಿರುಗಬೇಕೆಂದೂ ಬೇಡಿಕೊಳ್ಳುತ್ತೇನೆ.

ಚಿತ್ರದುರ್ಗದ ರಾಷ್ಟ್ರಕೂಟವು ನಡೆದ ಮೇಲೆ ಕ್ಷಿಪ್ರದಲ್ಲೇ ಈ ಅಧಿವೇಶನವು ಏತಕ್ಕಾಗಿ ಸೇರಿಸಲ್ಪಟ್ಟಿತೆಂಬುದನ್ನು ಸೂಚಿಸುವುದು ವಿನಹ ಮಿಕ್ಕ ರಾಜಕೀಯ ಪರಿಸ್ಥಿತಿಯ ವಿಷಯವಾಗಿ ನಾನೇನನ್ನೂ ಹೇಳಲಗತ್ಯವಿಲ್ಲ. ನಾವು ಚಿತ್ರದುರ್ಗದಲ್ಲಿ ಸೇರಿದಾಗ ನಮ್ಮ ಮುಖಂಡರನೇಕರು ಕಾರಾಗೃಹದಲ್ಲಿದ್ದರು. ದಬ್ಬಾಳಿಕೆಯೂ ಪ್ರತಿಬಂಧಕಾಜ್ಞೆಗಳೂ ಸರ್ವವ್ಯಾಪಿಯಾಗಿದ್ದವು; ಕೆಲವು ಪತ್ರಿಕೆಗಳು ನಿಲ್ಲಿಸಲ್ಪಟ್ಟವು; ಅವುಗಳಲ್ಲೊಂದರ ಸಂಪಾದಕರು ಸಂಸ್ಥಾನದಿಂದ ಹೊರದೂಡಿಸಲ್ಪಟ್ಟರು. ಚಿತ್ರದುರ್ಗದ ಸಭೆಯು ಬಹಿರಂಗವಾಗಿ ನಡೆಯಲು ಸಾರ್ವಜನಿಕ ಸ್ಥಳಗಳಲ್ಲಿ ಸಭೆನಡೆಸ ಕೂಡದೆಂದು ಪ್ರತಿಬಂಧಕಾಜ್ಞೆಯು ಆಚರಣೆಯಲ್ಲಿದ್ದುದರಿಂದ ಅವಕಾಶವಾಗಲಿಲ್ಲ. ಮೈಸೂರಿನ ಕಾಂಗ್ರೆಸ್ ಸಭೆಯು ಅದಕ್ಕೆ ಮುಂಚಿತವಾಗಿಯೇ ಸ್ವಾರ್ಥಪರಿತ್ಯಾಗದ ಕಟ್ಟಳೆಯೊಂದನ್ನು ವಿಧಿಸಿದ್ದುದರಿಂದ ಕಾಂಗ್ರೆಸ್ ಸದಸ್ಯರಾರೂ ಪ್ರತಿಬಂಧಕ ಶಾಸನಗಳನ್ನು ಮುರಿಯಲಾಗಲಿಲ್ಲ. ಚಿತ್ರದುರ್ಗದ ಸಮ್ಮೇಳನದಲ್ಲಿ ಈ ಸ್ವಾರ್ಥ ಪರಿತ್ಯಾಗದ ಕಟ್ಟಳೆಯನ್ನು ತೆಗೆದು ಫೆಬ್ರುವರಿ 6 ನೇ ತಾರೀಖಿನಿಂದ ಪ್ರತಿಬಂಧಕಾಜ್ಞೆಗಳನ್ನು ಮುರಿಯುವ ಸ್ವಾತಂತ್ರ್ಯವು ವೈಯಕ್ತಿಕವಾಗಿ ಕಾಂಗ್ರೆಸ್ ಸದಸ್ಯರಿಗೆ ಕೊಡಲ್ಪಟ್ಟಿತು. ಈ ನಿರ್ಧಾರದಿಂದ ಸರ್ಕಾರಕ್ಕೂ ಗಾಬರಿಯುಂಟಾಗಿ ರಾಜದ್ರೋಹ ಮತ್ತು ಇತರ ಆಪಾದನೆಗಳ ಮೇಲೆ ಮುಖಂಡರನ್ನು ಬಂಧಿಸಿ ವಿಚಾರಣೆಗಳಿಗೆ ಗುರಿಪಡಿಸುವ ನಿರೂಪಗಳು ಹೊರಡುವುದರಲ್ಲಿದ್ದವು. ಕೆಲವು ಮುಖಂಡರು ಬಂಧಿಸಲ್ಪಟ್ಟು ವಿಚಾರಣೆಗೂ ಗುರಿಯಾದರು. ಇಷ್ಟರಲ್ಲಿ ಸಂಧಾನ ಪ್ರಾರಂಭವಾಯಿತು. ಕಾಂಗ್ರೆಸ್ಸಿನ ಅಧ್ಯಕ್ಷರೂ ಹಲವು ಮುಖಂಡರೂ ಸೆರೆಯಲ್ಲಿರುವಾಗ ಸಂಧಾನವಾರಂಭವಾದ ವಿಷಯದಲ್ಲಿ ಭಿನ್ನಾಭಿಪ್ರಾಯವಿತ್ತು. ಹೇಗೂ ಸಂಧಾನವು ಫಲಕಾರಿಯಾಗಲಿಲ್ಲ. ಸರಕಾರವು ಕಾಂಗ್ರೆಸ್ ಸಮಸ್ಯೆಯನ್ನು ಗಣನೆಗೆ ತೆಗೆದುಕೊಳ್ಳಲಿಲ್ಲ. (ಸಂಧಾನವು ಮುರಿದು ಬೀಳಲು ಇದಕ್ಕಿಂತ ಅಧಿಕವಾದ ಕಾರಣವೇ ಬೇಕಿಲ್ಲವೆಂಬುದು ನನ್ನ ಅಭಿಪ್ರಾಯ). ಒಡನೆಯೇ ರಾಜಕೀಯ ಬಂದಿಗಳನ್ನು ಬಿಡುಗಡೆ ಮಾಡಬೇಕೆಂದೂ ಮೊಖದ್ದಮೆಗಳನ್ನು ವಾಪಸು ತೆಗೆದುಕೊಳ್ಳಬೇಕೆಂದೂ ನಿರೂಪವು ಹೊರಬಿತ್ತು.

ದೇಶೀಯ ಸಂಸ್ಥಾನಗಳಿಗೆ ಸಂಬಂಧಪಟ್ಟ ವಾರ್ಧಾನಿರ್ಣಯವು ಕಾಂಗ್ರೆಸ್ಸಿನ ಧ್ಯೇಯವು ಸಂಪೂರ್ಣ ಜವಾಬ್ದಾರಿ ಸರ್ಕಾರ ಸ್ಥಾಪನೆ ಮತ್ತು ವ್ಯಕ್ತಿ ಸ್ವಾತಂತ್ರ್ಯವೆಂಬಂಶವನ್ನು ನಿಸ್ಸಂದೇಹವಾಗಿ ಸ್ಥಿರಪಡಿಸಿದರೂ ತಾತ್ಕಾಲಿಕವಾಗಿ ಸಂಸ್ಥಾನಗಳಲ್ಲಿ ಅಖಿಲ ಭಾರತ ಕಾಂಗ್ರೆಸ್ ಸಮಿತಿಗಳ ಸ್ಥಾಪನೆಗೆ ಕೊಡಲಿಯಿಟ್ಟಿತು. ಇದು ಸಂಸ್ಥಾನಗಳ ಬಹುಮಂದಿ ಪ್ರಜೆಗಳ ಹುರುಪಿಗೆ ತಣ್ಣೀರೆರಚಿದರೂ ಹರಿಪುರದ ಅಧಿವೇಶನದಲ್ಲಿ ಈ ನಿರ್ಣಯವು ಬಿದ್ದು ಹೋಗಬಹುದೆಂಬ ಆಶೆಯೊಂದುಳಿದು ಸಂಸ್ಥಾನದ ಪ್ರಜೆಗಳು ನಿರಾಶರಾಗಲಿಲ್ಲ.

ಹರಿಪುರದ ನಿರ್ಣಯಂವು ಕಾಂಗ್ರೆಸ್ಸಿನ ಎರಡು ಪಕ್ಷಗಳ ಮಧ್ಯಮಾರ್ಗವನ್ನವ ಲಂಭಿಸಿತು. ಸಂಸ್ಥಾನದ ಪ್ರಜೆಗಳಿಗೆ ಈ ನಿರ್ಣಯವು ತೃಪ್ತಿಕರವಾಗಲಿಲ್ಲ. ಮೈಸೂರಿಗಂತೂ ಈ ನಿರ್ಣಯವು ಕೇವಲ ಅನಾನುಕೂಲವನ್ನೇ ಉಂಟುಮಾಡಿದೆ. ಅಖಿಲ ಭಾರತ ಕಾಂಗ್ರೆಸ್ಸಿನ ಅಂಗಸಂಸ್ಥೆಯಾಗಿ ಕಾಂಗ್ರೆಸ್ ಸಮಿತಿಗಳು ಸಂಸ್ಥಾನ ಗಳಲ್ಲಿ ಸ್ಥಾಪಿತವಾಗದೆ ಆ ಸಂಸ್ಥೆಗಳು ಯಶಸ್ವಿಯಾಗಿ ಸಂಸ್ಥಾನಗಳಲ್ಲಿ ಕೆಲಸಮಾಡ ಲಾರವೆಂಬ ಭಾವನೆಯು 18 ವರ್ಷಗಳಿಂದ ನಡೆದು ಬರುತ್ತಿರುವ 17,000 (ಹೋದ ವರ್ಷದಲ್ಲಿ) ಸದಸ್ಯರಿಂದ ಕೂಡಿರುವ ಮೈಸೂರು ಕಾಂಗ್ರೆಸ್ಸಿಗೆ ಅನ್ವಯಿಸ ಲಾರದು. ರಾಷ್ಟ್ರಧ್ವಜಕ್ಕೆ ಉಂಟಾಗಬಹುದಾದ ಅಪಮಾನದ ಅಸಹನೆಗಾಗಿ ಸಂಸ್ಥಾನ ಗಳಲ್ಲಿ ಕಾಂಗ್ರೆಸ್ ಸಮಿತಿಗಳಿರಕೂಡದೆಂದರೆ ಆ ತೆರವಾದ ಅಪಮಾನಗಳನ್ನು ಮೈಸೂರು ಸಹಿಸಲಾರದೆಂದೂ ಮೈಸೂರು ಕಾಂಗ್ರೆಸ್ ತೋರಿಸಿಕೊಟ್ಟಿದೆ. ಜಿಲ್ಲಾ ಮ್ಯಾಜಿಸ್ಟ್ರೇಟರ ಆಜ್ಞೆಯನ್ನುಲ್ಲಂಘಿಸಿ ಶ್ರೀಮತಿ ಸುಬ್ಬಮ್ಮ ಜೋಯಿಸರು ಸ್ವಾತಂತ್ರ್ಯ ಪ್ರತಿಜ್ಞೆಯನ್ನು ತೆಗೆದುಕೊಂಡುದೂ ಸ್ವಾತಂತ್ರ್ಯ ದಿನಾಚರಣೆಯ ದಿನ ಶ್ರೀರಂಗಯ್ಯನವರು ರಾಷ್ಟ್ರಧ್ವಜವನ್ನು ಎತ್ತಿಹಿಡಿದು ಕಾರಾಗೃಹವನ್ನು ಪ್ರವೇ ಶಿಸಿದುದೂ ಮೈಸೂರು ಕಾಂಗ್ರೆಸ್ ರಾಷ್ಟ್ರಧ್ವಜಕ್ಕೆ ಎಂದಿಗೂ ಅಪಮಾನ ತರಲಾರ ದೆನ್ನಲು ನಿದರ್ಶನಗಳಾಗಿವೆ. ಹೇಗೂ ಹರಿಪುರದ ನಿರ್ಣಯದ ಫಲವಾಗಿ ಶಾಸನಾನು ರೂಪವಾಗಿಯೂ ನ್ಯಾಯಸಮ್ಮತವಾಗಿಯೂ ರಾಜಕೀಯ ಧೋರಣೆಗಳನ್ನು ನಡೆಸಲು, ಅಖಿಲಭಾರತ ಕಾಂಗ್ರೆಸ್ ಸಂಸ್ಥೆಯಿಂದ ಪ್ರತ್ಯೇಕವಾದ ಒಂದು ಸಂಸ್ಥೆ ಯೇರ್ಪಡಬೇಕಾದ ಸನ್ನಿವೇಶವು ಒದಗಿತು. (ಅಖಿಲ ಭಾರತ ಕಾಂಗ್ರೆಸ್ಸಿನ ಅಂಗ ಸಂಸ್ಥೆಯಾದ ಸಮಿತಿಗಳು ಕಾಂಗ್ರೆಸ್ಸಿನ ರಚನಾತ್ಮಕ ಕಾರ್ಯಕ್ರಮಗಳನ್ನು ಮಾತ್ರ ನಡೆಸಿಕೊಂಡು ಹೋಗುವುವು.)

ಹೀಗೆ ಸ್ಥಾಪಿಸಲ್ಪಟ್ಟ ಹೊಸ ಸಂಸ್ಥೆಗೆ 'ಮೈಸೂರು ಕಾಂಗ್ರೆಸ್' ಎಂಬ ಹೆಸರನ್ನಿಟ್ಟಿದೆ. ಈ ಸಂಸ್ಥೆಯು ಈಗಾಗಲೇ ಅನೇಕ ಕಡೆಗಳಿಂದ ಆಶೀರ್ವಾದ ರೂಪವಾದ ಬೆಂಬಲವನ್ನು ಹೊಂದಿದೆ. ಈ ಅಧಿವೇಶನದ ಮುಂಬರುವ ಮುಖ್ಯ ಸಮಸ್ಯೆಗಳ ವಿಚಾರವಾಗಿ ನಾನೇನನ್ನೂ ಹೇಳಬಯಸುವುದಿಲ್ಲ. ಅದು ಅಧ್ಯಕ್ಷರ ಎಲ್ಲೆಗೆ ಸೇರಿದ ವಿಷಯ. ಪ್ರಥಮತಃ 'ಮೈಸೂರು ಕಾಂಗ್ರೆಸ್ಸಿ'ನ ರಚನೆಯು ಅಂಗೀಕರಿಸಲ್ಪಡಬೇಕು. ಎಲ್ಲರನ್ನೂ ತೃಪ್ತಿಪಡಿಸಬಲ್ಲ ವ್ಯವಸ್ಥೆಯನ್ನು ರಚಿಸು ವುದು ಕಷ್ಟವೆಂಬುದು ಸರ್ವ ವಿಧಿತವಾಗಿದೆ; ಸಂಸ್ಥಾನದ ಪ್ರಜೆಗಳ ಬೆಂಬಲ ಸಹ ಕಾರಗಳಿಂದ ರಾಷ್ಟ್ರದ ರಾಜಕೀಯ ನೀತಿಯನ್ನು ಉತ್ತಮಗೊಳಿಸುವ ಧ್ಯೇಯದಿಂದ ಕೂಡಿರುವ ಈ ವ್ಯವಸ್ಥೆಯು ಸ್ತೋತ್ರಾರ್ಹವಾದುದೆಂದು ಮಾತ್ರ ನಾನೀಗ ಹೇಳ ಬಯಸುತ್ತೇನೆ.

ಇದಕಿಂತಲೂ ಅಧಿಕವಾದ ಮತ್ತು ಅತ್ಯವಶ್ಯಕವಾದ ಸಮಸ್ಯೆಯೆಂದರೆ (ಸಂಸ್ಥಾನದಲ್ಲಿ ಜವಾಬ್ದಾರಿ ಸರ್ಕಾರ ಸ್ಥಾಪಿಸುವ) ನಮ್ಮ ಗುರಿಯನ್ನು ಸಾಧಿಸುವ ಬಗೆ ಹೇಗೆ ಎಂಬುದೇ. ಸುಧಾರಣಾ ಸಮಿತಿಯಲ್ಲಿ ಸಹಕರಿಸುವುದರಿಂದಲೇ ?

ಅಥವಾ ಸ್ವತಂತ್ರವಾಗಿಯೇ ? ಈ ಸಮಯದಲ್ಲಿ ಒಂದಂಶವನ್ನು ಮಾತ್ರ ನಾವು ಮರೆಯಲಾರೆವು ಮತ್ತು ಮರೆಯಲೂ ಕೂಡದು. ಇಡೀ ಸಂಸ್ಥಾನವೇ ಕಾಂಗ್ರೆಸ್ಸಿನ ಹಿಂದಿದೆಯೆಂಬುದನ್ನು ನೆನಪಿನಲ್ಲಿಡಿ. ಈಗತಾನೆ ನಡೆದ ಉಪಚುನಾವಣೆಗಳಲ್ಲಿ 11 ಸ್ಥಾನಗಳೂ ಕಾಂಗ್ರೆಸ್ಸಿಗೇ ಲಭಿಸಿದವು. ಉಳಿದ ನಾಲ್ಕು ಸ್ಥಾನಗಳಲ್ಲಿ ಪ್ರತಿಸ್ಪರ್ಧಿಗಳಾಗಿ ನಿಂತ ಇಬ್ಬರು ತಮ್ಮ ಉಮೇದುವಾರಿಕೆಯ ಹಣವನ್ನು ಕಳೆದುಕೊಂಡರು. ಈ ಚುನಾವಣೆಗಳು ನ್ಯಾಯವಿಧಾಯಕ ಸಭೆಯ 10 ಸಾಮಾನ್ಯ ಕ್ಷೇತ್ರಗಳಲ್ಲಿ 9ರಲ್ಲಿ ನಡೆದ ಚುನಾವಣೆಗಳ ಫಲಿತಾಂಶವೆಂಬುದೂ ನೆನಪಿನಲ್ಲಿರಲಿ. ನಮ್ಮ ಸ್ಥಾನವು ಭದ್ರವಾದುದೆಂದೂ ನಮ್ಮ ಸರಕಾರವು ಇಷ್ಟಪಡಲಿ ಅಥವಾ ಬಿಡಲಿ ಧ್ಯೇಯವನ್ನು ಸಾಧಿಸಬಲ್ಲವೆಂದೂ ತೋರಿಸಿಕೊಡುವುದಕ್ಕಾಗಿ ನಾನದನ್ನು ಇಲ್ಲಿ ಸೂಚಿಸಿದ್ದೇನೆ. ಸರಕಾರವು ವಿಶಾಲದೃಷ್ಟಿಯಿಂದೊಡಗೂಡಿದರೆ ಉಭಯತ್ರರಿಗೂ ಕ್ಷೇಮ. ಇಲ್ಲದಿದ್ದರೆ ಕಾಂಗ್ರೆಸ್ಸಿನ ಕರ್ತವ್ಯವು ಕಷ್ಟತಮವೂ ದುರ್ಗಮವೂ ಆದುದಾಗಬಹುದು. ಆದರೆ ಕಾಂಗ್ರೆಸ್ಸಿನ ಜಯವು ಸಿದ್ಧ. ಇದರಲ್ಲಿ ಶಂಕೆಯಿಲ್ಲ. ತ್ಯಾಗಾನುಭವಗಳಿಂದ ತಮ್ಮ ಸೇವೆಯ ಫಲವನ್ನನುಭವಿಸಲು ಪ್ರಜೆಗಳು ಸಿದ್ಧತೆಯನ್ನು ಪಡೆಯಬಹುದು. ಇದು ಒಂದುಕಡೆ ಪ್ರಜೆಗಳ ಸಹನಶಕ್ತಿಯನ್ನೂ ವಿರೋಧ ಸಾಮರ್ಥ್ಯವನ್ನೂ ಅಭಿವೃದ್ಧಿಗೊಳಿಸುವುದು ; ಮತ್ತೊಂದು ಕಡೆ ಐಕ್ಯತೆಯನ್ನು ಉಂಟುಮಾಡುವುದು. ಹಾಗೆಯೇ ಮುಂದಾಳುತನವನ್ನೂ ನಿಯಮಕಾಲ ಸಾಮರ್ಥ್ಯವನ್ನೂ ಬೆಳೆಸುವುವು.

ಈ ಸಮಯದಲ್ಲಿ ಇನ್ನೊಂದು ವಿಷಯವನ್ನು ನಾವು ಮರೆಯಕೂಡದು. ಅಖಿಲಭಾರತ ಸಂಯುಕ್ತ ರಾಜ್ಯಾಂಗ ವಿಷಯವು ಸಂಸ್ಥಾನಗಳ ಸಮಸ್ಯೆಯನ್ನು ಮತ್ತೂ ಹೆಚ್ಚಿನದಾಗಿ ಮಾಡಿದೆ. ಭರತಖಂಡವು ಒಂದೇ ಅಖಂಡ ರಾಷ್ಟ್ರ. ನಮ್ಮ ಸಂಸ್ಥಾನದ ಸ್ವಾತಂತ್ರ್ಯದ ಪಥದಲ್ಲಿ ಮುಂದೆ ಮುಂದೆ ಹಜ್ಜೆಯಿಡುತ್ತಿರುವ ಈ ಸಮಯದಲ್ಲಿ ನಮ್ಮ ಮಾತೃಭೂಮಿ ಭರತಖಂಡವು ರಾಜಕೀಯ ಸ್ವಾತಂತ್ರ್ಯ ಸಂಪಾದನೆಯಲ್ಲಿ ಹಿಂದೆಬೀಳದಂತೆ ನೋಡಿಕೊಂಡು ಮುಂದುವರಿಯಬೇಕಾಗಿದೆ. ಇತರ ಸಂಸ್ಥಾನಗಳಿಗಿಂತ ಮುಂಚಿತವಾಗಿಯೇ ಮೈಸೂರು ಸ್ವಾತಂತ್ರ್ಯ ಪಥದಲ್ಲಿ ನಡೆಯಲು ಹೊರಟಿದೆ. ಆಮೆ ಮತ್ತು ಮೊಲದ ಪಂದ್ಯದ ಕಥೆಯನ್ನು ಇಲ್ಲಿ ಸೂಚಿಸಬಹುದು. ನಮಗೀಗ ಕಾಲಕಳೆಯಲು ಅವಕಾಶವಿಲ್ಲ. ಜನಗಳು ಬೇಕೆಂದಿರುವಾಗ, ಲಭಿಸುವ ಕಾಲ ಪ್ರಾಪ್ತವಾಗಿರುವಾಗ, ಜವಾಬ್ದಾರಿ ಸರ್ಕಾರ ಸ್ಥಾಪನೆಯನ್ನು ಮುಂದೆಹಾಕುವುದು ಸಾಧ್ಯವಿಲ್ಲ. ಜವಾಬ್ದಾರಿ ಸರ್ಕಾರ ಸ್ಥಾಪನೆಯೇ ಸುಧಾರಣ ಸಮಿತಿಯ ಧ್ಯೇಯವೆಂದು ಸ್ಪಷ್ಟಪಡಿಸಿದ್ದರೆ ಚನ್ನಾಗಿತ್ತೆಂದು ನನಗೆ ತೋರುವುದು. ಧ್ಯೇಯ ಸ್ಪಷ್ಟವಿಲ್ಲದೆ ಸಮಿತಿಯು ಮಾಡಬಹುದಾದ ಕೆಲಸವು ಬೆಟ್ಟವನ್ನೊಡೆದು ಇಲಿಯನ್ನು ಹಿಡಿದಂತಾಗುವುದು. ಸಮಿತಿಯ ಸದಸ್ಯತ್ವದ ವಿಷಯದಲ್ಲಿ ಎಷ್ಟು ಸ್ವಲ್ಪ ಹೇಳಿದರೆ ಅಷ್ಟು ಉತ್ತಮ. ಸ್ವಾತಂತ್ರ್ಯ ಭಾವನೆಯನ್ನು ನುಂಗುವ ಕೋಮುವಾರು ಭಾವನೆಯನ್ನುಂಟುಮಾಡುವ ಪ್ರತೀಕಾರಕ

ಗಳನ್ನು ಸಮಿತಿಯಲ್ಲಿ ಸೂಚಿಸಬಲ್ಲ ಸಂಸ್ಥಾನವನ್ನೇ ಬೆಂಬಲವಾಗಿವುಳ್ಳ ಕಾಂಗ್ರೆಸ್ಸಿಗೆ ಸ್ಥಾನವಿಲ್ಲ. ವೈಯಕ್ತಿಕವಾಗಿ ಸರಕಾರದಿಂದ ನಾಮಕರಣ ಮಾಡಲ್ಪಟ್ಟಿರುವ ಕಾಂಗ್ರೆಸ್ ಸದಸ್ಯರ ಸಂಖ್ಯೆಯೂ ಸಮಿತಿಯ ಸದಸ್ಯರ ಸಂಖ್ಯೆಯಲ್ಲಿ 1–5 ಭಾಗವನ್ನವಲಂಬಿಸಿದೆ. ನನಗೆ ಇಲ್ಲಿ ನೆರೆದಿರುವ ಪ್ರಜೆಗಳ ಪ್ರತಿನಿಧಿಗಳಲ್ಲಿ ನಂಬಿಕೆಯಿದೆ. ಸರಕಾರವು ಹಿಡಿದಿರುವ ಈ ಮಾರ್ಗಕ್ಕೆ ಏನುತ್ತರ ಕೊಡಬೇಕೆಂಬುದು ಅವರಿಗೆ ಗೊತ್ತು. ಪ್ರಜಾವರ್ಗದಿಂದ ಚುನಾಯಿಸಲ್ಪಟ್ಟ ಪ್ರತಿನಿಧಿಗಳಿಂದ ಕೂಡಿದ ಪ್ರತಿನಿಧಿ ಸಭೆಯಿಂದ ರಚಿಸಲ್ಪಟ್ಟ ವ್ಯವಸ್ಥೆಯೊಂದೇ ಪ್ರಜೆಗಳಿಂದ ಅಂಗೀಕಾರ ಯೋಗ್ಯವಾದದ್ದೆಂಬುದನ್ನು ಸೂಚಿಸುವುದಕ್ಕಿಂತ ಹೆಚ್ಚೇನನ್ನೂ ಈ ಸಮಯದಲ್ಲಿ ಹೇಳಲಾರೆ.

ಅನವಶ್ಯಕವಾಗಿ ಮೈಸೂರಿನ ದೃಷ್ಟಿಯಿಂದ ಸಂಯುಕ್ತ ರಾಜ್ಯಾಂಗ ವಿಷಯವನ್ನು ವಿಮರ್ಶಿಸಲು ಏರ್ಪಟ್ಟಿರುವ ಸಮಿತಿಯಿಂದ ರಾಜಕೀಯ ವಿಷಯಗಳಲ್ಲಿ ತೊಂದರೆಯುಂಟಾಗಬಹುದು. 1935ನೇ ಇಸವಿಯ ಇಂಡಿಯಾ ಶಾಸನದಲ್ಲಿ ನಿರೂಪಿತವಾಗಿರುವ ಕೇಂದ್ರಸಂಯುಕ್ತ ರಾಜ್ಯಾಂಗದ ವಿಷಯವಾಗಿ ಅಖಿಲಭಾರತ ಕಾಂಗ್ರೆಸ್ಸಿನ ಅಭಿಪ್ರಾಯವೇನೆಂಬುದು ನಮ್ಮೆಲ್ಲರಿಗೂ ತಿಳಿದೇ ಇದೆ. ನರೇಂದ್ರರೂ ತಮ್ಮ ಪ್ರತಿನಿಧಿಗಳು ಪ್ರಜೆಗಳಿಂದ ಚುನಾಯಿಸಲ್ಪಟ್ಟು ಕಳುಹಿಸಲ್ಪಡಲೊಪ್ಪಿದರೆ ಮಾತ್ರ ಸಂಯುಕ್ತ ರಾಜ್ಯಾಂಗವೇರ್ಪಡಿಸಬಹುದೇ ಹೊರೆತು ಇಲ್ಲದಿದ್ದಲ್ಲಿ ಖಂಡಿತವಾಗಿಯೂ ಸಂಯುಕ್ತ ರಾಜ್ಯಾಂಗವು ಯಶಸ್ವಿಯಾಗಲಾರದು. ಸಂಸ್ಥಾನದ ಪ್ರಜೆಗಳ ಮತ್ತು ಕಾಂಗ್ರೆಸ್ಸಿನ ಬೇಡಿಕೆಗಳಿಗೆ ಎಲ್ಲಿಯವರೆಗೆ ನರೇಂದ್ರರು ಗಮನ ಕೊಡುವುದಿಲ್ಲವೋ ಅಲ್ಲಿಯವರೆಗೂ ಸಂಯುಕ್ತ ರಾಜ್ಯಾಂಗ ವಿಷಯವಾಗಿ ಮಾತನಾಡುವುದು ಕೇವಲ ಶುಷ್ಕ ವಾದ.

ನನ್ನ ಮುಖ್ಯ ಕರ್ತವ್ಯದ ಎಲ್ಲೆ ಮೀರಿ ಅಧ್ಯಕ್ಷರ ಎಲ್ಲೆಯೊಳಕ್ಕೂ ಮೆಲ್ಲ ಮೆಲ್ಲಗೆ ಅತಿಕ್ರಮಪ್ರವೇಶಮಾಡಿಬಿಡುತ್ತಿರುವನೆಂದು ಹೆದರುತ್ತಿದ್ದೇನೆ. ಈ ಚರಿತ್ರಾರ್ಹವಾದ ಅಧಿವೇಶನಕ್ಕೆ ನಿಮ್ಮೆಲ್ಲರಿಗೂ ಮತ್ತೊಮ್ಮೆ ಸುಸ್ವಾಗತ ಬಯಸುತ್ತೇನೆ. ಸಂಖ್ಯೆ ಪ್ರತಿಮೆಗಳಲ್ಲಿ ಈ ಅಧಿವೇಶನವು ಮೈಸೂರಿಗೇ ಏಕೆ ಇಡೀ ಭರತಖಂಡದ ಸಂಸ್ಥಾನಗಳಲ್ಲೇ ಮೊದಲು. ಅಸಂಖ್ಯಾತರಾದ ಪ್ರತಿನಿಧಿಗಳ ಮತ್ತು ಪ್ರೇಕ್ಷಕರ ಸೌಕರ್ಯ ಮತ್ತು ಅವಶ್ಯಕತೆಗಳನ್ನು ನಿರೀಕ್ಷಿಸಲು ಸಾಧ್ಯವಾಗಲಿಲ್ಲ. ಆದುದರಿಂದ ನಮ್ಮ ಸಿದ್ಧತೆಯಲ್ಲಿರಬಹುದಾದ ದೋಷಗಳನ್ನು ದಯೆಯಿಟ್ಟು ಕ್ಷಮಿಸಬೇಕೆಂದು ಬೇಡುತ್ತೇನೆ.

ಸ್ವಾತಂತ್ರ್ಯದೇವಿಯ ಉಪಾಸನೆಗಾಗಿ ಕಾರಾಗೃಹವನ್ನನುಭವಿಸಿ ಹೊರಗೆ ಬಂದ ಶ್ರೀಯುತ ಸಿದ್ದಲಿಂಗಯ್ಯನವರಿಗೂ ಅವರ ಅನುಯಾಯಿಗಳಿಗೂ ಸ್ವಾಗತ ಬಯಸಲು ನನಗೆ ಅತ್ಯಂತ ಸಂತೋಷವಾಗಿದೆ. ಅವರ ಜೀವನವು ಕೀರ್ತಿಮಯವಾದುದು. ರಾಷ್ಟ್ರವೇ ಅವರನ್ನು ಗೌರವಿಸುವುದು. ನಮ್ಮ ಸಂಸ್ಥಾನವು ಶ್ರೀ ಸಿದ್ದಲಿಂಗಯ್ಯನವರನ್ನು ಅಧ್ಯಕ್ಷರನ್ನಾಗಿ ಆರಿಸಿರುವುದು ಹೆಮ್ಮೆಯ ವಿಷಯ. ಶ್ರೀ ಸಿದ್ದಲಿಂಗಯ್ಯನವರು ಶೀಲವಂತರೂ ಸ್ವಾರ್ಥತ್ಯಾಗಿಗಳೂ ನಿರ್ಭಯರೂ ಆದ ದೇಶಸೇವಕರು. ಇಂತಹ ಮಹನೀಯರ ನಾಯಕತ್ವದಲ್ಲಿ ಈ ಸಂಸ್ಥಾನವು ತನ್ನ ಮುಖ್ಯಗುರಿಯಾದ ಸ್ವಾತಂತ್ರ್ಯ ಸೇವೆಯ ಆರಾಧನೆಯಲ್ಲಿ ತಾತ್ಕಾಲಿಕವಾದ ವಿಪತ್ಪರಿಗಳೆಲ್ಲವನ್ನೂ ಧೈರ್ಯ ಸಾಹಸಗಳಿಂದ ಎದುರಿಸಿ ಸ್ವಾತಂತ್ರ್ಯ ಸಂಪಾದನೆ ಮಾಡುವುದೆಂಬ ಭರವಸೆಯು ಸಂಪೂರ್ಣವಾಗಿದೆ.

ಮಹನೀಯರೇ, ನಿಮ್ಮೆಲ್ಲರಿಗೂ ಈ ಅಧಿವೇಶನವು ಹರ್ಷದಾಯಕವಾಗಿರಲೆಂದೂ ಅಧಿವೇಶನ ಮುಗಿದನಂತರ ಸೌಖ್ಯವಾಗಿ ನೀವು ಹಿಂದಿರುಗುವಂತಾಗಲೆಂದೂ ಹಾರೈಸುತ್ತೇನೆ."

ಸ್ವಾಗತ ಭಾಷಣವಾದ ಮೇಲೆ ಅಧ್ಯಕ್ಷತೆ ವಹಿಸಲು ಶ್ರೀ ದಾಸಪ್ಪನವರ ಹೆಸರನ್ನು ಶ್ರೀ ಕೆ. ಸಿ. ರೆಡ್ಡಿಯವರು ಸೂಚಿಸಿದರು. ಶ್ರೀ ವೀರಕೇಸರಿ ಸೀತಾರಾಮಶಾಸ್ತ್ರಿಗಳು ಅನುಮೋದಿಸಿದರು. ಅದಕ್ಕೆ ಸಭೆಯ ಸರ್ವಾನುಮತದ ಅಂಗೀಕಾರ ದೊರೆಯಿತು. ಅನಂತರ ಶ್ರೀ ಹೆಚ್. ಸಿ. ದಾಸಪ್ಪನವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು. ಅಧ್ಯಕ್ಷರಿಗೆ ಖಾದಿಯ ಹಾರ, ರಜತ ಚರಕ ಸಹಿತ ತುತ್ತೂರಿಯನ್ನು ಅರ್ಪಿಸಲಾಯಿತು. ಶ್ರೀ ದಾಸಪ್ಪನವರು ಇವುಗಳನ್ನು ಶ್ರೀ ಸಿದ್ಧಲಿಂಗಯ್ಯನವರ ಪರವಾಗಿ ಸ್ವೀಕರಿಸುವುದಾಗಿ ಹೇಳಿ, ಅವುಗಳನ್ನು ವೇದಿಕೆಯ ಮೇಲಿದ್ದ ಶ್ರೀ ಸಿದ್ಧಲಿಂಗಯ್ಯನವರ ಪತ್ನಿ ಶ್ರೀಮತಿ ಪಾರ್ವತಮ್ಮನವರಿಗೆ ಭಕ್ತಿಪೂರ್ವಕವಾಗಿ ಅರ್ಪಿಸಿದರು. ಬೆಳಿಗ್ಗೆ ದಸ್ತಗಿರಿಯಾದ ಶ್ರೀ ಸಿದ್ಧಲಿಂಗಯ್ಯನವರ ನೆನಪು ಬಂದು ಪ್ರೇಕ್ಷಕರು ದುಃಖತಪ್ತರಾದರು. ದಸ್ತಗಿರಿಯಾಗದಿದ್ದರೆ ಅವರೇ ಈಗ ಅಧ್ಯಕ್ಷತೆ ವಹಿಸಬೇಕಾಗಿತ್ತು.

ಅಸಂಖ್ಯಾತ ಜನರ ಜಯ ಘೋಷಗಳೊಡನೆ ಶ್ರೀ ದಾಸಪ್ಪನವರು ಅಧ್ಯಕ್ಷ ಭಾಷಣ ಮಾಡಲು ಎದ್ದು ನಿಂತರು. ತಾವು ಅಧ್ಯಕ್ಷರಾದ ಸಂದರ್ಭವನ್ನು ಸೂಚಿಸುತ್ತಾ ಅವರು ಹೀಗೆ ಹೇಳಿದರು: "ಕಷ್ಟಕಾಲದಲ್ಲಾದ ಗೆಳೆತನವೇ ಶಾಶ್ವತವಾದ ಗೆಳೆತನ. ಆ ಗೆಳೆತನದ ಭವ್ಯವಾದ ನೆನಪನ್ನು ತಂದುಕೊಂಡು ಶ್ರೀ ಸಿದ್ಧಲಿಂಗಯ್ಯನವರ ಜವಾಬ್ದಾರಿಯನ್ನು ಹೊತ್ತುಕೊಳ್ಳಲು ಧೈರ್ಯ ಮಾಡಿದ್ದೇನೆ." ಅನಂತರ, ಬೆಳಿಗ್ಗೆ ಧ್ವಜಾರೋಹಣವಾದ ಮೇಲೆ ಓದಲು ಶ್ರೀ ಸಿದ್ಧಲಿಂಗಯ್ಯನವರು ಸಿದ್ಧಪಡಿಸಿದ್ದ ಭಾಷಣವನ್ನು ಸಭೆಯ ಮುಂದೆ ಓದಲು ಪ್ರಾರಂಭಿಸಿದರು. ಆದರೆ ಅವರ ಗಂಟಲು ಕಟ್ಟಿದ್ದುದರಿಂದ ಅವರ ಪರವಾಗಿ ಶ್ರೀ ಕೆ ಟಿ. ಭಾಷ್ಯಂ ಅವರು ಭಾಷಣದ ಪೂರ್ಣ ಪಾಠವನ್ನು ಓದಿದರು.

ಶ್ರೀ ಸಿದ್ಧಲಿಂಗಯ್ಯನವರ ಅಧ್ಯಕ್ಷ ಭಾಷಣದಲ್ಲಿ ಪ್ರಧಾನವಾಗಿ ಕಂಡು ಬರುವ ಅಂಶಗಳು ಇವು: ಮಹಾರಾಜರ ಆಶ್ವಾಸನೆಗೂ ಆಡಳಿತ ಪದ್ಧತಿಗೂ ಸಂಬಂಧವಿಲ್ಲದಿರುವಿಕೆಯ ಬಗೆಗೆ ಟೀಕೆ; ಚುನಾಯಿತ ಪ್ರತಿನಿಧಿಗಳ ಮಂತ್ರಿಮಂಡಲಕ್ಕೆ ಒತ್ತಾಯ; ಹಳ್ಳಿಗರ ಆರ್ಥಿಕ ಸ್ಥಿತಿಯ ಬಗೆಗೆ ಕಳಕಳಿ; ಇಡೀ ಮೈಸೂರು ಸಂಸ್ಥಾನದ ಎಲ್ಲ ಜನರನ್ನು ಪ್ರತಿನಿಧಿಸುವ ಏಕೈಕ ಸಂಸ್ಥೆ ಕಾಂಗ್ರೆಸ್ ಎಂಬುದರ ಬಗೆಗೆ ಸ್ಪಷ್ಟತೆ; ಸುಧಾರಣಾ ಸಮಿತಿಯ ಬಹಿಷ್ಕಾರ; ಕಾಂಗ್ರೆಸ್ ಕೈಗೊಳ್ಳಬೇಕೆಂದಿರುವ ಕಾರ್ಯಕ್ರಮಗಳ ವಿವರ. ಇತ್ಯಾದಿ.

ಶ್ರೀ ಟಿ. ಸಿದ್ಧಲಿಂಗಯ್ಯನವರು ಸಿದ್ಧಪಡಿಸಿದ ಭಾಷಣ ನಿಜಕ್ಕೂ ಉದ್ಬೋಧಕವಾದುದು. ದೇಶದ ಪರಿಸ್ಥಿತಿಗಳ ಬಗೆಗೆ ಸ್ಪಷ್ಟ ಚಿತ್ರಕೊಡಲು ಮಾಡಿದ ಪ್ರಯತ್ನದ ಫಲ ಅದು. ಅಸಂಖ್ಯಾತ ಜನರ ಜಾಗೃತಿಗೆ ಅದು ಬೆಳಕಿಂಡಿಯಾಯಿತು ಎಂಬುದರಲ್ಲಿ ಸಂಶಯವಿಲ್ಲ. ಅದರ ಪೂರ್ಣ ಪಾಠ ಹೀಗಿದೆ:

ಶ್ರೀ ಟಿ. ಸಿದ್ಧಲಿಂಗಯ್ಯನವರ ಭಾಷಣ

"ಸ್ನೇಹಿತರೇ,

ತಾವುಗಳು ನನ್ನ ಮೇಲೆ ಪ್ರೀತಿ, ವಿಶ್ವಾಸಗಳನಿಟ್ಟು ಮೈಸೂರು ಕಾಂಗ್ರೆಸ್ಸಿನ ಪ್ರಥಮ ಮಹಾಧಿವೇಶನದ ಸಮಾರಂಭವಾದ ಈ ರಾಷ್ಟ್ರಕೂಟದ ಅಧ್ಯಕ್ಷನನ್ನಾಗಿ

ಚುನಾಯಿಸಿದ್ದಕ್ಕಾಗಿ ನಾನು ನಿಮ್ಮಗಳನ್ನು ಹೃತ್ಪೂರ್ವಕವಾಗಿ ವಂದಿಸುತ್ತೇನೆ. ನಮ್ಮ ಸಂಸ್ಥಾನದ ಹಾಗೂ ವಿಶಾಲ ಭಾರತದ ಏಳಿಗೆಗಾಗಿ ನಾವು ಮಾಡಬೇಕಾಗಿರುವ ಮಹತ್ತರವಾದ ಕೆಲಸಗಳನ್ನು ತೃಪ್ತಿಕರವಾಗಿ ಮಾಡತಕ್ಕ ಮತ್ತು ಈ ಅಧ್ಯಕ್ಷ ಪದವಿಗೆ ಅನುಗುಣವಾದ ಶಕ್ತಿ ಸಾಮರ್ಥ್ಯಗಳನ್ನು ಕೊಡಲೆಂದು ನಾನು ಸರ್ವಶಕ್ತನಾದ ಪರಮೇಶ್ವರನನ್ನು ಪ್ರಾರ್ಥಿಸುತ್ತೇನೆ. ಸಂಸ್ಥಾನಗಳ ಸ್ವಾತಂತ್ರ್ಯ ಸಂಪಾದನೆಯ ಈ ಉದ್ಯಮದಲ್ಲಿ ನಾವುಗಳೆಲ್ಲರೂ ಒಟ್ಟುಗೂಡಿ ಸಶಕ್ತರಾಗುವುದಕ್ಕೆ ಸಹಾಯಮಾಡಿ ಒಳನಾಡಿನ ಮತ್ತು ಹೊರನಾಡಿನ ಎಲ್ಲಾ ಮುಖಂಡರುಗಳಿಗೂ ಈ ಸಂದರ್ಭದಲ್ಲಿ ಕಾಣಿಕೆಯನ್ನು ಅರ್ಪಿಸುವುದು ನನ್ನ ಕರ್ತವ್ಯವಾಗಿದೆ. ಸಂಸ್ಥಾನಗಳ ಪ್ರಶ್ನೆಯ ವಿಮರ್ಶಾ ವಿಚಾರದಲ್ಲಿ ನಮ್ಮ ಸಂಸ್ಥಾನವು ಹಿಂದುಸ್ಥಾನದ ಉಳಿದ ಎಲ್ಲಾ ಸಂಸ್ಥಾನಗಳಿಗಿಂತಲೂ ಅಗ್ರಸ್ಥಾನವನ್ನು ಪಡೆದಿರುವುದು ನಮ್ಮ ಭಾಗ್ಯೋದಯವೆ ಸರಿ.

ಪ್ರಥಮತಃ ನಾವುಗಳೆಲ್ಲರೂ ಶ್ರೀಮನ್ಮಹಾರಾಜರವರ ರಾಜಭಕ್ತ ಪ್ರಜೆಗಳೆಂದೂ ನಮ್ಮ ಭಕ್ತಿ ವಿಶ್ವಾಸಗಳು ಅದ್ವಿತೀಯವಾದುವೆಂತಲೂ ಹೇಳಬೇಕಾಗಿದೆ. ಶ್ರೀಮನ್ಮಹಾರಾಜರವರು ಆಗಾಗ್ಗೆ ಅಪ್ಪಣೆ ಕೊಡಿಸುತ್ತಿರುವ ನಿರೂಪ ವಾಕ್ಯಗಳಿಂದ ಶ್ರೀ ಮನ್ಮಹಾರಾಜರು ತಮ್ಮ ಪ್ರಜೆಗಳ ಹಿತಕ್ಕಾಗಿ ಮತ್ತು ಅಭಿವೃದ್ಧಿಗಾಗಿ ಎಷ್ಟು ಕಾತರ ಪಡುತ್ತಿದ್ದಾರೆಂಬುದು ಸ್ಪಷ್ಟವಾಗಿ ಗೊತ್ತಾಗುತ್ತದೆ. ಆದರೆ ಶ್ರೀಮನ್ಮಹಾರಾಜರ ಪ್ರಜೆಗಳಾದ ನಮ್ಮಗಳಿಗೆ ಅವರ ಆಳ್ವಿಕೆಯಿಂದ ಎಷ್ಟರ ಮಟ್ಟಿನ ಸುಖ ಸಂತೋಷಗಳು ಲಭ್ಯವಾಗಬಹುದಾಗಿತ್ತೋ ಅಷ್ಟು ಸುಖ ಶಾಂತಿಗಳು ಈಗ ಜಾರಿಯಲ್ಲಿರುವ ಆಡಳಿತ ಪದ್ಧತಿಯಿಂದ ನಮಗೆ ಲಭ್ಯವಾಗುತ್ತಿಲ್ಲ.

ನಮ್ಮಗಳ ಕಾದಾಟವು ಯಾವುದಾದರೂ ಒಬ್ಬ ವ್ಯಕ್ತಿಯ ಸಂಗಡವಲ್ಲವೆಂತಲೂ ಆದರೆ ಈಗ ಜಾರಿಯಲ್ಲಿರುವ ಆಡಳಿತ ಪದ್ಧತಿಯನ್ನು ಸಂಪೂರ್ಣವಾಗಿ ಬದಲಾಯಿಸಿ ಪ್ರಜೆಗಳಿಗೆ ಸುಖ ಶಾಂತಿಯನ್ನು ಉತ್ಪನ್ನ ಮಾಡತಕ್ಕ ಜವಾಬ್ದಾರಿ ಸರ್ಕಾರ ಸ್ಥಾಪನೆಯೇ ನಮ್ಮ ಪರಮಗುರಿಯೆಂತಲೂ ನಾವುಗಳು ಪತ್ರಿಕಾ ಮುಖಾಂತರವಾಗಿಯೂ ಭಾಷಣಗಳಲ್ಲಿಯೂ ಸ್ಪಷ್ಟೋಕ್ತಿಗಳಿಂದ ಆಗಾಗ್ಗೆ ಹೇಳುತ್ತಾ ಬಂದಿದ್ದೇವೆ. ಮೈಸೂರು ಕಾಂಗ್ರೆಸ್ಸಿನ ಧ್ಯೇಯವು ಶ್ರೀಮನ್ಮಹಾರಾಜರ ಕೃಪಾಶ್ರಯದಲ್ಲಿ ಜವಾಬ್ದಾರಿ ಸರಕಾರವನ್ನು ಸ್ಥಾಪಿಸುವುದೇ ಆಗಿದೆ.

ಶ್ರೀಮನ್ಮಹಾರಾಜರವರು ಮತ್ತು ಕೀರ್ತಿಶೇಷರಾದ ಶ್ರೀ ಚಾಮರಾಜೇಂದ್ರ ಒಡೆಯರು ಸಹ ಕ್ರಮ ಕ್ರಮವಾಗಿ ಆಡಳಿತ ಜವಾಬ್ದಾರಿಯನ್ನು ಪ್ರಜೆಗಳಿಗೆ ಕೊಡತಕ್ಕದ್ದೇ ನಮ್ಮಗಳ ಉದ್ದೇಶವೆಂಬುದನ್ನು ಅಧಿಕಾರಯುತವಾಗಿ ಸ್ಪಷ್ಟಪಡಿಸಿರುತ್ತಾರೆ. ಈ ರೀತಿಯಾದ ನಿರೂಪವನ್ನು ದಯಪಾಲಿಸಿ ಅರ್ಧಶತಮಾನವಾಯಿತು. ಕಳೆದ ಈ ಅರ್ಧಶತಮಾನದಲ್ಲಿ ಪ್ರಜೆಗಳು ಆಡಳಿತ ಯಂತ್ರವನ್ನು ಸ್ವತಃ ನಡೆಯಿಸುವಷ್ಟು ಯೋಗ್ಯತೆಯನ್ನು ಸಂಪಾದನೆ ಮಾಡಿಕೊಂಡಿರುತ್ತಾರೆ. ಆದುದರಿಂದ ನಮ್ಮ ಆಡಳಿತ ನಿರ್ವಹಣ ಶಕ್ತಿಯಲ್ಲಿ ನಂಬಿಕೆಯನ್ನಿಟ್ಟು ರಾಜ್ಯಾಡಳಿತ ಸೂತ್ರವನ್ನು ನಮ್ಮಗಳ ಕೈಗೆ ಕೊಡಬೇಕೆಂದೂ ಶ್ರೀಮನ್ಮಹಾರಾಜರ ಕೃಪೆಗಾಗಲೀ ಅಥವಾ ಪ್ರಜೆಗಳ ವಿಶ್ವಾಸಕ್ಕಾಗಲೀ ಪಾತ್ರವಾಗಿಲ್ಲದ, ಈಗ ಹಾಲಿ ಇರುವ ಮಧ್ಯವರ್ತಿ (Intermediary) ಸರ್ಕಾರವನ್ನು ರದ್ದುಗೊಳಿಸಬೇಕೆಂದು ಪ್ರಜೆಗಳು ಕೇಳುವುದು ನ್ಯಾಯವಾಗಿಯೇ ಇದೆ.

ಜವಾಬ್ದಾರಿ ಸರಕಾರವೆಂದರೇನು? ಈ ವಿಚಾರದಲ್ಲಿ ರಾಜ ಶಾಸನ ನಿಪುಣರ ಅಭಿಪ್ರಾಯವೇನು? ಎಂಬ ವಿಚಾರವನ್ನು ಚರ್ಚಿಸುವುದರಲ್ಲಿ ನಾವುಗಳು ನಮ್ಮ ಶಕ್ತಿಯನ್ನು, ವೇಳೆಯನ್ನು ಕಳೆಯಬೇಕಾಗಿಲ್ಲ. ಚುನಾಯಿತ ಪ್ರತಿನಿಧಿಗಳಿಗೆ ಜವಾಬ್ದಾರಿಯಾದ ಮಂತ್ರಿಮಂಡಲವೇ ಎಲ್ಲಕ್ಕಿಂತಲೂ ಶ್ರೇಷ್ಠವೂ ಕ್ಷೇಮಕಾರಿಯೂ ಎಂಬುದನ್ನು ನಾವುಗಳು ಈಗಾಗಲೇ ಅರಿತುಕೊಂಡಿದ್ದೇವೆ. ಅಂಥಾ ಮಂತ್ರಿ ಮಂಡಲವನ್ನೇ ನಾವೂ ಸಹ ಅಪೇಕ್ಷಿಸುತ್ತಿರುವುದು.

ನಮ್ಮ ಈ ಅಭಿಪ್ರಾಯಕ್ಕೆ ದೇಶದ ಎಲ್ಲಾ ಮುಖಂಡರ ಮತ್ತು ಸಾರ್ವಭೌಮ ಸರಕಾರದ ಪ್ರತಿನಿಧಿಗಳ ಬೆಂಬಲವು ದೊರೆತಿದೆ. ರಾಜರುಗಳು ತಮ್ಮ ತಮ್ಮ ಸಂಸ್ಥಾನಗಳಲ್ಲಿ ಜವಾಬ್ದಾರಿ ಸರಕಾರವನ್ನು ಸ್ಥಾಪಿಸಬೇಕೆಂಬ ಅಂಶವನ್ನು ಕಳೆದ ಕೆಲವು ತಿಂಗಳುಗಳಿಂದೀಚೆಗೆ ಸಾರ್ವಭೌಮ ಸರಕಾರದ ಜವಾಬ್ದಾರಿ ಅಧಿಕಾರಿಗಳು ಅಂಗೀಕರಿಸಿರುತ್ತಾರೆ. ಮತ್ತು ಅನೇಕ ಮುಖ್ಯ ಪತ್ರಿಕೆಗಳೂ ಸಹ ಪುಷ್ಟೀಕರಿಸಿವೆ. ನಾವುಗಳು ಈಗ ಜವಾಬ್ದಾರಿ ಸರಕಾರವನ್ನು ಕೇಳುತ್ತಿರುವುದು ನ್ಯಾಯವೇ ಅನ್ಯಾಯವೇ ಎಂಬುದನ್ನು ಹೆಚ್ಚಾಗಿ ಚರ್ಚೆ ಮಾಡದೆ ನಮ್ಮ ಕಾರ್ಯಗಳನ್ನು ಖಂಡಿಸತಕ್ಕ ಮಹನೀಯರಿಗೆ ಒಂದು ಉತ್ತರವನ್ನು ಹೇಳಬೇಕಾಗಿದೆ. ಈಗಿನ ರಾಜ್ಯಾಡಳಿತ ಪದ್ಧತಿಯು ಇನ್ನೂ ಹೆಚ್ಚಿಗೆ ದಿನಗಳು ಉಳಿಯಲಾರದು. ಏತಕ್ಕೆಂದರೆ ಆ ಪದ್ಧತಿಯಲ್ಲಿ ತನ್ನ ರಾಜ್ಯದ ಪ್ರಜೆಗಳಿಗೆ ಸ್ವಂತವಾಗಿ ಆಡಳಿತ ನಿರ್ವಾಹ ಮಾಡತಕ್ಕ ಶಕ್ತಿಯನ್ನು ಉತ್ಪನ್ನ ಮಾಡುವಷ್ಟು ಯೋಗ್ಯತೆಯಾಗಲೀ ಶಕ್ತಿಯಾಗಲಿ ಇಲ್ಲ. 50 ವರ್ಷಗಳು ಈಗಿನ ಪದ್ಧತಿಯಂತೆ ರಾಜ್ಯಭಾರವನ್ನು ಮಾಡಿದ ಮೇಲೆ ಪ್ರಜೆಗಳು ಸಾಕಾದಷ್ಟು ವಿದ್ಯಾವಂತರಾಗಿಲ್ಲವೆಂದು ಸರಕಾರದವರು ಹೇಳಲಾರಂಭಿಸಿರುತ್ತಾರೆ. ಪ್ರಜೆಗಳು ವಿದ್ಯಾವಂತರಾಗದಿದ್ದರೆ ಆ ತಪ್ಪು ಯಾರದು? ಈ ಅರ್ಧ ಶತಮಾನದಲ್ಲಿ ಮನುಷ್ಯರ ಆಯುಃಪ್ರಮಾಣ 26 ರಿಂದ 22 ಕ್ಕೆ ಇಳಿದಿದೆ. ಆರ್ಥಿಕ ಸ್ಥಿತಿಯು ಅತ್ಯಂತ ಶೋಚನೀಯವಾಗಿದೆ; ಮನುಷ್ಯನ ಸಂಪಾದನ ಶಕ್ತಿಯು ಕಡಿಮೆಯಾಯಿತು; ಆಡಳಿತದಲ್ಲಿ ಹೆಚ್ಚಿಗೆ ದುಂದುಗಾರಿಕೆಯು ನಡೆಯಿಸಲ್ಪಡುತ್ತಿದೆ; ನಮ್ಮ ದೇಶದ ಅತ್ಯಧಿಕಾಂಶ ಪ್ರಜೆಗಳಾದ ರೈತರು ಇನ್ನೂ ಕಾಡುಜನರಂತೆಯೇ ವಾಸಮಾಡುತ್ತಿದ್ದಾರೆ; ಶೇಕಡಾ 6 ರಂತೆ ಮಾತ್ರ ವಿದ್ಯಾ ಪ್ರಚಾರವಾಗಿದೆ; ಜನರು ಮೂಕ ಪ್ರಾಣಿಗಳಂತೆ ಹಳ್ಳಿಗಳಲ್ಲಿ ವಾಸ ಮಾಡುತ್ತಿದ್ದಾರೆ. ಇಂಥ ವಿನಾಶಕಾರಿಯಾದ ರಾಜ್ಯಾಡಳಿತ ಪದ್ಧತಿಯನ್ನು ಒಳಗೊಂಡಿದ್ದರೂ ಕೂಡ ಹೊರಗಡೆಯ ಪ್ರಪಂಚಕ್ಕೆ ತಾನು ಮಾದರಿ ಎಂಬ ವೇಷವನ್ನು ಸರಕಾರವು ಕಟ್ಟಿ ತೋರಿಸುತ್ತಿದೆ. ದೇಶದ ಮುಖಂಡರುಗಳಿಂದ ಸರ್ಟಿಫಿಕೇಟುಗಳನ್ನು ಪಡೆದುಕೊಂಡು ಸರ್ಕಾರದವರು ಜಾಹಿರ್ಮಾಡುತ್ತಿದ್ದಾರೆ. ಸರ್ಕಾರದ ಅತಿಥಿಗಳಾಗಿ ನಮ್ಮ ದೇಶಕ್ಕೆ ಬರತಕ್ಕವರು ಹಾಡತಕ್ಕ

ಹೊಗಳಿಕೆಗಳಿಗಂತೂ ತುದಿ ಮೊದಲೇ ಇಲ್ಲ. ಪಟ್ಟಣಗಳ ದೊಡ್ಡ ದೊಡ್ಡ ಸೌಧಗಳೂ ಉದ್ಯಾನಗಳೂ ವೃತ್ತಗಳೂ ಚೌಕಗಳೂ ಮತ್ತು ವಿದ್ಯುದ್ದೀಪಗಳೂ ನಮ್ಮ ದೇಶದಲ್ಲಿರುವ ತೊಂದರೆ, ಬಡತನ, ಅಜ್ಞಾನ ಇವುಗಳ ದ್ಯೋತಕವಾಗಿವೆ. ಸರಕಾರಿ ಅಧಿಕಾರಗಳೆಲ್ಲವೂ ಅಧಿಕಾರಿಗಳ ಸುಖ ಸಂತೋಷಕ್ಕಾಗಿ ಉಪಯೋಗಿಸಲಾಗುತ್ತಿವೆಯೇ ವಿನಾ ರೈತರ ಕಷ್ಟ ನಿವಾರಣೆಗಾಗಿ ಉಪಯೋಗಿಸಲ್ಪಡುತ್ತಿಲ್ಲ. ಪ್ರಜೆಗಳಿಗೂ ಮತ್ತು ಪ್ರಜೆಗಳ ಸೇವಕರೆಂದು ಹೇಳಿಕೊಳ್ಳುವ ಅಧಿಕಾರಿಗಳಿಗೂ ಮಧ್ಯೆ ಒಂದು ದೊಡ್ಡ ಅಂತರವುಂಟು. ಸರಕಾರಿ ಅಧಿಕಾರಿಗಳೂ ರೈತರ ಕಷ್ಟನಷ್ಟಗಳ ವಸ್ತುಸ್ಥಿತಿಯನ್ನು ಅರಿತುಕೊಂಡು ಅದರ ನಿವಾರಣೆಗಾಗಿ ಯೋಗ್ಯ ನೀತಿಯನ್ನು ಅನುಸರಿಸತಕ್ಕ ಯೋಜನೆಗಳನ್ನೂ ಕ್ಲಿಪ್ತಕಾಲದಲ್ಲಿ ಅದನ್ನು ಸಾಧಿಸತಕ್ಕ ಮನೋಭಾವವನ್ನೂ ಉಳ್ಳವರಾಗದೇ ಹೋದರೆ ಅವರು ಹೇಗೆ ತಾನೇ ಪ್ರಜಾಸೇವೆಯನ್ನು ಮಾಡಬಲ್ಲರು ? ಬಿರುಗಾಳಿಯಿಂದ ಅಲ್ಲೋಲ ಕಲ್ಲೋಲವಾದ ಸಮುದ್ರದ ಪ್ರಯಾಣಿಕನಂತೆ ಈ ಆಡಳಿತ ಪದ್ಧತಿಯಿಂದ ಮನುಷ್ಯನಿಗೆ ಬೇಕಾದ ಸ್ವಾತಂತ್ರ್ಯ ಮತ್ತು ಸುಖಶಾಂತಿಗಳು ದೊರೆಯಲಾರವು.

ನಮ್ಮ ರಾಜ್ಯದ ಇಂದಿನ ಪದ್ಧತಿಯಲ್ಲಿ ಪ್ರಜಾಸತ್ತೆಯ ಕೋರಿಕೆಯೂ ಸಹ ಕಂಡುಬರುತ್ತದೆ. ಮೈಸೂರಿನಲ್ಲಿ ಪ್ರಜಾ ಪ್ರಾತಿನಿಧ್ಯ ಸರ್ಕಾರವಿದೆಯೆಂದು ಹೊರಗಿನವರನ್ನು ಮೋಸಗೊಳಿಸುವಂಥ ಸ್ಥಳೀಯ ಸಂಸ್ಥೆಗಳು, ಸ್ವಯಂ ಆಡಳಿತ ನಿರ್ವಾಹಕ ಮಂಡಲಗಳು (Self Governing Institutions) ನಮ್ಮ ಸಂಸ್ಥಾನದಲ್ಲಿ ಅನೇಕವಿವೆ. ಈ ಸಂಸ್ಥೆಗಳೆಲ್ಲವೂ ನಿರ್ವೀರ್ಯವಾದವುಗಳು. ಮೈಸೂರಿನ ಆಡಳಿತದಲ್ಲಿ ಎಷ್ಟೇ ಕುಂದು ಕೊರತೆಗಳಿರಲಿ ನಾವು ಮೈಸೂರಿನವರಾದುದರಿಂದಲೂ ಮೈಸೂರಿನ ಗೌರವವನ್ನು ಹೆಚ್ಚಿಸುವುದರಲ್ಲಿ ನಮ್ಮಗಳಿಗೆ ಆಸಕ್ತಿ ಇರುವುದರಿಂದಲೂ ಈ ವಿಚಾರದಲ್ಲಿ ಎಷ್ಟು ಕಡಿಮೆ ಹೇಳಿದರೆ ಅಷ್ಟು ಒಳ್ಳೆಯದು.

ಸಂಸ್ಥಾನದ ಹಣಕಾಸುಗಳ ಖರ್ಚಿನ ವಿಚಾರದಲ್ಲಿ ಸರಕಾರದವರು ಅನುಸರಿಸುತ್ತಿರುವ ನೀತಿಯೇ ಇಂದಿನ ಸರಕಾರದ ಪದ್ಧತಿಯು ಸರಿಯಾದುದಲ್ಲವೆಂಬುವಕ್ಕೆ ಸಾಕಷ್ಟು ನಿದರ್ಶನವಾಗಿದೆ. ಅನೇಕ ವರ್ಷಗಳಿಂದ ನಮ್ಮ ಸಂಸ್ಥಾನಕ್ಕೆ ಕೆಲವು ವಿಶೇಷ (Extraordinary) ಬಾಬುಗಳಿಂದ ಸುಮಾರು 1 ಕೋಟಿ ರೂಪಾಯಿ ವರಮಾನ ಬರುತ್ತಿದೆ. ಚಿನ್ನದ ಗಣಿಯ ಬಾಬ್ತು 25 ಲಕ್ಷ ರೂಪಾಯಿಗಳೂ ವಿದ್ಯುಚ್ಛಕ್ತಿಯ ಬಾಬ್ತು 50 ಲಕ್ಷ ರೂಪಾಯಿಗಳೂ ಗಂಧದ ಎಣ್ಣೆ ಮತ್ತು ಇತರ ಬಾಬುಗಳಿಂದ 25 ಲಕ್ಷ ರೂಪಾಯಿಗಳೂ ನಮ್ಮ ಸಂಸ್ಥಾನಕ್ಕೆ ವರಮಾನ ರೂಪವಾಗಿ ಬರುತ್ತಿವೆ. ಈ ತರಹವಾದ ನೈಸರ್ಗಿಕ ಉತ್ಪನ್ನಗಳು ಬಾಕಿ ಇನ್ನಾವ

ಸಂಸ್ಥಾನದಲ್ಲಿಯಾಗಲೀ ಅಥವಾ ಇಂಡಿಯಾ ದೇಶದ ಇನ್ನಿತರ ಯಾವ ಪ್ರಾಂತದಲ್ಲಿಯಾಗಲೀ ಬರುತ್ತಿಲ್ಲ. ಆದರೂ ಕೂಡ ಮನುಷ್ಯನ ಪ್ರಾಣಧಾರಣೆಗೆ ಅಗತ್ಯವಾದ ಅವಶ್ಯಕತೆಗಳಿಗೂ ಸಹ ನಮ್ಮ ಸಂಸ್ಥಾನದಲ್ಲಿ ಹಣವಿಲ್ಲವಾಗಿದೆ. ನಮ್ಮ ಸಂಸ್ಥಾನಕ್ಕೆ 26 ಕೋಟಿ ರೂಪಾಯಿ ಸಾಲವಿದೆಯೆಂದೂ ಆ ಸಾಲಕ್ಕಾಗಿ ನಮ್ಮ ಸರಕಾರದವರು ಪ್ರತಿವರ್ಷವೂ ಸುಮಾರು 43 ಲಕ್ಷ ರೂಪಾಯಿಗಳನ್ನು ಬಡ್ಡಿಯಾಗಿ ತೆರುತ್ತಿದ್ದಾರೆಂದೂ ಈ ಹಣದಲ್ಲಿ ಅಧಿಕಾಂಶವು ಮೈಸೂರಿನ ಹೊರಗಡೆಯ ಸಾಹುಕಾರರುಗಳಿಗೆ ಹೋಗುತ್ತಿದೆಯೆಂದೂ ಯಾರಾದರೂ ಕೇಳಿದರೆ ಎದೆಯೊಡೆದಂತಾಗುವುದು.

ನಾನು ಆಡಳಿತದ ಬಗ್ಗೆ ಮಾಡಿದ ಖಂಡನೆಗಳನ್ನು ಸ್ಪಷ್ಟೀಕರಿಸುವುದಕ್ಕೋಸ್ಕರ ಮೇಲ್ಕಂಡ ಕೆಲವು ಉದಾಹರಣೆಗಳನ್ನು ಉದಹರಿಸಿರುತ್ತೇನೆ. ಜನಗಳು ಈ ಕುಂದುಕೊರತೆಗಳಿಗೆ ಸಿಕ್ಕಿ ಅನೇಕ ದಿನಗಳಿಂದ ನರಳುತ್ತಿದ್ದಾರೆ. ಸಂಸ್ಥಾನದ ಪ್ರಶ್ನೆಯು ಯಾವುದಾದರೂ ಒಂದು ಕೋಮಿನ ಪ್ರಶ್ನೆಯಲ್ಲ. ಎಲ್ಲಾ ಕೋಮಿನವರೂ ತಮ್ಮ ಕುಂದು ಕೊರತೆಗಳನ್ನು ವ್ಯಕ್ತಪಡಿಸುವುದರಲ್ಲಿ ಏಕಮುಖರಾಗಿದ್ದಾರೆ. ಮೈಸೂರು ಕಾಂಗ್ರೆಸ್ಸಿನವರು ಜನಸಮುದಾಯದ ಉದ್ಧಾರಕ್ಕಾಗಿ ಟೊಂಕ ಕಟ್ಟಿಕೊಂಡು ಈಗಾಗಲೇ ಪ್ರಚಾರದ ಮೂಲಕ ಜನಗಳಿಗೆ ಅವರವರ ಹಕ್ಕು ಬಾಧ್ಯತೆಗಳನ್ನು ತಿಳಿಯಪಡಿಸಿ ಅನೇಕರು ಅವರನ್ನು ಎಚ್ಚರಗೊಳಿಸಿರುತ್ತಾರೆ. ಆದುದರಿಂದ ಕೆಲವು ಸ್ವಾರ್ಥಿಗಳು ತಮ ತಮಗೆ ಬೇಕಾದ ಸಂಸ್ಥೆಗಳನ್ನು ಕಟ್ಟಿ, ಒಂದು ಮತ್ತೊಂದರೊಡನೆ ಕಾದಾಡುವಂತೆ ಮಾಡಬಹುದು. ಅವರ ಈ ತರಹವಾದ ವರ್ತನೆಯು ಕಟ್ಟಕಡೆಯಲ್ಲಿ ಕೋಮುವಾರು ವ್ಯಾಜ್ಯದಲ್ಲಿ ಕೊನೆಗಾಣಬಹುದು. ಆದರೆ ನಮ್ಮ ಸರಕಾರದವರು ಇಂಥ ವಿನಾಶಕಾರಿಯಾದ ಕಾರ್ಯಕ್ರಮಗಳಿಗೆ ಉತ್ತೇಜನ ಕೊಡುವುದಿಲ್ಲವೆಂದು ನಾನು ನಂಬುತ್ತೇನೆ.

ಮೈಸೂರು ಕಾಂಗ್ರೆಸ್ಸಿನ ಸ್ಥಿತಿಯು ನಿರ್ವಿವಾದವಾದುದು. ಇದು ಖಂಡಿತವಾಗಿಯೂ ಮೈಸೂರಿನ 67 ಲಕ್ಷ ಜನಗಳ ಏಕಪ್ರತಿನಿಧಿ ಸಂಸ್ಥೆ. ಈ ಮಾತಿಗೆ ಒಂದು ವೇಳೆ ಸಾಕ್ಷ್ಯವು ಬೇಕಾದರೆ, ಈಗ್ಗೆ ಕೆಲವು ದಿನಗಳ ಹಿಂದೆ ನಡೆದ ಉಪಚುನಾವಣೆಗಳಲ್ಲಿ ಸರಕಾರದ ದಬ್ಬಾಳಿಕೆಯನ್ನು ಖಂಡಿಸುವ ಸಲುವಾಗಿ ರಾಜಿನಾಮೆ ಕೊಟ್ಟಿದ್ದ 11 ಜನ ಶಾಸನ ಸಭೆಯ ಕಾಂಗ್ರೆಸ್ ಸದಸ್ಯರು ಜಯಶೀಲರಾಗಿ ಬಂದುದೇ ಇದಕ್ಕೆ ಸಾಕಾದಷ್ಟು ನಿದರ್ಶನವಾಗಿದೆ. ದೇಶವೆಲ್ಲವೂ ಕಾಂಗ್ರೆಸ್ಸಿನ ಹಿಂದೆ ಇದೆ ಎಂಬುದಕ್ಕೆ ಇದು ಯೋಗ್ಯವಾದ ಸಾಕ್ಷ್ಯವಾಗಿದೆ. ಮೈಸೂರು ಕಾಂಗ್ರೆಸ್ಸಿಗೆ ಮೈಸೂರಿನ ಜನಸಮುದಾಯದ ಪರವಾಗಿ ಮಾತನಾಡುವುದಕ್ಕೆ ಪ್ರಾತಿನಿಧ್ಯವು ಉಂಟೆಂಬ ವಿಚಾರವು ನಮ್ಮನ್ನಾಳುವ ಶ್ರೀಮನ್ಮಹಾರಾಜರವರಿಗೆ ಮೇಲ್ಕಂಡ ವಿಚಾರದಿಂದ ಮನವರಿಕೆಯಾಗುತ್ತದೆಂದು ನಾನು ಭಾವಿಸುತ್ತೇನೆ.

ನಮ್ಮ ತತ್ವಗಳನ್ನು ಅನುಷ್ಠಾನಕ್ಕೆ ತರಲು ಸಹಕಾರಿಗಳಾದ ಕಾರ್ಯಕ್ರಮಗಳನ್ನು ನಾವು ಹಾಕಿಕೊಳ್ಳಬೇಕು. ಇತ್ತೀಚಿಗೆ ನಾವು ಶಾಂತಿ ಪ್ರಯತ್ನಗಳನ್ನು ಕೈಕೊಂಡಿದ್ದೇವೆ. ಜೈಲಿನಲ್ಲಿದ್ದ ನಾವುಗಳು ಬಿಡುಗಡೆ ಮಾಡಲ್ಪಟ್ಟೆವು. ಜನಗಳ ಕೋರಿಕೆಗಳನ್ನು ಗಣನೆಗೆ ತಂದುಕೊಂಡು ನಂತರ ನಮ್ಮಗಳನ್ನು ಬಿಡುಗಡೆ ಮಾಡಿದ್ದರೆ ಬಹಳ ಚೆನ್ನಾಗಿತ್ತು. ಮಹಾತ್ಮ ಗಾಂಧಿಯವರನ್ನು ಸಹ ಭೇಟಿಮಾಡಿದೆ. ಅವರು ನಾವು ಮುಂದೆ ಅನುಸರಿಸಬೇಕಾದ ಕಾರ್ಯಮಾರ್ಗವನ್ನು ನಮಗೆ ತಿಳಿಸಿರುತ್ತಾರೆ. ಅನಂತರ ನಾನು ನೀಲಗಿರಿಯಲ್ಲಿ ದಿವಾನರನ್ನು ಭೇಟಿ ಮಾಡಿದೆ. ದಿವಾನರ ಸಂಗಡ ಮಾಡಿದ ಎಲ್ಲಾ ಭೇಟಿಗಳೂ ನಿಷ್ಪ್ರಯೋಜನವಾದವುಗಳು. ನಾನು ಭೇಟಿಯ ಎಲ್ಲಾ ವಿಚಾರವನ್ನೂ ವಿಸ್ತಾರವಾಗಿ ಹೇಳಿ ನಿಮ್ಮನ್ನು ಬೇಸರಗೊಳಿಸುವುದಿಲ್ಲ. ಆದರೆ ಕಾರ್ಯನಿರ್ವಹಣೆಗಾಗಿ ಈ ಕೆಳಕಂಡ ಹೇಳಿಕೆಯು ಸಾಕಾಗಬಹುದು.

ಧ್ಯೇಯದ ವಿಚಾರದಲ್ಲಿಯೇ ಕಾಂಗ್ರೆಸ್ಸಿನವರ ಅಭಿಪ್ರಾಯಕ್ಕೂ ದಿವಾನರ ಅಭಿಪ್ರಾಯಕ್ಕೂ ಅಜಗಜಾಂತರ ವ್ಯತ್ಯಾಸವುಂಟು. ದಿವಾನರ ಅಭಿಪ್ರಾಯವೇ ಸರಕಾರದವರ ಅಭಿಪ್ರಾಯ. ಪ್ರಥಮತಃ ಸರಕಾರದವರು ನಮ್ಮ ಸಂಸ್ಥೆಯ ಸ್ಥಾನಮಾನಗಳನ್ನು ಗಣನೆಗೆ ತಂದುಕೊಂಡು ಅದನ್ನು ಜನಸಮುದಾಯದ ಪ್ರತಿನಿಧಿ ಸಂಸ್ಥೆಯೆಂದು ಒಪ್ಪಿಕೊಳ್ಳಲು ಇಷ್ಟಪಡುವುದಿಲ್ಲ. ಎರಡನೆಯದಾಗಿ "ಕಾಲಕ್ರಮದಲ್ಲಿಯಾದರೂ ಮೈಸೂರಿನಲ್ಲಿ ಜವಾಬ್ದಾರಿ ಸರಕಾರವನ್ನು ಸ್ಥಾಪಿಸತಕ್ಕದೇ ನಮ್ಮ ಗುರಿ" ಎಂಬುದಾಗಿ ಉದ್ಘೋಷಿಸಲು ಸರಕಾರದವರು ಒಪ್ಪುವುದಿಲ್ಲ. ಮೂರನೆಯದಾಗಿ ಈಗ ನಿಯಮಿತವಾಗಿರುವ ರಾಜಕೀಯ ಸುಧಾರಣಾ ಸಮಿತಿಯ ಸದಸ್ಯರುಗಳನ್ನು ಬದಲಾಯಿಸತಕ್ಕ ವಿಚಾರದಲ್ಲಿ ಕೈ ಹಾಕಲು ಸಾಧ್ಯವಿಲ್ಲ ಎಂಬುದಾಗಿ ಸರಕಾರದವರು ಹೇಳುತ್ತಾರೆ.

ರಾಜಕೀಯ ಸುಧಾರಣಾ ಸಮಿತಿಯಲ್ಲಿ ಸಹಕರಿಸಬೇಕಾದರೆ ಮೊದಲನೇ ಎರಡು ಷರತ್ತುಗಳು ಅತ್ಯಗತ್ಯವಾದುವುಗಳೆಂದು ಮಹಾತ್ಮಾ ಗಾಂಧಿಯವರ ಅಭಿಪ್ರಾಯವಾಗಿತ್ತು. ಮೂರನೆಯ ವಿಚಾರವನ್ನೂ ಮುಂದೆ ನಾನು ಹೇಳತಕ್ಕ ನಾಲ್ಕನೇ ವಿಚಾರವನ್ನೂ ಪರಸ್ಪರ ಒಪ್ಪಂದ ಮತ್ತು ಪತ್ರವ್ಯವಹಾರಗಳಿಂದ ಸರಿಪಡಿಸಿಕೊಳ್ಳಬೇಕೆಂಬುದಾಗಿ ಮಹಾತ್ಮರು ಹೇಳಿದರು. ಸುಧಾರಣಾ ಸಮಿತಿಯ (Terms of Reference) ಗಳು ಜವಾಬ್ದಾರಿ ಸರಕಾರದ ಪ್ರಶ್ನೆಯನ್ನು ವಿಮರ್ಶಿಸುವಷ್ಟು ವಿಶಾಲವಾದುವುಗಳೆಂಬುದನ್ನು ಪತ್ರವ್ಯವಹಾರದ ಮೂಲಕ ನಿರ್ಧರಿಸಿಕೊಳ್ಳತಕ್ಕದ್ದು ಎಂಬುದೇ ನಾಲ್ಕನೆಯ ವಿಚಾರ. ನಾನು ವೈಯಕ್ತಿಕವಾಗಿ ಕಾಗದ ಬರೆಯುವುದಾದರೆ ಈ ನಾಲ್ಕನೆಯ ಷರತ್ತಿಗೆ

ಒಪ್ಪುವದಾಗಿ ದಿವಾನರು ಹೇಳಿದರು. ಆದರೆ ನಾನು ಯಾವ ಸಂಸ್ಥೆಯ ಪ್ರತಿನಿಧಿಯೋ ಆ ಸಂಸ್ಥೆಯನ್ನು ಲೆಕ್ಕಿಸದೆ ವೈಯುಕ್ತಿಕವಾಗಿ ಪತ್ರವ್ಯವಹಾರವನ್ನು ನಡೆಸಲು ಒಪ್ಪಲಾರೆನು.

ಮೇಲ್ಕಂಡ ಅಂಶಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಯೋಚಿಸುವುದಾದರೆ ಈಗ ನಿಯುಮಿತವಾಗಿರುವ ಸುಧಾರಣಾ ಸಮಿತಿಗಳಲ್ಲಿ ಭಾಗವಹಿಸಲು ಕಾಂಗ್ರೆಸ್ಸಿನವರಿಗೆ ಅವಕಾಶವೇ ಇಲ್ಲದಂತಾಗಿದೆ. ಗಾಂಧೀಜಿಯವರು ಕಮಿಟಿಯ (Personnel) ಸದಸ್ಯರ ವಿಚಾರವಾಗಿ ಈ ರೀತಿ ಹೇಳಿದರು: "ಕಮಿಟಿಯ ಸದಸ್ಯರುಗಳು ಸ್ವತಂತ್ರರಾಗಿ, ಜನಗಳ ಸಾಕ್ಷ್ಯವನ್ನು ನಿಷ್ಪಕ್ಷಪಾತ ಬುದ್ಧಿಯಿಂದ ತೀರ್ಮಾನಿಸುವವರಾಗಿದ್ದರೆ ಮತ್ತು ನಮ್ಮ ಪಕ್ಷ (ಕಾಂಗ್ರೆಸ್ ಪಕ್ಷ) ದಿಂದ ನಾಮಕರಣ ಮಾಡಲ್ಪಡುವವರು ಬಹಳ ಮೇಧಾವಿಗಳೂ ಕಷ್ಟಸಹಿಷ್ಣುಗಳೂ ಜನಾನುರಾಗಿಗಳೂ ಆಗಿದ್ದರೆ ನಾವುಗಳು ಒಂದು ವೇಳೆ ಕಮಿಟಿಯ ಸಂಗಡ ಸಹಕರಿಸಿದರೂ ಸಹಕರಿಸಬಹುದು". ಪುನಃ ಕಮಿಟಿಯ ಬಗ್ಗೆ ಈಗ ಸದ್ಯದಲ್ಲಿ ನಾವು ಮಾಡಬೇಕಾದುದು ಏನು ಎಂದು ಪ್ರಶ್ನಿಸಲಾಗಿ "ಕಾಂಗ್ರೆಸ್ಸಿನ ಮೂಲಕವಲ್ಲದೆ ಕಾಂಗ್ರೆಸ್ಸಿನ ನಾವು ನಾಲ್ಕು ಜನಗಳು ಕಮಿಟಿಯಲ್ಲಿ ಕೆಲಸ ಮಾಡಲಾರೆವು. ನಾವುಗಳು ಯಾವುದೇ ಕಾರಣದಿಂದಲೂ ನಮ್ಮ ಜೀವಪ್ರಾಯವಾದ ಕಾಂಗ್ರೆಸ್ ಸಂಸ್ಥೆಯ ಸ್ಥಾನಮಾನಗಳಿಗೆ ಕುಂದು ಬರತಕ್ಕ ಕೆಲಸವನ್ನು ಮಾಡಲಾರೆವು ಎಂಬುದಾಗಿ ನೀವುಗಳು ಸ್ಪಷ್ಟೋಕ್ತಿಗಳಿಂದ ಹೇಳಿಬಿಡಿ" ಎಂಬುದಾಗಿ ಅಪ್ಪಣೆ ಕೊಡಿಸಿದರು.

ಈ ಕಮಿಟಿಗಳ ಅಧಿಕಾಂಶ ಸದಸ್ಯರೆಲ್ಲರೂ ಸರ್ಕಾರದ ಆಜ್ಞಾಧಾರಕರೆಂದೂ ಈ ಕಮಿಟಿಗಳು ಗೌರವಾರ್ಹವಾದವುಗಳಲ್ಲವೆಂದೂ ಇಂಥ ಕಮಿಟಿಗಳಲ್ಲಿ ನಾವುಗಳು ಸಹಕರಿಸಬೇಕಾಗಿಲ್ಲವೆಂದೂ ನಾನು ಇನ್ನೊಮ್ಮೆ ನಿಮಗೆ ಹೇಳಬೇಕಾಗಿಲ್ಲ. ಕಮಿಟಿಯ ಸದಸ್ಯರುಗಳ ಕುಲಗೋತ್ರಗಳನ್ನು ದೀರ್ಘವಾಗಿ ವಿಮರ್ಶೆ ಮಾಡುವಷ್ಟು ಕಾಲವೂ ಇಲ್ಲ ಮತ್ತು ಅಂಥ ವಿಮರ್ಶೆಯು ಈ ಸಮಯದಲ್ಲಿ ಅಷ್ಟು ಅಗತ್ಯವೂ ಅಲ್ಲ. ಅವರುಗಳೆಲ್ಲರೂ ಗಾಳಿ ಬಂದಾಗ ತೂರಿಕೊಳ್ಳುವ ಸ್ವಭಾವವುಳ್ಳವರೆಂದೂ ಸ್ವಾರ್ಥಿಗಳೆಂದೂ ಹೇಳಿದರೆ ಸದ್ಯಕ್ಕೆ ಸಾಕಾಗಿದೆ. ಸಂಸ್ಥಾನದ ಯಾವುದಾದರೊಂದು ಪ್ರತಿನಿಧಿ ಸಂಸ್ಥೆಯ ಚುನಾವಣೆಗಾಗಿ ಧೈರ್ಯವಿದ್ದರೆ ನಿಂತುಕೊಳ್ಳಿರೆಂದು ನಾನು ಅವರನ್ನು ಸವಾಲ್ ಮಾಡುತ್ತೇನೆ. ಅವರು ಮತ್ತೊಬ್ಬರ ಪ್ರಾತಿನಿಧ್ಯವನ್ನು ಹೊಂದುವ ಯೋಗ್ಯತೆಯೇ ಅವರಿಗೆ ಇಲ್ಲವಾಗಿದೆ.

ಹಾಗಾದರೆ ನಮ್ಮ ಸರಕಾರದವರು ಅದನ್ನು ನಮ್ಮ ಮೇಲೆ ಏಕೆ ಒತ್ತಾಯ ಪಡಿಸುತ್ತಿದ್ದಾರೆ. ನಾವುಗಳು ಇಂದಿನ ಸರಕಾರದ ಪದ್ಧತಿಯಲ್ಲಿ ಅನೇಕ ತಪ್ಪು

ನೆಪ್ಪುಗಳಿವೆಯೆಂದು ಹೇಳುತ್ತಿದ್ದೇವೆ. ಆದರೆ ಸರಕಾರದವರು ಪ್ರಜೆಗಳಿಗೂ ಪ್ರಭುತ್ವಕ್ಕೂ ಇರುವ ವ್ಯಾಜ್ಯವನ್ನು ತೀರ್ಮಾನ ಮಾಡುವುದಕ್ಕಾಗಿ ತಮ್ಮ ಆಜ್ಞಾಧಾರಕರುಗಳನ್ನು ಒಳಗೊಂಡ ಒಂದು ಸಮಿತಿಯನ್ನು ಏರ್ಪಡಿಸಿರುತ್ತಾರೆ.

ಇಂದಿನ ಮೈಸೂರಿನ ರಾಜ್ಯಾಡಳಿತ ಪದ್ಧತಿಯಲ್ಲಿ ಬದಲಾವಣೆಗಳನ್ನು ಮಾಡುವ ಅಭಿಪ್ರಾಯವಾಗಲೀ ಅಥವಾ ಹೊಸ ರಾಜ್ಯಾಂಗ ಪದ್ಧತಿಯನ್ನು ಜಾರಿಗೆ ತರುವ ಇಚ್ಛೆಯಾಗಲೀ ಸರಕಾರಕ್ಕೆ ಇಲ್ಲವೆಂದು ನಮ್ಮ ದಿವಾನರು 1934 ರಲ್ಲಿ ಹೇಳಿದ ವಿಚಾರವು ನಮ್ಮಗಳಿಗೆ ತಿಳಿದೇ ಇದೆ. ಇದಲ್ಲದೆ ಪ್ರಾತಿನಿಧ್ಯ ಪ್ರಜಾಸತ್ತೆಯು ಎಲ್ಲ ಕಡೆಗಳಲ್ಲಿಯೂ ಹಾಳಾಗುತ್ತಿದೆ ಎಂದು ದಿವಾನರು ಹೇಳಿದ ಮಾತು ನಮ್ಮಗಳಿಗೆ ಇನ್ನೂ ಮರೆತಿಲ್ಲ. ಈ ರೀತಿ ಹೇಳಿ ಸರಕಾರದವರು ಪ್ರಜಾ ಪ್ರತಿನಿಧಿಗಳ ಹಕ್ಕು ಬಾಧ್ಯತೆಗಳನ್ನು ಕಸಿದುಕೊಂಡರು. ಮತ್ತು ಪ್ರತಿನಿಧಿಗಳ ಅಭಿಪ್ರಾಯಗಳು ಬೇಜವಾಬ್ದಾರವಾದವುಗಳೆಂದು ಹೇಳಲಾರಂಭಿಸಿದರು.

ಹಾಗಾದರೆ ಸರಕಾರದವರು ಸುಧಾರಣಾ ಸಮಿತಿಯನ್ನು ಏಕೆ ಏರ್ಪಡಿಸಿದರು ? ಈ ರೀತಿ ಮಾಡುವುದಕ್ಕೆ ಒಂದು ಉದ್ದೇಶವುಂಟು. ಕೇಂದ್ರಿಕೃತವಾದ ಜನಭಿಪ್ರಾಯವನ್ನು ಬೇರೊಂದೆಡೆಗೆ ಸೆಳೆದು ಅದನ್ನು ಹಾಳು ಮಾಡುವುದು. ಸಾಧ್ಯವಾದರೆ ಕಾಲಕ್ರಮದಲ್ಲಿ ಸಂಪೂರ್ಣವಾಗಿ ನಾಶಪಡಿಸಬೇಕೆಂಬ ಉದ್ದೇಶದಿಂದ ಸರಕಾರದವರು ಈ ರೀತಿ ಮಾಡಿದ್ದಾರೆ.

ಒಳ್ಳೆಯದು, ಒಮ್ಮುಖವಾದ ಜನಾಭಿಪ್ರಾಯವನ್ನು ಒಡೆಯಲೆತ್ನಿಸುವ ಕಾಲವು ಬಹಳ ಹಿಂದೆಯೇ ಕಳೆದುಹೋಯಿತೆಂದೂ ರಾಜ್ಯಾಡಳಿತದಲ್ಲಿ ಕೆಲವು ಸ್ಪಷ್ಟ ಮತ್ತು ಯೋಗ್ಯವಾದ ಬದಲಾವಣೆಗಳನ್ನು ಮಾಡತಕ್ಕ ಕಾಲವು ಬಂದಿದೆ ಯೆಂದೂ ನಾವು ಸರಕಾರಕ್ಕೆ ಹೇಳೋಣ. ನಮಗೆ ನಂಬಿಕೆ ಇರತಕ್ಕ ಪ್ರತಿನಿಧಿಗಳ ಮೂಲಕವೇ ಜನಗಳು ತಮ್ಮ ತಮ್ಮ ವಿಚಾರಗಳನ್ನು ಹೇಳಿಕೊಳ್ಳುವಂತೆ ಮಾಡುವುದು ಸರಕಾರದ ಕರ್ತವ್ಯವೆಂದೂ ಅಲ್ಲದೆ ಪ್ರಜೆಗಳ ಹಿತದಲ್ಲಿ ಮಗ್ನರಾಗಿರುವ ಪ್ರಭತ್ವವು ಮುಚ್ಚುಮರೆಯಿಲ್ಲದೆ ತನ್ನ ಎಲ್ಲಾ ವಿಚಾರಗಳನ್ನು ಜನಗಳ ಅವಗಾಹನೆಗೆ ತರಬೇಕೆಂಬುದನ್ನೂ ಸರಕಾರದವರು ಜ್ಞಾಪಕದಲ್ಲಿಡಲಿ. ಪ್ರಜಾಪ್ರತಿಗಳ ಮಾತನ್ನು ಲೆಕ್ಕಿಸದೇ ಬೇರೆ ಕಡೆಗಳಿಂದ ಜನಗಳ ಕಷ್ಟ ನಷ್ಟ ವಸ್ತುಸ್ಥಿತಿಯನ್ನು ಅರಿತುಕೊಳ್ಳುವಷ್ಟು ಯೋಗ್ಯತೆ ಮತ್ತು ಬುದ್ಧಿಶಕ್ತಿಯೂ ತಮಗುಂಟೆಂದು ಸರಕಾರಿ ಅಧಿಕಾರಿಗಳು ಹೇಳಿಕೊಳ್ಳದಿರಲಿ. ತಮಗೆ ಬೇಕಾದಾಗಲ್ಲದೆ, ಬಾಕಿ ವೇಳೆಗಳಲ್ಲಿ ಪ್ರಜಾಪ್ರತಿನಿಧಿಗಳ ವಾಣಿಯನ್ನು ಗೌರವಿಸುವ ಮನೋಭಾವವು ಸರ್ಕಾರಕ್ಕೆ ಇಲ್ಲದೆ ಹೋದರೆ ಪ್ರಜಾಪ್ರತಿನಿಧಿ ಸಭೆಯನ್ನು ರದ್ದುಗೊಳಿಸಿ ರೈತರ ಹಣ ಮತ್ತು ವೇಳೆಯನ್ನು ಉಳಿಸಲಿ. ಒಂದು ವೇಳೆ ದೇಶದ ನಾನಾ ಮೂಲೆ

ಗಳಿಂದ ಬರತಕ್ಕ 272 ಪ್ರಜಾಪ್ರತಿನಿಧಿಗಳಿಗೆ ದೇಶದ ಜನ ಸಮುದಾಯದ ಪರವಾಗಿ ಮಾತನಾಡುವ ಯೋಗ್ಯತೆ ಇಲ್ಲದಿದ್ದರೆ ಪಟ್ಟಣಗಳಿಂದ ಚುನಾಯಿಸಲ್ಪಟ್ಟ 4–6 ವ್ಯಕ್ತಿಗಳು ಹೇಗೆ ತಾನೇ ಜನಸಮುದಾಯದ ಪ್ರತಿನಿಧಿಗಳಾಗಬಲ್ಲರು ? ನಮ್ಮ ದೇಶದ ಅತ್ಯಧಿಕಾಂಶ ಜನಗಳು ಹಳ್ಳಿಗಳಲ್ಲಿ ವಾಸಮಾಡುತ್ತಾರೆ. ಅವರ ಪ್ರತಿನಿಧಿಗಳು ಯಾರು ? ದೇಶದ ಜನಸಮುದಾಯದ ಪರವಾಗಿ ಮಾತನಾಡ ತಕ್ಕ ಯೋಗ್ಯತೆಯು ನಮಗುಂಟೆಂದು ಈ ಕಮಿಟಿಯ ಮುಕ್ಕಾಲು ಪಾಲು ಜನರು ಊಹಿಸಿಕೊಂಡಿರುವುದು ಕೇವಲ ಅವರ ಆತ್ಮ ಪ್ರಶಂಶೆಯಾಗಿದೆಯೆಂದು ಧೈರ್ಯ ವಾಗಿ ಹೇಳಬಹುದು. ಈ ಸಂದರ್ಭದಲ್ಲಿ ನಿಜವಾದ ಕಾಂಗ್ರೆಸ್ಸಿನವರು ಮಾಡ ಬೇಕಾದ ಕೆಲಸವು ಸ್ಪಷ್ಟವಾಗಿದೆ. ಈ ಕಮಿಟಿಯನ್ನು ಸಂಪೂರ್ಣ ಬಹಿಷ್ಕರಿಸುವು ದಲ್ಲದೆ ಬೇರೆ ಇನ್ಯಾವ ಮಾರ್ಗವೂ ನಮಗಿಲ್ಲವೆಂದು ನಾವು ಸರ್ಕಾರಕ್ಕೆ ಸ್ಪಷ್ಟವಾಗಿ ಹೇಳಬೇಕಾಗಿದೆ.

ಅಧ್ಯಕ್ಷ ಭಾಷಣದಲ್ಲಿ ಸಾಮಾನ್ಯವಾಗಿ ಚರ್ಚಿಸಲ್ಪಡುವ ವಿಚಾರಗಳು ಇನ್ನೂ ಅನೇಕವಾಗಿವೆ. ರಾಜ್ಯಾಂಗವನ್ನೂ ನ್ಯಾಯಾಂಗವನ್ನೂ ಬೇರ್ಪಡಿಸುವುದು– ಪಾನ ನಿರೋಧ–ಗ್ರಾಮಪುನರುಜ್ಜೀವನ–ಸಮಾಜ ಸುಧಾರಣೆ–ಮನುಷ್ಯನ ಅಜನ್ಮ ಸಿದ್ಧವಾದ ಹಕ್ಕುಗಳು–ಇವೇ ಆ ವಿಚಾರಗಳು. ಅವುಗಳೆಲ್ಲ ಮುಖ್ಯಾಂಶಗಳಾ ದರೂ ಹೆಚ್ಚಿಗೆ ಪ್ರಾಧಾನ್ಯವನ್ನು ಪಡೆಯಲಾರವು. ಜವಾಬ್ದಾರಿ ಸರಕಾರವು ಸ್ಥಾಪನೆಯಾದ ಕೂಡಲೇ ಮೇಲ್ಕಂಡ ವಿಚಾರಗಳೆಲ್ಲವೂ ಅಲ್ಪ ಕಾಲದಲ್ಲಿಯೇ ಸರಿಪಡಿಸಲ್ಪಡುವುವು. ಆದುದರಿಂದ ನಾನು ಈ ವಿಚಾರಗಳ ಮೇಲೆ ಹೆಚ್ಚಿಗೆ ಚರ್ಚೆ ಮಾಡದೆ ಮುಂದುವರಿಯುತ್ತೇನೆ. ನಾವುಗಳು ನಮ್ಮ ಮಹಾರಾಜರಿಗೆ ಅಗೌರವವನ್ನುಂಟು ಮಾಡುವ ಉದ್ದೇಶದಿಂದಾಗಲೀ, ಅಥವಾ ಅಧಿಕಾರಿಗಳನ್ನು ಅವಹೇಳನ ಮಾಡುವ ಅಭಿಪ್ರಾಯದಿಂದಾಗಲೀ, ಕೆಲಸ ಮಾಡುತ್ತಿಲ್ಲವೆಂದೂ ಪ್ರಪಂಚದ ಬಾಕಿ ನಾಗರಿಕ ದೇಶಗಳು ತ್ಯಾಗ ಮತ್ತು ಸೇವೆಯಿಂದ ತಮ್ಮ ದೇಶ ಭಕ್ತಿಯುತವಾದ ಮನೋಗತಗಳನ್ನು ಹೇಗೆ ಪೂರ್ಣ ಮಾಡಿಕೊಂಡವೋ ಅದೇ ರೀತಿಯಲ್ಲಿಯೇ ನಾವುಗಳೂ ಸಹ ನಮ್ಮ ಮನೋಭಿಷ್ಟಗಳನ್ನು ಸಫಲಗೊಳಿಸಲು ಉದ್ಯುಕ್ತರಾಗಿದ್ದೇವೆಂದೂ ನಾನು ಎಲ್ಲರಿಗೂ ಆಶ್ವಾಸನ ಕೊಡುತ್ತೇನೆ. ಒಂದು ವೇಳೆ ನಮ್ಮ ಇಂದಿನ ಸರ್ಕಾರವು ನಮ್ಮ ಸ್ಥಿತಿಗಳನ್ನು ಅರಿತುಕೊಳ್ಳದೆ ಹೋದರೆ ಅದು ನಮ್ಮ ತಪ್ಪಲ್ಲ.

ನಾವು ನಿರೀಕ್ಷಿಸುವುದಕ್ಕೆ ಮುಂಚೆಯೇ ನಮ್ಮ ಸರ್ಕಾರದಲ್ಲಿ ಸುಧಾರಣೆಗಳು ಉಂಟಾಗುವುದು ಖಂಡಿತ. ಇದಕ್ಕೆ ಅನೇಕ ಕಾರಣಗಳುಂಟು. ಆದರೆ ಅವುಗಳೆಲ್ಲ ವನ್ನು ನಾವು ಇಲ್ಲಿ ಹೇಳಲು ಆಶಿಸುವುದಿಲ್ಲ. ನಾವು ಹೊಡೆದಾಡುತ್ತಿರುವುದು

ಕೇವಲ ನಮ್ಮ ಆಜನ್ಮಸಿದ್ಧವಾದ ರಾಜಕೀಯ ಹಕ್ಕುಗಳಿಗಾಗಿಯೇ ಅಲ್ಲ. ಆ ಮೂಲಕ ನಮ್ಮ ದೇಶದ ಆರ್ಥಿಕ ಸ್ಥಿತಿಯನ್ನೂ ವಿದ್ಯಾಭಿವೃದ್ಧಿಯನ್ನೂ ಉಂಟು ಮಾಡುವುದೇ ನಮ್ಮ ಧ್ಯೇಯವಾಗಿದೆ. ನಮ್ಮ ರಾಜ್ಯಾಡಳಿತದ ಆಡಂಬರಕ್ಕೂ ಹಳ್ಳಿಗಾಡಿನ ರೈತರ ದುಸ್ಥಿತಿಗೂ ಮಧ್ಯೆ ಇರತಕ್ಕ ಅಜಗಜಾಂತರ ವ್ಯಾತ್ಯಾಸವನ್ನು ನಾವು ಪರಿಗಣಿಸಿದರೆ ಜವಾಬ್ದಾರಿ ಸರ್ಕಾರ ಸ್ಥಾಪನೆಗಾಗಿ ಸರ್ಕಾರದ ಸಂಗಡ ಕಡೆಯವರೆಗೂ ಹೊಡೆದಾಡುವುದಲ್ಲದೆ ಬೇರೆ ಮತ್ತಾವ ಮಾರ್ಗವೂ ನಮ್ಮ ದೃಷ್ಟಿ ಪಥಕ್ಕೆ ಬೀಳುವುದೇ ಇಲ್ಲ. ಒಂದು ವೇಳೆ ನಾವುಗಳು ನಮ್ಮ ಗುರಿಯನ್ನು ಮುಟ್ಟು ವುದು ತಡವಾಗುವುದಾದರೆ ಅದಕ್ಕೆ ನಮ್ಮ ಮಂದಗತಿಯೂ ತ್ಯಾಗ ಮಾಡುವುದಕ್ಕೆ ನಮಗಿರತಕ್ಕ ಅಪನಂಬಿಕೆಯೂ ಕಾರಣವಾಗಿವೆ. ಆದುದರಿಂದ ಈಗ ನಿಯಮಿತ ವಾಗಿರುವ ಸಮಿತಿಗಳನ್ನು ಬಹಿಷ್ಕರಿಸುವ ವಿಚಾರದಲ್ಲಿ ನಾವುಗಳೆಲ್ಲರೂ ದೃಢ ಮನಸ್ಕರಾಗಿರಬೇಕೆಂದೂ ತನ್ಮೂಲಕ ಸಮಿತಿಗಳಲ್ಲಿ ಭಾಗವಹಿಸಬೇಕೆಂದಿರುವವರಿಗೆ ನೀತಿಬೋಧೆ ಮಾಡಬೇಕೆಂದೂ ನಾನು ಇನ್ನೊಮ್ಮೆ ಹೇಳುತ್ತೇನೆ.

ಈ ಸಂದರ್ಭದಲ್ಲಿ ನಾವುಗಳು ಈಗ ನಿಯಮಿತವಾಗಿರುವ ಸಮಿತಿಗಳಿಗೆ ಸಮಾನವಾದ ಸಮಿತಿಗಳನ್ನು ನಿಯಮಿಸಿ, ಜನಗಳ ಸಾಕ್ಷ್ಯವನ್ನೂ ಪಡೆದು ನಮ್ಮ ಕೋರಿಕೆಗಳ ಶಕ್ತಿಯನ್ನು ಸರ್ಕಾರಕ್ಕೂ ಮತ್ತು ವಿಶಾಲವಾದ ಪ್ರಪಂಚಕ್ಕೂ ವ್ಯಕ್ತಪಡಿಸಬೇಕೆಂದು ಹೇಳಬಯಸುತ್ತೇನೆ. ನಾವುಗಳು ನಮ್ಮ ಕಾರ್ಯಸಾಧನೆ ಗಾಗಿ ಯಾವ ಮಾರ್ಗವನ್ನು ಅನುಸರಿಸಬೇಕೆಂಬುದನ್ನೂ ಸ್ವಲ್ಪ ದೀರ್ಘವಾಗಿ ಯೋಚಿಸಬೇಕು. ನಾವು ಕೆಲಸ ಮಾಡುವಾಗಲೆಲ್ಲ ಮಹಾತ್ಮಾ ಗಾಂಧಿಯವರ ದಿವ್ಯ ಮೂರ್ತಿಯೂ ಮತ್ತು ಅವರ ಅಮೋಘವಾದ ಸಂದೇಶಗಳೂ ನಮ್ಮ ದೃಕ್ಪಥದಲ್ಲಿರಬೇಕು. ನಮ್ಮ ಎದುರಾಳುಗಳು ಕೋಪಗೊಂಡಿರತಕ್ಕ ಕಾಲದಲ್ಲಿ ನಾವು ಶಾಂತರಾಗಿರಬೇಕು ; ಗುಂಡಿನ ಮುಂದೆಯೂ ನಾವು ಅಹಿಂಸಾವ್ರತಿಗಳಾಗಿರ ಬೇಕು ; ನಾವು ಕಷ್ಟಕ್ಕೆ ಗುರುಯಾಗಬೇಕೇ ಹೊರತು ಇನ್ನೊಬ್ಬರನ್ನು ನೋಯಿಸ ಬಾರದು. ಕಾಂಗ್ರೆಸ್ಸಿನವರ ಘನತೆಗೆ ಯೋಗ್ಯವಲ್ಲದ ಮಾತುಗಳಿಂದಾಗಲೀ ಆಲೋಚನೆಯಿಂದಾಗಲೀ ನಾವುಗಳು ನಮ್ಮ ಅಂತಸ್ತನ್ನು ಕಡಿಮೆಮಾಡಿಕೊಳ್ಳ ಬಾರದು.

ಇನ್ನೊಂದು ವಿಚಾರವೆಂದರೆ ರಾಜಕೀಯ ವಿಷಯ (Political affairs) ಗಳನ್ನು ವಿಮರ್ಶಿಸುವ ಕಮಿಟಿಯ ವಿಚಾರ. ಈ ಸಂಬಂಧದಲ್ಲಿ ನಾವು ಸುಮ್ಮನೆ ಸಂಯುಕ್ತ ರಾಷ್ಟ್ರೀಯ ಮಹಾಸಭೆಯವರ ಮೇಲ್ಪಂಕ್ತಿಯನ್ನು ಅನುಸರಿಸಬೇಕು. ಅನಪೇಕ್ಷಿತವಾದ ಸಂಯುಕ್ತ ರಾಜ್ಯಾಂಗ ಪದ್ಧತಿಯಲ್ಲಿ ಸಂಸ್ಥಾನದವರನ್ನು ಸೇರಿಸಿ

ಕೊಳ್ಳುವುದಕ್ಕಾಗಿ ಬೀಸಿರುವ ಮಾಯಾಜಾಲವಿದು. ಯಾವ ಮನುಷ್ಯನು ಅಂತಹ ಕಮಿಟಿಗಳಲ್ಲಿ ಸಹಕರಿಸುತ್ತಾನೆಯೋ ಅವನು ಖಂಡಿತವಾಗಿಯೂ ರಾಷ್ಟ್ರೀಯ ಮಹಾಸಭೆಯ ಅಧಿಕೃತವಾದ ನೀತಿಗೆ ವಿರುದ್ಧವಾಗಿ ನಡದುಕೊಂಡಂತಾಗುತ್ತದೆ. ಬ್ರಿಟೀಷಿನವರ ಭೇದ ಆಡಳಿತ ಪದ್ಧತಿಯನ್ನು ಅರಿತವರಾರೂ ಈ ಕಮಿಟಿಗಳ ಪರತ್ತುಗಳಿಗಾಗಲೀ ಅಥವಾ ಕಮಿಟಿಯ ಸದಸ್ಯರುಗಳ ಯೋಗ್ಯತೆಗಾಗಲೀ ಮೋಸ ಹೋಗುವುದಿಲ್ಲ.

ನಮ್ಮ ಕೋರಿಕೆಗಳನ್ನು ಒಪ್ಪಿ ಸಫಲಗೊಳಿಸದೇ ಇರುವುದಕ್ಕೆ ಸಾಕಷ್ಟು ಕಾರಣಗಳೇನೂ ನಮ್ಮ ಸರ್ಕಾರಕ್ಕಿಲ್ಲ. ನಾವುಗಳೇ ಸ್ವತಃ ನಮ್ಮ ಚಳುವಳಿಯನ್ನು ನಡೆಯಿಸಬೇಕೆಂದೂ ಹೊರಗಡೆಯವರ ಸಹಾಯವನ್ನು ಅಪೇಕ್ಷಿಸಬಾರದೆಂತಲೂ ಸರ್ಕಾರದವರು ಹೇಳುತ್ತಿದ್ದರು. ರಾಷ್ಟ್ರೀಯ ಮಹಾಸಭೆಯವರು ತಮ್ಮ ಹೆಸರಿನಲ್ಲಿ ಚಳುವಳಿಯನ್ನು ಮೈಸೂರಿನಲ್ಲಿ ನಡೆಯಿಸಬಾರದೆಂದು ಹೇಳಿ ನಮ್ಮ ಸರ್ಕಾರಕ್ಕೆ ಬಹಳ ಉಪಕಾರ ಮಾಡಿದ್ದಾರೆ.

ಜನಗಳ ಕೋರಿಕೆಗಳನ್ನೂ ಆಶೆಗಳನ್ನೂ ಸಹಾನುಭೂತಿಯ ದೃಷ್ಟಿಯಿಂದ ನೋಡುವುದಕ್ಕೆ ಬದಲಾಗಿ, ಸರ್ಕಾರದವರು ಕೆಲವು ಕಾಲ ದಬ್ಬಾಳಿಕೆಯ ಮಹಾಸ್ತ್ರವನ್ನು ಧಾರಣೆ ಮಾಡಿದರು. ಸರ್ಕಾರದವರು ಶೀಘ್ರವಾಗಿಯೇ ತಾವು ಅನುಸರಿಸಿದ ದಬ್ಬಾಳಿಕೆ ನೀತಿಯ ತಪ್ಪನ್ನು ಅರಿತುಕೊಂಡು ರಾಜಬಂಧಿಗಳನ್ನು ಬಿಡುಗಡೆ ಮಾಡಿದುದಕ್ಕಾಗಿ ನಾನು ಬಹಳ ಸಂತೋಷಪಡುತ್ತೇನೆ. ಇತ್ತೀಚೆಗೆ 'ಜನವಾಣಿ' ಪತ್ರಿಕೆಯನ್ನು ಸಂಪಾದನೆ ಮಾಡಿ ಪ್ರಕಟಿಸುವುದಕ್ಕೆ ಸರಕಾರದ ಅನುಮತಿ ದೊರೆತಿದೆಯೆಂದು ಕೇಳಿ ಬಹಳ ಸಂತೋಷವಾಯಿತು. ಪ್ರಜಾಸಮುದಾಯದ ಮೇಲೆ ಬಿದ್ದ ಎಲ್ಲಕ್ಕಿಂತಲೂ ಹೆಚ್ಚಿನ ಪೆಟ್ಟೆಂದರೆ ಶ್ರೀ ಬಿ. ಎನ್. ಗುಪ್ತರನ್ನು ದೇಶದಿಂದ ಗಡಿಪಾರು ಮಾಡಿ ಅವರ ಪತ್ರಿಕೆಯಾದ 'ಪ್ರಜಾಮತ'ವನ್ನು ನಿಲ್ಲಿಸಿದುದು. ಇದರಿಂದ ಶ್ರೀ ಬಿ. ಎನ್. ಗುಪ್ತರ ವೈಯಕ್ತಿಕ ಹಕ್ಕುಬಾಧ್ಯತೆಗಳಿಗೆ ಪೆಟ್ಟು ತಗುಲಿದುದಕ್ಕಿಂತ ಹೆಚ್ಚಾಗಿ ಮೈಸೂರು ದೇಶದ ಜನಗಳ ನಾಗರಿಕ ಹಕ್ಕುಬಾಧ್ಯತೆಗಳ ಮೇಲೆ ಭಾರಿ ಪೆಟ್ಟು ಬಿದ್ದಂತಾಯಿತು. ಸರ್ಕಾರದವರು ಶ್ರೀ ಬಿ. ಎನ್. ಗುಪ್ತರ ಮೇಲಿನ ಗಡಿಪಾರು ಆಜ್ಞೆಯನ್ನು ತತ್‌ಕ್ಷಣವೇ ರದ್ದುಗೊಳಿಸಿ, ಸಂಸ್ಥಾನದ ಪ್ರಜೆಗಳ ನಾಗರಿಕ ಹಕ್ಕುಬಾಧ್ಯತೆಗಳಿಗೆ ಕುಂದು ಬಾರದಂತೆ ನೋಡಿಕೊಳ್ಳುವ ನಂಬಿಕೆಯನ್ನುಂಟುಮಾಡುವರೆಂದು ನಂಬುತ್ತೇನೆ.

ಇಷ್ಟೆಲ್ಲಾ ಹೇಳಿದ ಮೇಲೆ ನಾವುಗಳು ನಮ್ಮ ರಾಜಕೀಯ ಚಳುವಳಿಯನ್ನು ನಮ್ಮ ಸ್ವಂತ ಜವಾಬ್ದಾರಿಯ ಮೇಲೆಯೆ ನಡೆಯಿಸುತ್ತಿದ್ದೇವೆಂದು ನಾನು

ಹೇಳಬಯಸುತ್ತೇನೆ. ಈ ಸಂದರ್ಭದಲ್ಲಿ, ನಮ್ಮ ಸ್ವಂತ ಜವಾಬ್ದಾರಿಯ ಮೇಲೆ ಚಳುವಳಿಯನ್ನು ನಡೆಯಿಸಬೇಕಾದ ಅವಶ್ಯಕತೆಯು ನಮ್ಮಗಳಿಗೆ ಏಕೆ ಬಂತೆಂಬುದನ್ನು ಸ್ವಲ್ಪ ಹೇಳುವುದು ಅಗತ್ಯ. ನಮ್ಮ ಚಳವಳಿಯು ಇನ್ನೂ ಶೈಶವಾವಸ್ಥೆಯಲ್ಲಿದ್ದಾಗ ರಾಷ್ಟ್ರೀಯ ಮಹಾಸಭೆಯವರ ಬುದ್ಧಿವಾದವನ್ನೂ ಅನುಮತಿಯನ್ನೂ ನಾವುಗಳು ಕೇಳುತ್ತಿದ್ದೆವು. ರಾಷ್ಟ್ರೀಯ ಮಹಾ ಸಭೆಯವರು ಅನಪೇಕ್ಷಿತವಾದ ಸಂಯುಕ್ತವಾದ ರಾಜ್ಯಾಂಗ ಘಟನೆಯನ್ನು ಎದುರಿಸುವುದಕ್ಕಾಗಿ ಹಗಲಿರುಳೂ ಹೊಡೆದಾಡುತ್ತಿದ್ದಾರೆ. ಅವರ ಸಂಪೂರ್ಣ ಕಾಲವೆಲ್ಲವೂ ಅದಕ್ಕಾಗಿಯೇ ವಿನಿಯೋಗಿಸಲು ಇಡಲ್ಪಟ್ಟಿದೆ. ತಮ್ಮ ಕೇಂದ್ರಿಕೃತವಾದ ಶಕ್ತಿ ಸಾಮರ್ಥ್ಯಗಳನ್ನು ಬೇರೊಂದು ಕೆಲಸಕ್ಕಾಗಿ ವಿನಿಯೋಗಿಸಲು ಸಾಧ್ಯವಿಲ್ಲವೆಂದು ದೇಶದ ಮುಖಂಡರುಗಳಿಗೆ ತಿಳಿದುಬಂದು ಅವರು ಹರಿಪುರದಲ್ಲಿ ನಡೆದ ಕಾಂಗ್ರೆಸ್ ಮಹಾಧಿವೇಶನದಲ್ಲಿ "ಕೆಲವು ಕಾಲದ ಮಟ್ಟಿಗೆ ಸಂಸ್ಥಾನದವರು ರಾಷ್ಟ್ರೀಯ ಮಹಾಸಭೆಯ ಹೆಸರಿನಲ್ಲಿ ಸಂಸ್ಥಾನಗಳ ಚಳುವಳಿ ನಡೆಸಬಾರದೆಂದು" ತೀರ್ಮಾನಿಸಿದರು. ಅವರು ಎಷ್ಟು ಸಹಾನುಭೂತಿ ಸಹಾಯವನ್ನು ಕೊಡಬಹುದೋ ಅಷ್ಟನ್ನು ಈಗಲೂ ಕೊಡಲೊಪ್ಪಿರುತ್ತಾರೆ. ಆದರೆ, ಆ ಮಧ್ಯದಲ್ಲಿ ಹರಿಪುರದ ತೀರ್ಮಾನಕ್ಕನುಗುಣವಾಗಿ ನಾವುಗಳು ಮೈಸೂರು ಕಾಂಗ್ರೆಸ್ ಎಂಬ ಒಂದು ಸಂಸ್ಥೆಯನ್ನು ಸ್ಥಾಪಿಸಿರುತ್ತೇವೆ. ಮಾತೃಸಂಸ್ಥೆಯಾದ ಕಾಂಗ್ರೆಸ್‌ನಿಂದ ಈ ಸಂಸ್ಥೆಯು ಬೇರ್ಪಟ್ಟಿದೆಯೆಂದು ನಾನು ಹೇಳಬಯಸುತ್ತೇನೆ.

ನಮ್ಮ ಸಂಪೂರ್ಣ ಮಾನಸಿಕ, ನೈತಿಕ ಮತ್ತು ಶಾರೀರಿಕ ಶಕ್ತಿಗಳನ್ನು ಉಪಯೋಗಿಸಿ, ಮಾಡತಕ್ಕ ಅನೇಕ ಮಹತ್ತರವಾದ ಕೆಲಸಗಳು ಇನ್ನೂ ಇವೆಯೆಂದು ನಾನು ಕಟ್ಟಕಡೆಯದಾಗಿ ಹೇಳಬೇಕಾಗಿದೆ. ಸರಕಾರಿ ಅಧಿಕಾರಿಗಳೂ ಸಹ ನಮ್ಮವರೇ. ಆದುದರಿಂದ ನಾವು ಅವರ ಬಗ್ಗೆ ಯಾವ ದ್ವೇಷಾಸೂಯೆಗಳನ್ನೂ ಇಟ್ಟುಕೊಳ್ಳಬಾರದು. ಬದಲಾವಣೆ ಮಾಡಬೇಕೆಂದಿರುವ ರಾಜ್ಯಾಂಗ ಪದ್ಧತಿಯ ಕಡೆಗೆ ನಮ್ಮ ಶಕ್ತಿಯನ್ನೆಲ್ಲಾ ನಾವು ಕೇಂದ್ರೀಕರಿಸೋಣ. ನಮ್ಮ ಕಾರ್ಯವು ನ್ಯಾಯಸಮ್ಮತವಾದುದು. ಆದುದರಿಂದ ಅದಕ್ಕೆ ಜಯವು ಖಂಡಿತಾ ದೊರೆಯುತ್ತದೆ. ನಾವುಗಳು ಎಷ್ಟು ಪ್ರಮಾಣಿಕತೆಯಿಂದ, ದೃಢಮನಸ್ಕರಾಗಿ ಒಗ್ಗಟ್ಟಿನಿಂದ ಕೆಲಸ ಮಾಡುತ್ತೇವೆಯೋ ಅಷ್ಟು ಜಾಗ್ರತೆ ನಮಗೆ ನಮ್ಮ ಕಾರ್ಯ ಸಾಧನೆಯಲ್ಲಿ ಜಯವು ಲಭಿಸುತ್ತದೆ. ನಮ್ಮ ಪವಿತ್ರ ಕಾರ್ಯಕ್ಕೆ ದೇವರ ಕೃಪೆಯು ದೊರೆಯಲೆಂದು ಪ್ರಾರ್ಥಿಸುತ್ತೇನೆ.

ಶ್ರೀ ಸಿದ್ದಲಿಂಗಯ್ಯನವರು ಸಿದ್ಧಪಡಿಸಿದ್ದ ಅಧ್ಯಕ್ಷ ಭಾಷಣವನ್ನು ಜನರೆಲ್ಲ ಆಸಕ್ತಿಯಿಂದ ಆಲಿಸಿದರು. ಹೊಸ ರಾಜಕೀಯ ಪ್ರಜ್ಞೆಯ ಪ್ರವಾಹದಲ್ಲಿ ಜನ

ಸ್ತೋಮ ಭಾಗವಹಿಸಬೇಕೆಂಬ ಕರೆ ಅದರಲ್ಲಿದ್ದುದನ್ನು ಅನೇಕರು ಗುರುತಿಸಿಕೊಂಡರು. ಈ ಅನುಭವ ಹಲವರಿಗೆ ಹೊಸದು. ಅಕ್ಷರಜ್ಞಾನವಿಲ್ಲದೆ, ಆರ್ಥಿಕವಾಗಿ ಸಾಮಾಜಿಕವಾಗಿ ಹಿಂದುಳಿದಿದ್ದ ಅಸಂಖ್ಯಾತ ಜನರಿಗೆ ತಮ್ಮ ಇರುವಿಕೆಯು ಅರಿವಿರಲಿಲ್ಲ. ತಮಗೆ ಹಲವು ಹಕ್ಕುಗಳಿವೆ ಎಂಬುದು ಅವರಿಗೆ ತಿಳಿದಿರಲಿಲ್ಲ. ತಾವಿರುವುದು ಅನ್ಯರ ಹಂಗಿನಲ್ಲಿ, ಅದರಿಂದ ತಾವು ಹೊರಗೆ ಬರಬೇಕು, ಸ್ವತಂತ್ರವಾಗಿ ಬದುಕಬೇಕು, ಸ್ವಾತಂತ್ರ್ಯವನ್ನು ಗಳಿಸಬೇಕು, ಏನೆಲ್ಲ ತ್ಯಾಗ ಬಲಿದಾನಗಳಿಗೆ ಸಿದ್ಧವಾಗಬೇಕು, ಎಂಬ ವಿಚಾರಗಳಿಗೆ ಎಲ್ಲರ ಕಿವಿಗಳು ಹೊಸದಾಗಿ ತೆರೆದುಕೊಂಡವು. ಅಧ್ಯಕ್ಷ ಭಾಷಣವು ಜನರ ರಾಜಕೀಯ ಶಿಕ್ಷಣಕ್ಕೆ ಮತ್ತಷ್ಟು ಇಂಬಾಯಿತು.

ಸಂದೇಶಗಳು

ಶಿವಪುರ ರಾಷ್ಟ್ರಕೂಟದ ಮೈಸೂರು ಕಾಂಗ್ರೆಸ್ ಅಧಿವೇಶನಕ್ಕೆ ಯಶಸ್ಸು ಕೋರಿ ಪ್ರಖ್ಯಾತ ವ್ಯಕ್ತಿಗಳು ಕಳುಹಿಸಿದ್ದ ಸಂದೇಶಗಳನ್ನು ಶ್ರೀ ಎಚ್. ಕೆ. ವೀರಣ್ಣಗೌಡರು ಓದಿದರು. ಸಂದೇಶಗಳನ್ನು ಕಳುಹಿಸಿದ್ದ ಪ್ರಮುಖರು : ಶ್ರೀಗಳಾದ ಜವಹರಲಾಲ್ ನೆಹರು, ಕೆ. ರಾಮನ್ ಮೆನನ್ (ಮದರಾಸಿನ ಮಂತ್ರಿ), ಬಿ. ಜಿ. ಖೇರ್ (ಬೊಂಬಾಯಿಯ ಮುಖ್ಯಮಂತ್ರಿ), ಡಾ॥ ಸಿ. ಆರ್. ರೆಡ್ಡಿ (ಆಂಧ್ರ ವಿಶ್ವವಿದ್ಯಾಲಯದ ಉಪಕುಲಪತಿ), ರಾಜಸಭಾಭೂಷಣ ಕೆ. ಚಾಂಡಿ, ಆರ್. ಆರ್. ದಿವಾಕರ್, ಡಾ॥ ಯು. ರಾಮರಾವ್ (ಮದರಾಸ್ ಲೆಜಿಸ್ಲೇಟಿವ್ ಕೌನ್ಸಿಲ್‌ನ ಅಧ್ಯಕ್ಷ), ಡಾ॥ ಪಟ್ಟಾಭಿ ಸೀತಾರಾಮಯ್ಯ, ಡಾ॥ ಹರ್ಡೀಕರ್, ಬಲವಂತ ರಾಯ್ ಮೆಹತಾ, ಸಿ. ರಾಜಗೋಪಾಲಚಾರಿ, ಶ್ರೀಮತಿಯರಾದ ಉಮಾಬಾಯಿ ಕುಂದಾಪುರ ಮತ್ತು ಕಮಲಾದೇವಿ ಚಟ್ಟೋಪಾಧ್ಯಾಯ. ಧಾರವಾಡದ 'ಕರ್ನಾಟಕ ಏಕೀಕರಣ ಪರಿಷತ್ತಿ'ನ ಕಾರ್ಯದರ್ಶಿಗಳೂ ಸಾಂಗಲಿಯ 'ದಕ್ಷಿಣ ಸಂಸ್ಥಾನ ಪ್ರಜಾಪರಿಷತ್ತಿ'ನ ಕಾರ್ಯದರ್ಶಿಗಳೂ ಸಂದೇಶಗಳನ್ನು ಕಳಿಸಿದ್ದರು. ಪಂಡಿತ ಜವಹರಲಾಲ ನೆಹರೂರವರು ತಮ್ಮ ಸಂದೇಶದಲ್ಲಿ ಮುಖ್ಯವಾಗಿ ಹೀಗೆ ಉಲ್ಲೇಖಿಸಿದ್ದರು : "ಹಿಂದೀ ಸಂಸ್ಥಾನಗಳ ಸಮಸ್ಯೆಯಲ್ಲಿ ನಾನು ಹೆಚ್ಚು ಆಸ್ಥೆ ವಹಿಸಿರುವುದು ನಿಮಗೆ ಗೊತ್ತೇ ಇದೆ. ಅದರಲ್ಲಿಯೂ ಹೆಚ್ಚಿನ ಸಂಧಾರಣೆಯ ಬಗ್ಗೆ ಮೈಸೂರು ಸಂಸ್ಥಾನದವರು ನಡೆಸಿದ ಚಟುವಟಿಕೆಗಳಲ್ಲಿ ನಾನು ವಿಶೇಷ ಆಸ್ಥೆ ವಹಿಸಿರುವುದುಂಟು. ಹಿಂದೀ ಸಂಸ್ಥಾನಗಳ ಧ್ಯೇಯವು ಸಂಪೂರ್ಣ ಜವಾಬ್ದಾರಿ ಸರಕಾರವನ್ನು ಸ್ಥಾಪಿಸಿಕೊಳ್ಳುವುದೇ ಆಗಿರುವುದೆಂದು ನನಗೆ ಸಂಪೂರ್ಣವಾಗಿ

ಮನವರಿಕೆಯಾಗಿರುವುದರಿಂದ ನಾನು ನಿಮ್ಮ ಕಾರ್ಯದಲ್ಲಿ ಸಹಾನುಭೂತಿ ಉಳ್ಳವನಾಗಿರುವೆನು.*"

ಒಳೆಶದ ಕೆಲವು ಸಂಸ್ಥಾನಗಳಲ್ಲಿ ನಡೆಯುತ್ತಿರುವ ಪ್ರಜೆಗಳ ಹೋರಾಟಕ್ಕೆ ಸಹಾನುಭೂತಿ ಸೂಚಿಸುವ ನಿರ್ಣಯವನ್ನು ಡಾ॥ ಪಾರ್ಥಸಾರಾಯಣ ಪಂಡಿತರು ಮಂಡಿಸಿದರು. ಶ್ರೀ ಎಸ್. ರಂಗರಾಮಯ್ಯನವರು ಅದನ್ನು ಅನುಮೋದಿಸಿದರು. ತಿರುವಾಂಕೂರಿನಲ್ಲಿ ನಡೆಯುತ್ತಿದ್ದ ಸರಕಾರದ ದೌರ್ಜನ್ಯವನ್ನು ಖಂಡಿಸುವ ನಿರ್ಣಯವನ್ನು ಶ್ರೀ ಟಿ. ಎಸ್. ರಾಜಗೋಪಾಲ ಅಯ್ಯಂಗಾರ್ಯರು ಮಂಡಿಸಿದರು. ಶ್ರೀ ಎನ್. ಸಿ. ತಿಮ್ಮಾರೆಡ್ಡಿಯವರು ಅದನ್ನು ಬಲವಾಗಿ ಸಮರ್ಥಿಸಿ, 'ಹಂಡ ಕುಡುಕರನ್ನು ತಮ್ಮ ಕಡೆಗ ಒಲಿಸಿಕೊಂಡು ಕಾಂಗ್ರೆಸ್ ಜನರನ್ನು ಮಟ್ಟ ಹಾಕಲು ಅಲ್ಲಿನ ಸರಕಾರ ಅಕೃತ್ಯ ಮಾಡುತ್ತಿದೆ' ಎಂದು

---

*ಶ್ರೀ ನೆಹರೂ ಅವರು ದೀರ್ಘವಾದ ಸಂದೇಶವನ್ನು ಕಳುಹಿಸಿದ್ದರು. ಅದರ ಮತ್ತಷ್ಟು ಭಾಗದ ಮೂಲಪಾಠ ಹೀಗಿದೆ :

"I am greatly interested in the problem of Indian States and I have taken particular interest in the movement of achieving freedom in Mysore State. I am convinced that the States should aim at full responsible government. I therefore sympathise with your aim".

"Any real progress will only come to you through your own organised strengh. I hope therefore that you will organise yourself effectively and will work peacefully and with sobriety to attain your objective. You must not be discouraged by apparent reverses or displeasures of high officials. The only think that harms is to leave right path in a moment of excitement. If you stick to prefectly legitimate and peaceful methods you are bound to succeed. Mysore is one of the leading States in India and I am glad to see that people of Mysore are also taking lead in getting rid of autocratic and feudal restrictions. I wish you success in this enterprise. Mysore State as every other State in India is an integral part of India. Your freedom therefore is part of our freedom. We hang together and we shall finally succeed together".

ಸರಕಾರವನ್ನು ಉಗ್ರವಾಗಿ ಟೀಕಿಸಿದರು. ಮೈಸೂರು ಸರಕಾರದ 'ಫೆಡರೇಷನ್ ಸಮಿತಿಯ ಬಹಿಷ್ಕಾರ' ನಿರ್ಣಯವನ್ನು ಶ್ರೀ ಹೆಚ್. ಬಿ. ಗುಂಡಪ್ಪಗೌಡರು ಸಭೆಯ ಮುಂದಿಟ್ಟರು. ಶ್ರೀ ತಗಡೂರು ರಾಮಚಂದ್ರರಾವ್ ಅನುಮೋದಿಸಿದರು.

ನಿರ್ಣಯಗಳ ಅಂಗೀಕಾರ

ವಿಷಯ ನಿಯಾಮಕ ಸಮಿತಿಯಲ್ಲಿ ಸಿದ್ಧಪಡಿಸಿದ್ದ ನಿರ್ಣಯಗಳನ್ನು ಅಂಗೀಕಾರಕ್ಕಾಗಿ ಬಹಿರಂಗ ಅಧಿವೇಶನದ ಮುಂದೆ ತರಲಾಯಿತು. ಪ್ರಾರಂಭದಲ್ಲಿ ಶ್ರೀ ವೀರಕೇಸರಿ ಸೀತಾರಾಮಶಾಸ್ತ್ರಿಗಳು ಧ್ವಜಾರೋಹಣ ಮಾಡಿ ಬಂಧಿತರಾದ ನಾಯಕರಿಗೆ ಅಭಿನಂದನೆಗಳನ್ನು ಅರ್ಪಿಸುವ ನಿರ್ಣಯವನ್ನು ಸಭೆಯ ಮುಂದಿಟ್ಟರು. ವಾದ ವಿವಾದವಿಲ್ಲದೆ ಅದು ಅಂಗೀಕಾರವಾಯಿತು. ಶ್ರೀ ಬಿ. ಎನ್. ಗುಪ್ತರ ಗಡೀಪಾರಾಜ್ಞೆಯನ್ನು ಸರಕಾರ ಹಿಂದಕ್ಕೆ ತೆಗೆದುಕೊಳ್ಳಬೇಕೆಂಬ ನಿರ್ಣಯವನ್ನು ಶ್ರೀ ಕೆ. ಸಿ. ರೆಡ್ಡಿಯವರು ಮಂಡಿಸಿದರು. ಶ್ರೀ ಗುಬ್ಬಿ ರಾಜಗೋಪಾಲಾಚಾರ್ಯರು ಅದನ್ನು ಸಮರ್ಥಿಸಿದರು.

ವಿಷಯ ನಿಯಾಮಕ ಸಮಿತಿಯಲ್ಲಿ ಸಿದ್ಧವಾಗಿದ್ದ ನಿರ್ಣಯಗಳು ಸೂಚಿತವಾದ ಮೇಲೆ ಮತ್ತೆ ಕೂಲಂಕಷವಾಗಿ ಚರ್ಚೆ ನಡೆಯಿತು. ಬಹುಮತದ ಒಪ್ಪಿಗೆಯೊಂದಿಗೆ ನಿರ್ಣಯಗಳು ಅಂಗೀಕಾರವಾದುವು. ನಿರ್ಣಯಗಳನ್ನು ಬಹುಮತದ ಒಪ್ಪಿಗೆ ಪಡೆಯಲು ಮುಖಂಡರು ಮಾಡಿದ ಸಮರ್ಥನೀಯವಾದ ಭಾಷಣಗಳು ಬಹಳ ನೆರವಾದುವು. ಈ ಸಂದರ್ಭದ ಭಾಷಣಗಳು ಉಜ್ವಲವಾಗಿದ್ದವು; ಸಭಿಕರಿಗೆ ಅನೇಕ ಹೊಸ ವಿಷಯಗಳನ್ನು ತಿಳಿಯಪಡಿಸುವುದರಲ್ಲಿ ಯಶಸ್ವಿಯಾದುವು. ಸರಕಾರದ ದಬ್ಬಾಳಿಕೆಯ ಟೀಕೆ, ಸರಕಾರದ ಪಕ್ಷವಹಿಸಿ ವರದಿ ಮಾಡುವ ಪತ್ರಿಕೆಗಳ ಬಗೆಗೆ ಆಕ್ಷೇಪಗಳು ಆಗಾಗ ಕೇಳಿಬಂದುವು. ಜನರನ್ನು ತಪ್ಪು ಹಾದಿಗೆ ಎಳೆಯುವಂತೆ, ಅಧಿವೇಶನದ ಮುಖ್ಯ ಉದ್ದೇಶವನ್ನು ಮರೆಸುವಂತೆ ವರದಿ ಮಾಡುತ್ತಿದ್ದ ಸರಕಾರದ ವಕಾಲತ್ತು ವಹಿಸಿಕೊಂಡಿದ್ದ ಕೆಲವು ಇಂಗ್ಲಿಷ್ ಪತ್ರಿಕೆಗಳನ್ನು ಶ್ರೀಮತಿ ಯಶೋಧರಮ್ಮ ದಾಸಪ್ಪನವರು ತರಾಟೆಗೆ ತೆಗೆದುಕೊಂಡರು. ಶ್ರೀ ಕೆ. ಸಿ. ರೆಡ್ಡಿಯವರು ಜವಾಬ್ದಾರಿ ಸರಕಾರದ ಅಗತ್ಯವನ್ನು ಕುರಿತು ಅಮೋಘವಾಗಿ ಭಾಷಣ ಮಾಡಿದರು. ಈ ವಿಷಯವನ್ನು ಸಮರ್ಥಿಸಿ ಶ್ರೀ ಎ. ಜಿ. ಬಂದೀಗೌಡ, ಶ್ರೀ ವಿ. ವೆಂಕಟಪ್ಪ, ಶ್ರೀ ಪಾಲಹಳ್ಳಿ ಸೀತಾರಾಮಯ್ಯನವರು ಮಾತನಾಡಿದರು.

ರಾತ್ರಿ ಒಂಬತ್ತು ಗಂಟೆಗೆ ಬಹಿರಂಗ ಅಧೀವೇಶನವು ಮುಕ್ತಾಯವಾಯಿತು. ಅನಂತರ ಭೋಜನವಾಯಿತು. ಹಿಂದಿನ ದಿನ ರಾತ್ರಿಯಂತೆ ಇಂದು ರಾತ್ರಿ ಧ್ವಜ ರಕ್ಷಣೆ ಮಾಡಬೇಕಾಗಿರಲಿಲ್ಲ. ಆದರೆ ನಾಳೆ ಎಂದಿನ ಸಮಸ್ಯೆ ತಲೆಯೆತ್ತುತ್ತದೆ. ಊಟವಾದ ಮೇಲೆ ಮುಖಂಡರು ನಾಳೆಯ ಕಾರ್ಯಕ್ರಮದ ಬಗೆಗೆ ವಿವರವಾಗಿ ಚರ್ಚಿಸಿದರು. ನಾಳೆ ಧ್ವಜಾರೋಹಣ ಮಾಡುವಾಗ ಪೋಲೀಸ್ ಅಧಿಕಾರಿಗಳು ಹೇಗೆ ವರ್ತಿಸಬಹುದು ಎಂಬುದರ ಬಗೆಗೆ ಅಂದಾಜು ಮಾಡಿದರು. ಇಂದಿನ ಹಾಗೆ ಕೇವಲ ದಸ್ತಗಿರಿ ಮಾಡುತ್ತಾರೆಯೇ ? ಅಥವಾ ಇಂದು ಆಕಸ್ಮಿಕವಾಗಿ ತಡೆ ಹಿಡಿದ ಗೋಲಿಬಾರನ್ನು ಜಾರಿ ಮಾಡುತ್ತಾರೆಯೆ ? ಅಥವಾ ಏನೂ ಮಾಡುವುದೇ ಇಲ್ಲವೆ ? ಇತ್ಯಾದಿ ವಿಷಯಗಳ ಬಗೆಗೆ ವಿಚಾರ ವಿನಿಮಯ ಮಾಡಿದರು. ಆದರೆ ಪೋಲೀಸರ ವರ್ತನೆಯ ಬಗೆಗೆ ಹೀಗೇ ಎಂದು ತಿರ್ಮಾನ ಕೈಗೊಳ್ಳುವುದು ಸಾಧ್ಯವಾಗಲಿಲ್ಲ. ಇಂದಿನ ಹಾಗೆಯೇ ನಾಳೆಯೂ ನಡೆಯ ಬಹುದು. ಅಥವಾ ಭಯಂಕರವಾದ ಹತ್ಯಾಕಾಂಡ ನಡೆಯಬಹುದು. ಏನೇ ಬರಲಿ ಎಲ್ಲದಕ್ಕೂ ಸತ್ಯಾಗ್ರಹಿಗಳು ಸಿದ್ಧವಾಗಿರಬೇಕೆಂದು ಎಲ್ಲರೂ ಒಮ್ಮತಕ್ಕೆ ಬಂದರು. ಪೋಲೀಸರು ಯಾವುದೇ ವಿಷಯಕ್ಕೂ ಸಿಟ್ಟುಗೊಳ್ಳದಂತೆ, ಜನರು ಶಾಂತಿಯಿಂದಿರಲು ಮತ್ತಷ್ಟು ದಕ್ಷತೆ ತೋರಿಸಬೇಕು, ವ್ಯವಸ್ಥೆ ಮಾಡಬೇಕು ಎಂಬುದರಲ್ಲಿ ಯಾರಿಗೂ ಬಿನ್ನಾಭಿಪ್ರಾಯವಿರಲಿಲ್ಲ. ಯಾವ ಗಲಾಟೆಗೂ ಅವಕಾಶ ಕೊಡದೆ ಜನರು ಶಾಂತಿಯಿಂದ ಶಿಸ್ತಿನಿಂದ ನಡೆದುಕೊಂಡರೆ ಬಹುಶಃ ಪೋಲೀಸರು ಯಾವುದೇ ರೀತಿಯ ಪ್ರತೀಕಾರಕ್ಕೂ ಕೈ ಹಾಕುವುದಿಲ್ಲವೆಂದು ಎಲ್ಲರೂ ನಂಬಿದ್ದರು. ಆದರೆ ಧ್ವಜಾರೋಹಣ ಮಾಡುವವರ ಬಗೆಗೆ ಪೋಲೀಸರು ಹೀಗೇ ನಡೆದುಕೊಳ್ಳುತ್ತಾರೆಂದು ಊಹಿಸುವುದು ಕಷ್ಟ. ಅದು ದೈವನಿಯಾಮಕ.

ನಾಳೆಯ ಕಾರ್ಯಕ್ರಮಗಳ ಬಗೆಗೆ ಸಂಬಂಧಪಟ್ಟವರಿಗೆ ಸ್ಪಷ್ಟವಾಗಿ ಸೂಚನೆಗಳನ್ನು ಕೊಡಲಾಯಿತು. ಬೆಳಗ್ಗೆಯಿಂದ ದುಡಿದು ದಣಿದ ಕಾರ್ಯಕರ್ತರು ವಿಶ್ರಾಂತಿಗೆ ತೆರಳಿದರು. ಪ್ರೇಕ್ಷಕರಾಗಿ ಬಂದಿದ್ದ ಹತ್ತಿರದ ಹಳ್ಳಿಗಳವರು ಬೆಳಗ್ಗೆ ಬರುವುದಾಗಿ ಹಿಂದಿರುಗಿದರು. ದೂರದ ಊರಿನವರು ಹಿಂದಿನ ರಾತ್ರಿಯಂತೆಯೇ ಗುಂಪು ಗುಂಪಾಗಿ ಕಲೆತು ಇಂದಿನ ಮತ್ತು ನಾಳೆಯ ಘಟನೆಗಳ ಬಗೆಗೆ ಚರ್ಚೆ ಮಾಡುತ್ತಿದ್ದರು. ಪ್ರಮುಖರಿಗೆ, ಪ್ರತಿನಿಧಿಗಳಿಗೆ ಪ್ರತ್ಯೇಕ ಬಿಡಾರಗಳಿದ್ದರೂ ಹಳ್ಳಿಗಳಿಂದ ಬಂದಿದ್ದ ಅನೇಕರಿಗೆ ಧ್ವಜ ಮೈದಾನವೇ ವಿಶ್ರಾಂತಿ ಸ್ಥಳವಾಗಿತ್ತು. ಈಗಲೂ ಅನೇಕ ಜನ ಶಿವಪುರಕ್ಕೆ ಬರುತ್ತಿದ್ದರು. ಸಾವಿರಾರು ವಿದ್ಯುದ್ದೀಪಗಳಿಂದ ಸತ್ಯಾಗ್ರಹಕ್ಕಾಗಿ ನಿರ್ಮಿಸಿದ್ದ ಸಭಾಂಗಣಗಳು ಕಂಗೊಳಿಸುತ್ತಿದ್ದುವು. ಬೇಕಾದಷ್ಟು ಅಂಗಡಿಗಳು ಹಗಲೂ ರಾತ್ರಿ ತೆರೆದಿದ್ದುವು. ಇಡೀ

ಶಿವಪುರವು ಜಾತ್ರೆಯ ಸಂಭ್ರಮದಿಂದ ಬೆಳಗುತ್ತಿತ್ತು. ಊರಾದೂರೆಲ್ಲ ಹೊಸ ಹೊಸ ಜನರಿಂದ ತುಂಬಿತ್ತು. ಸಾಮಾನ್ಯ ಪೋಲೀಸರು ಅಲ್ಲಲ್ಲಿ ಗಸ್ತು ತಿರುಗು ತ್ತಿದ್ದರು.

ರಾತ್ರಿ ಧ್ವಜ ಮೈದಾನದಲ್ಲಿ ಲಾವಣಿಕಾರರು ವೈವಿಧ್ಯಮಯವಾದ ಲಾವಣಿ ಗಳನ್ನು ಹಾಡಿ ತಂಗಿದ್ದವರ ಮನಸ್ಸನ್ನು ತಣಿಸಿದರು. ಒಂದೆರಡು ಹರಿಕತೆಗಳೂ ನಡೆದುವು. ಹೊತ್ತು ಕಳೆಯುವುದು ಇವುಗಳ ಮುಖ್ಯ ಉದ್ದೇಶ. ಸ್ವಯಂ ಸೇವಕರು ಅಲ್ಲಲ್ಲಿ ಶಿಬಿರಾಗ್ನಿಗಳನ್ನು ಬೆಳಗಿಸಿದರು. "ನಾವು ಎಚ್ಚರವಾಗಿದ್ದೇವೆ, ಯಾರೂ ಭಯಪಡಬೇಕಾಗಿಲ್ಲ" ಎಂದು ಜನರಿಗೆ ಭರವಸೆ ಹುಟ್ಟಿಸುವುದು, ಪೋಲೀಸರಿಂದ ಧ್ವಜ ಸ್ತಂಭಕ್ಕೆ ಉಂಟಾಗಬಹುದಾದ ಅನಾಹುತವನ್ನು ತಪ್ಪಿಸು ವುದು ಇದರ ಉದ್ದೇಶ. ಸ್ವಯಂ ಸೇವಕರು ಹೆಚ್ಚೂ ಕಡಮೆ ಇಡೀ ರಾತ್ರಿ ನಿದ್ದೆ ಮಾಡಲಿಲ್ಲ.

ಮೇಕ್ರಿಯವರ ಸಂದರ್ಶನ

ಧ್ವಜ ಸತ್ಯಾಗ್ರಹದ ಸಂದರ್ಭದಲ್ಲಿ ಗೋಲಿಬಾರ್ ನಡೆಯದೆ, ಇಬ್ಬರ ದಸ್ತಗಿರಿ ಮಾತ್ರ ನಡೆಯಿತು. ಬಂಧನ ನಿಲ್ಲುವವರೆಗೆ ಮತ್ತು ಪ್ರತಿಬಂಧಕಾಜ್ಞೆ ಜಾರಿಯಲ್ಲಿರುವ ಒಂದು ತಿಂಗಳವರೆಗೆ ಧ್ವಜಸತ್ಯಾಗ್ರಹ ನಡೆಯಬೇಕಾಗಿರುವುದ ರಿಂದ ಆ ತನಕ ಪೋಲೀಸರು ಸೌಮ್ಯವಾಗಿ ವರ್ತಿಸುತ್ತಾರೆಂದು ನಂಬಿಕೊಳ್ಳು ವಂತಿಲ್ಲ. ಒಂದು ವೇಳೆ ಅವರು ದುಡುಕಿದರೆ ನಿರಾಪರಾಧಿಗಳಾದ ಸಾವಿರಾರು ಜನ ಹಳ್ಳಿಗರು ಸಾಯುವುದು ಖಂಡಿತ. ಇದನ್ನು ತಪ್ಪಿಸಬೇಕು, ಜಿಲ್ಲಾ ಮ್ಯಾಜಿ ಸ್ಟ್ರೇಟರ ಮನಸ್ಸಿನ ಮರ್ಮವನ್ನು ತಿಳಿಯಬೇಕು ಎಂದುಕೊಂಡು ಡಾ॥ ಪಾರ್ಥನಾರಾ ಯಣ ಪಂಡಿತ್ ಮತ್ತು ಶ್ರೀ ಎಚ್. ಕೆ. ವೀರಣ್ಣಗೌಡರು ಸಂದರ್ಶನಕ್ಕಾಗಿ ಶ್ರೀ ಮೇಕ್ರಿಯವರನ್ನು ಲಿಖಿತದ ಮೂಲಕ ಕೇಳಿಕೊಂಡರು. ಅವರು ಸಂದರ್ಶನಕ್ಕೆ ಬರಬಹುದೆಂದು ಕೂಡಲೇ ಹೇಳಿಕಳಿಸಿದರು. ಇಬ್ಬರು ಮುಖಂಡರೂ ಶ್ರೀ ಮೇಕ್ರಿ ಯವರ ಬಿಡಾರಕ್ಕೆ ಹೋದರು. ಅವರು "ಬನ್ನಿ ಬನ್ನಿ" ಎಂದು ಹೃತ್ಪೂರ್ವಕ ವಾಗಿ ಸ್ವಾಗತಿಸಿ "ಕಾಫಿ ಬೇಕೋ, ಟೀ ಬೇಕೋ ?" ಎಂದು ಕೇಳಿದರು. "ವಂದನೆಗಳು. ನಾವು ಸತ್ಕಾರ ಮಾಡಿಸಿಕೊಳ್ಳುವುದಕ್ಕೆ ಬಂದಿಲ್ಲ" ಎಂದು ತಮ್ಮ ಆಗಮನದ ಉದ್ದೇಶವನ್ನು ಅರಿಕೆಮಾಡಿಕೊಂಡರು. ಶ್ರೀ ಮೇಕ್ರಿಯವರು ಭಾವ ಪೂರ್ಣರಾಗಿ ಹೇಳಿದರು: "ನೋಡಿ ನಮಗೂ ದೇಶಭಕ್ತಿ ಇದೆ. ಆದರೆ ಪರಿಸ್ಥಿತಿ ನಮ್ಮನ್ನೂ ನಿಮ್ಮನ್ನೂ ಬೇರೆ ಬೇರೆ ಮಾಡಿದೆ."

ಗೌಡರು : ನಾವು ಧ್ವಜ ಸತ್ಯಾಗ್ರಹವನ್ನು ನಿಲ್ಲಿಸುವುದಿಲ್ಲ.

ಮೇಕ್ರಿ : ನಾವು ಪ್ರತಿಬಂಧಕಾಜ್ಞೆಯನ್ನು ಹಿಂದೆಗೆಯುವುದಿಲ್ಲ.......!

ಪಂಡಿತ್: ಆದರೆ, ನೀವು ಗೋಲಿಬಾರಿಗೆ ಆಜ್ಞೆ ಮಾಡಿದರೆ ನಿರಾಪರಾಧಿ ಜನರು ಸಾಯುತ್ತಾರೆ.

ಮೇಕ್ರಿ : ವಿನಾಕಾರಣ ನಾನು ಗೋಲಿಬಾರಿಗೆ ಆಜ್ಞೆ ಮಾಡಲಾರೆ.

ಪಂಡಿತ್: ಜನರು ಶಾಂತಿಯಿಂದ ನಡೆದುಕೊಳ್ಳುವಂತೆ ನಾವು ನೋಡಿಕೊಳ್ಳುತ್ತೇವೆ.

ಮೇಕ್ರಿ : ಹಾಗಿದ್ದರೆ ಯಾರಿಗೂ ತೊಂದರೆಯಿಲ್ಲ.

ಗೌಡರು : ಧ್ವಜಾರೋಹಣವನ್ನು ನೀವು ತಡೆಯಬೇಡಿ.

ಮೇಕ್ರಿ : ನಾವು ಕಾನೂನನ್ನು ಪಾಲಿಸುತ್ತೇವೆ.

ಗೌಡರು : ನಿಮ್ಮ ಕರ್ತವ್ಯವನ್ನು ನೀವು ಪಾಲಿಸಿ. ನಮ್ಮ ಕರ್ತವ್ಯವನ್ನು ನಾವು ಪಾಲಿಸುತ್ತೇವೆ.

ಪಂಡಿತ್: ಏನೇ ಆಗಲಿ ಯಾವುದೇ ಅಹಿತ ಘಟನೆಗೆ ಅವಕಾಶ ಕೊಡಬಾರದೆಂದು ಕೇಳಿಕೊಳ್ಳುತ್ತೇವೆ.

ಮೇಕ್ರಿ : ಅದೆಲ್ಲ ನಿಮ್ಮ ಕೈಯ್ಯಲ್ಲೇ ಇದೆ. ಅಹಿಂಸಾತ್ಮಕವಾದ ಶಾಂತಿಯನ್ನು ನಾವು ಇಷ್ಟಪಡುತ್ತೇವೆ.

ಶ್ರೀ ಮೇಕ್ರಿಯವರಿಗೆ ವಂದನೆಗಳನ್ನು ಅರ್ಪಿಸಿ ಮುಖಂಡರು ಹೊರ ಬಂದರು. ಶಾಂತಿಯಿಂದ ನಡೆದುಕೊಂಡರೆ ಪ್ರಾಣಾಪಾಯದ ಭಯವಿಲ್ಲವೆಂಬ ಕಿಂಚಿತ್ ತೃಪ್ತಿ ಅವರಿಗೆ ಭಾಸವಾಯಿತು. ಆದರೆ ಪರಿಸ್ಥಿತಿ ಕೈಮೀರುವುದಿಲ್ಲ ವೆಂದು ಹೇಗೆ ಹೇಳುವುದು ? ಹೆಚ್ಚು ದಕ್ಷತೆಯಿಂದ, ಸದ್ಭಾವನೆಯಿಂದ, ಒಳ್ಳೆಯ ಉದ್ದೇಶಕ್ಕಾಗಿ ಸಾಧನೆ ಮಾಡುವುದು ನಮ್ಮ ಕರ್ತವ್ಯ, ಪರಿಣಾಮ ದೇವರಿಗೆ ಸೇರಿದ್ದು ಎಂದು ನಾಯಕರು ಭಾವಿಸಿದರು.

ಏಪ್ರಿಲ್ 11, 1938 ರಂದು ನಡೆದ ಧ್ವಜ ಸತ್ಯಾಗ್ರಹ, ಆ ಸಂದರ್ಭ ದಲ್ಲಾದ ನಾಯಕರ ದಸ್ತಗಿರಿಗಳನ್ನು ಕುರಿತು ಮಾರನೆಯ ದಿನ ಪತ್ರಿಕೆಗಳಲ್ಲಿ ವಿಶೇಷ ಸುದ್ದಿಗಳು ಪ್ರಕಟವಾದುವು. ಧ್ವಜ ಸತ್ಯಾಗ್ರಹಕ್ಕೆ ಬೆಂಬಲ ಕೊಡುವ ಬರಹಗಳೇ ಹೆಚ್ಚಾಗಿದ್ದುವು. ಸರಕಾರದ ಧೋರಣೆಯ ಟೀಕೆಯೂ ಎಂದಿನಂತೆ ಮುಂದುವರಿದಿತ್ತು. ಮೈಸೂರು ಸಂಸ್ಥಾನದ ಶಿವಪುರ ಗ್ರಾಮದ ಧ್ವಜಸತ್ಯಾಗ್ರಹ

ಭಾರತದ ಸುದ್ದಿಯಾಯಿತು. ಅನೇಕ ಪತ್ರಿಕೆಗಳು ಅಗ್ರಲೇಖನಗಳನ್ನು, ಸಂಪಾದಕೀಯಂಗಳನ್ನು ಪ್ರಕಟಿಸಿದುವು. ಒಂದು ಸಂಪಾದಕೀಯು ಹೀಗಿದೆ :

ಮೈಸೂರಿನಲ್ಲಿ ಮತ್ತೆ ಬಿರುಗಾಳಿ*

"ಈಗ ಎರಡು ಮೂರು ತಿಂಗಳಿಂದ ಶಾಂತವಾಗಿದ್ದ ಮೈಸೂರಿನ ವಾತಾವರಣವು ಮತ್ತೆ ಪ್ರಕ್ಷುಬ್ಧವಾಗಿ, ಪುನಃ ಬಿರುಗಾಳಿ ಬೀಸುವ ಲಕ್ಷಣಗಳು ಕಂಡು ಬರುತ್ತಿವೆ. ಶಿವಪುರದಲ್ಲಿ ಕೂಡಿರುವ ಕಾಂಗ್ರೆಸ್ ರಾಷ್ಟ್ರಕೂಟಕ್ಕಾಗಿ ಹೋಗಿದ್ದ ಶ್ರೀ ಟಿ. ಸಿದ್ದಲಿಂಗಯ್ಯ ಮತ್ತು ಶ್ರೀ ಎಂ. ಎನ್. ಜೋಯಿಸರನ್ನು ಸರಕಾರದವರು ಸೆರೆ ಹಿಡಿದು, ಮ್ಯಾಜಿಸ್ಟ್ರೇಟರ ಆಜ್ಞೆಯ ವಿರುದ್ಧ ಕಾಂಗ್ರೆಸ್ ಧ್ವಜಾರೋಹಣ ಮಾಡಿದ ಬಗ್ಗೆ ಶಿಕ್ಷೆ ವಿಧಿಸಿದ ಸುದ್ದಿಯೂ ಬಂದಿದೆ.

ಹರಿಪುರ_ಶಿವಪುರ

ಸಂಸ್ಥಾನಗಳ ಆಂತರಿಕ ರಾಜಕಾರಣದಲ್ಲಿ ಕೈಹಾಕಬಾರದೆಂದು ಅಖಿಲ ಭಾರತ ಕಾಂಗ್ರೆಸ್ ಹರಿಪುರದಲ್ಲಿ ಗೊತ್ತುಮಾಡಿದ ಮೇಲೆ, ಮೈಸೂರು ಕಾಂಗ್ರೆಸಿನ ಕಾರ್ಯಕರ್ತರು ಮೈಸೂರು ಕಾಂಗ್ರೆಸ್ ಬೋರ್ಡ್ ಎಂಬ ಸ್ವತಂತ್ರ ಸಂಸ್ಥೆಯನ್ನು ಸ್ಥಾಪಿಸಿಕೊಂಡರು. ಮತ್ತು ತಮ್ಮ ಚಳವಳಿಯ ಭವಿಷ್ಯವನ್ನು ಗೊತ್ತುಪಡಿಸುವುದಕ್ಕಾಗಿ ಶಿವಪುರ ಎಂಬ ಹಳ್ಳಿಯಲ್ಲಿ ಒಂದು ರಾಷ್ಟ್ರಕೂಟವನ್ನು ಕೂಡಿಸಬೇಕೆಂದು ಗೊತ್ತು ಮಾಡಿದರು. ಇದೇ ಸಮಯದಲ್ಲಿ ಮೈಸೂರು ಸರಕಾರದವರು ಸುಧಾರಣ ಸಮಿತಿ ಮತ್ತು ಸಂಯುಕ್ತ ಘಟನೆಯ ಸಮಿತಿ ಎಂಬೆರಡು ಕಮಿಟಿಗಳನ್ನು ನಿಯಮಿಸಿದರು. ಆದರೆ ಈ ಕಮಿಟಿಗಳ ವಿಚಾರಣಾ ಕ್ಷೇತ್ರವೂ ಸದಸ್ಯರ ಆಯ್ಕೆಯೂ ತೀರ ಅಸಮಧಾನಕರವಿರುವದು. ಮೈಸೂರಿನ ಪ್ರಜೆಗಳ ಮೂಲ ಬೇಡಿಕೆಯಾದ ಜವಾಬದಾರಿ ಸರಕಾರವನ್ನು ಸ್ಥಾಪಿಸುವಂತೆ ಸಲಹೆ ಕೊಡುವ ವಿಚಾರವು ಈ ಸಮಿತಿಯ ವಿಚಾರಣಾ ಕ್ಷೇತ್ರದಲ್ಲಿಲ್ಲ. ಈ ಸಮಿತಿಯ ಬಹುಜನ ಸದಸ್ಯರು ಪ್ರಜೆಗಳ ನಿಜವಾದ ಪ್ರತಿನಿಧಿಗಳಲ್ಲ. ಸರಕಾರದ ಅಜ್ಞಾ ರಾಧಾರಕರು. ಆದ್ದರಿಂದ ಈ ಬಗ್ಗೆ ಕಾಂಗ್ರೆಸ್ ಬೋರ್ಡಿನವರು ಯಾವ ಧೋರಣವನ್ನು ತಳೆಯಬೇಕೆಂಬದನ್ನು ತಿಳಿದುಕೊಳ್ಳುವುದಕ್ಕಾಗಿ ಬೋರ್ಡಿನ ಅಧ್ಯಕ್ಷರು ಡೆಲಾಂಗಕ್ಕೆ ಹೋಗಿ ಮಹಾತ್ಮ ಗಾಂಧಿಯವರನ್ನು ಕಂಡು ಬಂದರು. ಕಾಂಗ್ರೆಸ್ಸಿನ ಮೂಲಕ ವಲ್ಲದೆ, ಕಾಂಗ್ರೆಸದ ಅನುಮತಿಯಿಲ್ಲದೆ ಸಮಿತಿಯಲ್ಲಿರುವ ನಾಲ್ಕು ಜನ ಕಾಂಗ್ರೆಸ್ ಸಭಾಸದರು, ಜೀವಪ್ರಾಯವಾದ ಕಾಂಗ್ರೆಸ್ ಸ್ಥಾನಮಾನಗಳಿಗೆ ಕುಂದು ಬರತಕ್ಕ ಕೆಲಸವನ್ನು ಮಾಡಲಾರೆವು ಎಂದು ತಿಳಿಸಿಬಿಡಿರಿ ಎಂದು ಗಾಂಧಿಯವರು ಹೇಳಿ

---

*ಸಂಯುಕ್ತ ಕರ್ನಾಟಕ, 12-4-1938,

ಜವಾಬದಾರಿ ಸರಕಾರವನ್ನು ಕೊಡುವಂತೆ ಕಮಿಟಿಯು ಸಲಹೆ ಕೊಡಬಹುದೆಂದು ದಿವಾಣರಿಂದ ಲಿಖಿತ ಆಶ್ವಾಸನ ತೆಗೆದುಕೊಳ್ಳಿರೆಂದು ಸೂಚಿಸಿದರು.

ಮುಖ್ಯ ಮತಭೇದ

ಆದರೆ ದಿವಾಣರು ಇದಕ್ಕೆ ಒಪ್ಪಲಿಲ್ಲ. ಲಿಖಿತ ಆಶ್ವಾಸನ ಕೊಡಲು ಅವರು ನಿರಾಕರಿಸಿದರು. ಆದ್ದರಿಂದ ಇಂತಹ ಕಮಿಟಿಗಳಲ್ಲಿ ಭಾಗವಹಿಸುವದಕ್ಕಿಂತ ದೂರ ಇರುವದೇ ಲೇಸೆಂದು ಕಾಂಗ್ರೆಸದವರು ಭಾವಿಸಿದರು. ಸರಕಾರ ಮತ್ತು ಕಾಂಗ್ರೆಸ್ಸಿನ ನಡುವೆ ಇರುವ ಮುಖ್ಯ ಮತಭೇದವು ಜವಾಬದಾರಿ ಸರಕಾರದ ಬಗ್ಗೆ ಇರುವದು. ಶ್ರೀಮನ್ಮಹಾರಾಜರ ಕೃಪಾಶ್ರಯದಲ್ಲಿ ಸಂಸ್ಥಾನದ ಜವಾಬುದಾರಿ ಸರಕಾರವನ್ನು ಸ್ಥಾಪಿಸಬೇಕೆಂಬುದೇ ಮೈಸೂರು ಕಾಂಗ್ರೆಸ್ಸಿನವರ ಅರ್ಥಾತ್ ಪ್ರಜೆಗಳ ಬೇಡಿಕೆ. ಇದಕ್ಕೆ ಜನರು ಸಿದ್ಧರಿರುವರು. 'ಮೈಸೂರು ಜವಾಬ್ದಾರಿ ಸರಕಾರದ ಸ್ಥಾಪನೆಗೆ ಸಿದ್ಧವಿರುವದು. ರಾಷ್ಟ್ರೀಯತೆಗೆ ವಿರುದ್ಧವಾಗಿದ್ದ ಕೋಮುವಾರು ಭಾವನೆಯು ನಿರ್ಮೂಲವಾಗಿದೆ. ಸರಕಾರದೊಡನೆ ಸೇರಿ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗಾಗಿ ಕೆಲಸ ಮಾಡಲು ಜನರು ಕಾತರರಿರುವರು. ಅವರಿಗೆ ಬೇಕಾಗಿರುವದು ರಾಜಕೀಯ ಸ್ವಾತಂತ್ರ್ಯ' ಎಂದು ಡಾ॥ ಪಟ್ಟಾಭಿ ಸೀತಾರಾಮಯ್ಯ ಮತ್ತು ಶ್ರೀ ಬಲವಂತರಾವ್ ಮೆಹತಾ ಅವರು ತಮ್ಮ ವರದಿಯಲ್ಲಿ ಅಂದಿರುವರು. 'ಸಂಸ್ಥಾನದಲ್ಲಿ ಇಂದಿರುವ ಒಂದೇ ಒಂದು ರಾಜಕೀಯ ಪಕ್ಷವೆಂದರೆ ಕಾಂಗ್ರೆಸ್ಸು. ಕಾಂಗ್ರೆಸ್ಸು ದೇಶದಲ್ಲಿ ಸಂಪೂರ್ಣವಾಗಿ ಬೇರುಬಿಟ್ಟಿದೆ' ಎಂದೂ ಅವರು ತಮ್ಮ ವರದಿಯಲ್ಲಿ ಬರೆದಿರುವರು. ಈ ಎಲ್ಲ ಸಂಗತಿಗಳನ್ನು ವಿಚಾರಿಸಿದರೆ ಮತ್ತು ಕೆಲವು ದಿನಗಳ ಹಿಂದೆ ನಡೆದ ಉಪ ಚುನಾವಣೆಗಳಲ್ಲಿ ಕಾಂಗ್ರೆಸ್ ಹುರಿಯಾಳುಗಳೆಲ್ಲರೂ ಪ್ರಚಂಡ ಬಹುಮತದಿಂದ ಆರಿಸಿ ಬಂದಿರುವುದನ್ನು ನೋಡಿದರೆ ಮೈಸೂರ ಸಂಸ್ಥಾನದ ಕಾಂಗ್ರೆಸ್ಸಿಗೆ ಪ್ರಜೆಗಳ ಸಂಪೂರ್ಣ ಬೆಂಬಲವಿದೆಯೆಂಬುದು ತಾನಾಗಿಯೇ ಗೊತ್ತಾಗುವದು. ಇಂಥ ಸಂಸ್ಥೆಯುಗೂಡ ಬಡಿದಾಡುತ್ತಾ, ಕಾಲಹರಣ ಮಾಡುತ್ತಾ ತಮ್ಮ ಪ್ರಜೆಗಳ ವಿರುದ್ಧ ವರ್ತಿಸುವದು ಮೈಸೂರು ಸರಕಾರದಂತಹ ದೊಡ್ಡ ಸರಕಾರಕ್ಕೆ ಭೂಷಣವಲ್ಲ.

ಸುಸಂಧಿಯನ್ನು ಕಳೆದುಕೊಂಡರು

ಜವಾಬ್ದಾರಿ ಸರಕಾರವನ್ನು ದಯಪಾಲಿಸುವ ತತ್ವಕ್ಕೆ ಎಲ್ಲ ಕಡೆಯಲ್ಲಿಯೂ ಮನ್ನಣೆಯಿದೆ. ಸಂಸ್ಥಾನಧೀಶ್ವರರು ಯಾರ ಅಧೀನದಲ್ಲಿರುವರೋ ಆ ಸಾರ್ವಭೌಮ ಸರಕಾರದವರೇ ಇದಕ್ಕೆ ಬೆಂಬಲವಿತ್ತಿದ್ದಾರೆ. ಅಂದಮೇಲೆ ಅಂತಹ ಸರಕಾರವನ್ನು ಕಾಲಕ್ರಮದಲ್ಲಿ ಕೊಡುವದಾಗಿ ಆಶ್ವಾಸನ ಕೊಡಲು ಯಾವ ಅಡ್ಡಿಯೂ ಇದ್ದಿಲ್ಲ. ಕಲಹದ ಸಲುವಾಗಿ ಕಲಹ ಮಾಡಲು ಯಾರಿಗೂ ಇಚ್ಛೆ

ಯಿಲ್ಲ. ಆದ್ದರಿಂದ ಮೈಸೂರು ಕಾಂಗ್ರೆಸ್‌ದವರು ಸರಕಾರದೊಡನೆ ಸಂಧಾನ ಮಾಡಿಕೊಳ್ಳಲು ಸಿದ್ಧರಿದ್ದರು. ಆದರೆ ದಿವಾಣರು ಈ ಸುಸಂಧಿಯ ಸದುಪಯೋಗ ಮಾಡಿಕೊಳ್ಳದೆ ಪುನಃ ದಬ್ಬಾಳಿಕೆಯ ಅಸ್ತ್ರವನ್ನು ಆರಿಸಿಕೊಂಡದ್ದು ಸರಿಯಲ್ಲವೆಂದು ನಮ್ಮ ಅಭಿಪ್ರಾಯ. ಪ್ರಾಜ್ಞರಾದ ಮಹಾರಾಜರೂ ದಕ್ಷರಾದ ದಿವಾಣರೂ ಜನಸಮುದಾಯದ ಶಕ್ತಿಯನ್ನರಿದು ಪ್ರಜೆಗಳ ಕೋರಿಕೆಗಳನ್ನು ಈಡೇರಿಸುವರೆಂದು ನಂಬಲಾಗಿತ್ತು. ಆದರೆ ಅದು ಈಗ ನಿರಾಶೆಯಾದುದ್ದಕ್ಕಾಗಿ ಎಲ್ಲರೂ ವಿಷಾದ ಪಡಬೇಕಾಗಿದೆ."

ಏಪ್ರಿಲ್ 12, 1938

12-4-1938 ರ ಬೆಳಗ್ಗೆ ಧ್ವಜದ ಸಿದ್ಧತೆಗಳಾದವು. ಹಿಂದಿನ ದಿನದ ಹಾಗೆಯೇ ದಸ್ತಗಿರಿ ಅಥವಾ ಗೋಲಿಬಾರ್ ನಡೆಯುವುದೆಂದು ಭಾವಿಸಿದ ಅಸಂಖ್ಯಾತ ಜನರು ಸೂರ್ಯೋದಯವಾಗುತ್ತಿದ್ದಂತೆಯೇ ಧ್ವಜ ಮೈದಾನಕ್ಕೆ ಬಂದು ಸೇರಿದರು. ಊಹಿಸಿದ್ದಂತೆಯೇ ಶಸ್ತ್ರ ಸಜ್ಜಿತರಾದ ಪೋಲೀಸರು ಬಂದು ನಿಶ್ಚಿತ ಸ್ಥಳದಲ್ಲಿ ನಿಂತುಕೊಂಡರು. ದಸ್ತಗಿರಿಯಾಗುವಾಗ ಚಪ್ಪಾಳೆ ತಟ್ಟುವುದು, ಜಯಕಾರ ಮಾಡುವುದು, ನೂಕುನುಗ್ಗಲಿಗೆ ಗಲಾಟೆಗೆ ಅವಕಾಶ ಕೊಡುವುದು, ಯಾವುದನ್ನೂ ಮಾಡಬಾರದೆಂದು ಧ್ವನಿವರ್ಧಕಗಳ ಮೂಲಕ ಸತತವಾಗಿ ಬಿನ್ನವಿಸಿಕೊಳ್ಳಲಾಗುತ್ತಿತ್ತು. ಮುಖಂಡರ ಮಾತಿಗೆ ಬೆಲೆಕೊಟ್ಟು ಹಿಂದಿನ ದಿನಕ್ಕಿಂತಲೂ ಹೆಚ್ಚಿನ ಶಾಂತಿಯಿಂದ ತಾಳ್ಮೆಯಿಂದ ಜನರು ನಡೆದುಕೊಂಡರು. ಇಂದು ಹೊಸದಾಗಿ ಬಂದ ಪ್ರೇಕ್ಷಕರೂ ಸಾಕಷ್ಟಿದ್ದರು. ಸ್ವಯಂಸೇವಕರು ಎಂದಿನಂತೆ ಹುರುಪಿನಿಂದ ಕೆಲಸ ಮಾಡುತ್ತಿದ್ದರು.

ಧ್ವಜದ ಸಿದ್ಧತೆಯಾದ ಮೇಲೆ ಸ್ವಯಂಸೇವಿಕೆಯರು "ಝಂಡಾ ಊಂಚಾ ರಹೇ ಹಮಾರಾ" ಗೀತೆಯನ್ನು ಹಾಡಲು ಪ್ರಾರಂಭಿಸಿದರು. ಚಿಕ್ಕ ಪೋಲೀಸ್ ಪಡೆಯೊಂದಿಗೆ ಪೋಲೀಸ್ ಸೂಪರಿನ್‌ಟೆನ್‌ಡೆಂಟರು ಮುಂದೆ ಬಂದು "ಧ್ವಜ ಸ್ತಂಭದಲ್ಲಿರುವ ರಾಷ್ಟ್ರಧ್ವಜವನ್ನು ಕಿತ್ತು ಎಸೆಯುತ್ತೇವೆ" ಎಂದು ವೇದಿಕೆಯ ಕಡೆ ಧಾವಿಸಿದಾಗ ಶ್ರೀಮತಿ ಬಳ್ಳಾರಿ ಸಿದ್ಧಮ್ಮನವರು ಮತ್ತು ಕೆಲವು ಸ್ವಯಂಸೇವಿಕೆಯರು ಅವರನ್ನು ಸುತ್ತುಗಟ್ಟಿದರು. ಪೋಲೀಸರ ಈ ವರ್ತನೆ ಜನರಲ್ಲಿ ಗೊಂದಲವೆಬ್ಬಿಸಲು ಕಾರಣವಾಗಬಹುದಿತ್ತು. ಆದರೆ ಮುಖಂಡರ ಮಾತಿಗೆ ಗೌರವಕೊಟ್ಟ ಜನರು ಮಿತಿಮೀರಿದ ತಾಳ್ಮೆಯಿಂದ ಪರಿಸ್ಥಿತಿಯನ್ನು ಎದುರಿಸಿದರು. ಅಷ್ಟರಲ್ಲಿ ಅಧ್ಯಕ್ಷರು ಆಗಮಿಸಿದರು. ಪೋಲೀಸರನ್ನು ಸುತ್ತುವರಿದಿದ್ದ ಸ್ವಯಂಸೇವಿಕೆಯರು ಹಾಗೆಯೇ ನಿಂತಿದ್ದರು.

ಬೆಳಗ್ಗೆ 8 ಗಂಟೆಗೆ ಸರಿಯಾಗಿ ಅಧ್ಯಕ್ಷರಾದ ಶ್ರೀ ಹೆಚ್. ಸಿ. ದಾಸಪ್ಪನವರು ಮುಂಖಡರು ಮತ್ತು ಜಿ.ಒ.ಸಿ. ಗಳೊಡನೆ ಧ್ವಜಸ್ತಂಭದ ಬಳಿಗೆ ಬಂದರು. ಜಿ.ಒ.ಸಿ. ಶ್ರೀ ಪಾರ್ಥನಾರಾಯಣ ಪಂಡಿತರು ಅವರಿಗೆ ವಂದನೆ ಅರ್ಪಿಸಿ ಧ್ವಜಾರೋಹಣ ಮಾಡಲು ಪ್ರಾರ್ಥಿಸಿಕೊಂಡರು. ಅಧ್ಯಕ್ಷರು ಧ್ವಜ ವೇಧಿಕೆಯನ್ನು ಹತ್ತಿದರು. ಪೋಲೀಸರು ಬಂದೂಕಗಳನ್ನು ಸಿದ್ಧಪಡಿಸಿ ಧ್ವಜವೇದಿಕೆಯ ಕಡೆಗೆ ತಿರುಗಿಸಿ ಮೇಲಧಿಕಾರಿಗಳ ಅಪ್ಪಣೆಗೆ ಕಾದು ನಿಂತರು. ನೆನ್ನೆಯ ಉದ್ವೇಗ, ಕಾತರ, ಭಯಗಳು ಮತ್ತೆ ಕಾಣಿಸಿಕೊಂಡುವು. ಎಲ್ಲರಲ್ಲೂ ಏನಾಗುವುದೋ ಎಂಬ ಭಯ ಹುಟ್ಟಿತು.

ವೇದಿಕೆಯೇರಿದ ಶ್ರೀ ದಾಸಪ್ಪನವರು ತಾವು ಧ್ವಜಾರೋಹಣ ಮಾಡುವುದಾಗಿ ಘೋಷಿಸಿದರು. ಮುಂದೆ ಬಂದ ಜಿಲ್ಲಾ ಪೋಲೀಸ್ ಸೂಪರಿನ್‌ಟೆನ್‌ಡೆಂಟರಾದ ಶ್ರೀ ರುಕ್ಕೋಜಿರಾವ್ ಸಿಂಧ್ಯಾ ಅವರು "ಹಾಗೆ ಮಾಡಕೂಡದು" ಎಂದರು.

"ನಿಮ್ಮ ಆಜ್ಞೆಯನ್ನು ನಾನು ಪಾಲಿಸಲಾರೆ"

"ಹಾಗಾದರೆ ನಿಮ್ಮನ್ನು ದಸ್ತಗಿರಿ ಮಾಡಿದ್ದೇನೆ"

"ಆಗಬಹುದು"

ಹಾಗೆಂದ ಶ್ರೀ ದಾಸಪ್ಪನವರು ತಮ್ಮ ಸ್ಥಾನಕ್ಕೆ ಶ್ರೀ ಎ. ವೆಂಕಟಪ್ಪನವರನ್ನು ನೇಮಿಸಿ ಪೋಲೀಸರ ವಶವಾದರು.

ಶ್ರೀ ವೆಂಕಟಪ್ಪನವರು ವೇದಿಕೆಯ ಮೇಲೆ ಬಂದು ಧ್ವಜಾರೋಹಣ ಮಾಡುವುದಾಗಿ ಘೋಷಿಸಿದಾಗ ಮೊದಲಿನಂತೆಯೇ ಪೋಲೀಸು ಅಧಿಕಾರಿಗಳು ತಡೆದರು. "ಆಜ್ಞೆಯನ್ನು ಉಲ್ಲಂಘಿಸಿದ್ದೇನೆ" ಎಂದು ಶ್ರೀ ವೆಂಕಟಪ್ಪನವರು ಧ್ವಜಾರೋಹಣ ಮಾಡಲು ಪ್ರಯತ್ನಿಸಿದಾಗ ಪೋಲೀಸರು ದಸ್ತಗಿರಿ ಮಾಡಿರುವುದಾಗಿ ತಿಳಿಸಿದರು. "ಆಗಲಿ" ಎಂದು ಶ್ರೀ ವೆಂಕಟಪ್ಪನವರು ತಮ್ಮ ಸ್ಥಾನಕ್ಕೆ ಶ್ರೀ ಕೆ. ಸಿ. ರೆಡ್ಡಿಯವರನ್ನು ನೇಮಿಸಿ ತಾವು ಪೋಲೀಸರ ವಶವಾದರು.

ದಸ್ತಗಿರಿಗಳಿಗೆ ಕೊನೆಯಿಲ್ಲವೇನೋ ಎಂಬ ಭಾವನೆ ಮೂಡುತ್ತಿತ್ತು. ಕಾರ್ಯಕರ್ತರ ಅಂದಾಜುಗಳು ತಲೆಕೆಳಗಾಗುವಂತೆ ಪೋಲೀಸರು ನಡೆದುಕೊಳ್ಳುತ್ತಿದ್ದರು. ಆದರೂ ಗೋಲಿಬಾರಿನ ಭಯ ತಪ್ಪಿರಲಿಲ್ಲ. ಶ್ರೀ ಕೆ. ಸಿ. ರೆಡ್ಡಿಯವರು ವೇದಿಕೆಯ ಮೇಲೆ ಬಂದು ಧ್ವಜಾರೋಹಣ ಮಾಡುವುದಾಗಿ ಘೋಷಿಸಿ ಧ್ವಜಾರೋಹಣ ಮಾಡಿದರು. ಬಣ್ಣಬಣ್ಣದ ಹೂವುಗಳನ್ನು ಚೆಲ್ಲಿ ತ್ರಿವರ್ಣ ರಾಷ್ಟ್ರಧ್ವಜ ಹಾರಾಡಿತು. ಜನಸ್ತೋಮ ಹರ್ಷದಿಂದ ಕರತಾಡನ ಮಾಡಿತು. ಜಯಘೋಷಗಳು ಮೊರೆದುವು. ಶ್ರೀಮತಿ ಟಿ. ಸುನಂದಮ್ಮನವರು "ವಂದೇ ಮಾತರಂ" ಗೀತೆಯನ್ನು ಹಾಡಿದರು.

ಆಶ್ಚರ್ಯದ ಸಂಗತಿಯೆಂದರೆ ಧ್ವಜಾರೋಹಣ ಮಾಡುವ ಮೊದಲು ಪೋಲೀಸರು ಶ್ರೀ ಕೆ. ಸಿ. ರೆಡ್ಡಿಯವರನ್ನು ತಡೆಯಲಿಲ್ಲ. ಅಂದು ಪೋಲೀಸರ ನಡತೆ ಹೊಸ ರೀತಿಯದಾಗಿತ್ತು. ಮುಂದೇನಾಗುವುದೋ ಎಂದು ಜನರು ಕುತೂಹಲಪಡುತ್ತಿದ್ದರು. ಶ್ರೀ ಕೆ. ಸಿ. ರೆಡ್ಡಿಯವರಿಂದ ಧ್ವಜಾರೋಹಣವಾದ ಮೇಲೆ ಪೋಲೀಸರನ್ನು ಸುತ್ತುಗಟ್ಟಿದ್ದ ಸ್ತ್ರೀಯರು ಹಿಂದೆ ಸರಿದರು. ಆ ಕೂಡಲೇ ಪೋಲೀಸ್ ಸೂಪರಿನ್‌ಟೆನ್‌ಡೆಂಟರು ವೇದಿಕೆಯ ಮೇಲಕ್ಕೆ ಹತ್ತಿ ಧ್ವಜವನ್ನು ಕೆಳಗಿಳಿಸಿದರು. ಅಲ್ಲೆ ನಿಂತಿದ್ದ ಶ್ರೀ ವೆಂಕಟಪ್ಪನವರು ಧ್ವಜವನ್ನು ಮತ್ತೆ ಮೇಲಕ್ಕೆ ಏರಿಸಿದರು. ಪೋಲೀಸರ ಈ ವರ್ತನೆ ಕೂಡ ಜನರಲ್ಲಿ ಬಹಳ ಅಸಮಾಧಾನ ಉಂಟುಮಾಡಿತು. ಭಯಂಕರವಾದ ಗಲಾಟೆ ಪ್ರಾರಂಭವಾಗಬಹುದೆಂಬ ಭೀತಿ ಹುಟ್ಟಿತು. ನಾಯಕರ ಮಾತಿಗೆ ಗೌರವ ತೋರಿಸಿ ಕೋಪವನ್ನು ನುಂಗಿಕೊಂಡು ಜನರು ಶಾಂತಿಯಿಂದ ಇದ್ದರು. ಪೋಲೀಸರು ದಸ್ತಗಿರಿಯನ್ನು ಮುಂದುವರಿಸಿದರು. "ಆಜ್ಞೋಲಂಘನ ಮಾಡಿ ಧ್ವಜಾರೋಹಣ ಮಾಡಿದ್ದಕ್ಕಾಗಿ ಶ್ರೀ ರೆಡ್ಡಿಯವರನ್ನು ದಸ್ತಗಿರಿ ಮಾಡಿದ್ದೇವೆ" ಎಂದು ಪೋಲೀಸ್ ಅಧಿಕಾರಿಗಳು ಹೇಳಿದಾಗ "ಆಗಬಹುದು" ಎಂದು ಶ್ರೀ ರೆಡ್ಡಿಯವರು ತಮ್ಮ ಸ್ಥಾನಕ್ಕೆ ಶ್ರೀ ಕೆ. ಟಿ. ಭಾಷ್ಯಂ ಅಯ್ಯಂಗಾರ್ಯರನ್ನು ನೇಮಿಸಿ ತಾವು ಪೋಲೀಸರ ವಶವಾದರು. ಧ್ವಜಾರೋಹಣವಾದ ಎರಡನೇ ದಿನ ಮೂವರು ಮುಖಂಡರು ದಸ್ತಗಿರಿಯಾದರೂ ಜನರು ಯಾವ ಗಲಾಟೆಗೂ ಅವಕಾಶ ಕೊಡದೆ ಶಾಂತಿಯಿಂದ ಇದ್ದರು. ಜನರಿಗೆ ಭಯಹುಟ್ಟಿಸಿದ್ದ ಗೋಲಿಬಾರ್ ಆಗಲಿಲ್ಲ. ಧ್ವಜಾರೋಹಣ ನಡೆದುದರಿಂದ ಇನ್ನು ಮುಂದೆ ದಸ್ತಗಿರಿಯಾಗುವ ಸಂಭವವಿಲ್ಲವೆಂದು ಗೊತ್ತಾಯಿತು. ಆದರೆ ಧ್ವಜ ರಕ್ಷಣೆಯ ಕೆಲಸ ಎಂದಿನಂತೆ ನಡೆಯಬೇಕು. ಮತ್ತಷ್ಟು ಎಚ್ಚರಿಕೆಯಿಂದ ಆ ಕೆಲಸಕ್ಕೆ ಸಿದ್ಧತೆಯಾಯಿತು.

ದಸ್ತಗಿರಿಯಾದ ಮೂವರು ಮುಖಂಡರನ್ನೂ ಪೋಲೀಸ್ ವ್ಯಾನಿನ ಬಳಿಗೆ ಕರೆದು ತಂದರು. ಮುಖಂಡರು ಜನರಿಗೆ ನಮಸ್ಕಾರ ಮಾಡಿ ಹೋಗಿ ಬರುವುದಾಗಿ ತಿಳಿಸಿದರು. ಮಹಾತ್ಮಾ ಗಾಂಧೀಜಿಯವರ ಸಂದೇಶದಂತೆ ಎಲ್ಲರೂ ಶಾಂತಿಯಿಂದಿದ್ದು ಧ್ವಜ ಸತ್ಯಾಗ್ರಹವನ್ನು ಮುಂದುವರಿಸಬೇಕೆಂದು ಕೇಳಿಕೊಂಡರು. ಮುಖಂಡರು ಪೋಲೀಸ್ ವ್ಯಾನಿಗೆ ಹತ್ತುತ್ತಿದ್ದಾಗ ಶ್ರೀಮತಿ ಯಶೋಧರಮ್ಮ ದಾಸಪ್ಪ ಮೊದಲಾದ ಸ್ತ್ರೀಯರ ಕಣ್ಣು ಬಟ್ಟಾಡಿದುವು. ಅನೇಕ ಪುರುಷರ ಕಣ್ಣಲ್ಲೂ ನೀರು ಕಾಣಿಸಿಕೊಂಡಿತು. ಅವರಿಗೆ ಏನು ಶಿಕ್ಷೆಯಾಗುವುದೋ ಎಂದು ಎಲ್ಲರಿಗೂ ದುಃಖವಾಯಿತು. ದಸ್ತಗಿರಿಯಾದವರನ್ನು ಮಂಡ್ಯಕ್ಕೆ ಸಾಗಿಸುವ ಮೊದಲು ಅವರನ್ನು ಮದ್ದೂರು ಪೋಲೀಸ್ ಸ್ಟೇಷನ್ನಿಗೆ ಕರೆದು ತಂದರು. ಹೊರಡುವ ಮೊದಲು ಶ್ರೀ ಕೆ. ಸಿ. ರೆಡ್ಡಿಯವರು ಮದ್ದೂರು ತಾಲ್ಲೂಕು

ಮೈಸೂರು ಕಾಂಗ್ರೆಸ್ ಕಾರ್ಯದರ್ಶಿ ಶ್ರೀ ಎಂ. ಟಿ. ಶ್ರೀನಿವಾಸ ಅಯ್ಯಂಗಾರ್ಯ ರನ್ನು ಮದ್ದೂರಿಗೆ ಬರಲು ತಿಳಿಸಿದರು. ಅದರಂತೆ, ಪೋಲೀಸ್ ಇನ್ಸ್‌ಸ್ಪೆಕ್ಟರರ ಅಪ್ಪಣೆ ಪಡೆದು ಶ್ರೀ ಶ್ರೀನಿವಾಸ ಅಯ್ಯಂಗಾರ್ಯರು ಸೈಕಲಿನಿಂದ ಪೋಲೀಸು ವ್ಯಾನನ್ನು ಹಿಂಬಾಲಿಸಿದರು. ಮದ್ದೂರು ಪೋಲೀಸ್ ಸ್ಟೇಷನ್‌ನಲ್ಲಿ ಶ್ರೀ ವಿ. ವೆಂಕಟಪ್ಪನವರು ತಮ್ಮ ಕೈ ಗಡಿಯಾರ, ಚಿನ್ನದ ಉಂಗುರ ಮತ್ತು ಪರ್ಸನ್ನು ತಮ್ಮ ತಂದೆ ತಿಟ್ಟಮಾರಿನಹಳ್ಳಿ ವೆಂಕಟಪ್ಪನವರಿಗೆ ತಲುಪಿಸಬೇಕೆಂದೂ ಶ್ರೀ ಕೆ. ಸಿ. ರೆಡ್ಡಿಯವರು ತಮ್ಮ ಕೈಗಡಿಯಾರ ಮತ್ತು ಪರ್ಸನ್ನು ಶ್ರೀ ಗುರುವಾರೆಡ್ಡಿಯವರಿಗೆ ತಲುಪಿಸಬೇಕೆಂದೂ ಹೇಳಿ ಕೊಟ್ಟರು. ಅವರ ಆದೇಶವನ್ನು ಶ್ರೀ ಶ್ರೀನಿವಾಸ ಅಯ್ಯಂಗಾರ್ಯರು ಪಾಲಿಸಿದರು. ಶ್ರೀ ದಾಸಪ್ಪನವರು ತಮ್ಮ ಪದಾರ್ಥಗಳನ್ನು ಶ್ರೀಮತಿ ಯಶೋಧರಮ್ಮನವರ ಕೈಲಿ ಕೊಟ್ಟು ಬಂದಿದ್ದರು. ತಾವೂ ಮುಂಚೂಣಿ ಯಲ್ಲಿದ್ದುದರಿಂದ, ಯಾವುದೇ ಸಂದರ್ಭದಲ್ಲಿ ತೊಂದರೆಗೆ ಸಿಗಬಹುದಾಗಿದ್ದುದ ರಿಂದ, ಶ್ರೀಮತಿ ಯಶೋಧರಮ್ಮನವರು ಮನೆಯ ಬೀಗದ ಕೈ ಸಹಿತವಾಗಿ ಸಣ್ಣ ಪುಟ್ಟ ಪದಾರ್ಥಗಳನ್ನೂ ತಮ್ಮ ಎಳೆಯ ಮಕ್ಕಳನ್ನೂ ಬೇರೆಯವರಿಗೆ ಒಪ್ಪಿಸಿ ಸತ್ಯಾಗ್ರಹದಲ್ಲಿ ಭಾಗವಹಿಸುತ್ತಿದ್ದರು.

ದಸ್ತಗಿರಿಯಾದ ಮುಖಂಡರನ್ನು ಪೋಲೀಸರು ಕರೆದುಕೊಂಡು ಹೋದ ಮೇಲೆ ಶ್ರೀ ಕೆ. ಟಿ. ಭಾಷ್ಯಂ ಅಯ್ಯಂಗಾರ್ಯರೂ ನಾಯಕರೂ ಸತ್ಯಾಗ್ರಹಿಗಳೂ ರಾಷ್ಟ್ರಧ್ವಜದ ಕಾವಲಿಗೆ ಕುಳಿತರು. ಅನೇಕ ಸ್ತ್ರೀ ಸತ್ಯಾಗ್ರಹಿಗಳೂ ಸ್ವಯಂ ಸೇವಿಕೆಯರೂ ಊಟಕ್ಕೂ ಏಳದೆ ವೇದಿಕೆಯ ಮೇಲೆ ಕುಳಿತುಕೊಂಡರು. ಸಾರನ್ನ, ಮೊಸರನ್ನವನ್ನು, ದೊನ್ನೆಗಳಲ್ಲಿ ತರಿಸಿಕೊಂಡು ಕುಳಿತ ಕಡೆಯೇ ಊಟದ ಶಾಸ್ತ್ರ ಮುಗಿಸಿದರು. ಬೇಸಗೆಯ ಬಿಸಿಲಾದುದರಿಂದ ಎಲ್ಲರ ಮುಖ ಕಪ್ಪಿಟ್ಟಿತು. ಅನೇಕರ ತೋಳು ಮತ್ತು ಮೊಳಕೈಗಳ ಮೇಲೆ ಬಿಸಿಲಿನ ಹೊಪ್ಪಳೆಗಳು ಕಾಣಿಸಿ ಕೊಂಡುವು. ಕೆಲವರಂತು ಸುಖವಾಗಿ ಬೆಳೆದ ಶ್ರೀಮಂತ ಕುಟುಂಬದ ಸ್ತ್ರೀಯರು. ಒಳ್ಳೆಯ ಉದ್ದೇಶಕ್ಕೋಸ್ಕರ ಬೇಸಿಗೆ ಬಿಸಿಲ ಬೇಗೆಯನ್ನು ತಡೆದುಕೊಂಡು ಸತ್ಯಾ ಗ್ರಹ ನಡೆಸುತ್ತಿದ್ದರು. ಪ್ರೇಕ್ಷಕರಾಗಿ ಬಂದಿದ್ದ ಸಹಸ್ರಾರು ಜನರು ಧ್ವಜ ಮೈದಾನದಲ್ಲೇ ಕುಳಿತು ಸಹಾನುಭೂತಿ ತೋರಿಸಿದರು. ಊಟ ಮುಗಿಸಿ ಬಂದ ಪ್ರತಿನಿಧಿಗಳು ಬಿಸಿಲಾದರೂ ಧ್ವಜ ಮೈದಾನದಲ್ಲಿ ಕೂಡುತ್ತಿದ್ದರೇ ಹೊರತು ನೆರಳಿನ ಆಶ್ರಯಗಳಿಗೆ ಹೋಗುತ್ತಿರಲಿಲ್ಲ. ಆಗಾಗ್ಗೆ ದೇಶಭಕ್ತಿ ಗೀತೆಗಳನ್ನು ಲಾವಣಿಗಳನ್ನು ಕೆಲವರು ಹಾಡಿದರು. ಸಂಜೆ 6 ಗಂಟೆಗೆ ಸಕಲ ಮರ್ಯಾದೆ ಗಳೊಡನೆ ಧ್ವಜವನ್ನು ಇಳಿಸಿಕೊಳ್ಳಲಾಯಿತು.

ಅಂದು ಮಧ್ಯಾಹ್ನ ಶ್ರೀಮಾನ್ ಯುವರಾಜರಾದ ಕಂಠೀರವ ನರಸಿಂಹರಾಜ ಒಡೆಯರು ಮೈಸೂರಿನಿಂದ ಬೆಂಗಳೂರಿಗೆ ಹೋಗುತ್ತಾ, ಶಿವಪುರ ರಾಷ್ಟ್ರಕೂಟ

ನಡೆಯುತ್ತಿದ್ದುದನ್ನು ರಸ್ತೆಯಲ್ಲಿ ಕಾರಿನಲ್ಲೇ ಕುಳಿತು ಹತ್ತು ಹದಿನೈದು ನಿಮಿಷ ನೋಡಿಕೊಂಡು ತೆರಳಿದರು. ಯುವರಾಜ ಒಬ್ಬ ಪ್ರೇಕ್ಷಕನಂತೆ ಅಧಿವೇಶವನ್ನು ನೋಡಿಕೊಂಡು ಹೋದರೆ ಹೊರತು ಯಾವ ಪ್ರತಿಕ್ರಿಯೆಯನ್ನೂ ತೋರಿಸಲಿಲ್ಲ, ಯಾರನ್ನೂ ಮಾತನಾಡಿಸಲಿಲ್ಲ.

ಮುಖಂಡರಿಗೆ ಶಿಕ್ಷೆ

ಧ್ವಜಾರೋಹಣ ಮಾಡಿ ಬಂಧಿತರಾದ ಮೂವರು ನಾಯಕರನ್ನೂ ನ್ಯಾಯಾಲಯದಲ್ಲಿ ಹಾಜರು ಪಡಿಸಲಾಯಿತು. ಮಂಡ್ಯ ನಗರದ ಪ್ರಥಮ ಮ್ಯಾಜಿಸ್ಟ್ರೇಟರು ಮುಖಂಡರ ವಿರುದ್ಧ ಹೂಡಿದ್ದ ಖಟ್ಲೆಗಳಿಗೆ ತೀರ್ಪು ಕೊಡುತ್ತಾ, ಶ್ರೀ ದಾಸಪ್ಪನವರಿಗೆ 4 ತಿಂಗಳು ಸಾದಾ ಕೈದಿನ ಶಿಕ್ಷೆಯನ್ನೂ 200 ರೂ. ದಂಡ ವನ್ನೂ, ಶ್ರೀ ವೆಂಕಟಪ್ಪ ಮತ್ತು ಶ್ರೀ ರೆಡ್ಡಿಯವರಿಗೆ 3 ತಿಂಗಳು ಸಾದಾ ಕೈದಿನ ಶಿಕ್ಷೆಯನ್ನೂ 200 ರೂ. ದಂಡವನ್ನೂ ವಿಧಿಸಿದರು. ಮೂವರಿಗೂ ಹಣ ಕೊಡಲು ತಪ್ಪಿದರೆ ಮೂವರೂ 20 ದಿನಗಳು ಹೆಚ್ಚಿನ ಶಿಕ್ಷೆ ಅನುಭವಿಸುವಂತೆ ಆಜ್ಞೆ ಮಾಡಿದರು.

ರಾಷ್ಟ್ರಧ್ವಜ ಅಖಿಲಭಾರತ ಧ್ವಜ

ಮೂವರು ಮುಖಂಡರೂ ತಾವು ನಿರಪರಾಧಿಗಳೆಂದೂ ತಾವು ಮಾಡಿದ ಧ್ವಜಾರೋಹಣ ನಾಗರಿಕರ ಹಕ್ಕೆಂದೂ ಸಮರ್ಥಿಸಿ ನ್ಯಾಯಾಲಯದಲ್ಲಿ ಜಂಟಿ ಹೇಳಿಕೆಯೊಂದನ್ನು ಹೀಗೆ ನೀಡಿದರು: "ತ್ರಿವರ್ಣ ಧ್ವಜಕ್ಕೆ ಕಾಂಗ್ರೆಸ್ ಧ್ವಜ ವೆಂದು ಕರೆಯುವುದಕ್ಕಿಂತ ಹಿಂದೂಸ್ತಾನದ ರಾಷ್ಟ್ರಧ್ವಜವೆಂದು ಕರಯುವುದೇ ಹೆಚ್ಚು ಯೋಗ್ಯವಾದುದು. ಸಂಸ್ಥಾನ ಸಹಿತವಾದ ಹಿಂದೂಸ್ಥಾನದ ಮಾನವನ್ನು ರಕ್ಷಿಸುವುದಕ್ಕಾಗಿ ಹಾಗೂ ಸ್ವಾತಂತ್ರ್ಯಕ್ಕಾಗಿ ಈ ಧ್ವಜವು ಹಾರಾಡುತ್ತಿದೆ. ಹಿಂದೂಸ್ಥಾನದ ಸ್ವಾತಂತ್ರ್ಯ ಸಮರದಲ್ಲಿ ಧುಮುಕುವುದು ಇಡೀ ಸಂಸ್ಥಾನದ ಪ್ರಜೆಗಳ ಕರ್ತವ್ಯವಾಗಿದೆಯೆಂದು ನಮಗನ್ನಿಸುತ್ತದೆ. ಹಾಗೆ ಮಾಡಲು ಅವರಿಗೆ ಹಕ್ಕಿದೆ. ಈ ರಾಷ್ಟ್ರಧ್ವಜವೇ ತಮ್ಮ ಧ್ವಜವೆಂದು ಸಂಸ್ಥಾನ ಪ್ರಜೆಗಳು ಸಾರುವ ರಲ್ಲದೆ ಬೇರೆ ಯಾವುದೂ ಸಂಸ್ಥಾನ ಪ್ರಜೆಗಳ ಧ್ವಜವಾಗಲಾರದು.

ಬ್ರಿಟಿಷ್ ಹಿಂದೂಸ್ಥಾನದಲ್ಲಿ "ಯೂನಿಯನ್ ಜ್ಯಾಕವೇ ರಾಷ್ಟ್ರಧ್ವಜವೆಂದು, ಆ ಸರಕಾರದವರು ಸಾರಿದ್ದರೂ ತ್ರಿವರ್ಣದ ಈ ರಾಷ್ಟ್ರಧ್ವಜವನ್ನು ಹಾರಿಸಲು ಅಲ್ಲಿ ಯಾವುದೇ ಬಗೆಯ ಪ್ರತಿಬಂಧವಿಲ್ಲ. ಶ್ರೀಮನ್ಮಹಾರಾಜರ ಕೃಪಾಛತ್ರದ ಕೆಳಗೇ ಹೊಣೆಗಾರ ರಾಜ್ಯವನ್ನು ಪಡೆಯಬೇಕೆಂದು ಮೈಸೂರು ಸಂಸ್ಥಾನದ ಪ್ರಜೆ ಗಳು ನಿರ್ಧರಿಸಿದ್ದಾರೆ. ಎಂದಬಳಿಕ ತ್ರಿವರ್ಣದ ರಾಷ್ಟ್ರಧ್ವಜವನ್ನೇರಿಸುವುದು

ಮೈಸೂರಿನ ಧ್ವಜಕ್ಕೆ ಯಾವ ರೀತಿಯಿಂದಲೂ ಅಪಮಾನಕರವಾಗಲಾರದು. ಅಲ್ಲದೆ ಇದರಿಂದ ಅವರ ಚಕ್ರವರ್ತಿತ್ವಕ್ಕೂ ಯಾವುದೇ ರೀತಿಯಿಂದ ಅಪಮಾನಗೊಳಿಸಿ ದಂತಾಗಲಾರದು."

ಮಧ್ಯಾಹ್ನ 2 ಗಂಟೆಗೆ ವಿಷಯ ನಿಯಾಮಕ ಸಮಿತಿಯ ಸಭೆ ನಡೆಯಿತು. ಶ್ರೀ ಕೆ. ಟಿ. ಭಾಷ್ಯಂ ಅಯ್ಯಂಗಾರ್ಯರು ಧ್ವಜ ರಕ್ಷಣೆಗೆ ಕುಳಿತುದರಿಂದ ಅವರ ಕೋರಿಕೆಯಂತೆ ಮೈಸೂರಿನ ಶ್ರೀ ಟಿ. ಎಸ್. ರಾಜಗೋಪಾಲ ಅಯ್ಯಂಗಾರ್ಯರು ಅಧ್ಯಕ್ಷತೆ ವಹಿಸಿದರು. ಸಾಯಂಕಾಲದ ಬಹಿರಂಗ ಅಧಿವೇಶನದಲ್ಲಿ ಮಂಡಿಸುವುದ ಕ್ಕಾಗಿ ಅನೇಕ ನಿರ್ಣಯಗಳ ಬಗೆಗೆ ವಿಪುಲವಾಗಿ ಚರ್ಚೆ ನಡೆಯಿತು. ಶಿವಮೊಗ್ಗೆಯ ಶ್ರೀ ಕೆ. ರಾಮಕೃಷ್ಣರಾವ್ ಅವರು ರಾಷ್ಟ್ರಧ್ವಜದ ನಿರ್ಣಯವನ್ನು ಮುಂದಿಟ್ಟರು. ಮೈಸೂರು ಕಾಂಗ್ರೆಸ್ಸಿನ ಧ್ವಜದ ರೂಪುರೇಷೆ, ರಾಜಕೀಯ ಸುಧಾರಣ ಸಮಿತಿಯ ಬಹಿಷ್ಕಾರ, ಮೈಸೂರು ಕಾಂಗ್ರೆಸ್ ಸಂಸ್ಥೆಯ ರಚನಾಕ್ರಮಗಳು ದೀರ್ಘ ಚರ್ಚೆಗೆ ಅವಕಾಶ ನೀಡಿದುವು.

1) ರಾಷ್ಟ್ರಧ್ವಜದ ಬಗೆಗೆ ನಡೆದ ಚರ್ಚೆಯ ಸಾರಾಂಶ :—

ಬ್ರಿಟಿಷ್ ಇಂಡಿಯಾದಲ್ಲಿ ಚಳುವಳಿ ನಡೆಸುತ್ತಿದ್ದ ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ ತನ್ನ ಚಳುವಳಿಗೆ, ಸಾರ್ವಜನಿಕ ಸಭೆಗಳಿಗೆ ತ್ರಿವರ್ಣದ ರಾಷ್ಟ್ರಧ್ವಜ ವನ್ನು ಬಳಸುತ್ತಿತ್ತು. ಆ ಧ್ವಜವನ್ನು ದೇಶೀಯ ಸಂಸ್ಥಾನಗಳಲ್ಲಿ ಬಳಸಲು ಅವಕಾಶವಿರಲಿಲ್ಲ. ದೇಶಿಯ ಸಂಸ್ಥಾನದ ಧ್ವಜಗಳನ್ನೇ ಬಳಸಬೇಕಾಗಿತ್ತು. ರಾಷ್ಟ್ರಧ್ವಜದ ಬಳಕೆಗೆ ದೇಶೀಯ ಸಂಸ್ಥಾನದ ಸರಕಾರ ಒಪ್ಪಿಗೆ ಕೊಡುತ್ತಿರಲಿಲ್ಲ. ಇದು ಸರಕಾರದ ಪ್ರತಿಷ್ಠೆಯ ಸಮಸ್ಯೆಯಾಗಿತ್ತು. ದೇಶೀಯ ಸಂಸ್ಥಾನಗಳಲ್ಲಿ ಸತ್ಯಾಗ್ರಹ ಮಾಡುವ ಶಕ್ತಿಯಿಲ್ಲ; ಧ್ವಜ ರಕ್ಷಣೆ ಮಾಡುವ ಸಾಮರ್ಥ್ಯವಿಲ್ಲ, ಎಂಬುದಲ್ಲದೆ ಈ ಬಗೆಗೆ ಯಾವುದೇ ನಿಶ್ಚಿತ ನಿಲುವನ್ನು ಹೊಂದಿಲ್ಲುದುದರಿಂದ ಅಖಿಲ ಭಾರತ ಕಾಂಗ್ರೆಸ್ ದೇಶೀಯ ಸಂಸ್ಥಾನಗಳಿಗೆ ರಾಷ್ಟ್ರಧ್ವಜದ ಬಳಕೆಗೆ ಒಪ್ಪಿಗೆ ಕೊಟ್ಟಿರಲಿಲ್ಲ. ಮೈಸೂರಿನಲ್ಲಿ ನಾಯಕರು ಕೇಳುತ್ತಿದ್ದುದು "ಶ್ರೀಮನ್ಮಹಾರಾಜರ ಕೃಪಾಶ್ರಯದಲ್ಲಿ ಜವಾಬ್ದಾರಿ ಸರ್ಕಾರ". ಆದ್ದರಿಂದ ಮೈಸೂರಿನ ಗಂಡಭೇರುಂಡ ಧ್ವಜ ಮತ್ತು ರಾಷ್ಟ್ರಧ್ವಜ ಎರಡನ್ನೂ ಬಳಸಿ ಗೌರವಿಸಬೇಕೆಂಬುದು ಹಲವರ ಅಭಿಪ್ರಾಯವಾಗಿತ್ತು. ಇದೇ ಅಭಿಪ್ರಾಯವನ್ನು ಮಹಾತ್ಮ ಗಾಂಧೀಜಿಯವರೂ ಹೊಂದಿದ್ದರು. ರಾಷ್ಟ್ರಧ್ವಜವೊಂದನ್ನೇ ಇಟ್ಟು ಕೊಳ್ಳಬೇಕೆಂಬುದು ಕೆಲವು ಪ್ರಗತಿಪರರ ನಿಲುವು.

ಇದಕ್ಕೆ ಸಮನ್ವಯ ಸೂಚಕವಾಗಿ ಶ್ರೀ ಭೂಪಾಳಂ ಚಂದ್ರಶೇಖರಯ್ಯ ನವರು ವಿಷಯ ನಿಯಾಮಕ ಸಭೆಯಲ್ಲಿ ಹೊಸ ಸಲಹೆಯನ್ನು ಮಂಡಿಸಿದರು :

"ರಾಷ್ಟ್ರಧ್ವಜದ ಒಂದು ಮೂಲೆಯಲ್ಲಿ ಮೈಸೂರು ಧ್ವಜದ ಗಂಡಭೇರುಂಡವನ್ನು ಚಿತ್ರಿಸಿ ಮೈಸೂರಿನ ಕಾಂಗ್ರೆಸ್ ಧ್ವಜವಾಗಿ ಬಳಸುವುದು. ಹೀಗೆ ಮಾಡಿದರೆ ಭಾರತ ಒಕ್ಕೂಟದಲ್ಲಿ ಮೈಸೂರಿನ ಸ್ಥಾನವನ್ನು ತೋರಿಸಿದಂತಾಗುತ್ತದೆ" ಎಂಬುದು ಅವರ ಸಲಹೆ. ಇದಕ್ಕೆ ಮೂರು ಜನ ಮಾತ್ರ ಓಟು ಮಾಡಿದರು. ಬಹುಮತವಿಲ್ಲದೆ ಶ್ರೀ ಭೂಪಾಳಂ ಅವರ ಸಲಹೆ ಬಿದ್ದು ಹೋಯಿತು. ಈ ತತ್ವವನ್ನು ಅನುಸರಿಸಿದ್ದರೆ ಒಂದೊಂದು ದೇಶೀಯ ಸಂಸ್ಥಾನಕ್ಕೂ ಅವಕಾಶ ಕೊಡುತ್ತಾ ಹೋಗಿ ಇಡೀ ರಾಷ್ಟ್ರಕ್ಕೆ ಅನ್ವಯಿಸುವ ಒಂದು ಧ್ವಜ ಇಲ್ಲವಾಗುತ್ತಿತ್ತು. ರಾಷ್ಟ್ರಧ್ವಜವನ್ನು ಎಲ್ಲರೂ ಬಳಸಲು ಈಗ ಅಖಿತ ಭಾರತ ರಾಷ್ಟ್ರೀಯ ಕಾಂಗ್ರೆಸ್ ಒಪ್ಪದಿದ್ದರೂ ಇಂದಲ್ಲ ನಾಳೆ ಒಪ್ಪಲೇಬೇಕಾಗುತ್ತದೆ. ಬ್ರಿಟಿಷ್ ಇಂಡಿಯಾ, ದೇಶೀಯ ಸಂಸ್ಥಾನಗಳು ಎಲ್ಲವನ್ನೂ ಒಳಗೊಂಡದ್ದೇ ಒಟ್ಟು ಭಾರತ. ಇಡೀ ಭಾರತವನ್ನು ಪ್ರತಿನಿಧಿಸುವ ಒಂದೇ ಧ್ವಜ ಇರಬೇಕು ಎಂಬುದು ಬಹು ಜನರ ಆಲೋಚನೆ.

ಕೊನೆಗೆ ರಾಷ್ಟ್ರೀಯ ಕಾಂಗ್ರೆಸ್ ಧ್ವಜವನ್ನೇ ಮೈಸೂರು ಕಾಂಗ್ರೆಸ್ ತನ್ನ ಧ್ವಜವಾಗಿ ಅಂಗೀಕರಿಸಿ ನಿರ್ಣಯ ಮಾಡಿತು.

2) ಮೈಸೂರು ಸರಕಾರ ನೇಮಿಸಿರುವ "ಮೈಸೂರು ಸಂಸ್ಥಾನದ ರಾಜಕೀಯ ಸುಧಾರಣಾ ಸಮಿತಿ"ಗೆ ಬಹಿಷ್ಕಾರ.

ಹಿಂದೆ 1922 ರಲ್ಲಿ ಮೈಸೂರು ಸರಕಾರ ರಾಜತಂತ್ರ ಪ್ರವೀಣ ಶ್ರೀ ಡಾ॥ ಬ್ರಜೇಂದ್ರನಾಥಶೀಲರ ಅಧ್ಯಕ್ಷತೆಯಲ್ಲಿ ರಾಜಕೀಯ ಸುಧಾರಣಾ ಸಮಿತಿಯೊಂದನ್ನು ನೇಮಿಸಿತ್ತು. ಆ ಸಮಿತಿ 23-10-1922 ರಿಂದ ಕೆಲಸ ಆರಂಭಿಸಿ 7-3-1923 ರಲ್ಲಿ ವರದಿಯನ್ನು ಒಪ್ಪಿಸಿತ್ತು. ಅದು "ಶೀಲ್ ಸಮಿತಿಯ ವರದಿ" ಎಂದು ಪ್ರಸಿದ್ಧವಾಗಿದೆ. ಈ ಸಮಿತಿಯ ರಚನೆಯಲ್ಲಿ ಪ್ರಭಾಪ್ರಭುತ್ವದ ಆಶಾಕಿರಣ ವಿದ್ದರೂ ಅದರಿಂದ ಹೆಚ್ಚಿನ ಉಪಯೋಗವಾಗಲಿಲ್ಲ. 1937-38 ರಲ್ಲಿ ರಾಜಕೀಯ ಚಳುವಳಿ ಉಗ್ರವಾಗಿ ಅದನ್ನು ಹತ್ತಿಕ್ಕುವುದು ಕಷ್ಟವಾದಾಗ, ಎರಡನೆಯ ಬಾರಿಗೆ ಮತ್ತೊಂದು ರಾಜಕೀಯ ಸುಧಾರಣಾ ಸಮಿತಿಯನ್ನು ರಚಿಸುವ ಪ್ರಯತ್ನ ಮಾಡಿತು. ರಾಜಸಭಾಭೂಷಣ ದಿವಾನ್ ಬಹದ್ದೂರ್ ಕೆ. ಆರ್. ಶ್ರೀನಿವಾಸ ಅಯ್ಯಂಗಾರ್ಯರ ಅಧ್ಯಕ್ಷತೆಯಲ್ಲಿ ರಾಜಕೀಯ ಸುಧಾರಣಾ ಸಮಿತಿ ನೇಮಕವಾಯಿತು (1-4-1938). ಪ್ರಜಾಪ್ರತಿನಿಧಿಗಳಿಂದ ಹೇಗೆ ಕೆಲಸ ನಡೆಯುತ್ತಿದೆ ? ರಾಜಕೀಯ ಪ್ರಗತಿ ಮುಂದುವರಿಯಲು ಬೇಕಾದ ಬದಲಾವಣೆಗಳ ಪರಿಶೀಲನೆ ಹೇಗೆ? ಮೊದಲಾದವುಗಳ ತೀರ್ಮಾನಗಳು ಸಮಿತಿಯ ಉದ್ದೇಶಗಳಾಗಿದ್ದುವು. ಆದರೆ ಸಮಿತಿಯಲ್ಲಿ ಕಾಂಗ್ರೆಸ್ಸಿಗೆ ಸಿಗಬೇಕಾದಷ್ಟು ಪ್ರಾತಿನಿಧ್ಯ ಸಿಗಲಿಲ್ಲ. ಕಾಂಗ್ರೆಸ್ಸನ್ನು

ಒಂದು ಪಕ್ಷವೆಂದು ಸರಕಾರ ಅಂಗೀಕರಿಸಿಲ್ಲದುದರಿಂದ ಅದರಲ್ಲಿದ್ದ ಕಾಂಗ್ರೆಸ್ಸಿಗೆ ಸೇರಿದ ನಾಲ್ವರು ಸದಸ್ಯರ ನೇಮಕವೂ ಕಾಂಗ್ರೆಸ್ಸಿನ ಒಪ್ಪಿಗೆಯಾಗಲಿಲ್ಲ. ಅಲ್ಲದೆ ಆ ಸಮಿತಿಯ ಉದ್ದೇಶದಿಂದ ಸಂಸ್ಥಾನದ ಸಮಸ್ಯೆಗಳು ಬಗೆಹರಿಯುವಂತಿಲ್ಲ. ಅದಕ್ಕೋಸ್ಕರ ವಿಷಯ ನಿಯಾಮಕ ಸಮಿತಿಯಲ್ಲಿ ದೀರ್ಘವಾಗಿ ಚರ್ಚೆ ನಡೆದು ರಾಜಕೀಯ ಸುಧಾರಣ ಸಮಿತಿಯನ್ನು ಬಹಿಷ್ಕರಿಸುವ ನಿರ್ಣಯವಾಯಿತು.

ಬಹಿರಂಗ ಸಭೆ

ರಾಷ್ಟ್ರಧ್ವಜವನ್ನು ಗೌರವದಿಂದ ಇಳಿಸಿಕೊಂಡ ಮೇಲೆ ಸಂಜೆ 6-30 ಗಂಟೆಗೆ ಬಹಿರಂಗ ಸಭೆ ಪ್ರಾರಂಭವಾಯಿತು. ಹಿಂದಿನ ದಿನದಂತೆಯೇ ಅಸಂಖ್ಯಾತ ಸ್ತ್ರೀ ಪುರುಷರು ಸೇರಿದ್ದರು. ಪ್ರಾರಂಭದಲ್ಲಿ ಕಾಂಗ್ರೆಸ್ಸಿನ ಮಹತ್ವ, ದೇಶದಲ್ಲಿ ಆಡಳಿತ ನಡೆಸುತ್ತಿರುವ ಕಾಂಗ್ರೆಸ್ ಸರಕಾರಗಳ ಸಾಧನೆಗಳನ್ನು ಕುರಿತ ಲಾವಣಿಗಳನ್ನು ಶ್ರೀ ಎನ್. ವಿಷಕಂಠರಾವ್ ಹಾಡಿದರು. ಅನಂತರ ಅಧ್ಯಕ್ಷರಾದ ಶ್ರೀ ಕೆ. ಟಿ. ಭಾಷ್ಯಂ, ಸ್ವಾಗತಾಧ್ಯಕ್ಷರಾದ ಶ್ರೀ ಎಸ್. ಚೆನ್ನಯ್ಯನವರು, ಸ್ವಯಂ ಸೇವಕ-ಸೇವಿಕೆಯರಿಂದ ಗೌರವಾನ್ವಿತರಾದ ಜಿ. ಒ. ಸಿ. ಶ್ರೀ ಪಾರ್ಥನಾರಾಯಣ ಪಂಡಿತರು ಜನರ ಜಯಕಾರಗಳನ್ನು ಸ್ವೀಕರಿಸುತ್ತಾ ಬಂದು ಭಾಷಣ ವೇದಿಕೆಯನ್ನು ಏರಿ ಕುಳಿತುಕೊಂಡರು. ದೇಶ ಸೇವಿಕೆಯರು ರಾಷ್ಟ್ರಗೀತೆಯನ್ನು ಹಾಡುವುದರ ಮೂಲಕ ಮಂಗಳಾಚರಣೆ ಮಾಡಿದರು.

ಧ್ವಜ ವೇದಿಕೆಯ ಮೇಲೆ ಬೆಳಗಿನಿಂದ ಬಿಸಿಲಿನಲ್ಲಿ ಧ್ವಜ ರಕ್ಷಣೆಗೆ ಕುಳಿತಿದ್ದುದರಿಂದ ಶ್ರೀ ಭಾಷ್ಯಂ ಸ್ವಲ್ಪ ಆಯಾಸಗೊಂಡಿದ್ದರು. ಬಿಡುವಿಲ್ಲದಂತೆ ಕಾರ್ಯಕ್ರಮಗಳು ಮುಂದುವರಿದುವು. ಹಿಂದಿನ ದಿನದ ಬಹಿರಂಗ ಸಭೆಯಲ್ಲಿ ಧ್ವನಿವರ್ಧಕಗಳು ಕೆಟ್ಟುಹೋಗಿದ್ದುವು. ಆದರೆ ಇಂದು ಅವು ಸರಿಯಾಗಿದ್ದುದರಿಂದ ಮುಖಂಡರ ಭಾಷಣಗಳು ಬಹಿರಂಗ ಸಭೆಯ ಎಲ್ಲ ಮೂಲೆಗಳಿಗೂ ಸ್ಪಷ್ಟವಾಗಿ ಕೇಳಿಸಿದುವು.

ಪ್ರಾರಂಭದಲ್ಲಿ ಶ್ರೀ ಭಾಷ್ಯಂ ಅವರು ಉದ್ಬೋಧಕವಾದ ಭಾಷಣವನ್ನು ಕನ್ನಡದಲ್ಲಿ ಮಾಡಿದರು. ಶಿವಪುರ ರಾಷ್ಟ್ರಕೂಟದ ಘಟನೆಗಳನ್ನು ಪ್ರಸ್ತಾಪಿಸುತ್ತಾ, ಅತ್ಯಧಿಕ ಸಂಖ್ಯೆಯ ಜನಸ್ತೋಮ ಯಾವ ಅನಾಹುತಕ್ಕೂ ಅವಕಾಶ ಕೊಡದ ಹಾಗೆ ಶಾಂತ ರೀತಿಯಿಂದ ನಡೆದುಕೊಂಡುದಕ್ಕೆ ಕೃತಜ್ಞತೆಗಳನ್ನು ಅರ್ಪಿಸಿದರು. ಕಾರ್ಯಕಾರಿ ಸಮಿತಿಯು ಧ್ವಜಸತ್ಯಾಗ್ರಹವನ್ನು ಮುಂದುವರಿಸಲು ಸಂಕಲ್ಪ ಮಾಡಿರುವುದನ್ನು ಪ್ರಕಟಪಡಿಸಿದರು. "ಈಗಾಗಲೇ ತೀರ್ಮಾನವಾಗಿರುವಂತೆ ನಾಳೆ ಬೆಳಗ್ಗೆ ನಾನು ಧ್ವಜಾರೋಹಣ ಮಾಡುತ್ತೇನೆ. ರಾಷ್ಟ್ರಧ್ವಜದ

ಗೌರವವನ್ನು ಕಾಪಾಡುವುದು, ಸರ್ಕಾರದ ದಮನ ನೀತಿಯನ್ನು ಪ್ರತಿಭಟಿಸುವುದು ಪ್ರತಿಯೊಬ್ಬ ಕಾಂಗ್ರೆಸ್ಸಿಗನ ಕರ್ತವ್ಯ. ಅಗತ್ಯ ಬಿದ್ದರೆ ರಾಜ್ಯದಲ್ಲಿರುವ 65 ಲಕ್ಷ ಜನರು ಜೈಲಿಗೆ ಹೋಗಲು ಸಿದ್ಧರಾಗಬೇಕು. ದಸ್ತಗಿರಿಯಾಗುವ ಸಂದರ್ಭದಲ್ಲಿ ಜನರು ಶಾಂತರೀತಿಯಿಂದ ಇರಬೇಕು. ಹರಿಪುರ ಅಧಿವೇಶನದ ಶಾಂತ ಪರಿಸ್ಥಿತಿ ಇತರ ದೇಶಗಳಿಗೆ ಮಾದರಿಯಾಯಿತು. ಹಾಗೆಯೇ ಶಿವಪುರ ರಾಷ್ಟ್ರಕೂಟದ ಅಧಿವೇಶನವೂ ಆದರ್ಶವಾದುದಾಗಬೇಕು. ಹಿರಿಯರ ಆಶೀರ್ವಾದದಿಂದ ದೇಶಕ್ಕೆ ನನ್ನ ಕೈಲಾದ ಕಿಂಚಿತ್ ಸೇವೆಯನ್ನು ಮಾಡುತ್ತೇನೆ" ಎಂದು ಶ್ರೀ ಭಾಷ್ಯಂ ತಮ್ಮ ಭಾಷಣದಲ್ಲಿ ಹೇಳಿದರು.

ನಾಯಕರ ಮನವಿ

ಧ್ವಜ ಸತ್ಯಾಗ್ರಹದ ಎರಡನೆಯ ದಿನ ದಸ್ತಗಿರಿಯಾದ ಶ್ರೀ ದಾಸಪ್ಪ, ಶ್ರೀ ವೆಂಕಟಪ್ಪ ಮತ್ತು ಶ್ರೀ ರೆಡ್ಡಿಯವರು ಬಹಿರಂಗ ಸಭೆಗೆ ಕಳಿಸಿಕೊಟ್ಟಿದ್ದ ಮನವಿಯನ್ನು ಶ್ರೀ ಭಾಷ್ಯಂ ಅವರು ತಮ್ಮ ಭಾಷಣದ ಅನಂತರ ಓದಿದರು. ಅದರಲ್ಲಿ ಮುಖಂಡರು ಹೀಗೆ ಪ್ರಸ್ತಾಪಿಸಿದ್ದರು: "ಇಂದು ಬೆಳಿಗ್ಗೆ ಧ್ವಜಾರೋಹಣ ಸಂದರ್ಭದಲ್ಲಿ ಸಾಕ್ಷಿಯಾಗಿದ್ದ ಸಾವಿರಾರು ಜನರು ತೋರಿಸಿದ ಶಿಸ್ತು ಆಶ್ಚರ್ಯಕರವಾದ ಸಂಯಮಗಳಿಗೆ ನಾವು ಕೃತಜ್ಞರಾಗಿದ್ದೇವೆ. ಕಾಂಗ್ರೆಸ್ ಗೌರವಿಸುತ್ತಿರುವ ರಾಷ್ಟ್ರಧ್ವಜ ಮೈಸೂರಿನದು ಮಾತ್ರವಲ್ಲ ಭಾರತದ ಧ್ವಜವಾಗಿದೆ. ಎಷ್ಟೇ ಕಷ್ಟಬಂದರೂ ಸಹಿಸಿಕೊಂಡು ಜನರು ರಾಷ್ಟ್ರಧ್ವಜದ ಗೌರವವನ್ನು ಕಾಪಾಡಬೇಕು. ಉತ್ಸಾಹ ಶಿಸ್ತುಗಳಿಂದ ಅಹಿಂಸಾತ್ಮಕವಾಗಿ ನಮ್ಮ ಜನರು ಹೋರಾಟವನ್ನು ಮುಂದುವರಿಸಬೇಕೆಂದು ನಾವು ಮನವಿ ಮಾಡಿಕೊಳ್ಳುತ್ತೇವೆ. ಅಂತಿಮ ಜಯ ನಮ್ಮದೇ. ಶುಭಾಶಯಗಳು."

ಬಹಿರಂಗ ಅಧಿವೇಶನದ ಮುಖ್ಯ ಕಾರ್ಯಕ್ರಮವಾದ ನಿರ್ಣಯಗಳ ಅಂಗೀಕಾರ ಮೊದಲಾಯಿತು. ಪ್ರತಿಯೊಂದು ನಿರ್ಣಯವನ್ನು ಒಬ್ಬೊಬ್ಬ ಮುಖಂಡರು ಮಂಡಿಸಿದರು. ಆ ಬಗೆಗೆ ಖಚಿತವಾಗಿ ಅನುಭವವಿದ್ದವರು ಅನುಮೋದಿಸಿ ಸಮರ್ಥಿಸಿ ಮಹಾಜನರ ಒಪ್ಪಿಗೆ ಗಳಿಸಿದರು. ಇಂದಿನ ಧ್ವಜಾರೋಹಣದಲ್ಲಿ ಬಂಧಿತರಾದ ನಾಯಕರಿಗೆ ವಂದನೆಗಳನ್ನರ್ಪಿಸಿದ ಮೇಲೆ, ಆಫ್ರಿಕ, ಫಿಜಿ ಮೊದಲಾದ ದೇಶಗಳಲ್ಲಿ ಭಾರತೀಯರು ಅನುಭವಿಸುತ್ತಿರುವ ತೊಂದರೆಯ ಖಂಡನೆಯ ನಿರ್ಣಯವನ್ನು ಶ್ರೀ ಟಿ. ಎಸ್. ರಾಜಗೋಪಾಲ ಅಯ್ಯಂಗಾರ್ ಮಂಡಿಸಿದರು. ಶ್ರೀ ಗಣಪತಿ ಶಾಸ್ತ್ರಿಗಳು ಅದನ್ನು ಅನುಮೋದಿಸಿದರು.

ಸರಕಾರದ ಸುಧಾರಣ ಸಮಿತಿಯ ಬಹಿಷ್ಕಾರದ ಬಗೆಗೆ ಶ್ರೀ ಟಿ. ಎಸ್. ರಾಜಗೋಪಾಲ ಅಯ್ಯಂಗಾರ್ಯರು ನಿರ್ಣಯವನ್ನು ರಾಷ್ಟ್ರಕೂಟದ ಮುಂದಿಟ್ಟರು. ಈ ವಿಷಯವನ್ನು ಕುರಿತು ಬಹಳಷ್ಟು ಚರ್ಚೆ ನಡೆಯಿತು. ಹಲವರು ಇದನ್ನು ಅನುಮೋದಿಸಿ ತಾರ್ಕಿಕವಾಗಿ ವೈಚಾರಿಕವಾಗಿ ಮಾತನಾಡಿದರು. ಶ್ರೀ ಎಚ್. ಸಿದ್ಧಯ್ಯನವರು ನಿರ್ಣಯವನ್ನು ಸಮರ್ಥಿಸಿದರು. ಶ್ರೀಮತಿ ಯಶೋಧರಮ್ಮ ದಾಸಪ್ಪನವರು ನಿರ್ಣಯದ ಸಮರ್ಥನೆ ಮಾಡುತ್ತಾ ಹೀಗೆ ಅಭಿಪ್ರಾಯಪಟ್ಟರು : "ಈ ದಬ್ಬಾಳಿಕೆಯು ಪೈಶಾಚಿಕ ವೃತ್ತಿಯನ್ನು ನಡೆಸುತ್ತಿರುವ ಮನುಷ್ಯ ರೂಪೀ ವ್ಯಕ್ತಿಯ ಕಾರ್ಯ. ಇಂತಹ ಸರಕಾರವು ನಿಯಮಿಸಿದ ಸಮಿತಿಯಿಂದ ಏನೂ ಪ್ರಯೋಜನವಿಲ್ಲ. ಕಾಂಗ್ರೆಸ್ಸನ್ನೇ ಕಡೆಗಾಣುತ್ತಿರುವ ಸರಕಾರವನ್ನು ಬಗ್ಗಿಸಿ ಕಾಂಗ್ರೆಸ್ಸಿನ ಬೇಡಿಕೆಗಳಿಗೆ ತಲೆಬಾಗಿರುವಂತೆ ಮಾಡಬೇಕು. ಈ ಕಾರ್ಯಕ್ಕೆ ಅಡ್ಡಿ ಬರುತ್ತಿರುವ ದ್ರೋಹಿ ಜನರನ್ನೂ ದ್ರೋಹಿ ಸಂಸ್ಥೆಗಳನ್ನೂ ಖಂಡಿಸಬೇಕು. ಜನಾಂಗದ ಮುಂದಿನ ಹಿತದ ದೃಷ್ಟಿಯನ್ನು ಇಟ್ಟುಕೊಂಡವರು, ಮಕ್ಕಳ ಮಂಗಳ ಭವಿಷ್ಯವನ್ನು ಬಯಸುವವರು, ಈ ಸುಧಾರಣ ಸಮಿತಿಯನ್ನು ತಿರಸ್ಕರಿಸಬೇಕು. ಜವಾಬ್ದಾರಿ ಸರಕಾರದ ಭರವಸೆ, ಕಾಂಗ್ರೆಸ್ಸಿನ ಗಣ್ಯತೆ ಇವುಗಳನ್ನು ಸರಕಾರವು ನೀಡುವವರೆಗೂ ಸುಧಾರಣ ಸಮಿತಿಯು ಪುರಸ್ಕಾರ ಯೋಗ್ಯವಲ್ಲ." ಶ್ರೀ ಟಿ. ಮರಿಯಪ್ಪನವರು ನಿರ್ಣಯದ ಬಗೆಗೆ ಉಪನ್ಯಾಸ ಮಾಡುತ್ತಾ, "ಯಾವ ರಾಜ್ಯಾಂಗ ವ್ಯವಸ್ಥೆಯೂ ಇಲ್ಲದ ಮೈಸೂರಿಗೆ ಬಂದ ವ್ಯವಸ್ಥೆಯನ್ನು ಕಪಟವಾಗಿ ಅಧಿಕ ಜನರ ಮತವನ್ನು ಪಡೆಯಲು ಕೂಡ ಮನಸ್ಸು ಮಾಡಿ ಸರಕಾರವು ರಚಿಸಿರುವ ಸಮಿತಿಯನ್ನು ತಿರಸ್ಕರಿಸಬೇಕು" ಎಂದು ಹೇಳಿದರು. ಭೈರಾಪಟ್ಟಣದ ಶ್ರೀ ಅಂಕೂಗೌಡರು ನಿರ್ಣಯವನ್ನು ಅನುಮೋದಿಸುತ್ತಾ ಹೀಗೆ ತೀರ್ಮಾನಕ್ಕೆ ಬಂದರು : "ಪರಿಸ್ಥಿತಿಯು ಕರನಿರಾಕರಣ ಚಳವಳಿಗೆ ಇಟ್ಟುಕೊಂಡರೂ ಹೆಚ್ಚಿಲ್ಲ." ಈ ನಿರ್ಣಯದ ಬಗೆಗೆ ಪುಷ್ಟೀಕರಿಸಿ ಮಾತಾಡುತ್ತಾ ಶ್ರೀ ಪೊನ್ನಯ್ಯ ಮತ್ತು ಶ್ರೀ ಪಿ. ಸೀತಾರಾಮಯ್ಯನವರು "ಈ ಸಮಿತಿಗಳು ಕಾಂಗ್ರೆಸ್ ಚಳವಳಿಯ ಬಿಸಿಯನ್ನು ಆರಿಸಲು ಸರಕಾರವು ಮಾಡುತ್ತಿರುವ ಚಾಕಚಕ್ಯ"ವೆಂದು ವಾದಿಸಿದರು. ಬಹಿರಂಗ ಸಭೆಯ ಮತಕ್ಕೆ ಹಾಕಿದಾಗ ಈ ನಿರ್ಣಯ ಸರ್ವಾನುಮತದಿಂದ ಅಂಗೀಕಾರ ಪಡೆಯಿತು. ಇದೇ ಸಂದರ್ಭದಲ್ಲಿ ರಾಜಕೀಯ ಸುಧಾರಣ ಸಮಿತಿಗೆ ಸದಸ್ಯರಾಗಿ ಸರಕಾರ ಆಯ್ಕೆ ಮಾಡಿಕೊಂಡಿದ್ದ ಶ್ರೀ ಭೂಪಾಳಂ ಚಂದ್ರಶೇಖರಯ್ಯ ಮತ್ತು ಶ್ರೀ ಡಿ. ಎಚ್. ಚಂದ್ರಶೇಖರಯ್ಯ ಅವರುಗಳು ಸಭಿಕರ ಪ್ರಾರ್ಥನೆಯಂತೆ ವೇದಿಕೆಗೆ ಬಂದು ತಾವು ಸುಧಾರಣ ಸಮಿತಿಯ ಕಾರ್ಯಕಲಾಪಗಳಲ್ಲಿ ಭಾಗವಹಿಸುವುದಿಲ್ಲವೆಂದು ಘೋಷಿಸಿದರು. ಈ ಘೋಷಣೆಯನ್ನು ಸಭಿಕರು ಉತ್ಸಾಹದಿಂದ ಸ್ವಾಗತಿಸಿದರು.

ಬಹಿರಂಗ ಅಧಿವೇಶನದಲ್ಲಿ ಸಾರಸ್ಯವಾಗಿ ಚರ್ಚಿತವಾದ ಮತ್ತೊಂದು ನಿರ್ಣಯು ಪ್ರಜೆಗಳ ಮೂಲಭೂತ ಹಕ್ಕುಗಳಿಗೆ ಸಂಬಂಧಿಸಿದ್ದು. ಕರಾಚಿ ಕಾಂಗ್ರೆಸ್ಸಿನಲ್ಲಾದ ಮೂಲಭೂತ ಹಕ್ಕುಬಾಧ್ಯತೆಗಳನ್ನು ಆಧಾರವಾಗಿಟ್ಟುಕೊಂಡು ವಿಷಯ ನಿಯಾಮಕ ಸಮಿತಿಯಲ್ಲಿ ಚರ್ಚಿಸಿ ಈ ನಿರ್ಣಯುವನ್ನು ಸಿದ್ಧಪಡಿಸ ಲಾಗಿತ್ತು. ರಾಷ್ಟ್ರಕೂಟದ ಮನ್ನಣೆಗಾಗಿ ನಿರ್ಣಯುವನ್ನು ಶ್ರೀ ಎಸ್. ಡಿ. ಶಂಕರಪ್ಪನವರು ಮಂಡಿಸಿದರು. ಶ್ರೀ ಟಿ. ಸಿ. ಗುರುರವರು ನಿರ್ಣಯುವನ್ನು ಪುಷ್ಟೀಕರಿಸಿ ಅದರ ಅಗತ್ಯವನ್ನು ಹೀಗೆ ಸ್ಥಾಪಿಸಿದರು: "ಯಾವ ಸರಕಾರವೇ ಆಗಲೀ ಪ್ರಜಾಹಿತಪಾಲನೆ ಮಾಡಬೇಕಾದರೂ ಪ್ರಜೆಗಳ ಆಜನ್ಮಸಿದ್ಧವೂ ಮೂಲ ಭೂತವೂ ಆದ ಹಕ್ಕು ಬಾಧ್ಯತೆಗಳನ್ನು ಸ್ಪಷ್ಟಪಡಿಸಬೇಕಾದ್ದು ಅಗತ್ಯ." ನಿರ್ಣಯು ಬಹುಮತದಿಂದ ಸ್ವೀಕೃತವಾಯಿತು.

ರೈತರ ನಾನಾ ತೊಂದರೆಗಳ ನಿವಾರಣೆಯ ಬಗೆಗೆ ನಿರ್ಣಯುವೊಂದನ್ನು ಶ್ರೀ ಎನ್. ಎನ್. ಚಂದೂರರು ಮಂಡಿಸಿದರು. ಶ್ರೀ ವೀರಕೇಸರಿ ಸೀತಾರಾಮ ಶಾಸ್ತ್ರಿಗಳು ನಿರ್ಣಯುವನ್ನು ಪುಷ್ಟೀಕರಿಸಿದರು. ಅವರು, "ರೈತರು ಉದ್ಧಾರ ವಾಗಬೇಕೆಂದು ರಾಷ್ಟ್ರಕೂಟಕ್ಕೆ ಮನಸ್ಸಿದ್ದರೆ ಈ ನಿರ್ಣಯಕ್ಕೆ ಬೆಂಬಲಕೊಡಬೇಕು. ರೈತರ ಕಷ್ಟ ಪರಿಹಾರವೇ ಜವಾಬ್ದಾರಿ ಸರಕಾರದ ಉದ್ದೇಶ" ಎಂದು ಸ್ಪಷ್ಟ ಪಡಿಸಿದರು. ಈ ನಿರ್ಣಯು ವಿಷಯ ನಿಯಾಮಕ ಸಮಿತಿಯಲ್ಲಿ ತಿರಸ್ಕೃತ ವಾಗಿತ್ತು. ಸಭಾಧ್ಯಕ್ಷರು "ನಿರ್ಣಯುದ ಅರ್ಥವನ್ನು ಗ್ರಹಿಸಿ ಮಾನ್ಯ ಸಭಾಸದರು ಮನ್ನಣೆ ಕೊಡಬೇಕು" ಎಂದು ಪ್ರಾರ್ಥಿಸಿದರು. ಶ್ರೀ ಬಾಗೇಮನೆ ದೇವೇ ಗೌಡರು ನಿರ್ಣಯುವನ್ನು ವಿರೋಧಿಸಿ, "ಈ ನಿರ್ಣಯುವನ್ನು ಒಪ್ಪಿಕೊಂಡರೆ ರೈತರೂ ಇತರೆ ಸಾಹುಕಾರ ಜನರೂ ದ್ವೇಷವನ್ನು ಕಟ್ಟಿಕೊಂಡಂತಾಗುತ್ತದೆ" ಎಂದು ವಿವರಿಸಿದರು. ಶ್ರೀ ತಗಡೂರು ರಾಮಚಂದ್ರರಾವ್ ಅವರು ನಿರ್ಣಯು ವನ್ನು ಸಮರ್ಥಿಸಿದರು. "ಈ ನಿರ್ಣಯುವು ಸಾಧುವೂ ಆವಶ್ಯಕವೂ ಆಗಿದೆ. ಅದನ್ನು ವಿರೋಧಿಸುವುದು ದೇಶದ್ರೋಹಕರವಾದುದು. ಎಲ್ಲರೂ ನಿರ್ಣಯಕ್ಕೆ ಬೆಂಬಲ ಕೊಡಬೇಕು" ಎಂದು ಶ್ರೀ ತಗಡೂರರು ಪ್ರಾರ್ಥಿಸಿದರು. ಶ್ರೀ ಟಿ. ಸುಬ್ರಹ್ಮಣ್ಯಂ ಅವರು, "ಇಂತಹ ನಿರ್ಣಯುವನ್ನು ವಿರೋಧಿಸುವುದು ದೇಶದ ಹಿತವನ್ನೂ ಕಲ್ಯಾಣವನ್ನೂ ಕೋರುವವರ ಲಕ್ಷಣವಲ್ಲ. ಆರ್ಥಿಕ ದುಸ್ಥಿತಿಯಿಂದ ಬೆಂದು ಬೆಂಡಾಗಿರುವ ರೈತರ ಜೀವನವನ್ನು ಉತ್ತಮ ಪಡಿಸುವುದು ಅಗತ್ಯ. ಅದಕ್ಕೆ ಅಡ್ಡಿ ಒಡ್ಡುವುದು ಸೂಕ್ತವಲ್ಲ ಎಂದು ಸೂಕ್ತವಾಗಿ ವಾದಿಸಿದರು. ಮತಕ್ಕೆ ಹಾಕಿದಾಗ ಎಲ್ಲರೂ ನಿರ್ಣಯುವನ್ನು ಒಪ್ಪಿಕೊಂಡರು.

ಶ್ರೀ ಟಿ. ಎಸ್. ರಾಜಗೋಪಾಲ ಅಯ್ಯಂಗಾರ್ಯರ ನೇತೃತ್ವದಲ್ಲಿ ಸಿದ್ಧ ಪಡಿಸಿದ್ದ ಮೈಸೂರು ಕಾಂಗ್ರೆಸ್ ಸಂಸ್ಥೆಯ ರಚನಾಕ್ರಮವನ್ನು ಶ್ರೀ ಗುಬ್ಬಿ ರಾಜ

ಗೋಪಾಲಾಚಾರ್ಯರು ಸಭೆಯ ಮುಂದಿಟ್ಟರು. ಮೈಸೂರು ಸಂಸ್ಥಾನದಲ್ಲಿ ನೆಲೆಯೂರಬೇಕಾಗಿದ್ದ ಕಾಂಗ್ರೆಸ್ ಸಂಸ್ಥೆಯ ಮೊದಲ ರಚನಾಕ್ರಮವಿದು. ಶ್ರೀ ಕೆ. ಪಟ್ಟಾಭಿರಾಮನ್ ಅವರು ಮತ್ತು ಶ್ರೀ ಎ. ಎಸ್. ಶ್ರೀನಿವಾಸರಾಯರು "ರಚನಾಕ್ರಮ"ದ ಬಗೆಗೆ ಪುಷ್ಟೀಕರಿಸಿ ಮಾತನಾಡಿದರು.

ಅನಂತರ ಸಭೆಯನ್ನು ಮುಂದುವರಿಸಬೇಕೆನ್ನುವಷ್ಟರಲ್ಲಿ ರಾತ್ರಿ 9 ಗಂಟೆಗೆ ಸರಿಯಾಗಿ ಇದಕ್ಕಿದ್ದಂತೆ ಮಳೆ ಬಂದುದರಿಂದ ಅಧಿವೇಶನವನ್ನು ತಾತ್ಕಾಲಿಕವಾಗಿ ಮುಕ್ತಾಯ ಮಾಡಿ, ನಾಳೆ ಬೆಳಗ್ಗೆ 9 ಗಂಟೆಗೆ ಸಭೆ ಸೇರುವುದಾಗಿ ಘೋಷಿಸಲಾಯಿತು.

ರಾತ್ರಿ ಭೋಜನವಾದ ಮೇಲೆ ಕಾರ್ಯಕಾರಿ ಸಮಿತಿಯವರು ಸಭೆ ಸೇರಿ ನಾಳೆಯ ಕಾರ್ಯಕ್ರಮದ ಬಗೆಗೆ ಚರ್ಚಿಸಿದರು. ಶಿವಪುರದ ತುಂಬ ಸರಕಾರದ ಗೂಢಚಾರರಿದ್ದರು. ಆದ್ದರಿಂದ ಯಾವ ಕೆಲಸವನ್ನೂ ಅತ್ಯಂತ ದಕ್ಷತೆಯಿಂದ ಎಚ್ಚರಿಕೆಯಿಂದ ನಿರ್ವಹಿಸಲು ತೀರ್ಮಾನ ಕೈಗೊಳ್ಳಲಾಯಿತು. ಯಾವ ಅಹಿತಕರ ಘಟನೆಗೂ ಅವಕಾಶ ಕೊಡದ ಹಾಗೆ ಸತ್ಯಾಗ್ರಹವನ್ನು ಯಶಸ್ವಿಗೊಳಿಸಬೇಕೆಂದು ಕಾರ್ಯಕರ್ತರು ಪಣತೊಟ್ಟರು. ಧ್ವಜಾರೋಹಣದಲ್ಲಿ ಸ್ತ್ರೀಯರಿಗೂ ಅವಕಾಶ ಕೊಡಬೇಕೆಂದು ಶ್ರೀಮತಿ ಬಳ್ಳಾರಿ ಸಿದ್ದಮ್ಮನವರು ಕೇಳಿದ ವಿಷಯದ ಬಗೆಗೂ ಮಾತುಕತೆ ನಡೆಯಿತು. ಹೆಚ್ಚಿನ ಸಂಖ್ಯೆಯಲ್ಲಿ ದಸ್ತಗಿರಿಯಾದರೆ ಯಾರ್ಯಾರು ಮುಂದೆ ಬರಬೇಕು ಎಂಬುದರ ಬಗೆಗೂ ವಿಚಾರ ವಿನಿಮಯ ನಡೆದು ಧ್ವಜಾರೋಹಣ ಮಾಡಬೇಕಾದ ಮುಖಂಡರ ಹೆಸರುಗಳನ್ನು ಅನುಕ್ರಮವಾಗಿ ತೀರ್ಮಾನಿಸಲಾಯಿತು. ನಾಳೆ ಪೋಲೀಸರು ಹೇಗೆ ವರ್ತಿಸಬಹುದೆಂಬುದರ ಬಗೆಗೆ ಅಂದಾಜು ಮಾಡಲಾಯಿತಾದರೂ ಅದು ಪರಿಸ್ಥಿತಿಯನ್ನು ಅವಲಂಬಿಸಿದ ವಿಷಯ. ನಾಳೆಯ ಧ್ವಜಸತ್ಯಾಗ್ರಹ ಯಶಸ್ವಿಯಾದರೆ ಕಾರ್ಯಕರ್ತರ ಶ್ರಮ ಸಾರ್ಥಕವಾದಂತೆಯೇ.

ಪತ್ರಿಕೆಗಳಲ್ಲಿ ಪ್ರತಿಧ್ವನಿ

ಶಿವಪುರ ರಾಷ್ಟ್ರಕೂಟದ ಧ್ವಜ ಸತ್ಯಾಗ್ರಹದಲ್ಲಿ ಮತ್ತೆ ಮೂವರು ನಾಯಕರನ್ನು ಪೋಲೀಸರು ಬಂಧಿಸಿದ ವಿಷಯ, ಅವರಿಗಾದ ಶಿಕ್ಷೆ, ರಾಷ್ಟ್ರಧ್ವಜದ ಮಾನ ಕಾಯಲು ಮೈಸೂರಿನ ಮುಖಂಡರು ಮಾಡಿದ ಸಾಹಸದ ವಿಷಯಗಳು ಮಾರನೆಯ ದಿನ ಪತ್ರಿಕೆಗಳಲ್ಲಿ ಪ್ರತಿಧ್ವನಿಸಿದುವು. ಕಾಂಗ್ರೆಸ್ಸಿನ ಉದ್ದೇಶವನ್ನು ಅರ್ಥ ಮಾಡಿಕೊಂಡು ಮನ್ನಣೆ ಕೊಡದೆ, ಸರಕಾರ ದಮನ ನೀತಿಯನ್ನು ಅನುಸರಿಸಿ, ಮುಖಂಡರನ್ನು ಬಂಧಿಸಿದುದನ್ನು ಪತ್ರಿಕೆಗಳು ಖಂಡಿಸಿದುವು; ಶಿವಪುರದ ಕೊಲಾಹಲ

ಪರಿಸ್ಥಿತಿಯನ್ನು ಯಥಾವತ್ತಾಗಿ ದೇಶದ ಜನತೆಯ ಮುಂದಿಟ್ಟುವು. 'ಸಂಯುಕ್ತ ಕರ್ನಾಟಕ'ದ ಅಂದಿನ ಸಂಪಾದಕೀಯ ಲೇಖನ ಮನನೀಯವಾಗಿದೆ.

ಮೈಸೂರಿನಲ್ಲಿ ದಬ್ಬಾಳಿಕೆ*

"ಶಿವಪುರದಲ್ಲಿ ಅಶಿವ–ಅಶುಭ ಕಾರ್ಯದ ಪ್ರಾರಂಭವಾಯಿತು. ಮೈಸೂರಲ್ಲಿ ಪುನಃ ದಬ್ಬಾಳಿಕೆ ಮೈದೋರಿತು. ಯಾವ ಶರ್ತೂ ಹಾಕದೆ ರಾಜಕೀಯ ಕೈದಿಗಳನ್ನು ಸರಕಾರದವರು ಬಿಟ್ಟುದಕ್ಕೆ ಇನ್ನೂ ಎರಡು ತಿಂಗಳು ಕೂಡ ಆಗಿಲ್ಲ. ಅಷ್ಟರಲ್ಲಿ ಮತ್ತೆ ಈ ದಬ್ಬಾಳಿಕೆ ಪ್ರಾರಂಭ !

ಈ ದಬ್ಬಾಳಿಕೆ ರಾಜದ್ರೋಹಕ್ಕಾಗಿಯಲ್ಲ. ಕೇವಲ ರಾಷ್ಟ್ರೀಯ ಬಾವುಟವನ್ನು ಆರಿಸಕೂಡದು ಎಂಬ ಹಳೆಯ ಹಟವನ್ನು ಮೈಸೂರು ಸರಕಾರದವರು ಸಾಧಿಸಬೇಕೆಂದು ಈ ದಬ್ಬಾಳಿಕೆಯನ್ನು ಪ್ರಾರಂಭಿಸಿರುವರು. ರಾಷ್ಟ್ರೀಯ ಧ್ವಜವು ಇದೇನು ಒಂದು ಬೇರೆ ಸ್ವತಂತ್ರ ರಾಷ್ಟ್ರದ ಧ್ವಜವಲ್ಲ. ಇದು ಕೇವಲ ಸ್ವಾತಂತ್ರ್ಯ ಹಿತೈಷಿಗಳಾದ ದೀನ ಪ್ರಜೆಗಳ ಬಾವುಟವು. ಇದು ಅಹಿಂಸೆ ಸತ್ಯಗಳನ್ನು ಪ್ರತಿಪಾದಿಸುವದು. ಇದು ರಾಟಿಯಿಂದ ಅಂಕಿತವಾದುದು. ಶುದ್ಧಿ ಶೌರ್ಯ ಉತ್ಸಾಹಗಳನ್ನು ತೋರುವದು. ಇಲ್ಲವೆ ಹಿಂದೂ ಮುಸಲ್ಮಾನ ಹಾಗೂ ಇತರ ಅಲ್ಪಸಂಖ್ಯಾತರ ಪ್ರತೀಕವಾಗಿರುವದು. ಇಂಥ ಧ್ವಜವನ್ನೇರಿಸಿದರೆ ತಮ್ಮ ಗಂಡಭೇರುಂಡಕ್ಕೆ ಹಾನಿ, ಮೈಸೂರ ಚಕ್ರವರ್ತಿತ್ವಕ್ಕೆ ಅಪಮಾನ ಎಂಬ ವೃಥಾ ಕಲ್ಪನೆಯಿಂದ ಪ್ರೇರಿತರಾಗಿ ಅಧಿಕಾರಿಗಳು ಈ ಬಗೆಯ ದಬ್ಬಾಳಿಕೆಯನ್ನು ಪ್ರಾರಂಭಿಸುವದು ತೀರ ಅನ್ಯಾಯವೆಂಬುದು ಸ್ಪಷ್ಟ ಕಾಣಿಸುತ್ತದೆ.

ಮೇಲಾಗಿ ಸಾಧಾರಣ ಕಮಿಟಿಯ ಧೋರಣವನ್ನು ಕುರಿತು ತಮ್ಮ ಅಭಿಪ್ರಾಯಗಳನ್ನು ಶಾಂತರೀತಿಯಿಂದ ವ್ಯಕ್ತಪಡಿಸಲು ಕೂಡಿದ ಜನರ ಪ್ರತಿನಿಧಿಗಳ ಮೇಲೆ ಅಕಸ್ಮಾತ್ತಾಗಿ ಈ ತರದ ಹುಕುಮುಗಳನ್ನು ಹೊರಡಿಸುವದು ಶಿಷ್ಟಾಚಾರಕ್ಕೆ ಕೂಡ ಸಮ್ಮತವಾಗದು. ಮುಖ್ಯ ಹಾಗೂ ಪ್ರಸ್ತುತವಾದ ವಿಷಯವನ್ನು ಕುರಿತು ಶಾಂತ ರೀತಿಯಿಂದ, ಕಾಯಿದೆಗೆ ಅನುಗುಣವಾದ ರೀತಿಯಿಂದ, ವಿಚಾರಿಸಲು ಕೂಡಿದ ಜನರ ಮೇಲೆ ಇಂಥ ಕಟ್ಟಳೆಯನ್ನು ಎಸೆಯುವದು ಸುಧಾರಿಸಿದ ಸರಕಾರಕ್ಕೆ ಶೋಭಿಸದು. ಅಲ್ಲಿ ರಾಷ್ಟ್ರಧ್ವಜವು ಏರಿಸಲ್ಪಟ್ಟಿದ್ದರೆ ಮೈಸೂರ ಸರಕಾರದ ಘನತೆಗೆ ಯಾವ ಕುಂದೂ ಬರುತ್ತಿರಲಿಲ್ಲ. ಇಷ್ಟೇ ಅಲ್ಲ. ಅದಕ್ಕೆ ಒಂದು ಬಗೆಯ ಹೆಚ್ಚಿನ ಮೇಲ್ಮೆಯೇ ಉಂಟಾಗುತ್ತಿತ್ತು.

---

*ಸಂಯುಕ್ತ ಕರ್ನಾಟಕ, 13-4-1938.

ಈ ಬಗೆಯ ಹುಕುಮು ಜಾರೀ ಮಾಡಿ, ಅಲ್ಲಿ ಕೂಡಿದ ಮುಖ್ಯಸ್ಥರನ್ನು ಬಂಧಿಸಿ ಅವರಿಗೆ ಶಿಕ್ಷೆ ಕೊಟ್ಟದ್ದರಿಂದ ಮೈಸೂರ ಅಧಿಕಾರಿಗಳು ಕ್ಷುದ್ರತನವನ್ನೇ ತೋರಿರಿದಂತಾಗಿದೆ. ಇನ್ನಾದರೂ ಈ ಬಗೆಯ ಹುಕುವನ್ನು ತಿರುಗಿ ತೆಗೆದುಕೊಂಡು ರಾಷ್ಟ್ರಕೂಟವು ಸುಸೂತ್ರವಾಗಿ ಕೂಡುವಂತೆ ಹಾಗೂ ಜನರು ತಮ್ಮ ಅಭಿಪ್ರಾಯ ಗಳನ್ನು ಅನಿರ್ಬಂಧವಾಗಿ ವ್ಯಕ್ತಪಡಿಸುವಂತೆ ಅನುವುಗೊಟ್ಟರೆ ಮೈಸೂರಿನ ಹೆಸರಿಗೆ ಪುನಃ ಕಳೆಯೇರಬಹುದು."

ಮೈಸೂರು ವಿದ್ಯಾರ್ಥಿ ಸಮ್ಮೇಳನ.

ದಿನಾಂಕ 12-4-1938 ರ ಬೆಳಗ್ಗೆ 'ಯುವಜನ ಸಮ್ಮೇಳನ' ದ ಚಪ್ಪರದಲ್ಲಿ 'ಮೈಸೂರು ವಿದ್ಯಾರ್ಥಿ ಸಮ್ಮೇಳನ' ನಡೆಯಿತು. ಸಂಸ್ಥಾನದ ವಿವಿಧ ವಿದ್ಯಾರ್ಥಿ ಪರಿಷತ್ತಿನ ಪ್ರತಿನಿಧಿಗಳು ಸಮ್ಮೇಳನದಲ್ಲಿ ಭಾಗವಹಿಸಿದರು. ಬೆಂಗಳೂರಿನ ವಕೀಲ ರಾದ ಶ್ರೀ ವಿ. ಕೆ. ಗೋವಿಂದರಾಜುಲು ಅವರು ಅಧ್ಯಕ್ಷತೆ ವಹಿಸಿದ್ದರು. ವಿದ್ಯಾರ್ಥಿಗಳಿಗೆ ಸಂಬಂಧಿಸಿದ ಏನೆಲ್ಲ ಸಮಸ್ಯೆಗಳ ಬಗೆಗೆ ಸೂಕ್ತವಾದ ಪರಿಹಾರ ವನ್ನು ಕಂಡುಕೊಳ್ಳುವುದು ವಿದ್ಯಾರ್ಥಿ ಸಮ್ಮೇಳನದ ಮುಖ್ಯ ಉದ್ದೇಶವಾಗಿತ್ತು. 1938 ನೇ ಜುಲೈ ಕೊನೆಯ ವಾರದಲ್ಲಿ "ಅಖಿಲ ಮೈಸೂರು ವಿದ್ಯಾರ್ಥಿ ಸಮ್ಮೇ ಳನ"ದ ಪ್ರಥಮ ಅಧಿವೇಶನವನ್ನು ನಡೆಯಿಸಬೇಕೆಂದೂ ಆ ಸಮ್ಮೇಳನದ ಅಧ್ಯಕ್ಷತೆಗೆ ಶ್ರೀಮತಿ ಸರೋಜಿನಿ ದೇವಿಯವರನ್ನು ಆಹ್ವಾನಿಸಬೇಕೆಂದೂ ನಿರ್ಣಯಿ ಮಾಡಲಾಯಿತು. ಮೈಸೂರು ವಿದ್ಯಾರ್ಥಿ ಸಮ್ಮೇಳನವನ್ನು ಅಖಿಲ ಭಾರತ ವಿದ್ಯಾರ್ಥಿ ಸಮ್ಮೇಳನಕ್ಕೆ ಏಕೀಕರಿಸಬೇಕೆಂದು ಅಭಿಪ್ರಾಯ ಪಡಲಾಯಿತು.

ವಿದ್ಯಾರ್ಥಿ ಸಮ್ಮೇಳನಕ್ಕೆ ಸಂಬಂಧಿಸಿದಂತೆ ಸ್ವಾಗತ ಸಮಿತಿಯನ್ನು ರಚಿಸ ಲಾಯಿತು. ಅದರ ಪದಾದಿಕಾರಿಗಳು: ಶ್ರೀ ಎಲ್. ವಿ. ರಾಜಗೋಪಾಲ್ (ಅಧ್ಯಕ್ಷರು), ಶ್ರೀ ಕೆ. ಎಂ. ಜೆ. ಸಾದಿಖ್, ಶ್ರೀ ಸುಬ್ರಹ್ಮಣ್ಯರಾಜ ಅರಸ್ (ಕಾರ್ಯದರ್ಶಿಗಳು), ಶ್ರೀ ಟಿ. ಮಾದಪ್ಪಗೌಡ (ಖಜಾಂಚಿ).

ಏಪ್ರಿಲ್ 13, 1938

13-4-1938 ರ ಬೆಳಗ್ಗೆ ಧ್ವಜಾರೋಹಣಕ್ಕಾಗಿ ಎಲ್ಲಾ ಸಿದ್ಧತೆಗಳು ನಡೆದುವು. ಶ್ರೀ ಪಾರ್ಥನಾರಾಯಣ ಪಂಡಿತರು ಸ್ವಯಂ ಸೇವಕರ ಮುಖಂಡ ರಾಗಿದ್ದರು. ಹಿಂದಿನ ದಿನಗಳಂತೆಯೇ ಸಾವಿರಾರು ಜನರು ಧ್ವಜ ಮೈದಾನದಲ್ಲಿ ಸೇರಿದ್ದರು. ಸಮಯಕ್ಕೆ ಸರಿಯಾಗಿ ಶಸ್ತ್ರಸಜ್ಜಿತ ಪೋಲೀಸು ಪಡೆಯೂ ಸಾಮಾನ್ಯ ಪೋಲೀಸರೂ ಬಂದು ಸಿದ್ಧರಾಗಿ ನಿಂತರು. ಬೆಳಗ್ಗೆ 8 ಗಂಟೆಗೆ ಸರಿ

ಯಾಗಿ ಶ್ರೀ ಕೆ. ಟಿ. ಭಾಷ್ಯಂ ಅಯ್ಯಂಗಾರ್ಯರು ಮುಖಂಡರು ಮತ್ತು ಸ್ವಯಂ ಸೇವಕರ ಜೊತೆಯಲ್ಲಿ ಗಂಭೀರವಾಗಿ ಧ್ವಜ ವೇದಿಕೆಯ ಬಳಿಗೆ ಬಂದರು. ಜಿ.ಒ.ಸಿ. ಯವರು ಧ್ವಜಾರೋಹಣ ಮಾಡಬೇಕೆಂದು ಪ್ರಾರ್ಥಿಸಿಕೊಂಡ ಮೇಲೆ ವೇದಿಕೆ ಯನ್ನು ಏರಿದರು. ಎಂದಿನಂತೆ ಪೋಲೀಸ್ ಅಧಿಕಾರಿಗಳು ವೇದಿಕೆಗೆ ಹತ್ತಿರದಲ್ಲಿ ನಿಂತಿದ್ದರು. ಶ್ರೀ ಭಾಷ್ಯಂ ಅವರು ಧ್ವಜಾರೋಹಣ ಮಾಡುವುದಾಗಿ ಹೇಳಿ ಅನುವಾದಾಗ ಪೋಲೀಸ್ ಅಧಿಕಾರಿಗಳು ತಡೆದರು. 'ಸರಕಾರದ ಆಜ್ಞೆಯನ್ನು ಉಲ್ಲಂಘಿಸುತ್ತೇನೆ' ಎಂದು ಹೇಳಿದಾಗ ಪೋಲೀಸರು ಶ್ರೀ ಭಾಷ್ಯಂ ಅವರನ್ನು ದಸ್ತಗಿರಿ ಮಾಡಿದರು. ಶ್ರೀ ಭಾಷ್ಯಂ ಅವರು ತಮ್ಮ ಸ್ಥಾನಕ್ಕೆ ಶಿವಮೊಗ್ಗೆಯ ಶ್ರೀ ಹೆಚ್. ಸಿದ್ಧಯ್ಯನವರನ್ನು ನೇಮಿಸಿ ತಾವು ಪೋಲೀಸರ ವಶವಾದರು.

ಶ್ರೀ ಹೆಚ್. ಸಿದ್ಧಯ್ಯನವರು ವೇದಿಕೆಯ ಮೇಲೆ ಬಂದು 'ಧ್ವಜಾರೋಹಣ ಮಾಡುತ್ತೇನೆ' ಎಂದು ಘೋಷಿಸಿ ಧ್ವಜಕ್ಕೆ ಕೈಯಿಟ್ಟಾಗ ದಸ್ತಗಿರಿಯಾದರು. ತಮ್ಮ ಸ್ಥಾನಕ್ಕೆ ಶ್ರೀಮತಿ ಬಳ್ಳಾರಿ ಸಿದ್ಧಮ್ಮನವರನ್ನು ನೇಮಿಸಿ ಶ್ರೀ ಸಿದ್ಧಯ್ಯ ನವರು ಪೋಲೀಸರ ವಶವಾದರು. ಶಿವಪುರ ರಾಷ್ಟ್ರಕೂಟದಲ್ಲಿ ಮೊದಲ ಬಾರಿಗೆ ಧ್ವಜಾರೋಹಣ ಮಾಡಲು ಸ್ತ್ರೀಯೊಬ್ಬರು ಮುಂದೆ ಬಂದಂತಾಯಿತು. ಇವರ ವಿಷಯದಲ್ಲಿ ಪೋಲೀಸರು ಹೇಗೆ ನಡೆದುಕೊಳ್ಳುತ್ತಾರೋ ಎಂದು ಜನರಿಗೆ ಕುತೂಹಲ ಉಂಟಾಯಿತು. ಶ್ರೀಮತಿ ಸಿದ್ಧಮ್ಮನವರು ದಿಟ್ಟತನದಿಂದ ವೇದಿಕೆಯ ಮೇಲೆ ಬಂದು ಸರಕಾರದ ಆಜ್ಞೆಯನ್ನು ಉಲ್ಲಂಘಿಸುವುದಾಗಿ ಘೋಷಿಸಿ ಧ್ವಜಾರೋಹಣ ಮಾಡಿ ಧ್ವಜಕ್ಕೆ ವಂದನೆ ಸಲ್ಲಿಸಿದರು. 60 ಅಡಿಗಳ ಮೇಲೆ ಹೂಗಳನ್ನು ಚೆಲ್ಲಿ ರಾಷ್ಟ್ರಧ್ವಜ ಹಾರಾಡಿತು. ಜನರು ಸಂತೋಷದಿಂದ ಘೋಷಣೆ ಗಳನ್ನು ಕೂಗಿದರು. ಶ್ರೀಮತಿ ಟಿ. ಸುನಂದಮ್ಮನವರು 'ವಂದೇ ಮಾತರಂ' ಗೀತೆಯನ್ನು ಹಾಡಿದರು.

ಧ್ವಜಾರೋಹಣ ಮಾಡಿದ ಮೇಲೆ ಶ್ರೀಮತಿ ಬಳ್ಳಾರಿ ಸಿದ್ಧಮ್ಮನವರನ್ನು ದಸ್ತಗಿರಿ ಮಾಡಲಾಗಿ ಅವರು ತಮ್ಮ ಸ್ಥಾನಕ್ಕೆ ಶ್ರೀ ಹೆಚ್. ಬಿ. ಗುಂಡಪ್ಪಗೌಡ ರನ್ನು ನೇಮಿಸಿ ತಾವು ಪೋಲೀಸರ ವಶವಾದರು. ಗಂಡಸರ ಹಾಗೆ ಧೈರ್ಯವನ್ನು ಪ್ರದರ್ಶಿಸಿ ದಸ್ತಗಿರಿಯಾದ ಶ್ರೀಮತಿ ಸಿದ್ಧಮ್ಮನವರ ಬಗೆಗೆ ಎಲ್ಲರಿಗೂ ಗೌರವ ಉಂಟಾಯಿತು. ದಸ್ತಗಿರಿಯಾದವರು ಪೋಲೀಸ್ ವ್ಯಾನಿಗೆ ತೆರಳುವಾಗ ಎಲ್ಲರಿಗೂ ಕೈಮುಗಿದು 'ಹೋಗಿ ಬರುವುದಾಗಿ' ಹೇಳಿದರು. ಅವರನ್ನು ಮಂಡ್ಯಕ್ಕೆ ಕರೆದುಕೊಂಡು ಹೋದರು.

ಮೈಸೂರಿನ ಜನರಿಗೆ ಭಾಷ್ಯಂ ಸಂದೇಶ

ದಸ್ತಗಿರಿಯಾದ ಸಂದರ್ಭದಲ್ಲಿ ಶ್ರೀ ಭಾಷ್ಯಂ ಅವರು ಜನರನ್ನು ಕುರಿತು

ಹೀಗೆ ಮಾತನಾಡಿದರು: "ಕಾಂಗ್ರೆಸ್ ಧ್ವಜ ನಮ್ಮ ಉಸಿರಾಟದ ಪ್ರತಿನಿಧಿಯಾಗಿದೆ. ನಾವು ಕಾಂಗ್ರೆಸ್ ಧ್ವಜವನ್ನು ಗೌರವಿಸುವುದರಿಂದ ಅದನ್ನು ಆರೋಹಣ ಮಾಡಿದ್ದೇವೆ. ಇದು ನಮ್ಮ ಸಂಘಶಕ್ತಿಯ ಕುರುಹು. ಇದು ನಾವು ನಮ್ಮಲ್ಲಿ ಬೆಳೆಸಿಕೊಳ್ಳಬೇಕಾದ ತ್ಯಾಗ ಮತ್ತು ನೋವುಗಳಿಂದ ಕೂಡಿದ ಮಾನವೀಯತೆಯ ಸಂಕೇತವಾಗಿದೆ. ಪರಿಶುದ್ಧವಾದ ಮನಸ್ಸಿನಿಂದ ಸತ್ಯ ಅಹಿಂಸೆಯ ನಂಬಿಕೆಗಳಿಂದ ದೃಢಮನಸ್ಕರಾಗಿ ನಾವು ಕಾರ್ಯೋನ್ಮುಖರಾಗಬೇಕು. ನಮ್ಮ ಹೋರಾಟದಿಂದ, ರಾಷ್ಟ್ರಧ್ವಜಾರೋಹಣದಿಂದ ಮೈಸೂರು ಮಹಾರಾಜರ ರಾಜತ್ವಕ್ಕೆ ಯಾವ ಅಡ್ಡಿಯೂ ಆಗುವುದಿಲ್ಲ. ಇದನ್ನು ನಾವು ಮತ್ತೆ ಮತ್ತೆ ಹೇಳುತ್ತಿದ್ದೇವೆ. ಕಾಂಗ್ರೆಸ್ ಧ್ವಜಾರೋಹಣಕ್ಕೆ ಸರಕಾರ ಪ್ರತಿಬಂಧಕಾಜ್ಞೆ ಹೊರಡಿಸಿರುವುದು ನ್ಯಾಯವಲ್ಲ. ಜನರಲ್ಲಿ ವಿರೋಧ ಪ್ರತಿಕ್ರಿಯೆ ಉಂಟಾಗಲು ಸರಕಾರವೇ ಕಾರಣವಾಗಿದೆ. ಧ್ವಜಾರೋಹಣಕ್ಕೆ ಅಡ್ಡಿಯೊಡ್ಡದೆ ಸರ್ಕಾರ ಬುದ್ಧಿವಂತಿಕೆಯಿಂದ ನಡೆದುಕೊಳ್ಳಬಹುದಾಗಿತ್ತು. ಈಗಲಾದರೂ ಸರಕಾರ ತನ್ನ ತಪ್ಪನ್ನು ತಿದ್ದಿಕೊಂಡು ಸಂಸ್ಥಾನದ ಅಶಾಂತ ಪರಿಸ್ಥಿತಿಯನ್ನು ಸರಿಪಡಿಸುವುದೆಂದು ಆಶಿಸುತ್ತೇನೆ. ರಾಜ್ಯದ ಎಲ್ಲ ಜನರೂ ತಿರುಗಿ ಬೀಳುವ ಮೊದಲು ಸರ್ಕಾರ ಎಚ್ಚೆತ್ತುಕೊಳ್ಳಬೇಕು. ಇಲ್ಲದಿದ್ದರೆ ಈಗಿನ ಪರಿಸ್ಥಿತಿ ಮುಂದುವರಿಯುತ್ತದೆ. ಕಳೆದ ಅಕ್ಟೋಬರ್ ತಿಂಗಳಿನಲ್ಲಿ ನಡೆದ ರೆಪ್ರೆಸೆಂಟಿಟಿವ್ ಅಸೆಂಬ್ಲಿಯಲ್ಲಿ ರಾಷ್ಟ್ರಧ್ವಜಕ್ಕೆ ಸಂಬಂಧಿಸಿದಂತೆ ದಿವಾನರು ನೀಡಿದ ಹೇಳಿಕೆಯನ್ನು ಸರಕಾರ ಮರೆತಿದೆ. ಶಿವಪುರದಲ್ಲಿ ಖಾಸಗಿ ಜಮೀನಿನಲ್ಲಿ ಧ್ವಜಾರೋಹಣ ನಡೆದಿದೆ. ಕಾಂಗ್ರೆಸ್ ಕಾರ್ಯಕ್ರಮಗಳಲ್ಲಿ ಧ್ವಜಾರೋಹಣ ಮಾಡುವುದು ನ್ಯಾಯಬದ್ಧವಾಗಿದೆ. ಹೀಗಿದ್ದೂ ಸರಕಾರ ಪ್ರತಿಬಂಧಕಾಜ್ಞೆ ಹೊರಡಿಸಿ, ಧ್ವಜಾರೋಹಣ ಮಾಡಿದವರನ್ನು ದಸ್ತಗಿರಿ ಮಾಡಿರುವುದು ಬುದ್ಧಿವಂತಿಕೆಯಲ್ಲ.

ನಮ್ಮ ಕರ್ತವ್ಯ ಸ್ಪಷ್ಟವಾಗಿದೆ. ನಾವು ಪ್ರತಿಬಂಧಕಾಜ್ಞೆಯನ್ನು ಉಲ್ಲಂಘಿಸಲು ತೀರ್ಮಾನಿಸಿ, ಹಾಗೆಯೇ ನಡೆದುಕೊಂಡಿದ್ದೇವೆ. ದೇಶದಲ್ಲಿ ಶಾಂತಿಯ ವಾತಾವರಣವನ್ನು ಉಂಟುಮಾಡುವ ಹೊಣೆ ಈಗ ಸರಕಾರಕ್ಕೆ ಸೇರಿದ್ದು."

ಉಳಿದ ನಾಯಕರೂ ಕೂಡ ದಸ್ತಗಿರಿಯಾದ ಮೇಲೆ ಸರಕಾರದ ನೀತಿಯನ್ನು ಖಂಡಿಸಿ ತಮ್ಮ ಅಭಿಪ್ರಾಯನ್ನು ವ್ಯಕ್ತಪಡಿಸಿದರು.

ಧ್ವಜ ಸತ್ಯಾಗ್ರಹಿಗಳಿಗೆ ಶಿಕ್ಷೆ

ಧ್ವಜಾರೋಹಣ ಮಾಡಿ ಬಂಧಿತರಾದ ಮೂವರು ಮುಖಂಡರನ್ನೂ ಎಂದಿನಂತೆ ಮಂಡ್ಯದ ನ್ಯಾಯಾಲಯಕ್ಕೆ ಕರೆತರಲಾಯಿತು. ಆಗ ಬೆಳಗ್ಗೆ 9-45 ಗಂಟೆ. ವಿಶೇಷ ಪ್ರಥಮ ದರ್ಜೆಯ ಮ್ಯಾಜಿಸ್ಟ್ರೇಟರಾದ ಶ್ರೀ ಎಂ. ರಾಮಸ್ವಾಮಯ್ಯ

ನವರು ಬೆಳಗ್ಗೆ 11-15 ಗಂಟೆಯಲ್ಲಿ ವಿಚಾರಣೆ ನಡೆಸಿದರು. ವಕೀಲರಾದ ಶ್ರೀ ಪಿ. ಸೀತಾರಾಮಯ್ಯನವರು ನ್ಯಾಯಾಲಯದ ಕಲಾಪಗಳು ಕನ್ನಡದಲ್ಲಿ ನಡೆಯ ಬೇಕೆಂದು ನ್ಯಾಯಾಧೀಶರನ್ನು ಪ್ರಾರ್ಥಿಸಿಕೊಂಡರು. ಅನೇಕ ಸ್ವಯಂ ಸೇವಿಕೆ ಯರು ಹಾಜರಿದ್ದರು. ಕನ್ನಡದಲ್ಲಿ ವಿಚಾರಣೆ ನಡೆಯಿತು. ಮೈಸೂರ್ ಪೋಲೀಸ್ ಆಕ್ಟ್‌ನ 70 (ಎ) ಮತ್ತು 73 ನೇ ಸೆಕ್ಷನ್ ಪ್ರಕಾರ ಮೂವರು ಬಂಧಿತ ರಿಗೂ ಶಿಕ್ಷೆಯಾಯಿತು. ಅವರು ಅಪರಾಧಿಗಳೆಂದು ನ್ಯಾಯಾಧೀಶರು ಘೋಷಿಸಿ ದರು. ಅಪರಾಧಿಗಳು ಯಾವುದೇ ರೀತಿಯ ರಕ್ಷಣೆಯನ್ನೂ ಬಯಸಲಿಲ್ಲ. ವಿಧಿಸಿದ ಶಿಕ್ಷೆಯ ಕ್ರಮ ಹಿಗಿತ್ತು : ಶ್ರೀ ಕೆ. ಟಿ. ಭಾಷ್ಯಂ ಮತ್ತು ಶ್ರೀ ಹೆಚ್. ಸಿದ್ದಯ್ಯನವರಿಗೆ 4 ತಿಂಗಳು ಶಿಕ್ಷೆ ಮತ್ತು 200 ರೂಪಾಯಿ ದಂಡ. ದಂಡ ತೆರಲು ತಪ್ಪಿದರೆ ಮತ್ತೆ 20 ದಿನಗಳು ಶಿಕ್ಷೆ. ಶ್ರೀಮತಿ ಬಳ್ಳಾರಿ ಸಿದ್ದಮ್ಮನವರಿಗೆ 25 ದಿನ ಗಳ ಸಾದಾ ಕೈದಿನ ಶಿಕ್ಷೆ.

ಬಾರ್ ಅಸೋಸಿಯೇಷನ್ನಿನ ಅಧ್ಯಕ್ಷರಾದ ಶ್ರೀ ಜಿ. ದೇಶಾಜಿರಾವ್ ಅವರೂ ಹಾಜರಿದ್ದರು.

ಶ್ರೀ ಭಾಷ್ಯಂ ಅವರ ಪತ್ರಿಕಾ ಹೇಳಿಕೆ

ತುರಂಗಕ್ಕೆ ತೆರಳುವ ಮೊದಲು ಶ್ರೀ ಕೆ. ಟಿ. ಭಾಷ್ಯಂ ಅವರು ಪತ್ರಿಕೆಗಳಿಗೆ ಹೀಗೆ ಹೇಳಿಕೆ ನೀಡಿದರು. "ಮೈಸೂರ ಹೊರಗಿನ ಯಾವನೊಬ್ಬ ವ್ಯಕ್ತಿಯ ಸಹಾಯವನ್ನು ಅಪೇಕ್ಷಿಸುವೆವೆಂಬ ವಿಚಾರವನ್ನು ಯಾರೂ ತಳೆಯಬಾರದು. ರಾಷ್ಟ್ರಧ್ವಜದ ಪ್ರಶ್ನೆಯು ಈಗ ಮುಂದೆ ಬಂದಿದ್ದರೂ ಹೊಣೆಗಾರ ರಾಜ್ಯವನ್ನು ಗಳಿಸುವ ಪ್ರಶ್ನೆಯು ಎಂದಿಗೂ ಹಿಂದಕ್ಕೆ ಬೀಳಬಾರದು. ಸರ್ವ ಬಗೆಯ ಕಷ್ಟ ನಷ್ಟಗಳನ್ನು ಸಹಿಸಿಯೂ ನಾವು ರಾಷ್ಟ್ರಧ್ವಜದ ಮಾನವನ್ನು ರಕ್ಷಿಸಬೇಕು. ರಾಷ್ಟ್ರ ಧ್ವಜದ ಮರ್ಯಾದೆಯನ್ನು ರಕ್ಷಿಸುವುದಕ್ಕಾಗಿ ಮೈಸೂರಿನ ಪ್ರತಿಯೊಬ್ಬ ಸ್ತ್ರೀ ಪುರುಷನು ಸಿದ್ಧನಿರಬೇಕಾಗಿದೆ. ಮೈಸೂರು ಇದನ್ನೇ ಅಪೇಕ್ಷಿಸುತ್ತಿರುವುದು. ರಾಷ್ಟ್ರಧ್ವಜವನ್ನು ಒಂದು ಇಂಚು ಕೂಡ ಕೆಳಗಿಳಿಸುವುದಕ್ಕಿಂತ ಮೈಸೂರಿನಲ್ಲಿಯ 65 ಲಕ್ಷ ಜನರು ತುರಂಗಕ್ಕೆ ಹೋಗುವುದೊಳ್ಳಿತು. ರಾಷ್ಟ್ರಧ್ವಜವೇ ನಮ್ಮ ಜೀವನ ಸರ್ವಸ್ವವು. ಅದರ ಅಪಮಾನವೇ ನಮ್ಮ ನಿಧನವು."

ಹಿಂದಿನ ರಾತ್ರಿ ತೀರ್ಮಾನಿಸಿದಂತೆ, ಧ್ವಜಾರೋಹಣವಾದ ಮೇಲೆ ಧ್ವಜ ಮೈದಾನದಲ್ಲಿ ಉರಿಯುವ ಬಿಸಿಲಿನಲ್ಲಿಯೇ ಬಹಿರಂಗ ಸಭೆ ನಡೆಯಿತು. ಹಿಂದಿನ ದಿನ ಉಳಿದಿದ್ದ ನಿರ್ಣಯಗಳ ಬಗೆಗೆ ಚರ್ಚೆ ನಡೆಯಿತು. ಅಂದಿನ ಬಹಿರಂಗ ಅಧಿವೇಶನದಲ್ಲಿ ಮುಖ್ಯವಾಗಿ ಚರ್ಚೆಯಾದ ವಿಷಯ ಇದು : ಅಖಿಲ ಮೈಸೂರು ಕಾರ್ಯನಿರ್ವಾಹಕ ಸಮಿತಿಯ ಸದಸ್ಯರಾಗಿದ್ದವರು ಮೈಸೂರು ಪ್ರತಿನಿಧಿ ಸಭೆ

ಅಥವಾ ಮೈಸೂರು ನ್ಯಾಯವಿಧಾಯಕ ಸಭೆಯ ಸದಸ್ಯರಾಗಿರಬೇಕೆ ಅಥವಾ ಬೇಡವೆ? ಬಹಳ ಹೊತ್ತು ಚರ್ಚೆಯಾದ ಮೇಲೆ ಎರಡೂ ಕಡೆಯ ಸಮಿತಿಗಳಲ್ಲೂ ಸದಸ್ಯರಾಗಿರಬಹುದು ಎಂದು ನಿರ್ಣಯವು ಬಹುಮತದೊಡನೆ ಅಂಗೀಕಾರವಾಯಿತು. ಉಳಿದ ನಿರ್ಣಯಗಳು ಹೆಚ್ಚು ವಾದ ವಿವಾದವಿಲ್ಲದೆ ಒಪ್ಪಿಗೆ ಪಡೆದುವು.

ಶಿವಪುರ ರಾಷ್ಟ್ರಕೂಟದ ನಿರ್ಣಯಗಳು

ಶಿವಪುರದಲ್ಲಿ ನಡೆದ ಮೈಸೂರು ಕಾಂಗ್ರೆಸ್‌ನ ಪ್ರಥಮ ಮಹಾಧಿವೇಶನದಲ್ಲಿ ಬಹುಮತದೊಡನೆ ಅಂಗಿಕೃತವಾದ ಎಲ್ಲ ನಿರ್ಣಯಗಳ ಪೂರ್ಣ ಪಾಠ ಹೀಗಿದೆ:

11–4–1938 ರಂದು ಅಂಗೀಕರಿಸಿದ ನಿರ್ಣಯಗಳು

1) ರಾಷ್ಟ್ರಧ್ವಜದ ಕೀರ್ತಿ ಗೌರವಗಳನ್ನು ಕಾಪಾಡುವುದರಲ್ಲಿ ಇಂದು ಕಾರಾಗೃಹಕ್ಕೆ ತೆರಳಿದ ನಮ್ಮ ಮುಖಂಡರುಗಳಾದ ಶ್ರೀ ಸಿದ್ದಲಿಂಗಯ್ಯನವರಿಗೂ ದಳಪತಿ ಶ್ರೀ ಎಂ. ಎನ್. ಜೋಯಿಸರಿಗೂ ಈ ರಾಷ್ಟ್ರಕೂಟವು ತನ್ನ ಹೃತ್ಪೂರ್ವಕವಾದ ಅಭಿನಂದನೆಗಳನ್ನು ಅರ್ಪಿಸುತ್ತದೆ. ಮತ್ತು ದೇಶವು ಅವರಿಗೆ ಬೆಂಬಲವೀಯುವುದಾಗಿ ಆಶ್ವಾಸನೆ ಕೊಡುತ್ತದೆ.

2) ಶ್ರೀ ಬಿ. ಎನ್. ಗುಪ್ತರನ್ನು ಸಂಸ್ಥಾನದಿಂದ ಗಡೀಪಾರು ಮಾಡಿದುದರಿಂದ, ನಾಗರೀಕ ಹಕ್ಕು ಬಾಧ್ಯತೆಗಳಿಗೆ ಸ್ಪಷ್ಟವಾಗಿ ಲೋಪವನ್ನುಂಟುಮಾಡಿದಂತಾಗಿದೆಯೆಂದು ಈ ರಾಷ್ಟ್ರಕೂಟವು ಅಭಿಪ್ರಾಯಪಡುತ್ತದೆಯಲ್ಲದೆ, ಆ ಗಡೀಪಾರು ಆಜ್ಞೆಯನ್ನು ತತ್‌ಕ್ಷಣ ಹಿಂದಕ್ಕೆ ತೆಗೆದುಕೊಳ್ಳಬೇಕೆಂದು ಸರಕಾರವನ್ನು ಒತ್ತಾಯ ಪಡಿಸುತ್ತದೆ.

3) ತಿರುವಾಂಕೂರು ಸಂಸ್ಥಾನದಲ್ಲಿ ಶಾಂತಿ ಮತ್ತು ನ್ಯಾಯಬದ್ಧವಾದ ಮಾರ್ಗದಿಂದ ಜವಾಬ್ದಾರಿ ಸರಕಾರ ಸ್ಥಾಪನೆಗಾಗಿ ನಡೆಯಿಸುತ್ತಿರುವ ಚಳುವಳಿಯನ್ನು ನಾಶಗೊಳಿಸುವುದಕ್ಕಾಗಿ ತಿರುವಾಂಕೂರು ಸರಕಾರದವರು ಕೈಗೊಂಡಿರುವ ದಬ್ಬಾಳಿಕೆ ನೀತಿಯನ್ನು ಈ ರಾಷ್ಟ್ರಕೂಟವು ತೀವ್ರವಾಗಿ ಖಂಡಿಸುತ್ತದೆ. ಮತ್ತು ಜನತೆಯು ಈ ಚಳುವಳಿಯಲ್ಲಿ ತನ್ನ ಸಹಾನುಭೂತಿಯನ್ನು ವ್ಯಕ್ತಪಡಿಸುತ್ತದೆ.

4) ಮಾನ್ಸ, ಜಯಪುರ, ರಾಮಗಿರಿ ಮುಂತಾದ ಸಂಸ್ಥಾನಗಳ ಪ್ರಜೆಗಳು ತಮ್ಮ ಹಕ್ಕು ಬಾಧ್ಯತೆಗಳ ರಕ್ಷಣೆಗಾಗಿ ನಡೆಸುತ್ತಿರುವ ಹೋರಾಟಕ್ಕೆ ಈ ರಾಷ್ಟ್ರಕೂಟವು ತನ್ನ ಹೃತ್ಪೂರ್ವಕವಾದ ವಂದನೆಗಳನ್ನು ಅರ್ಪಿಸುತ್ತದೆ. ಮತ್ತು ಸಹಾನುಭೂತಿಯನ್ನು ವ್ಯಕ್ತಪಡಿಸುತ್ತದೆ.

5) ಫೆಡರೇಷನ್ ಯೋಜನೆಗೆ ಮೈಸೂರು ಕಾಂಗ್ರೆಸ್ಸಿನ ವಿರೋಧವೇನೂ ಇಲ್ಲ. ಆದರೆ ನಿಜವಾದ ಫೇಡರೇಷನ್ ಬರಬೇಕೆಂದು ಅದರ ಆಕಾಂಕ್ಷೆ. ಹಾಗಾಗ ಬೇಕಾದರೆ ಸಾಮಾನ್ಯವಾಗಿ ಒಂದೆ ಮಟ್ಟದ ಸ್ವಾತಂತ್ರ್ಯ ಉಳ್ಳ ಮತ್ತು ಪೌರ ಹಕ್ಕು ಬಾಧ್ಯತೆಗಳುಳ್ಳ ಭಾಗಗಳು ಫೆಡರೇಷನ್ ವ್ಯವಸ್ಥೆಯನ್ನು ಸೇರಬೇಕು. ಫೆಡರೇಷನ್ನಿಗೆ ಸೇರುವ ಆಲೋಚನೆ ಮೈಸೂರಿಗೆ ಇರುವುದಾದರೆ ಪ್ರಜಾಪ್ರಭುತ್ವ ಲಕ್ಷಣಗಳುಳ್ಳ ಸಂಸ್ಥೆಗಳನ್ನು ಸ್ಥಾಪಿಸುವ ವಿಚಾರದಲ್ಲಿ ಬ್ರಿಟಿಷ್ ಪ್ರಾಂತಗಳ ಮಟ್ಟಕ್ಕೆ ಏರಬೇಕು ; ಜವಾಬ್ದಾರಿ ಸರಕಾರ ಸ್ಥಾಪಿಸಬೇಕು ; ಜನರ ಹಕ್ಕು ಬಾಧ್ಯತೆಗಳನ್ನು ಉಳಿಸಿಕೊಡಬೇಕು. ಮತ್ತು ಫೆಡರಲ್ ಶಾಸನ ಸಭೆಗಳಿಗೆ ಚುನಾಯಿತ ಪ್ರತಿನಿಧಿಗಳನ್ನು ಕಳುಹಿಸುವ ಹಕ್ಕನ್ನು ಕೊಡಬೇಕು. ಇಲ್ಲದಿದ್ದರೆ ಈಗ ಆಲೋಚಿತವಾಗಿರುವ ಫೆಡರಲ್ ವ್ಯವಸ್ಥೆಯು ದೇಶದಲ್ಲಿ ಐಕ್ಯವನ್ನು ಸ್ಥಾಪಿಸುವುದಕ್ಕೆ ಬದಲಾಗಿ ಬೇರೆ ಬೇರೆಯಾಗುವ ಮನೋಭಾವವನ್ನು ಬೆಳೆಸಿ ಕಿತ್ತಾಟಕ್ಕೆ ಅವಕಾಶವೀಯುತ್ತದೆ. ಆದ್ದರಿಂದ ಈಗ ನಮ್ಮ ಮೇಲೆ ಹೊರಿಸಲು ಯತ್ನಿಸಿರುವ ಫೆಡರೇಷನ್ ವ್ಯವಸ್ಥೆಯನ್ನು ಮಾತ್ರವಲ್ಲದೆ, ಮೈಸೂರಿನಲ್ಲಿ ಜವಾಬ್ದಾರಿ ಸರ್ಕಾರವು ಸ್ಥಾಪಿಸಲ್ಪಡದಿರುವಾಗ ಆ ಫೆಡರೇಷನ್ನಿಗೆ ಸೇರಬೇಕೆಂಬ ಆಲೋಚನೆಯನ್ನೂ ಕೂಡ ಈ ಮೈಸೂರು ಕಾಂಗ್ರೆಸ್ಸಿನ ರಾಷ್ಟ್ರಕೂಟವು ಖಂಡಿಸುತ್ತದೆ. ಮತ್ತು ಫೆಡರೇಷನ್ ವ್ಯವಸ್ಥೆಯು ನಮ್ಮ ಮೇಲೆ ಬಲವಂತವಾಗಿ ಪ್ರಯೋಗಿಸುವ ಪ್ರಯತ್ನ ನಡೆಯುವುದಾದರೆ ಯಾವ ಕಾರ್ಯಕ್ರಮವನ್ನು ಅನುಸರಿಸಬೇಕೆಂಬುದನ್ನು ನಿರ್ಧರಿಸುವ ಅಧಿಕಾರವನ್ನು ಅಖಿಲ ಮೈಸೂರು ಕಾಂಗ್ರೆಸ್ ಸಮಿತಿಗೆ ಕೊಡಲಾಗಿದೆ. ಫೆಡರೇಷನ್ ವ್ಯವಸ್ಥೆಯ ವಿಚಾರವನ್ನು ಪರಿಶೀಲಿಸಲು ಮೈಸೂರು ಸರಕಾರದವರು ಒಂದು ಸಮಿತಿಯನ್ನು ನೇಮಕ ಮಾಡಿರುವುದನ್ನು ಕಾಂಗ್ರೆಸ್ ಒಪ್ಪುವುದಿಲ್ಲ. ಅದರೊಡನೆ ಸಹಕರಿಸಲಾಗದೆಂದು ಕಾಂಗ್ರೆಸ್ ನಿರ್ಧರಿಸುತ್ತದೆ.

12–4–1938 ರಂದು ಅಂಗೀಕರಿಸಿದ ನಿರ್ಣಯಗಳು

6) ರಾಷ್ಟ್ರಧ್ವಜದ ಗೌರವ ಕೀರ್ತಿಗಳನ್ನು ಕಾಪಾಡುವುದರಲ್ಲಿ ಇಂದು ಕಾರಾಗೃಹಕ್ಕೆ ತೆರಳಿದ ಮುಖಂಡರುಗಳಾದ ಶ್ರೀ ಹೆಚ್. ಸಿ. ದಾಸಪ್ಪ, ಶ್ರೀ ವಿ. ವೆಂಕಟಪ್ಪ, ಶ್ರೀ ಕೆ. ಚಂಗಲರಾಯರೆಡ್ಡಿಯವರುಗಳಿಗೆ ಈ ರಾಷ್ಟ್ರಕೂಟವು ತನ್ನ ಹೃತ್ಪೂರ್ವಕವಾದ ವಂದನೆಗಳನ್ನು ಅರ್ಪಿಸುತ್ತದೆ.

7) ಹನ್ನೆರಡು ವರುಷಗಳವರೆಗೆ ಆಂಧ್ರಪ್ರಾಂತೀಯ ಕಾಂಗ್ರೆಸ್ಸಿನ ಅಧ್ಯಕ್ಷರಾದ ದೇಶೋದ್ಧಾರಕ ಶ್ರೀ ಕೆ. ನಾಗೇಶ್ವರರಾವ್ ಪಂತಲುರವರ ನಿಧನಕ್ಕಾಗಿ ಈ ಸಭೆಯು ತನ್ನ ಅಪಾರವಾದ ದುಃಖವನ್ನು ವ್ಯಕ್ತಪಡಿಸುತ್ತದೆ. ಮತ್ತು ಅವರ ಆತ್ಮಕ್ಕೆ ಶಾಂತಿಯನ್ನು ಕೋರುತ್ತದೆ.

8) ದಕ್ಷಿಣ ಆಫ್ರಿಕಾ, ಕೆನಿಯಾ, ಪೂರ್ವ ಆಫ್ರಿಕಾ, ಉಗಂಡ, ಜಾನ್ಸಿಬಾರ್, ಮಲಯ, ಮಾರಿಷಸ್, ಫಿಜಿ ಮೊದಲಾದ ದೇಶಗಗಲ್ಲಿ ಭಾರತೀಯರು ಅನುಭವಿಸುತ್ತಿದ್ದ ಹಕ್ಕುಗಳೂ ಸ್ಥಾನಗಳೂ ಕ್ರಮಕ್ರಮವಾಗಿ ಕ್ಷೀಣಿಸುತ್ತಾ ಬರುತ್ತಿರುವುದನ್ನು ನೋಡಿ ಈ ರಾಷ್ಟ್ರಕೂಟವು ತನ್ನ ವಿಷಾದವನ್ನು ವ್ಯಕ್ತಪಡಿಸುತ್ತದೆ.

9) ಮೈಸೂರು ಸರ್ಕಾರದವರು ಸ್ಥಾಪಿಸಿರುವ ಸುಧಾರಣ ಸಮಿತಿಯ ವಿಚಾರವಾಗಿ ಮೈಸೂರು ಕಾಂಗ್ರೆಸ್ ರಾಷ್ಟ್ರಕೂಟವು ತನಗುಂಟಾಗಿರುವ ಅಪಾರ ಅತೃಪ್ತಿಯನ್ನು ವ್ಯಕ್ತಪಡಿಸುತ್ತದೆ. ಸಮಿತಿಗೆ ಸದಸ್ಯರನ್ನು ನೇಮಿಸಿರುವುದೂ ಮತ್ತು ಸಮಿತಿಯ ವಿಮರ್ಶೆಗೆ ಅರ್ಪಿಸಿರುವ ಅಂಶಗಳೂ ಸ್ವಲ್ಪವೂ ತೃಪ್ತಿಯನ್ನುಂಟುಮಾಡುವಂತಿಲ್ಲ. ಜವಾಬ್ದಾರಿ ಸರ್ಕಾರವನ್ನು ಸ್ಥಾಪಿಸಬಹುದೆಂದು ಶಿಫಾರಸು ಮಾಡುವ ಅವಕಾಶವು ಸಮಿತಿಗೆ ಇದೆಯೆಂದು ಸರಕಾರದಿಂದ ಅಧಿಕಾರಯುತವಾದ ಭರವಸೆ ದೊರಕಿದ ಹೊರತು, ಮೈಸೂರು ಕಾಂಗ್ರೆಸ್ ಒಂದು ರಾಜಕೀಯ ಸಂಸ್ಥೆಯೆಂಬುದನ್ನು ಒಪ್ಪಿಕೊಂಡ ವಿನಃ ಸುಧಾರಣಾ ಸಮಿತಿಯಲ್ಲಿ ಕಾಂಗ್ರೆಸ್ಸಿನ ಪ್ರಾತಿನಿಧ್ಯವನ್ನು ಪರಸ್ಪರ ಮಾತುಕತೆಗಳಿಂದ ಸರಿಪಡಿಸಿಕೊಂಡ ಹೊರತು, ಸುಧಾರಣಾ ಸಮಿತಿಯೊಡನೆ ಸಹಕರಿಸಲು ಯಾವ ವಿಧದಲ್ಲಿಯೂ ಸಾಧ್ಯವಿಲ್ಲವೆಂದು ಈ ರಾಷ್ಟ್ರಕೂಟವು ತೀರ್ಮಾನಿಸುತ್ತದೆ. ಜನರೆಲ್ಲರೂ ಇದೇ ರೀತಿ ವರ್ತಿಸಬೇಕೆಂದು ಸೂಚಿಸುತ್ತದೆ.

10) **ಮೂಲಭೂತವಾದ ಹಕ್ಕುಗಳು, ಕರ್ತವ್ಯಗಳು ಮತ್ತು ಆರ್ಥಿಕ ಕಾರ್ಯಕ್ರಮಗಳು :—**

ಅ) ಮೈಸೂರು ದೇಶದ ಪ್ರತಿಯೊಬ್ಬ ಪ್ರಜೆಗೂ ವಾಕ್ ಸ್ವಾತಂತ್ರ್ಯವೂ ಸಂಘ ಸ್ವಾತಂತ್ರ್ಯವೂ ಕಾನೂನು ಮತ್ತು ನೀತಿಗೆ ವಿರುದ್ಧವಲ್ಲದ ರೀತಿಯಲ್ಲಿ ತಸ್ತ್ರರಹಿತವಾಗಿ ಶಾಂತ ರೀತಿಯಿಂದ ಸಭೆ ಸೇರುವ ಹಕ್ಕೂ ಇರುತ್ತದೆ.

ಆ) ಪ್ರತಿಯೊಬ್ಬ ಪ್ರಜೆಗೂ ಸಾರ್ವಜನಿಕ ಶಾಂತಿಗೂ ನೀತಿಗೂ ವಿರುದ್ಧವಲ್ಲದ ಭಾವ ಸ್ವಾತಂತ್ರ್ಯದ ಮತ್ತು ಧಾರ್ಮಿಕ ಸ್ವಾತಂತ್ರ್ಯದ ಹಕ್ಕು ಇರುತ್ತದೆ.

ಇ) ಅಲ್ಪ ಸಂಖ್ಯಾತರ ಮತ್ತು ಬೇರೆ ಬೇರೆ ಭಾಷಾಯುಂತ ಪ್ರದೇಶಗಳ ಸಂಸ್ಕೃತಿ, ಭಾಷೆ, ಲಿಪಿ ಇವುಗಳಿಗೆ ರಕ್ಷಣೆ ಇರುತ್ತದೆ.

ಈ) ಕಾನೂನಿನ ದೃಷ್ಟಿಯಲ್ಲಿ ಜಾತಿಮತಗಳ, ಸ್ತ್ರೀ ಪುರುಷರ ಪಕ್ಷಪಾತ ವಿರಲಾಗದು.

ಉ) ಗಂಡಸು, ಹೆಂಗಸು ಎಂಬ ಭೇದದಿಂದಾಗಲೀ ಮತ ಜಾತಿ ಪಂಗಡಗಳ ವ್ಯತ್ಯಾಸದಿಂದಾಗಲೀ ಯಾವ ಪ್ರಜೆಗೂ ಉದ್ಯೋಗ, ಅಧಿಕಾರ, ಅಥವಾ ಗೌರವ ಪದವಿ, ವ್ಯಾಪಾರ ಉದ್ಯಮಗಳ ಅವಲಂಬನೆಗಳಿಗೆ ಇರತಕ್ಕ ಯಾವತ್ತೂ ಅಧಿಕಾರಕ್ಕೆ ಯಾವ ವಿಧವಾದ ಕುಂದೂ ಇರಕೂಡದು.

ಊ) ಯಾವ ಪ್ರಜೆಯೇ ಆಗಲೀ ಸಾರ್ವಜನಿಕ ಉದ್ಯೋಗ, ಅಧಿಕಾರ, ಗೌರವ ಪದವಿಗಳಿಗೂ ವ್ಯಾಪಾರ ಉದ್ಯಮಗಳ ಅವಲಂಬನೆಗೂ ಇರುವ ಹಕ್ಕಿಗೆ ಗಂಡಸು, ಹೆಂಗಸು ಎಂಬ ಕಾರಣದಿಂದಾಗಲೀ, ಮತ, ಜಾತಿ ಪಂಗಡಗಳ ಯಾವ ಲೋಪವೂ ಬರಕೂಡದು.

ಋ) ನಿಯಮ ಬದ್ಧವಾದ ನೀತಿಗನುಸಾರವಾಗಿ ಶಸ್ತ್ರಗಳನ್ನು ಇಟ್ಟು ಕೊಳ್ಳಲು ಮತ್ತು ಉಪಯೋಗಿಸಲು ಎಲ್ಲಾ ಪ್ರಜೆಗಳಿಗೂ ಅಧಿಕಾರವಿರುತ್ತದೆ.

ೠ) ಸಾರ್ವಜನಿಕ ಉಪಯೋಗಕ್ಕಾಗಿ ಬಿಟ್ಟಿರುವ ಅಥವಾ ಸರಕಾರ ಅಥವಾ ಸ್ಥಳೀಯ ಸಂಸ್ಥೆಗಳ ಹಣದಿಂದ ಏರ್ಪಾಟಾಗಿರುವ ಬಾವಿ, ಕೆರೆ, ರಸ್ತೆ, ಸ್ಕೂಲುಗಳು ಮತ್ತು ಸಾರ್ವಜನಿಕ ಪ್ರದೇಶಗಳ ವಿಷಯದಲ್ಲಿ ಎಲ್ಲಾ ಪ್ರಜೆಗಳಿಗೂ ಸಮಾನವಾದ ಹಕ್ಕುಬಾಧ್ಯತೆಗಳೂ ಜವಾಬ್ದಾರಿಗಳೂ ಇರತಕ್ಕದ್ದು.

ಎ) ಕಾನೂನಿಗೆ ಅನುಸಾರವಾಗಿ ವಿನಃ ಯಾವ ಪ್ರಜೆಯ ಸ್ವಾತಂತ್ರ್ಯಕ್ಕೂ ಲೋಪ ಬರಲಾಗದು. ಮತ್ತು ಅಂಥ ಪ್ರಜೆಯ ಸ್ವಾತಂತ್ರ್ಯಕ್ಕೂ ಮನೆ ಅಥವಾ ಆಸ್ತಿಯ ಪ್ರವೇಶಕ್ಕಾಗಲೀ, ಖೈದಿಗಾಗಲೀ, ಮುಟ್ಟುಗೋಲಿಗಾಗಲೀ ಅವಕಾಶ ವಿರಕೂಡದು.

ಏ) ಪ್ರಾಪ್ತ ವಯಸ್ಸಿನ ಪ್ರತಿಯೊಬ್ಬ ಪ್ರಜೆಗೂ ಮತ ಕೊಡುವ ಅಧಿಕಾರವಿರತಕ್ಕದ್ದು.

ಐ) ಸರ್ಕಾರವು ಮತ ಧರ್ಮಗಳ ವಿಚಾರದಲ್ಲಿ ತಾಟಸ್ಥ್ಯವನ್ನು ಅನುಸರಿಸ ತಕ್ಕದ್ದು.

ಒ) ಸರ್ಕಾರದವರು ಬಲಾತ್ಕಾರವೂ ಉಚಿತವೂ ಆದ ಪ್ರಾಥಮಿಕ ವಿದ್ಯಾಭ್ಯಾಸ ಪದ್ಧತಿಯನ್ನು ಏರ್ಪಡಿಸತಕ್ಕದ್ದು.

ಓ) ಸರಕಾರದವರು ಯಾವ ವಿಧವಾದ ಬಿರುದನ್ನೂ ಕೊಡಕೂಡದು.

ಔ) ಕಾನೂನಿನಲ್ಲಿ ಮರಣ ದಂಡನೆ ವಿಧಿಸುವ ಅಧಿಕಾರ ಇರಕೂಡದು.

11) ರೈತರ ಅಸಹನೀಯವಾದ ದಾರಿದ್ರ್ಯ ಮತ್ತು ಅವರ ಮೇಲಿರುವ ಅಗಾಧವಾದ ಸಾಲದ ಹೊರೆ ಇವುಗಳನ್ನು ಮೈಸೂರಿನ ಈ ರಾಷ್ಟ್ರಕೂಟವು

ಗಮನಕ್ಕೆ ತಂದುಕೊಂಡು ಎಲ್ಲಾ ಸ್ಥಳೀಯ ಕಾಂಗ್ರೆಸ್ ಸಮಿತಿಗಳು ಮತ್ತು ಪ್ರಜಾಪ್ರತಿನಿಧಿ ಸಭೆ ಮತ್ತು ನ್ಯಾಯ ವಿಧಾಯಕ ಸಭೆಗಳಲ್ಲಿರುವ ಕಾಂಗ್ರೆಸ್ ಸದಸ್ಯರುಗಳು ರೈತರ ನಾನಾ ತೊಂದರೆಗಳನ್ನು ನಿವಾರಣೆ ಮಾಡುವುದರ ಸಲುವಾಗಿ ಈ ಕೆಳಗಿನ ಕಾರ್ಯಕ್ರಮಗಳನ್ನು ಆಚರಣೆಗೆ ತರುವುದಕ್ಕಾಗಿ ಯೋಗ್ಯ ವಿಧಾನ ಗಳನ್ನು ತೆಗೆದುಕೊಳ್ಳಬೇಕೆಂದು ಅಪೇಕ್ಷಿಸುತ್ತದೆ.

ಅ) ಭೂಕಂದಾಯವನ್ನು ಬಹಳ ಮಟ್ಟಿಗೆ ಕಡಿಮೆ ಮಾಡುವುದಲ್ಲದೆ ಭೂಕಂದಾಯ ನೀತಿಯನ್ನು ಬದಲಾವಣೆ ಮಾಡುವುದು.

ಆ) ಲಾಭದಾಯಕವಲ್ಲದ ಹಿಡುವಳಿಗಳ ಮೇಲೆ ಕಂದಾಯವನ್ನು ವಜಾ ಮಾಡುವುದು.

ಇ) ರೈತರ ಮೇಲಿರುವ ಸಾಲದ ಹೊರೆಯ ಸಂಬಂಧ ವಿಚಾರಣೆ ನಡೆಯಿಸಿ ಅನ್ಯಾಯವೆನಿಸಿದ ಹಾಗೂ ರೈತರಿಗೆ ಕೊಡಲು ಶಕ್ತಿ ಮೀರಿರುವ ಸಾಲದ ಹೊರೆ ಯನ್ನು ವಜಾ ಮಾಡುವುದು. ಸಾಲದ ವಸೂಲಾತಿಯನ್ನು ಕೆಲಕಾಲದ ಮಟ್ಟಿಗೆ ನಿಲ್ಲಿಸಿ ಕೃಷಿಯ ಅಭಿವೃದ್ಧಿಗಾಗಿ ಸುಲಭ ದರದ ಮೇಲೆ ಸಾಲವನ್ನು ಒದಗಿಸುವುದು.

ಇನ್ನು ಮುಂದೆ ಬಡ್ಡಿಯ ದರವು ಶೇಕಡ 6 ಕ್ಕಿಂತ ಹೆಚ್ಚ ಕೂಡದು. ಅದಕ್ಕಿಂತ ಹೆಚ್ಚಿನ ದರದ ವಸೂಲಿಯನ್ನು ಕಾನೂನಿನ ಮೂಲಕ ಶಿಕ್ಷಾರ್ಹಮಾಡ ತಕ್ಕದ್ದು.

ಸಾಲ ಕೊಡುವವರು ಸರಕಾರದಲ್ಲಿ ರಿಜಿಸ್ಟರ್ ಮಾಡಿಕೊಳ್ಳಬೇಕು.

ರೈತರು ಬೆಳೆದ ಬೆಳಸಿನ ವಿಕ್ರಯ ಸಂಬಂಧವಾಗಿ ಸಾಹುಕಾರರು ನಡೆಯಿಸುವ ಅತ್ಯಾಚಾರಗಳನ್ನು ನಿಲ್ಲಿಸುವುದು.

ಈ) ಸರಕಾರಿ ಅಧಿಕಾರಿಗಳು ಕಾನೂನಿನ ವಿರುದ್ಧವಾದ ಲಂಚ ವಸೂಲು ಮಾಡುವುದನ್ನು ವಜಾಮಾಡತಕ್ಕದ್ದು.

ಉ) ರೈತರ ಮೇಲೆ ಬೀಳುವ ನಾನಾ ವಿಧವಾದ ಸುಂಕದ ಹೊರೆಗಳನ್ನು ವಜಾ ಮಾಡಿಸತಕ್ಕದ್ದು.

13-4-1938 ರಂದು ಅಂಗೀಕಾರ ಪಡೆದ ನಿರ್ಣಯಗಳು

12) ರಾಷ್ಟ್ರಧ್ವಜದ ಕೀರ್ತಿಗೌರವವನ್ನು ಕಾಪಾಡುವುದರಲ್ಲಿ ಕಾರಾಗೃಹಕ್ಕೆ ತೆರಳಿದ ನಮ್ಮ ಮುಖಂಡರುಗಳಾದ ಶ್ರೀ ಕೆ. ಟಿ. ಭಾಷ್ಯಂ ಅಯ್ಯಂಗಾರ್ಯರಿಗೂ ಶ್ರೀ ಹೆಚ್. ಸಿದ್ಧಯ್ಯನವರಿಗೂ ಶ್ರೀಮತಿ ಬಳ್ಳಾರಿ ಸಿದ್ಧಮ್ಮನವರಿಗೂ ಈ ರಾಷ್ಟ್ರ ಕೂಟವು ತನ್ನ ಹೃತ್ಪೂರ್ವಕವಾದ ಅಭಿವಂದನೆಗಳನ್ನು ಅರ್ಪಿಸುತ್ತದೆ.

13) ಅ) ವಿಷಯ ನಿಯಾಮಕ ಸಮಿತಿಯಲ್ಲಿ ಅಂಗೀಕೃತವಾದ ಮೈಸೂರು ಕಾಂಗ್ರೆಸ್ಸಿನ ಕರಡು ಶಾಸನದಲ್ಲಿರುವ (draft constitution) "ಕಾರ್ಯಕಾರಿ ಸಮಿತಿಯ ಸದಸ್ಯರು ಪ್ರಜಾಪ್ರತಿನಿಧಿ ಮತ್ತು ಶಾಸನ ಸಭೆಯ ಸದಸ್ಯರಾಗಿರ ಕೂಡದು" ಎಂಬ ವಾಕ್ಯವು ತೆಗೆದು ಹಾಕಲ್ಪಡಬೇಕೆಂದು ಈ ರಾಷ್ಟ್ರಕೂಟವು ತೀರ್ಮಾನಿಸುತ್ತದೆ.

ಆ) ಮೈಸೂರು ಕಾಂಗ್ರೆಸ್‌ನ ಕರಡು ಶಾಸನದಲ್ಲಿರುವ 'ಸದಸ್ಯರು' ಎಂಬ ಶಿರೋನಾಮೆಯಲ್ಲಿರತಕ್ಕ "ಎರಡಾಣೆ ರುಸುಂನೊಂದಿಗೆ" ಎಂಬ ವಾಕ್ಯವು ತೆಗೆದು ಹಾಕಲ್ಪಡಬೇಕೆಂದು ಈ ರಾಷ್ಟ್ರಕೂಟವು ತೀರ್ಮಾನಿಸುತ್ತದೆ.

14) ಕರ್ಣಾಟಕ ಏಕೀಕರಣಕ್ಕಾಗಿ ತಕ್ಕ ಕಾರ್ಯಕ್ರಮಂಗಳನ್ನು ಬ್ರಿಟಿಷ್ ಹಿಂದೂಸ್ಥಾನದಲ್ಲಿನ ಕಾಂಗ್ರೆಸ್ ಸರಕಾರಗಳು ತತ್‌ಕ್ಷಣವೇ ಕೈಗೊಳ್ಳಬೇಕೆಂದು ಈ ರಾಷ್ಟ್ರಕೂಟವು ಬಯಸುತ್ತದೆ.

15) ಝೂಂಜಿಬಾರಿನಲ್ಲಿರುವ ಭಾರತೀಯರಿಗೆ ಅಲ್ಲಿನ ಸರಕಾರದವರು ನಾನಾ ವಿಧವಾದ ತೊಂದರೆಗಳನ್ನು ಕೊಡುತ್ತಿರುವುದರಿಂದ ಆ ದೇಶದಿಂದ ಬರುತ್ತಿರುವ ಲವಂಗವನ್ನು ಸಂಪೂರ್ಣವಾಗಿ ಬಹಿಷ್ಕರಿಸಬೇಕೆಂದು ಈ ರಾಷ್ಟ್ರಕೂಟವು ತೀರ್ಮಾನಿಸುತ್ತದೆ.

16) ಮೈಸೂರು ಕಾಂಗ್ರೆಸ್‌ನ ತಾಲ್ಲೂಕು ಮತ್ತು ಜಿಲ್ಲಾ ಸಮಿತಿಗಳು ರಚಿತವಾಗಲು ಸಾಕಷ್ಟು ಅವಕಾಶವಿಲ್ಲದಿರುವುದರಿಂದ ಮೈಸೂರು ಕಾಂಗ್ರೆಸ್ಸಿನ ಮತ್ತೊಂದು ಅಧಿವೇಶನವು ಸೇರುವವರೆಗೆ ಶಿವಪುರದ ವಿಷಯ ನಿಯಾಮಕ ಸಮಿತಿಯ ಸದಸ್ಯರೇ ಅಖಿಲ ಮೈಸೂರು ಕಾಂಗ್ರೆಸ್ಸಿನ ಸದಸ್ಯರಾಗಿರತಕ್ಕದ್ದು. ಮತ್ತು ಈ ಸಲದ ಕಾರ್ಯಕಾರಿ ಸಮಿತಿಯನ್ನು ರಚಿಸತಕ್ಕ ಹಕ್ಕನ್ನು ಅಧ್ಯಕ್ಷರಿಗೇ ಕೊಡತಕ್ಕುದೆಂದು ಈ ರಾಷ್ಟ್ರಕೂಟವು ತೀರ್ಮಾನಿಸುತ್ತದೆ.

17) ಮೈಸೂರು ಕಾಂಗ್ರೆಸ್ಸಿಗೆ ಅಂಗವಾಗಿ ಮೈಸೂರು ಸೇವಾದಳವನ್ನು ಸ್ಥಾಪಿಸಬೇಕೆಂದು ಈ ರಾಷ್ಟ್ರಕೂಟವು ತೀರ್ಮಾನಿಸುತ್ತದೆ. ಮತ್ತು ಈ ಕಾರ್ಯವನ್ನು ನೆರವೇರಿಸಲು ಕಾರ್ಯಕಾರಿ ಸಮಿತಿಯು ತಕ್ಕ ಕ್ರಮವನ್ನು ಕೈಕೊಳ್ಳಲು ಅಧಿಕಾರ ಕೊಡುತ್ತದೆ.

18) ಮೈಸೂರು ಸರಕಾರದ ಅಧಿಕಾರಿಗಳಿಗಾಗಿ ಏರ್ಪಾಟಾಗಬಹುದಾದ ಅಥವಾ ಸರಕಾರದ ಅಧಿಕಾರಿಗಳಿಂದ ರಾಜಕೀಯ ಕಾರಣಗಳಿಗಾಗಿ ಏರ್ಪಾಟಾಗಬಹುದಾದ ಸಂತೋಷ ಕೂಟಗಳಲ್ಲಿ ಮೈಸೂರು ಕಾಂಗ್ರೆಸ್ಸಿನ ಸಭಿಕರಾರೂ ಭಾಗ

ವಹಿಸಕೂಡದು. ಮತ್ತು ಸರಕಾರಿ ಅಧಿಕಾರಿಗಳಿಗೂ ಸಹ ಸಂತೋಷ ಕೂಟಗಳನ್ನು ಏರ್ಪಡಿಸಕೂಡದು.

ಶಿವಪುರ ರಾಷ್ಟ್ರಕೂಟದಲ್ಲಿ ಮುಖ್ಯವಾಗಿ ಹದಿನೆಂಟು ನಿರ್ಣಯಗಳು ಬಹುಮತದಿಂದ ಅಂಗೀಕೃತವಾದುವು. ವಿಷಯ ನಿಯಾಮಕ ಸಭೆಯಲ್ಲಿ ಅಂಗೀಕಾರ ಪಡೆದ ನಿರ್ಣಯಗಳು ಹೆಚ್ಚು ಕಡಿಮೆ ಬಹಿರಂಗ ಅಧಿವೇಶನದಲ್ಲೂ ಬಹುಮತದ ಒಪ್ಪಿಗೆ ಪಡೆದುವು. ಮೈಸೂರು ಕಾಂಗ್ರೆಸ್ಸಿನ ರಚನಾಕ್ರಮ ಮಾತ್ರ ಹೆಚ್ಚು ಚರ್ಚೆಗೆ ಒಳಗಾಗಿ ಅಷ್ಟಿಷ್ಟು ಬದಲಾವಣೆ ಹೊಂದಿ ಕೊನೆಗೆ ಒಪ್ಪಿಗೆಯಾಯಿತು. ಆದರೆ ಎರಡು ನಿರ್ಣಯಗಳು ಮಾತ್ರ ವಿಷಯ ನಿಯಾಮಕ ಸಮಿತಿಯಲ್ಲಿ ಬಹುಮತ ಪಡೆದಿದ್ದರೂ ಬಹಿರಂಗ ಅಧಿವೇಶನದಲ್ಲಿ ಬಹುಮತದಿಂದಲೇ ತಿರಸ್ಕೃತವಾದುವು. ಅವು 1) ಪ್ರಜಾಪ್ರತಿನಿಧಿ ಸಭೆ ಮತ್ತು ನ್ಯಾಯ ವಿಧಾಯಕ ಸಭೆಯ ಸದಸ್ಯರು ಮೈಸೂರು ಕಾಂಗ್ರೆಸ್ ವರ್ಕಿಂಗ್ ಕಮಿಟಿಯ ಸದಸ್ಯರಾಗಿರಕೂಡದು. 2) ಮೈಸೂರು ಕಾಂಗ್ರೆಸ್ ಸದಸ್ಯರು 2 ಆಣೆ ವಾರ್ಷಿಕ ರುಸುಂ ಕೊಡಬೇಕು ಎಂಬ ನಿರ್ಣಯಗಳು.

ಬಹಿರಂಗ ಅಧಿವೇಶನದಲ್ಲಿ ಮಹಾಜನರು ಒಕ್ಕೊರಲಿನಿಂದ ವಿಶೇಷವಾಗಿ ಸ್ವಾಗತಿಸಿ ಒಪ್ಪಿಗೆ ಸೂಚಿಸಿದ ನಿರ್ಣಯಗಳಿವು : 1) ಮೈಸೂರು ಸಂಸ್ಥಾನದಲ್ಲಿ ಜವಾಬ್ದಾರಿ ಸರಕಾರ ಸ್ಥಾಪನೆಯಾಗಬೇಕು. 2) ಜನರ ಆಜನ್ಮಸಿದ್ಧವಾದ ಹಕ್ಕು ಬಾಧ್ಯತೆಗಳಿಗೆ ಭಂಗಬರಬಾರದು. 3) ಸಂಯುಕ್ತ ರಾಜ್ಯಾಂಗ ವ್ಯವಸ್ಥೆಗೆ ಒಪ್ಪುವುದಿಲ್ಲ. 4) ಫೆಡರೇಷನ್ ವ್ಯವಸ್ಥೆಯನ್ನು ಪರಿಶೀಲಿಸಲು ಸರಕಾರ ನೇಮಿಸಿರುವ ಸಮಿತಿಯೊಂದಿಗೆ ಕಾಂಗ್ರೆಸ್ ಸಹಕರಿಸುವುದಿಲ್ಲ. 5) ಕಾಂಗ್ರೆಸ್ ಅಧಿಕೃತ ಸಂಸ್ಥೆಯೆಂದು ಸರಕಾರ ಭೇಷರತ್ತಾಗಿ ಒಪ್ಪಿಕೊಳ್ಳಬೇಕು. 5) ರಾಜಕೀಯ ಸುಧಾರಣಾ ಸಮಿತಿಗೆ ಬಹಿಷ್ಕಾರ. ಇತ್ಯಾದಿ.

ನಿರ್ಣಯಗಳಿಗೆ ಬಹಿರಂಗ ಸಭೆ ಕೊಟ್ಟ ಒಪ್ಪಿಗೆಯಲ್ಲಿ ಅಂದಿನ ಜನರು ಏನನ್ನು ಬಯಸುತ್ತಿದ್ದರು, ಅವರ ಮನೋಧರ್ಮ ಯಾವ ಕಡೆಗೆ ಹರಿಯುತ್ತಿತ್ತು ಎಂಬ ವಿಷಯಗಳು ಸ್ಪಷ್ಟವಾಗುತ್ತವೆ. ದಾಸ್ಯ ವಿಮೋಚನೆಗೆ ಅವರು ತವಕಪಡುತ್ತಿದ್ದರು. ಅದಕ್ಕಾಗಿ ಎಂತಹ ತ್ಯಾಗ ಬಲಿದಾನಗಳಿಗೂ ಸಿದ್ಧರಾಗಿದ್ದರು ಎಂಬುದರಲ್ಲಿ ಸಂಶಯವಿಲ್ಲ.

ಮೈಸೂರು ಕಾಂಗ್ರೆಸ್ ಸಂಸ್ಥೆಯ ರಚನಾಕ್ರಮ

ಮೈಸೂರು ಕಾಂಗ್ರೆಸ್ ತನ್ನ ಮುಂದೆ ಇಟ್ಟುಕೊಂಡ ಧ್ಯೇಯ ಧೋರಣೆಗಳನ್ನು ಅದರ ರಚನಾಕ್ರಮದಲ್ಲಿ ಕಾಣಬಹುದು. ಶಿವಪುರದಲ್ಲಿ ನಡೆದ ಪ್ರಥಮ

ಮಹಾಸಭೆಯಲ್ಲಿ ಅಂಗೀಕೃತವಾದ ಮೈಸೂರು ಕಾಂಗ್ರೆಸ್ಸಿನ ರಚನಾಕ್ರಮದ ಪೂರ್ಣ ಪಾಠ ಹೀಗಿದೆ :

1. ಉದ್ದೇಶ

ಶ್ರೀಮನ್ ಮಹಾರಾಜರವರ ಆಶ್ರಯದಲ್ಲಿ ಪೂರ್ಣ ಜವಾಬ್ದಾರಿ ಸರ್ಕಾರವನ್ನು ಯೋಗ್ಯವೂ ಶಾಂತಿಯುತವೂ ಆದ ಸಕಲವಿಧಗಳಿಂದಲೂ ಪಡೆಯುವುದೇ ಮೈಸೂರು ಕಾಂಗ್ರೆಸ್ಸಿಗೆ ಉದ್ದೇಶವಾಗಿದೆ.

2. ಅಂಗಗಳು

ಮೈಸೂರು ಕಾಂಗ್ರೆಸ್ಸಿನ ಅಂಗಗಳಾವುವೆಂದರೆ :—

1. ವಿಧಿವತ್ತಾದ ಕ್ರಮದಲ್ಲಿ ಸೇರತಕ್ಕ ಸದಸ್ಯರು. 2. ಸ್ಥಳಿಯ ಸಮಿತಿಗಳು. 3. ತಾಲ್ಲೂಕು ಸಮಿತಿಗಳು. 4. ಜಿಲ್ಲಾ ಸಮಿತಿಗಳು. 5. ಅಖಿಲ ಮೈಸೂರು ಕಾಂಗ್ರೆಸ್ ಸಮಿತಿ. 6. ಕಾರ್ಯಕಾರಿ ಸಮಿತಿ. 7. ಮೈಸೂರು ಕಾಂಗ್ರೆಸ್ಸಿನ ವಾರ್ಷಿಕ ಅಧಿವೇಶನ. 8. ಕಾರ್ಯಕಾರಿ ಸಮಿತಿಯಿಂದಾಗಲಿ ಅಖಿಲ ಮೈಸೂರು ಕಾಂಗ್ರೆಸ್ ಸಮಿತಿಯಿಂದಾಗಲಿ ಸ್ಥಾಪಿಸಲ್ಪಟ್ಟ, ಇಲ್ಲವೆ ಅಂಗಿಕರಿಸಲ್ಪಟ್ಟ ಇತರ ಸಂಸ್ಥೆಗಳು.

3. ಸದಸ್ಯರು

ಪದಿನೆಂಟು ವಯಸ್ಸಿಗೆ ಮೀರಿದವರಾಗಿಯೂ, ಭಾರತ ರಾಷ್ಟ್ರೀಯ ಮಹಾಸಭೆಯ (Indian National Congress) ಸಭಿಕರಾಗಿಯೂ ಈ ರಚನಾಕ್ರಮ (Constitution) ದ 1 ನೇ ಸೂತ್ರದಲ್ಲಿ ನಂಬಿಕೆ ಉಳ್ಳವರಾಗಿಯೂ ಇರತಕ್ಕ ಯಾವತ್ತು ಜನರು ತಮಗೆ ಹಾಗೆ ವಿಶ್ವಾಸವಿದೆಯೆಂದು ಅರ್ಜಿ ಕೊಟ್ಟದ್ದೇ ಆದರೆ, ಮೈಸೂರು ಕಾಂಗ್ರೆಸ್ಸಿನ ಸದಸ್ಯರಾಗಿ ಸೇರಬಹುದು. ಆದರೆ ಯಾರೊಬ್ಬರೂ ಒಂದೇ ಕಾಲದಲ್ಲಿ ಒಂದಕ್ಕಿಂತಲೂ ಅಧಿಕವಾದ ಸ್ಥಳೀಯ ಸಮಿತಿಗಳಿಗೆ ಸದಸ್ಯರಾಗಿರಬಾರದು.

4. ಅವಧಿ

ಕಾರ್ಯಕಾರಿ ಸಮಿತಿಯವರು ಬೇರೆ ವಿಧವಾಗಿ ನಿರ್ಣಯಿಸದಿದ್ದರೆ ಸದಸ್ಯತ್ವದ ಸಂವತ್ಸರವು ಜನವರಿ ಒಂದರಿಂದ ಡಿಸೆಂಬರ್ ಮೂವತ್ತೊಂದನವರೆಗೆ ಪರಿಗಣಿತವಾಗತಕ್ಕದ್ದಾಗಿದೆ.

5. ಅರ್ಹತೆ

1. ಕೈಯಿಂದ ನೂತು, ಕೈಯಿಂದ ನೇದ ಖಾದಿಯನ್ನೇ ಸಂಪೂರ್ಣ

ವಾಗಿಯೂ ವಾಡಿಕೆಯಾಗಿಯೂ ಧರಿಸತಕ್ಕ ಸದಸ್ಯರ ಹೊರತು ಮತ್ತಾರೂ ಯಾವುದೊಂದು ಸಮಿತಿಯಲ್ಲಿ ಅಧಿಕಾರಸ್ಥಾನ ಅಥವಾ ಸದಸ್ಯತ್ವವನ್ನು ಪಡೆಯಲು ಅರ್ಹರಾಗಿರುವುದಿಲ್ಲ.

2. ಕಾರ್ಯಕಾರಿ ಸಮಿತಿಯವರ ಅಭಿಪ್ರಾಯದಲ್ಲಿ ಜನಾಂಗ ವಿರುದ್ಧವೂ ಮೈಸೂರು ಕಾಂಗ್ರೆಸ್ಸಿನ ಕಾರ್ಯಗಳಿಗೆ ವಿರುದ್ಧವೂ ಆದಂಥ ಕಾರ್ಯಗಳನ್ನು ಕಲ್ಪಿಸತಕ್ಕ ಉದ್ದೇಶ ಅಥವ ಕಾರ್ಯಕ್ರಮಗಳನ್ನು ಪಡೆದಿರುವ ಸಂಸ್ಥೆಗಳಿಗೆ ಮೈಸೂರು ಕಾಂಗ್ರೆಸ್ಸಿನ ಯಾವ ಸದಸ್ಯರೂ ಸಭಿಕರಾಗಿರಕೂಡದು.

6. ಸಮಿತಿಗಳು

1. ಸಂಸ್ಥಾನದ ಪ್ರತಿಯೊಂದು ಗ್ರಾಮ, ಪಟ್ಟಣ ಮತ್ತು ನಗರದಲ್ಲೂ ಆಯಾ ಪ್ರದೇಶದಲ್ಲಿ ಮೈಸೂರು ಕಾಂಗ್ರೆಸ್ಸಿನ ವಿಚಾರಗಳನ್ನು ನಿರ್ವಹಿಸಲು ಒಂದೊಂದು ಸ್ಥಳೀಯ ಸಮಿತಿಯು ಇರತಕ್ಕದ್ದು. ಇದರಲ್ಲಿ 5 ಕ್ಕೆ ಕಡಿಮೆ ಯಿಲ್ಲದಂತೆಯೂ 10 ಕ್ಕೆ ಮೀರದಂತೆಯೂ ಸದಸ್ಯರು ಇರತಕ್ಕದ್ದು. ಅವರು ಸ್ಥಳದಲ್ಲಿರುವ ಮೈಸೂರು ಕಾಂಗ್ರೆಸ್ಸಿನ ಸಾಧಾರಣ ಸಭಿಕರ ವಾರ್ಷಿಕ ಸಭೆಯಿಂದ ವರ್ಷಕ್ಕೊಂದು ಸಲ ಚುನಾಯಿಸಲ್ಪಡತಕ್ಕದ್ದು.

2. ಸಂಸ್ಥಾನದ ಪ್ರತಿಯೊಂದು ತಾಲ್ಲೂಕಿನಲ್ಲೂ ಹದಿನೈದು ಮಂದಿಗೆ ಮೀರದಷ್ಟು ಸದಸ್ಯರನ್ನುಳ್ಳ ಒಂದು ತಾಲ್ಲೂಕು ಸಮಿತಿ ಇರತಕ್ಕದ್ದು. ಈ ಸದಸ್ಯರು ಆಯಾ ತಾಲ್ಲೂಕಿನಲ್ಲಿರುವ ಸ್ಥಳೀಯ ಸಮಿತಿಗಳು ಅನುಸರಿಸತಕ್ಕ ನಿಯೋಗಿಗಳಿಂದ ವರ್ಷಕ್ಕೊಂದು ಸಲ ಚುನಾಯಿಸಲ್ಪಡತಕ್ಕದ್ದು. ಈ ನಿಯೋಗಿ ಗಳನ್ನು ಆಯಾ ಸ್ಥಳೀಯ ಸಮಿತಿಗಳು ತಮ್ಮ ಪಟ್ಟಿಯಲ್ಲಿರುವ ಸದಸ್ಯರ ಸಂಖ್ಯೆ ಯಲ್ಲಿ ಇಪತ್ತೈದು ಮಂದಿಗೆ ಒಬ್ಬರಂತೆ ಚುನಾಯಿಸತಕ್ಕದ್ದು. ಇಪ್ಪತ್ತೈದು ಮಂದಿಗಿಂತಲೂ ಕಡಿಮೆ ಸದಸ್ಯರು ಇರತಕ್ಕ ಪ್ರದೇಶದ ಸಮಿತಿಯು ಒಬ್ಬ ನಿಯೋಗಿಯನ್ನು ಚುನಾಯಿಸತಕ್ಕದ್ದು.

3. ಸಂಸ್ಥಾನದ ಪ್ರತಿಯೊಂದು ಜಿಲ್ಲೆಯ ಮುಖ್ಯ ಪಟ್ಟಣದಲ್ಲೂ ಹದಿನೈದು ಮಂದಿಗೆ ಮೀರದಷ್ಟು ಸದಸ್ಯರನ್ನುಳ್ಳ ಒಂದು ಜಿಲ್ಲಾ ಸಮಿತಿ ಇರತಕ್ಕದ್ದು. ಈ ಸದಸ್ಯರು ಆಯಾ ಜಿಲ್ಲೆಯ ತಾಲ್ಲೂಕುಗಳಿಂದ ಒಂದು ತಾಲ್ಲೂಕಿಗೆ ಇಬ್ಬಿಬ್ಬರಂತೆ ಚುನಾಯಿಸಲ್ಪಡಬೇಕು.

4. ಕಾರ್ಯಕಾರಿ ಸಮಿತಿ ಅಥವಾ ಅ. ಮೈ. ಕಾಂಗ್ರೆಸ್ ಸಮಿತಿಯವರು ಹೊರಡಿಸತಕ್ಕ ವಿಧಿಗಳಿಗೂ ಆಜ್ಞೆಗಳಿಗೂ ಅನುಸಾರವಾಗಿ ತಾಲ್ಲೂಕು ಸಮಿತಿ ಗಳೂ ಜಿಲ್ಲಾ ಸಮಿತಿಗಳೂ ತಮ್ಮ ತಮ್ಮ ಪ್ರದೇಶದಲ್ಲಿರುವ ಸಮಿತಿಗಳ ಕಾರ್ಯ

ಗಳನ್ನು ಸಮನ್ವಯಗೊಳಿಸುವುದಕ್ಕೂ ಮೇಲ್ವಿಚಾರಣೆ ಮಾಡುವುದಕ್ಕೂ ಅಧಿಕಾರವನ್ನು ಪಡೆದಿರತಕ್ಕದ್ದು.

5. ಬೆಂಗಳೂರು ಮತ್ತು ಮೈಸೂರು ಪಟ್ಟಣಗಳ ಕಾಂಗ್ರೆಸ್ ಸಮಿತಿಗಳಿಗೆ ಜಿಲ್ಲಾ ಕಾಂಗ್ರೆಸ್ ಸಮಿತಿಗಳಿಗಿರತಕ್ಕ ಸ್ಥಾನಮಾನಗಳನ್ನು ಕೊಡಲ್ಪಡತಕ್ಕದ್ದು.

7. ಅಖಿಲ ಮೈಸೂರು ಕಾಂಗ್ರೆಸ್ ಸಮಿತಿಗೆ ಸೇರಿರತಕ್ಕ ಅಂಗಗಳು

ಅ) ಕಾರ್ಯಕಾರಿ ಸಮಿತಿಯವರು.

ಆ) ಮೂರು ಮತ್ತು ಐದನೆಯ ಸೂತ್ರಗಳಿಗೆ ಅನುಗುಣವಾದ ಅರ್ಹತೆಯನ್ನುಳ್ಳ ಹಿಂದಿನ ಸಾಲುಗಳ ಅಧ್ಯಕ್ಷರು.

ಇ) ತಾಲ್ಲೂಕು ಸಮಿತಿಗಳಿಂದ ಜನ ಸಾಧಾರಣ ಸದಸ್ಯರಿಗೆ ಒಬ್ಬೊಬ್ಬರಂತೆ ಚುನಾಯಿಸಲ್ಪಡತಕ್ಕ ಪ್ರತಿನಿಧಿಗಳು. 300 ಜನ ಸಾಧಾರಣ ಸದಸ್ಯರಿಗಿಂತಲೂ ಕಡಿಮೆ ಸದಸ್ಯರನ್ನುಳ್ಳ ಕಾಂಗ್ರೆಸ್ ಸಮಿತಿಯೂ ಸಹ ಒಬ್ಬ ಪ್ರತಿನಿಧಿಯನ್ನು ಕಳುಹಿಸಬಹುದು.

8. ಕಾರ್ಯಕಾರಿ ಸಮಿತಿಯ ಅಂಗಗಳು

ಅ) ಮೈಸೂರು ಕಾಂಗ್ರೆಸ್ಸಿನ ಅಧ್ಯಕ್ಷರು.

ಆ) ಅಧ್ಯಕ್ಷರಿಂದ ಆರಿಸಲ್ಪಡತಕ್ಕ ಕಾರ್ಯದರ್ಶಿ, ಕೋಶಾಧ್ಯಕ್ಷ ಮತ್ತು ಇನ್ನಿಬ್ಬರು ಸದಸ್ಯರು. ಹೀಗೆ ಅಧ್ಯಕ್ಷರಿಂದ ಆರಿಸಲ್ಪಡತಕ್ಕವರು ಅ. ಮೈ. ಕಾಂ. ಸಮಿತಿಯ ಸದಸ್ಯರಾಗಿರಬೇಕು.

ಇ) ಅ. ಮೈಸೂರು ಕಾಂಗ್ರೆಸ್ ಸಮಿತಿಯವರಿಂದ ವರುಷಕ್ಕೊಂದಾವರ್ತಿ ಚುನಾಯಿಸಲ್ಪಡತಕ್ಕ ಹತ್ತು ಸದಸ್ಯರು.

ಈ) ಸದಸ್ಯರು ಜಿಲ್ಲೆಗೆ ಒಬ್ಬೊಬ್ಬರಂತೆ ಜಿಲ್ಲಾ ಕಾಂಗ್ರೆಸ್ ಸಮಿತಿಯವರಿಂದ ಚುನಾಯಿತರಾಗತಕ್ಕದ್ದು. ಬೆಂಗಳೂರು ಮತ್ತು ಮೈಸೂರು ನಗರಗಳಿಂದ ಒಬ್ಬೊಬ್ಬರನ್ನು ಚುನಾಯಿಸತಕ್ಕದ್ದು.

9. ವಾರ್ಷಿಕ ಅಧಿವೇಶನ

1. ಮೈಸೂರು ಕಾಂಗ್ರೆಸ್ಸಿನ ವಾರ್ಷಿಕ ಅಧಿವೇಶನವು ಸಾಧಾರಣವಾಗಿ ಏಪ್ರಿಲ್ ತಿಂಗಳಲ್ಲಿ ಹಿಂದಲ ಮಹಾಸಭೆಯಲ್ಲಿ ಗೊತ್ತಾಗಿರುವ ಅಥವಾ ಕಾರ್ಯಕಾರೀ ಸಮಿತಿಯವರಿಂದ ಗೊತ್ತು ಮಾಡಲ್ಪಡುವ ಸ್ಥಳದಲ್ಲಿ ಸೇರತಕ್ಕದ್ದು.

2. ವಾರ್ಷಿಕ ಅಧಿವೇಶನದ ಅಂಗಗಳು

ಅ) ಮೈಸೂರು ಕಾಂಗ್ರೆಸ್ಸಿನ ಅಧ್ಯಕ್ಷರು.

ಆ) 3 ಮತ್ತು 5 ನೆಯ ಸೂತ್ರಗಳಿಗೆ ಅನುಗುಣವಾದ ಅರ್ಹತೆಯುಳ್ಳ ಹಿಂದಿನ ಸಾಲುಗಳ ಅಧ್ಯಕ್ಷರುಗಳು.

ಇ) ಅ. ಮೈ. ಕಾಂ. ಸಮಿತಿ ಮತ್ತು ಕಾರ್ಯಕಾರಿ ಸಮಿತಿ.

ಈ) ಪ್ರತಿನಿಧಿಗಳು.

3. ಪ್ರತಿಯೊಂದು ತಾಲ್ಲೂಕು ಕಾಂಗ್ರೆಸ್ ಸಮಿತಿಯ ಕಾರ್ಯನಿರ್ವಾಹಕ ಮಂಡಲಿಯ ಸದಸ್ಯರೇ ವಾರ್ಷಿಕ ಅಧಿವೇಶನದ ಪ್ರತಿನಿಧಿಗಳಾಗಿರತಕ್ಕದ್ದು.

4. ಮೈಸೂರು ಕಾಂಗ್ರೆಸ್ ಅಧಿವೇಶನವು ನಡೆಯಬೇಕೆಂದು ಗೊತ್ತಾದ ಪ್ರದೇಶದ ಸ್ಥಳೀಯ ಸಮಿತಿಯವರು ಅಧಿವೇಶನವು ನಡೆಯಲು ಅವಶ್ಯಕವಾದ ಏರ್ಪಾಟುಗಳನ್ನೆಲ್ಲ ಕೈಕೊಂಡು ಇದಕ್ಕಾಗಿ ಒಂದು ಸ್ವಾಗತ ಸಮಿತಿಯನ್ನು ರಚಿಸತಕ್ಕದ್ದು. ಈ ಸ್ವಾಗತ ಸಮಿತಿಗೆ ಜಿಲ್ಲಾ ಸಮಿತಿಯ ಸದಸ್ಯರಲ್ಲದೆ ಇತರರನ್ನೂ ಸಹ ಸೇರಿಸಿಕೊಳ್ಳಬಹುದು.

5. ಸ್ವಾಗತ ಸಮಿತಿಯವರು ಅಧಿವೇಶನದ ವೆಚ್ಚಕ್ಕಾಗಿ ಧನವನ್ನು ಸಂಗ್ರಹಿಸಬೇಕಲ್ಲದೆ ಪ್ರತಿನಿಧಿಗಳ ಮತ್ತು ಪ್ರೇಕ್ಷಕರ ಸ್ವಾಗತಾತಿಥ್ಯಗಳಿಗೆ ಬೇಕಾದ ಏರ್ಪಾಟುಗಳನೆಲ್ಲಾ ಮಾಡಿ ಅಧಿವೇಶನದ ನಡವಳಿಕೆಯ ವರದಿಯನ್ನು ಅಚ್ಚು ಹಾಕಿಸತಕ್ಕದ್ದು.

6. ಸ್ವಾಗತ ಸಮಿತಿಯು ತಮ್ಮೊಳಗಿನ ಸದಸ್ಯರೊಳಗಿಂದ ತನ್ನ ಅಧ್ಯಕ್ಷರನ್ನೂ ಅಧಿಕಾರಿಗಳನ್ನೂ ಆರಿಸಿಕೊಳ್ಳತಕ್ಕದ್ದು.

7. ಹತ್ತು ಜನ ಪ್ರತಿನಿಧಿಗಳು ಒಂದು ಕಡೆ ಸೇರಿ ಅ. ಮೈ. ಕಾ. ಸಮಿತಿಯ ಸದಸ್ಯರಲ್ಲಿ ಯಾರಾದರೊಬ್ಬರ ಹೆಸರನ್ನು ಮೈಸೂರು ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷ ಸ್ಥಾನಕ್ಕೆ ಸೂಚಿಸಬಹುದು.

8. ಹೀಗೆ ಸೂಚಿತರಾದವರ ಹೆಸರುಗಳನೆಲ್ಲಾ ಕಾರ್ಯದರ್ಶಿಯು ಪ್ರಕಟಿಸತಕ್ಕದ್ದು, ಹೀಗೆ ಸೂಚಿಸಲ್ಪಟ್ಟವರಲ್ಲಿ ಬೇಕಾದವರು ತಮ್ಮ ಉಮೇದುವಾರಿಕೆಯನ್ನು ಹಿಂದಕ್ಕೆ ತೆಗೆದುಕೊಂಡು ಸಾಧಾರಣವಾಗಿ ತಮ್ಮ ಹೆಸರು ಪ್ರಕಟವಾದ ಹತ್ತು ದಿವಸಗಳೊಳಗಾಗಿ ತಮ್ಮ ಉದ್ದೇಶವನ್ನು ತಿಳಿಸಬಹುದು,

9. ಹೀಗೆ ಹಿಂದಕ್ಕೆ ತೆಗೆದುಕೊಂಡವರ ಹೆಸರುಗಳನ್ನು ತೆಗೆದುಹಾಕಿ

ಉಳಿದ ಉಮೇದುವಾರರ ಹೆಸರುಗಳನ್ನು ಪ್ರಕಟಿಸಿ ಅವುಗಳನ್ನು ತಾಲ್ಲೂಕು ಸಮಿತಿಗಳಿಗೆ ಕಳುಹಿಸಲು ಜಿಲ್ಲಾ ಸಮಿತಿಗಳಿಗೆ ಕಳುಹಿಸಬೇಕು.

10. ಕಾರ್ಯಕಾರಿ ಸಮಿತಿಯವರು ಗೊತ್ತುಮಾಡತಕ್ಕ ದಿವಸ ಪ್ರತಿಯೊಂದು ತಾಲ್ಲೂಕು ಸಮಿತಿಯವರೂ, ಮೈಸೂರು ಕಾಂಗ್ರೆಸ್ ಅಧ್ಯಕ್ಷ ಸ್ಥಾನದ ಚುನಾವಣೆಯನ್ನು ನಡೆಯಿಸಿ ಅಧ್ಯಕ್ಷ ಸ್ಥಾನಕ್ಕೆ ನಿಂತ ಉಮೇದುವಾರರ ಪೈಕಿ ಯಾರು ಯಾರಿಗೆ ಎಷ್ಟೆಷ್ಟು ಓಟು ಬಂದಿತೆಂಬುದನ್ನು ಕೂಡಲೇ ಕಾರ್ಯಕಾರೀ ಸಮಿತಿಗೆ ವರದಿ ಕಳುಹಿಸಬೇಕು.

11. ಇಂಥಾ ವರದಿಗಳು ಕೈ ಸೇರಿದ ಕೂಡಲೆ ಕಾರ್ಯಕಾರಿ ಸಮಿತಿಯವರು ಅತ್ಯಧಿಕ ಸಂಖ್ಯೆಯ ಮತಗಳನ್ನು ಪಡೆದ ಉಮೇದುವಾರರ ಹೆಸರನ್ನು ನಿಯುಕ್ತಾಧ್ಯಕ್ಷನೆಂದು ತಿಳಿಸತಕ್ಕದ್ದು.

12, ಮೇಲ್ಕಂಡಂತೆ ಚುನಾಯಿಸಲ್ಪಡುವ ಅಧ್ಯಕ್ಷ ಸ್ಥಾನದಲ್ಲಿ ಮರಣ ರಾಜೀನಾಮೆ ಇತ್ಯಾದಿ ಕಾರಣಗಳಿಂದ ಖಾಲಿಬಿದ್ದರೆ, ಕಾರ್ಯಕಾರಿ ಮಂಡಲಿಯವರು ಪೂರ್ವೋಕ್ತ ಕ್ರಮದಲ್ಲಿ ಸ್ಥಳೀಯ ಸಮಿತಿಗಳಿಂದ ಹೊಸ ಚುನಾವಣೆಯನ್ನು ನಡೆಸಬಹುದು; ಇಲ್ಲವೇ ಅಧ್ಯಕ್ಷರನ್ನು ಅ. ಮೈ. ಕಾ. ಸಮಿತಿಯ ಸದಸ್ಯರು ಚುನಾಯಿಸುವಂತೆ ಮಾಡಬಹುದು.

13. ಹೊಸ ಅ. ಮೈ. ಕಾಂಗ್ರೆಸ್ ಸಮಿತಿಯೂ ಕಾರ್ಯಕಾರಿ ಸಮಿತಿಯೂ ಜೊತೆಯಾಗಿ ವಾರ್ಷಿಕ ಅಧಿವೇಶನವು ಸೇರುವ ಒಂದು ದಿವಸ ಮುಂಚಿತವಾದರೂ ನಿಯುಕ್ತಾಧ್ಯಕ್ಷನ ಅಗ್ರಾಸನಾಧಿಪತ್ಯದಲ್ಲಿ ವಿಷಯ ನಿರ್ಧಾರಕ ಸಮಿತಿಯಾಗಿ ಸೇರತಕ್ಕದ್ದು. ನಿವೃತ್ತವಾಗಲಿರುವ ಕಾರ್ಯಕಾರಿ ಸಮಿತಿಯು ಇದಕ್ಕೆ ಅಧಿವೇಶನವು ಪರ್ಯಾಲೋಚಿಸಬೇಕಾದ ಕಾರ್ಯಕ್ರಮವನ್ನೂ ಮೈಸೂರು ಕಾಂಗ್ರೆಸ್‌ನ ಸದಸ್ಯರಿಂದಲೂ ಸಮಿತಿಗಳಿಂದಲೂ ಬಂದಿರಬಹುದಾದ ವಿಷಯಗಳನ್ನೂ ಒಪ್ಪಿಸತಕ್ಕದ್ದು. ಈ ವಿಷಯಗಳನ್ನು ವಿಷಯ ನಿರ್ಧಾರಕ ಸಮಿತಿಯು ಕೂಡುವುದಕ್ಕೆ ಯುಕ್ತವಾದಷ್ಟು ಪೂರ್ವಭಾವಿಯಾಗಿ ಕಳುಹಿಸಿರಬೇಕು. ಆದರೆ ವಿಷಯ ನಿರ್ಧಾರಕ ಸಮಿತಿಯವರು ಇಂಥಾ ಪೂರ್ವಭಾವಿಯಾದ ತಿಳಿವಳಿಕೆ ಇಲ್ಲದಿರುವ ವಿಷಯಗಳನ್ನು ಸಹ ಅಂಗೀಕರಿಸಲು ಅಧಿಕಾರವುಳ್ಳವರಾಗಿದ್ದಾರೆ.

14. ವಿಷಯ ನಿರ್ಧಾರಕ ಸಮಿತಿಯು ಕಾರ್ಯಕ್ರಮವನ್ನೂ ವಿಷಯಗಳನ್ನೂ ಚರ್ಚಿಸಿ ಅಧಿವೇಶನದಲ್ಲಿ ನಿರ್ಣಯಗಳನ್ನು ಗೊತ್ತುಪಡಿಸಬೇಕು.

15. ಮೈಸೂರು ಕಾಂಗ್ರೆಸ್ಸಿನ ಅಧಿವೇಶನದಲ್ಲಿ ವಿಷಯ ನಿರ್ಧಾರಕ ಸಮಿತಿಯಿಂದ ಗೊತ್ತಾಗಿ ಬಂದಿರತಕ್ಕ ನಿರ್ಣಯಗಳು ಪರ್ಯಾಲೋಚಿಸಲ್ಪಡತಕ್ಕದ್ದು.

ಆದರೆ ಆ ದಿವಸ ಅಧಿವೇಶನಕ್ಕೆ ಪೂರ್ವಲಿಖಿತವಾಗಿ ಅಧ್ಯಕ್ಷರಿಗೆ ತಿಳಿವಳಿಕೆ ಕೊಡತಕ್ಕ ಯಾವನೊಬ್ಬ ಪ್ರತಿನಿಧಿಯು ತಿದ್ದುಪಡಿಯನ್ನಾಗಲಿ, ಇಪ್ಪತ್ತೈದಕ್ಕೆ ಕಡಮೆ ಇಲ್ಲದ ಪ್ರತಿನಿಧಿಗಳು ಹೊಸ ನಿರ್ಣಯವನ್ನಾಗಲಿ ತರಲು, ಅವು ವಿಷಯ ನಿರ್ಧಾರಕ ಸಮಿತಿಯಿಂದ ಸೂಚಿಸಲ್ಪಡದಿದ್ದರೂ ಸಹ ಅಧ್ಯಕ್ಷರು ಅವಕಾಶಕೊಡಬೇಕು.

16. ಸ್ವಾಗತ ಸಮಿತಿಯ ಆಯವ್ಯಯಗಳು ಪ್ರಸಕ್ತ ಜಿಲ್ಲಾ ಸಮಿತಿಯವರು ಆರಿಸತಕ್ಕ ಪರೀಕ್ಷಕರಿಂದ (Auditors) ಪರಿಶೋಧಿಸಲ್ಪಟ್ಟು ಅವರ ವರದಿ ಸಮೇತ ಮಹಾಸಭೆ ಮುಗಿದ ಮೂರು ತಿಂಗಳೊಳಗಾಗಿ ಕಾರ್ಯಕಾರೀ ಸಮಿತಿಗೆ ಒಪ್ಪಿಸಲ್ಪಡತಕ್ಕದ್ದು.

10. ವಿಶೇಷ ಅಧಿವೇಶನ

ಕಾರ್ಯಕಾರಿ ಸಮಿತಿಯವರು ಸ್ವಂತ ನಿರ್ಣಯದಿಂದ ಮೈಸೂರು ಕಾಂಗ್ರೆಸ್ಸಿನ ವಿಶೇಷ ಅಧಿವೇಶನವನ್ನು ಕರೆಯಬಹುದು. ಅ. ಮೈ. ಕಾ. ಸಮಿತಿಯಾಗಲಿ, ಐದಕ್ಕೆ ಕಡಿಮೆಯಿಲ್ಲದ ಜಿಲ್ಲಾ ಸಮಿತಿಗಳಾಲಿ, ಅಥವಾ ಸಾಧಾರಣ ಸದಸ್ಯರ ಒಟ್ಟು ಸಂಖ್ಯೆಯಲ್ಲಿ ಶೇ. 20 ಸದಸ್ಯರು ಬರಹ ಮೂಲಕ ಅಪೇಕ್ಷೆಪಟ್ಟದ್ದೇ ಆದರೆ ಹಾಗೆ ವಿಶೇಷ ಅಧಿವೇಶನವನ್ನು ಕರೆಯಬಹುದು. ಇಂಥಾ ವಿಶೇಷ ಅಧಿವೇಶನವು ಕಾರ್ಯಕಾರಿ ಸಮಿತಿಯು ಗೊತ್ತುಪಡಿಸುವ ಸ್ಥಳ ಮತ್ತು ಕಾಲದಲ್ಲಿ ಮೇಲಿನ ಒಂಬತ್ತನೆ ಸೂತ್ರದಲ್ಲಿ ವಿಧಿಸಲ್ಪಟ್ಟಿರುವ ನಿಯಮದಂತೆ ನಡೆಯತಕ್ಕದ್ದು. ಆದರೆ ಹಿಂದೆ ಸೇರಿದ ಮಹಾಧಿವೇಶನದ ಅಧ್ಯಕ್ಷರೇ ಅಧ್ಯಕ್ಷರಾಗಿಯೂ ಅದರ ಪ್ರತಿನಿಧಿಗಳೇ ಪ್ರತಿನಿಧಿಗಳಾಗಿಯೂ ಇರತಕ್ಕದ್ದು.

11. ಅ. ಮೈ. ಕಾಂ. ಸಮಿತಿ

ವಾರ್ಷಿಕ ಅಧಿವೇಶನದ ಅಧ್ಯಕ್ಷರೇ ಅ.ಮೈ.ಕಾಂ. ಸಮಿತಿಯ ಅಧ್ಯಕ್ಷರಾಗಿರತಕ್ಕದ್ದು. ಅವರ ಗೈರು ಹಾಜರಿನಲ್ಲಿ ಸಮಿತಿಯವರು ತಮ್ಮಲ್ಲೊಬ್ಬರನ್ನು ಅಗ್ರಾಸನಾಧಿಪತಿಗಳನ್ನಾಗಿ ಆರಿಸಿಕೊಳ್ಳತಕ್ಕದ್ದು.

2. ಅ. ಮೈ. ಕಾಂ. ಸಮಿತಿಯು ಕಾರ್ಯಕಾರಿ ಸಮಿತಿಯವರು ಕರೆದಾಗಲೆಲ್ಲವೂ; ನಾಲ್ಕು ತಿಂಗಳಿಗೆ ಒಂದು ಆವರ್ತಿಯಾದರೂ; ಅಥವಾ ಅ. ಮೈ. ಕಾಂ. ಸಮಿತಿಯ ಸದಸ್ಯರ ಒಟ್ಟು ಸಂಖ್ಯೆಯಲ್ಲಿ ಶೇ. 20 ರಷ್ಟು ಸದಸ್ಯರು ಅಪೇಕ್ಷಿಸಿದರೂ ಸೇರತಕ್ಕದ್ದು. ಸಭೆಯನ್ನು ಕೂಡಿಸುವ ಉದ್ದೇಶ ಮತ್ತು ಅವಶ್ಯಕತೆಯನ್ನು ಅಪೇಕ್ಷಕರು ತಿಳಿಸತಕ್ಕದ್ದು.

3. ಅ. ಮೈ. ಕಾಂ. ಸಮಿತಿಯ ಸದಸ್ಯರ ಒಟ್ಟು ಸಂಖ್ಯೆಯಲ್ಲಿ ಮೂರರಲ್ಲಿ ಒಂದು ಭಾಗವು ಇದಕ್ಕೆ ಕಾರ್ಯಸಂಖ್ಯೆ (quorm) ಆಗಿರತಕ್ಕದ್ದು.

4. ಮುಂದಿನ ವಾರ್ಷಿಕ ಅಧಿವೇಶನದ ವಿಷಯನಿಯಾಮಕ ಸಮಿತಿಯ ಪ್ರಥಮ ಸಭೆಯು ಸೇರುವವರೆಗೂ ಈ ಸಭೆಯು ಕಾರ್ಯ ಮಾಡುತ್ತಿರತಕ್ಕದ್ದು.

5. ಮೈಸೂರು ಕಾಂಗ್ರೆಸ್ ಸಂಸ್ಥೆಯ ಉದ್ದೇಶಕ್ಕೆ ಬೆಂಬಲ ಕೊಡತಕ್ಕ ಇತರ ಸಂಸ್ಥೆಗಳು ಅವಶ್ಯಕವೆಂದು ತೋರಿಬಂದರೆ, ಮೈಸೂರು ಕಾಂಗ್ರೆಸ್ಸಿಗೆ ಅಂಗ ವಾಗಿ ಅ. ಮೈ. ಕಾಂ. ಸಮಿತಿ ಸೇರಿಸಬಹುದು.

6. ಅ. ಮೈ. ಕಾಂ. ಸಮಿತಿಯ ಚುನಾಯಿತ ಅಥವಾ ಇತರ ಸದಸ್ಯ ರೆಲ್ಲರೂ ಅದರ ಪ್ರಥಮ ಸಮಾವೇಶಕ್ಕೆ ಮುಂಚಿತವಾಗಿ ವಾರ್ಷಿಕ ಚಂದಾ 2 ರೂ. ಕೊಡಬೇಕು. ಇದರಲ್ಲಿ ಬಾಕಿ ನಿಲ್ಲಿಸಿಕೊಂಡಿರತಕ್ಕ ಸದಸ್ಯರಿಗೆ ಅ. ಮೈ. ಕಾ. ಸಮಿತಿ, ವಿಷಯ ನಿರ್ಧಾರಕ ಸಮಿತಿ ಅಥವಾ ಮಹಾಸಭೆಯ ಯಾವದೊಂದು ಸಮಾವೇಶದಲ್ಲಾಗಲೀ ಭಾಗವಹಿಸಲು ಅಧಿಕಾರವಿರುವುದಿಲ್ಲ.

7. ಮೈಸೂರು ಕಾಂಗ್ರೆಸ್ ಅಧಿವೇಶನವು ನಿರ್ಣಯಪಡಿಸಿದ ಕಾರ್ಯ ಕ್ರಮವನ್ನು ಅ. ಮೈ. ಕಾಂ. ಸಮಿತಿಯು ಜಾರಿಗೆ ತರತಕ್ಕದ್ದು. ಮತ್ತು ಮೈಸೂರು ಕಾಂಗ್ರೆಸ್ಸಿನ ಉದ್ದೇಶವು ನೆರವೇರಲು ವ್ಯಕ್ತವಾಗಿ ನಿಷೇಧಿಸಲ್ಪಟ್ಟಿಲ್ಲದ ಯಾವ ಬಗೆಯ ಕೆಲಸ ಕಾರ್ಯಗಳನ್ನಾಗಲಿ ಕೈಗೊಳ್ಳತಕ್ಕದ್ದು.

8. ಸಂಸ್ಥಾನದ ಸಕಲ ಕಾಂಗ್ರೆಸ್ ಸಮಿತಿಗಳ ಲೆಕ್ಕಗಳನ್ನು ಪರಿಶೋಧಿಸಲು ಕಾರ್ಯಕಾರಿ ಸಮಿತಿಯು ಕ್ರಮಗಳನ್ನು ಕೈಕೊಳ್ಳತಕ್ಕದ್ದು.

9. ಈ ರಚನಾಕ್ರಮಕ್ಕೆ ವಿರುದ್ಧವಿಲ್ಲದಂತೆ ಉಪವಿಧಿಗಳನ್ನು ರಚಿಸಲು ಅದಕ್ಕೆ ಅಧಿಕಾರವಿರತಕ್ಕದ್ದು.

12. ಕಾರ್ಯದರ್ಶಿ ಮತ್ತು ಕೋಶಾಧ್ಯಕ್ಷ

1. ಅ. ಮೈ. ಕಾಂ. ಸಮಿತಿ ಮತ್ತು ಕಾರ್ಯಕಾರಿ ಸಮಿತಿಗಳ ಕಛೇರಿಯು ಕಾರ್ಯದರ್ಶಿಯ ವಶದಲ್ಲಿರತಕ್ಕದ್ದು. ಕಾರ್ಯದರ್ಶಿಯು ಈ ಸಮಿತಿಗಳ ಅಧಿಕಾರ ವರ್ಷದಲ್ಲಿ ಅವು ಮಾಡಿರುವ ಕೆಲಸದ ವರದಿಯನ್ನು ಮೈಸೂರು ಕಾಂಗ್ರೆಸ್ಸಿನ ಹಣಕಾಸಿನ ಲೆಕ್ಕಾಚಾರದ ವರದಿ ಸಮೇತ ತಯಾರಿಸಿ ವಾರ್ಷಿಕ ಮಹಾಧಿವೇಶನದ ಕಾಲದಲ್ಲಿ ಸೇರತಕ್ಕ ಅ. ಮೈ. ಕಾಂ. ಸಮಿತಿಗೆ ಒಪ್ಪಿಸ ತಕ್ಕದ್ದು.

2. ಕೋಶಾಧ್ಯಕ್ಷನು ಮೈಸೂರು ಕಾಂಗ್ರೆಸ್ಸಿನ ಹಣಕಾಸುಗಳನ್ನು ತನ್ನ ವಶದಲ್ಲಿಟ್ಟುಕೊಂಡು ಎಲ್ಲಾ ವರಮಾನ, ವೆಚ್ಚ ಮತ್ತು ಲೇವಣಾತಿಗಳನ್ನು ಅನುಕ್ರಮವಾಗಿ ಲೆಕ್ಕವಿಡತಕ್ಕದ್ದು.

13. ಕಾರ್ಯಕಾರಿ ಸಮಿತಿ

1. ಕಾರ್ಯಕಾರಿ ಸಮಿತಿಯು ನಿರ್ವಾಹಾಧಿಕಾರಿಯಾಗಿರತಕ್ಕದ್ದು. ತತ್ಕಾರಣದಿಂದ ಕಾಂಗ್ರೆಸ್ ಮಹಾಸಭೆ ಮತ್ತು ಅ. ಮೈ. ಕಾಂ. ಸಮಿತಿಯುವರು ಗೊತ್ತುಪಡಿಸತಕ್ಕ ನೀತಿಯನ್ನೂ ಕಾರ್ಯಕ್ರಮವನ್ನೂ ಜಾರಿಗೆ ತರುವುದಕ್ಕೆ ಅಧಿಕಾರ ಹೊಂದಿ ಆ ಸಂಸ್ಥೆಗಳಿಗೆ ತಾನು ಜವಾಬ್ದಾರಿಯುಳ್ಳದ್ದಾಗಿರಬೇಕು.

2. ಕಾರ್ಯಕಾರಿ ಸಮಿತಿಗೆ ಈ ಕೆಳಗೆ ಕಂಡ ವಿಚಾರಗಳಲ್ಲಿ ಅಧಿಕಾರ ವಿರತಕ್ಕದ್ದು.

ಅ) ರಚನಾಕ್ರಮವನ್ನು ಸರಿಯಾಗಿ ಕಾರ್ಯಕಾರಿಯಾಗುವಂತೆ ಮಾಡು ವುದಕ್ಕೆ ಅವಶ್ಯವಾದ ನಿಬಂಧನೆಗಳನ್ನು ಮಾಡುವುದು ಮತ್ತು ಆಜ್ಞೆ ಕೊಡುವುದು.

ಆ) ಸಂಸ್ಥಾನದಲ್ಲಿರುವ ಕಾಂಗ್ರೆಸ್ ಸಮಿತಿಗಳ, ಸಭಿಕರ ಮೇಲ್ವಿಚಾರಣೆ ಮಾಡುವುದು, ಆಜ್ಞೆ ಮಾಡುವುದು ಮತ್ತು ವಶವರ್ತಿಯಾಗುವಂತೆ ಮಾಡುವುದು.

ಇ) ಅಕೃತ್ಯ ಅಥವ ಬುದ್ಧಿ ಪೂರ್ವಕವಾದ ಕರ್ತವ್ಯ ಲೋಪಗಳಿಗೆ ಗುರಿಯಾಗಿರುವ ಸಮಿತಿಗಳನ್ನಾಗಲಿ ವ್ಯಕ್ತಿಗಳನ್ನಾಗಲಿ ತನಗೆ ಸೂಕ್ತವಾದ ಹಾಗೆ ಶಿಕ್ಷಿಸುವುದು.

ಈ) ಮೈಸೂರು ಕಾಂಗ್ರೆಸ್ಸಿನ ಉದ್ದೇಶವನ್ನೂ, ನೀತಿಯನ್ನೂ, ಕಾರ್ಯಕ್ರಮವನ್ನೂ ಸಾರ್ಥಕಪಡಿಸಲು ಸ್ಪಷ್ಟವಾಗಿ ನಿಷೇಧಿಸಲ್ಪಟ್ಟಿದ್ದ ಸಕಲ ಕೆಲಸಗಳನ್ನು ಕೈಕೊಳ್ಳುವುದು ಅಥವ ಮಾಡುವುದು.

ಉ) ಮೈಸೂರು ಕಾಂಗ್ರೆಸ್ಸಿನ ಧನದ ಸಂಗ್ರಹ, ಮೇಲ್ವಿಚಾರಣೆ ಮತ್ತು ವಿನಿಯೋಗ.

ಊ) ಕಾರ್ಯಕಾರಿ ಸಮಿತಿಯ ಕೆಲಸಗಳನ್ನು ಪರಿಶೀಲಿಸುವುದಕ್ಕೆ ಅಖಿಲ ಮೈಸೂರು ಕಾಂಗ್ರೆಸ್ ಸಮಿತಿಗೆ ಅಧಿಕಾರವಿರತಕ್ಕದ್ದು.

14. ಇತರ ವಿಚಾರಗಳು

1. ವರ್ಷದ ಮಧ್ಯೆ ಸಮಿತಿಗಳ ಅಧಿಕಾರ ಸ್ಥಾನದಲ್ಲಾಗಲಿ ಸದಸ್ಯ ಸ್ಥಾನದಲ್ಲಾಗಲಿ ಬೀಳತಕ್ಕ ಖಾಲಿಗಳನ್ನು ಆಯಾ ಸಮಿತಿಯುವರೇ ಭರ್ತಿಮಾಡತಕ್ಕದ್ದು.

2. ಬಿನ್ನಾಂಶಗಳನ್ನು ಗಮನಿಸಬೇಕಾಗಿ ಬಂದಾಗ ಅರ್ಧ ಮತ್ತು ಅದಕ್ಕಿಂತಲೂ ಹೆಚ್ಚಾಗಿರುವ ಭಿನ್ನಾಂಶವನ್ನೂ ಒಂದು ಎಂದು ಭಾವಿಸಬೇಕು: ಅರ್ಧಕ್ಕಿಂತಲೂ ಕಡಿಮೆಯಾದ ಭಿನ್ನಾಂಶವನ್ನೂ ಸೊನ್ನೆಯೆಂದು ಭಾವಿಸಬೇಕು.

3. ಪ್ರತಿಯೊಂದು ಸ್ಥಳೀಯ ಸಮಿತಿಯೂ ಸಹ ಕಾರ್ಯಕಾರಿ ಸಮಿತಿಯವರು ಗೊತ್ತು ಮಾಡತಕ್ಕ ತಾರೀಖಿನೊಳಗಾಗಿ ಅಥವ ಅವರಿಂದ ಪಡೆಯಬಹುದಾದ ಅಧಿಕ ಕಾಲಾವಕಾಶದೊಳಗಾಗಿ ತನ್ನ ಪ್ರದೇಶದ ಸದಸ್ಯರ ಪಟ್ಟಿಯನ್ನು ಖಚಿತವಾಗಿ ಬರೆದು ಕಾರ್ಯಕಾರಿ ಸಮಿತಿಗೂ ಮತ್ತು ತನ್ನ ತಾಲ್ಲೂಕು ಮತ್ತು ಜಿಲ್ಲಾ ಸಮಿತಿಗೂ ಕಳುಹಿಸಿಕೊಡಬೇಕು. ಸಕಲ ಚುನಾವಣೆಗಳಲ್ಲಿಯೂ ಈ ಪಟ್ಟಿಯಲ್ಲಿ ಸೇರಿರತಕ್ಕ ಸದಸ್ಯರು ಮಾತ್ರವೇ ಮತ ಕೊಡಲು ಹಕ್ಕು ಉಳ್ಳವರಾಗಿರುವರು.

ಮೊದಲನೆಯ ಕಾರ್ಯಕಾರಿ ಸಮಿತಿ

ಶಿವಪುರ ಅಧಿವೇಶನದಲ್ಲಿ ಅಂಗೀಕೃತವಾದ ಮೈಸೂರು ಕಾಂಗ್ರೆಸ್ ರಚನೆಯ ನಿಬಂಧನೆಯಲ್ಲಿ ಅಧ್ಯಕ್ಷರು ಮೊದಲನೆ ವರ್ಷದ ಕಾರ್ಯಕಾರಿ ಸಮಿತಿಯನ್ನು ನೇಮಿಸಿಕೊಳ್ಳಬಹುದೆಂದು ತೀರ್ಮಾನವಾಯಿತು. ಅದರಂತೆ ಹಂಗಾಮಿ ಅಧ್ಯಕ್ಷರಾದ ಶ್ರೀ ಹೆಚ್. ಬಿ. ಗುಂಡಪ್ಪಗೌಡರು 13-4-1938 ರಂದು ರಚಿಸಿದ ಸಮಿತಿಯ ಸದಸ್ಯರು :

ಅಧ್ಯಕ್ಷರು : ಶ್ರೀ ಹೆಚ್. ಬಿ. ಗುಂಡಪ್ಪಗೌಡ. ಕಾರ್ಯದರ್ಶಿ : ಶ್ರೀ ವಿ. ಎಸ್. ನಾರಾಯಣರಾವ್ (1938 ರ ಪೂರ್ತಿ) ಖಜಾಂಚಿ : ಶ್ರೀ ಡಿ. ಎಸ್. ಮಲ್ಲಪ್ಪ (1938 ನೇ ಜೂನ್‌ವರೆಗೆ)

ಸದಸ್ಯರುಗಳು : ಶ್ರೀ ಹೆಚ್. ಸಿ. ದಾಸಪ್ಪ (ಇವರು ದಸ್ತಗಿರಿಯಾದ ಪ್ರಯುಕ್ತ ಇವರ ಸ್ಥಾನದಲ್ಲಿ ಸಾಹುಕಾರ್ ಎಸ್. ಚನ್ನಯ್ಯ) ಶ್ರೀ ತಗಡೂರು ರಾಮಚಂದ್ರರಾವ್, ಶ್ರೀ ವಿ. ವೆಂಕಟಪ್ಪ (ಇವರು ದಸ್ತಗಿರಿಯಾದ ಪ್ರಯುಕ್ತ ಇವರ ಸ್ಥಾನದಲ್ಲಿ ಶ್ರೀ ಕೆ. ಹನುಮಂತಯ್ಯ), ಶ್ರೀ ಕೆ. ಟಿ. ಭಾಷ್ಯಂ ಅಯ್ಯಂಗಾರ್ (ಇವರು ದಸ್ತಗಿರಿಯಾದ ಪ್ರಯುಕ್ತ ಇವರ ಸ್ಥಾನದಲ್ಲಿ ಶ್ರೀ ವೀರಕೇಸರಿ ಸೀತಾರಾಮ ಶಾಸ್ತ್ರಿ), ಶ್ರೀ ಕೆ. ಟಿ. ಸತ್ಯನಾರಾಯಣಶೆಟ್ಟಿ, ಶ್ರೀ ಹೆಚ್. ಸಿದ್ಧಯ್ಯ, ಶ್ರೀ ಎ. ಭೀಮಪ್ಪನಾಯಕ್, ಶ್ರೀ ಎನ್. ಸಿ. ತಿಮ್ಮಾರೆಡ್ಡಿ, ಶ್ರೀಮತಿ ಸುಬ್ಬಮ್ಮ ಜೋಯಿಸ್, ಶ್ರೀ ಕೆ. ಚಂಗಲರಾಯರೆಡ್ಡಿ (ಇವರು ದಸ್ತಗಿರಿಯಾದ ಪ್ರಯುಕ್ತ ಇವರ ಸ್ಥಾನದಲ್ಲಿ ಶ್ರೀ ಕೆ. ಸಂಪಂಗಿರಾಮಯ್ಯ), ಶ್ರೀ ಟಿ. ಸಿದ್ದಲಿಂಗಯ್ಯ (ಇವರು ದಸ್ತಗಿರಿಯಾದ ಪ್ರಯುಕ್ತ ಇವರ ಸ್ಥಾನದಲ್ಲಿ ಶ್ರೀ ಕೆ. ಆರ್. ಮಾಧವರಾವ್) ಮತ್ತು ಶ್ರೀ ಎಚ್. ಕೆ. ವೀರಣ್ಣಗೌಡ.

ಧ್ವಜಸತ್ಯಾಗ್ರಹದ ಮೂರನೇ ದಿನದ ಬಹಿರಂಗ ಸಭೆಯಲ್ಲಿ ಕಾಂಗ್ರೆಸ್ಸಿನ ಮುಂದಿನ ಅಧಿವೇಶನವು ಬೆಂಗಳೂರು ಜಿಲ್ಲೆಯಲ್ಲಿ ನಡೆಯಬೇಕೆಂದು ಬೆಂಗಳೂರಿನ

ಪರವಾಗಿ ಶ್ರೀ ಗುರುವಾರೆಡ್ಡಿಯವರು ಆಹ್ವಾನಿಸಿದರು. ಅದಕ್ಕೆ ಒಪ್ಪಿಗೆ ದೊರೆಯಿತು.

ಪ್ರತಿನಿಧಿಗಳಲ್ಲಿ ಕೆಲವರು ಭಾಷಣ ಮಾಡಿ ಕಾರ್ಯಕರ್ತರಿಗೆ ವಂದನೆಗಳನ್ನು ಅರ್ಪಿಸಿದರು. ಸ್ವಾಗತ ಸಮಿತಿಯವರ ಪರವಾಗಿ ಕಾರ್ಯದರ್ಶಿ ಶ್ರೀ ಎಚ್. ಕೆ. ವೀರಣ್ಣಗೌಡರು ರಾಷ್ಟ್ರಕೂಟದ ಯಶಸ್ಸಿಗೆ ಕಾರಣರಾದ, ಸರ್ವರೀತಿಯಲ್ಲೂ ಸಹಾಯ ಮಾಡಿದ ಕಾರ್ಯಕರ್ತರಿಗೆ, ಸ್ವಯಂ ಸೇವಕರಿಗೆ, ದೇಶ ಸೇವಕಿಯರಿಗೆ ಕೃತಜ್ಞತಾ ಪೂರ್ವಕವಾದ ವಂದನೆಗಳನ್ನು ಅರ್ಪಿಸಿದರು. ಎಂದಿನಂತೆ ಧ್ವಜ ರಕ್ಷಣೆಗೆ ಪ್ರಮುಖರು ಕುಳಿತರು.

ಉಳಿದವರು ಊಟಕ್ಕೆ ತೆರಳಿದರು. ಕಳೆದ ಎರಡು ದಿನಗಳು ಪ್ರತಿನಿಧಿಗಳಿಗೆ, ಟಿಕೆಟ್ ತೆಗೆದುಕೊಂಡಿದ್ದವರಿಗೆ ಮಾತ್ರ ಭೋಜನ ಸೌಲಭ್ಯವಿತ್ತು. ಆದರೆ ಇಂದು ಎಲ್ಲ ಸಭಿಕರಿಗೂ ಔತಣ ನೀಡಲಾಯಿತು.

ಸಾಯಂಕಾಲ 6 ಗಂಟೆಗೆ ಭಕ್ತಿಗೌರವಗಳೊಡನೆ ಧ್ವಜವನ್ನು ಇಳಿಸಿಕೊಳ್ಳಲಾಯಿತು. ಪೂಜೆ ಮಾಡಿ ಧ್ವಜ ಸ್ತಂಭವನ್ನು ಕದಲಿಸಿ ಕಲಶವನ್ನು ತೆಗೆದುಕೊಂಡು ಮೆರವಣಿಗೆ ಸಹಿತ ಸ್ವಾಗತ ಸಮಿತಿಯ ಕಚೇರಿಗೆ ತರಲಾಯಿತು. ಅಲ್ಲಿ ಸ್ವಯಂ ಸೇವಿಕೆಯರು ಆರತಿ ಬೆಳಗಿದರು. ಸಾವು ನೋವು ಸಂಭವಿಸದೆ ಮೂರು ದಿನಗಳೂ ಯಶಸ್ವಿಯಾಗಿ ಧ್ವಜ ಸತ್ಯಾಗ್ರಹ ನಡೆದುದರಿಂದ ಸತ್ಯಾಗ್ರಹಿಗಳ ಉತ್ಸಾಹಕ್ಕೆ ಎಣೆ ಇರಲಿಲ್ಲ. ಕಾರ್ಯಕ್ರಮದಂತೆ ಎಲ್ಲಾ ಕಾರ್ಯಕ್ರಮಗಳೂ ಸಾಂಗವಾಗಿ ನೆರವೇರಿದುವು. ಅಧ್ಯಕ್ಷರಾದ ಶ್ರೀ ಹೆಚ್. ಬಿ. ಗುಂಡಪ್ಪಗೌಡರು ಸಭಿಕರಿಗೆ ಘೋಷಿಸುವುದರ ಮೂಲಕ ಅಧಿವೇಶನವನ್ನು ಮುಕ್ತಾಯ ಮಾಡಿದರು. ಸೇರಿದ್ದ ಜನರು ಸಂತೋಷದಿಂದ ಜಯಘೋಷ ಮಾಡಿದರು.

ಅನುಕೂಲವಾದವರು ಸಂಜೆಯೇ ತಂತಮ್ಮ ಊರುಗಳಿಗೆ ತೆರಳಿದರು. ಪರಸ್ಥಳದ ಪ್ರಮುಖ ಮುಖಂಡರೂ ಹೊರಟರು. ವಾಹನ ಸೌಕರ್ಯವಿಲ್ಲದವರು ರಾತ್ರಿಯೂ ತಂಗಿದ್ದರು. ಅತಿಥಿಗಳು ಬಂದಾಗ ಹೇಗೆ ಪ್ರೀತಿವಿಶ್ವಾಸಗಳಿಂದ ಸ್ವಾಗತಿಸಿದರೋ ಹಾಗೆಯೇ ಅವರನ್ನು ಬೀಳ್ಕೊಡುವಾಗಲೂ ಸ್ವಯಂ ಸೇವಕರು ಸ್ವಯಂ ಸೇವಿಕೆಯರು ಬಿಡುವಿಲ್ಲದಂತೆ ಶ್ರಮಿಸಿದರು. ಶಿವಪುರ ಧ್ವಜಸತ್ಯಾಗ್ರಹದಿಂದ ಸ್ಫೂರ್ತಿ ಪಡೆದು, ಹಲವು ಸಂದೇಶಗಳನ್ನು ಮೈಗೂಡಿಸಿಕೊಂಡು ಸತ್ಯಾಗ್ರಹಿಗಳು ಹೊರಡಲು ಅಣಿಯಾದರು. ಇಡೀ ರಾತ್ರಿ ಜನರ ಗಜಿ ಬಿಜಿ ಇತ್ತು. ಮೂರು ದಿನಗಳಿಂದ ಶಿವಪುರವನ್ನು ತುಂಬಿದ್ದ ಜನರು ಕ್ರಮೇಣ ಕಡಮೆಯಾದರು. ಅಲ್ಲಿಯ ಅನುಭವ ಯಾರ್ಯಾರ ಹೃದಯದಲ್ಲಿ ಎಂತೆಂಥ ಕಿಡಿಯನ್ನು ಹೊತ್ತಿಸಿತೋ ಅಲ್ಲಿನ ಅನುಭವವನ್ನು ಯಾರ್ಯಾರು ಹೇಗೆ ಹೇಗೆ ಅಭಿವ್ಯಕ್ತಿಸುತ್ತಾರೋ ಯಾರಿಗೆ

ಗೊತ್ತು? ಇಷ್ಟು ಮಾತ್ರ ನಿಜ. ಜನಸಾಮಾನ್ಯರಿಗೆ ಸತ್ಯಾಗ್ರಹಿಗಳಿಗೆ ಅಲ್ಲಿ ದೊರಕಿದ ಬೆಳಕು ಸಾಮಾನ್ಯವಾದುದಲ್ಲ. ಮುಂದೆ ಅದು ನಾನಾ ರೀತಿಯಲ್ಲಿ ಮಹಾ ಜ್ಯೋತಿಯಾಗಿ ಬೆಳಗಿ ಹರಡಿಕೊಂಡಿದ್ದು ಖಂಡಿತ.

ಶಿವಪುರ ರಾಷ್ಟ್ರಕೂಟ ಮತ್ತು ಧ್ವಜಾರೋಹಣಗಳು ಅಷ್ಟೊಂದು ನಿರಾಳವಾಗಿ ನಡೆಯುತ್ತವೆ ಎಂದು ಯಾರು ನಂಬಿದ್ದರು? ಸರಕಾರದ ಕಾನೂನನ್ನು ಉಲ್ಲಂಘಿಸುವ ಸ್ಥಳ ಎಂದರೆ ಅಲ್ಲಿ ಹೆಣಗಳ ರಾಶಿ ಕಟ್ಟಿಟ್ಟ ಬುತ್ತಿ ಎಂಬುದು ಎಲ್ಲರ ನಂಬಿಕೆಯಾಗಿದ್ದ ಕಾಲ ಅದು. 1937 ರ ಇಸವಿಯಲ್ಲಿ ರಾಜಕೀಯ ಮುಖಂಡರ ಮೇಲೆ ಸರಕಾರ ನಡೆಸಿದ ದಬ್ಬಾಳಿಕೆ ಪ್ರವೃತ್ತಿ ಶಿವಪುರ ರಾಷ್ಟ್ರಕೂಟದಲ್ಲಿ ವಿಚಿತ್ರವಾಗಿ ಮಾರ್ಪಾಟಾಗುವುದೆಂದು ಯಾರೂ ಕಲ್ಪಿಸಿಕೊಂಡಿರಲಿಲ್ಲ. ಮುಖಂಡರ ದಸ್ತಗಿರಿಯ ವ್ಯಥೆಯನ್ನು ಬಿಟ್ಟರೆ ರಾಷ್ಟ್ರಧ್ವಜದ ಗೌರವ ರಕ್ಷಣೆಯಲ್ಲಿ ಮೈಸೂರಿನ ಸತ್ಯಾಗ್ರಹಿಗಳು ಇತರರಿಗೆ ಆದರ್ಶವಾಗಿದ್ದರು. ಅಖಿಲ ಭಾರತದ ಕಾಂಗ್ರೆಸ್‌ನ ಮುಖಂಡರು ಮೈಸೂರಿನವರಿಗೆ ರಾಷ್ಟ್ರಧ್ವಜ ರಕ್ಷಣೆಯ ಶಕ್ತಿಯಿಲ್ಲ, ಸತ್ಯಾಗ್ರಹ ಮಾಡುವುದಕ್ಕೆ ಗೊತ್ತಿಲ್ಲ ಎಂದು ಹೊರಿಸಿದ್ದ ಆಪಾದನೆಗಳನ್ನು ನಮ್ಮ ಸತ್ಯಾಗ್ರಹಿಗಳು ನಿವಾರಿಸಿಕೊಂಡರು. ಮೈಸೂರು ಕಾಂಗ್ರೆಸ್ ತನ್ನ ಅಗ್ನಿ ಪರೀಕ್ಷೆಯಲ್ಲಿ ಜಯಗಳಿಸಿತು.

ಆದರಲ್ಲಿ ಪಾಲ್ಗೊಂಡ ನೂರಾರು ಸತ್ಯಾಗ್ರಹಿಗಳ ಸಂತೋಷವನ್ನು ವರ್ಣಿಸುವುದಕ್ಕಾಗುವುದಿಲ್ಲ. ಧರ್ಮಯುದ್ಧವೊಂದರಲ್ಲಿ ಗೆದ್ದ ಸಂತೋಷ, ಸಾರ್ಥಕವಾದ ಕಾರ್ಯವೊಂದನ್ನು ಸಾಧಿಸಿದ ಆನಂದ ಅವರಿಗಾಯಿತು. ಅನೇಕರು ತಮ್ಮ ಜೀವನದ ಮುಂದಿನ ದಾರಿಯನ್ನು ಈ ಸತ್ಯಾಗ್ರಹದ ಮೂಲಕ ಕಂಡುಕೊಂಡರು. ಮಹಾತ್ಮ ಗಾಂಧೀಜಿಯವರ ಈ ಅಸ್ತ್ರ ಇಷ್ಟೊಂದು ಹೃದಯಗಳನ್ನು ಬೆಳಗಿಸಿದ್ದು, ಇಷ್ಟೊಂದು ಜನರನ್ನು ಸುಲಭವಾಗಿ ತನ್ನ ಸಮ್ಮೋಹಕ ಶಕ್ತಿಗೆ ಈಡುಮಾಡಿಕೊಂಡಿದ್ದು ಭಾರತದ ಪುಣ್ಯ. ಶಿವಪುರದ ತುಂಬ ಜಯಘೋಷಗಳನ್ನು ಮೊಳಗಿಸುವ, ಮಿಗಿಲಾದ ಆನಂದದಿಂದ ಕಂಗೊಳಿಸುವ ಮುಖಗಳ ಪ್ರದರ್ಶನ ಅಂದು ಆಯಿತು. ಯುದ್ಧದಲ್ಲಿ ಗೆದ್ದು ಎದೆ ಚಾಚಿ ಸಂತೋಷದಿಂದ ತಂತಮ್ಮ ಮನೆಗಳಿಗೆ ಹಿಂದಿರುಗುವ ವೀರ ಯೋಧರಂತೆ ಸತ್ಯಾಗ್ರಹಿಗಳು ಹೆಮ್ಮೆಯಿಂದ ಬೀಗುತ್ತಾ ಉತ್ಸಾಹದಿಂದ ಕುಣಿಯುತ್ತಾ ತಂತಮ್ಮ ಸ್ಥಳಗಳಿಗೆ ತೆರಳಿದರು.

ಅನೇಕ ಉಪನ್ಯಾಸಗಳನ್ನು ಕೇಳಿ, ಅನೇಕ ವಿಷಯಂಗಳನ್ನು ಹೊಸದಾಗಿ ಮನನ ಮಾಡಿ, ತಮ್ಮ ವ್ಯಕ್ತಿತ್ವವನ್ನು ಗುರುತಿಸಿಕೊಂಡು ಸಾವಿರಾರು ಹಳ್ಳಿಗರು ಪವಿತ್ರವಾದ ಯಜ್ಞವೊಂದರಲ್ಲಿ ಭಾಗವಹಿಸಿದ ಧನ್ಯತೆಯನ್ನು ಅನುಭವಿಸಿದರು.

ಮುಂದೆ ಇಂಥ ಅಧಿವೇಶನಗಳಲ್ಲಿ ಭಾಗವಹಿಸುವ ಕ್ರಿಯಾತ್ಮಕ ಭಾವ ಕೆಲವರಲ್ಲಿ ಉದಿಸಿತು. ಏನೆಲ್ಲ ಹೊಸ ಹೊಸ ಅನುಭವಗಳನ್ನು ತಲೆಯತುಂಬ ತುಂಬಿಕೊಂಡು ಸಂಭ್ರಮದಿಂದ ತಮ್ಮ ಊರುಗಳಿಗೆ ತೆರಳಿದರು. ನಾಳೆಯ ಧ್ವಜಸತ್ಯಾಗ್ರಹವನ್ನು ನೋಡುವ ಕುತೂಹಲದಿಂದ ಉಳಿದುಕೊಂಡವರೂ ಉಂಟು.

ಶಿವಪುರ ರಾಷ್ಟ್ರಕೂಟದ ವರದಿಯನ್ನು ನಾಡಿನ ಪ್ರಮುಖ ಪತ್ರಿಕೆಗಳು ದಪ್ಪ ದಪ್ಪ ಅಕ್ಷರಗಳಲ್ಲಿ ಪ್ರಕಟಿಸಿದುವು. ಧ್ವಜಸತ್ಯಾಗ್ರಹದ ಯಶಸ್ಸಿನ ಸುದ್ದಿ ದೇಶದ ತುಂಬಾ ಹರಡಿತು. ಇದು ಇತರರಿಗೆ ಸಾಕಷ್ಟು ಸ್ಫೂರ್ತಿ ನೀಡಿತು. ಆದರೆ ಸರಕಾರದ ಪರವಾದ 'ಟೈಂಸ್ ಆಫ್ ಇಂಡಿಯಾ' ದಂಥ ಪತ್ರಿಕೆಗಳು ಶಿವಪುರ ರಾಷ್ಟ್ರಕೂಟದ ಚಟುವಟಿಕೆಗಳನ್ನು 'ಲಾಲೆಸ್‌ನೆಸ್' (ಪುಂಡಾಟ) ಎಂದು ಕರೆಯಿತು. ಆದರೆ ಆ ಸಂಕುಚಿತ ಹೇಳಿಕೆಯನ್ನು ನಂಬುವಷ್ಟು ಜನರು ದಡ್ಡರಾಗಿರಲಿಲ್ಲ. ಶಿವಪುರ ರಾಷ್ಟ್ರಕೂಟ ಜನತಾ ಆಂದೋಳನ. ಪ್ರತಿಯೊಬ್ಬ ಸ್ವಾತಂತ್ರ್ಯ ಪ್ರೇಮಿಯೂ ಸ್ವಾಗತಿಸಬೇಕಾದ ಕಾರ್ಯಚಟುವಟಿಕೆ. ಅದನ್ನು ತೆಗಳಿದ್ದು ಒಂದೆರಡು ಪತ್ರಿಕೆಗಳಾದರೆ, ಹಾಡಿ ಹರಸಿದ ಪತ್ರಿಕೆಗಳು ಹಲವು. ಈ ದಿಶೆಯಲ್ಲಿ ಸಂಯುಕ್ತ ಕರ್ನಾಟಕ, ವಿಶ್ವಕರ್ನಾಟಕ, ಜನವಾಣಿ. ತಾಯಿನಾಡು ಪತ್ರಿಕೆಗಳ ಪಾತ್ರ ಹಿರಿದು. ಸುಮಾರು 50,000 ಜನರು ಶಿವಪುರ ಧ್ವಜ ಸತ್ಯಾಗ್ರಹವನ್ನು ಕಣ್ಣಾರೆ ಕಂಡರೆ, ಕೋಟ್ಯನುಕೋಟಿ ಜನರು ಪತ್ರಿಕೆಗಳ ಮೂಲಕ ಕಂಡರು. ಭಾರತದ ಸ್ವಾತಂತ್ರ್ಯ ಸಂಗ್ರಾಮದ ಆಂದೋಳನಗಳ ಸಾಲಿಗೆ ಶಿವಪುರ ಧ್ವಜ ಸತ್ಯಾಗ್ರಹ ಸೇರಿಹೋಯಿತು.

ಮೂರನೆಯ ದಿನ ಧ್ವಜಸತ್ಯಾಗ್ರಹದಲ್ಲಿ ಬಂಧಿತರಾದವರಲ್ಲಿ ಒಬ್ಬರಾದ ಶ್ರೀಮಂತಿ ಬಳ್ಳಾರಿ ಸಿದ್ಧಮ್ಮನವರ ಬಂಧನ ಮೈಸೂರು ಸಂಸ್ಥಾನ ಸ್ತ್ರೀಯರಿಗೇ ಹೆಮ್ಮೆಯನ್ನುಂಟು ಮಾಡುವಂತಾಯಿತು. ಸ್ತ್ರೀ ಸತ್ಯಾಗ್ರಹಿಗಳ ಶಕ್ತಿ ಸಾಮರ್ಥ್ಯ ದೇಶಭಕ್ತಿಗಳಿಗೆ ಅವರು ಮಕುಟಪ್ರಾಯರಾದರು. ಶಿವಪುರ ಧ್ವಜಸತ್ಯಾಗ್ರಹದಲ್ಲಿ ಸಕ್ರಿಯವಾಗಿ ಪಾಲ್ಗೊಂಡ ಸ್ತ್ರೀಯರ ಪಾತ್ರ ಕಡಮೆಯೇನಲ್ಲ. ಅವರ ಬಗೆಗೆ ಪತ್ರಿಕೆಗಳಲ್ಲಿ ಅಗ್ರಲೇಖನಗಳೇ ಪ್ರಕಟವಾದುವು.

ಕರ್ನಾಟಕದ ವೀರ ಮಹಿಳೆಯರು*

"ಶಿವಪುರದಲ್ಲಿ ರಾಷ್ಟ್ರಧ್ವಜವನ್ನೇರಿಸಿಕೊಡಬಾರದೆಂದು ಮೈಸೂರು ಸಂಸ್ಥಾನ ಸರಕಾರದವರು ನಿರ್ಧರಿಸಿ ದಬ್ಬಾಳಿಕೆಯನ್ನು ಪ್ರಾರಂಭಿಸಿರುವರಷ್ಟೆ. ಈ ದಬ್ಬಾಳಿಕೆಯನ್ನು ಪ್ರತಿಭಟಿಸುವದಕ್ಕಾಗಿ ಸಂಸ್ಥಾನದ ಪ್ರಜರೆಲ್ಲ. ಹೆಣ್ಣು ಮಕ್ಕಳು, ಗಂಡಸರು,

*ಸಂಯುಕ್ತ ಕರ್ನಾಟಕ, 14-4-1938.

ಹುಡುಗರು, ಸನ್ನದ್ಧರಾಗಿ ಕಷ್ಟನಷ್ಟಗಳನ್ನು ಸಹಿಸಲು ಸಿದ್ಧರಾಗಿರುವರು. ಒಮ್ಮೆ ಏರಿಸಿದ ಧ್ವಜವನ್ನು ಕೆಳಗಿಳಿಸಕೊಡಲಾರೆವೆಂದು ಕರ್ನಾಟಕದ ವೀರ ಮಹಿಳೆಯರು ಗಂಡುಗಲಿಗಳಂತೆ ಸೆಡ್ಡು ಹೊಡೆದು ನಿಂತು ಕರ್ನಾಟಕದ ಕೀರ್ತಿಯನ್ನು ಹೆಚ್ಚಿಸಿದರು. ಸೌ. ಸಿದ್ಧಮ್ಮ ಬಳ್ಳಾರಿ, ಸೌ. ಯಶೋಧರಮ್ಮ ದಾಸಪ್ಪ ಮೊದಲಾದ ಆದರ್ಶ ನಾರೀಮಣಿಗಳು ಏರಿಸಲ್ಪಟ್ಟ ಧ್ವಜವನ್ನು ಯಾರೂ ಕೆಳಗಿಳಿಸಲಾರರೆಂದು ಹೇಳಿ ಸಾಯಂಕಾಲದವರೆಗೆ ಸರ್ಪಕಾವಲು ಮಾಡಿದ್ದುದು ಮೈಸೂರಿನ ಇತಿಹಾಸದಲ್ಲಿ ಚಿರಸ್ಮರಣೀಯವಾಗುಳಿಯುವದು. ಹೆಣ್ಣು ಮಕ್ಕಳ ಈ ನಿರ್ಧಾರವನ್ನೂ ರಾಷ್ಟ್ರಧ್ವಜದ ಮಾನವನ್ನು ರಕ್ಷಿಸುವದಕ್ಕಾಗಿ ಎಂತಹ ಕಷ್ಟನಷ್ಟಗಳನ್ನು ಸಹಿಸಲು ಸಿದ್ಧರಾದ ಈ ಲಲನಾಮಣಿಗಳ ಧೈರ್ಯವನ್ನೂ ಮೈಸೂರು ಸರಕಾರದವರು ಕೂಡ ಹೊಗಳದಿರಲಾರರು. ಸೌ. ಸಿದ್ದಮ್ಮ ಬಳ್ಳಾರಿಯವರು ಈ ಸಂಬಂಧದಲ್ಲಿ ಸೆರೆ ಹಿಡಿಯಲ್ಪಟ್ಟಿರುವರೆಂದೂ ಸುದ್ದಿ ಬಂದಿದೆ.

ರಾಷ್ಟ್ರಧ್ವಜದ ಬಗ್ಗೆ ಮೈಸೂರ ಸರಕಾರದವರು ಇಷ್ಟೊಂದು ಆಗ್ರಹವನ್ನೇಕೆ ತಳೆಯುತ್ತಿರುವರು ಎಂಬುದು ತಿಳಿಯದಾಗಿದೆ. ಮೈಸೂರಿನ ಮಹಾರಾಜರ ಪ್ರತ್ಯೇಕ ಧ್ವಜವಿದ್ದಾಗ ಕಾಂಗ್ರೆಸ್ಸಿನ ಧ್ವಜವನ್ನೇರಿಸುವದು ಮಹಾರಾಜರ ಸರಕಾರಕ್ಕೆ ಅವಮಾನಕರವೆಂದು ಭಾವಿಸುವದು ಎಷ್ಟು ಮಾತ್ರವೂ ಸರಿಯಲ್ಲ. ಬ್ರಿಟಿಷ್ ಹಿಂದೂಸ್ತಾನದಲ್ಲಿ ಯೂನಿಯನ್ ಜಾಕ್‌ವಿದ್ದರೂ ಈ ರಾಷ್ಟ್ರಧ್ವಜಕ್ಕೆ ಅಡ್ಡಿ ಇಲ್ಲೆಂದ ಬಳಿಕ ಮೈಸೂರು ಸಂಸ್ಥಾನದಲ್ಲಿಯೇ ಏಕೆ ಪ್ರತಿಬಂಧವೋ ತಿಳಿಯದಾಗಿದೆ. ಮೈಸೂರು ಮುಖಂಡರು ಈ ಬಗ್ಗೆ ಕೊಟ್ಟ ಅಭಿಪ್ರಾಯವು ಯೋಗ್ಯವಾಗಿದೆ. ಮೈಸೂರು ಸರಕಾರದವರು ಇನ್ನಾದರೂ ಈ ಚಲವನ್ನು ಬಿಟ್ಟುಗೊಟ್ಟು ರಾಷ್ಟ್ರಧ್ವಜಕ್ಕೆ ಯೋಗ್ಯ ಮನ್ನಣೆ ಕೊಡುವರೆಂದು ನಂಬಲಾಗಿದೆ."

ಶಿವಪುರ ಧ್ವಜಸತ್ಯಾಗ್ರಹದ ಯಶಸ್ಸನ್ನು, ಮೈಸೂರು ಸತ್ಯಾಗ್ರಹಿಗಳ ಸಾಮರ್ಥ್ಯವನ್ನು ಕುರಿತು ದೇಶದ ನಾನಾ ಕಡೆಗಳಿಂದ ಅನೇಕರು ತಮ್ಮ ಅಭಿನಂದನೆಗಳನ್ನು ಕಾರ್ಯಕರ್ತರಿಗೆ ಸೂಚಿಸಿದರು. ಧಾರವಾಡದಿಂದ ಶ್ರೀ ಮುದವೀಡು ಕೃಷ್ಣರಾಯರು ಪ್ರಕಟಿಸಿದ ಒಂದು ಪತ್ರ ಹೀಗಿದೆ :

ಮೈಸೂರಿನ ವೀರಕನ್ನಡಿಗರ ಅಭಿನಂದನ*

"ನಮ್ಮ ಪ್ರಾಣ ಪದಕವಾಗಿರುವ ರಾಷ್ಟ್ರಧ್ವಜದ ಸನ್ಮಾನ ರಕ್ಷಣೆಗಾಗಿ ನೀವು ಕೈಕೊಂಡಿರುವ ಶಾಂತಿಮಯ ಸಂಗ್ರಾಮದಲ್ಲಿ ಇಡೀ ರಾಷ್ಟ್ರವೇ ನಿಮಗೆ ಬೆಂಬಲವಾಗಿ ನಿಲ್ಲದಿರದು. ಅಖಂಡ ಕರ್ನಾಟಕದ ಕೀರ್ತಿಯನ್ನು ಮೈಸೂರಿನವರು

*ಸಂಯುಕ್ತ ಕರ್ನಾಟಕ, 16-4-1938.

ಇಂದಿನವರೆಗೆ ರಾಷ್ಟ್ರಸೇವಾ ಕಾರ್ಯದಲ್ಲಿ ಬೆಳಗಿಸುತ್ತಾ ಬಂದಿರುವದನ್ನು ಕನ್ನಡ ನಾಡಿನ ಬೇರೆ ಭಾಗಗಳವರು ಎಂದಿಗೂ ಮರೆಯಲಾರರು. ನಿಮ್ಮ ಪ್ರಚಂಡ ಸಾಹಸದಲ್ಲಿ ಕರ್ನಾಟಕದ ಕಡುಗಲಿಗಳಾದ ಆಬಾಲವೃದ್ಧ ಸ್ತ್ರೀ ಪುರುಷರು ನೀವು ಅಪೇಕ್ಷಿಸದಿದ್ದರೂ ನಿಮಗೆ ಅಖಂಡವಾಗಿ ನೆರವಾಗದಿರಲಾರರೆಂಬ ಭರವಸೆಯನ್ನು ಈ ಮೂಲಕ ನಿಮಗೆ ಅಂತಃಕರಣ ಪೂರ್ವಕವಾಗಿ ನಾನು ಕೊಡಬಯಸುತ್ತೇನೆ. ಭಗವಂತನು ನನ್ನ ಆಕಾಂಕ್ಷೆಯನ್ನು ಈಡೇರಿಸದಿರಲಾರನು.

ಸತ್ಯಮೇವ ಜಯಂತೆ !"

ಮೂರು ದಿನಗಳವರೆಗೆ ಶಿವಪುರ ರಾಷ್ಟ್ರಕೂಟ ಯಶಸ್ವಿಯಾಗಿ ನಡೆಯಿತು. ಮದ್ದೂರಿನ ಸುತ್ತ 2 ಮೈಲಿಯ ಸುತ್ತಳತೆಯಲ್ಲಿ ಒಂದು ತಿಂಗಳವರೆಗೆ ಧ್ವಜ ಸತ್ಯಾಗ್ರಹ ಮಾಡಬಾರದೆಂದು ಸರಕಾರ ಪ್ರತಿಬಂಧಕಾಜ್ಞೆ ಹೊರಡಿಸಿದ್ದನ್ನು ತೀವ್ರವಾಗಿ ವಿರೋಧಿಸವುದಕ್ಕಾಗಿ ಪ್ರತಿಬಂಧಕಾಜ್ಞೆಯ ವಾಯಿದೆ ಮುಗಿಯುವ ವರೆಗೂ ಶಿವಪುರದಲ್ಲಿ ಧ್ವಜ ಸತ್ಯಾಗ್ರಹ ನಡೆಸಬೇಕೆಂದು ಮೈಸೂರು ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರು ಉದ್ದೇಶಿಸಿದರು. ಅದಕ್ಕಾಗಿ ಹೊಸದಾದ 'ಸತ್ಯಾಗ್ರಹಾಶ್ರಮ'ವನ್ನು ನಿರ್ಮಾಣಮಾಡಲು ಸಿದ್ಧತೆ ನಡೆಯಿತು.

ಏಪ್ರಿಲ್ 14, 1938 : ಸತ್ಯಾಗ್ರಹಾಶ್ರಮದ ಸ್ಥಾಪನೆ

ಪ್ರತಿನಿಧಿಗಳ ಬಿಡಾರದ ಮುಂದಿದ್ದ ಶ್ರೀ ತಿರುಮಲೇಗೌಡರ ಪಾಳು ಜಾಗದಲ್ಲಿ 13-4-1938 ರ ರಾತ್ರಿಯಲ್ಲಿ ಸತ್ಯಾಗಹಿಗಳು ಒಂದು ಗುಡಿಸಲನ್ನು ನಿರ್ಮಿಸಿದರು. ಅಲ್ಲಿದ್ದ ಕಾಂಪೌಂಡ್ ಗೋಡೆಯನ್ನು ಕೆಡವಿ ಅದು ಬಹಿರಂಗ ಸಭಾಂಗಣವಾಗು ವಂತೆ ಮಾಡಿದರು. ಗುಡಿಸಲ ಮೇಲೆ ಧ್ವಜ ವೇದಿಕೆಗೆ ಎದುರಾಗಿ ಆಳೆತ್ತರದ ಮಹಾತ್ಮ ಗಾಂಧೀಜಿಯವರ ಭಾವ ಚಿತ್ರವನ್ನು ಕಟ್ಟಲಾಯಿತು. ಚಿತ್ರದ ಕೆಳಗಡೆ 'ಸತ್ಯಾಗ್ರಹಾಶ್ರಮ, ಶಿವಪುರ' ಎಂದು ಖಾದಿ ಬಟ್ಟೆಯಲ್ಲಿ ದೊಡ್ಡದಾಗಿ ಬರೆದ ಬೋರ್ಡನ್ನು ಜೋಡಿಸಲಾಯಿತು. ಒಂದೇ ರಾತ್ರಿಯಲ್ಲಿ ಸತ್ಯಾಗ್ರಹಾಶ್ರಮ ಸಿದ್ಧವಾಯಿತು.

ವರ್ಕಿಂಗ್ ಕಮಿಟಿಯವರು ಶ್ರೀ ತಗಡೂರು ರಾಮಚಂದ್ರರಾಯರನ್ನು ಆಶ್ರಮದ ಮುಖಂಡರನ್ನಾಗಿ ನೇಮಿಸಿದರು. ಸತ್ಯಾಗ್ರಹಿಗಳ ಊಟೋಪಚಾರ ವನ್ನು ನೋಡಿಕೊಳ್ಳಲು ದೊಡ್ಡಬಳ್ಳಾಪುರದ ಶ್ರೀ ತಮ್ಮಯ್ಯನವರು ನೇಮಕ ವಾದರು. ಒಂದು ತಿಂಗಳವರೆಗೆ ಧ್ವಜ ಸತ್ಯಾಗ್ರಹ ನಡೆಯುವುದರಿಂದ ಹೆಚ್ಚು ಜನ ಸತ್ಯಾಗ್ರಹಿಗಳು ಭಾಗವಹಿಸಲು ಅವಕಾಶವಿತ್ತು. ಹದಿನೈದು ಜನ ಸತ್ಯಾಗ್ರಹಿ ಗಳಿಂದ ಆಶ್ರಮ ಪ್ರಾರಂಭವಾಯಿತು.

ಏಪ್ರಿಲ್ 14, 1938 ರ ಬೆಳಗ್ಗೆ ಸತ್ಯಾಗ್ರಹಿಗಳು ಶಿವಪುರ ಮತ್ತು ಮದ್ದೂರು ಬೀದಿಗಳಲ್ಲಿ ಪ್ರಭಾತಫೇರಿ ಮಾಡಿದರು. ಬೆಳಗ್ಗೆ 8 ಗಂಟೆಗೆ ಸರಿಯಾಗಿ ಕಾಂಗ್ರೆಸ್‌ನ ಹಂಗಾಮಿ ಅಧ್ಯಕ್ಷರಾದ ಶ್ರೀ ಹೆಚ್. ಬಿ. ಗುಂಡಪ್ಪಗೌಡರು ಸಾವಿರಾರು ಜನರ ಉತ್ಸಾಹಭರಿತವಾದ ಜಯಘೋಷಗಳೊಡನೆ, ದೇಶ ಸೇವಿಕೆಯರ ಸುಶ್ರಾವ್ಯವಾದ ರಾಷ್ಟ್ರಗೀತೆಯ ಅನಂತರ, ಸತ್ಯಾಗ್ರಹಾಶ್ರಮವನ್ನು ಉದ್ಘಾಟಿಸಿದರು. ಅಲ್ಲದೆ, ಪ್ರತಿಬಂಧಕಾಜ್ಞೆಯನ್ನು ಉಲ್ಲಂಘಿಸುವುದಾಗಿ ಘೋಷಿಸಿ ರಾಷ್ಟ್ರಧ್ವಜವನ್ನು ಆರೋಹಣ ಮಾಡಿದರು. ಹಿಂದಿನ ದಿನಗಳಂತೆ ಇಂದೂ ಕೂಡ ಪೋಲೀಸ್ ಅಧಿಕಾರಿಗಳು ತಮ್ಮ ಸಿಬ್ಬಂದಿಯೊಡನೆ ಹಾಜರಿದ್ದರು. ಕಾನೂನನ್ನು ವಿರೋಧಿಸಿ ಧ್ವಜಾರೋಹಣ ಮಾಡಿದರೂ ಪೋಲೀಸ್ ಅಧಿಕಾರಿಗಳು ಶ್ರೀ ಗುಂಡಪ್ಪಗೌಡರನ್ನು ಬಂಧಿಸಲಿಲ್ಲ. ಜನರಿಗೆ ಇದು ಆಶ್ಚರ್ಯವಾಗಿ ಕಾಣಿಸಿತು. ಈವರೆಗೆ ಧ್ವಜಾರೋಹಣ ಮಾಡಿದವರನ್ನೆಲ್ಲ ಬಂಧಿಸಲಾಗಿತ್ತು. ಆದರೆ ಯಾಕೋ ಏನೋ ಹಾಗೆ ಮಾಡಲಿಲ್ಲ.* ಧ್ವಜಾರೋಹಣದ ಅನಂತರ ಶ್ರೀ ಗುಂಡಪ್ಪಗೌಡರು ಹೀಗೆ ಭಾಷಣ ಮಾಡಿದರು: "ಶಿವಪುರದಲ್ಲಿ ಕಾಂಗ್ರೆಸ್ ಶಿಸ್ತು ಶಾಂತಿಗಳಿಂದ ಕೂಡಿದ ಸತ್ಯಾಗ್ರಹವನ್ನು ಹೂಡುವುದು. ಈ ಪ್ರಚಂಡ ಸಭೆಗಳನ್ನು ನೋಡಿ ಸರಕಾರಕ್ಕೆ ದಿಗ್ಭ್ರಮೆ ಹಿಡಿದಿದೆ. ಎಂತಹ ದುರ್ಘಟನೆಗಳೇ ಒದಗಲಿ ರಾಷ್ಟ್ರಧ್ವಜದ ಘನತೆಯನ್ನು ತಗ್ಗಿಸಕೂಡದು."

ಸೇವಾದಳದ ನಾಯಕರಾದ ಡಾ॥ ಪಾರ್ಥನಾರಾಯಣ ಪಂಡಿತರು ಸಭಿಕರನ್ನು ಕುರಿತು ಹೀಗೆ ಧೈರ್ಯದಿಂದ ಉಪನ್ಯಾಸಿಸಿದರು: "ನಾವು ಸರಕಾರಕ್ಕೆ ಸವಾಲು ಹಾಕಿದ್ದೇವೆ. ನಮ್ಮಲ್ಲಿಯೂ ಸರಕಾರದವರಲ್ಲಿಯೂ ಶಿಬಿರಗಳಿವೆ. ಆದರೆ ನಮಗೆ ಮಹಾತ್ಮರ ಮುಂದಾಳುತನವಿದೆ. ನಾವು ಕಾನೂನು ಭಂಗ ಮಾಡುತ್ತೇವೆ." ಸತ್ಯಾಗ್ರಹಾಶ್ರಮದ ಮುಖ್ಯಸ್ಥರಾದ ಶ್ರೀ ತಗಡೂರು ರಾಮಚಂದ್ರರಾಯರು, "ರಾಷ್ಟ್ರಧ್ವಜದ ಗೌರವವನ್ನು ಉಳಿಸಲು ಒಂದು ಸತ್ಯಾಗ್ರಹಾಶ್ರಮವನ್ನು ಹೂಡಲಾಗುತ್ತಿದೆ. ದೇಶಾಭಿಮಾನಿಗಳು ಸಹಕರಿಸಬೇಕು" ಎಂದು ಪ್ರಾರ್ಥಿಸಿದರು.

ಅಂದು ಧ್ವಜಾರೋಹಣ ಮಾಡಿದವರನ್ನಾಗಲೀ, ಕಾಯಿದೆ ಭಂಗ ಮಾಡುವುದಾಗಿ ಘೋಷಿಸಿದವರನ್ನಾಗಲೀ ಪೋಲೀಸ್ ಅಧಿಕಾರಿಗಳು ಬಂಧಿಸಲಿಲ್ಲ. ಅದೇ ದಿನ ರಾತ್ರಿ ಶ್ರೀ ಗುಂಡಪ್ಪಗೌಡರ ಅಧ್ಯಕ್ಷತೆಯಲ್ಲಿ ಹೊಸ ಕಾರ್ಯಕಾರಿ ಸಮಿತಿಯ ಸದಸ್ಯರು ಸಭೆ ಸೇರಿ ಮುಂದೆ ಮಾಡಬೇಕಾದ ಕಾರ್ಯಕ್ರಮಗಳ ಬಗೆಗೆ ಚರ್ಚಿಸಿದರು. ಅನಂತರ ಹೀಗೆ ನಿರ್ಣಯಗಳನ್ನು ಅಂಗೀಕರಿಸಲಾಯಿತು.

---

*ಸರಕಾರದ ಉನ್ನತ ಅಧಿಕಾರವನ್ನು ಕೊಟ್ಟು ಶ್ರೀ ಗುಂಡಪ್ಪಗೌಡರನ್ನು ತನ್ನ ಕಡೆಗೆ ಇಟ್ಟುಕೊಳ್ಳಲು ಸರಕಾರ ತೀರ್ಮಾನಿಸಿ ಹಾಗೆ ಮಾಡಿತು ಎಂದು ಅನಂತರ ಸುದ್ದಿ ಹಬ್ಬಿತು.

ಸತ್ಯಾಗ್ರಹಾಶ್ರಮದ ನಿರ್ಣಯಗಳು

1) ಮದ್ದೂರು ಬಳಿ ಶಿವಪುರದಲ್ಲಿ ಮೈಸೂರು ಕಾಂಗ್ರೆಸ್ ಅಧಿವೇಶನವು ಪ್ರಾರಂಭವಾದಾಗ ಮೈಸೂರು ಜಿಲ್ಲಾ ಮ್ಯಾಜಿಸ್ಟ್ರೇಟರು 39ನೆಯ ಕಾನೂನಿನನ್ವಯ ಮೈಸೂರ್ ಕಾಂಗ್ರೆಸ್ ಮುಖಂಡರ ಹಾಗೂ ವ್ಯವಸ್ಥಾಪಕರ ಮೇಲೆ ರಾಷ್ಟ್ರಧ್ವಜಾರೋಹಣ ಮಾಡಬಾರದಾಗಿ ಹುಕುಂ ಜಾರಿ ಮಾಡಿದ್ದಾರೆ. ಈ ಕಾರ್ಯಕ್ರಮವು ಮೊದಲೇ ಪ್ರಕಟವಾಗಿದ್ದು ಖಾಸಗಿ ಸ್ಥಳದಲ್ಲಿ ಧ್ವಜ ವಂದನೆಯಾಗುವುದೆಂದು ಪ್ರಸಿದ್ಧಿಸಲಾಗಿತ್ತು. ಸರಕಾರದ ವತಿಯಿಂದ ಪ್ರಜಾಪ್ರತಿನಿಧಿ ಅಸೆಂಬ್ಲಿಯ ಕಳೆದ ಅಧಿವೇಶನದಲ್ಲಿ ದಿವಾನರೇ ಸ್ವತಃ ಕಾಂಗ್ರೆಸ್ ಸಭೆಗಳಲ್ಲಿ ರಾಷ್ಟ್ರಧ್ವಜಾರೋಹಣ ಮಾಡುವುದಕ್ಕೆ ಅಡ್ಡಿಯಿಲ್ಲವೆಂದು ಒಪ್ಪಿಕೊಂಡಿದ್ದಾರೆ. ಹೀಗಿದ್ದರೂ ಇದಕ್ಕೆ ಅಡ್ಡಿ ಮಾಡಿ ಮ್ಯಾಜಿಸ್ಟ್ರೇಟರು ಕೊಟ್ಟ ಹುಕುಮಿಗೆ ಈ ಸಭೆಯು ತನ್ನ ಸಂಪೂರ್ಣ ಅಸಮ್ಮತಿಯನ್ನು ವ್ಯಕ್ತ ಮಾಡುತ್ತದೆ. ಮಹಾರಾಜರ ಆಡಳಿತದಲ್ಲಿ ಮೈಸೂರು ಕಾಂಗ್ರೆಸು ಪ್ರಜಾಪ್ರತಿನಿಧಿ ಸರಕಾರವನ್ನು ಸ್ಥಾಪಿಸಲು ಕಂಕಣಬದ್ಧವಾಗಿದೆ.

ಅಲ್ಲದೆ ಮೈಸೂರ ಸರಕಾರಕ್ಕೆ ವಿಧೇಯತೆಯಿಂದ ನಡೆದುಕೊಂಡು ಬರುವುದಾಗಿ ಸ್ಪಷ್ಟಪಡಿಸಿತ್ತು. ಆದ್ದರಿಂದ ಸಂಸ್ಥಾನದಲ್ಲಿ ರಾಷ್ಟ್ರಧ್ವಜವನ್ನೇರಿಸಿರುವುದರಿಂದ ಸಂಸ್ಥಾನ ಸರಕಾರಕ್ಕಾಗಲಿ, ಮಹಾರಾಜರಿಗಾಗಲಿ ಇದರಿಂದ ಅಪಮಾನವಿಲ್ಲ. ಹೀಗಿದ್ದರೂ ಸರಕಾರವು ವಿನಾಕಾರಣ ಪ್ರಜೆಗಳ ಸಾಮಾನ್ಯ ಕಾರ್ಯಕ್ರಮದಲ್ಲಿ ಕೈ ಹಾಕಿ ರಾಷ್ಟ್ರಧ್ವಜಾರೋಹಣಕ್ಕೆ ತಡೆಯನ್ನು ಮಾಡಿದೆ. ಅಲ್ಲದೆ ಕೆಲವು ಮುಖಂಡರನ್ನು ಸೆರೆ ಹಿಡಿದು ಶಿಕ್ಷೆ ಕೊಟ್ಟಿದೆ. ಸರಕಾರದ ಈ ತರಹದ ವರ್ತನೆಯಿಂದ ಪ್ರಜೆಗಳ ಮನಸ್ಸಿನಲ್ಲಿ ಸಂತಾಪವುಂಟಾಗಿ ಅಸಮಾಧಾನವು ತಲೆದೋರಿದೆ. ಕಳೆದ ಪ್ರಜಾಪ್ರತಿನಿಧಿ ಅಧಿವೇಶನದಲ್ಲಿ ಕೊಟ್ಟ ವಚನವನ್ನು ಮರೆತು, ತಮ್ಮ ನೀತಿಯ ಮೇರೆಯನ್ನು ಮೀರಿ ಕಾಂಗ್ರೆಸ್ಸಿನ ಕಾರ್ಯಕ್ರಮದಲ್ಲಿ ಕೈ ಹಾಕಿ ತಮ್ಮ ಧ್ಯೇಯ ಧೋರಣೆಗಳಿಗೆ ವಿರುದ್ಧವಾಗಿ ಆಚರಿಸಿ ಮುಖಂಡರನ್ನು ಶಿಕ್ಷಿಸಿದ್ದಾರೆ. ಆದ್ದರಿಂದ ಈ ಸಮಿತಿಯು ಧ್ವಜಸತ್ಯಾಗ್ರಹವನ್ನು ಶಿವಪುರದಲ್ಲಿ ಹೂಡಿ ಶಾಂತವಾದ ರೀತಿಯಿಂದ ಸರಕಾರದ ಈ ಅನ್ಯಾಯದ ವರ್ತನೆಯನ್ನು ಖಂಡಿಸುತ್ತದೆ. ಈ ಕಾರ್ಯಕ್ರಮಗಳನ್ನು ಜರುಗಿಸುವುದಕ್ಕೆ ಶ್ರೀ ತಗಡೂರು ರಾಮಚಂದ್ರರಾಯರನ್ನು ನೇಮಿಸಿದೆ.

2) ಸರಕಾರದ ಈ ಅನ್ಯಾಯದ ವರ್ತನೆಯನ್ನು ಖಂಡಿಸುವುದಕ್ಕೆ ಮೈಸೂರು ಸಾರ್ವಜನಿಕರು ಇದೇ ತಾರೀಖು 18 ಕ್ಕೆ ಹರತಾಳವನ್ನು ಆಚರಿಸುವುದಕ್ಕೆ ಈ ಸಮಿತಿಯು ಸಾರ್ವಜನಿಕರಿಗೆ ವಿನಂತಿ ಮಾಡಿಕೊಳ್ಳುತ್ತದೆ.

ಶಿವಪುರದ ಸತ್ಯಾಗ್ರಹಾಶ್ರಮದ ಸ್ಥಾಪನೆ ಮತ್ತು ಅದರ ಹರತಾಳದ

ನಿರ್ಣಯವನ್ನು ಪತ್ರಿಕೆಗಳು ಮತ್ತು ಸಾರ್ವಜನಿಕರು ಹೃತ್ಪೂರ್ವಕವಾಗಿ ಸ್ವಾಗತಿಸಿದರು.

ಒಂದು ತಿಂಗಳವರೆಗೆ ಧ್ವಜಸತ್ಯಾಗ್ರಹ

ಶಿವಪುರದಲ್ಲಿ ಸ್ಥಾಪಿತವಾದ ಸತ್ಯಾಗ್ರಹಾಶ್ರಮದ ಮೂಲಕ ಒಂದು ತಿಂಗಳವರೆಗೆ ಸತತವಾಗಿ ಧ್ವಜ ಸತ್ಯಾಗ್ರಹ ನಡೆಯಿತು. ಹೊಸ ಹೊಸ ಸತ್ಯಾಗ್ರಹಿಗಳು ತಾವಾಗಿ ಮುಂದೆ ಬಂದು ಇದರಲ್ಲಿ ಪಾಲ್ಗೊಂಡರು. ಸತ್ಯಾಗ್ರಹಾಶ್ರಮಕ್ಕೆ ಬಂದ ಸ್ತ್ರೀಯರ ಸಂಖ್ಯೆಯೂ ಸಾಕಷ್ಟಿತ್ತು. ಪ್ರಧಾನ ನಾಯಕರು ಪರಸ್ಥಳಗಳಿಂದ ಆಗಾಗ ಬಂದು ಪರಿವೀಕ್ಷಣೆ ನಡೆಸಿ ಹೋಗುತ್ತಿದ್ದರು. ಪ್ರತಿ ನಿತ್ಯ ಧ್ವಜಾರೋಹಣವಾದರೂ ಕೆಲವು ದಿನಗಳು ಮಾತ್ರ ಸತ್ಯಾಗ್ರಹಿಗಳನ್ನು ಬಂಧಿಸಲಾಯಿತು. ಸತ್ಯಾಗ್ರಹಿಗಳ ಸಂಖ್ಯೆ ಅಧಿಕವಾಗಿದ್ದುದರಿಂದ ಎಲ್ಲರನ್ನೂ ಬಂಧಿಸಿ ಜೈಲುಗಳನ್ನು ಭರ್ತಿ ಮಾಡಿಕೊಳ್ಳಲು ಸರ್ಕಾರ ಇಷ್ಟಪಡಲಿಲ್ಲ.

ಪ್ರತಿದಿನ ಬೆಳಗ್ಗೆ 6 ಗಂಟೆಗೆ ಸತ್ಯಾಗ್ರಹಿಗಳು ಘೋಷಣೆಗಳುಳ್ಳ ಫಲಕಗಳ ಸಹಿತ ಶಿವಪುರ ಮತ್ತು ಮದ್ದೂರಿನ ಬೀದಿಗಳಲ್ಲಿ ಪ್ರಭಾತಫೇರಿ ಮಾಡುವುದು. ಕೊನೆಯಲ್ಲಿ ಧ್ವಜ ಮೈದಾನಕ್ಕೆ ಬರುವುದು. ಅಲ್ಲಿ ಮುಖಂಡರೊಬ್ಬರು ಧ್ವಜ ಸತ್ಯಾಗ್ರಹಿಯ ಪರಿಚಯ ಮಾಡುವುದು. ಅನಂತರ ಕಾನೂನು ಭಂಗ ಮಾಡುವುದಾಗಿ ಘೋಷಿಸಿ ಧ್ವಜಾರೋಹಣ ಮಾಡುವುದು. ಹೀಗೇ ನಿತ್ಯವೂ ನಡೆಯಿತು. ಪಾರಂಭದ ದಿನಗಳಲ್ಲಿ (17-4-38) ಕೋಲಾರದ ಶ್ರೀ ಟಿ. ರಾಮಾಚಾರ್ಯರು ಧ್ವಜಾರೋಹಣ ಮಾಡಿದರು. ಸುಮಾರು 200 ಜನ ಸತ್ಯಾಗ್ರಹಿಗಳು ಸೇರಿದ್ದರು. ಶ್ರೀ ತಗಡೂರು ಅಂದು ಶ್ರೀ ರಾಮಾಚಾರ್ಯರನ್ನು ಪರಿಚಯಿಸಿದರು. ಆ ದಿನ ದಸ್ತಗಿರಿ ಆಗಲಿಲ್ಲ.

6 ನೆಯ ದಿನ (19-4-1938) ಚಿಕ್ಕಬಳ್ಳಾಪುರದ ಅಡ್ವೋಕೇಟ್ ಶ್ರೀ ಕೆ. ಸಂಪಂಗಿರಾಮಯ್ಯನವರು ಧ್ವಜಾರೋಹಣ ಮಾಡಿದರು. ಅವರು ದಸ್ತಗಿರಿಯಾಗಲಿಲ್ಲ. ದಿನಾಂಕ 21-4-1938 ರಂದು ದೊಡ್ಡಬಳ್ಳಾಪುರ ತಾಲ್ಲೂಕ್ ಕಾಂಗ್ರೆಸ್ ಕಮಿಟಿಯ ಕಾರ್ಯದರ್ಶಿ ಶ್ರೀ ಎಸ್. ಟಿ. ತಮ್ಮಯ್ಯನವರು, "ಮುಖಂಡರನ್ನು ಬಿಡಿ, ಪೋಲೀಸ್ ಆಕ್ಟ್ 39 ನೇ ಪ್ರಕರಣವನ್ನು ಮುರಿದು ಧ್ವಜಾರೋಹಣ ಮಾಡುತ್ತೇನೆ" ಎಂಬ ಘೋಷಣೆಯ ಫಲಕವನ್ನು ಹಿಡಿದುಕೊಂಡು ಪ್ರಭಾತಫೇರಿ ನಡೆಸಿದರು. ಅವರ ಬಗೆಗೆ ಶ್ರೀ ತಗಡೂರರು ಪರಿಚಯ ಭಾಷಣ ಮಾಡಿದರು. ಶ್ರೀ ತಮ್ಮಯ್ಯನವರು ಧ್ವಜಾರೋಹಣ ಮಾಡಿದರು. ಪೋಲೀಸರು ಅವರನ್ನು ಬಂಧಿಸಲಿಲ್ಲ.

ದಿನಾಂಕ 22-4-1938 ರಂದು, ಶಿಕಾರಿಪುರ ತಾಲ್ಲೂಕ್ ಕಾಂಗ್ರೆಸ್ ಕಮಿಟಿಯ ಪ್ರೆಸಿಡೆಂಟ್ ಮತ್ತು ಡಿಸ್ಟ್ರಿಕ್ಟ್ ಬೋರ್ಡ್ ಸದಸ್ಯರಾಗಿದ್ದ ಶ್ರೀ ಮರಿಸ್ವಾಮಿ ಹಿರೇಮಠರು ಧ್ವಜಾರೋಹಣ ಮಾಡಿದರು. ಪ್ರಾರಂಭದಲ್ಲಿ ಅವರು ಹೀಗೆ ಭಾಷಣ ಮಾಡಿದರು. "ನಾನು ಕಾಂಗ್ರೆಸ್ಸಿನ ಶಿಸ್ತಿಗೊಳಪಟ್ಟ ಸ್ವಯಂ ಸೇವಕನಾದುದರಿಂದ ಈ ಧ್ವಜವನ್ನು ಹಾರಿಸುವುದು ನನ್ನ ಕರ್ತವ್ಯ. ಇದರಿಂದ ಮಹಾರಾಜರ ಧ್ವಜದ ಅಪಮಾನ ಮಾಡಿದಂತಾಗುವುದಿಲ್ಲ. ಆದ್ದರಿಂದ ನಾನು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರ ಆರ್ಡರನ್ನು ಮುರಿದು ಧ್ವಜಾರೋಹಣ ಮಾಡುತ್ತೇನೆ."

10 ನೇ ದಿನದ ಸತ್ಯಾಗ್ರಹದಲ್ಲಿ (23-4-1938) ಕಾನಕಾನಹಳ್ಳಿಯ ಶ್ರೀ ಮುದ್ದಪ್ಪನವರು ಧ್ವಜಾರೋಹಣ ಮಾಡಿದರು. ಅಂದು ಶ್ರೀಮತಿ ಮತ್ತು ಶ್ರೀ ಪಾಲಹಳ್ಳಿ ಸೀತಾರಾಮಯ್ಯನವರು ಹಾಜರಿದ್ದರು.

28-4-1938 ರಂದು ಮದ್ದೂರು ಮತ್ತು ಶಿವಪುರದ ಬೀದಿಗಳಲ್ಲಿ ರಾಷ್ಟ್ರ ಧ್ವಜವನ್ನು ಹಿಡಿದು ಬರುತ್ತಿದ್ದ ಶ್ರೀ ಮಳವಳ್ಳಿ ವೀರಪ್ಪನವರು ಬಂಧನಕ್ಕೆ ಒಳಗಾದರು. ಅವರಿಗೆ 2½ ತಿಂಗಳ ಶಿಕ್ಷೆಯಾಯಿತು. ಅವರನ್ನು ಮೈಸೂರು ಜೈಲಿಗೆ ರವಾನಿಸಿದರು.

ಧ್ವಜ ಸತ್ಯಾಗ್ರಹದ 16 ನೇ ದಿನ (29-4-1938) ಧ್ವಜಾರೋಹಣ ಮಾಡಿ ಇಬ್ಬರು ಸತ್ಯಾಗ್ರಹಿಗಳು ದಸ್ತಗಿರಿಯಾದರು. ಸುಮಾರು 1,000 ಜನ ರೈತರು ಅಂದು ನೆರೆದಿದ್ದರು. ಮೊದಲು ಶಿವಪುರದ ಶ್ರೀ ಮ. ಲಿಂಗಯ್ಯನವರು ಧ್ವಜಾರೋಹಣಕ್ಕೆ ಪ್ರಯತ್ನಿಸಿದಾಗ ಪೋಲೀಸರು ಅವರನ್ನು ಬಂಧಿಸಿದರು. ಅನಂತರ ಶಿವಪುರದ ಶ್ರೀ ದೊಳ್ಳಯ್ಯನವರು ಮುಂದೆ ಬಂದು ಧ್ವಜಾರೋಹಣ ಮಾಡಿಬಿಟ್ಟರು. ಅವರನ್ನೂ ಬಂಧಿಸಲಾಯಿತು. ನ್ಯಾಯಾಲಯದಲ್ಲಿ ಇಬ್ಬರಿಗೂ 1½ ತಿಂಗಳ ಸಜ ಆಯಿತು.

ಪೋಲೀಸ್ ಅಧಿಕಾರಿಗಳು ಏನು ತಿಳಿದುಕೊಂಡರೋ ಏನೋ, ಕೆಲವು ದಿನ ಮಾಡದೆ ಇದ್ದ ಬಂಧನವನ್ನು ಪುನಃ ಪ್ರಾರಂಭಿಸಿದರು. 30–4–1938 ರಂದು ನಡೆದ ಧ್ವಜಸತ್ಯಾಗ್ರಹದಲ್ಲಿ ಇಬ್ಬರು ಮಹಿಳೆಯರು ಬಂಧಿತರಾದರು. ಚನ್ನಪಟ್ಟಣ ತಾಲ್ಲೂಕ್ ಕಾಂಗ್ರೆಸ್ ಕಮಿಟಿಯ ಮೆಂಬರ್ ಶ್ರೀಮತಿ ಕಮಲಮ್ಮನವರು ಅಂದು ಮುಂದಾಳಾಗಿದ್ದರು. ಪ್ರಭಾತಫೇರಿಯ ಅನಂತರ ಅವರು ಧ್ವಜಾರೋಹಣ ಮಾಡಲು ಸಿದ್ಧರಾಗಿ ನೆರೆದಿದ್ದ ಸಭಿಕರಿಗೆ ಹೀಗೆ ಹೇಳಿದರು : "ಈ ನಮ್ಮ ರಾಷ್ಟ್ರ ಬಾವುಟವನ್ನು ಕಾಪಾಡುವ ಹಕ್ಕು ಹೆಂಗಸರಿಗೂ ಸೇರಿದ್ದು. ಹೆಚ್ಚು ಹೆಚ್ಚಾಗಿ ಅಣ್ಣ ತಮ್ಮಂದಿರು ಅಕ್ಕ ತಂಗಿಯರು ತಂಡೋಪತಂಡವಾಗಿ ಮುಂದೆ ಬಂದು

ಕಾಂಗ್ರೆಸ್ಸಿಗೆ ಸೇರಬೇಕು." ಕಾಯಿದೆ ಭಂಗ ಮಾಡುವುದಾಗಿ ಹೇಳಿದ ಕೂಡಲೇ ಅವರನ್ನು ಪೋಲಿಸರು ಬಂಧಿಸಿದರು. ಅನಂತರ ಕಾನಕಾನಹಳ್ಳಿಯ ಶ್ರೀಮತಿ ಸಾವಿತ್ರಮ್ಮನವರು ಮುಂದೆ ಬಂದು ಧ್ವಜಾರೋಹಣ ಮಾಡಿದರು. ಅವರನ್ನೂ ಬಂಧಿಸಿದರು. ಶ್ರೀ ಸೂರ್ಯನಾರಾಯಣ ಪಂಡಿತರು ಶ್ರೀಮತಿಯವರನ್ನು ಪರಿಚಯ ಮಾಡಿಕೊಟ್ಟರು. ದಸ್ತಗಿರಿಯಾದ ಇಬ್ಬರಿಗೂ 15 ದಿನಗಳ ಸಜ ಆಯಿತು.

ಧ್ವಜ ಸತ್ಯಾಗ್ರಹದ 18 ನೇ ದಿನ (1–5–1938) ಕಾನಕಾನಹಳ್ಳಿಯ ಶ್ರೀ ಬೆಟ್ಟಯ್ಯನವರು ಧ್ವಜಾರೋಹಣ ಮಾಡಿದರು.

ದಿನಾಂಕ 2–5–1938 ರಂದು ಅಂದಿನ ಯುವಕ ನಾಯಕರಾದ ಶ್ರೀ ಕೆ. ಹನುಮಂತಯ್ಯನವರು ರಾಷ್ಟ್ರಧ್ವಜವನ್ನು ಹಿಡಿದುಕೊಂಡು ಸತ್ಯಾಗ್ರಹಿಗಳ ಹಾಗೂ ಊರಿನ ಜನರೊಟ್ಟಿಗೆ ಮೆರವಣಿಗೆಯಲ್ಲಿ ಬರುತ್ತಿದ್ದಾಗ ಮದ್ದೂರಿನ ಬಳಿಯಲ್ಲಿ ಅವರನ್ನು ಪೋಲೀಸರು ಬಂಧಿಸಿದರು. ಶ್ರೀ ಹನುಮಂತಯ್ಯನವರನ್ನು ಮಂಡ್ಯದ ನ್ಯಾಯಾಲಯಕ್ಕೆ ಕರೆತರಲಾಯಿತು. ಅಲ್ಲಿ ವಿಚಾರಣೆ ನಡೆಯಿತು. ಶ್ರೀ ಹನುಮಂತಯ್ಯನವರು ತಮ್ಮ ನಿಲುವನ್ನು ಸಮರ್ಥಿಸುವ, ಸರ್ಕಾರದ ನೀತಿಯನ್ನು ಖಂಡಿಸುವ ಹೇಳಿಕೆಯನ್ನು ನೀಡಿದರು. ಮ್ಯಾಜಿಸ್ಟ್ರೇಟರ ನಿಷೇಧಾಜ್ಞೆಯನ್ನು ಉಲ್ಲಂಘಿಸಿ ರಾಷ್ಟ್ರಧ್ವಜದೊಂದಿಗೆ ಮೆರವಣಿಗೆಯ ನಾಯಕತ್ವ ವಹಿಸಿದ್ದುದರಿಂದ ಅವರು ತಪ್ಪಿತಸ್ಥರೆಂದು ಪರಿಗಣಿಸಿ ನ್ಯಾಯಾಧೀಶರು ಮೂರು ತಿಂಗಳ ಕಠಿಣ ಸಜ ಮತ್ತು 500 ರೂ.ಗಳ ಜುಲ್ಮಾನೆಯನ್ನು ಶಿಕ್ಷೆ ವಿಧಿಸಿದರು. ಅನಂತರ ಶ್ರೀ ಹನುಮಂತಯ್ಯನವರನ್ನು ಮೈಸೂರಿನ ಸೆಂಟ್ರಲ್ ಜೈಲಿಗೆ ಸಾಗಿಸಲಾಯಿತು.

3-5-1938 ರಂದು ಶ್ಯಾಮಗೊಂಡ್ಲದ ಕಾಂಗ್ರೆಸ್ ಕಮಿಟಿಯ ಕಾರ್ಯದರ್ಶಿ ಶ್ರೀ ಆನಂದ ಗುಪ್ತರು, 4-5-1938 ರಂದು ಭೈರಾಪಟ್ಟಣದ ಕಾಂಗ್ರೆಸ್ ಕಮಿಟಿಯ ಉಪಾಧ್ಯಕ್ಷರೂ ಚನ್ನಪಟ್ಟಣ ತಾಲ್ಲೂಕ್ ಕಾಂಗ್ರೆಸ್ ಕಮಿಟಿಯ ಸದಸ್ಯರೂ ಆದ ಶ್ರೀ ಬಿ. ವೆಂಕಟೇಗೌಡರು, 6-5-1938 ರಂದು ಕಾನಕಾನ ಹಳ್ಳಿಯ ಶ್ರೀ ಎ. ಎನ್. ರಾಮಸ್ವಾಮಿಯವರು, 7-5-1938 ರಂದು ಕಾನಕಾನ ಹಳ್ಳಿಯ ಶ್ರೀ ವಾಸುದೇವಯ್ಯನವರು, 8-5-1938 ರಂದು ಕಾನಕಾನಹಳ್ಳಿಯ ಶ್ರೀ ಎ. ಎನ್. ನರಸಿಂಹಯ್ಯನವರು, 9-5-1938 ರಂದು ಕಾನಕಾನಹಳ್ಳಿಯ ಶ್ರೀ ಎಂ. ಎಸ್. ರಾಮಸ್ವಾಮಿ ಅಯ್ಯಂಗಾರ್ ಅವರು ಪ್ರತಿಬಂಧಕಾಜ್ಞೆಯನ್ನು ಉಲ್ಲಂಘಿಸುವುದಾಗಿ ಘೋಷಿಸಿ ಧ್ವಜಾರೋಹಣ ಮಾಡಿದರು.* ಆದರೆ ಆ ದಿನ

*ಒಂದು ತಿಂಗಳ ಅವಧಿಯಲ್ಲಿ ಧ್ವಜಸತ್ಯಾಗ್ರಹ ಮಾಡಿದ ಎಲ್ಲ ಸತ್ಯಾಗ್ರಹಿಗಳ ಹೆಸರುಗಳೂ ವಿವರಗಳೂ ಸಿಗಲಿಲ್ಲ. ಅಧಿಕೃತವಾಗಿ ತಿಳಿದ ಹೆಸರುಗಳನ್ನು ಮಾತ್ರ ಉಲ್ಲೇಖಿಸಿದೆ.

ಗಳಲ್ಲಿ ಅವರ್ಯಾರನ್ನೂ ಬಂಧಿಸಲಿಲ್ಲ. ಜಿಲ್ಲಾ ಮ್ಯಾಜಿಸ್ಟ್ರೇಟರ ಪ್ರತಿಬಂಧ ಕಾಜ್ಞೆಯ ಅವಧಿ ಮುಗಿಯುವವರೆಗೆ ಪ್ರತಿನಿತ್ಯವೂ ಶಿವಪುರದಲ್ಲಿ ಧ್ವಜಾರೋಹಣ ನಡೆಯಿತು.

ಧ್ವಜಸತ್ಯಾಗ್ರಹದ ಮುಕ್ತಾಯ

ದಿನಾಂಕ 9-5-1938 ರ ಸಂಜೆ ಶ್ರೀ ಹೆಚ್. ಬಿ. ಗುಂಡಪ್ಪಗೌಡರು ಭಕ್ತಿ ಗೌರವಗಳಿಂದ ರಾಷ್ಟ್ರಧ್ವಜವನ್ನು ಇಳಿಸಿದರು. ಸತ್ಯಾಗ್ರಹಾಶ್ರಮದ ಮುಖ್ಯಸ್ಥ ರಾದ ಶ್ರೀ ತಗಡೂರು ರಾಮಚಂದ್ರರಾಯರೂ ಹಲವು ಜನ ಸತ್ಯಾಗ್ರಹಿಗಳೂ ಸಾಕಷ್ಟು ಪ್ರೇಕ್ಷಕರೂ ಹಾಜರಿದ್ದರು. ಧ್ವಜ ಸತ್ಯಾಗ್ರಹದ ಮುಕ್ತಾಯದ ಬಗೆಗೆ ಶ್ರೀ ಗುಂಡಪ್ಪಗೌಡರು ಹೀಗೆ ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸಿದರು : "ಧ್ವಜ ಸತ್ಯಾಗ್ರಹದ ಸಂದರ್ಭದಲ್ಲಿ ಈವರೆಗೆ 8 ಜನ ಮುಖಂಡರು, 6 ಜನ ಕಾಂಗ್ರೆಸ್ ಕೆಲಸಗಾರರು ಬಂಧಿತರಾದರು. ಇಂದಿಗೆ ಜಿಲ್ಲಾ ಮ್ಯಾಜಿಸ್ಟ್ರೇಟರ ರಾಷ್ಟ್ರಧ್ವಜ ನಿಷೇಧಾಜ್ಞೆಯು ತೀರಿದ್ದರಿಂದ ಮತ್ತು ಹೊಸ ಆಜ್ಞೆಯನ್ನು ಹಾಕದ್ದ ರಿಂದ ಈ ಧ್ವಜ ಸತ್ಯಾಗ್ರಹವನ್ನು ಮುಕ್ತಾಯ ಮಾಡುತ್ತಿದ್ದೇವೆ. ಇದರಲ್ಲಿ ಭಾಗವಹಿಸಿ ಸಹಾಯ ಮಾಡಿದ ಎಲ್ಲ ಮಹಿಳೆಯರಿಗೂ ಮಹನೀಯರಿಗೂ ವಂದನೆಗಳು."

ಹೀಗೆ, ಶಿವಪುರ ಧ್ವಜ ಸತ್ಯಾಗ್ರಹವು ಒಂದು ತಿಂಗಳವರೆಗೆ ಯಶಸ್ವಿಯಾಗಿ ನಡೆಯಿತು. ಮೈಸೂರು ಸಂಸ್ಥಾನದಲ್ಲಿ ನಡೆದ ಧ್ವಜಸತ್ಯಾಗ್ರಹದ ಹೋರಾಟ ವನ್ನು ನಾಡಿನ ಪತ್ರಿಕೆಗಳು ಪ್ರಶಂಸಿಸಿದುವು ; ಇತರ ಸಂಸ್ಥಾನದ ಕಾರ್ಯಕರ್ತರೂ ಮೆಚ್ಚಿಕೆ ಸೂಚಿಸಿ, ತಮ್ಮ ನೈತಿಕ ಬೆಂಬಲವನ್ನು ನೀಡಿದರು. ಕೊಚ್ಚಿನ್ ಕಾಂಗ್ರೆಸ್ ಕಮಿಟಿಯವರು ತ್ರಿಚೂರಿನಿಂದ ಮೈಸೂರು ಕಾಂಗ್ರೆಸ್ ಅಧ್ಯಕ್ಷರಿಗೆ ಹೀಗೆ ಪತ್ರ ಬರೆದರು : "ನಿಮ್ಮ ಹೋರಾಟವನ್ನು ನೀವು ಸರಿಯಾದ ಮಾರ್ಗದಿಂದಲೇ ಸಾಗಿಸಿದ್ದೀರಿ ಎಂದು ತಿಳಿಸಲು ನಮಗೆ ಸಂತೋಷವಾಗುತ್ತದೆ. ನಿಮ್ಮ ಈ ಹೋರಾಟದಲ್ಲಿ ಸದ್ಯಕ್ಕೆ ಪ್ರತಿಯೊಬ್ಬನೂ ನಿಮ್ಮೊಂದಿಗೆ ಹೆಗಲಿಗೆ ಹೆಗಲು ಹಚ್ಚಿ ನಿಲ್ಲಬೇಕು. ನಿಮ್ಮ ಹೋರಾಟವು ಎಲ್ಲ ದೇಶೀ ಸಂಸ್ಥಾನಗಳಿಗೆ ಸಂಬಂಧಿಸಿದ ಹೋರಾಟವಾಗಿದೆ. ನಿಮ್ಮ ಜಯವೇ ನಮ್ಮ ಜಯ ; ನಿಮ್ಮ ಅಪಜಯವೇ ನಮ್ಮ ಅಪಜಯ ಎಂದು ನಮಗೆ ಗೊತ್ತಿದೆ."

ಶಿವಪುರ ರಾಷ್ಟ್ರಕೂಟಕ್ಕೆ ಸಹಾಯ ಮಾಡಿದವರ, ಶ್ರಮಿಸಿದವರ ಸಂಖ್ಯೆ ಅಪಾರ. ಸುಮಾರು 800 ಮಂದಿ ಸ್ವಾಗತ ಸಮಿತಿಯ ಸದಸ್ಯರಾಗಿ ಎಲ್ಲ ರೀತಿ ಯಲ್ಲೂ ಸಹಾಯ ಮಾಡಿದರು. ಮಹಾಧಿವೇಶನಕ್ಕೆ ಇಡೀ ಸಂಸ್ಥಾನದಿಂದ 1354 ಜನ ಪ್ರತಿನಿಧಿಗಳು ಆಗಮಿಸಿದ್ದರು. ವಿಷಯನಿಯಾಮಕ ಸಭೆಯಲ್ಲಿ

105 ಜನ ಸದಸ್ಯರಿದ್ದರು. 35 ಜನ ಪತ್ರಿಕಾ ಪ್ರತಿನಿಧಿಗಳು ಪ್ರತ್ಯಕ್ಷವಾಗಿ ಇದ್ದು ಪತ್ರಿಕೆಗಳ ಮೂಲಕ ಸುದ್ದಿಯನ್ನು ಹರಡಿದರು. ಒಟ್ಟು ಪ್ರೇಕ್ಷಕರ ಸಂಖ್ಯೆ ಸುಮಾರು 50,000. ಇಡೀ ಅಧಿವೇಶನಕ್ಕೆ ಆದ ಖರ್ಚು ಸುಮಾರು ಹತ್ತು ಸಾವಿರ ರೂಪಾಯಿ. ಇದೆಲ್ಲ ಸಾರ್ವಜನಿಕರಿಂದ ಸಂಗ್ರಹಿಸಿದ ಹಣ. ಕಾಂಗ್ರೆಸ್ ಸಂಸ್ಥೆಯಲ್ಲಿ ಮೂರುಕಾಸೂ ಇಲ್ಲದಿದ್ದಾಗ ಇಷ್ಟು ಸಂಗ್ರಹವಾದದ್ದು ದೊಡ್ಡ ವಿಷಯ. ಸಾರ್ವಜನಿಕರು ಉದಾರವಾಗಿ ಕೊಟ್ಟ ದವಸ ಧಾನ್ಯಗಳ ಪ್ರಮಾಣವೂ ಕಡಮೆಯಲ್ಲ. ಇಂತಹ ದೊಡ್ಡ ಅಧಿವೇಶನ ಆವರೆಗೆ ಮೈಸೂರು ಸಂಸ್ಥಾನದಲ್ಲಿ ನಡೆದಿರಲಿಲ್ಲ. ಅಷ್ಟೊಂದು ಜನರು ಯಾವಾಗಲೂ ಒಂದು ಕಡೆ ಸೇರಿರಲಿಲ್ಲ.

ಶಿವಪುರ ರಾಷ್ಟ್ರಕೂಟದ ಮಹಾಧಿವೇಶನದಲ್ಲಿ ಧ್ವಜಾರೋಹಣ ಮಾಡಿ ದಸ್ತಗಿರಿಯಾದ ಮುಖಂಡರಿಗೆ ವಿವಿಧ ಅವಧಿಯ ಶಿಕ್ಷೆಯಾಯಿತು. ದಿಟ್ಟ ಮಹಿಳೆ ಶ್ರೀಮತಿ ಬಳ್ಳಾರಿ ಸಿದ್ಧಮ್ಮನವರಿಗೆ ಶಿಕ್ಷೆ ವಿಧಿಸುವಾಗ ನ್ಯಾಯಾಧಿಕಾರಿಗಳಿಗೆ ದುಃಖ ವಾಯಿತಂತೆ, ಅವರ ಕೈ ನಡುಗಿತಂತೆ; ಒಳ್ಳೆಯ ಉದ್ದೇಶಕ್ಕಾಗಿ ಹೋರಾಡು ತ್ತಿರುವ ಹೆಂಗಸಿಗೆ ಜೈಲಿನ ಶಿಕ್ಷೆ ವಿಧಿಸಬೇಕಲ್ಲ ಎಂದು. ಪಾಪ! ಹೆಂಗಸು ಎಂದು ನ್ಯಾಯಾಧಿಕಾರಿಗಳಿಗೆ ಮರುಕ ಹುಟ್ಟಿರಬೇಕು. ಆದರೆ ಧರ್ಮಕ್ಕೆ ಜಯವೆಂದು ನಂಬಿದ್ದ ಸತ್ಯಾಗ್ರಹಿಗಳು ಎಂತಹ ಶಿಕ್ಷೆಗೂ ಸಿದ್ಧರಾಗಿದ್ದರು.

ಶಿವಪುರ ರಾಷ್ಟ್ರಕೂಟದಲ್ಲಿ ದುಡಿದ ಸ್ವಯಂಸೇವಕ, ಸ್ವಯಂಸೇವಿಕೆಯರ ಸೇವೆ ಅಳತೆಗೆ ಮೀರಿದ್ದು. ತುಮಕೂರು ಜಿಲ್ಲಾ ಶೆಟ್ಟೀಕೆರೆಯ ಶ್ರೀ ಎಸ್. ಕೆ. ಗಂಗಣ್ಣನಂಥವರು ಅಧಿವೇಶನಕ್ಕೆ ಒಂದು ತಿಂಗಳು ಮೊದಲೇ ಬಂದು ಶ್ರಮಿಸಿದರು. ಬೇರೆ ಬೇರೆ ಊರುಗಳಿಂದ ವಿವಿಧ ವರ್ಗದ ವಿಭಿನ್ನ ಜಾತಿಯ ಸ್ವಯಂಸೇವಕರು ಬಂದು ನಿಷ್ಠೆಯಿಂದ ದುಡಿದರು. ಅವರದೇ ಒಂದು ದೊಡ್ಡ ಪಟ್ಟಿಯಾಗುತ್ತದೆ. ಕೊಡಿಯಾಲ ಗ್ರಾಮದಿಂದ: ಶ್ರೀಯುತರಾದ ಯು. ವಿ. ವೆಂಕಟರಮಣ, ಡಿ. ಲಕ್ಷ್ಮಯ್ಯ, ಡಿ. ರಾಮಯ್ಯ, ಚಂದ್ರಯ್ಯ, ನಾರಾಯಣಯ್ಯ, ಬಂಗಾರಯ್ಯ. ಅರಕೆರೆಯಿಂದ: ಶ್ರೀಗಳಾದ ಎ. ಕೆಂಚಪ್ಪ, ಯು. ಕೆಂಚಪ್ಪ, ಎ. ಸಿ. ಮಾದೇ ಗೌಡ, ಕೆ. ಪುಟ್ಟಸ್ವಾಮಿ, ಎ. ಕೆಂಚಯ್ಯ. ಪಾಲಗ್ರಹಾರದಿಂದ: ಶ್ರೀ ಪಿ. ಎನ್. ಜವರಪ್ಪಗೌಡ, ತಿಪ್ಪೂರಿನಿಂದ: ಶ್ರೀ ಎಸ್. ವಾಸುದೇವರಾವ್. ಬೆಂಗಳೂರಿನಿಂದ: ಶ್ರೀ ಬಿ. ಯಂ. ಶೀನಪ್ಪ ಮತ್ತು ಅವರ ಸ್ನೇಹಿತರು. ತುಮಕೂರಿನಿಂದ: ಶ್ರೀ ಎನ್. ಹುಚ್ಚಮಾಸ್ತಿಗೌಡ. ಮೈಸೂರಿನಿಂದ: ಶ್ರೀಮತಿ ವೆಂಕಮ್ಮ ಸೀತಾರಾಮಯ್ಯನವರ ನೇತೃತ್ವದಲ್ಲಿ ಬಂದಿದ್ದ ಶ್ರೀಮತಿಯರಾದ ಸುಬ್ಬಮ್ಮ ಜೋಯಿಸ್, ಶ್ರೀಮತಿ ನಾಗೇಶ ರಾವ್, ಸೋನಾಬಾಯಿ, ಇಂದಿರಾಬಾಯಿ ಕೃಷ್ಣಮೂರ್ತಿ ಮೊದಲಾದ 24 ಜನ ಸ್ತ್ರೀಯರು. ಮಹಿಳಾ ವಿಭಾಗದ ಮುಖ್ಯಸ್ಥರಾದ ಶ್ರೀಮತಿ ಯಶೋಧರಮ್ಮ

ದಾಸಪ್ಪನವರು. ಇಂತಹ ನೂರಾರು ಜನ ಸ್ವಯಂಸೇವಕ ಸ್ವಯಂಸೇವಿಕೆಯರು ಶಿವಪುರ ರಾಷ್ಟ್ರಕೂಟದಲ್ಲಿ ವಿಶೇಷವಾಗಿ ದುಡಿದರು.

ಶಿವಪುರ ರಾಷ್ಟ್ರಕೂಟದ ಮಹಾಧಿವೇಶನದಲ್ಲಿ ನಿಷ್ಕಾಮಕರ್ಮಿಗಳಂತೆ ಹಗಲೂ ರಾತ್ರಿ ದುಡಿದ ಸ್ವಯಂಸೇವಕರಿಗೆ ಪ್ರಶಸ್ತಿ ಪತ್ರಗಳನ್ನು ನೀಡಲಾಯಿತು.

ದಾವಣಗೆರೆಯಲ್ಲಿ ಮಹಿಳಾ ಸಭೆ

ಮಹಿಳಾ ಸಮಾಜದವರ 'ರಾಷ್ಟ್ರೀಯ ಸಪ್ತಾಹ' ದ ಅಂಗವಾಗಿ ದಾವಣಗೆರೆಯ ಮಹಿಳಾ ಸಮಾಜದಲ್ಲಿ ಸಭೆ ನಡೆಯಿತು (16-4-1938). ಶ್ರೀಮತಿ ರಾಧಮ್ಮನವರು ಅಧ್ಯಕ್ಷತೆ ವಹಿಸಿದ್ದರು. ಶ್ರೀಮತಿಯರಾದ ಸಿ. ಎಸ್. ಸರಸ್ವತಿ ಅಮ್ಮಾಳ್, ಕಮಲಾಬಾಯಿಯವರು ಉಪನ್ಯಾಸಕರಾಗಿದ್ದರು. ಶ್ರೀಮತಿ ಬಳ್ಳಾರಿ ಸಿದ್ಧಮ್ಮನವರು ಶಿವಪುರ ರಾಷ್ಟ್ರಕೂಟದಲ್ಲಿ ಬಂಧನವಾದುದಕ್ಕಾಗಿ ಅವರ ದೇಶ ಸೇವೆಯನ್ನು ಕುರಿತು ಸಭೆ ಮೆಚ್ಚಿಕೆ ಸೂಚಿಸಿತು. ಶ್ರೀಮತಿ ಸಿದ್ಧಮ್ಮನವರನ್ನು ಕೂಡಲೆ ಬಿಡುಗಡೆ ಮಾಡಬೇಕೆಂದು ಕೋರಿ ಶ್ರೀಮನ್ಮಹಾರಾಜರಿಗೆ ಟೆಲಿಗ್ರಾಂ ಕಳಿಸಲಾಯಿತು. ಸರ್ಕಾರದ ದಮನ ನೀತಿಯನ್ನು ಮಹಿಳಾ ಸಭೆ ಖಂಡಿಸಿತು. ಅಂದಿನ ರಾಜಕೀಯ ಪರಿಸ್ಥಿತಿ ಸ್ತ್ರೀಪುರುಷರೆಲ್ಲರಿಗೂ ಮನವರಿಕೆಯಾಗಿತ್ತು.

ಶಿವಪುರ ಧ್ವಜಸತ್ಯಾಗ್ರಹದ ಸಾಧನೆ

ಶಿವಪುರ ಧ್ವಜ ಸತ್ಯಾಗ್ರಹದಿಂದ ಸಾಧಿಸಿದ್ದೇನು ? ಇದನ್ನು ಗೆರೆ ಕೊಯ್ದಂತೆ ತೋರಿಸುವುದು ಕಷ್ಟ. ಹಾಕಿದ ಬಂಡವಾಳ ಇಷ್ಟು, ಬಂದ ಉತ್ಪತ್ತಿ ಇಷ್ಟು ಎಂದು ಪ್ರತ್ಯೇಕವಾಗಿ ಎತ್ತಿ ತೋರಿಸುವುದಕ್ಕೆ ಸಾಧ್ಯವಿಲ್ಲ. ರಾಜಕೀಯ ಸಾಧನೆ ಪ್ರಧಾನವಾದುದು ; ಎದ್ದು ಕಾಣುವಂಥಾದ್ದು. ಅಲ್ಲದೆ ಸಮಾಜಕವಾಗಿ ಆದ ಸಾಧನೆಗಳು ಹಲವಾರಿವೆ. ಇವು ಸುಪ್ತವಾದವು, ಗುಪ್ತಗಾಮಿನಿಯಾದವು, ಆದರೂ ಅಸಾಧಾರಣವಾದವು. ಇವು ಯಾವುವೂ ಯಾವುದೇ ರೀತಿಯಲ್ಲಿ ಇನ್ನೊಂದಕ್ಕಿಂತ ಕಳಪೆಯಾದವಲ್ಲ. ಪ್ರತಿಯೊಂದಕ್ಕೂ ಅದರದೇ ಆದ ಬೆಲೆಯಿದೆ.

ಶಿವಪುರ ಧ್ವಜಸತ್ಯಾಗ್ರಹದಿಂದ ವಿಶೇಷವಾದ ಜನಜಾಗೃತಿಯಾಯಿತು. ರಾಜಕೀಯ ಚಟುವಟಿಕೆಗೆ ಇದು ಬಹಳ ಸಹಾಯಕವಾಯಿತು. ಶತಮಾನಗಳಿಂದ ಎಲ್ಲ ರೀತಿಯಿಂದಲೂ ಹಿಂದುಳಿದಿದ್ದ ಜನ ಹೊಸ ರಂಗಕ್ಕೆ ಪ್ರವೇಶಿಸಿ ತಮ್ಮ ವ್ಯಕ್ತಿತ್ವವನ್ನು, ತಮ್ಮ ಸ್ಥಾನ ಮಾನಗಳನ್ನು ಕಂಡರಿಸಿಕೊಳ್ಳುವುದಕ್ಕೆ ಇದರಿಂದ

ಸಾಧ್ಯವಾಯಿತು. ಈವರೆಗಿನ ನಮ್ಮ ಸಾಮಾಜಿಕ ವ್ಯವಸ್ಥೆ ಹೇಗಿತ್ತು? ಯಾವನೋ ಒಬ್ಬ ರಾಜ ಆಳುವುದು. ಅವನಿಗೆ ಬೇಕಾದವರು ಅಥವಾ ಅವನನ್ನು ಹೊಗಳಿಕೊಂಡಿರುವವರು ಕೆಲವು ಉನ್ನತ ಸ್ಥಾನಗಳನ್ನು ಪಡೆದುಕೊಳ್ಳುವುದು. ಇವರು ಬಹುತೇಕ ಉಚ್ಚ ವರ್ಗದವರು. ಉಳಿದವರು ಇವರಿಗಾಗಿ ಜೀವನವಿಡೀ ದುಡಿಯುವುದು. ಇವರೆಲ್ಲ ಕೆಳವರ್ಗದವರು. ಇವರ ಸಂಖ್ಯೆ ಕೋಟಿ ಕೋಟಿ. ಯಾವುದೇ ಅಧಿಕಾರಕ್ಕೆ ಇವರಿಗೆ ಪ್ರವೇಶವಿಲ್ಲ. ಇನ್ನೊಬ್ಬರಿಗಾಗಿ ದುಡಿಯುವುದೊಂದೇ ಇವರಿಗೆ ಗೊತ್ತಿದ್ದುದು. ಉಚ್ಚವರ್ಗದವರು ದುಡಿಸಿಕೊಳ್ಳುವುದಕ್ಕೆ ಮಾತ್ರ ಇವರನ್ನು ಬಳಸಿಕೊಳ್ಳುತ್ತಿದ್ದುದು. ಪರಿಶ್ರಮ ಇವರದು, ಫಲ ಅವರದು. ಇಂಥ ಜನಸಾಮಾನ್ಯರಲ್ಲಿ ಹಿಂದುಳಿದವರಲ್ಲಿ, ತಾವು ಈ ಮಣ್ಣಿನ ಪ್ರಭುಗಳು, ತಾವು ಮನಸ್ಸು ಮಾಡಿದರೆ ಏನೆಲ್ಲ ಸಾಧಿಸಬಹುದು ಎಂಬ ಜಾಗೃತಿ ಸತ್ಯಾಗ್ರಹ ಚಳುವಳಿಯಿಂದ ಪ್ರಾಪ್ತವಾಯಿತು. ಅನೇಕ ನಾಯಕರ ಭಾಷಣಗಳಿಂದ ದೇಶದ ಒಡೆಯ ಯಾರು ಎಂಬುದು ಸಾಮಾನ್ಯ ಜನಕ್ಕೆ ತಿಳಿಯಿತು. ಗುಲಾಮಗಿರಿಯ ಜೀವನದಿಂದ ಹೊರಬಂದು ಸ್ವತಂತ್ರರಾಗಲು ಜನ ಬಯಸಿದರು. ಅಂಥ ಒಂದು ಅವಕಾಶ ಇದೆ ಎಂದೇ ಜನರಿಗೆ ತಿಳಿದಿರಲಿಲ್ಲ. ಮಹಾರಾಜ ಎಂದರೆ ಪ್ರತ್ಯಕ್ಷ ದೇವರು, ತಾವೆಲ್ಲ ಅವನಿಗೆ ದುಡಿಯುವ ಜೀತದಾಳುಗಳು ; ಅವನೊಬ್ಬನೇ ಪ್ರಭು, ತಾವೆಲ್ಲ ಗುಲಾಮರು ಎಂದು ಭಾವಿಸಿದ್ದ ಜನರಿಗೆ ಈ ಭೂಮಿ ಒಬ್ಬ ರಾಜನಿಗೆ ಸೇರಿದ್ದಲ್ಲ, ಇದು ಎಲ್ಲರದು, ತಾವು ಗುಲಾಮರಲ್ಲ, ರಾಜನಿಗಿರುವಷ್ಟೇ ಹಕ್ಕು ತಮಗೂ ಇದೆ, ತಾವೂ ರಾಜ್ಯದ ಪ್ರಭುಗಳಾಗಬಹುದು ಎಂಬ ಅರಿವುಂಟಾಯಿತು. ಸಂಪ್ರದಾಯದ ಕತ್ತಲ ಕೋಣೆಯಿಂದ ಹೊರಬರುವ ಬೆಳಕಿಂಡಿ ಸ್ಪಷ್ಟವಾಗಿ ಕಾಣಿಸಿತು.

ಅವಿದ್ಯಾವಂತರಲ್ಲಿ, ವಿಚಾರಶಕ್ತಿ ಕಡಮೆ ಇರುವವರಲ್ಲಿ ಜಾಗೃತಿ ಉಂಟಾಗ ಬೇಕಾದರೆ ಇಂಥ ಸಾಮೂಹಿಕ ಅಧಿವೇಶನ ಅಗತ್ಯ. ಇದು ಸಾಮೂಹಿಕ ಶಿಕ್ಷಣ ಕೇಂದ್ರ ಎಂದರೂ ಒಪ್ಪುತ್ತದೆ. ಇಲ್ಲದಿದ್ದರೆ ಜನರಲ್ಲಿ ಬಹಳ ಬೇಗ ರಾಜಕೀಯ ಪ್ರಜ್ಞೆ ಉಂಟಾಗಲು ಸಾಧ್ಯವಿಲ್ಲ. ಹಳ್ಳಿಗರಿಗೆ ಸಾಮಾಜಿಕವಾಗಿ ಸಮಾನತೆ ತಂದುಕೊಡಲು ಸತ್ಯಾಗ್ರಹ ಚಳುವಳಿಯಿಂದ ಸಾಕಷ್ಟು ಅವಕಾಶ ವಾಯಿತು, ಸ್ವಾತಂತ್ರ್ಯದ ವಿರಾಟ್ ರೂಪದ ದರ್ಶನವಾಯಿತು. ಇದೆಲ್ಲ ಜನ ಸಾಮಾನ್ಯರಿಗೆ ಹೊಸದು.

ಮನೆಯಲ್ಲೇ ಕುಳಿತಿದ್ದ ಮಹಿಳೆ ಚಳುವಳಿಯ ಹೊಸಲು ದಾಟಿದಳು. ಪುರುಷರ ಸಮಸಮಕ್ಕೆ ನಿಂತು ತನ್ನ ಕೈಲಾದ ಸೇವೆ ಸಲ್ಲಿಸಿದಳು. ಇಂಥ ಸ್ತ್ರೀಯರ ಸಂಖ್ಯೆ ನೂರಾರು. ಮಂಡ್ಯದ ಸುತ್ತಮುತ್ತ ಇಪ್ಪೊಂದು ಜನರು ಒಟ್ಟಿಗೆ ಸೇರಿ

ಒಂದು ನಿರ್ದಿಷ್ಟವಾದ ಕೂಗಿಗೆ ದನಿಗೂಡಿಸಿದ್ದು ಇದೇ ಮೊದಲು. ಮಂಡ್ಯದ ಸುತ್ತಮುತ್ತಲಿಗೇನು ಇಡೀ ರಾಜ್ಯದಲ್ಲೇ ಇಷ್ಟೊಂದು ಜನ ಒಟ್ಟಿಗೆ ಸೇರಿದ್ದು ಪ್ರಥಮ ಅನುಭವ. ಬ್ರಾಹ್ಮಣರು, ಒಕ್ಕಲಿಗರು, ಲಿಂಗಾಯಿತರು, ಹರಿಜನರು, ಜೈನರು, ಮುಸಲ್ಮಾನರು, ಶೆಟ್ಟರು, ಮಗ್ಗದವರು ಹೀಗೆ ನಾನಾ ಜಾತಿಯವರು ಒಟ್ಟಿಗೆ ಕಲೆತು ಒಟ್ಟಿಗೆ ಕುಳಿತು ಒಂದು ಉದ್ದೇಶಕ್ಕೆ ಹೋರಾಡುವುದು ಸಾಮಾನ್ಯವಾದ ವಿಷಯವಲ್ಲ. ಧ್ವಜ ಸತ್ಯಾಗ್ರಹದ ಸಂದರ್ಭದಲ್ಲಿ ಎಲ್ಲ ಜಾತಿಯ ಜನರು ಮೇಲು ಕೀಳು ಬಡವ ಬಲ್ಲಿದ ಸ್ಪೃಶ್ಯ ಅಸ್ಪೃಶ್ಯ ಎಂಬ ಭೇದ ಭಾವನೆಗಳಿಲ್ಲದೆ ಅನ್ಯೋನ್ಯತೆಯಿಂದ ನಡೆದುಕೊಂಡರು. ಎಷ್ಟೋ ಸಾವಿರ ವರ್ಷಗಳಿಂದ ಬೇರು ಬಿಟ್ಟಿದ್ದ ಮೇಲು ಕೀಳುಗಳೆಂಬ ಅನಿಷ್ಟಗಳಿಗೆ ಚಳುವಳಿಯ ಹೆಸರಿನಲ್ಲಿ ಕೊಡಲಿ ಪೆಟ್ಟು ಬಿದ್ದಂತಾಯಿತು. ಇವೆಲ್ಲಾ ಒಂದು ದಿನದಲ್ಲಿ ಮಾಯವಾಗುವ ಅನಿಷ್ಟಗಳಲ್ಲ. ಆದರೂ ಇವನ್ನೆಲ್ಲಾ ಬಿಡಬಹುದು, ಇವಕ್ಕಿಂತಲೂ ಮುಖ್ಯವಾದ ವಿಷಯಗಳಿವೆ ಎಂಬ ಭಾವನೆಗಳು ಜನರಿಗೆ ತಿಳಿಯಲು ತಡವಾಗಲಿಲ್ಲ. ಅಸಂಖ್ಯಾತ ಹಳ್ಳಿಗರಲ್ಲಿ ಈ ತಿಳುವಳಿಕೆ ಮೂಡಿದ್ದು ಆಶಾದಾಯಕ ವಿಷಯ.

ಶಿವಪುರ ರಾಷ್ಟ್ರಕೂಟದಲ್ಲಿ ಖಾದಿಗೆ ವಿಶೇಷ ಮನ್ನಣೆ ದೊರೆಯಿತು. ಖಾದಿ ಟೋಪಿಗಳ ಮೆರವಣಿಗೆಯೇ ಎಲ್ಲೆಲ್ಲೂ ಕಾಣುತ್ತಿತ್ತು. ಜನರಿಗೆ ಸ್ವದೇಶಿ ಮಾಲುಗಳ ಪರಿಚಯವಾಯಿತು. ಅಸ್ಪೃಶ್ಯತೆ, ಖಾದಿ ಪ್ರಚಾರ ಮೊದಲಾದ ಮಹಾತ್ಮಗಾಂಧಿಜಿಯವರ ತತ್ವಗಳು ಶಿವಪುರದಲ್ಲಿ ಕೃತಿಗಿಳಿದುವು.

ಧ್ವಜ ಸತ್ಯಾಗ್ರಹದಿಂದ ಸ್ಫೂರ್ತಿಗೊಂಡು ನೂರಾರು ಜನ ಸತ್ಯಾಗ್ರಹಿಗಳು ಹುಟ್ಟಿಕೊಂಡರು. ದೇಶದ ಸ್ವಾತಂತ್ರ್ಯಕ್ಕಾಗಿ ತ್ಯಾಗ ಬಲಿದಾನ ಮಾಡಲು ಅನೇಕರು ಮುಂದೆ ಬಂದರು. ಅನೇಕರು ತಮ್ಮ ಬಾಳಿನ ಹಾದಿಯನ್ನೇ ಬದಲಾಯಿಸಿಕೊಂಡರು. ತಮ್ಮ ತಮ್ಮ ಕ್ಷೇತ್ರಗಳಲ್ಲಿ ಸ್ವಾತಂತ್ರ್ಯಕ್ಕೆ ದುಡಿಯಲು ಪಣ ತೊಟ್ಟರು. ಸಂಘಟಿತರಾದರೆ ಅಗಾಧವಾದ ಶಕ್ತಿಯನ್ನು ಪ್ರಕಟಿಸಬಹುದೆಂಬ ನಂಬಿಕೆ ಸತ್ಯಾಗ್ರಹಿಗಳಿಗೆ ಮೂಡಿತು. ಮೈಸೂರು ಸಂಸ್ಥಾನದಲ್ಲಿ ಸ್ತ್ರೀಪುರುಷ ಸತ್ಯಾಗ್ರಹಿಗಳ ದಂಡು ತಯಾರಾಗಲು ಶಿವಪುರ ಧ್ವಜ ಸತ್ಯಾಗ್ರಹ ಸ್ಫೂರ್ತಿ ನೀಡಿತು. ಮುಂದೆ ಮೈಸೂರು ರಾಜ್ಯದಲ್ಲಿ ನಡೆದ ಅನೇಕ ಚಳುವಳಿಗಳು ಇದಕ್ಕೆ ಸಾಕ್ಷಿಯಾದುವು.

ಮೈಸೂರು ಸಂಸ್ಥಾನದಲ್ಲಿ ಸರಕಾರ ಅನುಸರಿಸುತ್ತಿರುವ ದಬ್ಬಾಳಿಕೆ, ಜನರ ಶೋಷಣೆ, ಅಧಿಕಾರದ ದುರುಪಯೋಗ, ಕೆಲವರ ವೈಭೋಗಕ್ಕೋಸ್ಕರ ಬಡವರ ಬೆವರಿನಿಂದ ಬಂದ ಬೊಕ್ಕಸದ ತರ್ಪಣ, ಜನರನ್ನು ಗುಲಾಮರನ್ನಾಗಿಯೇ ಇಡಲು ಪ್ರಯತ್ನಿಸುವ ಸರಕಾರದ ಧೋರಣೆ, ದೇಶೀಯ ಸಂಸ್ಥಾನದ ರಾಜಮಹಾರಾಜರ

ಅಧಿಕಾರ ದಾಹ ಮೊದಲಾದ ಹಲವು ಹತ್ತು ವಿಚಾರಗಳು ಜನರಿಗೆ ಮನದಟ್ಟಾಗಲು ಶಿವಪುರ ರಾಷ್ಟ್ರಕೂಟ ಸಹಾಯಕವಾಯಿತು. ಜನಸಂಘಟನೆಯಿಂದ ಮಾತ್ರ ಸರಕಾರದ ದಬ್ಬಾಳಿಕೆಯನ್ನು ಎದುರಿಸಬಹುದೆಂಬ ನೆಚ್ಚು ಮೂಡಿತು. ಈ ದಿಶೆಯಲ್ಲಿ ಮುಂದಡಿ ಇಡುವ ಕೆಚ್ಚು ಕಾಣಿಸಿಕೊಂಡಿತು.

ಮೊದಲ ಬಾರಿಗೆ ಸರಕಾರ ಜನರ ಕೂಗಿಗೆ ಗಮನ ಕೊಡಬೇಕಾಯಿತು. ಜನಸಮೂಹದ ಮಾತಿಗೆ ಬೆಲೆ ಕೊಡಬೇಕಾಯಿತು. ಇಲ್ಲದಿದ್ದರೆ ಉಳಿಗಾಲವಿಲ್ಲವೆಂಬ ವಿವೇಕ ಸರಕಾರಕ್ಕೆ ಬಂತು. ಜನರ ಕೂಗಿನಲ್ಲಿ, ಸಂಘಟನೆಯಲ್ಲಿ, ಕಾರ್ಯಾಚರಣೆಯಲ್ಲಿ ಏನೋ ಅಡಗಿದೆ, ಅದನ್ನು ಗಮನಿಸಬೇಕು ಎಂದು ಸರಕಾರ ಯೋಚನೆ ಮಾಡುವಂತಾಯಿತು. ಶಿವಪುರ ಧ್ವಜ ಸತ್ಯಾಗ್ರಹ ಆಗದಿದ್ದರೆ ಇನ್ನು ಹಲವಾರು ವರ್ಷಗಳವರೆಗೆ ಸರಕಾರ ತನ್ನ ಎಂದಿನ ರೀತಿಯ ಆಡಳಿತವನ್ನೇ ಮುಂದುವರಿಸುತ್ತಿದ್ದುದು ಖಂಡಿತ.

ಮೈಸೂರು ರಾಜ್ಯದಲ್ಲಿ ಕಾಂಗ್ರೆಸ್ ಸಂಸ್ಥೆ ತನ್ನ ಅಸ್ತಿತ್ವವನ್ನು ಉಳಿಸಿಕೊಂಡು ಗಟ್ಟಿಯಾಗಿ ಬೇರು ಬಿಡಲು ಶಿವಪುರ ಅಧಿವೇಶನ ಕಾರಣವಾಯಿತು. ಆವರೆಗೆ ಸರಕಾರ ಮನ್ನಣೆ ಕೊಡದ, ಜನಸಾಮಾನ್ಯರನ್ನು ನೇರವಾಗಿ ಮುಟ್ಟದ ಒಂದು ಸಾಧಾರಣ ಸಂಸ್ಥೆಯಾಗಿತ್ತು ಕಾಂಗ್ರೆಸ್. ಆದರೆ ಅಧಿವೇಶನದ ಅನಂತರ ಕಾಂಗ್ರೆಸ್ಸಿನ ಚಿತ್ರ ಬದಲಾಯಿತು. ಇಡೀ ಸಂಸ್ಥಾನದ ಜನರ ಆಶೋತ್ತರಗಳನ್ನು ಪ್ರತಿಬಿಂಬಿಸುವ ಏಕೈಕ ಸಂಸ್ಥೆಯಾಗಿ ಕಾಂಗ್ರೆಸ್ ಕಂಡಿತು. ಕಾಂಗ್ರೆಸ್ ಜವಾಬ್ದಾರಿ ಸರ್ಕಾರಕ್ಕಾಗಿ, ಜನರ ಹಕ್ಕುಬಾಧ್ಯತೆಗಳಿಗಾಗಿ ಹೂಡಿರುವ ಯುದ್ಧ ನ್ಯಾಯವಾದುದು, ಧರ್ಮವಾದುದು, ಇದಕ್ಕೆ ಎಲ್ಲ ರೀತಿಯ ಸಹಾಯ ಸಹಕಾರಗಳನ್ನು ನೀಡಬೇಕೆಂಬ ಸದಾಶಯ ಜನರಲ್ಲಿ ಮೂಡಿತು. ಕಾಂಗ್ರೆಸ್ ತನ್ನ ಪರೀಕ್ಷೆಯಲ್ಲಿ ಜಯಶಾಲಿಯಾಯಿತು. ಧ್ವಜ ಸತ್ಯಾಗ್ರಹ ಯಶಸ್ವಿಯಾಗದಿದ್ದರೆ ಬಹುಶಃ ಕಾಂಗ್ರೆಸ್ಸಿನ ಸ್ಥಿತಿ ಶೋಚನೀಯವಾಗುತ್ತಿತ್ತು. ಮೈಸೂರು ರಾಜ್ಯದಲ್ಲಿ ಕಾಂಗ್ರೆಸ್ ಹಚ್ಚ ಹಸುರಾಗಿ ಉಳಿಯಲು, ಬೆಳೆಯಲು ಶಿವಪುರ ಧ್ವಜ ಸತ್ಯಾಗ್ರಹದಿಂದ ಸಾಧ್ಯವಾಯಿತು. ಕಾಂಗ್ರೆಸ್‌ನ ಅಂಗರಚನೆ, ಮುಂದಿನ ಕಾರ್ಯಕ್ರಮದ ರೂಪುರೇಖೆಗಳು ಅಧಿವೇಶನದ ಸಮಯದಲ್ಲಿ ತೀರ್ಮಾನವಾದುವು. ಅಖಿಲ ಭಾರತ ಮಟ್ಟದಲ್ಲಿ ಮೈಸೂರು ಕಾಂಗ್ರೆಸ್‌ಗೆ ಒಂದು ಸ್ಥಾನ ದೊರೆಯುವಂತಾಯಿತು. ಮೈಸೂರು ಕಾಂಗ್ರೆಸ್ ಮತ್ತು ಅದರ ಕಾರ್ಯಕರ್ತರು ನಿಜವಾದ ಸತ್ಯಾಗ್ರಹಿಗಳು, ಮನಸ್ಸು ಮಾಡಿದರೆ ಇವರು ಏನನ್ನಾದರೂ ಸಾಧಿಸಬಲ್ಲರು ಎಂಬ ನಂಬಿಕೆ ರಾಷ್ಟ್ರನಾಯಕರಿಗೆ ಉಂಟಾಯಿತು. ಮೈಸೂರಿನ ರಾಜಕೀಯ ಮುಖಂಡರ ಹಾಗೂ ಸತ್ಯಾಗ್ರಹಿಗಳ ಶಕ್ತಿಯ ಬಗೆಗೆ ಇದ್ದ ಸಂಶಯ ಮಾಯವಾಯಿತು.

ದೇಶೀಯ ಸಂಸ್ಥಾನಗಳು ಸತ್ಯಾಗ್ರಹ ಚಳುವಳಿಗಳನ್ನು ನಡೆಸಲು, ಅಲ್ಲಿಯ ಸರಕಾರವನ್ನು ಉಚ್ಚಾಟಿಸಲು ಮೈಸೂರಿನ ಸತ್ಯಾಗ್ರಹ ಮಾದರಿಯಾಯಿತು. ದೇಶೀಯ ಸಂಸ್ಥಾನಗಳ ಸತ್ಯಾಗ್ರಹಿಗಳಿಗೆ ಅಷ್ಟೊಂದು ಸಾಮರ್ಥ್ಯವಿದೆಯೆಂದು ಆವರೆಗೆ ರುಜುವಾತಾಗಿರಲಿಲ್ಲ.

ಶಿವಪುರ ಧ್ವಜಸತ್ಯಾಗ್ರಹವು ಅಖಿಲ ಭಾರತದ ಮಟ್ಟದಲ್ಲಿ ನಡೆದ ನಾಗಪುರ ಧ್ವಜಸತ್ಯಾಗ್ರಹದಷ್ಟೇ ಪ್ರಸಿದ್ಧವಾಯಿತು. ಇದರಿಂದ ಸ್ಫೂರ್ತಿ ಪಡೆದ ಅನೇಕ ದೇಶೀಯ ಸಂಸ್ಥಾನಗಳ ಸತ್ಯಾಗ್ರಹಿಗಳು ತಮ್ಮ ಸಂಸ್ಥಾನಗಳಲ್ಲೂ ಜವಾಬ್ದಾರಿ ಸರ್ಕಾರಕ್ಕಾಗಿ ಹೋರಾಡಲು ಪ್ರಾರಂಭಿಸಿದರು. ಮೈಸೂರು ಸಂಸ್ಥಾನದಲ್ಲಿ ಪ್ರಾರಂಭವಾದ ಈ ಹೋರಾಟ ಇಡೀ ಭಾರತದಲ್ಲೆಲ್ಲಾ ಕಾಳ್ಗಿಚ್ಚಿನಂತೆ ಹಬ್ಬಿತು. ಇದರಿಂದ ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕಷ್ಟು ಸಹಾಯವಾಯಿತು ಎಂಬುದು ಸುಳ್ಳಲ್ಲ.

ಶಿವಪುರ ಧ್ವಜಸತ್ಯಾಗ್ರಹದಿಂದ ಜನಸಾಮಾನ್ಯರೂ ಸರಕಾರದ ಅಧಿಕಾರಿಗಳೂ ಸಾಕಷ್ಟು ವಿಷಯಗಳನ್ನು ಕಲಿತರು. ಬಂದೂಕಧಾರಿ ಪೋಲೀಸರನ್ನು ಕಂಡು ಸುಮಾರು 50,000 ಜನರು ಉದ್ರೇಕಗೊಂಡು ದುಡುಕಿದ್ದರೂ ಇಡೀ ಧ್ವಜಮೈದಾನದಲ್ಲೆಲ್ಲಾ ರಕ್ತದ ಓಕುಳಿ ಚೆಲ್ಲುತ್ತಿತ್ತು. ದುಡಿಕಿಗಿಂತ ಸಹನೆಯಿದ್ದರೆ ಮಿಗಿಲಾದುದನ್ನು ಗಳಿಸಬಹುದು, ಶಸ್ತ್ರಧಾರಿಗಳನ್ನು ಒಲಿಸಿಕೊಳ್ಳಬಹುದು, ಹಿಂಸೆಗಿಂತ ಅಹಿಂಸೆ, ಅಧರ್ಮಕ್ಕಿಂತ ಧರ್ಮಮಾರ್ಗ ಉತ್ತಮ ಎಂಬುದನ್ನು ಮಹಾಜನರು ಕೃತಿಯಲ್ಲಿ ತೋರಿಸಿಕೊಟ್ಟರು. ಇರುವ ಶಕ್ತಿಯನ್ನು ಉಚಿತ ಮಾರ್ಗದಲ್ಲಿ ಬಳಸಿದರೆ ಫಲ ಹೆಚ್ಚು ಎಂಬುದು ಮನದಟ್ಟಾಯಿತು. ಅಧಿಕಾರ ಮತ್ತು ಅಸ್ತ್ರ ಕೈಲಿದ್ದಾಗ ಎಂಥವನೂ ಸುಮ್ಮನಿರುವುದು ಕಷ್ಟ. ಅದರಲ್ಲೂ ನಿರಾಯುಧರನ್ನು ಅಸಹಾಯಕರನ್ನು ಕಂಡರೆ ಮೈತೀಟೆ ಹೆಚ್ಚು. ಅಧಿಕಾರ ಮತ್ತು ಅಸ್ತ್ರಗಳ ಸೊಕ್ಕಿನಿಂದ ಪೋಲೀಸರು ಕ್ಷಣ ಮೈಮರೆತಿದ್ದರೂ ಎಷ್ಟೋ ದೇಹಗಳು ನೆಲಕ್ಕುರುಳುತ್ತಿದ್ದುವು; ನರ ರಕ್ಷಕರು ನರಭಕ್ಷಕರಾಗುತ್ತಿದ್ದರು; ಮಾನವರು ದಾನವರಾಗುತ್ತಿದ್ದರು. ಧ್ವಜಸತ್ಯಾಗ್ರಹದಂಥ ಕಾರ್ಯಾಚರಣೆಗೆ ದೂರಾಲೋಚನೆಯಿಂದೆ, ಬಹುಜನ ಹಿತಾಸಕ್ತಿಯ ಬೆಳಕಿದೆ, ಯುಗಧರ್ಮದ ಮೊರೆಯಿದೆ, ಮಾನವನ ಮೂಲಭೂತವಾದ ಸ್ವಾತಂತ್ರ್ಯದ ಹಂಬಲವಿದೆ, ಪ್ರಪಂಚದ ಇಂಥದೇ ಪ್ರಕರಣಗಳ ಸ್ಫೂರ್ತಿಯಿಂದೆ, ಇದರಲ್ಲಿ ನ್ಯಾಯವಿದೆ, ಸ್ವಾರ್ಥವಿಲ್ಲ ಎಂದು ಮನಗಂಡ ಕಾನೂನು ಪಾಲಕರು ದುಡುಕಲಿಲ್ಲ. ಪರೋಕ್ಷವಾಗಿ ಮಹಾಜನತೆಯ ಮನೋಧರ್ಮಕ್ಕೆ ಇಂಬುಕೊಟ್ಟರು. ಸುಮ್ಮನಿದ್ದವರ ಮೇಲೆ ಕಾಲು ಕೆರೆದುಕೊಂಡು ಜಗಳಕ್ಕೆ ನಿಲ್ಲಲಿಲ್ಲ. ಕಾನೂನಿನ ಪ್ರಕಾರ ಹೆಚ್ಚು ನಷ್ಟವಿಲ್ಲದ ದಾರಿಯನ್ನು ಅನುಸರಿಸಿದರು. ಗೋಲಿಬಾರು ಮಾಡಿ ನಿರಾಪರಾಧಿಗಳಾದ

ಹಲವರನ್ನು ಸಾಯಿಸುವುದರ ಬದಲು ದಸ್ತಗಿರಿ ಮಾಡಿ ಕೆಲವರನ್ನು ಬಂಧಿಸಿದರು. ಅನೇಕ ಪ್ರಸಂಗಗಳಲ್ಲಿ ಕಾನೂನು ರಕ್ಷಕರು ದಂಡುಕಿ ಹತ್ಯಾಕಾಂಡಗಳು ನಡೆದಿರು ವುದು ಹೊಸ ವಿಚಾರವೇನಲ್ಲ; ಆದರೆ ಶಿವಪುರ ರಾಷ್ಟ್ರಕೂಟದಲ್ಲಿ ಹಾಗಾಗದಿದ್ದುದು ಅದೃಷ್ಟದ ವಿಷಯ.

ಇಂಥ ಅದೃಷ್ಟ ಪ್ರಾಪ್ತಿಗೆ ಜಿಲ್ಲಾ ನ್ಯಾಯಾಧಿಕಾರಿ ಶ್ರೀ ಮೇಕ್ರಿಯವರು ಕಾರಣರು. ತಾವೇ ಸ್ಥಳದಲ್ಲಿ ನಿಂತುಕೊಂಡು ಎಲ್ಲವನ್ನೂ ಪ್ರತ್ಯಕ್ಷವಾಗಿ ನೋಡಿ ಉಚಿತ ಅನುಚಿತಗಳನ್ನು ವಿಮರ್ಶೆಮಾಡಿ ಉತ್ತಮವಾದ ದಾರಿಯನ್ನು ಆರಿಸಿ ಕೊಂಡ ಅವರ ದೂರಾಲೋಚನೆ, ವ್ಯವಹಾರಜ್ಞಾನ ಅದ್ಭುತವಾದುದು. ಅವರ ತಾಳ್ಮೆ ಅನ್ಯಾದೃಶವಾದುದು. ಅವರ ವಿಶಿಷ್ಟವಾದ ವರ್ತನೆಯಿಂದ ಜನಾನುರಾಗಿ ಗಳಾದರು; ಅರಮನೆಯ ಪ್ರೀತಿಗೂ ಪಾತ್ರರಾದರು. ಅವಕಾಶವಿದ್ದರೂ ಜನರ ಸಾವು ನೋವು ಸಂಭವಿಸದ ಹಾಗೆ ದಕ್ಷತೆಯಿಂದ ಉಪಾಯದಿಂದ ಕಾರ್ಯ ನಿರ್ವ ಹಿಸಿದ ಶ್ರೀ ಮೇಕ್ರಿಯವರಿಗೆ ಶ್ರೀಮನ್ಮಹಾರಾಜರು ಚಿನ್ನದ ಗುಂಡಿಗಳನ್ನು ಬಹುಮಾ ನಿಸಿದರು. ಧ್ವಜ ಸತ್ಯಾಗ್ರಹದಲ್ಲಿ ಹೆಚ್ಚು ಜನರನ್ನು ದಸ್ತಗಿರಿ ಮಾಡಿದ್ದಕ್ಕೆ ಮಹಾ ರಾಜರು ಪೋಲೀಸ್ ಅಧಿಕಾರಿಗಳನ್ನು ಆಕ್ಷೇಪಿಸಿದರು. ದಿವಾನರೇ ಗೋಲಿಬಾರ್ ಮಾಡಲು ಆಜ್ಞೆ ಕಳಿಸಿದರು. ಅದನ್ನು ನೆರವೇರಿಸದೆ ಸೂಸೂತ್ರವಾಗಿ ಕಾರ್ಯ ನಿರ್ವಹಿಸಿದ ವ್ಯಕ್ತಿಗೆ ಮಹಾರಾಜರು ಮೆಚ್ಚು ಕೊಟ್ಟರು. ದಿವಾನರು ಮತ್ತು ಮಹಾರಾಜರು ಒಂದೇ ಆಡಳಿತದ ಎರಡು ಮುಖಗಳು. ಆದರೆ ಒಬ್ಬೊಬ್ಬರ ಸ್ವಭಾವ ಒಂದೊಂದು ತರಹ !

ಒಟ್ಟಿನಲ್ಲಿ ಶಿವಪುರ ಧ್ವಜಸತ್ಯಾಗ್ರಹದಿಂದ ಆದ ಪ್ರಭಾವ ಮತ್ತು ಪರಿಣಾಮ ಸುಲಭವಾಗಿ ಮರೆಯುವಂಥದಲ್ಲ. ಶಿವಪುರ ಧ್ವಜಸತ್ಯಾಗ್ರಹವನ್ನು ಒಂದು ಮಹಾವೃಕ್ಷವೆಂದು ಭಾವಿಸುವುದಾದರೆ ಅದರ ಪರಿಣಾಮಗಳು ಆ ವೃಕ್ಷದ ಹಲವಾರು ಶಾಖೆಗಳೆಂದು ಪರಿಗಣಿಸಬೇಕು. ಆ ಶಾಖೆಗಳು ತಾಯಿ ವೃಕ್ಷದಷ್ಟೇ ಮುಖ್ಯವಾದುವು. ಕೆಲವಂತೂ ಮೂಲವೃಕ್ಷಕ್ಕಿಂತಲೂ ಜಾಜ್ವಲ್ಯವಾದುವು. ಕ್ರಿಯಾತ್ಮಕ ಸಾಧನೆಯ ಹಾಗೂ ನಾಡಿನ ಇತಿಹಾಸದ ವಸ್ತುಗಳಾದುವು. ಉತ್ತರೋತ್ತರದಲ್ಲಿ ಇಡೀ ರಾಷ್ಟ್ರದ ವಿಮೋಚನೆಗೆ ಸಹಾಯಕವಾದುವು.

ಶಿವಪುರ ಧ್ವಜ ಸತ್ಯಾಗ್ರಹದ ಸ್ಥಾನ ಮೈಸೂರು ರಾಜ್ಯದ ಇತಿಹಾಸದಲ್ಲಿ ಮಹತ್ಪೂರ್ಣವಾದುದು; ಮೈಸೂರು ಕಾಂಗ್ರೆಸ್ಸಿನ ಚರಿತ್ರೆಯಲ್ಲಿ ಚಿರಸ್ಥಾಯಿ ಯಾದುದು; ಮೈಸೂರು ಸತ್ಯಾಗ್ರಹಿಗಳ ಬದುಕಿನಲ್ಲಿ ಚಿರನೂತನವಾದುದು.

ಧ್ವಜಸತ್ಯಾಗ್ರಹದ ಪ್ರಭಾವ

ಶಿವಪುರ ಧ್ವಜಸತ್ಯಾಗ್ರಹದ ಪ್ರಭಾವ ನಾನಾ ರೀತಿಯಲ್ಲಿ ಸಂಸ್ಥಾನದಲ್ಲೆಲ್ಲಾ ಹರಡಿತು. ಇಲ್ಲಿಂದ ಸ್ಫೂರ್ತಿಗೊಂಡ ಸತ್ಯಾಗ್ರಹಿಗಳು ತಮ್ಮ ಸ್ಥಳಗಳಿಗೆ ಹೋಗಿ ಅಲ್ಲಿ ಜನ ಸಂಘಟನೆ ಮಾಡಿ, ಅನೇಕ ಸತ್ಯಾಗ್ರಹಗಳನ್ನು ನಡಸಿದರು. ಶಿವಪುರದಲ್ಲಿ ಗಳಿಸಿಕೊಂಡ ಅನುಭವ ಸಂಸ್ಥಾನದ ಪಟ್ಟಣ, ಹಳ್ಳಿಗಳ ಮನೆ ಮನೆಗೂ ತಲುಪಿತು. ಸಾವಿರಾರು ಸಂಖ್ಯೆಯಲ್ಲಿ ಸ್ತ್ರೀ ಪುರುಷರು ಸತ್ಯಾಗ್ರಹಗಳಲ್ಲಿ ಪಾಲ್ಗೊಂಡರು. ಶಾಲೆ ಕಾಲೇಜುಗಳಲ್ಲಿ ಓದುತ್ತಿದ್ದ ವಿದ್ಯಾರ್ಥಿ ವಿದ್ಯಾರ್ಥಿನಿಯರು, ಹೊಲಗದ್ದೆಗಳಲ್ಲಿ ದುಡಿಯುವ ರೈತರು, ಕೂಲಿಕಾರರು, ನಾನಾ ಹುದ್ದೆಗಳಲ್ಲಿ ಕೆಲಸ ಮಾಡುತ್ತಿದ್ದ ನೌಕರರು ತಂಡೋಪತಂಡವಾಗಿ ಸತ್ಯಾಗ್ರಹಗಳಲ್ಲಿ ಭಾಗವಹಿಸಲು ಮೊದಲು ಮಾಡಿದರು. ಬ್ರಿಟಿಷ್ ಇಂಡಿಯಾ ಚಳುವಳಿಗಿಂತಲೂ ಮೈಸೂರು ಸಂಸ್ಥಾನದ ಚಳುವಳಿಗಳು ಒಂದು ಮಾರು ಮುಂದೆ ಇದ್ದುವು. ಒಂದು ಹೊಸ ಅಲೆ ನಿರ್ದಿಷ್ಟ ಗುರಿಯತ್ತ ಜನರನ್ನು ಸೆಳೆಯುತ್ತಿತ್ತು. ಸ್ವಾತಂತ್ರ್ಯದ ಅಭೀಪ್ಸೆಯ ಈ ಮಹಾ ಪ್ರವಾಹವನ್ನು ಯಾರಿಂದಲೂ ತಡೆಯುವುದಕ್ಕಾಗಲಿಲ್ಲ.

ಬೆಂಗಳೂರಿನಲ್ಲಿ

ಶಿವಪುರ ಧ್ವಜಸತ್ಯಾಗ್ರಹವನ್ನು ಕಣ್ಣಾರೆ ಕಂಡು ತೆರಳಿದ ಸತ್ಯಾಗ್ರಹಿಗಳು ಅತ್ಯುತ್ಸಾಹದಿಂದ ಸರ್ಕಾರದ ದಮನಕ್ಕೂ ಹೆದರದೆ ತಂತಮ್ಮ ಸ್ಥಳಗಳಲ್ಲಿ ಧ್ವಜ ಸತ್ಯಾಗ್ರಹವನ್ನು ನಡೆಸಿದರು. ದಿನಾಂಕ 17-4-1938 ರಂದು ಬೆಂಗಳೂರಿನಲ್ಲಿ ನಡೆದ ಧ್ವಜ ಸತ್ಯಾಗ್ರಹ ಗಮನಾರ್ಹವಾಗಿದೆ. ಅಂದು 5 ಜನ ಕಾಂಗ್ರೆಸ್ ಮುಖಂಡರು ಬಂಧಿತರಾದರು.

ಹಿಂದಿನ ದಿನ ಪ್ರಕಟಿಸಿದಂತೆ, 17 ರ ಬೆಳಗ್ಗೆ 7 ಗಂಟೆಗೆ ಸ್ಥಳೀಯ ಕಾಂಗ್ರೆಸ್ ಮುಖಂಡರು ಕಾಂಗ್ರೆಸ್ ಕಚೇರಿಯಲ್ಲಿ ಕಲೆತು ಕಾರ್ಯಕ್ರಮದ ಬಗೆಗೆ ವಿಚಾರ ವಿನಿಮಯ ಮಾಡಿದರು. ವಿಷಯ ಮೊದಲೇ ತಿಳಿದಿದ್ದುದರಿಂದ ಬೆಳಗ್ಗೆ 6 ಗಂಟೆಗೆಲ್ಲ ಮೀಸಲು ಪೋಲೀಸ್ ಪಡೆಯು ಕೆಂಗೇರಿ ಪೋಲೀಸ್ ಠಾಣೆಯಲ್ಲಿ ಸಿದ್ಧವಾಗಿತ್ತು. 7 ಗಂಟೆಗೆ ಸರಿಯಾಗಿ ಸತ್ಯಾಗ್ರಹಿಗಳ ತಂಡ ಬೀದಿಯಲ್ಲಿ ನಿಂತಿತು. ಪೋಲೀಸ್ ಠಾಣೆಯಲ್ಲಿ ಪೋಲೀಸ್ ಇನ್‌ಸ್ಪೆಕ್ಟರ್‌ಗಳಾದ ಶ್ರೀ ಕೃಷ್ಣಮೂರ್ತಿ,

ಶ್ರೀ ಧೃವರಾವ್, ಶ್ರೀ ಸಯದ್ ಅಹಮದ್ ಹುಸೇನ್, ಶ್ರೀ ಶಿವರಾಮರಾವ್, ಶ್ರೀ ಕುಪ್ಪುಸ್ವಾಮಿ (ಸಬ್-ಇನ್‌ಸ್ಪೆಕ್ಟರ್) ಮೊದಲಾದವರೂ ಸಿಟಿ ಪೋಲೀಸರೂ ಕಾದಿದ್ದರು.

8 ಗಂಟೆಗೆ ಡಾ॥ ಪಾರ್ಥನಾರಾಯಣ ಪಂಡಿತರು ಕಾಂಗ್ರೆಸ್ ಆಫೀಸಿನ ಮಹಡಿಯ ಮೇಲಿಂದ ಮೆರವಣಿಗೆಯಲ್ಲಿ ಭಾಗವಹಿಸುವವರನ್ನೆಲ್ಲ ಕೆಳಕ್ಕೆ ಕರೆದು ಕೊಂಡು ಬಂದು ಕಾಂಗ್ರೆಸ್ ಕಚೇರಿಯ ಮುಂದೆ ಸಾಲಾಗಿ ನಿಲ್ಲಿಸಿದರು. ಅಷ್ಟರಲ್ಲಿ ಪೋಲೀಸ್ ಅಧಿಕಾರಿಗಳು ಬಂದು ಮ್ಯಾಜಿಸ್ಟ್ರೇಟರು ಹಿಂದಿನ ದಿನವೇ ಜಾರಿ ಮಾಡಿದ್ದ ನಿಷೇಧಾಜ್ಞೆಯನ್ನು ಡಾ॥ ಪಂಡಿತರ ಗಮನಕ್ಕೆ ತಂದು ಮೆರವಣಿಗೆ ಮಾಡಕೂಡದು ಎಂದರು. ಮುಖಂಡರಾದ ಡಾ॥ ಪಂಡಿತರು ಮರವಣಿಗೆಯನ್ನು ಮುಂದುವರಿಸುವುದಾಗಿ ಹೇಳಿದರು. ಅವರನ್ನು ಕೂಡಲೆ ದಸ್ತಗಿರಿ ಮಾಡ ಲಾಯಿತು.

ಅನಂತರ ಶ್ರೀಮತಿ ಲಲಿತಮ್ಮ ಜಿ. ಆರ್. ಸ್ವಾಮಿಯವರು ರಾಷ್ಟ್ರಧ್ವಜ ವನ್ನು ಹಿಡಿದುಕೊಂಡು ಮೆರವಣಿಗೆಯನ್ನು ಮುಂದುವರಿಸಲು ಅನುವಾದರು. ಪೋಲೀಸರು ತಡೆದರು. ಆದರೂ ಮೆರವಣಿಗೆ ಮುಂದುವರಿದುದರಿಂದ ಶ್ರೀಮತಿ ಲಲಿತಮ್ಮನವರನ್ನು ಪೋಲೀಸರು ಬಂಧಿಸಿದರು. ಜನರ ಗುಂಪು ಬೀದಿಯಲ್ಲಿ ಅಧಿಕವಾಯಿತು. ಜಯಜಯಕಾರಗಳು ಮೊರೆದುವು, ದಸ್ತಗಿರಿಯಿಂದ ಉದ್ರೇಕ ಗೊಂಡ ಜನರನ್ನು ಮುಖಂಡರು ಶಾಂತವಾಗಿರಲು ಪ್ರಾರ್ಥಿಸಿಕೊಂಡರು. ಮುಂದೆ, ಶ್ರೀ ಬಿ. ಯಂ. ಶೀನಪ್ಪನವರು ಧ್ವಜವನ್ನು ಹಿಡಿದು ಸಾಗಿದಾಗ ಪೋಲೀಸರು ಅವರನ್ನೂ ಬಂಧಿಸಿದರು. ಮಾರ್ಕೆಟ್ ಸೀತಾರಾಮಯ್ಯನವರು ಮುಂದಾಗಿ ಧ್ವಜ ಹಿಡಿದು ಹೊರಟರು. ಅವರ ಬಂಧನವೂ ನಡೆಯಿತು. ಅನಂತರ ಶ್ರೀ ರಾಮಲಾಲ್ ತಿವಾರಿಯವರು ಧ್ವಜವನ್ನು ಹಿಡಿದು ಮೆರವಣಿಗೆಯನ್ನು ಮುಂದು ವರಿಸಬೇಕೆಂದಿದ್ದಾಗ ಅವರನ್ನು ತಡೆದು ಬಂಧಿಸಿದರು. ಹೀಗೆ, ಮೆರವಣಿಗೆ ಮುಂದುವರಿಯದಂತೆ ಮಾಡಿ ಒಬ್ಬರಾದ ಮೇಲೆ ಒಬ್ಬರಂತೆ 5 ಜನರನ್ನು ಬಂಧಿಸ ಲಾಯಿತು.

ಆದರೆ ಸತ್ಯಾಗ್ರಹಿಗಳು ಅಷ್ಟಕ್ಕೆ ಮೆರವಣಿಗೆಯನ್ನು ನಿಲ್ಲಿಸಲಿಲ್ಲ. ಇದನ್ನೆಲ್ಲ ಮೊದಲೇ ನಿರೀಕ್ಷಿಸಿದ್ದ ಸತ್ಯಾಗ್ರಹಿಗಳು ಎಲ್ಲಕ್ಕೂ ಸಿದ್ಧವಾಗಿಯೇ ಬಂದಿದ್ದರು. ಅನಂತರ ಶ್ರೀ ಗುರುವಾರೆಡ್ಡಿಯವರು ರಾಷ್ಟ್ರಧ್ವಜವನ್ನು ಹಿಡಿದು ಮುಂದೆ ಹೊರಟರು. ಉಳಿದ ಸತ್ಯಾಗ್ರಹಿಗಳು ಅವರನ್ನು ಹಿಂಬಾಲಿಸಿದರು. ಪ್ರಚಾರ ಮೆರವಣಿಗೆಯು ಬಳೇಪೇಟೆ, ಚಿಕ್ಕಪೇಟೆ, ದೊಡ್ಡಪೇಟೆ, ಕಬ್ಬನ್‌ಪೇಟೆ, ನಗರ್ತರ ಪೇಟೆ, ಸಿಟಿ ಮಾರ್ಕೆಟ್, ಸುಲ್ತಾನ್‌ಪೇಟೆಗಳಲ್ಲಿ ಸಂಚರಿಸಿ ಮಧ್ಯಾಹ್ನ 11 ಗಂಟೆಯ

ಹೊತ್ತಿಗೆ ಕಾಂಗ್ರೆಸ್ ಕಚೇರಿಗೆ ಹಿಂದಿರುಗಿತು. ಅಲ್ಲಿ ಯಾರನ್ನೂ ಬಂಧಿಸಲಿಲ್ಲ. ಮೆರವಣಿಗೆಯ ಮುಖಂಡತ್ವ ವಹಿಸಿದ್ದ ಶ್ರೀ ಗುರುವಾರೆಡ್ಡಿಯವರು ಪುಟ್ಟ ಭಾಷಣ ಮಾಡಿ ಮೆರವಣಿಗೆಯಲ್ಲಿ ಭಾಗವಹಿಸಿ ಶಾಂತವಾಗಿ ನಡೆದುಕೊಂಡುದಕ್ಕಾಗಿ ಎಲ್ಲರಿಗೂ ವಂದನೆಗಳನ್ನು ಅರ್ಪಿಸಿದರು.

ಬಂಧಿತರನ್ನು ಪೋಲೀಸ್ ಲಾರಿಯಲ್ಲಿ ಸಿಟಿ ಮ್ಯಾಜಿಸ್ಟ್ರೇಟ್ ಕೋರ್ಟಿಗೆ ಸಾಗಿಸಲಾಯಿತು. ಅಲ್ಲಿ ವಿಚಾರಣೆ ನಡೆಯಿತು. ನ್ಯಾಯಾಲಯದ ತುಂಬ ಜನರು ಸೇರಿದ್ದರು. ಎಲ್ಲ ಬಂಧಿತರೂ ತಾವು ನಿರಪರಾಧಿಗಳೆಂದೂ ಜಿಲ್ಲಾ ಮ್ಯಾಜಿಸ್ಟ್ರೇಟರ ಆಜ್ಞೆಯನ್ನು ಉಲ್ಲಂಘಿಸುವ ಉದ್ದೇಶವನ್ನು ಹೊಂದಿರಲಿಲ್ಲವೆಂದೂ ಪಕ್ಷದ ಪ್ರಚಾರಕ್ಕಾಗಿ ಕಾಂಗ್ರೆಸ್ ಧ್ವಜವನ್ನು ಸುಮ್ಮನೆ ಹಿಡಿದುಕೊಂಡು ಹೋಗುತ್ತಿದ್ದುದಾಗಿಯೂ ತಿಳಿಸಿದರು. ಎಲ್ಲರೂ ಕಳೆದ ದಸರಾ ಅಧಿವೇಶನದಲ್ಲಿ ದಿವಾನರು ಧ್ವಜದ ಬಗೆಗೆ ಹೇಳಿದ್ದ ಮಾತುಗಳನ್ನು ಉಲ್ಲೇಖಿಸಿದರು. ನ್ಯಾಯಾಧೀಶರ ಮುಂದೆ ಬಂಧಿತರು ವ್ಯಕ್ತಪಡಿಸಿದ ಸ್ವಾರಸ್ಯಕರವಾದ ಹೇಳಿಕೆಗಳು ಹೀಗಿವೆ :

ಶ್ರೀ ಸೀತಾರಾಮಯ್ಯ : "ಕಾಂಗ್ರೆಸ್ ಪಕ್ಷದ ಪ್ರಚಾರಕ್ಕಾಗಿ ಕಾಂಗ್ರೆಸ್ ಧ್ವಜ ಹಿಡಿದುಕೊಂಡು ಹೋದೆ. ಮ್ಯಾಜಿಸ್ಟ್ರೇಟರ ಆಜ್ಞೆಯನ್ನು ಉಲ್ಲಂಘಿಸಲು ಅಲ್ಲ."

ಶ್ರೀಮತಿ ಲಲಿತಮ್ಮ : "ನಾನು ತಪ್ಪಿತಸ್ಥಳಲ್ಲ. ನಾನು ಸುಮ್ಮನೆ ಕಾಂಗ್ರೆಸ್ ಧ್ವಜವನ್ನು ಕೈಯಲ್ಲಿ ಹಿಡಿದಿದ್ದೆ, ಅಷ್ಟೆ."

ಶ್ರೀ ಬಿ. ಯಂ. ಶೀನಪ್ಪ : "ಮೈಮೇಲೆ ಕೋಟು ಧರಿಸುವ ಹಾಗೆ ನಾನು ಕಾಂಗ್ರೆಸ್ ಧ್ವಜವನ್ನು ಕೈಯಲ್ಲಿ ಹಿಡಿದಿದ್ದೆ."

ನ್ಯಾಯಾಲಯದಲ್ಲಿ ಕಿಕ್ಕಿರಿದು ಸೇರಿದ್ದ ಜನರು ಬಂಧಿತರ ಹೇಳಿಕೆಗಳಿಂದ ಉತ್ಸಾಹಗೊಂಡು ಘೋಷಣೆಗಳನ್ನು ಕೂಗುತ್ತಿದ್ದರು. ಆಗ ಸಿಟಿ ಮ್ಯಾಜಿಸ್ಟ್ರೇಟರಾದ ಶ್ರೀ ಜಿ. ಸುಂದರರಾವ್ ಅವರು ಹಾಗೆ ಜೈಕಾರಗಳನ್ನು ಕೂಗುವುದಕ್ಕೆ ನ್ಯಾಯಾಲಯದಲ್ಲಿ ಅವಕಾಶವಿಲ್ಲವೆಂದು ಜನರಿಗೆ ಎಚ್ಚರಿಕೆ ನೀಡಿದರು.

ಪೋಲೀಸ್ ಅಧಿಕಾರಿಗಳ ಜೊತೆಗೆ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟ್ ಕೋರ್ಟಿನ ಗುಮಾಸ್ತ ಶ್ರೀ ರಾಜಗೋಪಾಲ ಅಯ್ಯಂಗಾರ್ಯರೂ ವಿಚಾರಣೆಯಲ್ಲಿ ಪಾಲ್ಗೊಂಡಿದ್ದರು. ಸಂಜೆ 5 ಗಂಟೆಯ ಸುಮಾರಿಗೆ ಬಂಧಿತರನ್ನು ತಪ್ಪಿತಸ್ಥರೆಂದು ತೀರ್ಮಾನಿಸಿ ನ್ಯಾಯಾಧೀಶರು ತಮ್ಮ ತೀರ್ಪನ್ನು ಹೀಗೆ ಪ್ರಕಟಿಸಿದರು : ಮೈಸೂರು ಪೋಲೀಸ್ ಆಕ್ಟಿನ 30 (3) ನೇ ವಿಧಿಯ ಪ್ರಕಾರ ಶ್ರೀಮತಿ ಲಲಿತಮ್ಮನವರಿಗೆ

ಒಂದು ರೂಪಾಯಿ ದಂಡ ಮತ್ತು ಮೈಸೂರ್ ಪೋಲೀಸ್ ಆಕ್ಟ್‌ನ 73 ನೇ ನಿಯಮದ ಪ್ರಕಾರ ಕೋರ್ಟಿನ ಕೆಲಸ ಮುಗಿಯುವವರೆಗೆ ಬಂಧನ. ಉಳಿದ ಎಲ್ಲ ಗಂಡಸರಿಗೆ ಒಂದು ತಿಂಗಳ ಮೇಲೆ ಒಂದು ವಾರ ಸಾದಾ ಶಿಕ್ಷೆ ಮತ್ತು ಹತ್ತು ರೂಪಾಯಿ ದಂಡ.

ಕಾಂಗ್ರೆಸ್ ಧ್ವಜದ ಮೆರವಣಿಗೆಯನ್ನು ತಡೆಯುವುಕ್ಕೋಸ್ಕರ ಬೆಂಗಳೂರಿನ ಸುತ್ತ 5 ಮೈಲಿಯ ಒಳಗೆ ಧ್ವಜ ಮೆರವಣಿಗೆ ಮಾಡುವುದನ್ನು ಮ್ಯಾಜಿಸ್ಟ್ರೇಟರು ನಿಷೇಧಿಸಿ ಆಜ್ಞೆ ಹೊರಡಿಸಿದರು. ಅದು ಡಿಸೆಂಬರ್ 23 ರ ವರೆಗೆ ಜಾರಿಯಲ್ಲಿರುವುದೆಂದು ಘೋಷಿಸಿದರು.

ಅನಂತರ ಬಂಧಿತರನ್ನು ಬೆಂಗಳೂರು ಸೆಂಟ್ರಲ್ ಜೈಲಿಗೆ ಕರೆದುಕೊಂಡು ಹೋದರು.

ಸಂಸ್ಥಾನಾದ್ಯಂತ ಹರತಾಳ

ಶಿವಪುರ ಧ್ವಜಸತ್ಯಾಗ್ರಹದಲ್ಲಿ ಏಪ್ರಿಲ್ 18 ರಂದು ಸಂಸ್ಥಾನಾದ್ಯಂತ ಹರತಾಳ ನಡೆಯಬೇಕೆಂದು ಕರೆ ಕೊಟ್ಟಿದ್ದುದು ಸರಿಯಷ್ಟೆ. ಆ ಕರೆ ಸಂಸ್ಥಾನಾದ್ಯಂತ ಭುಗಿಲೆಂದು ಹರಡಿಕೊಂಡಿತು. ಶಿವಪುರ ಅಧಿವೇಶನದ ಸ್ಫೂರ್ತಿಯಿದ್ದುದರಿಂದ ಸಾವಿರಾರು ಸತ್ಯಾಗ್ರಹಿಗಳು ಹರತಾಳಕ್ಕೆ ಸಿದ್ಧರಾದರು. ಅಂದು ಅನೇಕ ಕಡೆಗಳಲ್ಲಿ ಸತ್ಯಾಗ್ರಹಗಳು ನಡೆದುವು; ಬೇಕಾದಷ್ಟು ಬಂಧನಗಳಾದುವು; ಸರ್ಕಾರ ಲೆಕ್ಕವಿಲ್ಲದಷ್ಟು ನಿಷೇಧಾಜ್ಞೆಗಳನ್ನು ಜಾರಿಗೆ ತಂದಿತು. 1937 ನೇ ಇಸವಿಯಲ್ಲಿದ್ದ ಪ್ರಕ್ಷುಬ್ಧ ಪರಿಸ್ಥಿತಿ ಮತ್ತಷ್ಟು ಉಗ್ರ ರೂಪದಲ್ಲಿ ಮತ್ತೆ ಹೊರ ಹೊಮ್ಮಿತು.* ಮೆರವಣಿಗೆಗಳು, ಧ್ವಜ ಸತ್ಯಾಗ್ರಹಗಳು ಎಲ್ಲ ಕಡೆಗಳಲ್ಲೂ ನಡೆಯುವ ಸೂಚನೆ ಕಂಡುಬಂದುದರಿಂದ ಎಲ್ಲ ಪ್ರಮುಖ ನಗರಗಳಲ್ಲೂ ನಿಷೇಧಾಜ್ಞೆ ಜಾರಿಗೆ ಬಂತು. ಎಲ್ಲ ಆಜ್ಞೆಗಳನ್ನು ಸತ್ಯಾಗ್ರಹಿಗಳು ಉಲ್ಲಂಘಿಸಿದರು.

ಬೆಂಗಳೂರಿನಲ್ಲಿ ಧ್ವಜ ದಿನಾಚರಣೆ

ಏಪ್ರಿಲ್ 18 ರ ಧ್ವಜ ದಿನಾಚರಣೆಯ ಅಂಗವಾಗಿ 18-4-1938 ರಂದು ಬೆಂಗಳೂರಿನಲ್ಲಿ ಭಾರಿ ಪ್ರಮಾಣದಲ್ಲಿ ಹರತಾಳ ನಡೆಯಿತು. ನಗರದ ಎಲ್ಲ ಅಂಗಡಿಗಳು ಮುಚ್ಚಿದ್ದುವು. ಮುನ್ಸಿಪಲ್ ಉದ್ಯಾನದ ಮೈದಾನದಲ್ಲಿ ಬೃಹತ್ ಸಭೆ ಸೇರಿತ್ತು. ಪ್ರಾರಂಭದಲ್ಲಿ 4,000 ಸಂಖ್ಯೆಯಿಂದ ಸಭೆ ಕ್ರಮೇಣ 10,000 ಜನರಿಂದ ತುಂಬಿಹೋಯಿತು. ಮುನ್ಸಿಪಲ್ ಕೌನ್ಸಿಲರ್ ಶ್ರೀ ಎನ್. ಹೆಚ್.

---

*18-4-1938 ರಂದು ನಡೆದ ಎಲ್ಲ ಹರತಾಳಗಳ ವಿವರ ಸಿಕ್ಕಿಲ್ಲ. ಅಧಿಕೃತವಾಗಿ ದೊರೆತಷ್ಟು ಘಟನೆಗಳನ್ನು ಮಾತ್ರ ದಾಖಲು ಮಾಡಿದೆ.

ಹನುಮಂತಪ್ಪನವರು ಅಧ್ಯಕ್ಷತೆ ವಹಿಸಿದ್ದರು. ಮೈದಾನದ ಮಧ್ಯ ಭಾಗದಲ್ಲಿ ದೊಡ್ಡ ಕಾಂಗ್ರೆಸ್ ಬಾವುಟ ಹಾರಾಡುತ್ತಿತ್ತು ಶ್ರೀಗಳಾದ ವಿ. ಎಸ್. ನಾರಾಯಣರಾವ್, ಕೆ. ಶ್ರೀನಿವಾಸ ಮೂರ್ತಿ, ಎಸ್. ಸಿ. ತಿಮ್ಮಾರೆಡ್ಡಿ ಮತ್ತು ಶ್ರೀಮತಿ ಲಲಿತ ಅವರು ಸಭಿಕರನ್ನು ಉದ್ದೇಶಿಸಿ ಮಾತನಾಡಿ, ಹೆಚ್ಚಿನ ಸಂಖ್ಯೆಯಲ್ಲಿ ಜನರು ಕಾಂಗ್ರೆಸ್ಸಿಗೆ ಸೇರಿ, ಶ್ರೀಮನ್ಮಹಾರಾಜರ ಕೃಪಾಶ್ರಯದಲ್ಲಿ ಜವಾಬ್ದಾರಿ ಸರಕಾರ ಪಡೆಯಲು ಹೋರಾಡಬೇಕೆಂದು ಕರೆ ಕೊಟ್ಟರು.

ಸಭೆಯ ಅನಂತರ ಸ್ವಯಂ ಸೇವಕರು ಚಿಕ್ಕಪೇಟೆ, ಬಳೆಪೇಟೆ, ಮಾರ್ಕೆಟ್ ಚೌಕಗಳಲ್ಲಿ ರಾಷ್ಟ್ರಧ್ವಜವನ್ನು ಹಿಡಿದುಕೊಂಡು ಜೈಕಾರಗಳನ್ನು ಕೂಗುತ್ತಾ ಮೆರವಣಿಗೆ ಮಾಡಿದರು. ಚಿಕ್ಕಪೇಟೆಯ ಹತ್ತಿರ 400 ಕ್ಕೂ ಮೇಲ್ಪಟ್ಟ ವಿದ್ಯಾರ್ಥಿಗಳು ರಾಷ್ಟ್ರಧ್ವಜವನ್ನು ಹಿಡಿದುಕೊಂಡು ಮೆರವಣಿಗೆಯಲ್ಲಿ ಭಾಗವಹಿಸಿದರು. ನಿಷೇಧಾಜ್ಞೆ ಇದ್ದರೂ ಧ್ವಜ ದಿನಾಚರಣೆ ನಡೆಯಿತು. ಯಾರನ್ನೂ ಬಂಧಿಸಲಿಲ್ಲ.

ಚಿಕ್ಕಮಗಳೂರಿನಲ್ಲಿ

ಕಡೂರು ಜಿಲ್ಲೆಯ ಮ್ಯಾಜಿಸ್ಟ್ರೇಟ್ ಶ್ರೀ ಬಿ. ಎಸ್. ರಾಘವೇಂದ್ರರಾವ್ ಅವರು 17-4-38 ರ ರಾತ್ರಿ ಮೈಸೂರು ಪೋಲೀಸ್ ಆಕ್ಟ್ 39 ನೇ ಸೆಕ್ಷನ್ ಪ್ರಕಾರ. ಚಿಕ್ಕಮಗಳೂರು ನಗರ ಮತ್ತು ನಗರದ 5 ಮೈಲಿ ಸುತ್ತಳತೆಯಲ್ಲಿ ಧ್ವಜಾರೋಹಣ ಮತ್ತು ಮೆರವಣಿಗೆಯನ್ನು ನಿಷೇಧಿಸಿ ಆಜ್ಞೆ ಹೊರಡಿಸಿದರು. ಅದು 6 ತಿಂಗಳವರೆಗೆ ಜಾರಿಯಲ್ಲಿ ಇರುವುದಾಗಿತ್ತು. ನಗರದ 19 ಮಂದಿ ಮುಖಂಡರ ಮೇಲೆ ನಿಷೇಧಾಜ್ಞೆಯನ್ನು ಪ್ರಯೋಗಿಸಲಾಯಿತು. ಆದರೂ ಚಿಕ್ಕಮಗಳೂರಿನಲ್ಲಿ ಶ್ರೀ ಹೆಚ್. ಪಿ. ರಂಗನಾಥ ಅಯ್ಯಂಗಾರ್ಯರ ಮನೆಯ ಆವರಣದಲ್ಲಿ ಧ್ವಜಾರೋಹಣ ಕಾರ್ಯಕ್ರಮ ನಡೆಯಿತು. ಶ್ರೀ ರಂಗನಾಥ ಅಯ್ಯಂಗಾರ್ಯರು ಮಾತಾಡಿ ಸರ್ಕಾರದ ನೀತಿಯನ್ನು ಖಂಡಿಸಿದರು. ಸಿಹಿ ಹಂಚಿಕೆಯ ಅನಂತರ ಸಭೆ ಚದುರಿತು. ಪೋಲೀಸರು ವೀಕ್ಷಕರಾಗಿದ್ದರು. ಯಾರನ್ನೂ ಬಂಧಿಸಲಿಲ್ಲ.

ಶಿವಮೊಗ್ಗೆಯಲ್ಲಿ ಹರತಾಳ

ಶಿವಮೊಗ್ಗೆಯ ಸತ್ಯಾಗ್ರಹಿಗಳು 18-4-1938 ರಂದು ಭಾರಿ ಪ್ರಮಾಣದಲ್ಲಿ ಹರತಾಳವನ್ನು ಆಚರಿಸಿದರು. ಬೆಳಗ್ಗೆ ರಾಷ್ಟ್ರಧ್ವಜಾರೋಹಣವೂ ಅನಂತರ ಮೆರವಣಿಗೆಯೂ ನಡೆಯಿತು. ಶ್ರೀ ಕೆ. ಆರ್. ಮಾಧವರಾವ್ (ಜಿಲ್ಲಾ ಕಾಂಗ್ರೆಸ್ ಸಮಿತಿಯ ಕಾರ್ಯದರ್ಶಿ) ಅವರು ಧ್ವಜಾರೋಹಣ ಮಾಡಲು ಪ್ರಯತ್ನಿಸಿದಾಗ

ಪೋಲೀಸ್ ಇನ್ಸ್‌ಸ್ಪೆಕ್ಟರ್ ಶ್ರೀ ಪುಟ್ಟವೀರಯ್ಯನವರು ಅವರನ್ನು ದಸ್ತಗಿರಿ ಮಾಡಿದರು. ಧ್ವಜಾರೋಹಣದ ಅಪರಾಧಕ್ಕಾಗಿ ಶ್ರೀ ಬಿ. ಆರ್. ಕೃಷ್ಣಮೂರ್ತಿ, ಶ್ರೀ ವಾಸಪ್ಪ ಗೋಗಿ, ಶ್ರೀ ಹೆಚ್. ರಾಮಕೃಷ್ಣರಾವ್, ಭೂಪಾಳಂ ಚಂದ್ರಶೇಖರಯ್ಯನವರ ಬಂಧನವೂ ಆಯಿತು.

ಮಧ್ಯಾಹ್ನ ವಿಶೇಷ ಪ್ರಥಮ ಜಿಲ್ಲಾ ಮ್ಯಾಜಿಸ್ಟ್ರೇಟರಾದ ಶ್ರೀ ಸಿ. ಚನ್ನಪ್ಪನವರ ಮುಂದೆ ವಿಚಾರಣೆ ನಡೆಯಿತು. ಸರ್ಕಾರದ ಪರವಾಗಿ ಪೋಲೀಸ್ ಸಬ್ ಇನ್ಸ್‌ಸ್ಪೆಕ್ಟರ್ ಶ್ರೀ ಕುಮಾರ್ ಅವರೂ ಇದ್ದರು. ಬಂಧಿತರು ನ್ಯಾಯಾಧೀಶರ ಮುಂದೆ "ರಾಷ್ಟ್ರಧ್ವಜಾರೋಹಣದಿಂದ ಮಹಾರಾಜರ ರಾಜತ್ವಕ್ಕೆ ಅವಮಾನ ಮಾಡಿದಂತಾಗಲಿಲ್ಲ" ಎಂದು ಹೇಳಿಕೆ ನೀಡಿದರು. ನ್ಯಾಯಾಧೀಶರು ಅವರನ್ನು ತಪ್ಪಿತಸ್ಥರೆಂದು ಪರಿಗಣಿಸಿ ಶಿಕ್ಷೆ ವಿಧಿಸಿದರು. ವಿಚಾರಣೆಯ ಕಾಲದಲ್ಲಿ ನ್ಯಾಯಾಲಯದ ತುಂಬ ಜನರು ಸೇರಿದ್ದರು. ತಪ್ಪಿತಸ್ಥರಿಗೆ ತಲಾ 3 ತಿಂಗಳ ಸಾದಾ ಶಿಕ್ಷೆ, 100 ರೂಪಾಯಿ ಜುಲ್ಮಾನೆ; ಹಣ ಕೊಡಲು ತಪ್ಪಿದರೆ ಮತ್ತೆ 1½ ತಿಂಗಳು ಶಿಕ್ಷೆ ಅನುಭವಿಸಬೇಕೆಂದು ನ್ಯಾಯಾಧೀಶರು ವಿಧಿಸಿದರು. ದಂಡ ಕೊಡಲು ಯಾರೂ ಒಪ್ಪಲಿಲ್ಲ.

ಶಿವಮೊಗ್ಗೆಯಲ್ಲಿ ಒಂದು ತಿಂಗಳವರಗೆ ನಿಷೇಧಾಜ್ಞೆ ಘೋಷಣೆಯಾಯಿತು.

ಮತ್ತೆ ಶಿವಮೊಗ್ಗೆಯಲ್ಲಿ 1-5-1938 ರಂದು ಧ್ವಜಸತ್ಯಾಗ್ರಹ ನಡೆಯಿತು. ಆಗ ಶ್ರೀ ಮಾನಪ್ಪ, ಶ್ರೀ ಸ್ವಾಮಿರಾವ್, ಶ್ರೀ ಉಡಗಣಿ ಚನ್ನವೀರಯ್ಯ, ಶ್ರೀ ಮಂಜುನಾಥ ಉಪಾಧ್ಯಾಯ, ಶ್ರೀ ಚಂದ್ರಶೇಖರಯ್ಯ, ಶ್ರೀ ಗುರಪ್ಪ, ಶ್ರೀ ಶ್ರೀರಾಮ ಜೋಯಿಸ್, ಶ್ರೀ ಬಿ. ಲಿಂಗಪ್ಪನವರು ಬಂಧಿತರಾದರು.

ಶಿವಮೊಗ್ಗೆಯ ಚೆನ್ನಗಿರಿಯಲ್ಲಿ ಹರತಾಳ ನಡೆದಾಗ ಶ್ರೀ ಮಹಾರುದ್ರಪ್ಪ ಬಂಧಿತರಾದರು. ಅವರಿಗೆ 2½ ತಿಂಗಳು ಸಜಾ, 60 ರೂ. ಜುಲ್ಮಾನೆ ಆಯಿತು. ಹಣ ಕೊಡಲು ತಪ್ಪಿದರೆ ಮತ್ತೆ 3 ವಾರ ಶಿಕ್ಷೆ ಅನುಭವಿಸಬೇಕೆಂದು ಆಜ್ಞೆಯಾಯಿತು.

ತೀರ್ಥಹಳ್ಳಿಯಲ್ಲೂ ಕೂಡ ಗಮನಾರ್ಹವಾಗಿ ಧ್ವಜಸತ್ಯಾಗ್ರಹ ನಡೆಯಿತು. ಶ್ರೀ ರಾಘವೇಂದ್ರರಾವ್, ಡಾ॥ ವೈ. ಚಂದ್ರಶೇಖರ್, ಶ್ರೀ ಗುರುಮೂರ್ತಿ, ಶ್ರೀ ವಿಶ್ವನಾಥ ಮೊದಲಾದವರು ಭಾಗವಹಿಸಿದ್ದರು. ಆದರೆ ಯಾರನ್ನೂ ಬಂಧಿಸಲಿಲ್ಲ.

ತುಮಕೂರಿನಲ್ಲಿ 2,000 ಜನರ ಬೃಹತ್ ಮೆರವಣಿಗೆ ನಡೆಯಿತು. ಹೆಚ್ಚು ಜನರ ಬಂಧನವಾಗಲಿಲ್ಲ. ಶ್ರೀ ಸಿ. ನಂಜುಂಡಪ್ಪನವರಿಗೆ 6 ವಾರ ಶಿಕ್ಷೆ, 50 ರೂ.

ದಂಡ, ದಂಡ ಕೊಡಲು ತಪ್ಪಿದರೆ 1 ವಾರ ಸಜಾ ಎಂದು ನ್ಯಾಯಾಧೀಶರು ಘೋಷಿಸಿದರು. ತುಮಕೂರಿನ ಕ್ಯಾತಸಂದ್ರದ ಶ್ರೀ ಶಿವಣ್ಣನವರಿಗೂ ಶಿಕ್ಷೆಯಾಯಿತು.

ಕುಣಿಗಲ್‌ನಲ್ಲಿ ಹರತಾಳ ನಡೆದಾಗ 33 ಜನರು ಬಂಧಿತರಾದರು.

ಹಾರ್ನಹಳ್ಳಿಯಲ್ಲಿ ಶ್ರೀ ಮುದ್ದುವೀರಪ್ಪ ಶೆಟ್ಟಿ, ನ್ಯಾಮತಿಯಲ್ಲಿ ಶ್ರೀ ಮಾಸಿ, ಶ್ರೀ ಹಾಲಪ್ಪನವರು ಬಂಧನಕ್ಕೊಳಗಾದರು. ಶ್ರೀ ಮುದ್ದುವೀರಪ್ಪ ಶೆಟ್ಟರಿಗೆ 2 ತಿಂಗಳು ಸಜ, 50 ರೂ. ಜುಲ್ಮಾನೆ, ದಂಡ ಕೊಡದಿದ್ದರೆ 15 ದಿನಗಳ ಹೆಚ್ಚಿನ ಶಿಕ್ಷೆಯನ್ನು ನ್ಯಾಯಾಧೀಶರು ವಿಧಿಸಿದರು.

ಕೊರಟಗೆರೆಯಲ್ಲಿ ಹರತಾಳ ನಡೆದು ಪೋಲೀಸರು ಶ್ರೀ ಹನುಮಂತರಾಯಪ್ಪ, ಶ್ರೀ ದೊಡ್ಡಯ್ಯ, ಶ್ರೀ ರಾಜಶೇಖರಪ್ಪ, ಶ್ರೀ ನಂಜುಂಡಯ್ಯನವರನ್ನು ಬಂಧಿಸಿದರು. ಅವರಿಗೆ ತಲಾ 3 ತಿಂಗಳ ಶಿಕ್ಷೆಯಾಯಿತು.

ಬೀರೂರಿನಲ್ಲಿ ಹರತಾಳ ನಡೆದಾಗ ಶ್ರೀ ಕೆ. ಟಿ. ಸತ್ಯನಾರಾಯಣ ಶೆಟ್ಟಿ ಮೊದಲಾದ 7 ಜನರ ಮೇಲೆ ನಿಷೇಧಾಜ್ಞೆಯನ್ನು ಜಾರಿ ಮಾಡಲಾಯಿತು. ಆದರೆ ಯಾರನ್ನೂ ಬಂಧಿಸಲಿಲ್ಲ.

ಹಾಸನದಲ್ಲಿ ಹರತಾಳ ನಡೆದು ಡಾ॥ ಎಚ್. ಎನ್. ಕೇಶವಮೂರ್ತಿಯವರು ಬಂಧಿತರಾದರು.

ಹೊಳೇನರಸೀಪುರದಲ್ಲಿ ಅಲ್ಲಿಯ ಕಾಂಗ್ರೆಸ್ ಕಾರ್ಯದರ್ಶಿಗಳು ದಸ್ತಗಿರಿಯಾದರು. ಚನ್ನರಾಯಪಟ್ಟಣದಲ್ಲಿಯೂ ಹರತಾಳ ನಡೆಯಿತು. ಆದರೆ ಯಾರನ್ನೂ ಬಂಧಿಸಲಿಲ್ಲ.

ಧ್ವಜಸತ್ಯಾಗ್ರಹದ ನೆಪದಲ್ಲಿ ಭಾರಿ ಮೆರವಣಿಗೆ ಕೂಡುವ ಸೂಚನೆ ಕಂಡುಬಂದುದರಿಂದ ಬೆಂಗಳೂರು ಜಿಲ್ಲಾ ಕಾಂಗ್ರೆಸ್ ಬೋರ್ಡಿನ ಅಧ್ಯಕ್ಷರಾದ ಶ್ರೀ ಗುರುವಾರೆಡ್ಡಿ ಮತ್ತು ಕಾರ್ಯದರ್ಶಿಗಳಾದ ಶ್ರೀ ಕೆ. ಹನುಮಂತಯ್ಯನವರ ಮೇಲೆ, 2 ತಿಂಗಳವರೆಗೆ ಬೆಂಗಳೂರಿನ 5 ಮೈಲಿ ಸುತ್ತಳತೆ ಒಳಗೆ ಎಲ್ಲೂ ಭಾಷಣ ಮಾಡಕೂಡದೆಂದು, ಬೆಂಗಳೂರು ಜಿಲ್ಲಾ ನ್ಯಾಯಾಧೀಶರು ನಿಷೇಧಾಜ್ಞೆ ಹೊರಡಿಸಿದರು.

ಚನ್ನಪಟ್ಟಣದಲ್ಲಿ ಧ್ವಜಸತ್ಯಾಗ್ರಹ ನಡೆಯಿತು. ಅಲ್ಲಿ ಶ್ರೀ ಕೆ. ಹನುಮಂತಯ್ಯನವರು ಸಾರ್ವಜನಿಕ ಸಭೆಯಲ್ಲಿ ಸರ್ಕಾರದ ಧೋರಣೆಯನ್ನು ಕಟುವಾಗಿ ಟೀಕಿಸಿ ಭಾಷಣ ಮಾಡಿದರು.

28-4-1938 ರಂದು ಪುನಃ ಬೆಂಗಳೂರಿನಲ್ಲಿ ಭಾರಿ ಪ್ರಮಾಣದಲ್ಲಿ ಚಳುವಳಿ ನಡೆಯಿತು. ಅಂದು ಎಲ್ಲ ಅಂಗಡಿಗಳು, ಸಿನಿಮಾ ಮಂದಿರಗಳು ಮುಚ್ಚಿದ್ದುವು. 9 ದಳಗಳಲ್ಲಿ ಚಳುವಳಿ ನಡೆಯಿತು. ಒಟ್ಟು 44 ಜನರು ಬಂಧಿತರಾದರು. ವಿವಿಧ ದಳಗಳಲ್ಲಿ ಭಾಗವಹಿಸಿದ್ದ ಪ್ರಮುಖ ಮುಖಂಡರು ಮತ್ತು ಬಂಧಿತರ ವಿವರ ಹೀಗಿದೆ :

ಒಂದನೆಯ ದಳ : ಶ್ರೀ ಎಚ್. ಲಕ್ಷ್ಮಿನಾರಾಯಣರಾವ್, ಶ್ರೀ ಭೈರಪ್ಪ, ಶ್ರೀ ತಿಮ್ಮರಾಯಪ್ಪ, ಶ್ರೀ ನರಸಿಂಹಯ್ಯ, ಶ್ರೀ ವಿಷಕಂಠಪ್ಪ. ಎರಡನೆಯ ದಳ : ಶ್ರೀ ಎಸ್. ವಿ. ಶಾಸ್ತ್ರಿ. ಮೂರನೆಯ ದಳ : ಶ್ರೀ ಕೆ. ಜೆ. ಸತ್ಯನಾರಾಯಣ ಶೆಟ್ಟಿ (ಇವರ ಬಂಧನವಾಗಲಿಲ್ಲ). ನಾಲ್ಕನೆಯ ದಳ : ಶ್ರೀ ಗೋವಿಂದರಾಜ, ಶ್ರೀ ಎನ್. ಸೋಮದೇವ ಶರ್ಮ. ಐದನೆಯ ದಳ : ಶ್ರೀ ಎಚ್. ಬಿ. ಶಂಕರಪ್ಪ, ಶ್ರೀ ಕೆ. ವಿ. ಗಿರಿ, ಶ್ರೀ ಎಸ್. ರುದ್ರಪ್ಪ, ಶ್ರೀ ಡಿ. ದಶರಥರಾಮನ್, ಶ್ರೀ ಕೆ. ಲಕ್ಷ್ಮಣಯ್ಯಶೆಟ್ಟಿ. ಆರನೆಯ ದಳ : ಶ್ರೀ ಎನ್. ಆರ್. ಕೋದಂಡರಾಮಶೆಟ್ಟಿ, ಶ್ರೀ ಡಿ. ಸಿ. ಚಿಕ್ಕಭೈರಪ್ಪ, ಶ್ರೀ ಕೆ. ಗುಬ್ಬಿ ಬಾಲೂರಪ್ಪ, ಶ್ರೀ ಕೃಷ್ಣಯ್ಯ ಶೆಟ್ಟಿ, ಶ್ರೀ ಎಂ. ಆರ್. ಚಿಕ್ಕನಾರಾಣಪ್ಪ. ಏಳನೆಯ ದಳ : ಶ್ರೀ ಟಿ. ಎನ್. ಮುನಿಯಪ್ಪ ರೆಡ್ಡಿ, ಶ್ರೀ ಪಟ್ಟಾಭಿ ದೌಲತ್ ನಾರಾಯಣ ಶೆಟ್ಟಿ, ಶ್ರೀ ಜಿ. ಎಸ್. ಸುಬ್ಬಯ್ಯ. ಎಂಟನೆಯ ದಳ : ಶ್ರೀ ಇ. ಜಿ. ಎ. ಗುಪ್ತ, ಶ್ರೀ ಆರ್. ಸುಬ್ಬಣ್ಣ, ಶ್ರೀ ತಿಮ್ಮದಾಸಪ್ಪ, ಶ್ರೀ ವಿ. ಎಸ್. ನಾರಾಯಣರಾವ್, ಶ್ರೀ ಕೆ. ಹನುಮಂತಯ್ಯ, ಶ್ರೀ ಎನ್. ಡಿ. ಶಂಕರಪ್ಪ ಮತ್ತು ಗುಂಡೇನಹಳ್ಳಿ ನಂಜಪ್ಪ.

ಮೈಸೂರಿನಲ್ಲಿ ಧ್ವಜ ದಿನಾಚರಣೆ

18-4-1938 ರ ಬೆಳಗ್ಗೆ ಸ್ವಯಂಸೇವಕರು ಧ್ವಜದ ಮೆರವಣಿಗೆ ಮಾಡಿದರು. ಹೆಚ್ಚು ಕಡಮೆ ಎಲ್ಲ ಅಂಗಡಿಗಳೂ ಮುಚ್ಚಿದ್ದುವು. ಸಂಜೆ ಪಬ್ಲಿಕ್ ಆಫೀಸಿನ ಮೈದಾನದಲ್ಲಿ ಸಾರ್ವಜನಿಕ ಸಭೆ ನಡೆಯಿತು. ಶ್ರೀ ಎಂ. ಲಕ್ಷ್ಮೀನಾರಾಯಣ ರಾವ್ ಅಧ್ಯಕ್ಷತೆ ವಹಿಸಿದ್ದರು. ಶಿವಪುರ ಧ್ವಜಸತ್ಯಾಗ್ರಹದಲ್ಲಿ ಬಂಧಿತರಾದ ಮುಖಂಡರಿಗೆ ಕೃತಜ್ಞತೆ, ರಾಜ್ಯಾದ್ಯಂತ ನಡೆಯುತ್ತಿರುವ ಧ್ವಜ ಸತ್ಯಾಗ್ರಹಕ್ಕೆ ಬೆಂಬಲ ಸೂಚಿಸುವ ನಿರ್ಣಯಗಳು ಅಂಗೀಕಾರವಾದುವು. ಶ್ರೀ ಟಿ. ಎಸ್. ರಾಜಗೋಪಾಲ ಅಯ್ಯಂಗಾರ್ ಮಾತಾಡುತ್ತಾ ಕಾಂಗ್ರೆಸ್ ಕಾರ್ಯ ಸಮಿತಿಯ ನಿರ್ಧಾರ, ರಾಷ್ಟ್ರಧ್ವಜ ರಕ್ಷಣೆಯ ಅಗತ್ಯಗಳನ್ನು ತಿಳಿಸಿದರು.

ಮೈಸೂರು ಸರಹದ್ದನ್ನು 25 ಗಂಟೆಗಳೊಳಗೆ ದಾಟಿಹೋಗಬೇಕೆಂದು ಶ್ರೀ ಪೊನ್ನಯ್ಯನವರಿಗೆ ಸರ್ಕಾರ ಹುಕುಂ ಮಾಡಿತು.

1-5-1938 ರಲ್ಲಿ ಮೈಸೂರಿನಲ್ಲಿ ಮತ್ತೆ ಹರತಾಳ ನಡೆಯಿತು. ಅಂದು ಶ್ರೀ ಸುಬ್ಬರಾವ್ ಉಪಾಧ್ಯಾಯ, ಶ್ರೀ ರಾಜನ್ ಬಂಧಿತರಾದರು. ಅವರನ್ನು ಲಕ್ಷ್ಮೀಪುರ ಜೈಲಿಗೆ ಸಾಗಿಸಿದರು. 9-5-1938 ರಂದು ಮೈಸೂರಿನ ಶ್ರೀ ಚಾಮುಂಡಯ್ಯನವರಿಗೆ, ನಿಷೇಧಾಜ್ಞೆ ಉಲ್ಲಂಘಿಸುದುದರಿಂದ 2 ತಿಂಗಳ ಕಠಿಣ ಶಿಕ್ಷೆ, 100 ರೂ. ದಂಡ, ತಪ್ಪಿದರೆ 10 ದಿನಗಳ ಕೈದನ್ನು ನ್ಯಾಯಾಧೀಶರು ವಿಧಿಸಿದರು.

ದಾವಣಗೆರೆಯಲ್ಲಿ ದೊಡ್ಡ ಪ್ರಮಾಣದಲ್ಲಿ ಮೆರವಣಿಗೆ ನಡೆಯಿತು. ನಿಷೇಧಾಜ್ಞೆಯನ್ನು ಉಲ್ಲಂಘಿಸಿದುದರಿಂದ ಶ್ರೀ ಕೊಟ್ರಪ್ಪ, ಶ್ರೀ ಕೊಟ್ರ ನಂಜಪ್ಪ, ಶ್ರೀ ರಾಮಗಿರಿ ಹನುಮಂತಪ್ಪ, ಶ್ರೀ ಭೀಮ ಕುಮಾರ, ಶ್ರೀಮತಿ ಹನುಮಂತಮ್ಮ, ಶ್ರೀಮತಿ ರಾಮಗಿರಿ ಗಂಗಮ್ಮನವರ ಬಂಧನ ನಡೆಯಿತು. 28-4-1938 ರಂದು ಮತ್ತೆ ಚಳುವಳಿ ನಡೆದಾಗ ಶ್ರೀ ಎನ್. ಆರ್. ಗುಂಡಪ್ಪ, ಶ್ರೀ ಗಾಯಕವಾಡ ನಾರಾಯಣರಾವ್, ಶ್ರೀ ಕಾಸಲ ಶ್ರೀನಿವಾಸ ಶೆಟ್ಟಿ, ಶ್ರೀ ಡಿ. ಆರ್. ಮುದ್ದಪ್ಪ ನವರು ಬಂಧಿತರಾದರು. ಶ್ರೀ ಹೆಚ್. ಕೊಟ್ರಬಸಪ್ಪ, ಶ್ರೀ ಕೆ. ಟಿ. ಜಂಬಣ್ಣ, ಶ್ರೀ ಬಳ್ಳಾರಿ ಮುರಿಗೆಪ್ಪನವರು ಮೆರವಣಿಗೆಯಲ್ಲಿ ಭಾಗವಹಿಸಿ ಭಾಷಣ ಮಾಡಿದರು. 1-5-1938 ರಂದು ನಡೆದ ಹರತಾಳದಲ್ಲಿ ಕೆಳಕಂಡವರು ಬಂಧಿತರಾಗಿ ಶಿಕ್ಷೆಗೆ ಒಳಪಟ್ಟರು : ಶ್ರೀಮತಿ ಶಾಂತಮ್ಮ ಪಾಟೀಲ, ಶ್ರೀಮತಿ ಸಾವಿತ್ರಮ್ಮ ಬೆಲ್ಲದ, ಶ್ರೀ ಕಂದನಕೋಟೆ ವೀರಪ್ಪ, ಶ್ರೀ ರಾಜ್ನಳ್ಳಿ ಹರಿಹರಪ್ಪ ಶೆಟ್ಟಿ, ಶ್ರೀ ದೇವರಮನಿ ಎಂ. ಅಜ್ಜಪ್ಪ, ಶ್ರೀ ಎಸ್. ಅಶ್ವತ್ಥನಾರಾಯಣ ಶೆಟ್ಟಿ, ಶ್ರೀ ಬಿ. ಮಲ್ಲಪ್ಪ, ಶ್ರೀ ಎಂ. ಬಸವರಾಜ, ಶ್ರೀ ಕಂದಗಲ್ ವೀರಬದ್ರಪ್ಪ, ಶ್ರೀ ಬಿ. ಲಕ್ಷ್ಮಣನಾಯಕ ಮಾಯಕೊಂಡ, ಶ್ರೀ ಕಾಸೀಮರದಿ ಚಿನ್ನಪ್ಪ, ಆನೆಕೊಂಡದ ಶ್ರೀ ಸಿದ್ಧರಾಮಪ್ಪ ಮತ್ತು ಆನೆಕೊಂಡದ ಶ್ರೀ ಶಿವಪ್ಪ.

ಮತ್ತೊಮ್ಮೆ ದಾವಣಗೆರೆಯಲ್ಲಿ ಧ್ವಜಸತ್ಯಾಗ್ರಹ ನಡೆಯಿತು. ಶ್ರೀ ಬಿ. ಸಂಗಪ್ಪ, ಶ್ರೀ ಮಿಯಾ ಸಾಹೇಬ ಮೊದಲಾದ ಮುಖಂಡರು ಮೆರವಣಿಗೆಯಲ್ಲಿ ಭಾಗವಹಿಸಿದರು. ಅಂದು ಯಾರನ್ನೂ ಬಂಧಿಸಲಿಲ್ಲ. ಆದರೆ ಪೋಲೀಸರು ಅವರ ಹೆಸರುಗಳನ್ನು ಮಾತ್ರ ಬರೆದುಕೊಂಡರು.

ಗೌರಿಬಿದನೂರಿನಲ್ಲಿ ಹರತಾಳ ನಡೆದು ಶ್ರೀ ನಾಗಯ್ಯರೆಡ್ಡಿ ಬಂಧಿತರಾದರು. ಶ್ರೀ ರಾಜಾರಾಮಶೆಟ್ಟಿಯವರು ತಮ್ಮ ಹೆಂಡತಿಯೊಡನೆ ಬಂಧನಕ್ಕೆ ಸಿದ್ಧರಾಗಿ ಆಗಮಿಸಿದ್ದರು. ಆದರೆ ಅವರ ಬಂಧನವಾಗಲಿಲ್ಲ. ಮುಂದೆ ಅವರು ತಮ್ಮ ಶಾಲಾ ಉಪಾಧ್ಯಾಯ ವೃತ್ತಿಗೆ ರಾಜೀನಾಮೆ ಕೊಟ್ಟು, ಕಾಂಗ್ರೆಸ್ ಕಾರ್ಯಕರ್ತರಾದರು. 29-4-1938 ರಂದು ಕೋಲಾರದಲ್ಲಿ ಹರತಾಳ ನಡೆಯಿತು. ಅಂದು

ಶ್ರೀ ಕೆ. ಪಟ್ಟಾಭಿರಾಮನ್, ಶ್ರೀ ಎಸ್. ರಾಮರಾವ್, ಚಿಕ್ಕಬಳ್ಳಾಪುರದ ಶ್ರೀ ಸಂಪಂಗಿರಾಮಯ್ಯನವರು ಬಂಧಿತರಾದರು.

5-5-1938 ರಂದು ಶ್ರೀ ವೀರಕೇಸರಿ ಸೀತಾರಾಮ ಶಾಸ್ತ್ರಿಗಳನ್ನು ಬಂಧಿಸಿ, ಶ್ರೀ ಟಿ. ರಾಮಾಚಾರ್ಯರ ಮೇಲೆ ನಿಷೇಧಾಜ್ಞೆಯನ್ನು ಜಾರಿ ಮಾಡಲಾಯಿತು.

ಚಿತ್ರದುರ್ಗದ ಹರತಾಳ (1-5-1938) ದಲ್ಲಿ ವಕೀಲರಾದ ಶ್ರೀ ಎಂ. ಗೋವಿಂದರೆಡ್ಡಿಯವರು ದಸ್ತಗಿರಿಯಾದರು. ಅವರಿಗೆ 2 ತಿಂಗಳು ಶಿಕ್ಷೆ, 35 ರೂ. ದಂಡವನ್ನು ವಿಧಿಸಲಾಯಿತು. 9-5-1938 ರಂದು ಚಿತ್ರದುರ್ಗದ ಶ್ರೀ ಕೆ. ಕೆಂಚಪ್ಪನವರ ಮೇಲೆ ಖಟ್ಲೆ ಹಾಕಲಾಯಿತು.

ಮಂಡ್ಯದಲ್ಲಿ ಧ್ವಜ ದಿನಾಚರಣೆ

ಬೆಳಗ್ಗೆ 8-30 ಗಂಟೆಗೆ ಸ್ಥಳೀಯ ಕಾಂಗ್ರೆಸ್ ಆಫೀಸಿನ ಹತ್ತಿರದಲ್ಲಿ ಶ್ರೀ ಹೆಚ್. ಹೊನ್ನಯ್ಯನವರು ಧ್ವಜಾರೋಹಣ ಮಾಡಿದರು. ಸಂಜೆ ಮಂಡ್ಯದ ಸಿಲ್ವರ್ ಜ್ಯೂಬಿಲಿ ಪಾರ್ಕಿನಲ್ಲಿ ಬೃಹತ್ ಪ್ರಮಾಣದ ಸಾರ್ವಜನಿಕ ಸಭೆ ನಡೆಯಿತು. ಡಾ॥ ಪಶುಪತಿರಾವ್ ಅಧ್ಯಕ್ಷತೆ ವಹಿಸಿದ್ದರು. ಶ್ರೀ ಎಂ. ಆರ್. ಮಹಾಬಲರಾವ್ ಸಭೆಯನ್ನು ಉದ್ದೇಶಿಸಿ ಮಾತನಾಡುತ್ತಾ ಸರ್ಕಾರದ ದಮನ ನೀತಿಯನ್ನು ಪ್ರತಿಭಟಿಸಲು ಜನರು ಮುಂದಾದುದಕ್ಕೆ ಕೃತಜ್ಞತೆ ಅರ್ಪಿಸಿದರು; ಸರ್ಕಾರದ ನೀತಿಯನ್ನು ಖಂಡಿಸಿದರು. ಅದೇ ಸಂದರ್ಭದಲ್ಲಿ ವಕೀಲರಾದ ಶ್ರೀ ಬಿ. ಎ. ಕೃಷ್ಣನ್, ಸಮಾಜ ಸೇವಾಕರ್ತರಾದ ಶ್ರೀ ಹೆಚ್. ಹೊನ್ನಯ್ಯ ಮತ್ತು ಶ್ರೀ ಎಸ್. ಎಂ. ಶರ್ಮ ಅವರು ಖಾದಿ ಮತ್ತು ಹಿಂದಿ ಪ್ರಚಾರವನ್ನು ಕುರಿತು ಮಾತಾಡಿದರು.

ರಾಷ್ಟ್ರ ನಾಯಕರ ಭಾವಚಿತ್ರಗಳನ್ನು ಹಿಡಿದುಕೊಂಡು, ರಾಷ್ಟ್ರಗೀತೆಯನ್ನು ಹಾಡಿಕೊಂಡು ಸತ್ಯಾಗ್ರಹಿಗಳು ಪೇಟೆ ಬೀದಿಗಳಲ್ಲಿ ಮೆರವಣಿಗೆ ನಡೆಸಿದರು.

ಮಂಡ್ಯದ ಬಾರ್ ಅಸೋಸಿಯೇಷನ್ನಿನವರು ಒಂದು ಸಭೆ ಸೇರಿ ಶಿವಪುರ ರಾಷ್ಟ್ರಕೂಟದಲ್ಲಿ ಶ್ರೀ ಸಿದ್ದಲಿಂಗಯ್ಯ ಮತ್ತು ಶ್ರೀ ಜೋಯಿಸರನ್ನು ಸರ್ಕಾರ ಬಂಧಿಸಿದ್ದು ತಪ್ಪು, ಮಂಡ್ಯದ ನ್ಯಾಯಾಧೀಶರು ಕೊಟ್ಟ ತೀರ್ಪನ್ನು ಶ್ರೇಷ್ಠ ನ್ಯಾಯಸ್ಥಾನಕ್ಕೆ "ರಿವಿಜನ್ ಅರ್ಜಿ" ಹಾಕಬೇಕೆಂದು ತೀರ್ಮಾನಿಸಿ ನಿರ್ಣಯ ಮಾಡಿದರು.

ಮದ್ದೂರಿನಲ್ಲಿ ಶ್ರೀಮತಿ ತಾಯಮ್ಮ ವೀರಣ್ಣಗೌಡರು ಧ್ವಜಾರೋಹಣ ಮಾಡಿದರು (18-4-1938). ಆದರೆ ಅವರನ್ನು ಬಂಧಿಸಲಿಲ್ಲ. ಅಂದು ಮದ್ದೂರು ನಗರದ ಎಲ್ಲ ಅಂಗಡಿ, ಹೋಟೆಲುಗಳು ಮುಚ್ಚಿದ್ದುವು.

8-5-1938 ರಂದು ನಾಗಮಂಗಲದಲ್ಲಿ ರಾಷ್ಟ್ರ ಧ್ವಜಾರೋಹಣ ನಡೆಯಿತು.

ಶ್ರೀ ಟಿ. ಎಂ. ಕಪನಯ್ಯಗೌಡರು, 55 ಅಡಿ ಎತ್ತರದ ಮೇಲೆ 5 ಮೈಲಿ ಸುತ್ತಳತೆಗೆ ಕಾಣುತ್ತಿದ್ದ, ರಾಷ್ಟ್ರಧ್ವಜವನ್ನು ಆರೋಹಣ ಮಾಡಿದರು. ಹೆಚ್ಚಿನ ಸಂಖ್ಯೆಯ ರೈತರು ವೀಕ್ಷಕರಾಗಿದ್ದರು.

9-5-1938 ರಂದು ಶ್ರೀ ಟಿ. ಮರಿಯಪ್ಪ ಮತ್ತು ಶ್ರೀ ರಾಜಗೋಪಾಲನ್ ಮೇಲೆ ಸರ್ಕಾರ ಸಮನ್ಸ್ ಜಾರಿಮಾಡಿತು.

ಮಂಡ್ಯದ ಶಿವಳ್ಳಿಯಲ್ಲಿ ಕಾಂಗ್ರೆಸ್ಸಿನ ಪ್ರಚಾರ ಸಭೆ ನಡೆಯಿತು. (9-5-1938). ಶ್ರೀ ಹೆಚ್. ಹೊನ್ನಯ್ಯನವರು ಅಧ್ಯಕ್ಷರಾಗಿದ್ದರು. ಶ್ರೀ ದೊಡ್ಡ ರಾಮಸ್ವಾಮಿ ಅಯ್ಯಂಗಾರ್ ಮತ್ತು ಶ್ರೀ ಎಂ. ಆರ್. ಮಹಾಬಲರಾವ್ ಅವರು ಭಾಷಣ ಮಾಡಿದರು.

ಶಿವಪುರದ ಸುತ್ತ ಮುತ್ತಲ ಹಳ್ಳಿಗಳಲ್ಲೂ ಅನೇಕ ಸತ್ಯಾಗ್ರಹಗಳು ನಡೆದುವು. ಶ್ರೀ ಎ. ಆರ್. ದಾಸೇಗೌಡರ ಪ್ರಯತ್ನದಿಂದ ಅವ್ವೇರಹಳ್ಳಿಯ ಮಾರಮ್ಮ ಮತ್ತು ಬೋರೆದೇವರ ದೇವಾಲಯಗಳ ಆವರಣದಲ್ಲಿ ಧ್ವಜಾರೋಹಣ ಕಾರ್ಯಕ್ರಮ ನಡೆಯಿತು. ಕ್ಲೋಸ್‌ಪೇಟೆಯಲ್ಲಿ ವಕೀಲರಾಗಿದ್ದ ಶ್ರೀ ಟಿ. ಎನ್. ಮಾದಪ್ಪ ಗೌಡರು ಧ್ವಜಾರೋಹಣ ಮಾಡಿ ಜನರಿಗೆ ಹಿಡಿಸುವಂತೆ ಸ್ಫೂರ್ತಿದಾಯಕವಾದ ಭಾಷಣ ಮಾಡಿದರು. ದೊಡ್ಡ ದೊಡ್ಡ ವಕೀಲರು, ಮುಖಂಡರು ಹೀಗೆ ಭಾಷಣ ಮಾಡಿ ಉತ್ತೇಜಿಸಿದರೆ ಹಳ್ಳಿಯ ಯುವಕರಿಗೆ ಅದೊಂದು ಹಬ್ಬ. ಸಹಜವಾಗಿಯೇ ಅನೇಕರು ಸತ್ಯಾಗ್ರಹ ಚಳುವಳಿಗೆ ಪ್ರವೇಶಿಸಿದರು. ಮರಳಿಗ, ನಲುವಾಗಿಲು ಗ್ರಾಮಗಳಲ್ಲಿಯೂ ಧ್ವಜಾರೋಹಣ ಕಾರ್ಯಕ್ರಮಗಳು ಜರುಗಿದುವು.

ಚನ್ನಪಟ್ಟಣ ತಾಲ್ಲೂಕಿನ ಭೈರಾಪಟ್ಟಣದಲ್ಲಿ ಒಂದು ಕಾಂಗ್ರೆಸ್ ಕಚೇರಿಯನ್ನು ಸ್ಥಾಪಿಸಿ ಊರಿನ ಉತ್ಸಾಹಿಗಳು ತಾಲ್ಲೂಕಿನಾದ್ಯಂತ ಧ್ವಜ ಸತ್ಯಾಗ್ರಹ ನಡೆಸಲು ತೀರ್ಮಾನಿಸಿದರು. ಅದರಂತೆ ಚನ್ನಪಟ್ಟಣ ತಾಲ್ಲೂಕಿನ ಬೇಡರಹಳ್ಳಿ, ತೆಂಕನಹಳ್ಳಿ, ಗುಡ್ಡೆ ಹೊಸೂರು, ಸೀಬನಹಳ್ಳಿ, ತಿಮ್ಮಸಂದ್ರ ಮೊದಲಾದ ಗ್ರಾಮಗಳಲ್ಲಿ ಧ್ವಜ ಸತ್ಯಾಗ್ರಹಗಳಾದುವು.

ವಿದ್ಯಾರ್ಥಿಗಳು ಸತ್ಯಾಗ್ರಹಗಳಿಗೆ ಧುಮುಕಿದ ಮೇಲೆ ಪರಿಸ್ಥಿತಿ ತೀವ್ರವಾಯಿತು. ಸ್ವಾತಂತ್ರ್ಯಕ್ಕೋಸ್ಕರ, ಜವಾಬ್ದಾರಿ ಸರಕಾರಕ್ಕೋಸ್ಕರ ನ್ಯಾಯವಾಗಿ ಹೋರಾಡುತ್ತಿರುವ ಕಾಂಗ್ರೆಸ್ ಮುಖಂಡರನ್ನು ಸರಕಾರ ನಿರ್ದಾಕ್ಷಿಣ್ಯವಾಗಿ ಬಂಧಿಸಿ ಶಿಕ್ಷೆ ವಿಧಿಸುವುದನ್ನು ಕಂಡು ಕೇಳಿ ಸಹಿಸದಾದರು. ಸರ್ಕಾರದ ವ್ಯವಸ್ಥೆಗಳನ್ನು ಛಿದ್ರಗೊಳಿಸಲು, ಕಾನೂನುಗಳನ್ನು ಭಂಗಿಸಲು, ಸರ್ಕಾರವನ್ನು ಸರ್ಕಾರದ ಅಧಿಕಾರಿಗಳನ್ನು ಸಾಧ್ಯವಾದ ರೀತಿಗಳಲ್ಲೆಲ್ಲ ಬಗ್ಗು ಬಡಿಯಲು ವಿದ್ಯಾರ್ಥಿಗಳ

ಸೈನ್ಯ ಮುಂದಾಯಿತು. ಶಿವಪುರ ರಾಷ್ಟ್ರಕೂಟ ಪ್ರಾರಂಭವಾಗುವ ಮೊದಲು ಹಳ್ಳಿಗಳ ಕಡೆ ನಾಯಕರು ಪ್ರಚಾರ ಭಾಷಣ ಮಾಡಲು ಹೋದಾಗ ನೂರಾರು ವಿದ್ಯಾರ್ಥಿಗಳು ಶಾಲೆಗಳನ್ನು ಬಿಟ್ಟು, ಕಾಂಗ್ರೆಸ್ ಬಾವುಟ, ಗಾಂಧೀಜಿ ಭಾವಚಿತ್ರಗಳನ್ನು ಹಿಡಿದು ಜಯಘೋಷಗಳನ್ನು ಕೂಗುತ್ತಾ ಊರಿನವರನ್ನೆಲ್ಲ ಎಚ್ಚರಿಸಿದ್ದರು. ಎಳೆಯ ಮನಸ್ಸಿಗೆ ಅವೆಲ್ಲ ಆಕರ್ಷಕವಾಗಿದ್ದುವು. ಅನಂತರ ದೊಡ್ಡ ಪ್ರಮಾಣದಲ್ಲಿ ಶಿವಪುರದಲ್ಲಿ ಅಧಿವೇಶನ ನಡೆದಿದೆ. ಸಾವಿರಾರು ಜನ ಪ್ರತ್ಯಕ್ಷವಾಗಿ ನೋಡಿದ್ದಾರೆ. ದೇಶದ ಪರಿಸ್ಥಿತಿಯ ಬಗೆಗೆ ಕಣ್ಣು ತೆರೆದಿದ್ದಾರೆ. ಅಂಥವರ ಪ್ರೋತ್ಸಾಹವೂ ವಿದ್ಯಾರ್ಥಿಗಳಿಗೆ ದೊರೆಯಿತು. ವಿದ್ಯಾರ್ಥಿಗಳ ಮಹಾ ಸೈನ್ಯ ಬೀದಿಗಿಳಿದರೆ ಏನು ಮಾಡುತ್ತದೆ, ಎಲ್ಲಿಗೆ ಹೋಗುತ್ತದೆ ಎಂದು ಯಾರಿಗೆ ತಾನೇ ಭವಿಷ್ಯ ಹೇಳಲು ಸಾಧ್ಯ ?

ಸರ್ಕಾರದ ದಬ್ಬಾಳಿಕೆಗಳಿಂದ ಉದ್ರೇಕಗೊಂಡ ವಿದ್ಯಾರ್ಥಿಗಳು ನಿಂತಿದ್ದ ರೈಲುಗಳಿಗೆ ಮುತ್ತಿಗೆ ಹಾಕಿ ಸಿಕ್ಕಿದ ಕಡೆಗಳಲ್ಲೆಲ್ಲ ಕಾಂಗ್ರೆಸ್ ಬಾವುಟದ ಪೈರು ನೆಟ್ಟರು. ಹೋಗುತ್ತಿದ್ದ ಬಸ್ಸು, ಲಾರಿ, ಜಟಕಾ ಗಾಡಿಗಳನ್ನು ಅಡ್ಡಹಾಕಿ ಬಾವುಟಗಳನ್ನು ತೊಡಿಸಿ ಅಲ್ಲಿಯ ಜನರಿಂದ ಕಾಂಗ್ರೆಸ್ ಘೋಷಣೆಗಳನ್ನು ಕೂಗಿಸಿದರು. ಹೋಟೆಲು ಸಿನಿಮಾ ಮಂದಿರಗಳ ಲೂಟಿಯಾದುವು. ಶಾಲೆಗಳಿಗೂ ಪ್ರವೇಶವಾಗಿ ಹಾಜರಿ ಪುಸ್ತಕಗಳು ಧೂಳು ಬಟ್ಟೆಗಳು ಚಿಂದಿಯಾದುವು. ಶಾಲೆಯಲ್ಲಿದ್ದ ಗಾಂಧೀಜಿಯವರ ಭಾವಚಿತ್ರಕ್ಕೆ ಪೂಜೆ ಮಾಡಿ ಕೈ ಮುಗಿದು "ಮಹಾತ್ಮ ಗಾಂಧೀಕಿ ಜೈ" ಎಂದು ಕೂಗಿದರು. ಮದ್ದೂರು ಮತ್ತು ಶಿವಪುರದ ನಡುವಿನ ಕೊಲ್ಲಿ ಸೇತುವೆಯ ಬಳಿ ಹೋಗುತ್ತಿದ್ದ ಹೆಂಡದ ಲಾರಿಯೊಂದಕ್ಕೆ ಗ್ರಹಚಾರ ವಕ್ರಿಸಿತು. ವಿದ್ಯಾರ್ಥಿಗಳು ಲಾರಿಯನ್ನು ತಡೆದು ನಿಲ್ಲಿಸಿ ಹೆಂಡದ ಪಿಪಾಯಿಗಳನ್ನು ನೆಲಕ್ಕುರುಳಿಸಿ ಕೆಚ್ಚಿ ಭೂಮಿತಾಯಿಗೆ ಹೆಂಡದ ಅಭಿಷೇಕ ಮಾಡಿದರು. ಯಾವ ಮಗ್ಗುಲಲ್ಲಿ ಎದ್ದಿದ್ದರೋ ಅದೇ ದಾರಿಯಲ್ಲಿ ಅಮಲ್ದಾರರೊಬ್ಬರು ಸಿಕ್ಕಿಬಿಟ್ಟರು. ಅವರಿಗೆ ಮುತ್ತಿಗೆ ನಡೆಯಿತು. ಆ ಸರಕಾರಿ ಅಧಿಕಾರಿಯ ತಲೆಗೆ ಗಾಂಧೀಟೋಪಿ ಇಟ್ಟರು. ಗಾಂಧೀಜಿಯವರ ಭಾವಚಿತ್ರವನ್ನು ಅವರ ಕೈಲಿ ಹಿಡಿಯಿಸಿ, ಅವರಿಂದ ಕಾಂಗ್ರೆಸ್ ಪರವಾದ ಘೋಷಣೆಗಳನ್ನು ಕೂಗುವಂತೆ ಹೇಳಿ ಸ್ವಲ್ಪ ದೂರ ಮೆರವಣಿಗೆ ಮಾಡಿಸಿದರು. ಪ್ರತಿಭಟಿಸಿದ್ದರೆ ಅಮಲ್ದಾರನ ಗತಿ ಏನಾಗುತ್ತಿತ್ತೊ ! ಅವರು ಜಾಣ ಅಧಿಕಾರಿ. ವಿದ್ಯಾರ್ಥಿಗಳು ಹೇಳಿದಂತೆಲ್ಲಾ ಕೇಳಿ, ಮಾಡಿದಂತೆಲ್ಲಾ ಮಾಡಿಸಿಕೊಂಡು ಜೀವಸಹಿತ ಮನೆ ಸೇರಿದರು. ಇಂಥ ಅನೇಕ ಘಟನೆಗಳು ಶಿವಪುರದ ಸುತ್ತ ಮುತ್ತ ನಡೆದುವು.

ಲೆಕ್ಕವಿಲ್ಲದಷ್ಟು ನಿಷೇಧಾಜ್ಞೆಗಳನ್ನು ಸರಕಾರ ಹೊರಡಿಸಿದುದಲ್ಲದೆ

ಸುಪ್ರಸಿದ್ಧ ಪತ್ರಿಕೆಗಳಾಗಿದ್ದ ವಿಶ್ವಕರ್ನಾಟಕ, ತಾಯಿನಾಡು, ನವಜೀವನಗಳ ಪ್ರಕಟಣೆಯನ್ನು ರದ್ದು ಮಾಡಿತು (29-4-1938). ಜನಗಳ ಕ್ಷೋಭೆ ಇದರಿಂದ ಮತ್ತಷ್ಟು ಉಲ್ಬಣಿಸಿತು.*

ಎಲ್ಲೆಲ್ಲೂ ರಾಷ್ಟ್ರಧ್ವಜದ ಸಮಸ್ಯೆ ಎದ್ದು ಕಾಣುತ್ತಿತ್ತು. ರಾಷ್ಟ್ರಧ್ವಜಾರೋಹಣದಿಂದ ಸಂಸ್ಥಾನದ ಧ್ವಜಕ್ಕೆ ಅವಮಾನ ಮಾಡಿದಂತೆ, ಸರಕಾರದ ಆಜ್ಞೆಯನ್ನು ಉಲ್ಲಂಘಿಸಿದಂತೆ ಎಂಬುದು ಸರಕಾರದ ಅಧಿಕಾರಿಗಳ ಅಭಿಪ್ರಾಯ. ರಾಷ್ಟ್ರಧ್ವಜವೇ ತಮ್ಮ ಪ್ರಬಲ ಅಸ್ತ್ರ, ರಕ್ಷೆ ಎಂದು ಕಾಂಗ್ರೆಸ್ ಸತ್ಯಾಗ್ರಹಿಗಳ ದೃಢವಾದ ನಿಲುವು. ಇಬ್ಬರ ತಿಕ್ಕಾಟದಲ್ಲಿ ಸಾರ್ವಜನಿಕ ಜೀವನವೆಲ್ಲ ಅಸ್ತವ್ಯಸ್ತವಾಗಿತ್ತು. ಸತ್ಯಾಗ್ರಹಿಗಳಿಗೆ ಪತ್ರಿಕೆಗಳ ಬೆಂಬಲವೂ ಅಧಿಕವಾಗಿತ್ತು. ಬೃಹತ್ ಜನಸ್ತೋಮದ ಒಕ್ಕೊರಲಿನ ಧ್ವನಿಯನ್ನು ಅಡಗಿಸುವುದಕ್ಕೆ ಸರಕಾರ ಏನೆಲ್ಲ ಪ್ರಯತ್ನ ಮಾಡಿತು. ಆದರೆ ಅದು ಯಶಸ್ವಿಯಾಗಲಿಲ್ಲ. "ರಾಷ್ಟ್ರಧ್ವಜದಿಂದ ರಾಜತ್ವಕ್ಕೆ ಲೋಪ ಬರುವುದಿಲ್ಲ" ಎಂದು ಮೈಸೂರಿನ ಪ್ರಸಿದ್ಧ ವಕೀಲರು ಸಮರ್ಥಿಸಿದರು. ಅವರ ಅಭಿಪ್ರಾಯ ಹೀಗಿದೆ :

"ರಾಷ್ಟ್ರೀಯ ಧ್ವಜವು ಶ್ರೀಮನ್ಮಹಾಜರ ರಾಜತ್ವಕ್ಕೆ ಲೋಪ ಉಂಟು ಮಾಡುವದೆಂಬ ಭಾವನೆಯೇ ಇತ್ತೀಚಿನ ಘಟನೆಗಳಿಗೆ ಕಾರಣವಾಯಿತು. ರಾಷ್ಟ್ರಧ್ವಜವು ಶ್ರೀಮನ್ಮಹಾರಾಜರ ರಾಜತ್ವಕ್ಕೆ ಎಂದಿಗೂ ಲೋಪ ಉಂಟು ಮಾಡಲಾರದು. ಧ್ವಜವು ವ್ಯಕ್ತಿತ್ವದ ಕುರುಹು, ರಾಜತ್ವದ ಕುರುಹಲ್ಲ. ಹಿಂದೂ ರಾಜಕೀಯ ತತ್ವದ ಪ್ರಕಾರ ರಾಜತ್ವವು ಪಟ್ಟದ ಆನೆ, ಪಟ್ಟದ ಕತ್ತಿ, ಪಟ್ಟದ ಕುದುರೆ, ಮುಂತಾದ 14 ವಸ್ತು ವಾಹನಗಳಲ್ಲಿ ಅಡಗಿದೆ. ಅವುಗಳಲ್ಲಿ ಧ್ವಜವು ಒಂದಲ್ಲ. ಪಾಶ್ಚಿಮಾತ್ಯ ದೇಶಗಳು ಕೂಡ ತಮ್ಮ ಸ್ವಂತ ಧ್ವಜಗಳನ್ನು ಇಟ್ಟುಕೊಂಡಿವೆ. ರಾಜತ್ವವನ್ನು ಸೂಚಿಸುವ ವಸ್ತುಗಳೂ ಅಥವಾ ರಾಜತ್ವದ ಪ್ರಕೃತಿಗಳನ್ನುಳ್ಳ ವಸ್ತುಗಳೂ ರಾಜರ ಸ್ವಂತ ಆಸ್ತಿಗಳು. ಗಂಡಭೇರುಂಡ ಧ್ವಜವನ್ನು ಶ್ರೀಮನ್ಮಹಾರಾಜರೊಬ್ಬರ ಹೊರತಾಗಿ ಮತ್ತಾರೂ ಉಪಯೋಗಿಸಲು ಅವಕಾಶವಿಲ್ಲ.

ಪ್ರಜಾಪ್ರಭುತ್ವದ ದೇಶಗಳಲ್ಲಿ ಪ್ರತಿಪಕ್ಷಕ್ಕೂ ಒಂದೊಂದು ಧ್ವಜವಿರುತ್ತದೆ. ಮಠಗಳು ಕೂಡ ತಮ್ಮ ಸ್ವಂತ ಧ್ವಜಗಳನ್ನು ಇಟ್ಟುಕೊಂಡಿವೆ. ಅವುಗಳನ್ನು ಪ್ರದರ್ಶಿಸುವ ಕಾರಣವೂ ನಡೆಯುತ್ತಿದೆ. ಅದು ಶ್ರೀಮನ್ಮಹಾರಾಜರ ರಾಜತ್ವಕ್ಕೆ ಲೋಪ ತರುವುದೇನು ? ರಾಷ್ಟ್ರೀಯ ಧ್ವಜವು ಐಕ್ಯತೆ, ಸತ್ಯ ಮತ್ತು ಅಹಿಂಸೆಯ

---

*ಈ ಆಜ್ಞೆಯ ಪರಿಣಾಮವನ್ನು ಸರಕಾರ ಬಹಳ ಕಾಲ ತಡೆದುಕೊಳ್ಳುವುದಕ್ಕೆ ಆಗಲಿಲ್ಲ. 9-5-1938 ರಂದು ಪತ್ರಿಕೆಗಳ ಮೇಲಿನ ನಿರ್ಬಂಧ ಹೋಯಿತು.

ಕುರುಹು. ಆದರಲ್ಲಿ ಅಗೌರವದ ಚಿಹ್ನೆಯೇ ಇಲ್ಲ. ಆಂಗ್ಲೇಯರು ಕಾಂಗ್ರೆಸ್ಸನ್ನು ತುಳಿಯಲು ಪ್ರಯತ್ನಮಾಡುತ್ತಿದ್ದುದರಿಂದ, ಕಾಂಗ್ರೆಸ್ಸಿನ ಕುರುಹಾದ ಕಾಂಗ್ರೆಸ್ ಧ್ವಜಕ್ಕೆ ಬಹಿಷ್ಕಾರ ಹಾಕಿದರು. ಆದರೆ ಮೈಸೂರು ಕಾಂಗ್ರೆಸ್ಸಾದರೋ ಶ್ರೀಮನ್ಮಹಾರಾಜರವರ ಆಶ್ರಯದಲ್ಲಿ ಜವಾಬ್ದಾರಿ ಸರ್ಕಾರವನ್ನು ಸ್ಥಾಪಿಸಲು ಪ್ರಯತ್ನಪಡುತ್ತದೆ. ಮತ್ತು ಶ್ರೀಮನ್ಮಹಾರಾಜರ ವಿಚಾರದಲ್ಲಿ ಅದಕ್ಕೆ ಸಂಪೂರ್ಣವಾದ ರಾಜಭಕ್ತಿ ಇದೆ.

ಕಾಂಗ್ರೆಸ್ ಧ್ವಜವನ್ನು ಮತ್ತು ಗಂಡಭೇರುಂಡ ಧ್ವಜವನ್ನು ಒಟ್ಟುಗೂಡಿಸಲು ಸಾಧ್ಯವಿಲ್ಲ. ಹಾಗೆ ಮಾಡುವುದು ಎರಡೂ ಧ್ವಜಗಳಿಗೂ ಅಪಮಾನ ಮಾಡಿದಂತಾಗುತ್ತದೆ. ಅಲ್ಲದೆ ಹಾಗೆ ಮಾಡಬೇಕಾದರೆ ಒಂದು ಕಡೆ ಭಾರತದ ಪ್ರಜೆಗಳ ಮತ್ತು ಶ್ರೀಮನ್ಮಹಾರಾಜರವರ ಒಪ್ಪಿಗೆ ಪಡೆಯಬೇಕಾಗುತ್ತದೆ.”

ಆದರೆ ಯಾರ ಅಭಿಪ್ರಾಯಗಳನ್ನಾಗಲೀ, ಸಲಹೆ ಸೂಚನೆಗಳನ್ನಾಗಲೀ ಸರ್ಕಾರ ಕಿವಿಗೆ ಹಾಕಿಕೊಳ್ಳಲಿಲ್ಲ; ತನ್ನ ಮಾಮೂಲಿ ನೀತಿಯನ್ನು ಬದಲಾಯಿಸಿಕೊಳ್ಳಲಿಲ್ಲ. ಸರ್ಕಾರಕ್ಕೆ ಸವಾಲಾಗಿ ಸತ್ಯಾಗ್ರಹಿಗಳ ಪ್ರತಿಭಟನೆಯೂ ಮುಂದುವರಿಯಿತು.

ಶಿವಪುರ ರಾಷ್ಟ್ರಕೂಟದ ಧ್ವಜಸತ್ಯಾಗ್ರಹದ ಅನಂತರ ಸಂಸ್ಥಾನದಲ್ಲೆಲ್ಲಾ ನಡೆದ ಸತ್ಯಾಗ್ರಹಗಳಿಗೆ, ಗಲಭೆಗಳಿಗೆ, ಜನರ ಉತ್ಸಾಹಕ್ಕೆ, ಸರ್ಕಾರದ ದೌರ್ಜನ್ಯಕ್ಕೆ ಕೊನೆ ಮೊದಲಿರಲಿಲ್ಲ. ಜನರಿಗೂ ಸರ್ಕಾರಕ್ಕೂ ಪ್ರತೀಕಾರ ಮನೋಭಾವವೇ ಬೆಳೆಯಿತು ಎಂದರೂ ತಪ್ಪಲ್ಲ. ಮಹಾತ್ಮ ಗಾಂಧೀಜಿಯವರ ಅಹಿಂಸಾತ್ಮಕ ತತ್ವಗಳಿಗೆ ಅನುಸಾರವಾಗಿ ಎಲ್ಲರೂ ವಿಸ್ಮಯ ಪಡುವಂತೆ ಶಿವಪುರದಲ್ಲಿ ಧ್ವಜಸತ್ಯಾಗ್ರಹ ನಡೆದರೂ ಎಲ್ಲಾ ಕಡೆಯೂ ಅದೇ ರೀತಿಯಲ್ಲಿ ನಡೆಯಲಿಲ್ಲ. ಶಿವಪುರದಲ್ಲಿ ಕಾನೂನು ರಕ್ಷಕರು ಸಂಯಮ, ಜಾಣತನ, ದೂರದೃಷ್ಟಿ, ಜವಾಬ್ದಾರಿಯಿಂದ ತಮ್ಮ ಕರ್ತವ್ಯವನ್ನು ನಿರ್ವಹಿಸಿ ಪ್ರಭುಗಳಿಂದಲೂ ಪ್ರಜೆಗಳಿಂದಲೂ ಸೈ ಎನ್ನಿಸಿಕೊಂಡರು. ಆ ಮೂಲಕ ಇಡೀ ರಾಜ್ಯಕ್ಕೇ ಕೀರ್ತಿ ತಂದರು. ಆದರೆ ಮುಂದೆ ಅನೇಕ ಕಡೆ ನಡೆದ ಸತ್ಯಾಗ್ರಹಗಳಲ್ಲಿ ಪೋಲೀಸರು ತಾಳ್ಮೆ ಕಳೆದುಕೊಂಡರು. ಜನರ ಮೇಲೆ ಸೇಡು ತೀರಿಸಿಕೊಳ್ಳಲು ಮನಸ್ಸು ಮಾಡಿದರು. ಅಧಿಕಾರ ಅಸ್ತ್ರಗಳನ್ನು ನಿರಪರಾಧಿಗಳ ಮೇಲೆ ನಿರ್ದಾಕ್ಷಿಣ್ಯವಾಗಿ ಪ್ರಯೋಗಿಸಿದರು. ಅಂಥ ಕಡೆಗಳಲ್ಲಿ ನಡೆಯಬಾರದುದು ನಡೆದುಹೋಯಿತು. ಅನೇಕ ಸಾವು ನೋವುಗಳು ಸಂಭವಿಸಿದುವು. ಅಂಥ ಒಂದೆರಡು ಪ್ರಸಂಗಗಳನ್ನು ಸ್ಥೂಲವಾಗಿ ಸಮೀಕ್ಷಿಸಬಹುದು.

ಮೈಸೂರಿನ ಜಲಿಯನ್‌ವಾಲಾಬಾಗ್ : ವಿಧುರಾಶ್ವತ್ಥದ ಹತ್ಯಾಕಾಂಡ

ಶಿವಪುರ ರಾಷ್ಟ್ರಕೂಟದ ಮಹಾಧಿವೇಶನ ಮುಗಿದಿತ್ತು. ತಿಂಗಳವರೆಗಿನ ಧ್ವಜಸತ್ಯಾಗ್ರಹ ಇನ್ನೂ ನಡೆಯುತ್ತಲೇ ಇತ್ತು. ಅದರ ಬಿಸಿ ಆರುವ ಮೊದಲೇ ವಿದುರಾಶ್ವತ್ಥದಲ್ಲಿ ಹತ್ಯಾಕಾಂಡವೊಂದು ನಡೆದುಹೋಯಿತು. ಸತ್ಯಾಗ್ರಹವನ್ನು ಸರಿಯಾಗಿ ಅರ್ಥಮಾಡಿಕೊಳ್ಳದೇ ಇದ್ದವರಿಂದ, ಅಧಿಕಾರವನ್ನು ಸ್ವೇಚ್ಛೆಯಾಗಿ ಬಳಸಬಾರದು ಎಂದು ತಿಳಿದುಕೊಳ್ಳದೇ ಇದ್ದ ಅಧಿಕಾರಿಗಳಿಂದ ಇದು ನಡೆಯಿತು. ಅಹಿಂಸಾತ್ಮಕವಾಗಿ ಆದರ್ಶವಾಗಿ ಶಿವಪುರದಲ್ಲಿ ಸತ್ಯಾಗ್ರಹ ನಡೆದಾಗ ಪೋಲೀಸರಿಗೆ ಜನರ ಮೇಲೆ ಸೇಡು ತೀರಿಸಿಕೊಳ್ಳಲು ಅವಕಾಶವಾಗಲಿಲ್ಲ. ಶಿವಪುರದ ಪ್ರತೀಕಾರ ವನ್ನು ಪೋಲೀಸರು ವಿದುರಾಶ್ವತ್ಥದಲ್ಲಿ ತೀರಿಸಿಕೊಂಡರು.

ಕೋಲಾರ ಜಿಲ್ಲೆ ಗೌರೀಬಿದನೂರು ತಾಲ್ಲೂಕು ದೊಡ್ಡಕುರುಗೋಡು ಬಳಿ, ಉತ್ತರ ಪಿನಾಕಿನೀ ನದೀ ತೀರದಲ್ಲಿರುವ ವಿದುರಾಶ್ವತ್ಥ ಪುರಾಣ ಪ್ರಸಿದ್ಧವಾದ ಯಾತ್ರಾಸ್ಥಳ. ಪ್ರತಿ ಬೇಸಗೆಯಲ್ಲೂ ಅಲ್ಲಿ ಜಾತ್ರೆ ನಡೆಯುವುದು ರೂಢಿ. ಸುತ್ತಮುತ್ತಲ ಊರುಗಳ ಸಾವಿರಾರು ಜನರು ಜಾತ್ರೆಗೆ ಸೇರುತ್ತಾರೆ. ಶಿವಪುರದ ಧ್ವಜಸತ್ಯಾಗ್ರಹದಿಂದ ಸ್ಫೂರ್ತಿಗೊಂಡ ಅನೇಕ ಹಳ್ಳಿಗಳ ಹಾಗೂ ಪಟ್ಟಣಗಳ ಜನರು, ಅಪಾರ ಜನ ಸೇರುವ ವಿದುರಾಶ್ವತ್ಥದಲ್ಲಿ ಧ್ವಜಸತ್ಯಾಗ್ರಹ ನಡೆಸಲು ತೀರ್ಮಾನಿಸಿದರು. ಕೋಲಾರ ಜಿಲ್ಲೆಯಲ್ಲೂ ಸತ್ಯಾಗ್ರಹಗಳನ್ನು ಕೈಗೊಳ್ಳ ಬೇಕೆಂಬುದು ಅವರ ಉದ್ದೇಶ. ಶಿವಪುರ ಧ್ವಜಸತ್ಯಾಗ್ರಹದಲ್ಲಿ ಅಸಂಖ್ಯಾತ ಜನರು ಸೇರಿ, ಅದರ ಪ್ರಭಾವದಿಂದ ಅನೇಕ ಕಡೆಗಳಲ್ಲಿ ಸತ್ಯಾಗ್ರಹಗಳು ಪ್ರಾರಂಭ ವಾಗಿದ್ದುದನ್ನು ಗಮನಿಸಿದ್ದ ಕೋಲಾರ ಜಿಲ್ಲಾ ಮ್ಯಾಜಿಸ್ಟ್ರೇಟರಾದ ಶ್ರೀ ಜೆ. ಅಪ್ಪಾಜಿಗೌಡರು ಜಿಲ್ಲೆಯಲ್ಲಿ ಪ್ರತಿಬಂಧಕಾಜ್ಞೆಯನ್ನು ಜಾರಿಗೆ ತಂದಿದ್ದರು. ಇದನ್ನು ಉಲ್ಲಂಘಿಸಲು, ಧ್ವಜಸತ್ಯಾಗ್ರಹ ನಡೆಸಲು ಮೊದಲೇ ತೀರ್ಮಾನಿಸಿದ್ದ ಸತ್ಯಾಗ್ರಹಿಗಳು ಮುಂದಾದರು.

ಇದಕ್ಕೆ ಒಂದೆರಡು ದಿನಗಳ ಹಿಂದೆ ಶ್ರೀ ಎಲ್. ಜಿ. ರಾಜಶೇಖರ ಒಡೆಯರ್ ಎಂಬ ಅಮಲ್ದಾರರನ್ನು ಜಾತ್ರೆಯಲ್ಲಿ ಸತ್ಯಾಗ್ರಹದ ಹೆಸರಿನಲ್ಲಿ ಯಾರೋ ಪುಂಡರು ಅಪಮಾನ ಪಡಿಸಿದ್ದರು. ಅಮಲ್ದಾರರು ಪುಂಡರಿಂದ ಜಾತ್ರೆಯಲ್ಲಿ ಗಲಾಟೆಯಾಗ ಬಹುದು, ಆದ್ದರಿಂದ ಮುನ್ನೆಚ್ಚರಿಕೆ ಅಗತ್ಯವೆಂದು ಪೋಲೀಸರಿಗೆ ದೂರು ಕೊಟ್ಟರು. ಇದೇ ನೆಪ ಮಾಡಿಕೊಂಡು ಪೋಲೀಸರು ಶಸ್ತ್ರಸಜ್ಜಿತರಾಗಿ ಹಾಜ ರಾದರು.

ಪೋಲೀಸರಿಗೆ ದೂರು ಹೋದುದು, ಅವರು ಶಸ್ತ್ರಧಾರಿಗಳಾಗಿ ಬರು ವುದು ಗೊತ್ತಾದ ಕೂಡಲೇ ಇಂಥ ಸನ್ನಿವೇಶಗಳಲ್ಲಿ ಹಿಂಸೆಯೇ ಕೊನೆಯ ಫಲಿತಾಂಶ

ವಾಗುವುದೆಂದು ಅನುಭವದಿಂದ ತಿಳಿದುಕೊಂಡಿದ್ದ ಸತ್ಯಾಗ್ರಹಿಗಳು ಧ್ವಜಸತ್ಯಾಗ್ರಹವನ್ನು ಕೈಬಿಡಲು ಯೋಚಿಸಿದರು. ಈ ಬಗೆಗೆ ಶ್ರೀ ರುಮಾಲೆ ಚನ್ನಬಸವಯ್ಯನವರು ಮೈಸೂರು ಶಾಸನ ಸಭೆಯ ಸದಸ್ಯರೂ ವಕೀಲರೂ ಕೋಲಾರ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರೂ ಆದ ಶ್ರೀ ಟಿ. ರಾಮಾಚಾರ್ಯರಿಗೆ ಸ್ಪಷ್ಟಪಡಿಸಿದರು. ಮೊದಲೇ ತೀರ್ಮಾನವಾಗಿದ್ದ ಕಾರ್ಯಕ್ರಮವನ್ನು ಬದಲಾಯಿಸದೆ ಬಹಳ ಎಚ್ಚರಿಕೆಯಿಂದ, ಶಾಂತಿಯಿಂದ ಧ್ವಜಸತ್ಯಾಗ್ರಹ ನಡೆಸಲು ಉದ್ದೇಶಿಸಿದರು.

ಏಪ್ರಿಲ್ 25, 1938

ಜಾತ್ರೆಯ ಸಮಯವಾಗಿದ್ದುದರಿಂದ ಸುಮಾರು 15,000 ಜನ ಯಾತ್ರಾರ್ಥಿಗಳು ವಿದುರಾಶ್ವತ್ಥದಲ್ಲಿ ಸೇರಿದ್ದರು. ಧ್ವಜಸತ್ಯಾಗ್ರಹ ನಡೆಯುವ ಸುದ್ದಿ ಹಬ್ಬಿದ್ದುದರಿಂದ ಪೋಲೀಸರ ಸಂಖ್ಯೆಯೂ ಸಾಕಷ್ಟು ಸೇರಿತ್ತು. 37 ಜನ ಮೀಸಲು ಪಡೆಯ ಪೋಲೀಸರು, ಲಾಠಿ ಹಿಡಿದ ಅನೇಕ ಸಾಮಾನ್ಯ ಪೋಲಿಸರು, ಪೋಲೀಸ್ ಇನ್‌ಸ್ಪೆಕ್ಟರ್ ಶ್ರೀ ಬಸಪ್ಪ, ಜಿಲ್ಲಾ ಪೋಲೀಸ್ ಸೂಪರಿನ್‌ಟೆನ್‌ಡೆಂಟ್ ಶ್ರೀ ಎಸ್. ಖಲೀಲ್, ಸಬ್‌ಡಿವಿಜನಲ್ ಆಫೀಸರ್ ಶ್ರೀ ಎಂ. ಶಾಮಣ್ಣ, ಅಮಲ್ದಾರ್ ಶ್ರೀ ರಾಜಶೇಖರ ಒಡೆಯರ್ ಮೊದಲಾದವರು ಹಾಜರಿದ್ದರು.

25-4-1938 ರ ಬೆಳಗ್ಗೆ ವಿದುರನಾರಾಯಣಸ್ವಾಮಿಯ ಸಮಕ್ಷಮದಲ್ಲಿ ಸತ್ಯಾಗ್ರಹಿಗಳು ಸೇರಿ, ವಿಧಿವತ್ತಾಗಿ ರಾಷ್ಟ್ರಧ್ವಜಾರೋಹಣ ಮಾಡಿದರು. ರಾಷ್ಟ್ರಧ್ವಜವನ್ನು ಹಿಡಿದು ಜನಸಮೂಹದ ಮುಂದೆ ನಿಂತಿದ್ದ ಶ್ರೀ ಸೂರಣ್ಣ, ಶ್ರೀ ಎಂ. ನಾರಾಯಣಸ್ವಾಮಿ, ಶ್ರೀ ಶ್ರೀನಿವಾಸರಾಯರನ್ನು ಧ್ವಜದ ಸಹಿತ ಪೋಲೀಸರು ಬಂಧಿಸಿದರು. ಜಿಲ್ಲಾ ಮ್ಯಾಜಿಸ್ಟ್ರೇಟರ ಆಜ್ಞೆಯನ್ನು ಉಲ್ಲಂಘಿಸಿ, ರಾಷ್ಟ್ರಧ್ವಜವನ್ನು ಪ್ರದರ್ಶಿಸಿ ಶ್ರೀ ನಾಗಯ್ಯರೆಡ್ಡಿ, ಶ್ರೀ ಶ್ರೀಪಾಲಯ್ಯ, ಶ್ರೀ ರಾಮಸ್ವಾಮಿ, ಶ್ರೀ ನರಸಿಂಗಯ್ಯ, ಶ್ರೀ ನಾರಾಯಣಪ್ಪ, ಶ್ರೀ ಸೂರ್ಯನಾರಾಯಣರಾವ್, ಶ್ರೀ ಸಂಗಪ್ಪನವರು ಭಾಷಣ ಮಾಡಿದರು. ಪೋಲೀಸ್ ಅಧಿಕಾರಿಗಳು ಅವರನ್ನೂ ದಸ್ತಗಿರಿ ಮಾಡಿದರು. ಹಿಂದೂಪುರದ ಶ್ರೀ ಸುಬ್ಬರಾಯರು ಭಾಷಣ ಮಾಡಲು ಮುಂದೆ ಬಂದಾಗ, ಅವರು ಭಾಷಣ ಮಾಡಲು ಅವಕಾಶ ಕೊಡದೆ ಪೋಲೀಸರು ಅವರನ್ನು ಬಂಧಿಸಿದರು.

ಅನಂತರ ಕಾಂಗ್ರೆಸ್ ಮುಖಂಡರ ಹಾಗೂ ಪೋಲೀಸರ ನಡುವೆ ಸೌಜನ್ಯದ ಮಾತುಕತೆ ನಡೆದು, ತಾವು ಬಂದಿದ್ದ ಉದ್ದೇಶ ನೆರವೇರಿದುದರಿಂದ ಸತ್ಯಾಗ್ರಹಿಗಳು ಆ ಸ್ಥಳದಿಂದ ಚದುರಿದರು.

ಅಷ್ಟರಲ್ಲಿ ಕೆಲವು ಪುಂಡರು 'ಕಾಂಗ್ರೇಸ್ ಸತ್ಯಾಗ್ರಹಿಗಳು ಸರಕಾರಕ್ಕೆ ಹೆದರಿ ಬಿಟ್ಟರು, ಅದಕ್ಕಾಗಿ ಸರಿಯಾಗಿ ಧ್ವಜಸತ್ಯಾಗ್ರಹ ಮಾಡಲಿಲ್ಲ, ನಾವು ಮಾಡು ತ್ತೇವೆ' ಎಂದು ಮುಂದೆ ಬಂದರು. ಪೋಲೀಸರು ತಡೆದರು. ಜನರು ಪ್ರತಿಭಟಿ ಸಿದರು. ಇಂಥ ಸಂದರ್ಭದಲ್ಲಿ ಅಧಿಕಾರವನ್ನು ಪ್ರಯೋಗಿಸಿ ಜನರನ್ನು ಬಗ್ಗು ಬಡಿದರೆ ಪ್ರಭುತ್ವದಿಂದ ಮನ್ನಣೆ ಪಡೆಯಬಹುದು ಎಂದು ಭ್ರಮಿಸಿದ ಪೋಲೀಸ್ ಅಧಿಕಾರಿಗಳು ಗೋಲಿಬಾರ್‌ಗೆ ಆಜ್ಞೆ ಇತ್ತರು. ಶಾಂತವಾಗಿದ್ದ ವಿದುರಾಶ್ವತ್ಥ ರಣರಂಗವಾಯಿತು. ಗುಂಡುಗಳು ಹಾರಿದುವು. ಕೆಲವು ನಿರಪರಾಧಿ ಹಳ್ಳಿಗರು ಸ್ಥಳದಲ್ಲಿಯೇ ಮೃತಪಟ್ಟರು. ಹಲವರು ತೀವ್ರವಾಗಿ ಗಾಯಗೊಂಡರು. ಮರದ ತೋಪಿನಲ್ಲಿ ಕುಳಿತಿದ್ದ ಹಕ್ಕಿಪಕ್ಷಿಗಳು ಮಂಗಗಳು ಗುಂಡಿನ ಶಬ್ದಕ್ಕೆ ಹೌಹಾರಿ ವಿಕಾರವಾಗಿ ಕೂಗುತ್ತಾ ಚೆಲ್ಲಾಪಿಲ್ಲಿಯಾದುವು. ಪುರಾಣ ಪ್ರಸಿದ್ಧವಾಗಿದ್ದ ಪವಿತ್ರ ಯಾತ್ರಾಸ್ಥಳದಲ್ಲಿ ಪ್ರೇತ ಕಳೆ ಮೂಡಿತು. ಜನರು ತಪ್ಪಿಸಿಕೊಂಡು ಹೋಗದಂತೆ ಆಯಕಟ್ಟಿನ ಸ್ಥಳಕ್ಕೆ ಸೇರಿಸಿಕೊಂಡು ಪೋಲೀಸರು 92 ಸುತ್ತು ಗುಂಡು ಹಾರಿಸಿದರು. ಹೆಣಗಳನ್ನು ತುಳಿದುಕೊಂಡು ಗಾಬರಿಯಿಂದ ಓಡಾಡು ತ್ತಿದ್ದವರಿಗೆ ಲೆಕ್ಕವಿಲ್ಲದಾಯಿತು. ಹತ್ತಿರದಲ್ಲಿ ಆಸ್ಪತ್ರೆಯಿಲ್ಲ. ಗಾಯಗೊಂಡು ರಕ್ತಸಿಕ್ತವಾಗಿದ್ದ ಅರೆಜೀವದ ಗಾಯಾಳುಗಳನ್ನು ಗಾಡಿಗಳಲ್ಲಿ ತುಂಬಿಕೊಂಡು ಮನೆ ಗಳಿಗೆ ಸಾಗಿಸುತ್ತಿದ್ದ ದೃಶ್ಯ ಹೃದಯ ವಿದ್ರಾವಕವಾಗಿತ್ತು.

ರಿಜರ್ವ್ ಪೋಲೀಸರು ತಂದಿದ್ದ ಕೇಪು ಮುಗಿದುಹೋಗಲು ಮತ್ತಷ್ಟು ತರುವುದಕ್ಕಾಗಿ ಅಧಿಕಾರಿಗಳು ಒಬ್ಬ ಪೋಲೀಸ್ ಪೇದೆಯನ್ನು ಓಡಿಸಿದರು. ಜಿಲ್ಲಾ ಪೋಲೀಸ್ ಸೂಪರಿನ್‌ಟೆನ್‌ಡೆಂಟ್ ಶ್ರೀ ಎಸ್. ಖಲೀಲ್ ಮೊದಲು ಗುಂಡು ಹಾರಿಸಿದರಂತೆ. ಉಳಿದ ಅಸ್ತ್ರಧಾರಿಗಳು ಅವರ ಮಾರ್ಗವನ್ನು ಧಾರಾಳ ವಾಗಿ ಅನುಸರಿಸಿದರು. ನಿರ್ದಾಕ್ಷಿಣ್ಯವಾಗಿ ನರಬೇಟೆ ನಡೆಯಿತು. ಅಧಿಕಾರಿಗಳು ಸೂಚನೆ ನೀಡಿದ್ದ ಕೇವಲ 10 ನಿಮಿಷಗಳಲ್ಲಿ ಅಲ್ಲಿಂದ ಚದುರಲು ಸಾಧ್ಯವಿಲ್ಲದೆ ಸಾವಿರಾರು ಜನ ಮುಗ್ಧ ಯಾತ್ರಿಕರು ಸಿಕ್ಕಿದ ಕಡೆಗೆ ನುಗ್ಗಿದರು. ಕೆಲವರು ತಪ್ಪಿಸಿಕೊಳ್ಳಲು ಉತ್ತರ ಪಿನಾಕಿನಿ ನದಿಗೆ ಹಾರಿದರು. ಗುಂಡಿಗೆ ಸಿಕ್ಕಿದವರು ಯಮಯಾತನೆ ಅನುಭವಿಸಿದರು. ಕೆಲವರು ಪ್ರಾಣತ್ಯಾಗ ಮಾಡಿದರು. ವಿದುರಾಶ್ವತ್ಥದ ತೋಟದ ಮೂಲೆಯಲ್ಲಿ ರೊಟ್ಟಿ ತಿನ್ನುತ್ತ ಕುಳಿತಿದ್ದ ಹಳ್ಳಿಗ ನೊಬ್ಬ ಗುಂಡು ತಗುಲಿ ಸ್ಥಳದಲ್ಲೇ ಸತ್ತುಬಿದ್ದನು. ಶಿವಪುರಂನ ವ್ಯಾಪಾರಸ್ಥ ಶ್ರೀ ಲಕ್ಷಮಯ್ಯ ಊಟ ಮಾಡುತ್ತಿದ್ದಾಗ ಸತ್ತ. ಶ್ರೀ ಅಶ್ವತ್ಥನಾರಾಯಣ ಶೆಟ್ಟಿ ಎನ್ನುವವನು ತಿಂಡಿ ತಿನ್ನುತ್ತಿದ್ದಾಗ ಪ್ರಾಣ ಕಳೆದುಕೊಂಡ. ಅವನ ಶವ ಸಂಸ್ಕಾರಕ್ಕೂ ಪೋಲೀಸರು ಅವಕಾಶ ಕೊಡಲಿಲ್ಲ.

ಕ್ರೂರ ಪೋಲೀಸರಿಂದ ಮಾನವ ಬೇಟೆಯ ಅತ್ಯಾಚಾರ ಸ್ವೇಚ್ಛೆಯಾಗಿ ನಡೆಯಿತು. ಜನರ ಹಾಹಾಕಾರ, ಆರ್ತನಾದ ಮುಗಿಲು ಮುಟ್ಟಿತು. ರಕ್ತ ಪ್ರವಾಹ ಕೋಡಿ ಹರಿಯಿತು. ಹೆಣಗಳ ರಾಶಿ ದಿಗ್ಭ್ರಮೆ ಹಿಡಿಸಿತು. ಪೋಲೀಸ್ ಅಧಿಕಾರಿಗಳ ದರ್ಪ ಮತ್ತು ನಿಷ್ಕರುಣೆ ಅಮಾನುಷವಾಗಿತ್ತು. ಪುಂಡಾಟದ ಜನರು ತಪ್ಪಿಸಿಕೊಂಡರು. ನಿರಪರಾಧಿ ಜನರು ಪೋಲೀಸರ ಗುಂಡಿಗೆ ಆಹುತಿ ಯಾದರು.

ಶಿವಪುರದಲ್ಲಿ ಮಾಡಲಾಗದುದನ್ನು ಇಲ್ಲಿ ಸಾಧಿಸಲು ಪೋಲೀಸರು ದುಡುಂಕಿ ಕೊಲೆಗೆ ಕಾರಣರಾದರು. ನಿಜವಾಗಿ ಸತ್ಯಾಗ್ರಹ ಮಾಡಿದ ಕಾಂಗ್ರೆಸ್ ಸತ್ಯಾಗ್ರಹಿ ಗಳು ಸ್ಥಳದಲ್ಲಿ ಇರಲಿಲ್ಲ. ಸತ್ಯಾಗ್ರಹದ ಹೆಸರಿನಲ್ಲಿ ಪುಂಡಾಟ ಮಾಡಲು ಬಂದ ವರು ಪೋಲೀಸರ ಗುಂಡಿಗೆ ಸಿಕ್ಕದೆ ತಪ್ಪಿಸಿಕೊಂಡರು. ಏನೂ ತಿಳಿಯದ ಯಾವು ದಕ್ಕೂ ಸಂಬಂಧಿಸಿದ, ಜಾತ್ರೆಗೆ ಬಂದಿದ್ದ ಹಳ್ಳಿಯ ಯಾತ್ರಿಕರು ನಿಸ್ಸಹಾಯಕರಾಗಿ ಆಹುತಿಯಾದರು. ಶ್ರೀಮತಿ ಗೌರಮ್ಮ ಎಂಬ ಗರ್ಭಿಣಿ ಹೆಂಗಸನ್ನೂ ಸೇರಿಸಿ ಕೆಲವರು ಸತ್ತಿದ್ದಾರೆ, ಹಲವರು ಗಾಯಗೊಂಡಿದ್ದಾರೆ ಎಂದು ಸುದ್ದಿ ಹರಡಿತು.

ಆ ಸುದ್ದಿ ವಿಚಿತ್ರ ರೀತಿಯಲ್ಲಿ ಬೆಂಗಳೂರಿಗೆ ಬಂತು. ಗುಡಿಬಂಡೆಯ ಶ್ರೀ ರಾಮರಾವ್ ಸತ್ಯಾಗ್ರಹ ನಡೆಯುವ ಸ್ಥಳಗಳಿಗೆ ಹೋಗಿ ಬಿಡಾರ ಮಾಡಿ, ಅನಾಹುತ ಸಂಭವಿಸಿದಾಗ, ವೈದ್ಯ ಸಹಾಯಮಾಡುತ್ತಿದ್ದರು. ಅಂಥ ಸಂದರ್ಭ ಗಳಲ್ಲಿ ನೋವಿಗೆ ತುತ್ತಾದವರ ಬಗೆಗೆ ಅಧಿಕೃತವಾಗಿ ವರದಿ ಕೊಡುತ್ತಾರೆಂದು ಹೆಸರಾಗಿದ್ದರು. ಅವರು ವಿದುರಾಶ್ವತ್ಥಕ್ಕೆ ಪ್ರತ್ಯಕ್ಷವಾಗಿ ಹೋಗಿ ಸತ್ತವರನ್ನು, ಗಾಯಗೊಂಡವರನ್ನು ಕಂಡು ಅಧಿಕೃತವಾಗಿ ಒಂದು ವರದಿಯನ್ನು ತಯಾರಿಸಿ ಅದನ್ನು 'ಸರಿಯಾದ ಮೂಲಕ್ಕೆ ತಲುಪಿಸು' ಎಂದು ಹೇಳಿ ಶ್ರೀ ರುಮಾಲೆ ಚನ್ನಬಸವಯ್ಯನವರಿಗೆ ಕೊಟ್ಟರು.

ಅದನ್ನು ತೆಗೆದುಕೊಂಡು ಶ್ರೀ ಚೆನ್ನಬಸವಯ್ಯನವರು ಹಿಂದೂಪುರದಿಂದ ಬರುವ ರೈಲಿನಲ್ಲಿ ಶ್ರೀ ಟಿ. ರಾಮಾಚಾರ್ಯರ ಜೊತೆಯಲ್ಲಿ ಬೆಂಗಳೂರಿಗೆ ತಲುಪಿ ದರು. ಸುದ್ದಿಗಾಗಿ ಹಿಂದು ಪತ್ರಿಕೆಯ ಪ್ರತಿನಿಧಿ ಶ್ರೀ ವಿ. ಎಸ್. ಸಂಜೀವರಾವ್, ಟೈಮ್ಸ್ ಆಫ್ ಇಂಡಿಯಾ ಪತ್ರಿಕೆಯ ಪ್ರತಿನಿಧಿ ಶ್ರೀ ನಂಜುಂಡರಾವ್ ಮೊದಲಾದ ವರು ಕಾದಿದ್ದರು. ಶ್ರೀ ಚನ್ನಬಸವಯ್ಯನವರು ಶ್ರೀ ನಂಜುಂಡರಾಯರನ್ನು ಪ್ರತ್ಯೇಕವಾಗಿ ಉಡುಪಿ ಹೋಟಲಿಗೆ ಕರೆದುಕೊಂಡು ಹೋಗಿ ರಹಸ್ಯವಾಗಿ ವಿದುರಾಶ್ವತ್ಥದ ವರದಿಯನ್ನು ಕೊಟ್ಟು "ಯಾರಿಗೂ ತಿಳಿಸಬೇಡ, ಇದನ್ನು ಪೂರ್ತಿ ಉಪಯೋಗಿಸಿಕೋ" ಅಂದರು. ಶ್ರೀ ನಂಜುಂಡರಾವ್ ಪಿ.ಟಿ.ಐ. ಪ್ರತಿನಿಧಿಗಳೂ ಆಗಿದ್ದರು. ಅವರು ಸುದ್ದಿಯನ್ನು ಪತ್ರಿಕೆಗಳಿಗೆ ತಿಳಿಸುವ ಮೊದಲು ಪಿ.ಟಿ.ಐ. ಗೆ

ಫ್ಲಾಶ್ ಮಾಡಿದರು. ಅವರು ಬಿ.ಬಿ.ಸಿ. ಗೆ ಫ್ಲಾಶ್ ಮಾಡಿದರು. ಒಂದೆರಡು ಗಂಟೆಗಳಲ್ಲಿ ವಿದುರಾಶ್ವತ್ಥ ಹತ್ಯಾಕಾಂಡದ ಸುದ್ದಿ ಬಿ.ಸಿ.ಸಿ. ಯಲ್ಲಿ ಪ್ರಸಾರ ವಾಯಿತು. ವಿದುರಾಶ್ವತ್ಥದ ಘಟನೆ ಪ್ರಪಂಚದ ಸುದ್ದಿಯಾಯಿತು. ವಿದುರಾಶ್ವತ್ಥದಲ್ಲಿ 32 ಜನ ಸತ್ತು 48 ಜನ ಗಾಯಗೊಂಡಿದ್ದಾರೆ ಎಂದು ಸುದ್ದಿ ಹರಡಿತು.

ಬೆಳಗ್ಗೆ ನೋಡಿದರೆ ಎಲ್ಲಾ ಪತ್ರಿಕೆಗಳಲ್ಲೂ ದಪ್ಪ ದಪ್ಪ ಅಕ್ಷರಗಳಲ್ಲಿ ವಿದುರಾಶ್ವತ್ಥದ ಹತ್ಯಾಕಾಂಡ ಪ್ರಕಟವಾಗಿದೆ! ಭಾರತವೆಲ್ಲಾ ಈ ಕಡೆಗೆ ನೋಡಿತು. ರಾಮರಾಜ್ಯವೆಂದು ಮೈಸೂರನ್ನು ಕರೆದಿದ್ದ ಮಹಾತ್ಮ ಗಾಂಧೀಜಿ ಯವರಿಗೂ ಹತ್ಯಾಕಾಂಡವನ್ನು ಕೇಳಿ ಬೇಸರವಾಯಿತು. ಪೋಲೀಸರ ದಬ್ಬಾಳಿಕೆ ಯನ್ನು ಸರಕಾರದ ಅಮಾನುಷ ಧೋರಣೆಯನ್ನು ಎಲ್ಲರೂ ಟೀಕಿಸುವುದಕ್ಕೆ ಮೊದಲು ಮಾಡಿದರು. ಸರಕಾರಕ್ಕೆ ಜನರ ವಿರೋಧ ಹೆಚ್ಚಾಯಿತು. ಮೈಸೂರು ಸರಕಾರ ಈ ಹತ್ಯಾಕಾಂಡದಿಂದ ತತ್ತರಿಸಿಹೋಯಿತು. ದಿವಾನ್ ಮಿರ್ಜಾ ಸಾಹೇಬರ ಜಂಘಾಬಲವೇ ಉಡುಗಿಹೋಯಿತು. ವಿಚಾರಣೆಗಾಗಿ ಒತ್ತಾಯ ಗಳು ಹೆಚ್ಚಾದುವು.

ಮೈಸೂರು ಕಾಂಗ್ರೆಸ್ ಒಂದು ವಿಚಾರಣಾ ಸಮಿತಿಯನ್ನು ನೇಮಿಸಿತು. ಶ್ರೀ ಎಂ. ಲಕ್ಷ್ಮೀನಾರಾಯಣರಾವ್ ಸಮಿತಿಯ ಅಧ್ಯಕ್ಷರು. ಶ್ರೀ ಎಚ್. ಕೆ. ವೀರಣ್ಣಗೌಡರು ಕಾರ್ಯದರ್ಶಿ. ಶ್ರೀ ಎಂ. ಎ. ದೊರೆಸ್ವಾಮಿ ಅಯ್ಯಂಗಾರ್, ಶ್ರೀ ಎಸ್. ನಿಜಲಿಂಗಪ್ಪ, ಶ್ರೀ ಟಿ. ಸತ್ಯನಾರಾಯಣ ಶೆಟ್ಟರು ಸಮಿತಿಯ ಸದಸ್ಯರು. ಸರಕಾರ ವಿಚಾರಣೆ ನಡೆಸಲು ತನ್ನ ಪರವಾಗಿ ಮದರಾಸಿನ ಜಸ್ಟೀಸ್ ಶ್ರೀ ರಮೇಶಂ ಅವರನ್ನು ನೇಮಿಸಿತು. ಮಹಾತ್ಮ ಗಾಂಧೀಜಿಯವರು ನಿಜಾಂಶ ವನ್ನು ತಿಳಿಯುವುದಕ್ಕೋಸ್ಕರ ಸರ್ದಾರ್ ವಲ್ಲಭಾಯಿ ಪಟೇಲರನ್ನೂ ಆಚಾರ್ಯ ಕೃಪಲಾನಿಯವರನ್ನೂ ಕಳಿಸಿಕೊಟ್ಟರು. ವಿದುರಾಶ್ವತ್ಥದ ಸುತ್ತಮುತ್ತಲ ಹಳ್ಳಿ ಗಳಲ್ಲಿ ಮತ್ತು ಹಳ್ಳಿಗರಲ್ಲಿ ವಿಚಾರಣೆ ನಡೆದು ವರದಿಗಳು ಸಿದ್ಧವಾದುವು. ಸರಕಾರದ ಪರವಾಗಿದ್ದ ಶ್ರೀ ರಮೇಶಂ ವರದಿ ಟೀಕೆಗೆ ಒಳಗಾಯಿತು. ಮೈಸೂರು ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಶ್ರೀ ರಮೇಶಂ ವರದಿಯನ್ನು ಉಗ್ರ ವಾಗಿ ಖಂಡಿಸಿತು. ಉಳಿದಂತೆ 5 ಜನ ಸತ್ತದ್ದು ಎಂದು ತೀರ್ಮಾನವಾಯಿತು. ಗಾಯಗೊಂಡವರು ಲೆಕ್ಕಕ್ಕೆ ಸಿಗಲಿಲ್ಲ. ಶ್ರೀಮತಿ ಗೌರಮ್ಮ ಎಂಬ ಗರ್ಭಿಣಿ ಸತ್ತ ಸುದ್ದಿ ಪಾದ ವಿವಾದಕ್ಕೆ ಎಡೆಕೊಟ್ಟಿತು. ಕೆಲವರು ಶ್ರೀಮತಿ ಗೌರಮ್ಮ ಸತ್ತಿದ್ದು ನಿಜ, ಪೋಲೀಸರು ಶವವನ್ನು ರಾತ್ರಿಯಲ್ಲಿ ಪೆಟ್ರೋಲ್‌ನಿಂದು ಸುಟ್ಟುಬಿಟ್ಟರು ಎಂದರು. ಸರಕಾರವನ್ನು ಹೆದರಿಸಲು ಸತ್ಯಾಗ್ರಹಿಗಳು ಕಲ್ಪಿಸಿದ ಬೆದರುಬೊಂಬೆ

'ಗೌರಮ್ಮ' ಎಂಬುದು ಕೆಲವರ ಅಭಿಪ್ರಾಯ. ಒಟ್ಟಿನಲ್ಲಿ ಗೌರಮ್ಮನ ಸಾವು ರಹಸ್ಯವಾಗಿ ಉಳಿಯಿತು. ಇಂದಿಗೂ ಆ ರಹಸ್ಯ ಹಾಗೇ ಉಳಿದಿದೆ.

26-4-1938 ರಂದು ಶಾಸಕರಾದ ಶ್ರೀ ಟಿ. ರಾಮಚಾರ್ಯರು ಪತ್ರಿಕೆಗಳಿಗೆ ನೀಡಿದ ಹೇಳಿಕೆ ಅಧಿಕೃತವಾಯಿತು. ಅದು ಹೀಗಿದೆ: "ತ್ರಿವರ್ಣ ಧ್ವಜವನ್ನು ಹಿಡಿದಿದ್ದ ಮೂವರು ಸ್ವಯಂ ಸೇವಕರ ಬಳಿಗೆ ಅಮಲ್ದಾರರು ಮ್ಯಾಜಿಸ್ಟ್ರೇಟರು ಬಂದು 'ಕಾನೂನಿಗೆ ವಿರುದ್ಧವಾಗಿ ಧ್ವಜ ಪ್ರದರ್ಶನ ಮಾಡಿದ್ದಕ್ಕಾಗಿ ನಿಮ್ಮನ್ನು ಬಂಧಿಸಲಾಗಿದೆ" ಎಂದರು. ಮೂವರೂ ಪೋಲೀಸಿನವರ ವಶವಾದರು. ತ್ರಿವರ್ಣ ಧ್ವಜ ಸಮೇತ ದಸ್ತಗಿರಿ ಮಾಡಿರುವುದರಿಂದ ಅವುಗಳೊಂದಿಗೇ ಬರಬೇಕೆಂದರು. ನಾನು ಮಧ್ಯೆ ಬಂದು ತ್ರಿವರ್ಣ ಧ್ವಜದೊಂದಿಗೆ ಸತ್ಯಾಗ್ರಹಿಗಳು ಪೋಲೀಸಿನವರ ವಶವಾಗಬಹುದೆಂದು ಹೇಳಲಾಗಿ ಧ್ವಜ ಸಮೇತ ಮೂವರ ದಸ್ತಗಿರಿಯಾಯಿತು. ಅನಂತರ ಅನೇಕರು ವಾಕ್ ಸ್ವಾತಂತ್ರ್ಯವನ್ನು ಸ್ಥಾಪಿಸಲು ಕಾನೂನು ಭಂಗಕ್ಕೆ ತಯಾರಾಗಿದ್ದರು. ಅವರಲ್ಲಿ ಓರ್ವರು ಸರ್ಕಾರಿ ಅಧಿಕಾರಿಗಳು ಮುಂದೆ ಬಂದು 'ಇಂದಿಗೆ ಕಾನೂನು ಮುರಿಯುವವರನ್ನು ಸಾಕು' ಎಂದು ಹೇಳಿರೆಂದು ನನಗೆ ಮನವಿ ಮಾಡಿಕೊಂಡರು. ಆ ದಿನ ಕಾರ್ಯವು ಯಶಸ್ವಿಯಾಗಿ ಜರುಗಿದ್ದರಿಂದ ಶಾಂತಿ ವಾತಾವರಣವನ್ನು ಕಾಪಾಡಲು ನಾನು ಅಧಿಕಾರಿಗಳೊಂದಿಗೆ ಸಹಕರಿಸಿ ಆ ದಿನದ ಕಾನೂನು ಭಂಗದ ಕಾರ್ಯಕ್ರಮವನ್ನು ಪೂರೈಸಿದೆ. ಅಧಿಕಾರಿಗಳು 'ಸಭೆಯನ್ನು ಚದುರಿಸಿರಿ' ಎಂದರು. ನಾವು ಚದುರಿಸಲು ಉಪಕ್ರಮಿಸಿದೆವು. ಆಗ ಸರ್ಕಾರಿ ಅಧಿಕಾರಿಗಳು ಮುಂದೆ ಬಂದು 'ಕಾಂಗ್ರೆಸ್ ಪ್ರಮುಖರುಗಳೆಲ್ಲ ಸ್ಥಾನವನ್ನು ಬಿಟ್ಟು ಹೊರಟು ಹೋದರೆ ಗುಂಪು ತಾನಾಗಿಯೇ ಜರುಗುವುದು ; ಆದ್ದರಿಂದ ನಾವು ಹೊರಟು ಹೋಗಬೇಕೆಂದು ಕೇಳಿಕೊಂಡರು. (ತಾವೂ) ಹೊರಟು ಹೋಗುವುದಾಗಿ ಭರವಸೆ ಇತ್ತರು. ಇವರು ಭರವಸೆ ಕೊಟ್ಟ ನಂತರ ನಾನು ಕಾಂಗ್ರೆಸ್ ಕೆಲಸಗಾರರೊಂದಿಗೆ ನದಿಯ ಆಚೆಯ ದಡದ ಕಡೆಗೆ ಹೊರಟೆ. ಅನೇಕರು ನನ್ನನ್ನು ಹಿಂಬಾಲಿಸುತ್ತಿದ್ದರು. ಮಧ್ಯೆ ಸಭೆಯಲ್ಲಿ ಮೂವರು ರಾಷ್ಟ್ರ ಧ್ವಜಗಳವರಿದ್ದರಾಗಿ ಅವರುಗಳನ್ನು ಕರೆತರಲು ಜವಾನರಿಗೆ ಆಜ್ಞಾಪಿಸಿ ಮುಂದೆ ಹೊರಟು ಸ್ಟೇಷನ್ನಿನ ಹಾದಿಯಲ್ಲಿ ಇವರ ಬರುವಿಕೆಗಾಗಿ ಇತರರೊಂದಿಗೆ ಕುಳಿತಿದ್ದೆ. 30 ನಿಮಿಷಗಳ ನಂತರ ಗುಂಡಿನ ಶಬ್ದ ಕೇಳಿಬಂದಿತು."

ಈ ಹೇಳಿಕೆಯಿಂದ ತಪ್ಪು ಸತ್ಯಾಗ್ರಹಿಗಳದಲ್ಲ ಪೋಲೀಸ್ ಅಧಿಕಾರಿಗಳದು ಎಂದು ಸ್ಪಷ್ಟವಾಗುತ್ತದೆ. ತೌಲನಿಕವಾಗಿ ನೋಡಿದರೆ ಶಿವಪುರದಲ್ಲಿದ್ದ ಜನ ಸ್ತೋಮ, ಗಲಾಟೆಯ ಪ್ರಸಂಗಗಳು ವಿದುರಾಶ್ವತ್ಥದಲ್ಲಿ ಇರಲಿಲ್ಲ. ಆದರೆ ಪೋಲೀಸ್ ಅಧಿಕಾರಿಗಳಿಗೆ ಶಿವಪುರದಲ್ಲಿದ್ದ ತಾಳ್ಮೆ, ವಿವೇಚನೆ ಇಲ್ಲಿ ಇರಲಿಲ್ಲ.

ಸತ್ತವರ ಸಂಖ್ಯೆ ಐದೋ, ಏಳೋ ಮೂವತ್ತೆರಡೋ ಎಂಬುದು ಮುಖ್ಯವಲ್ಲ. ಒಂದೇ ಸಾವು ಸಂಭವಿಸಿದರೂ ಅದು ಘೋರವೇ. ಸಂಬಂಧವಿಲ್ಲದ ಯಾತ್ರಿಕರ ಮೇಲೆ ಗುಂಡು ಹಾರಿಸಿದ್ದನ್ನು ಯಾರೂ ಒಪ್ಪಲಾರರು. ಇದರಿಂದಾಗಿ ಮೈಸೂರು ಸಂಸ್ಥಾನದಲ್ಲಿ ಕಾಂಗ್ರೆಸ್ ಚಳುವಳಿ ಮತ್ತಷ್ಟು ಜೋರಾಯಿತು. ಸರಕಾರ ಮತ್ತೆ ಮತ್ತೆ ಸೋಲುವ ಪರಿಸ್ಥಿತಿ ಉಂಟಾಯಿತು.

ವಿದುರಾಶ್ವತ್ಥದ ಹತ್ಯಾಕಾಂಡದಿಂದ ತಲ್ಲಣಗೊಂಡ ಮಹಾತ್ಮ ಗಾಂಧೀಜಿಯವರು 29-4-1938 ರಂದು ಬೊಂಬಾಯಿಯಿಂದ ಒಂದು ಸಂದೇಶವನ್ನು ಹೊರಡಿಸಿದರು. ಅದರ ಪೂರ್ಣ ಪಾಠ ಹೀಗಿದೆ :

ಮಹಾತ್ಮಾ ಗಾಂಧಿಯವರ ಸಂದೇಶ

"ಸರ್ ಮಿರ್ಜಾ ಇಸ್ಮಾಯಿಲ್‌ರವರೊಡನೆ ನನಗೆ ಸ್ನೇಹವುಂಟು. ಮೈಸೂರಿನಲ್ಲಿ ಆಡಳಿತ ವಿಧಾನವನ್ನು ಇನ್ನೂ ಉದಾರ ದೃಷ್ಟಿಯಿಂದ ನಡೆಸಲು ಅವರು ಉತ್ಸುಕರಾಗಿದ್ದಾರೆಂಬುದೂ ನನಗೆ ಗೊತ್ತು. ಸ್ನೇಹಿತರು ಕೊಡುವ ಸಲಹೆ ಸೂಚನೆಗಳನ್ನು ಸ್ವೀಕರಿಸಲು ಅವರು ಸಿದ್ಧರಾಗಿದ್ದಾರೆಂಬುದೂ ನನಗೆ ಗೊತ್ತುಂಟು. ಮೈಸೂರಿನಲ್ಲಿ ನಡೆದ ದುರಂತ ಪ್ರಕರಣವು ಸರ್ ಮಿರ್ಜಾರವರನ್ನು ಶೋಕಸಾಗರದಲ್ಲಿ ಮುಳುಗಿಸಿದೆಯೆಂಬ ವಿಚಾರವೂ ನನಗೆ ಮನವರಿಕೆಯಾಗಿದೆ.

"ಮೈಸೂರು ಸರಕಾರವು ಹೊರಡಿಸಿದ ಪ್ರಕಟನೆಯನ್ನು ನಾನು ಓದಿದೆನು. ಅದು ನನಗೆ ತೃಪ್ತಿಕರವಾಗಿಲ್ಲ. ಆದರೆ ನಾನೀಗ ಕೊಡಲಿರುವ ಸಲಹೆಗೆ, ಆ ದುರಂತ ಪ್ರಕರಣಕ್ಕೆ ಸಂಬಂಧಿಸಿದ ವಾಸ್ತವಾಂಶಗಳನ್ನು ನಾನು ತಿಳಿದುಕೊಳ್ಳಲೇ ಬೇಕೆಂಬ ಅಗತ್ಯವಿಲ್ಲ. ಮಾರ್ಗದರ್ಶಿತ್ವಕ್ಕಾಗಿ ಮೈಸೂರು ಪ್ರಜೆಗಳಿಂದ ನನ್ನಲ್ಲಿಗೆ ಬರುತ್ತಿರುವ ಜರೂರು ಪತ್ರಗಳು, ನಿಯೋಗಗೋಷ್ಠಿಗಳು, ತಂತೀ ವರ್ತಮಾನಗಳು ಇವುಗಳನ್ನು ನೋಡಿದರೆ, ಮತ್ತು ನನಗೆ ಗೊತ್ತಿರುವ ಅನೇಕ ಮಂದಿ ಮೈಸೂರಿನ ಕೆಲಸಗಾರರು ತಮ್ಮ ಸಮಸ್ಯಾ ಪರಿಹಾರಕ್ಕಾಗಿ ನನ್ನ ಕಡೆ ತಿರುಗಿರುವುದನ್ನು ನೋಡಿದರೆ, ಈ ವಿಷಯ ಪರಿಸ್ಥಿತಿಯಲ್ಲಿ ಕೇವಲ ಪತ್ರಗಳನ್ನೋ ಅಥವಾ ತಂತೀ ವರ್ತಮಾನಗಳನ್ನೋ ಕಳುಹಿಸಿ ನಾನು ತೆಪ್ಪಗೆ ಕೂಡುವುದು ಸರಿಯಲ್ಲ.

"ಈ ಸಂದರ್ಭದಲ್ಲಿ ಒಂದೆರಡು ವಿಷಯಗಳು ಪ್ರಧಾನವಾಗಿ ಎದ್ದು ಕಾಣುತ್ತವೆ. ನಿಶ್ಶಸ್ತ್ರರಾದ ಜನಸಮುದಾಯದ ಮೇಲೆ ಗುಂಡುಹಾರಿಸಲ್ಪಟ್ಟಿತು. ಇದರ ಫಲವಾಗಿ ಅನೇಕರು ಸತ್ತರು ; ಬಹುಮಂದಿಗೆ ಗಾಯಗಳಾಯಿತು. ಈ ಬಗ್ಗೆ ನನಗೆ ಸಾರ್ವಜನಿಕ ವರದಿಗಳು ಬಂದಿವೆ. ಆ ವರದಿಗಳಿಗೆ ವಿರೋಧವಾಗಿ, ಒಂದು ವೇಳೆ ಜನಜಂಗುಳಿಯು ಉದ್ವಿಗ್ನತೆಯಿಂದ ಕೂಡಿತ್ತೆಂದೇ ಇಟ್ಟು

ಕೊಳ್ಳೋಣ. ಗುಂಡುಹಾರಿಸಿದುದು ನ್ಯಾಯಸಮ್ಮತವೇ ಎಂಬುದನ್ನು ನಾವು ಖಂಡಿತವಾಗಿ ಹೇಳಲಾಗುವುದಿಲ್ಲ. ಯಾವುದು ಧರ್ಮ ಎಂಬುದನ್ನು ಅರ್ಥ ವಿವರಣೆ ಮಾಡುವ ನ್ಯಾಯಸೂತ್ರವೊಂದೂ ಇಲ್ಲ. ಅದು ಯಾವಾಗಲೂ ಅಭಿಪ್ರಾಯಗಳ ಮಾತೇ ಆಗಿದೆ. ಆದ್ದರಿಂದ ನಾನು ಮೈಸೂರು ಸರಕಾರಕ್ಕೆ ಸಲಹೆ ಕೊಡಲು ಬಯಸುವುದೇನೆಂದರೆ, ಈ ದುರಂತ ಪ್ರಕರಣದ ಬಗ್ಗೆ ನಡೆಸಲಾಗುವ ವಿಚಾರಣೆಯು ಎಷ್ಟೇ ನಿಷ್ಪಕ್ಷಪಾತವಾಗಿರಲಿ, ಪ್ರಜಾಸಮುದಾಯಕ್ಕೆ ಅದು ತೃಪ್ತಿಯುಂಟುಮಾಡಲಾರದು. ಮೈಸೂರಿನಲ್ಲಿ ಈಗ ರಾಷ್ಟ್ರಧ್ವಜದ ಸಂಬಂಧವಾಗಿ ನಡೆಯುತ್ತಿರುವ ಪ್ರದರ್ಶನವು ಕಾಲಾನುಗುಣವಾದ ಮನೋಭಾವನೆಯ ಒಂದು ಚಿಹ್ನೆಯಾಗಿದೆ.

"ಮೈಸೂರಿನಲ್ಲಿ ಈಗ ಮಹತ್ತರವಾಗಿ ಉದ್ಭವಿಸಿರುವ ಜನಜಾಗೃತಿಯು ಈ ಮೊದಲು ನನಗೆ ಮನವರಿಕೆಯಾಗಿರಲಿಲ್ಲವೆಂಬುದನ್ನು ನಾನು ಒಪ್ಪಿಕೊಳ್ಳಬೇಕಾಗಿದೆ. ಅದು ನನಗೆ ಸಂತೋಷವುಂಟುಮಾಡಿದೆ : ಮೈಸೂರು ಅಧಿಕಾರಿ ವರ್ಗಕ್ಕೂ ಹಾಗೆಯೇ ಸಂತೋಷವಾಗಬೇಕು. ಆದ್ದರಿಂದ ನಾನು ಶ್ರೀಮನ್ಮಹಾರಾಜರವರಿಗೂ ಮತ್ತು ಅವರ ಸಲಹೆಗಾರರಾದ ಸರ್ ಮಿರ್ಜಾರವರಿಗೂ ಸೂಚಿಸಬಯಸುವ ಪರಿಹಾರೋಪಾಯವೇನೆಂದರೆ, ಈಗ ಮೈಸೂರಿನಲ್ಲಿರುವ ನಿರಂಕುಶ ಪ್ರಭುತ್ವವನ್ನು ತಪ್ಪಿಸಿ, ಪ್ರಜಾಪ್ರತಿನಿಧಿಗಳನ್ನು ರಾಜ್ಯಾಡಳಿತಕ್ಕೆ ಜವಾಬ್ದಾರರನ್ನಾಗಿ ಮಾಡಬೇಕು. ಮೈಸೂರಿನಲ್ಲಿ ಶಾಂತಿ ನೆಲೆಸಬೇಕಾದರೆ ಸರಕಾರದ ಆಡಳಿತದಲ್ಲಿ ಪ್ರಜಾಜವಾಬ್ದಾರಿಯು ಅತಿಶಯವಾಗಿ ಹೆಚ್ಚಾಗಬೇಕು. ಮೈಸೂರು ಸಂಸ್ಥಾನವು ಹಿಂದುಳಿದಿರುವುದರಿಂದ ಸಂಸ್ಥಾನದಲ್ಲಿ ಪ್ರಜಾಜವಾಬ್ದಾರಿಯ ಸಸಿಯು ಬೆಳೆಯಲು ನಿಧಾನವಾಗಬಹುದೆಂದು ಹೇಳಲಾಗಿದೆ. ಈ ತತ್ವವನ್ನು ನಾನು ಯಾವಾಗಲೂ ಒಪ್ಪಿಲ್ಲ. ಸ್ವಾಭಾವಿಕವಾದ ವಿಶೇಷಾನುಕೂಲಗಳು ದೇಶೀಯ ಸಂಸ್ಥಾನಗಳಿಗಿವೆ. ಆದ್ದರಿಂದ ಸಂಸ್ಥಾನಗಳು, ಒಂದು ನಿರ್ಬಂಧಕ್ಕೆ ಸಿಕ್ಕದ ಬ್ರಿಟಿಷ್ ಭಾರತಕ್ಕಿಂತ ಹೆಚ್ಚಾದ ಪ್ರಗತಿಯನ್ನು ತೋರಿಸಬೇಕೆಂದು ನಾನು ನಿರೀಕ್ಷಿಸುತ್ತೇನೆ.

"ಮೈಸೂರಿನ ನಾಯಕರುಗಳಿಗೂ ಮತ್ತು ಜನತೆಗೂ ನಾನು ಹೇಳುವುದಿಷ್ಟೆ ; ಏನೆಂದರೆ ಏನೂ ತಿಳಿಯದ ಜನಕ್ಕೆ ಸಂಭವಿಸಿದ ಈ ಅಪಮೃತ್ಯು ಮತ್ತು ಅಪಘಾತಗಳು ಪ್ರಜಾಸ್ವಾತಂತ್ರ್ಯವನ್ನು ಪಡೆಯಲು ಸಲ್ಲಿಸಬೇಕಾಗಿರುವ ಅಲ್ಪ ಕಾಣಿಕೆ. ಈ ಅಪಘಾತದ ವಿಷಯದಲ್ಲಿ ವಿಚಾರಣೆ ನಡೆಯಬಹುದು ; ಸತ್ತವರ ಉತ್ತರಾಧಿಕಾರಿಗಳಿಗೂ ಗಾಯಗೊಂಡವರಿಗೂ ಪರಿಹಾರ ದ್ರವ್ಯ ಸಿಕ್ಕಬಹುದು. ಆದರೆ ನಾನೇ ಮೈಸೂರಿನವನಾಗಿದ್ದ ಪಕ್ಷದಲ್ಲಿ ವೈಯಕ್ತಿಕವಾದ ಪ್ರತಿಫಲ ಮತ್ತು ಲಾಭಗಳಿಗಾಗಿ ನಾನು ಆಶಿಸುತ್ತಿರಲಿಲ್ಲ. ನಾನಾಗಿದ್ದಲ್ಲಿ ಈ ಬಲಿದಾನಗಳನ್ನೇ ಸ್ವಾತಂತ್ರ್ಯ

ಸಾಧನಾ ವಸ್ತುವನ್ನಾಗಿ ಮಾಡಿಕೊಳ್ಳುತ್ತಿದ್ದೆ. ಜಯವು ಕರಗತವಾಗಬೇಕಾದರೆ, ಎಂಥ ವಿಷಮ ಪರಿಸ್ಥಿತಿಯಲ್ಲೇ ಆಗಲಿ ಅಹಿಂಸಾ ಮನಃಪ್ರವೃತ್ತಿ ಮತ್ತು ಶಾಂತ ವಾತಾವರಣಗಳನ್ನು ತಾವು ಕಾಪಾಡಿಕೊಳ್ಳಬೇಕೆಂಬುದನ್ನು ಮೈಸೂರಿನ ಜನತೆ ಮರೆಯಲಾಗದು.

"ಮೈಸೂರಿನ ಪ್ರಜಾಕೋಟಿಯು ಆದರ್ಶನೀಯವಾದ ಅಹಿಂಸಾಮನೋಧರ್ಮದಿಂದ ನಡೆಯುತ್ತಿರುವರೆಂದೂ, ಜನತೆಯು ಗುಂಡಿನೇಟಿಗೆ ಧೈರ್ಯದಿಂದ ಎದೆಕೊಟ್ಟು ನೋವನ್ನು ಸಹಿಸಿತೆಂದೂ ನನಗೆ ಸುದ್ದಿ ಬಂದಿದೆ. ಇದು ನಿಜವೆಂದು ನಿರ್ಧಾರವಾದಲ್ಲಿ, ಮೈಸೂರಿನಲ್ಲಾದ ಪ್ರಾಣ ನಷ್ಟಕ್ಕೂ, ಸ್ವಾತಂತ್ರ್ಯ ಸಾಧನೆಗಾಗಿ ಜನರು ತೆತ್ತ ಅತ್ಯಗತ್ಯವಾದ ಈ ಕಾಣಿಕೆಗೂ ನಾನು ತುಂಬ ಹರ್ಷಿಸುತ್ತೇನೆ."

ವಿದುರಾಶ್ವತ್ಥ ಹತ್ಯಾಕಾಂಡದಿಂದ ಮಹಾತ್ಮ ಗಾಂಧಿಯವರೇ ಮೊದಲಾದ ರಾಷ್ಟ್ರನಾಯಕರು ಮೈಸೂರು ಸಂಸ್ಥಾನದ ಸಮಸ್ಯೆ ಮತ್ತು ಮೈಸೂರು ಸತ್ಯಾಗ್ರಹಿಗಳ ಬಗೆಗೆ ಹೆಚ್ಚು ಆಸಕ್ತಿ ವಹಿಸುವಂತಾಯಿತು. ಮೈಸೂರು ಸತ್ಯಾಗ್ರಹಿಗಳ ಬಗೆಗೆ ಹಿಂದಿಗಿಂತ ಹೆಚ್ಚಿನ ಭರವಸೆ ಉಂಟಾಯಿತು. ಎಲ್ಲ ನಾಯಕರು ನೇರವಾಗಿ ಮೈಸೂರಿನ ಸಮಸ್ಯೆಗೆ ತಲೆಹಾಕಿದರು; ಮೈಸೂರು ಸರಕಾರಕ್ಕೆ ತಮ್ಮ ಅಭಿಪ್ರಾಯಗಳನ್ನು ಸ್ಪಷ್ಟಪಡಿಸಿದರು. ವಿದುರಾಶ್ವತ್ಥದ ದುರಂತದ ಬಗೆಗೆ ದೇಶೀಯ ಸಂಸ್ಥಾನಗಳ ಪ್ರಜಾ ಸಮ್ಮೇಳನದ ಅಧ್ಯಕ್ಷರಾದ ಶ್ರೀ ಪಟ್ಟಾಭಿಸೀತಾರಾಮಯ್ಯನವರು ಹೀಗೆ ಹೇಳಿಕೆಯನ್ನು ನೀಡಿದರು :

ಡಾ|| ಪಟ್ಟಾಭಿ ಸೀತಾರಾಮಯ್ಯನವರ ಹೇಳಿಕೆ

"ಈಗ ವಿದುರಾಶ್ವತ್ಥದಲ್ಲಿ ನಡೆದ ದುರಂತ ಪ್ರಕರಣವು ದಕ್ಷಿಣ ಹಿಂದೂಸ್ಥಾನದ ಆಧುನಿಕ ಇತಿಹಾಸದಲ್ಲಿ ಬಹಳ ಪ್ರಾಮುಖ್ಯವಾದ ಘಟನೆಯಾಗಿದೆ; ಅಲ್ಲದೆ ಇದು ಜಲಿಯನ್ವಾಲಾಬಾಗಿನ ಘಟನೆಯನ್ನು ಸ್ಮೃತಿಪಥಕ್ಕೆ ತರುತ್ತದೆ. ಗುಂಡಿನೇಟಿನ ಪ್ರಕರಣವನ್ನು ನ್ಯಾಯಸಮ್ಮತವಾದುದೆಂದು ಸಿದ್ಧಾಂತಮಾಡುವುದಕ್ಕಾಗಿ ಏನೇ ಹೇಳಿದರೂ ಈ ದುರಂತ ಪ್ರಕರಣಕ್ಕೆ ಕಾರಣಕರ್ತರಾದವರು, ಆತ್ಮಸಾಕ್ಷಿಯಾಗಿ ದೇವರ ಮುಂದೆ ನಿಂತು ಸಮಂಜಸವಾಗಿ ಉತ್ತರ ಹೇಳಬೇಕಾಗಿದೆ.

"ಸಂಸ್ಥಾನದ ಕಾಂಗ್ರೆಸ್ ಕೆಲಸಗಾರರು ತಮ್ಮ ಕಾರ್ಯದಲ್ಲಿ ಬಹಳ ಮುಂದುವರಿಯುತ್ತಿದ್ದಾರೆಂದು ತಿಳಿದು, ಅವರಿಗೆ ಬುದ್ಧಿ ಕಲಿಸಬೇಕೆಂದು ಈಚೆಗೆ ನಡೆದ ಅಧಿಕಾರಿಗಳ ಸಮ್ಮೇಳನದಲ್ಲಿ ತೀರ್ಮಾನವಾಗಿದ್ದರೆ ಅದೇನು ಅಸಂಭವವಾಗಲಾರದು. ಮೈಸೂರು ಸರ್ಕಾರದವರೂ ಮೊನ್ನೆ ತಾನೆ ರಾಜಕೀಯ ಕೈದಿಗಳನ್ನೂ ಬಿಟ್ಟುದುದು ಕೆಲವು ಖಾಯಂ ಸರಕಾರಿ ಅಧಿಕಾರಿಗೆ ಅತೃಪ್ತಿಯಾಗಿರಬೇಕು.

ಹೀಗೆ ಅಸಂತುಷ್ಟಿಪಡತಕ್ಕವರು ಕೆಲವು ದಿನಗಳ ಹಿಂದೆ ಈ ಕಾಂಗ್ರೆಸ್ಸಿನವರನ್ನು ಕೈದು ಮಾಡಿದ್ದರು; ಆದರೆ ಇವರೆಲ್ಲರಿಗೂ ಮೇಲ್ಪಟ್ಟ ದಿವಾನರು ಅವರನ್ನು ಬಿಟ್ಟುಬಿಟ್ಟರು.

"ಕಳೆದ ಡಿಸೆಂಬರ್ ತಿಂಗಳಲ್ಲಿ ನಾನು ಮೈಸೂರಿನಲ್ಲಿ ಪ್ರವಾಸ ಮಾಡಿದಾಗ ಈಗಿನ ವಿದುರಾಶ್ವತ್ಥ ಪ್ರಕರಣಕ್ಕೆ ಸಂಬಂಧಪಟ್ಟ ಕೋಲಾರ ಜಿಲ್ಲಾಧಿಕಾರಿಗಳಾದ ಶ್ರೀ ಜಿ. ಅಪ್ಪಾಜಿಗೌಡರು, ಉದ್ರೇಕವಾದ ಭಾಷಣಗಳನ್ನು ಮಾಡಬಾರದೆಂದ ಶ್ರೀ ಚೆಂಗಲರಾಯರೆಡ್ಡಿಗಳ ಮೇಲೆ ಒಂದು ಪ್ರತಿಬಂಧಕಾಜ್ಞೆಯನ್ನು ಜಾರಿ ಮಾಡಿದರು. ಜಿಲ್ಲಾಧಿಕಾರಿಗಳು ಬಹಳ ಗಾಬರಿ ಸ್ವಭಾವದವರು. ಮೈಸೂರು ಸಂಸ್ಥಾನದ ನಮ್ಮ ಪ್ರವಾಸ ಕಾಲದಲ್ಲಿ ಕೋಲಾರ, ಕಾನಕಾನಹಳ್ಳಿ, ದೊಡ್ಡಬಳ್ಳಾಪುರ ಮತ್ತು ದಾವಣಗೆರೆಗಳಲ್ಲಿ ನಮ್ಮ ಮತ್ತು ಮೈಸೂರಿನ ಪ್ರಜೆಗಳ ಮೇಲೆ ಪ್ರತಿಬಂಧಕಾಜ್ಞೆಗಳು ಜಾರಿ ಮಾಡಲ್ಪಟ್ಟವು. ದಿವಾನರೊಡನೆ ಮಾಡಿದ ಭೇಟಿಯಲ್ಲಿ ಮೇಲ್ಕಂಡ ಸಮಾಚಾರವನ್ನು ಅವರಿಗೆ ತಿಳಿಸಲಾಗಿ ಅವರು ಅಧಿಕಾರಿಗಳು ತಮ್ಮ ಸಲಹೆ ಸೂಚನೆಗಳನ್ನು ಮಿತಿಮೀರಿ ವರ್ತಿಸುತ್ತಿರುವುದಕ್ಕಾಗಿ ಬಹಳ ಆಶ್ಚರ್ಯಗೊಂಡರು. ವಿದುರಾಶ್ವತ್ಥದಲ್ಲಿಯೂ ಸಹ ಇದೇ ರೀತಿಯೇ ಆಗಿರಬಹುದು.

"ಅಂತರ್ಮುಖಿಗಳಾಗಿ ಆತ್ಮಶುದ್ಧಿಯನ್ನು ಮಾಡಿಕೊಳ್ಳುವ ಕಾಲವು ಈಗ ಸರ್ ಮಿರ್ಜಾರವರಿಗೆ ಬಂದಿದೆ. ಅವರೇ ಸ್ವತಃ "ಇಲ್ಲವೆ ನಾನು ರಾಜ್ಯಭಾರ ಮಾಡಬೇಕು, ಅಥವಾ ಅಧಿಕಾರ ಬಿಟ್ಟು ಹೋಗಬೇಕು" ಎಂದು ಆಲೋಚನೆ ಮಾಡುತ್ತಿದ್ದಾರೆ. ಅಲ್ಲದೆ ಖಂಡಿತವಾಗಿ ಮುಂದೆಯೂ ರಾಜ್ಯಭಾರಮಾಡಲೇ ಬೇಕೆಂದು ಅವರು ತೀರ್ಮಾನಿಸಿದ್ದಾರೆ. ಹಾಗಾದರೆ ನಾಗರ ಕಲ್ಲುಗಳಲ್ಲದೆ ಬೇರೆ ಕಲ್ಲುಗಳಾಗಲಿ, ಮನೆಗಳಾಗಲಿ, ಹಳ್ಳಿಗಳಾಗಲಿ ಇಲ್ಲದ ವಿದುರಾಶ್ವತ್ಥದಲ್ಲಿ ನಡೆದ ಗುಂಡು ಹಾರಿಸಿದ ಪ್ರಕರಣದ ಜವಾಬ್ದಾರಿಯನ್ನು ಅವರು ತಮ್ಮ ತಲೆಯಮೇಲೆ ಹೊತ್ತುಕೊಳ್ಳಬೇಕು. ಹಾಗೆ ಅವರು ಮಾಡುವುದಾದರೆ ಜನಗಳಿಗೆ ಬುದ್ಧಿ ಕಲಿಸಬೇಕೆಂದು 1,600 ಸಲ ಗುಂಡನ್ನು ಹಾರಿಸಿದ ಜನರಲ್ ಡಯರ್ ಮತ್ತು ಸರ್ ಓ ಡಯರ್ ಇವರುಗಳ ಸ್ಥಾನವನ್ನೇ ತಾವು ಆಕ್ರಮಿಸಬೇಕಾಗಿ ಬರುತ್ತದೆ; ಏಕೆಂದರೆ ಇವರೂ ಸಹ ಜನಗಳಿಗೆ ಬುದ್ಧಿ ಕಲಿಸಬೇಕೆಂದು 92 ಸಲ ಗುಂಡನ್ನು ಹಾರಿಸಿರುತ್ತಾರೆ.

"ಮೈಸೂರಿನ ಚಳುವಳಿಯು ಬಹಳ ಸಮತೂಕವಾಗಿ ನಡೆಯುತ್ತಿದೆ. ಮೈಸೂರು ಕಾಂಗ್ರೆಸ್ಸಿನವರು ರಾಷ್ಟ್ರಧ್ವಜ ಮೊದಲುಗೊಂಡು, ಎಲ್ಲಾ ವಿಚಾರಗಳಲ್ಲಿಯೂ ಮಹಾತ್ಮಾ ಗಾಂಧಿಯವರ ಬುದ್ಧಿವಾದದಂತೆ ನಡೆಯುತ್ತಿದ್ದಾರೆಂದು

ವರ್ತಮಾನ ಪತ್ರಿಕೆಗಳಲ್ಲಿ ಪ್ರಕಟವಾಗಿದೆ. ಸುಧಾರಣಾ ಸಮಿತಿಯ ಸಂಗಡ ಅಸಹಕರಿಸುವ ವಿಚಾರದಲ್ಲಿಯೂ ಸಹ ಮೈಸೂರು ಕಾಂಗ್ರೆಸ್ಸಿನವರು ಗಾಂಧಿಯವರ ಸಲಹೆಯಂತೆಯೇ ನಡೆದಿರುತ್ತಾರೆ. ರಾಷ್ಟ್ರಧ್ವಜ ಸತ್ಯಾಗ್ರಹದಲ್ಲಿಯೂ ಸಹ ಅವರು ಬಹಳ ಶಾಂತರೀತಿಯಿಂದ ನಡೆದು ವಿಜಯಿಗಳಾಗಿದ್ದಾರೆ. ಸುವ್ಯವಸ್ಥಿತ ರೀತಿಯಿಂದಲೂ, ವಿಜಯದಿಂದಲೂ ಕೂಡಿ ಕೆಲಸ ಮಾಡುತ್ತಿರುವ ಅಹಿಂಸಾಯುತ ವಾದ ಚಳವಳಿಗಿಂತ ಇನ್ನಾವುದೂ ಅಧಿಕಾರಿಗಳನ್ನು ವಿಷಮಪರೀಕ್ಷೆಗೆ ಒಳಗು ಮಾಡಲಾರದು. ಈ ವಿಷಮ ಪರೀಕ್ಷೆಯಲ್ಲಿ ಉತ್ತೀರ್ಣರಾಗಬೇಕಾದರೆ ಈಗಿನ ಯುದ್ಧ ನೀತಿಯನ್ನು ಬದಲಾಯಿಸಬೇಕು. ಆದರೆ ಇದರಲ್ಲಿ ತೊಂದರೆಗೊಳಗಾದ ವರು ಯಾರು? ವಿದುರಾಶ್ವತ್ಥದಲ್ಲಿ ಗುಂಡನ್ನು ಹಾರಿಸಿ ಜನಗಳನ್ನು ಕೊಂದ ಜವಾಬ್ದಾರಿಯು, ಸರಕಾರದ ನೀತಿ ರೀತಿಗಳನ್ನು ಗೊತ್ತುಪಡಿಸಿದ ಸರಕಾರದ ಮುಖ್ಯಾಧಿಕಾರಿಗಳಿಗೂ ಗುಂಡನ್ನು ಹಾರಿಸಲು ಅನುಮತಿಕೊಟ್ಟವರಿಗೂ ಮತ್ತು ಹಾರಿಸಿದವರಿಗೂ ಸೇರಿದುದಾಗಿದೆ.

"ಮೈಸೂರು ಮಹಾರಾಜರು ಈ ವಿಚಾರಗಳಲ್ಲಿ ಸ್ವತಃ ಕೈಹಾಕತಕ್ಕ ಪ್ರಸಂಗ ಬಂದಿದೆ. ಶ್ರೀಮನ್ಮಹಾರಾಜರು ಇನ್ನು ಮೂರು ವಾರಗಳೊಳಗಾಗಿ ರಾಜ ಕುಮಾರರ ವಿವಾಹ ಮಹೋತ್ಸವವನ್ನು ನೆರವೇರಿಸುತ್ತಾರೆ. ಆದರೆ ದೇಶಕ್ಕಾಗಿ ಸಾನಂದದಿಂದ ಪ್ರಾಣತ್ಯಾಗಮಾಡಿ ವೀರಸ್ವರ್ಗವನ್ನು ಆರೋಹಣಮಾಡಿರತಕ್ಕ ಕೀರ್ತಿಶೇಷರ ರಕ್ತವು ಒಣಗುವುದಕ್ಕೆ ಮೊದಲು ಮತ್ತು ಅಕೃತ್ಯಗಳನ್ನು ಕೈಯಾರ ಮಾಡಿದ ಅಧಿಕಾರಿಗಳು ತಮ್ಮ ತಪ್ಪಿಗಾಗಿ ಪಶ್ಚಾತ್ತಾಪ ಪಡುವುದಕ್ಕೆ ಮೊದಲು ಈ ವಿವಾಹ ಮಹೋತ್ಸವವನ್ನು ನಡೆಸಬಾರದೆಂಬುದು ಸಾಮಾನ್ಯ ಮಾನವನ ಹೃದಯದ ಬೇಡಿಕೆಯಾಗಿದೆ.

"ವಿಷಮ ಪರಿಸ್ಥಿತಿಯ ಪರಮಾವಧಿಯ ಕಾಲವು ಸಮೀಪವಾಗಿದೆ. ದಿವಾನ ರಾದ ಸರ್ ಮಿರ್ಜಾರವರು ನಿಧಾನವಾಗಿ ಆಲೋಚಿಸಬೇಕು; ತಮ್ಮ ಮಾರ್ಗ ವನ್ನು ಬದಲಾಯಿಸಬೇಕು; ಒಂದು ವೇಳೆ ಅವರು ಮೈಸೂರಿನ ರಾಜ್ಯಾಡಳಿತಕ್ಕೆ ಜವಾಬ್ದಾರರಾಗಿದ್ದರೆ ಈ ಗುಂಡಿನೇಟಿನ ಪ್ರಕರಣಕ್ಕೆ ಜವಾಬ್ದಾರರಾದ ಅಧಿಕಾರಿ ಗಳಿಗೆ ಯೋಗ್ಯಶಿಕ್ಷೆ ಕೊಡಬೇಕು ಮತ್ತು ಮೈಸೂರಿನಲ್ಲಿ ಒಂದು ಶಾಂತಿಯುತವಾದ ವಾತಾವರಣವನ್ನು ಉತ್ಪನ್ನ ಮಾಡಿ ಮೈಸೂರಿನ ಭವಿಷ್ಯವನ್ನು ಈ ಶಾಂತಿ ವಾತಾವರಣದಲ್ಲಿ ಪರಿಶೀಲಿಸಿ ಮೈಸೂರಿನ ಪ್ರಶ್ನೆಯನ್ನು ಸಂಪೂರ್ಣವಾಗಿ ಇತ್ಯರ್ಥ ಗೊಳಿಸಬೇಕು."

ಇದೇ ಸಂದರ್ಭದಲ್ಲಿ 'ಪಟೇಲ್-ಮಿರ್ಜಾ' ಒಪ್ಪಂದವಾಯಿತು. ಶಿವಪುರದ ಅಧಿವೇಶನದಲ್ಲಿ ಬಂಧಿಸಿದ್ದವರನ್ನು ಬಿಡುಗಡೆ ಮಾಡಲು ಸರಕಾರ ಒಪ್ಪಿಕೊಂಡಿತು.

ಸರಕಾರದ ಸುಧಾರಣಾ ಸಮಿತಿಗೆ ಕಾಂಗ್ರೆಸ್ಸಿನ ಇನ್ನೂ ಮೂವರು ಸದಸ್ಯರನ್ನು ನೇಮಿಸಿಕೊಳ್ಳಲು ಒಪ್ಪಿತು. ಮೈಸೂರು ಕಾಂಗ್ರೆಸ್ಸನ್ನು ಅಧಿಕೃತ ರಾಜಕೀಯ ಸಂಸ್ಥೆಯೆಂದು ಸರಕಾರ ಒಪ್ಪಿಕೊಂಡಿತು. ಸಾರ್ವಜನಿಕ ಸಮಾರಂಭಗಳಲ್ಲಿ ಮೈಸೂರು ಧ್ವಜದ ಜೊತೆಗೆ ರಾಷ್ಟ್ರಧ್ವಜ ಹಾರಿಸಲು ನಿರ್ಬಂಧವಿರಬಾರದೆಂದೂ ತೀರ್ಮಾನವಾಯಿತು. ಆದರೆ ಕಾಲಾನುಕ್ರಮದಲ್ಲಿ ಒಪ್ಪಂದದಂತೆ ದಿವಾನ್ ಮಿರ್ಜಾರವರು ನಡೆದುಕೊಳ್ಳಲಿಲ್ಲ.

ರಾಜಕುಮಾರ ಶ್ರೀ ಜಯಚಾಮರಾಜ ಒಡೆಯರ ವಿವಾಹದ ನೆನಪಿಗಾಗಿ 15-5-1938 ರಂದು ಎಲ್ಲಾ ರಾಜಕೀಯ ಬಂಧಿಗಳ ಬಿಡುಗಡೆಯಾಯಿತು. ಆದರೆ ಗಡೀಪಾರು ಆಜ್ಞೆಗಳನ್ನೂ ಪ್ರತಿಬಂಧಕಾಜ್ಞೆಗಳನ್ನೂ ಸರಕಾರ ಹಿಂದಕ್ಕೆ ತೆಗೆದುಕೊಳ್ಳಲಿಲ್ಲ. ರಾಜಕೀಯ ಸುಧಾರಣಾ ಸಮಿತಿಗೆ ಕಾಂಗ್ರೆಸ್ಸಿನ 7 ಜನರು ಸದಸ್ಯರಾದರೂ ಆ ಸಮಿತಿಯ ವರದಿಯಲ್ಲಿ ಜವಾಬ್ದಾರಿ ಸರ್ಕಾರದ ಶಿಫಾರಸು ಬರಲೇ ಕೂಡದೆಂದು ಸಮಿತಿಯ ಅಧ್ಯಕ್ಷರು ಹಠ ಹಿಡಿದುದರಿಂದ ಶ್ರೀ ಭೂಪಾಳಂ ಚಂದ್ರಶೇಖರಯ್ಯನವರನ್ನು ಬಿಟ್ಟು ಉಳಿದವರೆಲ್ಲರೂ ಸಮಿತಿಗೆ ರಾಜೀನಾಮೆ ಕೊಟ್ಟರು. ಆಶಾದಾಯಕವಾಗಿದ್ದ ಸ್ಥಿತಿ ಮತ್ತೆ ಬಿಗಡಾಯಿಸಿತು. ಸರಕಾರಕ್ಕೂ ಕಾಂಗ್ರೆಸ್ಸಿಗೂ ಭಿನ್ನಾಭಿಪ್ರಾಯಗಳು ಹೆಚ್ಚಾದುವು. ಎಲ್ಲ ಕಾಂಗ್ರೆಸ್ ಸದಸ್ಯರೂ ಪ್ರಜಾಪ್ರತಿನಿಧಿ ಸಭೆ, ನ್ಯಾಯವಿಧಾಯಕ ಸಭೆಗಳಿಗೆ ರಾಜೀನಾಮೆ ಇತ್ತು ಚಳುವಳಿಗಳ ಕಡೆಗೆ ಹೆಚ್ಚು ಗಮನ ಕೊಟ್ಟರು.

ವಿದುರಾಶ್ವತ್ಥದ ಘಟನೆ ದುರಂತಮಯವಾದರೂ ಸರಕಾರದ ದಬ್ಬಾಳಿಕೆಯನ್ನು ಎತ್ತಿ ತೋರಿಸುವುದಕ್ಕೆ, ಜನರನ್ನು ಕಾಂಗ್ರೆಸ್ಸಿನ ತತ್ವಕ್ಕೆ ಆಕರ್ಷಿಸುವುದಕ್ಕೆ ಒಳ್ಳೆಯ ಅಸ್ತ್ರವಾಯಿತು. ಶಿವಪುರ ಧ್ವಜಸತ್ಯಾಗ್ರಹ ಮತ್ತು ವಿದುರಾಶ್ವತ್ಥ ದುರಂತ ಪ್ರಕರಣಗಳನ್ನು ಲಾವಣಿಕಾರರು ಆಕರ್ಷಕವಾಗಿ ಹೆಣೆದು ಕಣ್ಣಿಗೆ ಕಟ್ಟುವಂತೆ ಜನರ ಮುಂದೆ ಸುಶ್ರಾವ್ಯವಾಗಿ ಹಾಡಲು ಪ್ರಾರಂಭಿಸಿದರು. ಆ ಸಂದರ್ಭದ ಒಂದು ಲಾವಣಿ ಹೀಗಿದೆ :

ಶಿವಪುರ ಮತ್ತು ವಿದುರಾಶ್ವತ್ಥದ ಲಾವಣಿ

ಸತ್ಯಸಮರದಾ ಹತ್ಯ ಪೇಳುವೆನು ಚಿತ್ತದಿ ಲಾಲಿಸಿರಿದು ಸತ್ಯ
ಮರ್ತ್ಯದೊಳಾರ್ಯಾ ವರ್ತದ ವಿದುರಾಶ್ವತ್ಥ ವಿಚಿತ್ರದ ಘನ ಹತ್ಯ ॥ ಪಲ್ಲವಿ ॥

ವಿಶಾಲ ಮೈಸೂರ್ ಪ್ರಸಾರ ಕಾಂಗ್ರೆಸ್ ಪ್ರಸಂಗ ಲಾವಣಿ ಕವಿ ಸರಸ
ಪಾಷಾಣ ಹೃದಯದ ದೇಶೀಯ ಜನರಿಗೆ ಲೇಸಾದರಿಲ್ಲವು ಕರುಣ ರಸ ॥

ಆ ಶಿವಪುರದೊಳು ದೇಶೀಯ ಪ್ರಜೆಗಳು ಬೋ ಶಿಸ್ತು ತೋರಿದರೊಮ್ಮನಸ
ದೇಶಿಯ ಪ್ರಮುಖರು ನಿಶಾನಿ ಏರಿಸಿ ಬಾರ್ಸಿದರ್ ಭೇರಿಯ ಜಯಘೋಷ ॥
ಕುಶಾಗ್ರ ನೀತಿಯ ಮೈಸೂರ್ ಸರ್ಕಾರವು ಸೆರ್ಕ್ಯೂ ಚಲಾಯ್ಸಲು ಬಲು ಬಿರುಸ
ದೇಶೀ ಮುಖಂಡರು ಸೆರ್ಕ್ಯೂ ಉಲ್ಲಂಘಿಸಿ ಸೈಸೈ ಎಂದಿನಿಸಿದರಾ ದಿವಸ ॥

ಶಿವಪುರದೊಳು ನಮ್ ಸುವಿಮಲ ಚರಿತರು ತ್ರಿವರ್ಣರಾಟೆಯ ಧ್ವಜವೆತ್ತೆ
ಬವಣೆಯ ಪಡುತಲಿ ಅವಿನಯ ಲ್ಯಾನ್ಸರ್ಸ್ ಕೋವಿಲಾಠಿಗಳನಿಡಿಯುತ್ತೆ ॥
ತವಕದಿ ಬಂದಿತು ಕವಿಯುತ ಕಾಂಗ್ರೆಸ್ ಸುವಿಮಲಚರಿತರ ಪಿಡಿಯುತ್ತೆ
ಶಿವ ಶಿವ ಈ ಪರಿ ಅವಿಚಾರದಿ ಉದ್ಭವಿಸಿತು ಕ್ರಾಂತಿಯು ಸುತ್ತ ಮುತ್ತೆ ॥

ಮುದದಿ ಕಾಂಗ್ರೆಸ್ ಧ್ವಜವನೆತ್ತಿದ ಪ್ರಮುಖರಿಗೆ ಜೈಲಾಯಿತು ॥
ಇದುವೆ ವಿದುರಾಶ್ವತ್ಥ ಗಲಭೆಗೆ ಮುಖ್ಯ ಕಾರಣವಾಯಿತು ॥

ಸತ್ಯ ಮಹಾತ್ಮರ ಸತ್ವವನರಿಯದೆ ಹತ್ಯವಗೈಯುವುದ್ಯಾವ್ ಕೃತ್ಯ ?
ಮರ್ತ್ಯದೊಳಾರ್ಯಾವರ್ತದ ವಿದುರಾಶ್ವತ್ಥ ವಿಚಿತ್ರದ ಘನಹತ್ಯ ॥
ಘನ ಸರ್ದಾರರ ರಣ ದಬ್ಬಾಳಿಕೆ ದಿನಚರಿ ಅಬ್ಬರವೇರಿಹುದು
ಜನಗಣವೆಂಬುವ ಗಣನೆಯೆ ಇಲ್ಲದೆ ಜನರನೆ ಜರ್ಝರಗೊಳಿಸಿಹುದು ॥

ಜನರಿಂದಲ್ಲವೆ ಘನ ಸರ್ಕಾರಕೆ ಧನ ಧಾನ್ಯಂಗಳು ಒದಗುವುದು
ಜನಗಳ ಕೊಂದರೆ ಘನ ರಾಜ್ಯಾಂಗದ ಘನತೆಯು ಮತ್ತೆಲ್ಲಿಳಿಯುವುದು ?
ಜನತೆಯ ಕಾಡುವ ಘನತೆಯು ರಾಜ್ಯಕೆ ಹೀನಭೂತವೊಂದಂಟಿದುದು
ಹೀನ ಭೂತವಾ ದೇವನಹಳ್ಳಿಯ ಜ್ಞಾನಪೂಜೆ*ಯಿಂದೋಡಿದುದು ॥

ಒಂಬೈನೂರ್ ಮುವ್ವತ್ತೆಂಟನೆ ಏಪ್ರಿಲ್ ತಿಂಗಳ ಇಪ್ಪತ್ತೈದರೊಳು
ತುಂಬಿರೆ ಬಹುಪ್ರಜೆ ಸಂಭ್ರಮದಿಂದಲಿ ವಿದುರಾಶ್ವತ್ಥದ ಜಾತ್ರೆಯೊಳು ॥

ಸ್ತಂಭದಿ ಮೆರೆಯುವ ಧ್ವಜಸತ್ಯಾಗ್ರಹ ಕಾಂಗ್ರೆಸ್ ಕೂಟದಿ ಕೂಡಿರಲು
ಡಂಭಕರಾ ಪ್ರಜ ದ್ರೋಹಿಗಳಲವರು ಢಂ ಢಂ ಹೊಡೆದರು ಗುಂಡಂಗಳು ॥

ಸುತ್ತಮುತ್ತಲು ಲಾಠಿ ಹೊಡೆತಗಳ್ ಮತ್ತೆ ಗುಂಡಿನ ಏಟುಗಳ್
ಸತ್ತ ಹೆಣಗಳ ಲೆಕ್ಕವಿಲ್ಲವು ಹೊತ್ತರೆಷ್ಟೋ ಗುಪ್ತದೊಳ್ ॥

---

*ಪೊರಕೆ ಏಟು. ದೇವನಹಳ್ಳಿ ಪೊರಕೆಗೆ ಪ್ರಸಿದ್ಧ.

ಸತ್ಯವು ಕೇಳಿರಿ ಮಿಥ್ಯವಿದಲ್ಲವು ಹತ್ಯ ಹತ್ಯ ಸ್ತ್ರೀ ಶಿಶುಹತ್ಯ
ಮರ್ತ್ಯದೊಳಾರ್‍ಯಾವರ್ತದ ವಿದುರಾಶ್ವತ್ಥ ವಿಚಿತ್ರದ ಘನಹತ್ಯ ॥
ಗೌರವ್ವ ಎಂಬುವ ಗರ್ಭಿಣಿ ಹೆಣ್ಣನು ಗರ್ವದಿ ಕೊಂದರು ಕೈಯ್ಯಾರ
ಸಾರ್ವಜನರಮೇಲ್ ಗುಂಡಿನ ಸುರಿಮಳೆ ಸುರಿಸಿದರು ಘೋರ ವೈಯ್ಯಾರ ॥
ವಿರಾಟಪುತ್ರರ ಭರಾಟ ಭಾರತ ಕರಾಟಕ್ಕಿಂತಲು ವಿಸ್ತಾರ
ನಿರಾಳಗೈದರು ನಿರಾಯುಧಾ ಮೇಣ್ ನಿರಾಪರಾಧಿಗಳ್ ಸಂಹಾರ ॥
ಏರಿಸಿ ಗುಂಡನು ಹಾರಿಸಿದಾಕ್ಷಣ ನೂರಾರು ಕಪಿಗಳು ಭಯಂಕರ
ಕಿರ್‍ರೆಂದು ಕಿರಚುತ ಕೊರ್‍ರೆಂದು ಕೊರಗುತ ಗಿರ್‍ರೆಂದು ಸತ್ತವು ತರಾತರ ॥
ಇಡೀ ಪ್ರಪಂಚವೇ ನಡುಗಿತು ಈ ಘನ ಗಡಿಬಿಡಿ ಕೇಳಿದ ಕ್ಷಣದೊಳಗೆ
ಗೌಡ ಗಾವಿಲರು ಹೂಡಿದ ತಂತ್ರದಿ ಕೇಡೆಲೆ ಒದಗಿತು ಕಡೆಯೊಳಗೆ ॥

ಬಡತನದಿಂದಲೆ ಬೆಳೆದಾ ವೃಷಭನ ಬಡಾಯಿ ಬಹಳಾ ರಣದೊಳಗೆ
ಸಡಗರದಿಂದಲಿ ಹಿಡಿದು ರಿವಲ್ವಾರ್ ಹೊಡೆದರು ಪ್ರಜೆಗಳ ಭರದೊಳಗೆ ॥

ಘೋರ ವಿದುರಾಶ್ವತ್ಥ ಹತ್ಯದ ನ್ಯಾಯು ಕಡೆಗಿದು ಖಂಡಿತ
ಶ್ರೀ ರಮೇಶಂ ಸಮಿತಿ ವಿವರವು ಶ್ರೀ ರಮಣನಿಗೆ ಅರ್ಪಿತ ॥

ಸತ್ಯವು ಶ್ರೀ ಗುರು ಪುಟ್ಟನಂಜಣ್ಣರ ಭಕ್ತ ನೀಲ್ಕಂಠನ ಸಾಹಿತ್ಯ
ಮರ್ತದೊಳಾರ್‍ಯಾ ವರ್ತದ ವಿದುರಾಶ್ವತ್ಥ ವಿಚಿತ್ರದ ಘನ ಹತ್ಯ.*

ಉಗ್ರ ಪ್ರತಿಭಟನೆ

ವಿದುರಾಶ್ವತ್ಥದಲ್ಲಿ ಮುಗ್ಧ ಜನರ ಮೇಲೆ ದೌರ್ಜನ್ಯ ನಡೆಯಿಸಿ ಅನೇಕರ ಸಾವಿಗೆ ಕಾರಣರಾದ ಪೋಲೀಸರು ಹಾಗೂ ಸರ್ಕಾರದ ವರ್ತನೆಯನ್ನು ಖಂಡಿಸುವುದಕ್ಕೆ ರಾಜ್ಯಾದ್ಯಂತ ಅನೇಕ ಸಾರ್ವಜನಿಕ ಸಭೆಗಳು ನಡೆದುವು.

ಶಿವಪುರದಲ್ಲಿ ಮೈಸೂರು ಕಾರ್ಯಕಾರಿ ಸಮಿತಿ ಸಭೆ ಸೇರಿ (26-4-1938) ವಿದುರಾಶ್ವತ್ಥದಲ್ಲಿ ಪ್ರಾಣ ಕಳೆದುಕೊಂಡವರಿಗೆ ಸಂತಾಪ ಸೂಚಿಸಿ, ಸರ್ಕಾರದ ದಬ್ಬಾಳಿಕೆಯನ್ನು ಖಂಡಿಸಿತು.

30-4-1938 ರಂದು ಬೆಂಗಳೂರಿನ ಕಂಟೋನ್ಮೆಂಟ್ ಕಾಂಗ್ರೆಸ್ ಕಮಿಟಿಯ ವತಿಯಿಂದ ಭೂಪಾಳಂ ಸೆಟ್ಟಿ ಛತ್ರದಲ್ಲಿ ಸಾರ್ವಜನಿಕ ಸಭೆ ನಡೆಯಿತು. ಶ್ರೀ ಎಸ್. ಸುಂದರ್ ಅಯ್ಯರ್ (ಕಂಟೋನ್ಮೆಂಟ್ ಕಾಂಗ್ರೆಸ್ ಕಮಿಟಿ ಅಧ್ಯಕ್ಷ)

*ರಚನೆ: ಬಿ. ನೀಲಕಂಠಯ್ಯ.

ಅಧ್ಯಕ್ಷರಾಗಿದ್ದರು. ಶ್ರೀ ಜಿ. ಭೀಮರಾವ್ ಭಾಷಣ ಮಾಡಿದರು. ಭಾಷಣಕಾರರು ತಮ್ಮ ಭಾಷಣದಲ್ಲಿ ವಿದುರಾಶ್ವತ್ಥ ಹತ್ಯಾಕಾಂಡಕ್ಕೆ ಕಾರಣರಾದವರನ್ನು ಅತ್ಯುಗ್ರವಾಗಿ ಖಂಡಿಸಿದರು.

1-5-1938 ರಂದು ಬೆಂಗಳೂರಿನ ಪೂರ್ಣಯ್ಯ ಛತ್ರದ ಎದುರಿಗಿನ ಮೈದಾನದಲ್ಲಿ ಭಾರಿ ಸಾರ್ವಜನಿಕ ಸಭೆ ನಡೆಯಿತು. 12,000 ಕ್ಕೂ ಹೆಚ್ಚು ಜನರು ಸೇರಿದ್ದರು. ಶ್ರೀ ಡಬ್ಲ್ಯು. ಹೆಚ್. ಹನುಮಂತಪ್ಪನವರು ಅಧ್ಯಕ್ಷತೆ ವಹಿಸಿದ್ದರು. ಆಗ ಬೆಂಗಳೂರು ಜಿಲ್ಲಾ ಕಾಂಗ್ರೆಸ್ ಕಮಿಟಿಯ ಕಾರ್ಯದರ್ಶಿಯಾಗಿದ್ದ ಶ್ರೀ ಕೆ. ಹನುಮಂತಯ್ಯನವರು ಸಭೆಯನ್ನು ಉದ್ದೇಶಿಸಿ ಮಾತನಾಡುತ್ತಾ ಮೈಸೂರು ಪೋಲೀಸ್ ಕಾನೂನಿನ ರೀತ್ಯಾ ಸಾರ್ವಜನಿಕ ಸಭೆಗಳಲ್ಲಿ ತಾವು ಮಾತನಾಡದಂತೆ ಆಜ್ಞೆ ಮಾಡಿರುವುದನ್ನು ತಿಳಿಸಿದರು ; ವಿದುರಾಶ್ವತ್ಥದಲ್ಲಿ ಹತ್ಯಾಕಾಂಡ ನಡೆಯಲು ಕಾರಣರಾದ ಪೋಲೀಸರ ದೌರ್ಜನ್ಯವನ್ನು ಖಂಡಿಸಿದರು. ಗುಂಡೇನಹಳ್ಳಿ ಶ್ರೀ ನಂಜಪ್ಪ ಮತ್ತು ಶ್ರೀ ಜಗದೀಶರೂ ಮಾತನಾಡಿದರು.

ವಿದುರಾಶ್ವತ್ಥದ ದುರಂತದ ಬಗೆಗೆ ಪ್ರತಿಭಟನೆ ವ್ಯಕ್ತಪಡಿಸಲು ಕಾರ್ಕಳದಲ್ಲಿ ಸಾರ್ವಜನಿಕ ಸಭೆ ನಡೆಯಿತು. ಶ್ರೀಮಂತಿ ಕಮಲಾದೇವಿ ಚಟ್ಟೋಪಾಧ್ಯಾಯರು ಅಧ್ಯಕ್ಷತೆ ವಹಿಸಿದ್ದರು. ಗಡೀಪಾರಾಗಿದ್ದ ಶ್ರೀ ಬಿ. ಎನ್. ಗುಪ್ತರು ಸಭೆಯಲ್ಲಿ ಕಾಣಿಸಿಕೊಂಡು ಜನರನ್ನು ಉದ್ದೇಶಿಸಿ ಮಾತನಾಡಿದರು.

ವಿದುರಾಶ್ವತ್ಥ ಹತ್ಯಾಕಾಂಡದಿಂದ ಬೇಸತ್ತು ಶ್ರೀ ಎಸ್. ವೆಂಕಟಪತಯ್ಯನವರು ಸಂಯುಕ್ತ ರಾಜ್ಯಾಂಗ ಪರಿಶೀಲನಾ ಸಮಿತಿಗೆ ರಾಜೀನಾಮೆಯಿತ್ತರು.

ವಿದುರಾಶ್ವತ್ಥದ ಹತ್ಯಾಕಾಂಡವನ್ನು ಎಲ್ಲ ಪತ್ರಿಕೆಗಳೂ ಉಗ್ರವಾಗಿ ಖಂಡಿಸಿದುವು.

ಕಾರ್ಯಕಾರಿ ಸಮಿತಿಯ ಪುನರ್ರಚನೆ

ಮೈಸೂರು ಯುವರಾಜರ ಮದುವೆಯ ಸಂದರ್ಭದಲ್ಲಿ ಎಲ್ಲ ಬಂಧಿಗಳನ್ನೂ ಬಿಡುಗಡೆ ಮಾಡಿದಾಗ, ಶಿವಪುರ ಧ್ವಜಸತ್ಯಾಗ್ರಹದಲ್ಲಿ ಬಂಧಿತರಾಗಿದ್ದ ಶ್ರೀ ಟಿ. ಸಿದ್ದಲಿಂಗಯ್ಯನವರೂ ಬಿಡುಗಡೆಯಾದರು. ಅವರು ಬಿಡುಗಡೆಯಾದ ಕೂಡಲೆ ಹಂಗಾಮಿ ಅಧ್ಯಕ್ಷರಾಗಿದ್ದ ಶ್ರೀ ಹೆಚ್. ಬಿ. ಗುಂಡಪ್ಪಗೌಡರಿಂದ 1938 ನೇ ಜೂನ್ ತಿಂಗಳಿನಲ್ಲಿ ಅಧಿಕಾರವನ್ನು ವಹಿಸಿಕೊಂಡರು. ಆಗ ಕಾಂಗ್ರೆಸ್ಸಿನ ಕಾರ್ಯಕಾರಿ ಸಮಿತಿಯನ್ನು ಹೀಗೆ ಪುನರ್ರಚಿಸಿದರು :

ಅಧ್ಯಕ್ಷರು : ಶ್ರೀ ಟಿ. ಸಿದ್ದಲಿಂಗಯ್ಯ. ಖಜಾಂಚಿ : ಶ್ರೀ ಎಸ್. ಚನ್ನಯ್ಯ. ಕಾರ್ಯದರ್ಶಿ : ಶ್ರೀ ಕೆ. ಚಂಗಲರಾಯರೆಡ್ಡಿ. ಸದಸ್ಯರು :

ಶ್ರೀಗಳಾದ ವಿ. ಎಸ್. ನಾರಾಯಣರಾವ್, ಎಂ. ಎನ್. ಜೋಯಿಸ್, ಎಚ್. ಸಿದ್ದಯ್ಯ, ಎಚ್. ಕೆ. ವೀರಣ್ಣಗೌಡ, ಕೆ. ಪಟ್ಟಾಭಿರಾಮನ್, ಎಸ್. ನಿಜಲಿಂಗಪ್ಪ, ಡಿ. ಎಸ್. ಮಲ್ಲಪ್ಪ, ತಗಡೂರು ರಾಮಚಂದ್ರರಾವ್, ಕೆ. ಟಿ. ಸತ್ಯನಾರಾಯಣ ಶೆಟ್ಟಿ, ಎ. ಜಿ. ರಾಮಚಂದ್ರರಾವ್, ಎಂ. ಸೀತಾರಾಮ ಶಾಸ್ತ್ರಿ ಮತ್ತು ಎಚ್. ಆರ್. ಗುರುವಾರೆಡ್ಡಿ.

ಕಾಂಗ್ರೆಸ್ ಚಳುವಳಿಯನ್ನು ತೀವ್ರಗೊಳಿಸಲು, ಜವಾಬ್ದಾರಿ ಸರಕಾರಕ್ಕಾಗಿ ಸತತವಾಗಿ ಹೋರಾಡಲು ಅಧ್ಯಕ್ಷರಾದ ಶ್ರೀ ಸಿದ್ದಲಿಂಗಯ್ಯನವರು ಕಂಕಣ ಬದ್ಧರಾದರು.

ಹ್ಯಾಮಿಲ್ಟನ್ ಬಿಲ್ಡಿಂಗ್ ಸತ್ಯಾಗ್ರಹ

ಮೈಸೂರಿನಲ್ಲಿ ನಡೆದ ಹ್ಯಾಮಿಲ್ಟನ್ ಬಿಲ್ಡಿಂಗ್ ಸತ್ಯಾಗ್ರಹ ಮತ್ತೊಂದು ಪ್ರಮುಖವಾದ ಚಳುವಳಿ. ಮೈಸೂರಿನ ದೊಡ್ಡಪೇಟೆಯಲ್ಲಿ ಕಟ್ಟಿದ ಸೆಂಟ್ರಲ್ ಪೋಲೀಸ್ ಕಟ್ಟಡಕ್ಕೆ ಹ್ಯಾಮಿಲ್ಟನ್ ಬಿಲ್ಡಿಂಗ್ ಎಂದು ಹೆಸರಿಡಬೇಕೆಂದು ದಿವಾನ್ ಮಿರ್ಜಾ ಸೂಚಿಸಿದರು. ಕ್ರೌರ್ಯಕ್ಕೆ ಹೆಸರಾಗಿದ್ದ ಹ್ಯಾಮಿಲ್ಟನ್ ಶಿವಪುರ ಮತ್ತು ವಿದುರಾಶ್ವತ್ಥಗಳ ಸಂದರ್ಭದ ನಡವಳಿಕೆಗಳಿಂದ ಜನರಿಗೆ ಬೇಸರವಾಗಿದ್ದರು. ಅವರ ಹೆಸರನ್ನು ಇಡುವುದಕ್ಕೆ ವಿರೋಧಿಸಿ 15-2-1939 ರಿಂದ 31-3-1939 ರವರೆಗೆ ಸತ್ಯಾಗ್ರಹ ನಡೆಯಿತು. ಶ್ರೀ ತಗಡೂರು ರಾಮಚಂದ್ರರಾಯರು ಅದನ್ನು ಹುಟ್ಟು ಹಾಕಿದವರು. ಅದರಲ್ಲಿ ಶ್ರೀ ಸುಬ್ಬರಾವ್ ಉಪಾಧ್ಯಾಯ, ಶ್ರೀ ಅರಕೆರೆ ಯ. ಕೆಂಚಯ್ಯ ಮೊದಲಾದ ಅನೇಕ ಮಂದಿ ಪಾಲ್ಗೊಂಡರು. ಸ್ತ್ರೀಯರೂ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿದರು. 70 ಜನರು ಬಂಧನಕ್ಕೊಳಗಾದರು. ಇದೊಂದು ವಿಚಿತ್ರವಾದ ಸತ್ಯಾಗ್ರಹ. ಪ್ರತಿನಿತ್ಯ ಎರಡು ಗುಂಪುಗಳು ಸತ್ಯಾಗ್ರಹ ಮಾಡುತ್ತಿದ್ದರು. ಸುಬ್ಬರಾಯನ ಕೆರೆಯಿಂದ ಹೊರಡುತ್ತಿದ್ದ ಸತ್ಯಾಗ್ರಹಿಗಳು ಒಂದು ಸುಣ್ಣದ ಮಡಕೆ, ಒಂದು ಉದ್ದದ ಕೋಲಿಗೆ ಕಟ್ಟಿದ ಕುಚುಮಟ್ಟೆ ಹಿಡಿದಿರುತ್ತಿದ್ದರು. ಭವನದ ಹೆಸರನ್ನು ಅಳಿಸುವುದು ಸತ್ಯಾಗ್ರಹಿಗಳ ಉದ್ದೇಶವಾಗಿತ್ತು. ಇದೂ ಕೂಡ ಸಾಕಷ್ಟು ದೊಡ್ಡ ಪ್ರಮಾಣದ ಚಳುವಳಿಯಾಗಿ ಪರಿಣಮಿಸಿತು. ಇದು ತೆಗೆದುಕೊಂಡ ಕಾಲವೂ ಹೆಚ್ಚು.

1939 ರ ಆಗಸ್ಟ್‌ನಲ್ಲಿ ನಡೆದ ಕೆ.ಜಿ.ಎಫ್. ಚಳುವಳಿಯಲ್ಲಿ ಭಾಗವಹಿಸಿದ ಅನೇಕರನ್ನು ಬಂಧಿಸಿ ಸರಕಾರ ಉಗ್ರವಾಗಿ ಶಿಕ್ಷಿಸಿತು. ಆವರೆಗಿನ ಎಲ್ಲಾ ವಿದ್ಯಮಾನಗಳಿಂದ ರೊಚ್ಚಿಗೆದ್ದ ಕಾಂಗ್ರೆಸ್, ಸರಕಾರದ ಮೇಲೆ ನೇರವಾಗಿ ದಾಳಿ ಮಾಡಲು ತೀರ್ಮಾನಿಸಿತು.

ಪ್ರಥಮ ಸರ್ವಾಧಿಕಾರಿ

ಕಾಂಗ್ರೆಸ್ಸಿನ ಉದ್ದೇಶ ಸಾಧನೆಗಾಗಿ ಅಧ್ಯಕ್ಷರಾದ ಶ್ರೀ ಸಿದ್ದಲಿಂಗಯ್ಯನವರು ಹೊಸ ಮಾರ್ಗವನ್ನು ಅನುಸರಿಸಿದರು. ಕಾಂಗ್ರೆಸ್ಸಿನ ಸಂಪೂರ್ಣ ಚಟುವಟಿಕೆಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಿ ಸರ್ವಾಧಿಕಾರಿಯಾದರು. ಅವರ ಮಾರ್ಗದರ್ಶನದಂತೆ ಮುಂದುವರಿಯಲು ಕಾರ್ಯಕಾರಿ ಸಮಿತಿಯವರು ಹಾಗೂ ಎಲ್ಲ ಕಾಂಗ್ರೆಸ್ ಕಾರ್ಯಕರ್ತರು ಸಿದ್ಧರಾದರು. ಅನಂತರ ಕಾಂಗ್ರೆಸ್ ಚಳುವಳಿ ಹೊಸ ಹಾದಿ ಹಿಡಿಯಿತು. ಕಾಂಗ್ರೆಸ್ ಕೈಗೊಳ್ಳಲಿರುವ ಕಾರ್ಯಕ್ರಮಗಳನ್ನು ಕುರಿತು, 1-9-1939 ರಂದು, ಸುಮಾರು 30,000 ಜನ ಪ್ರೇಕ್ಷಕರ ಮುಂದೆ, ಬೆಂಗಳೂರಿನ ಬನಪ್ಪ ಪಾರ್ಕಿನಲ್ಲಿ, ಕಾಂಗ್ರೆಸ್‌ನ ಪ್ರಥಮ ಸರ್ವಾಧಿಕಾರಿಯಾದ ಶ್ರೀ ಟಿ. ಸಿದ್ದಲಿಂಗಯ್ಯನವರು ಉಜ್ವಲವಾದ ಭಾಷಣ ಮಾಡಿದರು.

ಶ್ರೀ ಟಿ. ಸಿದ್ದಲಿಂಗಯ್ಯನವರ ಆ ಭಾಷಣದಲ್ಲಿ ಕಂಡು ಬಂದ ಮುಖ್ಯಾಂಶಗಳು ಇವು: ಸರಕಾರದ ಜನವಿರೋಧಿ ಚಟುವಟಿಕೆಗಳ ಪ್ರಸ್ತಾಪ, ಪಟೇಲ್-ಮಿರ್ಜಾ ಒಪ್ಪಂದವನ್ನು ಸರಕಾರ ಪಾಲಿಸದಿದ್ದುದರ ಟೀಕೆ, ಕಾಂಗ್ರೆಸ್ ಕೈಗೊಂಡ ಕಾರ್ಯಕ್ರಮಗಳು, ಶಾಂತಿ ಸಂಧಾನದ ವಿಫಲತೆ, ಸರಕಾರದ ಮನಃಪರಿವರ್ತನೆಗೆ ನಿಗಧಿ, ಗಡ ಮುಗಿದ ಮೇಲೆ ಕಾಂಗ್ರೆಸ್ ಕೈಗೊಳ್ಳಬೇಕೆಂದಿರುವ ಚಟುವಟಿಕೆಗಳ ಪ್ರಸ್ತಾಪ, ಜವಾಬ್ದಾರಿ ಸರಕಾರಕ್ಕಾಗಿ ಬಲವಾದ ಒತ್ತಾಯ, ಮಹಾಜನರ ಸಹಕಾರಕ್ಕಾಗಿ ಪ್ರಾರ್ಥನೆ, ಇತ್ಯಾದಿ. ಭಾಷಣದ ಪೂರ್ಣ ಪಾಠ ಹೀಗಿದೆ:

ಮೈಸೂರು ಕಾಂಗ್ರೆಸ್ ಅಧ್ಯಕ್ಷರ ಘೋಷಣೆ

ಸ್ನೇಹಿತರೇ,

ಮಹತ್ವಪೂರ್ಣವಾದ ಕಾರ್ಯವನ್ನು ಮಾಡಲು ಈ ದಿನ ನಾನು ಆಜ್ಞಪ್ತನಾಗಿದ್ದೇನೆ. ಆ ಕೆಲಸವನ್ನು ಬಹಳ ಸಂತೋಷದಿಂದ ನೆರವೇರಿಸುತ್ತೇನೆ. ಏಕೆಂದರೆ ಅದರಿಂದ ನಮ್ಮ ಜನ್ಮ ಸಾರ್ಥಕವಾಗುವುದು. ಮೈಸೂರು ಕಾಂಗ್ರೆಸ್ಸಿನ ಕೆಲಸ ಕಾರ್ಯಗಳನ್ನು ವಿಹಂಗಮ ದೃಷ್ಟಿಯಿಂದ ನೋಡಿದಲ್ಲಿ, ಕಾಲು ಕೆರೆದು ಹೋರಾಟಕ್ಕಿಳಿಯುವುದು ಕಾಂಗ್ರೆಸ್ಸಿನ ನೀತಿಯಲ್ಲವೆಂದೂ ತನ್ನ ಧ್ಯೇಯ ಗುರಿಗಳಿಗೆ ಧಕ್ಕೆ ಬಾರದಂತೆ ಗೌರವಯುತವಾದ ರೀತಿಯಲ್ಲಿ ಅದನ್ನು ನಿವಾರಿಸಬೇಕೆಂಬುದೇ ಅವರ ಸತತ ಪ್ರಯತ್ನವಾಗಿದೆಯೆಂದೂ ಯಾರಿಗೇ ಆಗಲಿ ಮನವರಿಕೆಯಾಗದಿರದು. ಆದರೆ ಹೋರಾಟವು ಅನಿವಾರ್ಯವೆಂದು ವ್ಯಕ್ತವಾದಾಗ ಹೋರಾಟದಲ್ಲಿ ತೊಡಗುವಂತೆ ಮಾಡಲು ಒತ್ತಾಯ ನಡೆದಿರುವಾಗ ನಾವಾದರೂ ಅತ್ಯಂತ ಆದರದಿಂದ ಅದನ್ನು ಸ್ವಾಗತಿಸಿ ಸ್ವಾತಂತ್ರ್ಯ ದೇವಿಯ ಆರಾಧನೆಗಾಗಿ ವೀರಯೋಧರಂತೆ ಬಲಿದಾನ ನೀಡಲು ಸದಾ ಸಿದ್ಧರಾಗಿಯೇ ಇದ್ದೇವೆ. ಮೈಸೂರು ಕಾಂಗ್ರೆಸ್

ಸ್ಥಾಪಿತವಾದಾಗಿನಿಂದಲೂ ಸರಕಾರವು ಜನತೆಯ ಆಕಾಂಕ್ಷೆಗಳಿಗೆ ವಿರೋಧ ಭಾವನೆಯನ್ನು ತೋರಿ ನಿಷ್ಠುರತೆಯಿಂದ ವರ್ತಿಸುತ್ತಿರುವುದನ್ನೂ ಸಹ ಅಷ್ಟೇ ಸ್ಪಷ್ಟವಾಗಿ ಗ್ರಹಿಸಬಹುದಾಗಿದೆ. ಹೆಜ್ಜೆ ಹೆಜ್ಜೆಗೂ ಕಾಂಗ್ರೆಸ್ಸಿನ ಸಾಧಾರಣ ಕಾರ್ಯಗಳಲ್ಲಿ ಸರಕಾರದವರು ಅಡ್ಡಿ ಆತಂಕಗಳನ್ನು ತಂದೊಡ್ಡುತ್ತಾ ಬಂದಿದ್ದಾರೆ. 16-1-1937 ರಲ್ಲಿ ಚುನಾವಣಾ ಪ್ರಚಾರದ ಆರಂಭದ ಮೊದಲನೇ ದಿನವೇ ಅಂದಿನ ಪ್ರಮುಖ ಅತಿಥಿಗಳ ಮೇಲೆ ಪ್ರತಿಬಂಧಕಾಜ್ಞೆಗಳನ್ನು ಹಾಕಿದರು. ಅದನ್ನು ಹಿಂಬಾಲಿಸಿ ದೇಶದ ಅನೇಕ ಕಡೆಗಳಲ್ಲಿ ಹಲವು ಪ್ರತಿಬಂಧಕಾಜ್ಞೆಗಳು ಜಾರಿಯಾದವು. ಅನಂತರ ಕಾಂಗ್ರೆಸ್ ಮುಖಂಡರನ್ನು ದಸ್ತಗಿರಿ ಮಾಡಿ ಜೈಲಿನಲ್ಲಿಟ್ಟರು. ಜನರೆಲ್ಲ ತಮ್ಮ ನಾಗರಿಕ ಹಕ್ಕುಗಳ ಬಗ್ಗೆ ತಿಳುವಳಿಕೆಯುಂಟುಮಾಡಲು ಕಾಂಗ್ರೆಸ್ ನ್ಯಾಯಬದ್ಧವಾದ ಮಾರ್ಗಗಳಲ್ಲಿ ಪ್ರಚಾರಕಾರ್ಯ ಕೈಗೊಂಡಿರುವಾಗ ದೇಶದಲ್ಲಿ ದಬ್ಬಾಳಿಕೆಯ ಕಾಂಡವು ಆರಂಭವಾಯಿತೆಂಬುದನ್ನು ಗಮನಿಸಿದಲ್ಲಿ ಸರಕಾರದ ಮನೋಭಾವನೆ ಯೇನೆಂಬುದು ಶ್ರುತಪಡುವುದು. ಈ ಪ್ರತಿಬಂಧಕಾಜ್ಞೆಗಳನ್ನು ಮುರಿಯಲು ಜನರು ತಂಡೋಪತಂಡವಾಗಿ ಮುಂದೆ ಬಂದರು. ಈ ಸಾರ್ವತ್ರಿಕ ಜನಜಾಗೃತಿಯನ್ನು ಕಂಡು ಅಧಿಕಾರಿಗಳಿಗೆ ದಿಕ್ಕುತೋಚದಂತಾಯಿತು. ಪ್ರಾಯಶಃ ಆ ಕಾರಣದಿಂದಲೇ ಸರಕಾರವು ರಾಜಕೀಯ ಬಂದಿಗಳನ್ನು ತಾನಾಗಿಯೇ ಬಿಡುಗಡೆ ಮಾಡಿತು. ಕಾಂಗ್ರೆಸ್ಸು ಇಮ್ಮಡಿ ಹುರುಪಿನಿಂದ ತನ್ನ ರಚನಾತ್ಮಕ ಕಾರ್ಯಕ್ರಮಗಳನ್ನು ಮುಂದುವರಿಸಿತು.

1938 ರ ಎಪ್ರಿಲ್ ತಿಂಗಳಲ್ಲಿ ಶಿವಪುರದ ಮೈಸೂರು ಕಾಂಗ್ರೆಸ್ಸಿನ ಮೊದಲನೆಯ ಅಧಿವೇಶನವು ಸೇರಿದಾಗ ರಾಷ್ಟ್ರಧ್ವಜವನ್ನು ಹಾರಿಸಕೂಡದೆಂಬ ಪ್ರತಿಬಂಧಕಾಜ್ಞೆ ಹಾಕಿ ಸರಕಾರವು ಪುನಃ ವ್ಯಾಜ್ಯ ಕೋರಿತು. ಸರಕಾರದ ಈ ಕಾರ್ಯವು ಜನರ ದೇಶಾಭಿಮಾನವನ್ನು ಮತ್ತು ಭಾರತದ ರಾಷ್ಟ್ರಧ್ವಜದಲ್ಲಿ ಅವರಿಗಿದ್ದ ಅಭಿಮಾನವನ್ನು ಅಪಮಾನಗೊಳಿಸುವುದಾಗಿತ್ತು. ಜನರಲ್ಲಿ ಉತ್ಪನ್ನವಾದ ಅಸಮಾಧಾನದ ಚಂಡಮಾರುತದ ಮಹಾ ರಭಸದ ಮುಂದೆ ಪ್ರತಿಬಂಧಕಾಜ್ಞೆಯು ಧೂಳಿಪಟವಾಗಿಬಿಟ್ಟಿತು. ಶಿವಪುರದ ಧ್ವಜಸ್ತಂಭದಿಂದ ಆದಿಯಾಗಿ ದೇಶದ ಮೂಲೆ ಮೂಲೆಗಳಲ್ಲೂ ನೂರಾರು ಮೈಸೂರು ವೀರ ಸ್ತ್ರೀ ಪುರುಷರು ಧೈರ್ಯದಿಂದ ಧ್ವಜದ ಗೌರವ ಕಾಯಲು ಮುಂದೆ ಬಂದು ಸೆರೆಮನೆ ಸೇರಿದರು. ಈ ಸಂದರ್ಭದಲ್ಲಿ ಮೈಸೂರು ಕಾಂಗ್ರೆಸ್ಸಿನ ಉತ್ತಮ ಶಿಸ್ತು, ಕರ್ತವ್ಯ, ದಕ್ಷತೆ, ಸತ್ಯ ಮತ್ತು ಅಹಿಂಸೆಯಲ್ಲಿನ ಅದರ ಅಚಲ ನಂಬಿಕೆ, ತ್ಯಾಗ ಮತ್ತು ಸೇವೆಯಲ್ಲಿನ ಅದರ ಅಸಾಮಾನ್ಯ ಚಿತ್ತಸ್ಥೈರ್ಯ ಇವೆಲ್ಲವೂ ವ್ಯಕ್ತವಾದವು. ಸರಕಾರದ ಈ ದಬ್ಬಾಳಿಕೆಯು ವಿದುರಾಶ್ವತ್ಥದಲ್ಲಿ ಶಾಂತರಾದ ನಿಶ್ಶಸ್ತ್ರರಾದ ಜನರ ಮೇಲೆ ಗುಂಡು ಹಾರಿಸಿ ಕೊಲ್ಲುವುದರಲ್ಲಿ ಪರ್ಯವಸಾನವಾಯಿತು. ಜಲಿಯನ್ ವಾಲಾಬಾಗ್

ಕೊಲೆಯಾದಂದಿನಿಂದ ಈಚೆಗೆ ಭಾರತದಲ್ಲಿ ನಡೆದ ಅತ್ಯಾಚಾರಗಳಲ್ಲಿ ಅತಿ ಕ್ರೂರವಾದುದಿದೆಂದು ಲೋಕವೇ ಖಂಡಿಸಿತು.

ಇದು ನಡೆದ ಕೆಲವು ದಿನಗಳಲ್ಲಿಯೇ ಸರ್ದಾರ್ ವಲ್ಲಭಾಯಿ ಪಟೇಲ್, ಆಚಾರ್ಯ ಕೃಪಲಾನಿಯವರ ಮೂಲಕ ಕಾಂಗ್ರೆಸ್ಸಿಗೂ ಸರಕಾರಕ್ಕೂ ಒಪ್ಪಂದವಾಯಿತು. 1938 ರ ಮೇ 17 ನೇ ತಾರೀಖು ಸರಕಾರವು ಪ್ರಕಟಿಸಿದ ಪ್ರಸಿದ್ಧ ಪತ್ರಿಕೆಯಲ್ಲಿ ಇದು ಸೂಚಿತವಾಯಿತು. ಸರಕಾರವು ಒಪ್ಪಂದವನ್ನು ಲೇಶವೂ ಗೌರವಿಸಲಿಲ್ಲವೆಂಬುದಕ್ಕೆ ಅಲ್ಲಿಂದೀಚೆಗೆ ಅನೇಕ ಘಟನೆಗಳು ನಡೆದಿವೆ. ಅನೇಕ ಬಾರಿ ಸರಕಾರದಲ್ಲಿ ಬಿನ್ನಹ ಮಾಡಿಕೊಂಡಾಗ್ಯೂ ಇಬ್ಬರು ಕಾಂಗ್ರೆಸ್ಸಿನವರ ಮೇಲೆ ಹಾಕಿದ ಗಡೀಪಾರು ಆಜ್ಞೆಗಳನ್ನೂ ಮತ್ತು ಕನ್ನಡ ವಾರಪತ್ರಿಕೆಯೊಂದನ್ನು ಪ್ರಕಟಿಸಕೂಡದೆಂಬ ನಿಷೇದಾಜ್ಞೆಯನ್ನೂ ತೆಗೆಯಲಿಲ್ಲ. ಒಪ್ಪಂದವಾಗಲು ಪ್ರಮುಖ ಕಾರಣರಾದ ಸರದಾರ್ ಪಟೇಲ್ ಮತ್ತು ಆಚಾರ್ಯ ಕೃಪಲಾನಿಯವರು ಪ್ರತಿಬಂಧಕಾಜ್ಞೆಗಳಲ್ಲಿ ಗಡೀಪಾರ್ ಆಜ್ಞೆಗಳು ಸೇರಿವೆಯೆಂದೂ ಮತ್ತು ಆ ಗಡೀಪಾರು ಆಜ್ಞೆಗಳನ್ನು ಹಿಂದಕ್ಕೆ ತೆಗೆದುಕೊಳ್ಳಲು ನಿರಾಕರಿಸಿರುವುದರಿಂದ ಸರಕಾರವು ಒಪ್ಪಂದವನ್ನು ಮುರಿದಿದೆಯೆಂದೂ ಸ್ಪಷ್ಟಪಡಿಸಿದ್ದಾರೆ. ಗವೀಪುರದಲ್ಲಿ ಸೇರಿದ ಅಖಿಲ ಮೈಸೂರು ಕಾಂಗ್ರೆಸ್ ಸಮಿತಿಯು ಈ ಪ್ರತಿಬಂಧಕಾಜ್ಞೆಗಳನ್ನು ಹಿಂದಕ್ಕೆ ತೆಗೆದುಕೊಳ್ಳಬೇಕೆಂದು ಪ್ರಾರ್ಥಿಸುವ ನಿರ್ಣಯ ಮಾಡಿದರೂ ಸರಕಾರವು ಅದನ್ನು ಲೆಕ್ಕಿಸಲಿಲ್ಲ. ಆ ನಂತರ ರಮೇಶಂ ಸಮಿತಿ ವರದಿ ಹೊರಬಿತ್ತು. ಅದು ತನ್ನ ಕಾರ್ಯಕಲಾಪಗಳ ಮಿತಿಯನ್ನು ಮೀರಿಹೋಗಿ ಕಾಂಗ್ರೆಸ್ಸಿನ ತೇಜೋಭಂಗ ಮಾಡುವ ಮತ್ತು ವಿದುರಾಶ್ವತ್ಥದಲ್ಲಾದ ರಾಕ್ಷಸೀ ದುರ್ಘಟನೆಯ ಜವಾಬ್ದಾರಿಯನ್ನು ಸರಕಾರದವರ ಹೆಗಲ ಮೇಲಿನಿಂದ ಕಾಂಗ್ರೆಸ್ಸಿನ ಹೆಗಲಿಗೇರಿಸುವ ಹೀನ ಕಾರ್ಯಕ್ಕೆ ಕೈ ಹಾಕಿತು.

ಸುಧಾರಣಾ ಸಮಿತಿಯಲ್ಲಿದ್ದ ಕಾಂಗ್ರೆಸ್ ಸದಸ್ಯರ ಪೈಕಿ ಒಬ್ಬರು ಕಾಂಗ್ರೆಸ್ಸಿಗೆ ರಾಜಿನಾಮೆಯಿತ್ತು ಸುಧಾರಣಾ ಸಮಿತಿಯ ತಮ್ಮ ಸದಸ್ಯತ್ವಕ್ಕೆ ರಾಜಿನಾಮೆ ಕೊಡಲು ಸಮ್ಮತಿಸಲಿಲ್ಲ. ಅವರ ಸ್ಥಾನದಲ್ಲಿ ಕಾರ್ಯಕಾರಿ ಸಮಿತಿಯವರು ನೇಮಿಸಿದ ಬೇರೊಬ್ಬರನ್ನು ಅಂಗೀಕರಿಸಲು ಸರಕಾರವು ನಿರಾಕರಿಸಿತು. ಕಾಂಗ್ರೆಸ್ಸು ಸರಕಾರದೊಂದಿಗೆ ಅಸಹಕರಿಸಲು ಇವು ಪ್ರತಿಯೊಂದೂ ಪ್ರಬಲ ಕಾರಣಗಳೇ ಆಗಿದ್ದವು. ಆದರೆ ಕಾಂಗ್ರೆಸ್ಸು ಅನಿವಾರ್ಯವಾದ ವಿನಃ ಹೋರಾಟಕ್ಕೆ ತೊಡಗಬಾರದೆಂಬ ತಮ್ಮ ನೀತಿಗೆ ಅನುಗುಣವಾಗಿ, ಸುಧಾರಣಾ ಸಮಿತಿಯಿಂದ ತಮ್ಮ ಸದಸ್ಯರನ್ನು ವಾಪಸು ಕರೆಯುವಷ್ಟರಿಂದ ಮಾತ್ರವೇ ಆ ಮೂಲಕ ತನ್ನ ನೈತಿಕ ಪ್ರತಿಭಟನೆಯನ್ನು ವ್ಯಕ್ತಪಡಿಸಿತು. ಅದಾದ ಕೆಲ ಕಾಲದಲ್ಲಿಯೇ, ನ್ಯಾಯ ವಿಧಾಯಕ ಸಭೆಯಲ್ಲಿ ದಿವಾನರು ಒಂದು ಅತ್ಯಾಶ್ಚರ್ಯಕರವಾದ ಹೇಳಿಕೆಯಿತ್ತರು,

ಕಾಂಗ್ರೆಸ್ಸಿಗೂ ಸರಕಾರಕ್ಕೂ ಒಪ್ಪಂದವೇ ಆಗಿರಲಿಲ್ಲವೆಂದು ಹೇಳಿ, "ಒಪ್ಪಂದ" ವೆಂಬ ಮಾತೇ ತಮಗೆ "ಅಸಹ್ಯ" ವೆಂದೂ ಸಹ ಹೇಳಿದರು. ಒಪ್ಪಂದ ಇಲ್ಲವೆಂದು ಸರಕಾರದವರಾಡಿದ ಶುದ್ಧ ಸುಳ್ಳನ್ನು ಕೇಳಿ ಪಂಡಿತ ಜವಾಹರಲಾಲರು ತಮ್ಮ ಹೇಳಿಕೆಯಲ್ಲಿ ಈ ರೀತಿ ನುಡಿದಿದ್ದಾರೆ.

"ಸಂಸ್ಥಾನಿಕ ಸರಕಾರಗಳಲ್ಲಿ ಹೊಸ ಮನೋವೃತ್ತಿ ನೆಲೆಗೊಳ್ಳುತ್ತಿರುವುದೆನ್ನು ವುದಕ್ಕೆ ಈ ನಿರಾಕರಣೆಯೇ ಸಾಕ್ಷಿ. 1938ರ ಮೇ ತಿಂಗಳಿನಲ್ಲಿ ಒಪ್ಪಂದವಾಯಿತೆಂಬ ಅಂಶವನ್ನು 1938 ರ ಮೇ 16 ನೇ ತಾರೀಖು ಅಖಿಲ ಭಾರತ ಕಾಂಗ್ರೆಸ್ಸಿನ ಕಾರ್ಯಕಾರಿ ಸಮಿತಿಯು ಮಾಡಿದ ನಿರ್ಣಯದಲ್ಲಿ ಅಡಕವಾಗಿಸಿದೆ ಮತ್ತು ದಿವಾನ ರಾದರೋ ಇದುವರೆಗೂ ತಾವು ಒಪ್ಪಂದವನ್ನು ಮುರಿಯಲಿಲ್ಲವೆಂದು ವಾದಿಸು ತ್ತಲೇ ಇದ್ದರು. ಈಗಲಾದರೋ ಒಪ್ಪಂದವೇ ಆಗಲಿಲ್ಲವೆಂದು ಹೇಳತೊಡಗಿ ದ್ದಾರೆ. ದಿವಾನರ ಮಾತೆ ಸ್ಥಿರವಾಗಬೇಕಾದರೆ ಇತಿಹಾಸದ ಪುಟಗಳಿಂದ ಕಳೆದ ವರ್ಷದ ವಿದ್ಯಮಾನಗಳನ್ನು ತೊಡೆದುಹಾಕಬೇಕಾಗುವುದು. ಈ ರೀತಿ ಸರ ಕಾರಕ್ಕೆ ತಾವಿತ್ತ ವಾಗ್ದಾನವನ್ನು ಪಾಲಿಸಬೇಕೆಂಬ ಶುದ್ಧ ಹೃದಯವಿಲ್ಲದುದು ಅವರೀ ನಡತೆಯಿಂದಲೇ ಎದ್ದು ಕಾಣುವುದು.

ಸುಧಾರಣಾ ಸಮಿತಿಯು ಕಾರ್ಯಕಲಾಪಗಳೂ ಮುಂದೆ ಬರಲಿರುವ ಸುಧಾರಣೆಗಳೇನೆಂಬುದೂ ಪತ್ರಿಕೆಗಳಲ್ಲಿ ಪ್ರಕಟವಾಗಿದೆ. ಅವುಗಳು ಸರಿಯಲ್ಲ ವೆಂದು ಸರ್ಕಾರ ಹೇಳಿಕೆಯನ್ನು ಕೊಟ್ಟಿಲ್ಲ. ಇವುಗಳಿಂದ ಜವಾಬ್ದಾರೀ ಸರ್ಕಾರ ವನ್ನು ಕೂಡಲೇ ಸ್ಥಾಪಿಸಬೇಕೆಂಬ ಜನರ ಅಪೇಕ್ಷೆಯನ್ನು ಸರಕಾರವು ನೆರವೇರಿಸಿ ಕೊಡಲು ಸಿದ್ಧರಿಲ್ಲವೆಂಬುದು ಕಾಂಗ್ರೆಸ್ಸಿನವರಿಗೂ ಸಾರ್ವಜನಿಕರಿಗೂ ಮಂದಟ್ಟಾ ಗಿದೆ. ಇದಲ್ಲವೂ ಕಾಲತಳ್ಳಲು ಸರಕಾರವು ಹೂಡಿರುವ ಯುಕ್ತಿಯೆಂಬುದು ನಿಸ್ಸಂಶಯವು.

ಶಾಂತಿಮಾರ್ಗ ಸಾಧನ ಪ್ರಯತ್ನ

ಇಷ್ಟಾದರೂ ಮೈಸೂರು ಶಾಂತಿಮಾರ್ಗದಿಂದ ಒಂದು ಒಪ್ಪಂದಕ್ಕೆ ಬರ ಬೇಕೆಂಬ ತನ್ನ ಆಕಾಂಕ್ಷೆಯನ್ನು ತ್ಯಜಿಸಿಬಿಡಲಿಲ್ಲ. ಅರಸೀಕೆರೆಯಲ್ಲಿ ಸೇರಿದ ಅಖಿಲ ಮೈಸೂರು ಕಾಂಗ್ರೆಸ್ ಸಮಿತಿಯು ಸರಕಾರದೊಂದಿಗೆ ಮತ್ತೊಮ್ಮೆ ಸಂಧಾನ ಪ್ರಯತ್ನ ನಡೆಯಬೇಕೆಂದು ನಿರ್ಣಯಿಸಿತು. ಅದಕ್ಕನುಸಾರವಾಗಿ ಮೈಸೂರು ಕಾಂಗ್ರೆಸ್ ಅಧ್ಯಕ್ಷರು ದಿವಾನರೊಂದಿಗೆ ಭೇಟಿ ಅಪೇಕ್ಷಿಸಿ ಪತ್ರ ಬರೆದರು. ಭೇಟಿಯು ನಿರಾಕರಿಸಲ್ಪಟ್ಟಿತು. ಅಧ್ಯಕ್ಷರು ತಮ್ಮ ಈ ನಿರ್ಧಾರವನ್ನು ಪುನರ್ವಿಮರ್ಶಿಸ ಬೇಕೆಂದು ದಿವಾನರನ್ನು ಪುನಃ ಪ್ರಾರ್ಥಿಸಿದರು. ತಮ್ಮ ನಿರ್ಧಾರವನ್ನು ಪುನರ್ವಿಮರ್ಶಿಸಲು ಸಾಧ್ಯವಿಲ್ಲವೆಂದು ದಿವಾನರು ಪ್ರತ್ಯುತ್ತರವಿತ್ತರು. ಜವಾ

ಬ್ದಾರಿ ಸರ್ಕಾರವನ್ನು ಕೂಡಲೆ ಸ್ಥಾಪಿಸುವ ವಿಷಯದಲ್ಲಿ ಸರಕಾರವು ಕಾಂಗ್ರೆಸ್ಸಿನೊಂದಿಗೆ ಒಂದು ತೀರ್ಮಾನಕ್ಕೆ ಬರಲು ಎಲ್ಲ ವಿಧವಾದ ಆಸ್ಪದವೀಯಲು ಯುಕ್ತವಾದೆಲ್ಲ ಪ್ರಯತ್ನಗಳನ್ನೂ ಮೈಸೂರು ಕಾಂಗ್ರೆಸ್ಸಿನವರು ಮಾಡಿರುವುದು ತೋರಿಬರುವುದು. ನಾವು ಅವರನ್ನು ಪ್ರಾರ್ಥಿಸಿದೆವು. ಸೆರಗೊಡ್ಡಿ ಬೇಡಿದೆವು. ಆದರೆ ಸರಕಾರವು ಕಾಠಿಣ್ಯ ತೋರಿತು. ದೇಶಾದ್ಯಂತವೂ ತನ್ನ ಪ್ರಭಾವ ಬೆಳಸಿಕೊಂಡಿರುವ ಏಕಮಾತ್ರ ರಾಜಕೀಯ ಸಂಸ್ಥೆಯಾದ ಕಾಂಗ್ರೆಸ್ಸಿಗೆ ಭೇಟಿ ನಿರಾಕರಿಸಿದ ಅವರ ವರ್ತನೆಯು ಕಾಂಗ್ರೆಸ್ಸಿನ ತೇಜೋಭಂಗ ಮಾಡುವ, ಅಪಮಾನ ಮಾಡುವ ಉದ್ದೇಶಪೂರಿತವಾದುದೆಂಬುದು ನಿಸ್ಸಂಶಯವಾಗಿದೆ. ಆದರೂ ಒಂದು ಗೌರವಯುತವಾದ ಒಂಪ್ಪದಕ್ಕೆ ಬರಲು ಸೆಪ್ಟೆಂಬರ್ 1 ನೇ ತಾರೀಖಿನವರೆಗೆ ಸರಕಾರಕ್ಕೆ ಆಸ್ಪದ ಕೊಡಬೇಕೆಂಬ ಅರಸೀಕೆರೆಯಲ್ಲಿ ಆದ ನಿರ್ಣಯವನ್ನು ಪಾಲಿಸಿತು.

ರಾಬರ್ಟ್‌ಸನ್ ಪೇಟೆಯಲ್ಲಿ ಹಾಕಿದ ಪ್ರತಿಬಂಧಕಾಜ್ಞೆಗಳೂ ತತ್ಕಾರಣವಾದ ದಸ್ತಗಿರಿಗಳೂ ಶಿಕ್ಷೆಗಳೂ ಹಾಗೂ ಇತ್ತೀಚೆಗೆ ತುಮಕೂರಿನಲ್ಲಿ ಹಾಕಿರುವ ಪ್ರತಿಬಂಧಕಾಜ್ಞೆ ಇವೂ ಕಾಂಗ್ರೆಸ್ಸಿನ ಸಾಧಾರಣ ಒತ್ತಾಯದಿಂದ ಹೋರಾಟಕ್ಕಿಳಿಯಲು ಸರಕಾರವು ಹವಣಿಸಿದೆಯೆಂಬುದನ್ನು ಸಂದೇಹಾಸ್ಪದವಿಲ್ಲದಂತೆ ಸೂಚಿಸುತ್ತದೆ. ಕಾಂಗ್ರೆಸ್ಸಿಗೆ ಹೋರಾಟದಲ್ಲಿ ಭೀತಿಯಿಲ್ಲ. ಈ ಸರಕಾರದ ಬಲವೊಂದನ್ನಷ್ಟೇ ಅಲ್ಲದೆ ಮತ್ತಾವುದೇ ಬಲವನ್ನಾಗಲೀ ಎದುರಿಸಲು ಕಾಂಗ್ರೆಸ್ ಸಿದ್ಧವಿದೆ. ಏಕೆಂದರೆ ಕಾಂಗ್ರೆಸ್ಸಿಗೆ ತನ್ನ ಬೇಡಿಕೆಗಳು ನ್ಯಾಯವಾದುದಿವೆ, ಅದರ ರೀತಿ ನೀತಿಗಳು ಪರಿಶುದ್ಧವಾದುವೂ ಮುಚ್ಚುಮರೆಯಿಲ್ಲದವೂ ಆಗಿವೆ ಎಂಬುದರ ಅರಿವಿದೆ.

1939 ನೇ ಸೆಪ್ಟೆಂಬರ್ 1 ನೇ ತಾರೀಖಿಗೆ ಅರಸೀಕೆರೆಯ ಅ.ಮೈ.ಕಾ. ಸಮಿತಿಯು ಸೂಚಿಸಿದ ಕಾಲಾವಧಿಯು ಇಂದಿಗೆ ಮುಕ್ತಾಯವಾಯಿತು. ನಮಗಿಂದು ಕಾಣಬರುತ್ತಿರುವುದೇನು ? ಪರಿಸ್ಥಿತಿಯನ್ನು ಶಮನಗೊಳಿಸಲು ಸರಕಾರದವರು ಯಾವುದೇ ಸೌಜನ್ಯಯುಕ್ತವಾದ ಕಾರ್ಯಕ್ರಮವನ್ನೂ ಕೈಗೊಂಡಿಲ್ಲ. ಮೈಸೂರು ಜನತೆಯ ನ್ಯಾಯಸಮ್ಮತವಾದ ಆಕಾಂಕ್ಷೆಗಳಿಗೆ ಮನ್ನಣೆ ಕೊಡುವ ಮನೋಭಾವವು ಸರಕಾರಕ್ಕಿಲ್ಲ ; ಅದನ್ನು ತಿಳಿಯಲು ಮುಂದಡಿಯಿಟ್ಟಿದೆ. ಜನರ ಬೇಡಿಕೆಯ ಹಿಂದಿರುವ ಶಕ್ತಿ ಎಷ್ಟೆಂಬುದನ್ನು ಪರೀಕ್ಷಿಸಬೇಕೆಂದು ಅವರ ಆಸೆಯೆಂದು ಕಾಣುತ್ತದೆ. ತಮ್ಮ ಹೃದಯಂದ ಆಶೆಯನ್ನು ಪಡೆದುಕೊಳ್ಳಲು ಮೈಸೂರಿನವರು ಎಷ್ಟು ಮಟ್ಟಿನ ತ್ಯಾಗಕ್ಕೆ ಸಿದ್ಧರಾಗಿದ್ದಾರೆಂಬುದರ ಪರೀಕ್ಷೆ ನಡೆಸಬೇಕೆಂಬುದು ಅವರ ಆಶೆಯೆಂದು ಕಾಣುತ್ತದೆ. ಶಾಸನ ರೀತ್ಯಾ ಸ್ಥಾಪಿತವಾಗಿರುವ ಸರಕಾರವು ತಮ್ಮ ಶಕ್ತಿಯನ್ನು ನೆಚ್ಚಿ ಜನಾಭಿಪ್ರಾಯವನ್ನು ಕಡೆಗಣಿಸಬಹುದೆಂದು ಅವರು ತಿಳಿದಿರುವಂತೆ ಕಾಣುತ್ತದೆ. ಮೈಸೂರು ಜನತೆಯ ಪರವಾಗಿ ಅವರ ಈ ಸವಾಲನ್ನು

ಅಂಗೀಕರಿಸುತ್ತೇನೆ. ಮೈಸೂರಿನವರ ಅಪ್ರತಿಮ ದೇಶಭಕ್ತಿಯಲ್ಲಿ, ತಮ್ಮ ಸಂಕಲ್ಪಸಿದ್ಧಿಗಾಗಿ ಅವರು ಮಾಡಲು ಸಿದ್ಧರಿರುವ ತ್ಯಾಗ ಮುಂತಾದುವುಗಳಲ್ಲಿ ನನಗೆ ಸಂಪೂರ್ಣ ನಂಬಿಕೆ ಇದೆ. ಅರಸೀಕೆರೆಯಲ್ಲಿ ಸೇರಿದ ಅಖಿಲ ಮೈಸೂರು ಕಾಂಗ್ರೆಸ್ ಸಮಿತಿಯು ಇತರ ನಿರ್ಧಾರಗಳೊಂದಿಗೆ ಕೂಡಲೇ ಜವಾಬ್ದಾರಿ ಸರಕಾರ ಸ್ಥಾಪನೆಗಾಗಿ ಕಾಂಗ್ರೆಸ್ಸು ಒಂದು ನಿರ್ಧಾರವಾದ ಕಾರ್ಯಕ್ರಮವನ್ನು ಕೈಗೊಳ್ಳಲು ಸಮಯವು ಸನ್ನಿಹಿತವಾಗಿದೆಯೆಂದೂ ಇದಕ್ಕಾಗಿ ಜನತೆಯು ಅಮಿತ ತ್ಯಾಗ, ಕಷ್ಟಗಳನ್ನು ಅನುಭವಿಸುವುದು ಅನಿವಾರ್ಯವೆಂದೂ ತೀರ್ಮಾನಿಸಿದ್ದಲ್ಲದೆ ಸೆಪ್ಟೆಂಬರ್ 1 ನೇ ತಾರೀಖಿನೊಳಗೆ ಒಂದು ತೀರ್ಮಾನಕ್ಕೆ ಬರಲು ಸಾಧ್ಯವಾಗದಿದ್ದರೆ ವರ್ಕಿಂಗ್ ಸಮಿತಿಯೇ ಕಾಂಗ್ರೆಸ್ ಧ್ಯೇಯಸಾಧನೆಗಾಗಿ ಅಗತ್ಯವಾದ ಎಲ್ಲಾ ಕಾರ್ಯಕ್ರಮಗಳನ್ನೂ ನಿರ್ಧರಿಸಿಕೊಳ್ಳಲು ಅದಕ್ಕೆ ಎಲ್ಲಾ ಅಧಿಕಾರವನ್ನೂ ಕೊಟ್ಟರು.

ಕಾಂಗ್ರೆಸ್ ವ್ಯವಸ್ಥೆಯನ್ನು ರದ್ದುಗೊಳಿಸಲಾಗಿದೆ

ಅಖಿಲ ಮೈಸೂರು ಕಾಂಗ್ರೆಸ್ ಸಮಿತಿಯು ವರ್ಕಿಂಗ್ ಕಮಿಟಿಯ ಬದಲಾವಣೆ ಹೊಂದಿದ ಮೈಸೂರು ಕಾಂಗ್ರೆಸ್ ಯೋಜನೆಯನ್ನು ಸಹ ಅನುಮೋದಿಸಿತು. ನಾನು ಈ ದಿನ ಮೇಲ್ಕಂಡ ರಚನಾಕ್ರಮದ ಆರ್ಟಿಕಲ್ 15ರಂತೆ ಈ ಯೋಜನೆಯನ್ನು ತಾತ್ಕಾಲಿಕವಾಗಿ ರದ್ದುಮಾಡಿ ಎಲ್ಲಾ ಅಧಿಕಾರವನ್ನೂ ನಾನೇ ವಹಿಸಿಕೊಂಡಿರುತ್ತೇನೆ.

ದುರದೃಷ್ಟವಶಾತ್ ಇಂದು ಸೆರೆಮನೆಯಲ್ಲಿದ್ದರೂ ಮುಂದಾಗುವುದನ್ನು ಅಮೂಲಾಗ್ರವಾಗಿ ಯೋಚಿಸಿಯೇ ನಮ್ಮ ಮುಂದಿನ ಕಾರ್ಯಕ್ರಮ ನಿರ್ಧಾರವನ್ನು ಮಾಡಿಹೋದ ನಮ್ಮ ಮಿತ್ರರಾದ ವರ್ಕಿಂಗ್ ಸಮಿತಿ ಸದಸ್ಯರುಗಳ ಅಭಿಪ್ರಾಯಗಳು ನನಗೆ ತುಂಬಾ ಅನುಕೂಲಪ್ರಾಯವಾಗಿವೆ. ಹೊರಗಿರುವ ಇತರ ಪ್ರತಿನಿಧಿಗಳ ಅಭಿಪ್ರಾಯಗಳನ್ನೂ ತಿಳಿದುಕೊಂಡಿರುತ್ತೇನೆ. ತಾರೀಖು 1-9-39ರ ಒಳಗೆ ತೀರ್ಮಾನಕ್ಕೆ ಬರುವ ಸೂಚನೆಯು ತೋರಿಬರದೇ ಹೋದರೆ ಆಗ ಹೋರಾಟವು ಅನಿವಾರ್ಯವೆಂದು ಕಾಂಗ್ರೆಸ್ಸಿನ ಧ್ಯೇಯಸಾಧನೆಗಾಗಿ ಅಗತ್ಯವಾದ ಎಲ್ಲಾ ಕಾರ್ಯಕ್ರಮಗಳನ್ನೂ ಕೈಗೊಳ್ಳಬೇಕೆಂದು ಎ.ಎಂ.ಸಿ.ಸಿ.ಯು ಮಾಡಿದ ನಿರ್ಣಯವು ತೀರ್ಮಾನಕ್ಕೆ ಬೆಂಬಲ ಕೊಟ್ಟಿದೆ. ಇವುಗಳನ್ನೆಲ್ಲಾ ನನ್ನಲ್ಲೇ ನಾನು ಚೆನ್ನಾಗಿ ಆಲೋಚಿಸಿರುತ್ತೇನೆ. ಅದಷ್ಟು ಮಂದಿ ಕಾಂಗ್ರೆಸ್ ಸದಸ್ಯರೊಂದಿಗೆ ಆಲೋಚಿಸಿದ್ದೇನೆ. ನನ್ನ ಕಾರ್ಯಕ್ರಮವು ದೇಶದ ಇಂದಿನ ಹಿತದೃಷ್ಟಿಯಲ್ಲಿ ಅಗತ್ಯವೆಂದು ತಿಳಿಯುತ್ತೇನೆ. ಅಲ್ಲದೆ ಅರಸೀಕೆರೆಯಲ್ಲಿ ಅಖಿಲ ಮೈಸೂರು ಕಾಂಗ್ರೆಸ್ ಕಮಿಟಿಯು ಮತ್ತು ತದನಂತರ ನಡೆದ ವರ್ಕಿಂಗ್ ಕಮಿಟಿಯ ತೀರ್ಮಾನಗಳೂ ನನ್ನೀ ಕಾರ್ಯಕ್ರಮವನ್ನೇ ಪುಷ್ಟೀಕರಿಸುವುದಾಗಿ ತಿಳಿಯುತ್ತೇನೆ.

ಶ್ರೀಮಾನ್ ಮಹಾರಾಜರವರ ಕೃಪಾಶ್ರಯದಲ್ಲಿ ಸಂಪೂರ್ಣ ಜವಾಬ್ದಾರಿ ಸರಕಾರ ಸ್ಥಾಪನೆಯೇ ಕಾಂಗ್ರೆಸ್ಸಿನ ಧ್ಯೇಯವೆಂದೂ ಇದಕ್ಕೆ ಕಮ್ಮಿಯಾದ ಯಾವ ಸುಧಾರಣೆಯಿಂದಲೂ ಕಾಂಗ್ರೆಸ್ಸು ತೃಪ್ತಿಹೊಂದುವುದಿಲ್ಲವೆಂದೂ ನಾನು ಮತ್ತೆ ಒತ್ತಿ ಹೇಳುತ್ತೇನೆ. ಆದ್ದರಿಂದ ಇದುವರೆಗೆ ಒಂದು ಗೌರವಯುತವಾದ ಒಪ್ಪಂದಕ್ಕೆ ಬರಲು ನಾನು ಮಾಡಿದ ಎಲ್ಲಾ ಪ್ರಯತ್ನಗಳು ನಿಷ್ಫಲವಾದುದ ರಿಂದಲೂ ಮತ್ತು ಕಾಂಗ್ರೆಸ್ಸಿಗೆ ಬೇರೆ ಇನ್ನಾವ ಮಾರ್ಗವೂ ಉಳಿದಿಲ್ಲದಿರುವುದ ರಿಂದಲೂ ಇನ್ನು ಮೈಸೂರು ಕಾಂಗ್ರೆಸ್ ತನ್ನೆಲ್ಲಾ ಶಕ್ತಿ ಸಾಮರ್ಥ್ಯಗಳಿಂದ ಶಾಂತ ರೀತಿಯಿಂದ ಸರಕಾರದವರು ಹಾಕಿರುವ ಎಲ್ಲಾ ಪ್ರತಿಬಂಧಕಾಜ್ಞೆಗಳನ್ನು ಎದುರಿಸುವುದರ ಮೂಲಕ ತನ್ನ ಶಾಂತಿ ಹೋರಾಟದ ನೀತಿಯನ್ನು ನಿರ್ಧರಿಸಿರುವು ದಾಗಿ ಈ ದಿನ ಅಂದರೆ ತಾರೀಖು 1-9-1939ನೇ ದಿನ ಉದ್ಘೋಷಿಸುತ್ತೇನೆ. ಈ ಕಾರಣದಿಂದ ನಮ್ಮ ನಾಗರಿಕ ಹಕ್ಕು ಬಾಧ್ಯತೆಗಳಿಗೆ ಧಕ್ಕೆ ತಂದೊಡ್ಡುವಂಥ ಹಾಲಿ ಈಗ ಜಾರಿಯಲ್ಲಿರುವ ಮತ್ತು ಮುಂದೆ ಆಗಿಂದಾಗ್ಗೆ ಜಾರಿಗೆ ಬರುವ ಎಲ್ಲಾ ಪ್ರತಿಬಂಧಕಾಜ್ಞೆಗಳನ್ನೂ ಮುರಿದು, ನನ್ನಿಂದ ಅಥವಾ ಮುಂದೆ ನನ್ನ ಸ್ಥಾನಕ್ಕೆ ಬರುವವರಿಂದ ಕಾಲಕಾಲಕ್ಕೆ ಸೂಚಿತವಾಗುವ ಎಲ್ಲಾ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕೆಂತಲೂ ನಾನು ಇಂದು ಎಲ್ಲಾ ಮೈಸೂರು ಕಾಂಗ್ರೆಸ್ಸಿನವರನ್ನೂ ಪ್ರಾರ್ಥಿಸಿಕೊಳ್ಳುತ್ತೇನೆ.

ಪ್ರಜೆಗಳ ಏಕಮಾತ್ರ ಧ್ಯೇಯವನ್ನು ಎದುರಿಸಲು ಮಾಡುವ ಸರಕಾರದ ಎಲ್ಲಾ ಪ್ರಯತ್ನಗಳೂ ನಿಷ್ಫಲವೆಂಬುದನ್ನು ತೋರಿಸಿಕೊಡುವವರೆಗೆ ಎಲ್ಲಾ ಕಾಂಗ್ರೆಸ್ಸಿನವರೂ ಮತ್ತು ಇತರ ದೇಶಭಕ್ತರೂ ತಮ್ಮ ತಮ್ಮ ಭಿನ್ನಭಾವನೆಗಳನ್ನು ತೊರೆದು, ದೃಢಸಂಕಲ್ಪರಾಗಿ ನಿಲ್ಲಬೇಕೆಂದು ಕೋರಿಕೊಳ್ಳುತ್ತೇನೆ.

ದೃಢಸಂಕಲ್ಪರಾಗಿ, ಚಿತ್ತಸ್ಥೈರ್ಯದಿಂದ ತಮ್ಮ ಸರ್ವಶಕ್ತಿಗಳನ್ನೂ ಉಪ ಯೋಗಿಸಿ ದೇಶದ ಹಿತಕ್ಕಾಗಿ ಕೆಲಸ ಮಾಡಬೇಕೆಂದು ಜನತೆಯನ್ನು ಬೇಡಿಕೊಳ್ಳುವ ಈ ಸಮಯದಲ್ಲೇ ಎದುರಾಳಿಯು ಒಂದು ಶಾಂತಿಯುತವಾದ ಒಪ್ಪಂದಕ್ಕಾಗಿ ಸಂಧಾನವನ್ನಪೇಕ್ಷಿಸಿದರೆ ಅದಕ್ಕೆ ಎಲ್ಲಾ ಸಮಯದಲ್ಲೂ ಅವಕಾಶವಿದೆಯೆಂದು ತಿಳಿಸಬಯಸುತ್ತೇನೆ. ಆದರೆ ಅಂಥಾ ಸಮಯದಲ್ಲಿ ಮೊದಲಿನ ಈ ಕಾರ್ಯಕಾರೀ ಮಂಡಲಿಯ ಸದಸ್ಯರು ಮಾತ್ರವೇ ಒಂದು ನಿರ್ಧಾರಕ್ಕೆ ಬರಲರ್ಹರೆಂದೂ, ಆಗಿಂದಾಗ್ಗೆ ನೇಮಕಮಾಡಲ್ಪಡುವ ಹಂಗಾಮಿ ಅಧ್ಯಕ್ಷರಾಗಲೀ ಸರ್ವಾಧಿಕಾರಿ ಗಳಾಗಲೀ, ಚಳುವಳಿಯ ಮೇಲ್ವಿಚಾರಣೆಯನ್ನು ನಡೆಸುವುದಕ್ಕೆ ಅಧಿಕೃತರೇ ವಿನಾ ಸಂಧಾನದ ಫಲವಾಗಿ ಚಳುವಳಿಯನ್ನು ನಿಲ್ಲಿಸುವುದಕ್ಕಾಗಲೀ ಸಂಧಾನವನ್ನಾರಂಭಿಸು ವುದಕ್ಕಾಗಲೀ ಅವರು ಅಧಿಕಾರವನ್ನು ಹೊಂದಿಲ್ಲವೆಂಬ ಅಂಶವನ್ನು ಮಹಾಜನಗಳು ಜ್ಞಾಪಕದಲ್ಲಿಡಬೇಕು.

ನನ್ನ ದೇಶಬಾಂಧವರೇ, ನಮ್ಮೀ ಹೋರಾಟದ ನೀತಿಯ ಆಚಾರ್ಯರು ಶಾಂತಿ ಮತ್ತು ಅಹಿಂಸೆಯ ಸಂಶೋಧಕರಾದ ಮಹಾತ್ಮಾ ಗಾಂಧಿಯವರೆಂಬುದನ್ನು ನೀವೆಲ್ಲಾ ನೆನಪಿನಲ್ಲಿಡಬೇಕು. ಶಾಂತಿ ಮತ್ತು ಅಹಿಂಸೆಯ ಮಾರ್ಗದಲ್ಲಿ ನಾವು ನೀವೆಲ್ಲಾ ಕಿಂಚಿತ್ತು ದಾರಿತಪ್ಪಿದರೂ ಅದರಿಂದ ನಮ್ಮ ಧ್ಯೇಯಕ್ಕೆ ಧಕ್ಕೆ ತಪ್ಪದು. ಕಾಯಾ ವಾಚಾ ಮನಸಾ ಮೈಸೂರಿನ ಪ್ರಜೆಗಳು ಚಾಚೂ ತಪ್ಪದೆ ಅನುಸರಿಸ ಬೇಕೆಂದೂ ಎಂತಹ ಉದ್ರೇಕದ ಪರಿಸ್ಥಿತಿಯಲ್ಲೂ ಶಾಂತಿ ಮತ್ತು ಅಹಿಂಸಾಯುತ ರಾಗಿರಬೇಕೆಂದೂ ಪ್ರಾರ್ಥಿಸುತ್ತೇನೆ. ಅಹಿಂಸೆಯ ಬಗ್ಗೆ ಹೆಚ್ಚಿಗೆ ಒತ್ತಿ ಹೇಳ ಲಾಗುವುದಿಲ್ಲ. ನಮ್ಮ ಹೋರಾಟದ ಅಸ್ತ್ರವೇ ಅದು. ಭಗವಂತನು ನಮಗೆ ನಮ್ಮ ಹೋರಾಟದಲ್ಲಿ ಸಹಾಯ ಮಾಡಲೆಂದೂ ಬೇಡುತ್ತೇನೆ ಮತ್ತು ಇದೇ ಕೊನೆಯ ಹೋರಾಟವಾಗಲೆಂದೂ ಹಾರೈಸುತ್ತೇನೆ."

ಬನಪ್ಪಾ ಪಾರ್ಕಿನ ತಮ್ಮ ಭಾಷಣದಲ್ಲಿ ಶ್ರೀ ಟಿ. ಸಿದ್ದಲಿಂಗಯ್ಯನವರು ರಣಕಹಳೆಯನ್ನೇ ಮೊಳಗಿಸಿದರು: 'ಜವಾಬ್ದಾರಿ ಸರಕಾರದ ಸ್ಥಾಪನೆಯೇ ಮುಖ್ಯ ಗುರಿ. ಉಳಿದ ಯಾವುದೇ ಸರ್ಕಾರದ ನೀತಿಗಳಿಗೆ ಒಪ್ಪುವುದಿಲ್ಲ. ಸರಕಾರದ ಎಲ್ಲಾ ಆಜ್ಞೆಗಳನ್ನೂ ಉಲ್ಲಂಘಿಸಲಾಗುತ್ತದೆ. ಆದ್ದರಿಂದ ತಮ್ಮಿಂದ, ತಾವು ಬಂಧಿತರಾದರೆ ನೇಮಿಸುವ ಇತರ ಸರ್ವಾಧಿಕಾರಿಗಳಿಂದ ಬರುವ ಆದೇಶಗಳನ್ನು ಪಾಲಿಸಲು ಕಾಂಗ್ರೆಸ್ಸಿಗರು ಸಿದ್ಧರಾಗಬೇಕು. ಅಂತಿಮ ಗುರಿ ಮುಟ್ಟಲು ಸಹಾಯ ಮಾಡಬೇಕು' ಎಂದು ಘೋಷಿಸಿದ ಶ್ರೀ ಸಿದ್ದಲಿಂಗಯ್ಯನವರ ಮಾತುಗಳು ಕಾಂಗ್ರೆಸ್ಸಿಗರಲ್ಲಿ ಹೊಸ ಶಕ್ತಿಯನ್ನು ತುಂಬಿದುವು. ಜವಾಬ್ದಾರಿ ಸರಕಾರಕ್ಕಾಗಿ ಎಲ್ಲಾ ರೀತಿಯಿಂದಲೂ ಹೋರಾಡಲು ಕಾಂಗ್ರೆಸ್ಸಿಗರು ಸಿದ್ಧರಾದರು.

ಸರಕಾರವು ಕಾಂಗ್ರೆಸ್ಸಿನ ಮನಪೊಲಿಸುವ ಮಾರ್ಗ ಹಿಡಿಯದೆ ನಾಯಕರನ್ನು ಹಿಡಿದು ಸೆರೆಮನೆ ತುಂಬಲು ಪ್ರಾರಂಭಿಸಿತು. ಸರ್ವಾಧಿಕಾರಿ ಶ್ರೀ ಟಿ. ಸಿದ್ಧಲಿಂಗಯ್ಯನವರ ದಸ್ತಗಿರಿಯಾಯಿತು. ಅವರ ಅನಂತರ ಅವರಿಂದ ನೇಮಕ ರಾದ 23 ಜನ ಸರ್ವಾಧಿಕಾರಿಗಳೂ ಸೆರೆಮನೆಗೆ ಹೋದರು. ಸುಮಾರು 200 ಜನ ಕಾಂಗ್ರೆಸ್ ಕಾರ್ಯಕರ್ತರು ಜೈಲಿಗೆ ಹೋದರು. ಅನೇಕರನ್ನು ಕಾಡಿಗೆ ಬಿಟ್ಟು ತೊಂದರೆ ಪಡುವಂತೆ ಮಾಡಿದರು. ಚಿಕ್ಕಬಳ್ಳಾಪುರದ ಶ್ರೀ ಟಿ. ಎಸ್. ಸಂಪತ್ ಕುಮಾರನ್, ಕೋಲಾರದ ಶ್ರೀ ಸರ್ವಜ್ಞಮೂರ್ತಿ, ಮೈಸೂರಿನ ಶ್ರೀ ಎ. ಶಿವಣ್ಣ, ಮೈಸೂರಿನ ಶ್ರೀ ಎ. ರಾಮಣ್ಣ, ಕೊಡಗಿನ ಶ್ರೀ ಸಿ. ಬಿ. ಮೊನ್ನಯ್ಯ, ಬೆಂಗಳೂರಿನ ಶ್ರೀ ವಿ. ಎಸ್. ನಾರಾಯಣರಾವ್, ತುಮಕೂರಿನ ಶ್ರೀ ಎಸ್. ಕೆ. ವೀರಣ್ಣ, ಚಿಕ್ಕಬಳ್ಳಾಪುರದ ಶ್ರೀ ಆಂಜನಪ್ಪ, ಚಾಮರಾಜನಗರದ ಶ್ರೀ ಪುಟ್ಟರಂಗಪ್ಪ ಮೊದಲಾದವರು ಸರಕಾರದ ಆಜ್ಞೆಗಳನ್ನು ಉಲ್ಲಂಘಿಸಿ ಶಿಕ್ಷೆಗೆ ಒಳಗಾದರು.

ಸರಕಾರದ ಧೋರಣೆಗಳನ್ನು ಖಂಡಿಸಿ, ಜವಾಬ್ದಾರಿ ಸರಕಾರಕ್ಕಾಗಿ ಒತ್ತಾಯಿಸಿ, ಜನಸ್ತೋಮದ ಮುಂದೆ ಕ್ರಾಂತಿಕಾರಕವಾಗಿ ಭಾಷಣ ಮಾಡಿ ಬಂಧನಕ್ಕೊಳಗಾದ ಸತ್ಯಾಗ್ರಹದ ಸರ್ವಾಧಿಕಾರಿಗಳ ಹೆಸರುಗಳು ಹೀಗಿದೆ: ಶ್ರೀಗಳಾದ ಟಿ. ಸಿದ್ದಲಿಂಗಯ್ಯ, ವಾಸಪ್ಪಗೋಗಿ, ಆರ್. ರಾಘವರೆಡ್ಡಿ, ಮುಡ್ಲಗಿರಿಗೌಡ, ಎ.ಜಿ. ಬಂದೀಗೌಡ, ಜಿ. ವೆಂಕಟಸ್ವಾಮಿಗೌಡ, ಡಿ. ಎ. ರಾಮಸ್ವಾಮಿ, ರಾಮಲಾಲ್ ತಿವಾರಿ, ಶ್ರೀಪಾಲಯ್ಯ, ಕೆ. ವಿಶ್ವೇಶ್ವರಗೌಡ, ಬಿ. ಪಿ. ಬಸಪ್ಪಶೆಟ್ಟಿ, ಆನೇಕಲ್ ಕೃಷ್ಣಮೂರ್ತಿ, ಎಸ್. ಶಾಮರಾವ್, ಎಂ. ಕೆಂಪಯ್ಯ, ರಾಘವಾಚಾರ್, ಟಿ. ಸಿ. ಬಸಪ್ಪ, ಬಾಗೆಮನೆ ದೇವೇಗೌಡ, ಜಿ. ಚಿಕ್ಕೇಗೌಡ, ಟಿ. ಡಿ. ಮಾರಣ್ಣ, ಎಸ್. ಭದ್ರಯ್ಯ, ಕೋದಂಡರಾಮ ಭಟ್ಟ, ಎ. ಭೀಮಪ್ಪ ನಾಯಕ್, ಎ. ಎಲ್. ನರಸಿಂಹಯ್ಯ ಮತ್ತು ಸೊಂಡೇಕೊಪ್ಪದ ಎನ್. ಕೃಷ್ಣಮೂರ್ತಿ.

ಚಳುವಳಿಗಳ ಕಾಡ್ಗಿಚ್ಚು

ಕಾಂಗ್ರೆಸ್ಸಿನ ರಣ ಕಹಳೆಯಿಂದ ರಾಜ್ಯದಾದ್ಯಂತ ಲೆಕ್ಕವಿಲ್ಲದಷ್ಟು ಚಳುವಳಿಗಳು ನಡೆದುವು; ಲೆಕ್ಕವಿಲ್ಲದಷ್ಟು ಜನರು ನಾನಾರೀತಿಯ ಶಿಕ್ಷೆಯನ್ನು ಅನುಭವಿಸಿದರು. ಚಳುವಳಿಗಳ ದಮನಕ್ಕಾಗಿ ಸರಕಾರ ಎಲ್ಲ ರೀತಿಯ ತಂತ್ರಗಳನ್ನೂ ಬಳಸಿತು.

1939ರ ಸೆಪ್ಟೆಂಬರ್‌ನಲ್ಲಿ ಚಿತ್ರದುರ್ಗ ಜಿಲ್ಲೆಯಲ್ಲಿ ಅರಣ್ಯ ಸತ್ಯಾಗ್ರಹ ನಡೆಯಿತು. ಶ್ರೀ ಮುಂಡಲಗಿರಿ ಗೌಡರು ಸತ್ಯಾಗ್ರಹ ಶಿಬಿರವನ್ನು ಉದ್ಘಾಟಿಸಿದರು. ತುರುವನೂರಿನಲ್ಲಿ ಈಚಲ ಗಿಡ ಕಡಿದು ಅರಣ್ಯಸತ್ಯಾಗ್ರಹ ಪ್ರಾರಂಭವಾಯಿತು. ಶ್ರೀ ಎಸ್. ನಿಜಲಿಂಗಪ್ಪ, ಶ್ರೀಮತಿ ಬಳ್ಳಾರಿ ಸಿದ್ದಮ್ಮ, ಶ್ರೀಮತಿ ನಾಗರತ್ನಮ್ಮ ಹಿರೇಮಠ, ಶ್ರೀ ಕೃಷ್ಣಾರೆಡ್ಡಿ ಮೊದಲಾದರು ಇದರಲ್ಲಿ ಭಾಗವಹಿಸಿದರು. ಸರಕಾರ ಅನೇಕರನ್ನು ಬಂಧಿಸಿ ತುರುವನೂರಿನ ಜನರ ಮೇಲೆ ಪುಂಡುಗಂದಾಯ ಹೇರಿತು. ಸಂಸ್ಥಾನದ ಅನೇಕ ಕಡೆಗಳಲ್ಲಿ ನಾನಾ ರೀತಿಯ ಸತ್ಯಾಗ್ರಹಗಳು ನಡೆದು ಜೈಲುಗಳೆಲ್ಲ ಭರ್ತಿಯಾದುವು.

1940ನೇ ಏಪ್ರಿಲ್ ತಿಂಗಳಿನ ಮೈಸೂರು ಕಾಂಗ್ರೆಸ್ ವರದಿಯ ಅಂದಾಜಿನಂತೆ ಮೈಸೂರು ಸಂಸ್ಥಾನದ ಪ್ರತಿ ಜಿಲ್ಲೆಯಿಂದ ಧ್ವಜ ಸತ್ಯಾಗ್ರಹಕ್ಕಾಗಿ ಬಂಧಿತರಾದವರು ಮತ್ತು ಶಿಕ್ಷೆಗೆ ಗುರಿಯಾದವರ ಸಂಖ್ಯೆಯ ವಿವರ ಈ ರೀತಿ ಇದೆ :

ಜಿಲ್ಲೆ	ದಸ್ತಗಿರಿ	ಶಿಕ್ಷೆ	ಡಿಟೆನ್‌ಷನ್
ಕೋಲಾರ	631	373	258

ಬೆಂಗಳೂರು	370	160	155
ಮೈಸೂರು	198	168	23
ತುಮಕೂರು	352	280	72
ಚಿತ್ರದುರ್ಗ	264	166	98
ಶಿವಮೊಗ್ಗ	139	118	21
ಕಡೂರು	20	20	—
ಹಾಸನ	15	15	1
ಇತರೆ	200	200	—
ಒಟ್ಟು	2189	1500	628

ವಿವಿಧ ರೀತಿಯ ಸತ್ಯಾಗ್ರಹಗಳಲ್ಲಿ ಭಾಗವಹಿಸಿ, ಸರ್ಕಾರದ ಆಜ್ಞೆಗಳನ್ನು ಉಲ್ಲಂಘಿಸಿ ಬಂಧಿತರಾದವರ; ಬಂಧನಕ್ಕಾಗಿ ಸರಕಾರ ಬಳಸಿದ ಆಜ್ಞೆಗಳ ವಿವರ ಈ ರೀತಿಯಾಗಿದೆ.

ಅರಣ್ಯ ಸತ್ಯಾಗ್ರಹ	1,238
ಗಣಿಗಳ ಆಕ್ಟ್	631
ಮೆರವಣಿಗೆ	370
144ನೇ ಸೆಕ್ಷನ್	299
ಸಾರ್ವಜನಿಕ ರಕ್ಷಣಾ ಮಸೂದೆ	121
ಪಿಕೆಟಿಂಗ್	48
ಪೋಲೀಸ್ ಆಕ್ಟ್ 39	24
ರಾಜದ್ರೋಹ	13
ನೇಕ್‌ಜಾಲ್ ಜಾಮೀನು	12
ಡಿಫೆನ್ಸ್ ಆಫ್ ಇಂಡಿಯಾ ಆಕ್ಟ್	4
ಪತ್ರಿಕೆಗಳ ಆಕ್ಟ್	2
ಗಡೀಪಾರು	1
ಪೋಲೀಸ್ ಆಕ್ಟ್ ಸೆಕ್ಷನ್ 45	15
ಇತರೆ	23
ಒಟ್ಟು	2,801

ಈ ಮೇಲಿನ ಅಂಕಿಗಳ ವಿವರಗಳು ಅಂದಿನ ಪರಿಸ್ಥಿತಿಯ ಉಗ್ರ ಸ್ವರೂಪವನ್ನು ನಿಸ್ಸಂಶಯವಾಗಿ ವರ್ಣಿಸುತ್ತವೆ.

ಕಾಂಗ್ರೆಸ್ಸಿನ ಜಯಭೇರಿ

ಶಿವಪುರ ಧ್ವಜಸತ್ಯಾಗ್ರಹ, ವಿದುರಾಶ್ವತ್ಥ ಪ್ರಕರಣ ಮತ್ತು ಇತರ ಸತ್ಯಾಗ್ರಹಗಳಿಂದ ಮೈಸೂರ್ ಕಾಂಗ್ರೆಸ್ ಹೆಸರು ಸಂಸ್ಥಾನದ ನಗರ ಹಳ್ಳಿಗಳಿಗೆ ಪರಿಚಯವಾಯಿತು, ಎಲ್ಲರ ಮನೆ ಮನಗಳನ್ನು ಮುಟ್ಟಿತು. ಕಾಂಗ್ರೆಸ್ಸಿನ ಸಾಮರ್ಥ್ಯವನ್ನು ಸರಕಾರಕ್ಕೆ ಮನದಟ್ಟು ಮಾಡಿಕೊಡುವ ಅಗತ್ಯವಿತ್ತು. ಅಂಥ ಅವಕಾಶವೂ ಪ್ರಾಪ್ತವಾಯಿತು. ಅಖಿಲ ಭಾರತ ರಾಷ್ಟ್ರೀಯ ಕಾಂಗ್ರೆಸ್ ಕಾರ್ಯಕರ್ತರು ಮತ್ತು ರಾಷ್ಟ್ರಪಿತ ಮಹಾತ್ಮಗಾಂಧಿಯವರು ಕಾಂಗ್ರೆಸ್ಸಿನ ಕಾರ್ಯಕರ್ತರು ಚಳುವಳಿಗಳನ್ನು ತಾತ್ಕಾಲಿಕವಾಗಿ ನಿಲ್ಲಿಸಿ ಚುನಾವಣೆಗಳಲ್ಲಿ ಸ್ಪರ್ಧಿಸಿ ಜಯಗಳಿಸಬೇಕೆಂದು ಆದೇಶ ನೀಡಿದರು. ಅದರಂತೆ ಮೈಸೂರು ಕಾಂಗ್ರೆಸ್ ತಾತ್ಕಾಲಿಕವಾಗಿ ತನ್ನ ಎಲ್ಲ ಚಳುವಳಿಗಳನ್ನು ನಿಲ್ಲಿಸಿ ಚುನಾವಣೆಗಳ ಕಡೆಗೆ ಗಮನ ಹರಿಸಿತು. ಮೊದಲು ಜಿಲ್ಲಾ ಬೋರ್ಡ್ ಚುನಾವಣೆ ಅನಂತರ ಪೌರ ಚುನಾವಣೆಗಳನ್ನು ಕಾಂಗ್ರೆಸ್ ಸಮರ್ಥವಾಗಿ ಎದುರಿಸಿತು.

ಆ ಸಂದರ್ಭದಲ್ಲಿ ಕಾಂಗ್ರೆಸ್ ನಾಯಕರು ಮಿಂಚಿನ ವೇಗದಲ್ಲಿ ಸಂಸ್ಥಾನದಲ್ಲೆಲ್ಲ ಸಂಚರಿಸಿ, ಕಾಂಗ್ರೆಸ್ಸಿನ ಧ್ಯೇಯ ಧೋರಣೆಗಳನ್ನು ವಿವರಿಸಿ, ಜನಜಾಗೃತಿಯನ್ನು ಉಂಟುಮಾಡಿ, ಮತದಾನಕ್ಕಾಗಿ ಪ್ರಾರ್ಥಿಸಿಕೊಂಡರು. ಕಾಂಗ್ರೆಸ್ಸಿನ ವತಿಯಿಂದ ಅನೇಕ ಕರಪತ್ರಗಳನ್ನು ಮುದ್ರಿಸಿ ಜನರಿಗೆ ಹಂಚಿದರು. ಅದರ ಜೊತೆಗೆ ಅಂದಿನ ಲಾವಣಿಕಾರರ ಪಾತ್ರ ಚಿರಸ್ಮರಣೀಯವಾದುದು. ಅವರಿಂದ ಲೆಕ್ಕವಿಲ್ಲದಷ್ಟು ಪ್ರಚಾರ ಲಾವಣಿಗಳು ಬೆಳಕಿಗೆ ಬಂದುವು. ಹಳ್ಳಿಪಳ್ಳಿಗಳಲ್ಲೆಲ್ಲಾ ಕಾಂಗ್ರೆಸ್ ಲಾವಣಿಗಳು ಮೊಳಗಿದುವು.

ಕಾಂಗ್ರೆಸ್ಸಿನ ಪ್ರಚಾರಕ್ಕೆ ಲಾವಣಿಕಾರರು ಬಳಸಿದ ತಂತ್ರ ಆಕರ್ಷಕವಾಗಿತ್ತು, ಅರ್ಥಪೂರ್ಣವಾಗಿತ್ತು. ಅಂದಿನ ಸರಕಾರದ ದಬ್ಬಾಳಿಕೆ, ಶಿವಪುರ ಧ್ವಜಸತ್ಯಾಗ್ರಹ, ವಿದುರಾಶ್ವತ್ಥ ಪ್ರಕರಣ, ನಾಯಕರ ಬಂಧನ, ಕಾಂಗ್ರೆಸ್ಸಿನ ಉದಾತ್ತ ಧ್ಯೇಯ, ರಾಷ್ಟ್ರ ನಾಯಕರ ಗುಣಗಾನಗಳು ಎಲ್ಲ ಲಾವಣಿಗಳಲ್ಲೂ ಕಂಡುಬರುತ್ತಿದ್ದುವು. ಲಾವಣಿಕಾರರು ಕಾಂಗ್ರೆಸ್ ನಾಯಕರೊಡನೆ ಪ್ರವಾಸಮಾಡಿ, ಸಾರ್ವಜನಿಕ ಸಭೆಗಳಲ್ಲಿ, ಬೃಹತ್ ಜನಸ್ತೋಮದ ಮುಂದೆ ತಮ್ಮ ಥಂಕೆಯನ್ನು ಮಿಡಿದು, ಕಾಂಗ್ರೆಸ್ ನೀತಿಯನ್ನು ಹರಡಿದರು. ಶ್ರೀಯುತರಾದ ಎನ್. ವಿಷಕಂಠರಾವ್, ಸಿ. ಆರ್. ರಾಮಣ್ಣ, ಬಿ. ನೀಲಕಂಠಯ್ಯ, ಡಿ. ಎಸ್. ರಾಮಸ್ವಾಮಿ, ಮುನಿ

ಲಿಂಗಪ್ಪ, ಎನ್. ಭೀಮಾಜಿರಾವ್ ಮೊದಲಾದವರ ಲಾವಣಿಗಳು ಬಹಳ ಪ್ರಸಿದ್ಧವಾಗಿದ್ದುವು.

ಧ್ವಜಸತ್ಯಾಗ್ರಹಗಳಲ್ಲಿ ಭಾಗವಹಿಸಿದ ಕನ್ನಡಿಗರ ಗುಣಗಾನವನ್ನು ಸ್ಥೂಲವಾಗಿ ಮಾಡಿದ ಒಂದು ಲಾವಣಿ ಹೀಗಿದೆ :

ಜೈ ಭೇರಿಯು ಢಂಕಾ ನುಡಿಸಿದರೇಕಾ
ಕನ್ನಡ ವೀರರು ಕಡೆತನಕಾ.

ಮೈಸೂರ್ ಕಾಂಗ್ರೆಸ್ ವಿಜಯದ ಢಂಕಾ
ಸೈಸೈ ಎನಿಸಿತು ಈ ಜಗವೇಕಾ
ಆ ಶಿವಪುರದೊಳು ಎತ್ತಿ ಪತಾಕಾ
ಕನ್ನಡ ವೀರರು ಕಡೆತನಕಾ.

ಅಬ್ಬಬ್ಬಾ ಇದು ಏನವಿಚಾರಾ
ದಬ್ಬಾಳಿಕೆ ಸರಕಾರ ವಿಚಾರಾ
ಮೊಬ್ಬಿಳಿಸಿದರೀ ಅಬ್ಬರ ಪೂರಾ
ಕನ್ನಡ ವೀರರು ಕಡೆತನಕಾ.

ವಿದುರಾಶ್ವತ್ಥದ ವಿಚಾರ ಮಾಡಿ
ಅಧಮರು ಗೈದಿಹ ಕಾರ್ಯವ ನೋಡಿ
ಮುಂದ ನೀಲ್ಕಂಠನ ಪದವನು ಹಾಡಿ
ಕನ್ನಡ ವೀರರು ಕಡೆತನಕಾ.*

ಕಾಂಗ್ರೆಸ್ಸಿನ ವಿರೋಧಿಗಳೂ ಆಗ ಸಾಕಷ್ಟಿದ್ದರು. ಅವರ ಪ್ರಚಾರವೂ ಕಡಮೆಯಿರಲಿಲ್ಲ. ಅಂಥ ಸಮಯದಲ್ಲಿ ಕಾಂಗ್ರೆಸ್ಸಿನ ನಿಜವಾದ ಧ್ಯೇಯವನ್ನು ಜನರಿಗೆ ಮನವರಿಕೆ ಮಾಡಿಕೊಡಬೇಕಾಗಿತ್ತು. ಅಂಥ ಒಂದು ಲಾವಣಿ ಇದು :

ನಮ್ಮಯ ಕಾಂಗ್ರೆಸ್ ತತ್ವವ ಪ್ರಜೆಗಳೆ ಒಮ್ಮೆ ತಿಳಿದುನೋಡಿರಿ ನೆನೆದು
ಹಮ್ಮಿನ ಸೊಗಡಳಿಯುತ ಸರ್ಕಾರದ ಹೆಮ್ಮರ ಮುರಿದಿಳೆಗೊರಗುವುದು.

ನಮ್ಮದಿಗೊಳಿಸುವ ಸ್ವಾತಂತ್ರ್ಯದ ಘನ ಸಮ್ಮುಖ ಸುಖವತಿ ದೊರಕುವುದು
ಬೊಮ್ಮನ ಕರುಣದಿ ನಿತ್ಯಾನಂದದ ಪೆರ್ಮೆಡುಯೆಂಬುವದುಕ್ಕುವುದು.

ಕೋಮಿನ ಕಲಹದ ವಿದ್ರೋಹಾಗ್ನಿಯು ಪ್ರೇಮಾದರದಿಂದಳಿಯುವುದು
ಶ್ರೀಮಂತರ ನಾನತ್ವ ಮಹತ್ವವು ನಿಷ್ಕಾವಂತ್ವದೊಳಡಗುವುದು.

---

*ರಚನೆ : ಬಿ. ನೀಲಕಂಠಯ್ಯ

ಪ್ರಜಾಸತ್ತೆಯಾ ಧ್ಯೇಯದಿಂದ ಒಡಗೂಡಿರುವುದೆ ನಮ್ಮ ಕರ್ತವ್ಯ
ಪ್ರಜಾಸತ್ತಾತ್ಮಕ ಪ್ರಭುತ್ವಕೋಸುಗ ಪರಿಶ್ರಮಿಸುವುದೆಮ್ಮ ಕರ್ತವ್ಯ.

ರಾಜಕೀಯ ಸ್ವಾತಂತ್ರ್ಯ ಸಾಧನೆಗೆ ದುಡಿಯುವುದೆಮ್ಮಯ ಕರ್ತವ್ಯ
ಈ ಜಗದೊಳಗಿಹ ಪ್ರತಿಗಾಮಿಗಳ ಸ್ನೇಹದೊಳಿಹುದೆಮ್ಮ ಕರ್ತವ್ಯ.

ನೈಜದಿ ವಿಶ್ವದ ಶಾಂತಿ ಸ್ಥಾಪನೆಗೆ ಹೋರಾಡುವುದೆಮ್ಮ ಕರ್ತವ್ಯ
ಕುಜನರ ನೂತನ ರಾಜ್ಯಾಂಗ ರಚನೆಯ ಪ್ರತಿಭಟಿಸುವುದೆಮ್ಮ ಕರ್ತವ್ಯ.*

ಕಾಂಗ್ರೆಸ್ಸಿಗೇ ಓಟನ್ನು ಏಕೆ ಕೊಡಬೇಕು ಎಂಬ ಪ್ರಶ್ನೆಯನ್ನು ಕೇಳುವವರಿಗೆ ಕೆಲವು ಲಾವಣಿಗಳು ಹೀಗೆ ಉತ್ತರಿಸಿದುವು.

ಪೇಟೆಯ ಜರ್ಬಿನ ಪಕ್ಷವನೊಹಿಸದೆ ದೇಶದಕಡೆ ನಿಮ್ ಗಮನವಿಡಿ ।
ಬೂಟಕ ವೇಷಿಗಳ್ಯಾರೆಂತೆಂಬುದು ಸತ್ಯದಿ ಶೋಧಿಸಿ ತೀರ್ಪುಕೊಡಿ ॥ ಪ ॥

ದೇಶಸೇವಕರ ಅಮೋಘ ಕೀರ್ತಿಯು ದೇಶದ್ರೋಹಿಗಳಿಗರಿವಿಲ್ಲ ।
ದೂಷಣೆ ಮಾಡುವ ದೇಶದ್ರೋಹಿಗಳ ಮಾತಿಗೆ ಮೊದಲೊಳು ಬೆಲೆಯಿಲ್ಲ ॥
ಖಾಸಾಮಂಡಲಿ ಪದವಾಗಿದ್ದರೆ ಈ ರೀತಿ ಹೊಲಸಿರುತಿರಲಿಲ್ಲ ।
ಲೇಸಿಲಿ ತಿಳಿಯಿರಿ ಜೂಟಮಂಡಲಿಯು ಗಾವಿಲ ಕವಿಯಾಗಿಹುದಲ್ಲ ॥
ಕಾಸಿನ ಆಸೆಗೆ ಗುರುಹಿರಿಯರನು ಜರಿಯುವ ಕವಿತೆಯು ತರವಲ್ಲ ।
ದೋಷರಹಿತರೀ ಮೈಸೂರು ಕಾಂಗ್ರೆಸ್ ಪ್ರತಿನಿಧಿಗಳ ಮತಿಗೆದುರಿಲ್ಲ ॥

ಕೂಪಮಂಡೂಕದ ತೆರದಲಿ ಇರುವಗೆ ಘನಸಾಗರಸವಿ ದೊರಕೀತೆ ।
ಶ್ರೀಪತಿ ಅಂಶೆ ಮಹಾತ್ಮರ ವಾಕ್ಯದ ಅರ್ಥವು ಸರ್ವರಿಗರಿದೀತೆ ॥
ಭೋಪರಿ ಬಡಪ್ರಜೆ ತುಂಬಿಹ ರಾಜ್ಯವು ರಾಮ ರಾಜ್ಯವೆಂದಿನಿಸೀತೆ ।
ಕೃಪೆಯನು ಮಾಡುತ ಜಯಚಾಮೇಂದ್ರರು ಸ್ವತಂತ್ರ ಕೊಡುವುದು
ತಪ್ಪೀತೆ ॥

ರಾಟೆಯು ಆರ್ಯರ ಕೀರ್ತಿಪತಾಕೆಯು ಸರ್ವರು ನಲಿವರು ಇದರ ಅಡಿ ।
ಬೂಟಕ ವೇಷಿಗಳ್ಯಾರೆಂತೆಂಬುದು ಸತ್ಯದಿ ಶೋಧಿಸಿ ತೀರ್ಪುಕೊಡಿ ॥ ೧ ॥
ಗಾಂಧಿಮಹಾತ್ಮರ ಸತ್ಯದ ಸಲಹೆಯ ಮೈಸೂರು ಕಾಂಗ್ರೆಸ್ ಪಾಲಿಸುತಾ ।
ಬಂಧನಹರಿಸಲು ಬಂಧುಜನಾಂಗವು ನಿಂತಿದೆ ಸ್ವಾರ್ಥವು ದೂರಿಡುತಾ ॥
ಹೆದರದೆ ನಿಮ್ಮಯ ಕುಂದುಕೊರತೆಯನು ಹರಿಸಲು ಕಾಂಗ್ರೆಸ್ಮನವಿಡುತಾ ।
ಸದಾ ದುಡಿಯುವರು ನಿಮ್ಮಯಸೌಖ್ಯಕೆ ಕಾಂಗ್ರೆಸ್ಸಿಗೆ ಕೊಡಿ ನಿಮ್ಮ ಮತ ॥

---

* ರಚನೆ : ಎನ್. ವಿಷಕಂಠರಾವ್.

ಗಾಂಧೀಟೋಪಿಯು ಶ್ರೀಮಂತ ಜವಹರ ಧರಿಸಿಹ ಗೈಯಲು ದೇಶಹಿತ ।
ಸ್ವದೇಶಿಪೇಟವ ಧರಿಸಿರಿ ಮಾನ್ಯರೆ ಪರದೇಶಿ ಪೇಟಕೆ ವಂದಿಸುತಾ ॥

ಹಾದಿಯು ತಪ್ಪಿ ಹಾದಿಲಿ ನಡೆವರ ತಿದ್ದುವುದೇ ಕಾಂಗ್ರೆಸ್ ಕೆಲಸ ।
ದುಂದಿನ ವೆಚ್ಚವನಿಲ್ಲಿಸಿ ಪ್ರಜೆಗಳ ಸೌಖ್ಯವ ನೀಡ್ವುದೆ ಸುವಿಲಾಸ ॥
ಬಂಧುಜನಾಂಗರೆ ಪ್ರಜೆಗಳ ಸೌಖ್ಯವೆ ಕಾಂಗ್ರೆಸ್ಸಿನ ಘನಸಂತೋಷ ।
ಗೆದ್ದೆತ್ತಿನ ಈ ಬಾಲವ ಹಿಡಿಯುವ ಸ್ವಾರ್ಥರ ಕಡೆಗಿಡದಿರಿ ಮನಸ ॥

ತಾಟಿಪೋಟಿಗಳ ಜೂಟವಾಕ್ಯಗಳ ಮರೆಯುತ ಕಾಂಗ್ರೆಸ್‌ಗೋಟು ಕೊಡಿ ।
ಬೂಟಕ ವೇಷಿಗಳ್ಯಾರೆಂತೆಂಬುದು ಸತ್ಯದಿ ಶೋಧಿಸಿ ತೀರ್ಪುಕೊಡಿ ॥ ೨ ॥
ಮಂದಿಯು ದೂಷಣೆ ಮಾಡುವ ದುಷ್ಪಥ ಕಾಂಗ್ರೆಸ್ಸಿಗಿಲ್ಲವು ನಿಜನೋಡಿ ।
ಮಂದಿಯು ಸ್ವಾರ್ಥತೆ ಅನ್ಯಾಯಂಗಳ ಖಂಡನೆ ಮಾಡ್ವುದೆ ಸತ್ಯನುಡಿ ॥
ಗಾರ್ಧಭ ಬಲ್ಲದೆ ಗಂಧದ ವಾಸನೆ ಮುಂದಿದ ನೀವ್ ಯೋಜನೆ ಮಾಡಿ ।
ಹಿಂದು ಮುಸಲಿಂ ಏಕೀಭಾವಕೆ ದುಡಿಯುವ ಸಂಸ್ಥೆಗೆ ಓಟುಕೊಡಿ ॥
ಮಂದಮತೀಘನ ಠೊಣಪರ ನುಡಿಯನು ಖಂಡಿಸಿ ಕಾಂಗ್ರೆಸ್ಸಿಗೋಟು ಕೊಡಿ ।
ಮುದದಲಿ ಸರ್ವರು ಮದದಲಿ ಮೆರೆಯುವ ಸ್ವಾರ್ಥರಿಗೋಟನು ಕೊಡಬೇಡಿ ॥
ನೀರಿನ ಸೌಕರ್ಯ ಹಾಳನು ಮಾಡಿದ ವೀರರಿಗೋಟನು ಕೊಡಬೇಡಿ ।
ಮುರಿದು ಪ್ರತಿಜ್ಞೆಯ ಮೆರೆಯುವ ಜನರಿಗೆ ಖಂಡಿತ ಓಟನು ಕೊಡಬೇಡಿ ॥
ಯಾರೋ ಎನ್ನುತ ತನ್ನಯ ಸುತನಿಗೆ ಸ್ಕಾಲರ್‌ಷಿಪ್ ಕೊಡಿಸಿದ ಪರಿನೋಡಿ।
ಪರದೇಶಿ ಬಟ್ಟೆಯು ಪೇಟದ ಜರಬಿಗೆ ಬೆದರದೆ ಕಾಂಗ್ರೆಸ್ಸಿಗೋಟು ಕೊಡಿ ॥
ದೀಟಿನ ಮುನಿಲಿಂಗನೋಟಿನ ಲಾವಣಿ ಕೇಳುತ ಸರ್ವರಾನಂದಪಡಿ ।
ಬೂಟಕ ವೇಷಿಗಳ್ಯಾರೆಂತೆಂಬುದು ಸತ್ಯದಿ ಶೋಧಿಸಿ ತೀರ್ಪುಕೊಡಿ* ॥ ೩ ॥

ಕಾಂಗ್ರೆಸ್ಸಿಗೆ ಮತ ನೀಡಲು ಮತ್ತೊಂದು ಲಾವಣಿ ಜನರನ್ನು ಹೀಗೆ ಪ್ರಾರ್ಥಿಸಿತು :

ಓಟು ಕೊಡಿ ಪ್ರೀತಿಯಿಂದ ಕಾಂಗ್ರೆಸ್‌ನವರಿಗೆ
ದೀಟಿನಿಂದ ಸತ್ಯಕ್ಕಾಗಿ ದುಡಿಯುವವರಿಗೆ. ॥ ಪಲ್ಲವಿ ॥

ಗಾಂಧಿತಾತನಾಜ್ಞೆಯಿಂದ ಮುಂದುವರಿದಿದೆ
ಮೋದದಿಂದ ಬಂಧ ಹರಿಸೆ ಮುಂದೆ ನಿಂತಿದೆ.

* ರಚನೆ : ಮುನಿಲಿಂಗಪ್ಪ.

ಕಾಂಗ್ರೆಸ್ಸಿನ ಸಂಘ ಶಕ್ತಿ ನಿಮ್ಮದಾಗಿದೆ
ಭಂಗಪಡಿಸಿ ನಿಮ್ಮ ಕೀರ್ತಿ ನೀವೆ ಕಳೆಯದಿರಿ.

ಯಾರಿಗಾಗಿ ಸೆರೆಮನೆಯಲಿ ಭಂಗಪಟ್ಟರು
ಆರ್ಯರೆಲ್ಲ ಯೋಚಿಸಿರಿ ಮನದಿ ಸರ್ವರು.

ಸ್ವಾರ್ಥತ್ಯಾಗ ನಿತ್ಯಗೈವ ಮಿತ್ರರವರಿಗೆ
ಸತ್ಯ ಧರ್ಮ ಕೀರ್ತಿ ಧ್ವಜವ ಕಾಯುವವರಿಗೆ.

ಶಾಂತಿಯಿಂದ ರೈತರುಗಳ ಕಷ್ಟವ ಹರಿಸೀ
ಪ್ರೀತಿಯಿಂದ ನಡೆಯುವರು ಸತ್ಯವ ಸ್ಮರಿಸಿ.

ಜನರ ಹಕ್ಕುಬಾಧ್ಯತೆಯ ಉಳಿಸಿಕೊಡುವುದು
ಘನತೆ ಪಡೆದ ಕಾಂಗ್ರೆಸ್ ಒಂದೆ ಜನರಿಗಿರುವುದು.

ಸಂಘಕ್ಕಾಗಿ ಓಟು ಕೊಡಲು ವ್ಯರ್ಥವಾಗದು
ತ್ಯಾಗಮಾಡಿ ನೀಗಿ ಭ್ರಮೆಯ ಸುಖವ ಪಡೆವುದು.

ಒಂದೇ ಮನದಿ ಕುಂದು ಹರಿಸೆ ಮುಂದೆ ನಿಮ್ಮತ
ಬಂಧು ಜನರೆ ಸಂದೇಹವನು ಇಂದೇ ದೂಡುತ.

ಚರಕವೆಂಬ ಚಕ್ರದಿಂದ ಬಂಧನ ಹರಿಸಿ
ಪೊರೆಯುವರು ಮರೆಯದಿರಿ ಚರಕವ ನೆನೆಸಿ.

ಮೂರು ವರ್ಣ ಧ್ವಜವು ನೋಡಿ ತ್ರಿಗುಣ ಮೀರಿದೆ
ಸಾರಿ ಸಾರಿ ಪೇಳುತಿಹುದು ಸರ್ವರು ಒಂದೇ.

ರಾಮಸ್ವಾಮಿ ಗುರುವ ಸ್ಮರಿಸಿ ನಿಮ್ಮ ಬೇಡುವ
ತಮ್ಮ ಓಟು ಕಾಂಗ್ರೆಸ್ಸಿಗೆ ನೀಡಿರೆನ್ನುವ । ಬೇಡಿಕೊಳ್ಳುವ.*

ಸತ್ಯಾಗ್ರಹದ ಕೆಲವು ಘಟನೆಗಳನ್ನು ನೆನೆಸಿಕೊಳ್ಳುತ್ತಾ, ಅಂದಿನ ವಾಸ್ತವ ಸ್ಥಿತಿಗಳನ್ನು ವಿವರಿಸುತ್ತಾ, ಚಾರಿತ್ರಿಕ ದಾಖಲೆಯಾಗಿರುವ ಮುಂದಿನ 'ಕಾಂಗ್ರೆಸ್ ಲಾವಣಿ' ಬಹಳ ಕಾಲ ಜನರನ್ನು ಆಕರ್ಷಿಸಿತು.

---

* ರಚನೆ : ಡಿ. ಎಸ್. ರಾಮಸ್ವಾಮಿ.

ಕಾಂಗ್ರೆಸ್ ಲಾವಣಿ

ಶೃಂಗಾರದ ನವರಂಗದ ಮೈಸೂರ್ ಕಾಂಗ್ರೆಸ್ ಘನವೆನ್ನುವನೊಬ್ಬ
ಕಾಂಗ್ರೆಸ್ ಘನ ಸಂಗ್ರಾಮವ ಕೇಳಿದ ಆಂಗ್ಲರಿಗಾಯಿತು ಅಬ್ಬಬ್ಬಾ.

ಅಬ್ಬಬ್ಬಾ ಈ ದಬ್ಬಾಳಿಕೆ ಅವನೊಬ್ಬನ ದೆಸೆಯಿಂದೆನುತೊಬ್ಬಽ
ದಬ್ಬಾಳಿಕೆಯನು ಎಬ್ಬಿಸಿದವ ನಿಜ ತಬ್ಬಲಿ ಎಂದನು ಮುದುಕೊಬ್ಬ.
ಒಬ್ಬನಿಂದಲ್ಲವು ಸಿಬ್ಬಂದಿ ಬಹಳಽ ಕಬ್ಬಕ್ಕಿಯಂತಿಹರೆನುತೊಬ್ಬ
ಕೊಬ್ಬಿದ ದರ್ಪದ ಮೊಬ್ಬಿನೊಳಿರುವರ ಹಬ್ಬವಿದೆಂದನು ಹುಡುಗೊಬ್ಬ.
ದಬ್ಬಾಳಿಕೆ ಸುಳಿ ಅಬ್ಬರ ಅಣಗಲಿ ದೆಬ್ಬೆಯು ಬಿತ್ತೆನಗೆನುತೊಬ್ಬ
ದಬ್ಬಾಳಿಕೆ ಮಹ ಬೊಬ್ಬೆಯ ಕೇಳುತ ತಬ್ಬಿಬ್ಬಿಯಾದನು ಕಡೆಗೊಬ್ಬ.

ಎಂಥ ಕಾರ್ಯವಿದು ಎಂಥ ಚೋದ್ಯವಿದು ಹೊಂತಕಾರಿಗಳೆ ಯೋಚಿಪುದು
ಅಂತುಯಿಂತು ಈ ಶಾಂತಿಯ ಸಮರವು ಕ್ರಾಂತಿಯ ರೂಪಾವರಿಸಿಹುದು.
ಅಂತರದೊಳಗಿನ ಅನಂತ ಆಸೆಗೆ ಅನರ್ಥ ಫಲ ಕೈಸೇರುವುದು
ಇಂಥ ಭ್ರಾಂತಿಯನು ಕಂತೆಯ ಕಟ್ಟಿಸಿ ಸಂತೆಗೆ ಸಾಗಿಸೆ ಸುಖವಹುದು.

ನ್ಯಾಯವೆಂಬುದೆ ಸಾಧನ ಕಾಂಗ್ರೆಸ್ಸಿನ ಘನಧ್ಯೇಯ
ಧ್ಯೇಯವಿದೊಂದೆ ಶಾಂತಿಯ ಸಮರದೊಳಿಡುವುದೆ ಕಾಯ.
ಕಾಯವಿಟ್ಟಂಥ ಪ್ರಮುಖರ ಸುಕೀರ್ತಿ ಪುಂಜದ ಛಾಯ
ಛಾಯ ಪ್ರಜ್ವಲ ಭಾರತ ದೇಶದ ಉನ್ನತಿ ನ್ಯಾಯ.

ಪ್ರಜೆಗಳಾಜನ್ಮ ಹಕ್ಕನಿಟ್ಟು
ನಿಜದೆ ಸ್ವಾತಂತ್ರ್ಯಗಳನು ಕೊಟ್ಟು
ರಾಜ್ಯವನ್ನಾಳಲು ಬಿಕ್ಕಟ್ಟುಽ
ಪೂಜ್ಯ ಬಾಂಧವರ ಬಂಧನದಿಂದಲಿ ಬಿಡಲತಿ ಫಲವುಂಟುಽ.

ಎಂದು ಬೇಡುತ ಬಂದ ಜನರಿಗೆ ಬಂತು ಬಂಧನ ಎಂದರುಽ
ಮುಂದಿನೊಳು ನೂರ್ನಲ್ವತ್ನಾಲ್ಕನೆ ಸೆಕ್ಷನ್ ಜಾರಿಗೆ ತಂದರು.

ಇಂಗ್ಲೆಂಡ್ ದೇಶದ ಇಂಗ್ಲಿಷರಿಂದಲಿ ಕಂಗೆಟ್ಟೆವು ನಾವೆನುತೊಬ್ಬ
ಕಾಂಗ್ರೆಸ್ ಘನ ಸಂಗ್ರಾಮವ ಕೇಳಿದ ಆಂಗ್ಲರಿಗಾಯಿತು ಅಬ್ಬಬ್ಬಾ.

ಅಟ್ಟಹಾಸ ದಿಟ ನಲವತ್ತೈದನೆ ಸೆಕ್ಷನ್ ಜಾರಿಯ ಒಳಗಂಟ್ಟು
ಚಿಟ್ಟದಿ ಸೆಕ್ಷನ್ ಶವವನು ಮಾಡಿ ಹೊತ್ತನು ಸಂಭಾಜಿ ಶ್ರಮಪಟ್ಟು.
ಬಿಟ್ಟರೆ ಸಿಕ್ಕದ ಕೊಟ್ರೆ ನಂಜಪ್ಪನ ತಟ್ಟನೆ ಹಿಡಿದರು ಕಣ್ಣಿಟ್ಟು

ಕೊಟ್ಟರು ಸಜವನು ಹೊಸಕೋಟೆಯ ಮಹದೇವಶಾಸ್ತ್ರಿಗಳನಿಡಿದಿಟ್ಟು.
ಕಷ್ಟ ಕಷ್ಟ ಮಹ ಕಷ್ಟವಿದೆನ್ನುವ ಎಷ್ಟೋ ಜನರಿಗೆ ಥಡಿಪೆಟ್ಟು
ಇಷ್ಟರೊಳಗೆ ನೂರೇಳನೆ ಸೆಕ್ಷನ್ ಬಿಟ್ಟರು ತಟ್ಟನೆ ಗುರಿಯಿಟ್ಟು.

ಒಡನೆಯೆ ಸಿದ್ದಲಿಂಗಯ್ಯನವರನು ಹಿಡಿದರು ಕಾನೂನ್ ಅನುಸರಿಸಿ
ಬಿಡದೆಲೆ ಸೀತಾರಾಮಶಾಸ್ತ್ರಿಗಳನಿಡಿದರು ಕೇಸಿನ ಕ್ರಮ ನಡೆಸಿ.
ತಡಕುತ ತಗಡೂರ್ ರಾಮಚಂದ್ರರನು ಹಿಡಿದು ತ್ರಿಜನರಂ ಜೊತೆಗೋಳಿಸಿ
ಹಿಡಿಯಿಂರಿ ಸೆರೆಮನೆ ದಾರಿ ನೀವೆನ್ನುತ ನುಡಿದರು ದರ್ಪದಿ ದಡಬಡಿಸಿ.

ಮುಂದಾದ ಪರಿಯ ನೀವ್ ಚಂದದಿ ಕೇಳಿರಿ ಎಲ್ಲಾ
ಬಂಧನದಿ ಬಿದ್ದ ನಮ್ಮ ದೇಶ ಮುಖಂಡರಿಗೆಲ್ಲ
ಒಂದಾದರು ಸರಿ ಅನುಕೂಲವಿಲ್ಲದೋಯ್ತಲ್ಲ
ಎಂದೆಂದಿಗು ಸರಕಾರ್ ನಡತೆ ಇದುವೆ ಸರಿಯಿಲ್ಲಾ.

ಕೂಡಿತು ಸರ್ಕಾರದ ಕೂಟ
ಮಾಡಿದರು ಯೋಚನೆಯನು ದಿಟ
ಹೂಡಿ ನೂರಿಪ್ಪತ್ನಾಲ್ಕರೇಟ
ಕೂಡಲೆ ಕಾಂಗ್ರೆಸ್ ವೀರಮುಖಂಡರ ಹಿಡಿದರು ಅಕಟಕಟಾ.

ಕೆ. ಟಿ. ಭಾಷ್ಯಂ, ಎನ್. ಸಿ. ತಿಮ್ಮಾರೆಡ್ಡಿಯವರುಗಳ್ ನಿಶ್ಚಯ
ಕೋರ್ಟಿನೊಳು ಕೇಸ್ ವಾದವಿಲ್ಲದೆ ಪೊಂದಿದರು ಮಹ ಶಿಕ್ಷೆಯ.

ಥಂಗಾದರು ನಮ್ ಬೆಂಗ್ಳೂರ್ ಪ್ರಜೆಗಳು ಹಿಂಗ್ಯಾಕ್ ಮಾಡಿದರೆನುತೊಬ್ಬ
ಕಾಂಗ್ರೆಸ್ ಘನ ಸಂಗ್ರಾಮವ ಕೇಳಿ ಆಂಗ್ಲರಿಗಾಯಿತು ಅಬ್ಬಬ್ಬಾ.
ಶ್ರೀ ನರಿಮನ್ನರು ಭಾಷಣ ಮಾಡಿದ ಬನಪ್ಪ ಪಾರ್ಕಿನ ವಿವರಗಳು
ಏನೇಳಲಿ ನಾ ಮಹೂವತ್ತೊಂಬತ್ತನೆ ಸೆಕ್ಷ ಜಾರಿಯು ಗಲಭೆಗಳು.
ಶ್ರೀ ನರಿಮನ್ನರ ಭಾಷಣ ಕೇಳಲು ಅನೇಕ ಪ್ರಜೆಗಳು ಕೂಡಿರಲು
ಆ ನರಿಮನ್ನರ ಆಕ್ಷಣ ಹಿಡಿಯಲು ಅನಂತ ಜನಗಳ ಜೋಡುಗಳು.
ಕಾನೂನೆಂಬುವ ಜ್ಞಾನವೆಯಿಲ್ಲದೆ ಮೇಲಿಂದ ಬಿದ್ದುವು ಬೂಡ್ಸುಗಳು
ದೀನ ಗುಂಡಪ್ಪನ ಪ್ರಾಣವೆ ಹಾರಿತು ಮೂರನೆ ದಿನ ಗುಂಡೇಟಿನೊಳು.

ಕೇಳಿರೆಲ್ಲ ಮುವತ್ತೇಳನೆ ಇಸವಿಯ ಅಕ್ಟೋಬರಿಪ್ಪತ್ತೈದರೊಳು
ಪೇಳಲಿಕಸದಳ ಗಲಭೆಯ ಹಾವಳಿ ಕೆಂಪೇಗೌಡನ ಚೌಕದೊಳು.
ತಳಮಳಗೊಳ್ಳುವ ಗೋಲಿ ಏಟುಗಳ ನೋಡಿ ಮರುಗೆ ವಿದ್ಯಾರ್ಥಿಗಳು
ತಾಳದೆ ಪೆಟ್ಟನು ಬಿದ್ದರೆಷ್ಟೊ ಜನ ವಿಕ್ಟೋರಿಯ ಆಸ್ಪತ್ರೆಯೊಳು.

ಕ್ಷಣಮಾತ್ರದೊಳೀ ರಣಕ್ಷೇತ್ರ ಗಲಭೆ ಬಯಲಾಗಿ
ಘನವೊಂದಿದ ಲಾಯರ್ ಜನಗಳೆಲ್ಲ ಗುಂಪಾಗಿ
ದಣಿಯುಂತಲಿ ದ್ವಿಪಕ್ಷಕು ಬೇಡಿದರತಿ ಬೆಂಡಾಗಿ
ಅಣಗಿಸಿದರು ಘನತೆಯು ಗಲಭೆಯನ್ನು ಸಮವಾಗಿ.

ಮೇಲಿನಧಿಕಾರಿಗಳನು ಕಂಡು
ತಾಳಿ ನೀವ್ ಸಹನೆಯನುರಿಗೊಂಡು
ಪೇಳಲತಿ ನೀತಿಯು ಶ್ರಮಗೊಂಡುs
ಕಾಲಿಗೆ ಬುದ್ಧಿಯನೇಳಿದರಾಕ್ಷಣ ಕಳವಳ ಕೈಗೊಂಡುs.

ಇಲ್ಲ ಪೋಲೀಸ್ ಡ್ಯೂಟಿ ಇಲ್ಲವು ಸರಕಾರಾ ಠಿನ
ಎಲ್ಲ ನೋಡಿದರಲ್ಲಿ ಗುಲ್ಲು ಎಲ್ಲ ನಿಂತಿತು ಮರುದಿನs.

ಕಾಂಗ್ರೆಸ್ ಒಂದನೆ ಬೆಂಗಳೂರ್ ಮೂರನೆ ಜಂಗಾಯಿತು ಇದು ಎನುತೊಬ್ಬ
ಕಾಂಗ್ರೆಸ್ ಘನ ಸಂಗ್ರಾಮವ ಕೇಳಿದ ಆಂಗ್ಲರಿಗಾಯಿತು ಅಬ್ಬಬ್ಬಾ.
ಈ ಕರ್ನಾಟಕ ಸ್ವರಾಜ್ಯ ಪಕ್ಷದ ಕಾಂಗ್ರೆಸ್ಸಿನ ಘನ ಶೋಬಾನ
ಶ್ರೀ ಕೆ. ಚಂಗಲರಾಯರೆಡ್ಡಿಗಳ ಸರ್ವಾಧಿಕಾರದ ಸುಧಾರಣ.
ಲೋಕದಿ ವಿ. ಎಸ್. ನಾರಾಯಣ್ಣರಾಯರ ಕಾರ್ಯದರ್ಶಿತನ ಮಹಾಘನ
ಶ್ರೀಕರ ಹೆಚ್. ಸಿ. ದಾಸಪ್ಪನವರಾ ಶೀಘ್ರಾಲೋಚನ ಸುಭಾಷಣ.
ಸ್ತ್ರೀ ಕುಲ ಭೂಷಿಣಿ ಶ್ರೀಮತಿ ಬಳ್ಳಾರಿ ಸಿದ್ದಮ್ಮನವರಾ ಧೀರತನ
ವ್ಯಾಕುಲವಳಿಯುವ ಬಂಧು ಭಗಿನಿಯರ ಸ್ವದೇಶಭಕ್ತಿಯು ಅಭಿಮಾನ.

ದೇಶದ ಸೇವೆಯು ಮಾಡುವುದೆ ಈ ದೇಶಬಾಂಧವರ ಉದ್ದೇಶ
ದೇಶದ ಬಡತನ ನಾಶನ ಮಾಡಲು ಹೇಸದೆ ದುಡಿಯುವದತಿ ಹರುಷ.
ದೇಶ ಪ್ರೀತಿಗಿದು ವಿಶೇಷ ಭೂಷಣ ಚಂದೂರರ ಮಹ ಉಪವಾಸ
ದೇಶದ ದುಸ್ಥಿತಿ ದೂಡುವುದೇ ನಮ್ ಕಾಂಗ್ರೆಸ್ಸಿನ ಕಡೆ ಸಂದೇಶ.

ರೈತಾಪಿಯು ಕಷ್ಟವೆ ತಮ್ಮಯ ಕಷ್ಟವೆಂದಿವರು
ರೈತಾಪಿ ಸುಧಾರಣೆ ಸಾಧಿಸುತ್ತಲಿರುತಿಹರು.
ರೈತಾಪಿ ಜನಾಂಗದ ಕುಂದುಕೊರತೆ ಅರಿತಿಹರು.
ರೈತಾಪಿಯು ಕಷ್ಟಗಳೆಲ್ಲ ಬಿಡದೆ ಹರಿಸುವರು.

ಇದುವೆ ನಿಜ ಬೂಟಕವೇನಲ್ಲ
ಬುಧರೆ ಇದು ಯೋಚಿಸಿ ನೀವೆಲ್ಲ
ಚದುರ ಸಚಿವರರಿಗೆ ದಯವಿಲ್ಲಾ
ಮದರಾಸಿನ ಘನ ಪ್ರಧಾನಮಾತ್ಯರ ಉದಾರವ್ಯಾಕಿಲ್ಲಾ.

ವಾಕ್ ಸಭಾ ಮೇಣ್ ಪತ್ರಿಕಾ ಸ್ವಾತಂತ್ರ್ಯ ಮೈಸೂರ್ ಜನರಿಗೆ
ಬೇಕಾಗಿರುವುದು ಜವಾಬ್ದಾರ್ ಸರಕಾರ ಘನ ಮೈಸೂರಿಗೆ.

ಮಂಗಳ ಸುಬ್ರಹ್ಮಣ್ಯಂ ಜೋಯಿಸ್ ರಂಗರಾಮರಿಗೆ ಎನುತೊಬ್ಬ
ಕಾಂಗ್ರೆಸ್ ಘನ ಸಂಗ್ರಾಮವ ಕೇಳಿದ ಆಂಗ್ಲರಿಗಾಯಿತು ಅಬ್ಬಬ್ಬಾ.

ಘಾತುಕ ಜನರಿಗೆ ನೀತಿಯ ಬೋಧಿಸಿ ಖ್ಯಾತಿಯ ಪೊಂದಿದೆ ನಮ್ ಕಾಂಗ್ರೆಸ್
ಬೋ ತೆರ ದೀನಾನಾಥರ ಪರಿಪರಿ ಯಾತನೆ ಕಳೆಯುವುದೀ ಕಾಂಗ್ರೆಸ್.

ಪ್ರೀತಿಲಿ ಸರ್ವಜನಾಂಗರ ಹಿತವನೆ ಸಾಧಿಸುತಿರುವುದು ನಮ್ ಕಾಂಗ್ರೆಸ್
ಕಾತುರದಿಂದಲಿ ನೂತನ ವ್ಯಥೆಗಳ ಪಾತಕ ಹರಿಸುವುದೀ ಕಾಂಗ್ರೆಸ್.

ಜಾತಿಯ ಭೇದದ ರೀತಿಯ ವರ್ಜಿಸಿ ಕೀರ್ತಿಯ ಪೊಂದಿದೆ ನಮ್ ಕಾಂಗ್ರೆಸ್
ರೈತರ ಏಳಿಗೆ ಕರ್ತವ್ಯ ಲಾಲಿಸಿ ಪ್ರಾರ್ಥಿಸುತಿರುವುದು ನಮ್ ಕಾಂಗ್ರೆಸ್.

ಈ ಪರಿಯ ದೇಶದಭಿಮಾನ ಉಳ್ಳ ಮಹಿಮರಿಗೆ
ಬೋ ಪರಿಯೊಳಗೊಂದಿಸಿ ಮರೆಯಬೇಡಿ ಮನದೊಳಗೆ.
ಕಾಪುರುಷರ ಕಾರ್ಯಗಳೆಲ್ಲ ಕಡೆಗೆ ಮಣ್ಣೊಳಗೆ
ಶ್ರೀಪತಿಯ ದಯದಿ ಜಯವದಾಗಲೆಮ್ಮ ಕಾಂಗ್ರೆಸ್ಸಿಗೆ.

ವಂದಿಸುತ ಪ್ರಥಮದಿ ಗುರುಗಳನು
ಚಂದದೊಳು ರಚಿಸಿದ ಪದವಿದನು
ಕುಂದುಗಳ ಮನ್ನಿಸೆ ಪ್ರಾಜ್ಞರನು
ವಂದಿಸಿ ಬೇಡುವೆ ಹಿಂದು ಮುಸಲ್ಮಾನ್ ಬಂಧು ಭಗಿನಿಯರನು.*

ಶಿವಪುರ ಧ್ವಜಸತ್ಯಾಗ್ರಹ ಮತ್ತು ವಿದುರಾಶ್ವತ್ಥ ಹತ್ಯಾಕಾಂಡದ ಧ್ವನಿ ಮತ್ತೆ ಮತ್ತೆ ಲಾವಣಿಕಾರರಿಂದ ಪ್ರತಿಧ್ವನಿತವಾಯಿತು ಎಂಬುದಕ್ಕೆ ಸಾಕ್ಷಿಯಾಗಿದೆ ಮುಂದಿನ ಲಾವಣಿ :

ಯಾರಿಗಾಗಿ ನಮ್ಮ ಗಾಂಧಿಮಹಾತ್ಮರು ಕೈಮುಗಿದೊರಲುವರದು ನೋಡಿ
ಯಾರಿಗಾಗಿ ಶ್ರೀಮಂತ ಜವಹರರು ಸೆರೆಮನೆ ಸೇರಿಹರಿದು ನೋಡಿ

ಯಾರಿಗಾಗಿ ಅಧ್ಯಕ್ಷ ಆಜಾದರು ಅರೆಸ್ಟಾದರದು ಮನ ಮಾಡಿ
ಯಾರಿಗಾಗಿ ನಮ್ ಅಖಂಡ ಕಾಂಗ್ರೆಸ್ ಮುಖಂಡರ್ ಬಳಲಿಹರಿದು ನೋಡಿ.

ಕೇಳಿರೆಲ್ಲ ಮುವತ್ತೇಳನೆ ಇಸವಿಯ ಅಕ್ಟೋಬರ್ ಇಪ್ಪತ್ತೈದರೊಳು
ಪೇಳಲಿಕಸದಳ ನರಿಮನ್ ಪ್ರಕರಣ ಬೆಂಗ್ಳೂರ್ಬನಪ್ಪಾ ಪಾರ್ಕಿನೊಳು.

---

* ರಚನೆ : ಬಿ. ನೀಲಕಂಠಯ್ಯ ಮತ್ತು ನಾರಾಯಣ.

ಗೋಲಿಯು ವ್ಯಾಪಿಸಿ ಸತ್ತನು ಹರಹರ ಗುಂಡಪ್ಪನು ಗುಂಡೇಟಿನೊಳು
ಬೇಲಿ ಎದ್ದು ಹೊಲ ಮೇಯುವುದಾದರೆ ಕೇಳುವರ್ಯಾರೀ ಗೋಳುಗಳು.

ಘಾತಕ ಜನರಿಗೆ ಕೌತುಕವೆನಿಸಿತು ಖ್ಯಾತಿಯು ಮೈಸೂರ್ ಕಾಂಗ್ರೆಸ್ಸು
ಜೋ ತೆರ ದೀನಾನಾಥರ ಪರಿಪರಿ ಯಾತನೆ ಕಳೆಯುವ ಹುಮ್ಮಸ್ಸು.
ಜಾತಿ ಮತಾಂತರ ಪಾತಕವಳಿದ ಸುತೀಯು ರೀತಿಯು ಕಾಂಗ್ರೆಸ್ಸು
ಖ್ಯಾತಿವಿನುತೆ ಸ್ವಾತಂತ್ರ್ಯ ಕರ್ನಾಟಕ ಮಾತೆಯ ಪುತ್ರರ ತೇಜಸ್ಸು.

ಶಿವಪುರದೊಳು ನಂ ಸುವಿಮಲ ಚರಿತರು ತ್ರಿವರ್ಣರಾಟೆಯ ಧ್ವಜವೆತ್ತೆ
ಬವಣೆಯ ಪಡುತಲಿ ಅವಿರಳ ಲ್ಯಾನ್ಸರ್ಸ್ ಕೋವಿಲಾಠಿಗಳನಿಡಿಯುತ್ತೆ
ತವಕದಿ ಬಂದಿತು ಕವಿಯುತ ಕಾಂಗ್ರೆಸ್ ಸುವಿಮಲಚರಿತರ ಪಿಡಿಯುತ್ತೆ
ಶಿವಶಿವ ಈ ಪರಿ ಅವಿಚಾರದಿ ಉದ್ಭವಿಸಿತು ಕ್ರಾಂತಿಯು ಸುತ್ತಮುತ್ತೆ.

ಒಂಬೈನೂರ್ ಮುವತ್ತೆಂಟನೆ ಏಪ್ರಿಲ್ ತಿಂಗಳ ಇಪ್ಪತ್ತೈದರೊಳು
ತುಂಬಿದೆ ಬಹುಪ್ರಜೆ ಸಂಭ್ರಮದಿಂದಲಿ ವಿದುರಾಶ್ವತ್ಥದ ಜಾತ್ರೆಯೊಳು.
ಸ್ತಂಭದಿ ಮೆರೆಯುವ ಧ್ವಜಸತ್ಯಾಗ್ರಹ ಕಾಂಗ್ರೆಸ್ ಕೂಟದಿ ಕೂಡಿರಲು
ಥಂಬಕರಾ ನಿಜ ದೇಶದ್ರೋಹಿಗಳು ಥಂ ಥಂ ಹೊಡೆದರು ಗುಂಡುಗಳು.

ನಮ್ಮವರೆನಿಸಿದ ನಮ್ಮ ಜನಾಂಗಕೆ ನಮ್ಮ ಲಾವಣಿಯು ಪೇಳುತಿದೆ
ಇಮ್ಮಡಿ ಶ್ರೀ ಪುಲಿಕೇಶಿಯ ರಕ್ತವು ನಮ್ಮ ನಾಡಿಯೊಳಗಾಡುತಿದೆ.
ಬೊಮ್ಮನು ಬರೆದಿಹ ಬರಹವಿದೆನ್ನದೆ ಒಮ್ಮನದಿಂದಿರಿ ಎನ್ನುತಿದೆ
ಗಮ್ಮನೆ ಬರುವುದು ಜವಾಬ್ದಾರಿ ಸರಕಾರವು ಬಂದರೆ ಸೌಖ್ಯವಿದೆ.*

ಕಾಂಗ್ರೆಸ್ ಮುಖಂಡರ ಭಾಷಣಗಳಿಂದ, ಲಾವಣಿಕಾರರ ಪ್ರಚಾರದಿಂದ, ಧ್ವಜಸತ್ಯಾಗ್ರಹಗಳ ಪ್ರಭಾವದಿಂದ, ಜನರ ಔಚಿತ್ಯಪೂರ್ಣವಾದ ಪ್ರಜ್ಞೆಯಿಂದ ಜಿಲ್ಲಾ ಬೋರ್ಡ್ ಮತ್ತು ಪೌರ ಚುನಾವಣೆಗಳಲ್ಲಿ ಕಾಂಗ್ರೆಸ್ ಜಯಭೇರಿ ಹೊಡೆಯಿತು. ಎರಡೂ ಚುನಾವಣೆಗಳಲ್ಲಿ ಕಾಂಗ್ರೆಸ್ ಸ್ಪಷ್ಟ ಬಹುಮತವನ್ನು ಗಳಿಸಿತು. ಕಾಂಗ್ರೆಸ್ಸಿನ ಶಕ್ತಿ ಸಾಮರ್ಥ್ಯಗಳು ನಿಚ್ಚಳವಾಗಿ ಸರಕಾರಕ್ಕೆ ವೇದ್ಯವಾದುವು. ಜನರ ಒಲವು ಯಾವ ಕಡೆಗಿದೆ ಎಂಬುದೂ ಬೆಳಕಿಗೆ ಬಂದಿತು. ಮೈಸೂರ್ ಕಾಂಗ್ರೆಸ್ಸಿನ ಜಯವನ್ನು ರಾಷ್ಟ್ರನಾಯಕರು ಮೆಚ್ಚಿಕೊಂಡರು. ಆದರೆ ಕಾಂಗ್ರೆಸ್ಸಿನ ಜಯಭೇರಿ ಮೈಸೂರು ಸರಕಾರಕ್ಕೆ ನುಂಗಲಾರದ ತುತ್ತಾಯಿತು. ಆಗಲಾದರೂ ಸರಕಾರ ವಾಸ್ತವ ಸ್ಥಿತಿಯನ್ನು ಅರಿತುಕೊಂಡಿದ್ದರೆ ಮುಂದಿನ

* ರಚನೆ : ಬಿ. ನೀಲಕಂಠಯ್ಯ.

ಎಷ್ಟೋ ಅನಾಹುತಗಳು ಸಂಭವಿಸುತ್ತಿರಲಿಲ್ಲವೋ ಏನೋ !

1940ರಲ್ಲಿ ಮೈಸೂರಿನ ಮಹಾರಾಜರು ತೀರಿಕೊಂಡರು. 1941ರಲ್ಲಿ ಶ್ರೀ ಮಿರ್ಜಾಸಾಹೇಬರು ದಿವಾನಗಿರಿಗೆ ಬಲಪಂತವಾಗಿ ರಾಜೀನಾಮೆ ಕೊಡಬೇಕಾಯಿತು. 15 ವರ್ಷಗಳ ಆಳ್ವಿಕೆಯಲ್ಲಿ ಅವರು ಕೆಲವು ಜನಹಿತ ಕಾರ್ಯಗಳನ್ನು ಮಾಡಿದ್ದರೂ ಜವಾಬ್ದಾರಿ ಸರಕಾರಕ್ಕಾಗಿ ನ್ಯಾಯವಾಗಿ ಜನರು ಮಾಡುತ್ತಿದ್ದ ಸತ್ಯಾಗ್ರಹವನ್ನು, ಬೇಡಿಕೆಯನ್ನು ಮನ್ನಿಸಿದೆ ಜನರ ಪ್ರೀತಿ ಗೌರವಗಳಿಂದ ವಂಚಿತರಾದರು.

ಅನಂತರ ಶ್ರೀ ನ್ಯಾಮತಿ ಮಾಧವರಾಯರು ದಿವಾನರಾದರು. ಆದರೆ ಪರಿಸ್ಥಿತಿ ಸುಧಾರಿಸಲಿಲ್ಲ. ಮತ್ತೆ ಚಳುವಳಿಗಳು ಪ್ರಾರಂಭವಾದುವು. ಅನೇಕ ಕಡೆಗಳಲ್ಲಿ ಪೋಲೀಸರು ಗೋಲಿಬಾರು ಮಾಡಿ ಅನೇಕರನ್ನು ಆಹುತಿ ತೆಗೆದುಕೊಂಡರು.

1942ರಲ್ಲಿ ಮಹಾತ್ಮ ಗಾಂಧೀಜಿಯವರು ತಮ್ಮ ಕೊನೆಯ ಹೋರಾಟ 'ಕ್ವಿಟ್ ಇಂಡಿಯ' ನಿರ್ಣಯವನ್ನು ಮಾಡಿ 'ಮಾಡು ಇಲ್ಲವೆ ಮಡಿ' ಘೋಷಣೆಯನ್ನು ಮಹಾಜನರ ಮುಂದಿಟ್ಟರು. ದೇಶದ ಎಲ್ಲಾ ಕಡೆ ಈ ಚಳುವಳಿಯಲ್ಲಿ ಜನರು ಸಕ್ರಿಯವಾಗಿ ಮುನ್ನುಗ್ಗಿದರು. ಮೈಸೂರು ರಾಜ್ಯವೂ ಹಿಂದೆ ಬೀಳಲಿಲ್ಲ.

ಸೆಪ್ಟೆಂಬರ್ 28, 1942 : ಈಸೂರಿನ ದುರಂತ ಪ್ರಕರಣ

ಕ್ವಿಟ್ ಇಂಡಿಯಾ ಚಳುವಳಿಯ ಸಂದರ್ಭದಲ್ಲಿ ಅತ್ಯಂತ ಘೋರವಾದ ಈಸೂರಿನ ಪ್ರಕರಣ ಸಂಭವಿಸಿತು. ಶಿವಮೊಗ್ಗ ಜಿಲ್ಲೆಯ ಶಿಕಾರಿಪುರದ ಈಸೂರಿನಲ್ಲಿ ಊರಿನ ವಿದ್ಯಾರ್ಥಿಗಳಿಂದ ಚಳುವಳಿ ಆರಂಭವಾಯಿತು. ವಿದ್ಯಾರ್ಥಿಗಳು ಪಟೇಲರು, ಸರಕಾರಿ ಅಧಿಕಾರಿಗಳು, ಅಮಲ್ದಾರರು, ಪೋಲೀಸ್ ಇನ್‌ಸ್ಪೆಕ್ಟರರನ್ನು ಕಂಡು ರಾಜೀನಾಮೆ ಕೊಡಬೇಕೆಂದು ಕೆಣಕಿ ಗಾಂಧೀ ಟೋಪಿ ಧರಿಸುವಂತೆ ಮಾಡಿದರು. ಪೋಲೀಸ್ ಅಧಿಕಾರಿಗಳು ಕೋಪಗೊಂಡು ಗುಂಪಿನ ಮೇಲೆ ಗುಂಡು ಹಾರಿಸಿದರು. ಶಬ್ದ ಕೇಳಿ ವಿದ್ಯಾರ್ಥಿಗಳ ಜೊತೆಗೆ ಊರಿನವರೆಲ್ಲ ಸೇರಿಕೊಂಡರು. ದೊಂಬಿ ಶುರುವಾಯಿತು. ಅಮಲ್ದಾರ್ ಶ್ರೀ ಚನ್ನಕೃಷ್ಣಯ್ಯ, ಸಬ್‌ಇನ್‌ಸ್ಪೆಕ್ಟರ್ ಶ್ರೀ ಕೆಂಚೇಗೌಡರು ಗುಂಪಿನಿಂದ ಏಟು ತಿಂದು ಸತ್ತುಹೋದರು. ವಿಷಯ ತಿಳಿದು ಜಿಲ್ಲಾಧಿಕಾರಿಗಳು ಮೀಸಲು ಪಡೆಯನ್ನೂ ಮಿಲಿಟರಿಯನ್ನೂ ಕರೆದುಕೊಂಡು ಈಸೂರಿಗೆ ಬಂದರು. ಈಸೂರಿನ ಜನ ಮನೆಗಳನ್ನು ಬಿಟ್ಟು ಕಾಡಿಗೆ ಹೋಗಿ ತಲೆ ತಪ್ಪಿಸಿಕೊಂಡರು. ಪೋಲೀಸರು ಜನರ ಬೆನ್ನುಹತ್ತಿದರು. ಸಿಕ್ಕಿದವರನ್ನು ಬಡಿದರು. ಜನಗಳ ಮೇಲೆ ಸಿಟ್ಟಿಗೆದ್ದರು. ಪೋಲೀಸರು ಮನೆಗಳಿಗೆ ನುಗ್ಗಿ ಲೂಟಿ ಮಾಡಿದರು. ಕಾಡಿನಲ್ಲಿ ತಪ್ಪಿಸಿಕೊಂಡಿದ್ದ ವಯಸ್ಕ ಮಹಿಳೆಯರನ್ನು ಹುಡುಕಿ ಅತ್ಯಾಚಾರ ಮಾಡಿದರು. ಕೆಲವು ಮನೆಗಳನ್ನು ಸುಟ್ಟರು. ಕೈಗೆ ಸಿಕ್ಕಿ

ದವರನ್ನು ದಸ್ತಗಿರಿ ಮಾಡಿ ಮೊಕದ್ದಮೆ ಹೂಡಿದರು.

41 ಜನರ ಮೇಲೆ ಮೊಕದ್ದಮೆ ಹೇರಿ ವಿಚಾರಣೆಗಾಗಿ ಶ್ರೀ ಸುಂದರರಾಜರೆಂಬ ವಿಶೇಷ ನ್ಯಾಯಾಧೀಶರನ್ನು ನೇಮಿಸಿದರು. ನ್ಯಾಯಾಧೀಶರು ಬೆಂಗಳೂರಿನಿಂದ ಶಿವಮೊಗ್ಗೆಗೆ ಬರುವಾಗ ರೈಲನ್ನು ಡಿರೈಲ್ ಮಾಡುವ ಪ್ರಯತ್ನ ನಡೆಯಿತು. ಆಕಸ್ಮಿಕವಾಗಿ ರೈಲು ಉರುಳುವುದು ತಪ್ಪಿತು.

ವಿಚಾರಣೆಯ ಅನಂತರ 11 ಜನಕ್ಕೆ ಮರಣದಂಡನೆ, ಅನೇಕರಿಗೆ ಜೀವಾವಧಿ ಶಿಕ್ಷೆ ಆಯಿತು. ಹೈಕೋರ್ಟಿಗೆ ಅಪೀಲು ಹೋದುದರಿಂದ ಇಬ್ಬರ ಮರಣ ದಂಡನೆ ತಪ್ಪಿತು. ಕೊನೆಗೆ ಶ್ರೀ ಗುರಪ್ಪ, ಶ್ರೀ ಮಲ್ಲಪ್ಪ, ಶ್ರೀ ಹಾಲಪ್ಪ, ಶ್ರೀ ಶಂಕರಪ್ಪ, ಶ್ರೀ ಸೂರ್ಯನಾರಾಯಣಾಚಾರಿಯವರನ್ನು ಬೆಂಗಳೂರು ಸೆಂಟ್ರಲ್ ಜೈಲಿನಲ್ಲಿ ಗಲ್ಲಿಗೇರಿಸಲಾಯಿತು. ಆಜೀವ ಶಿಕ್ಷೆಗೆ ಈಡಾದವರಲ್ಲಿ ಶ್ರೀಮತಿಯರಾದ ಪಾರ್ವತಮ್ಮ, ಹಾಲಮ್ಮ, ಸಿದ್ದಮ್ಮ* ಎಂಬ ಹೆಂಗಸರೂ ಶ್ರೀ ಲಿಂಗಪ್ಪ, ಶ್ರೀ ದುರ್ಗೋಜಿ ಎಂಬ ವಿದ್ಯಾರ್ಥಿಗಳೂ ಸೇರಿದ್ದರು.

ಸತ್ಯಾಗ್ರಹವನ್ನು ತಪ್ಪಾಗಿ ತಿಳಿದುಕೊಂಡ ಜನ ಮತ್ತು ಅಧಿಕಾರವನ್ನು ದುರುಪಯೋಗಪಡಿಸಿಕೊಂಡ ಅಧಿಕಾರಿಗಳಿಂದ ನಡೆದ ಘೋರ ಪಾಪ ಇದು.

ಕ್ವಿಟ್ ಇಂಡಿಯಾ ಚಳವಳಿಯು ಮೊಳಗು ಬೆಳಗಾವಿ, ಕಾರವಾರ, ಧಾರವಾಡ, ಬಿಜಾಪುರ. ಬಳ್ಳಾರಿ, ದಕ್ಷಿಣ ಕನ್ನಡ ಜಿಲ್ಲೆಗಳಲ್ಲೂ ಪ್ರಭಾವಶಾಲಿಯಾಗಿ ನಡೆಯಿತು. ಶ್ರೀ ಅಣ್ಣು ಗುರೂಜಿ, ಶ್ರೀ ರಾಮಚಂದ್ರಪ್ರಭು, ಶ್ರೀ ಸಿ.ಜಿ. ಅಂಬಲಿ ಶ್ರೀ ಟಿ. ಸುಬ್ರಹ್ಮಣ್ಯಂ, ಶ್ರೀ ಎನ್. ಎಸ್. ಕಿಲ್ಲೆ ಮೊದಲಾದವರು ಚಳುವಳಿಗಳ ಮುಂಚೂಣಿಯಲ್ಲಿದ್ದರು. ಮೈಸೂರು, ಬೆಂಗಳೂರುಗಳಲ್ಲಂತೂ ಈ ಚಳುವಳಿ ತುತ್ತತುದಿ ಮುಟ್ಟಿತು. ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಶ್ರೀ ಬಿ. ಜಿ. ದೇಶಪಾಂಡೆ, ಜೇವರ್ಗಿಯ ಶ್ರೀ ಶರಣಗೌಡ, ಶ್ರೀ ವೀರಭದ್ರಪ್ಪ ಶಿರೂರ ಮೊದಲಾದವರು ಚಳುವಳಿ ನಡೆಸಿ ಬಂಧನಕ್ಕೊಳಗಾದರು.

ಕಾಂಗ್ರೆಸ್ಸಿಗೆ ಮತ್ತೆ ಜಯ

1945ರಲ್ಲಿ ಶಾಸನ ಸಭೆಗಳಿಗೆ ಚುನಾವಣೆಗಳು ನಡೆದು ಕಾಂಗ್ರೆಸ್ ಭಾರಿ ಜಯಗಳಿಸಿತು. ಆದರೆ ಆಗ ದಿವಾನರಾಗಿದ್ದ ಸರ್ ಆರ್ಕಾಟ್ ಮೊದಲಿಯಾರರು ಹಿಂದಿನ ದಿವಾನರಾದ ಶ್ರೀ ಮಿರ್ಜಾರಂತೆಯೇ ಜನರ ಆಶೋತ್ತರಗಳನ್ನು ಅರಿತು

---

* ರಾಜಪುತ್ರಿ ಗಾಯಿತ್ರಿದೇವಿಯವರ ಜನನದ ಪ್ರಯುಕ್ತ ಈ ವೀರ ಮಹಿಳೆಯರನ್ನು ದಿನಾಂಕ 27-10-1946ರಂದು ಬಿಡುಗಡೆ ಮಾಡಲಾಯಿತು.

ಕೊಳ್ಳಲಿಲ್ಲ. ಕಾಂಗ್ರೆಸ್ ಚಳುವಳಿಗಳನ್ನು ಹತ್ತಿಕ್ಕಲು ಅರ್ಕಾಟರು ಅನೇಕ ಕುತಂತ್ರಗಳನ್ನು ಬಳಸಿದರು. ಇದರಿಂದ ಕಾಂಗ್ರೆಸ್ ಮತ್ತಷ್ಟು ಬಲವಾಯಿತೇ ಹೊರತು ಮೋಸ ಹೋಗಲಿಲ್ಲ.

ಭಾರತದ ಸ್ವಾತಂತ್ರ್ಯ

ಮಹಾತ್ಮ ಗಾಂಧೀಜಿಯವರ ಸತತ ಹೋರಾಟದ ಫಲವಾಗಿ 15-8-1947ರ ಮಧ್ಯ ರಾತ್ರಿಯಲ್ಲಿ ಭಾರತಕ್ಕೆ ಸ್ವಾತಂತ್ರ್ಯ ದೊರೆಯಿತು. ಪ್ರಪಂಚವೇ ಆಶ್ಚರ್ಯ ಪಡುವಂತೆ ಇದು ಸಾಧ್ಯವಾಯಿತು. 1941ರಲ್ಲಿ ಶ್ರೀ ಸುಭಾಷಚಂದ್ರಬೋಸರು ಭಾರತದಿಂದ ಕಣ್ಮರೆಯಾಗಿ ಪರದೇಶಕ್ಕೆ ತೆರಳಿದರು. ಕ್ರಾಂತಿಕಾರಿ ಸುಭಾಷರು ಭಾರತದಲ್ಲಿದ್ದಿದ್ದರೆ ಭಾರತದ ಸ್ವಾತಂತ್ರ್ಯ ಸಂಗ್ರಾಮದ ಕಥೆಯೇ ಬೇರೆಯಾಗುತ್ತಿತ್ತು. ಇಡೀ ಭಾರತವನ್ನು ಸಂಗ್ರಾಮ ಭೂಮಿ ಮಾಡಲು, ರಕ್ತಕ್ರಾಂತಿಯಿಂದ ಸ್ವಾತಂತ್ರ್ಯವನ್ನು ಸಂಪಾದಿಸಲು ಅವರು ಸಂಕಲ್ಪಿಸಿದ್ದರು. ಒಂದು ವೇಳೆ ಅವರ ಸಂಕಲ್ಪ ನೆರವೇರಿದ್ದರೆ ಇಡೀ ಭಾರತ ರಣಭೂಮಿಯಾಗುತ್ತಿತ್ತು. ರಕ್ತದ ಕಾಲುವೆ ಹರಿಯುತ್ತಿತ್ತು. ಬಹುಶಃ ಸ್ವಾತಂತ್ರ್ಯದ ಬೆಲೆ ಭಾರತೀಯರಿಗೆ ನಿಜವಾಗಿಯೂ ತಿಳಿಯುತ್ತಿತ್ತು. ಯಾಕೆಂದರೆ ತ್ಯಾಗ ಬಲಿದಾನಗಳಿಂದ ರಕ್ತದ ಕೊಡುಗೆಯಿಂದ ಸಂಪಾದಿಸಿದ ಸ್ವಾತಂತ್ರ್ಯಕ್ಕೆ ಬೆಲೆ ಹೆಚ್ಚು. ಆದರೆ ಮಹಾತ್ಮ ಗಾಂಧೀಜಿಯವರ ವಿನೂತನ ಹೋರಾಟದಿಂದ ನಿರಾಯಾಸವಾಗಿ ಅಥವಾ ಕಡಮೆ ನಷ್ಟದಿಂದ ಭಾರತಕ್ಕೆ ಸ್ವಾತಂತ್ರ್ಯ ಬಂತು.

ಸ್ವತಂತ್ರರಾದ ಕೂಡಲೇ ಗಾಂಧೀಜಿಯವರು ಕಾಂಗ್ರೆಸ್ ಪಕ್ಷವನ್ನು ವಿಸರ್ಜಿಸಲು ಹೇಳಿದರು. ಆದರೆ ನಾಯಕರು ಕೇಳಲಿಲ್ಲ. ಅಧಿಕಾರದ ಆಸೆ ಮುಂದಾಗಿ ನಿಸ್ವಾರ್ಥ ಸೇವೆ ಹಿಂದಾಯಿತು. ಗಾಂಧೀಜಿಯವರ ಮಾತು ಕೇಳಿದ್ದರೆ ನಿಜವಾದ ಯೋಧರಿಗೆ ಅನ್ಯಾಯವಾಗುತ್ತಿರಲಿಲ್ಲ. ಯಾವುದೇ ಪಕ್ಷದ ಹೆಸರಿನಲ್ಲಿ ಚುನಾವಣೆಗೆ ಸ್ಪರ್ಧಿಸಿದ್ದರೂ ಅರ್ಹರು ಅಧಿಕಾರಕ್ಕೆ ಬಂದೇ ಬರುತ್ತಿದ್ದರು. ಕಾಳಿನ ಜೊತೆ ಜೊಳ್ಳು ಕೂಡ ಅಧಿಕಾರದ ಗದ್ದುಗೆಗೆ ಬರುವುದು ತಪ್ಪುತ್ತಿತ್ತು. ಗಾಂಧೀಜಿಯವರ ಸಲಹೆಯನ್ನು ಹಿಂದೆ ತಳ್ಳಿ ಕಾಂಗ್ರೆಸ್ ಅಧಿಕಾರಕ್ಕೆ ಬಂದು ಇಡೀ ದೇಶದ ಜವಾಬ್ದಾರಿಯನ್ನು ಹೊತ್ತುಕೊಂಡಿತು. ತಮ್ಮ ಕೊನೆಯ ಆಸೆ ಈಡೇರದುದಕ್ಕಾಗಿ ಬಹುಶಃ ಮಹಾತ್ಮರ ಮನಸ್ಸು ಮರುಗಿರಬೇಕು.

ಭಾರತದ ಸ್ವಾತಂತ್ರ್ಯಕ್ಕಾಗಿ ಮಾಡಿದ ಹೋರಾಟ ಸಾಮಾನ್ಯವಾದುದಲ್ಲ; ಅದಕ್ಕೆ ತೆಗೆದುಕೊಂಡ ಕಾಲವೂ ಕಡಮೆಯಲ್ಲ. ಈ ಮಹಾಭಾಗ್ಯದ ಪ್ರಾಪ್ತಿಗೆ ಮೈಸೂರು ಸಂಸ್ಥಾನದ ಸತ್ಯಾಗ್ರಹಿಗಳ ಕೊಡುಗೆಯೂ ಅಪಾರವಾಗಿದೆ. ಶಿವ

ಪುರ ಧ್ವಜ ಸತ್ಯಾಗ್ರಹಕ್ಕೆ ಮೊದಲು ಮತ್ತು ಅನಂತರ ಮೈಸೂರು ಸಂಸ್ಥಾನದಲ್ಲಿ ಮತ್ತು ರಾಷ್ಟ್ರದ ಇತರ ಕಡೆಗಳಲ್ಲಿ ಮೈಸೂರಿನ ಸತ್ಯಾಗ್ರಹಿಗಳು ಸಾವಿರಾರು ಸಂಖ್ಯೆಯಲ್ಲಿ ಭಾಗವಹಿಸಿದರು. ಅನೇಕರು ಇದಕ್ಕೆ ತಮ್ಮ ಜೀವನನ್ನೇ ಮುಡಿಪಿಟ್ಟರು. ಎಷ್ಟೋ ಜನ ತಮ್ಮ ಮನೆ ಮಠ ಹೆಂಡತಿ ಮಕ್ಕಳುಗಳನ್ನು ಕಳೆದುಕೊಂಡರು. ವರ್ಷಾನುಗಟ್ಟಲೆ ಕಾರಾಗೃಹಗಳಲ್ಲೋ ತಲೆ ತಪ್ಪಿಸಿಕೊಂಡೋ ವನವಾಸ ಪಟ್ಟವರಿಗೆ ಕೊರತೆಯಿಲ್ಲ. ಸರಕಾರದ ದಬ್ಬಾಳಿಕೆಗೆ ಸಿಕ್ಕಿ ಅಸಹಾಯಕರಾಗಿ ಹುತಾತ್ಮರಾದ ವೀರಯೋಧರು ಮಾಡಿದ ತ್ಯಾಗ ಎಣೆಯಿಲ್ಲದ್ದು. ಲಾಠಿ ಏಟು ತಿಂದವರು, ಗಾಯಗೊಂಡವರು, ದೈಹಿಕವಾಗಿ ಮಾನಸಿಕವಾಗಿ ನರಳಿದವರು ಅನುಭವಿಸಿದ ವ್ಯಥೆ ಕರುಳು ಕಲಕುವಂಥದ್ದು. ಮಹಾತ್ಮ ಗಾಂಧೀಜಿಯವರ ಸಂಮೋಹಕ ಶಕ್ತಿ, ಸತ್ಯಾಗ್ರಹಗಳ ಧಾರ್ಮಿಕ ತೇಜಸ್ಸು ಸಾವಿರಾರು ಸತ್ಯಾಗ್ರಹಿಗಳನ್ನು ಆಕರ್ಷಿಸಿ ಸ್ವಾತಂತ್ರ್ಯ ಸಂಗ್ರಾಮದ ಮಹಾಯಜ್ಞದಲ್ಲಿ ಪಾಲ್ಗೊಳ್ಳುವಂತೆ ಮಾಡಿದುವು.

ಮೈಸೂರಿನ ಸ್ವಯಂಸೇವಕರು

ಡಾಕ್ಟರ್ ಹರ್ಡೀಕರರು ತಯಾರು ಮಾಡಿದ ಸೇವಾದಳದ ಸಾವಿರಾರು ಸ್ವಯಂಸೇವಕರು ನಿರ್ವಹಿಸಿದ ಕಾರ್ಯ ಇಡೀ ಭಾರತದಲ್ಲೇ ಹೆಸರುವಾಸಿಯಾಗಿದೆ. ಪುರುಷರಂತೆಯೇ ಸತ್ಯಾಗ್ರಹಗಳಲ್ಲಿ ಭಾಗವಹಿಸಿದ, ಉಜ್ವಲ ಭಾಷಣಗಳನ್ನು ಮಾಡಿದ, ನಿದ್ದೆ ಆಹಾರಗಳನ್ನು ಬಿಟ್ಟು ಹಗಲೂರಾತ್ರಿ ಶ್ರಮಿಸಿದ ಸ್ತ್ರೀಯರ ಸಂಖ್ಯೆಗೇನೂ ಮೈಸೂರು ರಾಜ್ಯದಲ್ಲಿ ಕಡಮೆಯಿಲ್ಲ. ಶ್ರೀಮತಿ ಕಮಲಾದೇವಿ ಚಟ್ಟೋಪಾಧ್ಯಾಯ, ಶ್ರೀಮತಿ ಬಳ್ಳಾರಿ ಸಿದ್ಧಮ್ಮ, ಶ್ರೀಮತಿ ಕೃಷ್ಣಬಾಯಿ ಪಣಜೀಕರ್, ಶ್ರೀಮತಿ ಯಶೋಧರಮ್ಮ ದಾಸಪ್ಪ, ಸರ್ದಾರ್ ವೆಂಕಟರಾಮಯ್ಯನವರ ಪತ್ನಿ ಶ್ರೀಮತಿ ಗೌರಮ್ಮ, ಶ್ರೀಮತಿ ಸಿದ್ದಮ್ಮ ಮೈಲಾರ, ಶ್ರೀಮತಿ ನಾಗವ್ವ ವೀರಣ್ಣಗೌಡ ಪಾಟೀಲ, ಶ್ರೀಮತಿ ಟಿ. ಸುನಂದಮ್ಮ, ಶ್ರೀಮತಿ ಇಂದಿರಾ ಕೃಷ್ಣಮೂರ್ತಿ, ಶ್ರೀಮತಿ ಸೋನಾಬಾಯಿ, ಶ್ರೀಮತಿ ತಾಯಮ್ಮ ವೀರಣ್ಣಗೌಡ, ಶ್ರೀಮತಿ ಗಂಗಮ್ಮ, ಶ್ರೀಮತಿ ಲಲಿತ ಜಿ. ಆರ್. ಸ್ವಾಮಿ ಮೊದಲಾದ ಸ್ತ್ರೀಯರು ಚರಿತ್ರಾರ್ಹರಾಗಿದ್ದಾರೆ.

ಮೈಸೂರು ಸಂಸ್ಥಾನದ ಕಾರ್ಮಿಕರು, ವಿದ್ಯಾರ್ಥಿಗಳು, ವಕೀಲರು, ಕೆಲವು ಸರಕಾರಿ ಅಧಿಕಾರಿಗಳು ಸತ್ಯಾಗ್ರಹಗಳಿಗೆ ಅಮೋಘವಾಗಿ ಸೇವೆ ಸಲ್ಲಿಸಿದರು. ಮುಗ್ಧರಾದ ಹಳ್ಳಿಯ ಸ್ತ್ರೀ ಪುರುಷರ ಶ್ರಮ, ತ್ಯಾಗ, ಬಲಿದಾನ, ಅವರು ಅನುಭವಿಸಿದ ಕಿರುಕುಳ ಮರೆಯುವಂಥದ್ದಲ್ಲ. ಸ್ವಾತಂತ್ರ್ಯ ಸಂಗ್ರಾಮದ ಮಹಾಯಜ್ಞದಲ್ಲಿ ಹಳ್ಳಿಗರು-ಪಟ್ಟಣಿಗರು, ಸ್ತ್ರೀಯರು–ಪುರುಷರು, ಶ್ರೀಮಂತರು-ಬಡ

ವರು, ಅಕ್ಷರಸ್ಥರು–ಅನಕ್ಷರಸ್ಥರು ಹೀಗೆ ಎಲ್ಲಾ ರೀತಿಯ, ಎಲ್ಲಾ ವರ್ಗದ, ಎಲ್ಲಾ ಜಾತಿಯ ಜನರೂ ಪಾಲ್ಗೊಂಡಿದ್ದರು.

ರಾಷ್ಟ್ರಮಟ್ಟದಲ್ಲಿ ನಡೆದ ಅನೇಕ ಸತ್ಯಾಗ್ರಹಗಳಲ್ಲಿ ಮೈಸೂರು ಪ್ರಾಂತ್ಯದ ಸಾವಿರಾರು ಸತ್ಯಾಗ್ರಹಿಗಳು, ಸ್ವಯಂಸೇವಕರು, ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಉತ್ಸಾಹದಿಂದ ಭಾಗವಹಿಸಿದರೆಂಬುದು ಅಭಿಮಾನದ ಸಂಗತಿಯಾಗಿದೆ. 1885ರಲ್ಲಿ ಬೊಂಬಾಯಿಯಲ್ಲಿ ನಡೆದ ಕಾಂಗ್ರೆಸ್‌ನ ಪ್ರಥಮ ಅಧಿವೇಶನಕ್ಕೆ ಮೈಸೂರು ಸಂಸ್ಥಾನದ ಪ್ರತಿನಿಧಿಗಳು ಹೋಗಿದ್ದರು. ಶ್ರೀ ವಿ. ಪಿ. ಮಾಧವ ರಾಯರ ಅಧ್ಯಕ್ಷತೆಯಲ್ಲಿ 1920ರಲ್ಲಿ ಧಾರವಾಡದಲ್ಲಿ ನಡೆದ 'ಕರ್ನಾಟಕ ರಾಜಕೀಯ ಪರಿಷತ್ತು' ನೀಡಿದ ಆದೇಶದಂತೆ ನಾಗಪುರ ಕಾಂಗ್ರೆಸ್ ಅಧಿವೇಶನಕ್ಕೆ ಮೈಸೂರು ಸಂಸ್ಥಾನದಿಂದ 800 ಸ್ವಯಂಸೇವಕ ಪ್ರತಿನಿಧಿಗಳು ಹೋಗಿದ್ದರು. ಸಂಸ್ಥಾನದ ಹಲವು ಕಡೆಗಳಲ್ಲಿ ಭಾಗವಹಿಸಿ ಸೇವೆ ಸಲ್ಲಿಸಿದ ಸ್ವಯಂಸೇವಕರ ಸಂಖ್ಯೆ ಎಣಿಕೆಗೆ ಸಿಗಲಾರದಷ್ಟಿದೆ.

ಜನಜಾಗೃತಿಯಲ್ಲಿ ಕನ್ನಡ ಕವಿಗಳ ಸೇವೆಯೂ ಸಾಕಷ್ಟಿದೆ. ಕುವೆಂಪು, ಬೇಂದ್ರೆ ಮೊದಲಾದ ಕನ್ನಡದ ಕೆಲವು ರಾಷ್ಟ್ರಪ್ರೇಮಿ ಕವಿಗಳು ಸರಕಾರದ ಕಣ್ಣು ಕೆಂಪಗಾಗುವಂತೆ ಸ್ವಾತಂತ್ರ್ಯದ ಅಗತ್ಯವನ್ನು ಎತ್ತಿ ಹಿಡಿದು ಅನೇಕ ಕವನಗಳನ್ನು ಕಟ್ಟಿ ಹಾಡಿದರು. ಅವು ಜನಸಾಮಾನ್ಯರನ್ನು ರಾಜಕೀಯ ಚಳುವಳಿಗಳಂತೆ ಸುಲಭವಾಗಿ ಮುಟ್ಟಲಿಲ್ಲ. ಆದರೆ ವಿದ್ಯಾವಂತರು ಅವುಗಳಿಂದ ಸಾಕಷ್ಟು ಪ್ರಭಾವಿತರಾದರು.

ಪತ್ರಿಕೆಗಳ ಸೇವೆ

ಜನಜಾಗೃತಿಯ ಸೇವೆಯಲ್ಲಿ ಕನ್ನಡ ಪತ್ರಿಕೆಗಳನ್ನು ಖಂಡಿತ ಮರೆಯುವಂತಿಲ್ಲ. ಮಂಗಳೂರಿನ ಸ್ವದೇಶಾಭಿಮಾನಿ, ಧಾರವಾಡದ ಕರ್ನಾಟಕ ವೃತ್ತ, ರಾಜಹಂಸ, ಕರ್ಮವೀರ, ಬಿಜಾಪುರದ ಕರ್ನಾಟಕ ವೈಭವ, ಮೈಸೂರು ಸಂಸ್ಥಾನದ ಕರ್ನಾಟಕ ಪ್ರಕಾಶಿಕಾ, ಸಾಧ್ವಿ, ದೇಶಾಭಿಮಾನಿ, ದಾವಣಗೆರೆಯ ಧನುರ್ಧಾರಿ, ಹುಬ್ಬಳ್ಳಿಯ ಸಂಯುಕ್ತ ಕರ್ನಾಟಕ, ಬಳ್ಳಾರಿಯ ವಿಜಯಧ್ವಜ, ಬೆಂಗಳೂರಿನ ವಿಶ್ವ ಕರ್ನಾಟಕ, ಜನವಾಣಿ, ತಾಯಿನಾಡು, ವೀರಕೇಸರಿ, ಉಡುಪಿಯ ಸತ್ಯಾಗ್ರಹಿ, ಪೌರವಾಣಿ ಮೊದಲಾದ ಪತ್ರಿಕೆಗಳು ಇನ್ನಿಲ್ಲದಂತೆ ದುಡಿದಿವೆ. ಜನಜಾಗೃತಿಗೆ ಇವು ಬಹಳ ಸಹಾಯಮಾಡಿವೆ. ಜನರ ಅಭಿಪ್ರಾಯಗಳನ್ನು ದಿಟ್ಟವಾಗಿ ಅಭಿವ್ಯಕ್ತಿಸಿ ಸರ್ಕಾರದ ಆಕ್ರೋಶಕ್ಕೆ ಒಳಗಾಗಿ ಮುಟ್ಟುಗೋಲು, ಕರಾಳ ಶಾಸನಗಳನ್ನು ಎದುರಿಸಿವೆ. ಕೆಲವು ಸರಕಾರದ ದೌರ್ಜನ್ಯವನ್ನು ತಾಳಲಾರದೆ ಸತ್ತು ಬದುಕಿದುವು. ಕೆಲವು ಗಡೀಪಾರಾಗಿ ಬೆಳಕು ಕಂಡವು. ಕೆಲವು ಮೊದಲಿನಿಂದಲೂ ಕೊನೆಯ

ವರೆಗೆ ಹೋರಾಡಿ ದಿಟ್ಟವಾಗಿ ತಮ್ಮ ಅಸ್ತಿತ್ವವನ್ನು ಕಾಪಾಡಿಕೊಂಡುವು. ಕೆಲವು ಪತ್ರಿಕೆಗಳ ಶೈಲಿಯಂತೂ ಇಂದಿಗೂ ಅನುಕರಣೀಯವಾಗಿದೆ.

ಮೈಸೂರಿಗೆ ಸ್ವಾತಂತ್ರ್ಯ ಬರಲಿಲ್ಲ

ಭಾರತಕ್ಕೆ ಸ್ವಾತಂತ್ರ್ಯ ಬಂದರೂ ಮೈಸೂರು ಸಂಸ್ಥಾನದ ಜನರಿಗೆ ಸುಲಭವಾಗಿ ಸ್ವಾತಂತ್ರ್ಯ ಬರಲಿಲ್ಲ. 15-8-1947ರಂದು ಇಡೀ ದೇಶ ಸಂತೋಷದಿಂದ ನಲಿದಾಡುತ್ತಾ ರಾಷ್ಟ್ರಧ್ವಜವನ್ನು ಹಾರಿಸಿದರೆ ಮೈಸೂರು ಅರ್ಕಾಟ್ ಸರಕಾರ ರಾಷ್ಟ್ರಧ್ವಜವನ್ನು ಗೌರವಿಸಿ ಆರೋಹಣ ಮಾಡಲಿಲ್ಲ. ಅದಕ್ಕಾಗಿ ಮತ್ತೆ ಚಳುವಳಿ ಪ್ರಾರಂಭಿಸಬೇಕಾಯಿತು.

ಮಹಾತ್ಮ ಗಾಂಧೀಜಿಯವರ ಸತತವಾದ ಹೋರಾಟದ ಫಲವಾಗಿ ಭಾರತಕ್ಕೆ ಸ್ವಾತಂತ್ರ್ಯ ನೀಡಿದ ಮೇಲೆ ದೇಶೀಯ ಸಂಸ್ಥಾನಗಳ ವಿಷಯಕ್ಕೆ ಬ್ರಿಟಿಷ್ ಸರಕಾರ ಪ್ರವೇಶಿಸಲಿಲ್ಲ. ಆಗ ದೇಶೀಯ ಸಂಸ್ಥಾನಗಳು ಭಾರತ ಒಕ್ಕೂಟಕ್ಕೆ ಸೇರಿಕೊಳ್ಳಲು ಒಪ್ಪದೆ ತಾವೇ ಸ್ವತಂತ್ರವಾಗಿರಲು ಪ್ರಯತ್ನಿಸಿದುವು. ಬ್ರಿಟಿಷರು ಭಾರತ ಬಿಟ್ಟು ತೊಲಗಿದರೆ ದೇಶೀಯ ಸಂಸ್ಥಾನಗಳು ತಮ್ಮ ಮಾತನ್ನು ಕೇಳುತ್ತವೆ, ಬ್ರಿಟಿಷ್ ಇಂಡಿಯಾದಲ್ಲಿ ಅವೂ ವಿಲೀನವಾಗುತ್ತವೆ, ಭಾರತದ ಅಂಗಗಳಾಗುತ್ತವೆ ಎಂದು ರಾಷ್ಟ್ರನಾಯಕರು ಭಾವಿಸಿದ್ದುದು ಸುಳ್ಳಾಯಿತು. ದೇಶೀಯ ಸಂಸ್ಥಾನಗಳನ್ನು ಸಾಮ ದಾನ ಭೇದಗಳಿಂದ ಬಗ್ಗುಬಡಿಯಲು ಸರ್ದಾರ್ ವಲ್ಲಭಾಯಿ ಪಟೇಲರು ಪ್ರಯತ್ನಿಸಿ ಯಶಸ್ವಿಯಾದರು.

ಮೈಸೂರು ಮತ್ತು ಹೈದರಾಬಾದು ಸಂಸ್ಥಾನಗಳು ಉಳಿದವುಗಳಷ್ಟು ಬೇಗ ಮಣಿಯಲಿಲ್ಲ. ಹೈದರಾಬಾದಿನ ನಿಜಾಮರನ್ನು ಸೈನ್ಯವನ್ನು ಬಳಸಿ ದಾರಿಗೆ ತರಬೇಕಾಯಿತು. ಮೈಸೂರು ರಾಜರನ್ನು ದಾರಿಗೆ ತರಲು ಕಾಂಗ್ರೆಸ್ ನಾಯಕರು ಮುಂದಾದರು. 'ಮೈಸೂರು ಚಲೊ' ಚಳುವಳಿ ಪ್ರಾರಂಭವಾಯಿತು. ಶ್ರೀ ಕೆ. ಹನುಮಂತಯ್ಯನವರು ಇದರ ಜನ್ಮದಾತರು. ಶ್ರೀ ಕೆ. ಸಿ. ರೆಡ್ಡಿಯವರು ಇದರ ನೇತಾರರು.

ಮೈಸೂರ್ ಚಲೋ ಅಥವಾ ಅರಮನೆ ಸತ್ಯಾಗ್ರಹ

'ಮೈಸೂರ್ ಚಲೋ' ಘೋಷಣೆ ಮೊದಲು ಶ್ರೀ ಕೆ. ಹನುಮಂತಯ್ಯನವರ ಮನಸ್ಸಿನಲ್ಲಿ ಮೂಡಿತು. ಶ್ರೀಯುತರು ಬೆಂಗಳೂರು ಡಿಸ್ಟ್ರಿಕ್ಟ್ ಕಾಂಗ್ರೆಸ್ ಕಮಿಟಿಯ ಸಭೆಯನ್ನು ಕರೆದು ಆ ಸಭೆಯಲ್ಲಿ "ಜವಾಬ್ದಾರಿ ಸರ್ಕಾರ ಸ್ಥಾಪನೆಗೆ ಮೈಸೂರು ಚಲೋ ಚಳುವಳಿಯನ್ನು ನಡೆಯಿಸಬೇಕೆಂದೂ ಅರಮನೆಯ ಮುಂದೆ ಸತ್ಯಾಗ್ರಹವನ್ನು ಮಾಡಬೇಕೆಂದೂ ನಿರ್ಣಯವನ್ನು ತಂದರು. ಅದು ಸರ್ವಾನುಮತದಿಂದ ಒಪ್ಪಿಗೆ ಪಡೆಯಿತು. ಅನಂತರ ಅದಕ್ಕೆ ಮೈಸೂರು ಕಾಂಗ್ರೆಸ್

ವರ್ಕಿಂಗ್ ಕಮಿಟಿಯ ಒಪ್ಪಿಗೆಯೂ ದೊರೆಯಿತು. ಈ ನಿರ್ಣಯವಾದ ಮೇಲೆ ಚಳುವಳಿಯ ರೂಪರೇಷೆಗಳು ಸ್ಪಷ್ಟವಾದುವು.

ಆಗ ಮಹಾರಾಜರಾಗಿದ್ದ ಶ್ರೀ ಜಯಚಾಮರಾಜ ಒಡೆಯರ್ ಅವರಿಗೆ ಶ್ರೀ ತಂಬೂಚೆಟ್ಟರು ಆಪ್ತಕಾರ್ಯದರ್ಶಿಯಾಗಿದ್ದರು. ಶ್ರೀ ಕೆ. ಹನುಮಂತಯ್ಯನವರು 'ಮೈಸೂರು ಚಲೋ' ಘೋಷಿಸಿದ್ದನ್ನು ಕೇಳಿ ಶ್ರೀ ತಂಬೂಚೆಟ್ಟರು ಕಿಡಿಕಿಡಿಯಾದರು. "ಹನುಮಂತಯ್ಯನವರು ಅರಮನೆ ಮುಂದೆ ಸತ್ಯಾಗ್ರಹಕ್ಕೆ ಬಂದರೆ ಗುಂಡಿಟ್ಟು ಕೊಲ್ಲಿಸಿಬಿಡುತ್ತೇನೆ" ಎಂದು ಗುಡುಗಿದರು. ಆದರೂ ಚಳುವಳಿ ನಿಲ್ಲುವ ಸೂಚನೆ ಕಂಡುಬರಲಿಲ್ಲ. ಈ ಚಳುವಳಿಯನ್ನು ಹುಟ್ಟುಹಾಕಿದ ವ್ಯಕ್ತಿಯನ್ನು ಮುಟ್ಟಿ ಹಾಕಿದರೆ ಚಳುವಳಿ ತಾನೇತಾನಾಗಿ ನಿಲ್ಲುತ್ತದೆ ಎಂದು ಸರ್ಕಾರ ಯೋಚಿಸಿತು. ಚಳುವಳಿ ಉಗ್ರರೂಪ ತಾಳುವ ಮೊದಲೇ, ಚಳುವಳಿಗೆ ಕರೆ ಕೊಟ್ಟಿದ್ದನ್ನೇ ನೆಪ ಮಾಡಿಕೊಂಡು, ರಾಜದ್ರೋಹದ ಆಪಾದನೆಯನ್ನು ಹೊರಿಸಿ ಸರ್ಕಾರ ಶ್ರೀ ಹನುಮಂತಯ್ಯನವರನ್ನು ಬಂಧಿಸಿ, ಒಂದೂವರೆ ವರ್ಷದ ಶಿಕ್ಷೆ ವಿಧಿಸಿ, ಜೈಲಿನಲ್ಲಿಟ್ಟಿತು.

ಆಗ ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಶ್ರೀ ಕೆ. ಸಿ. ರೆಡ್ಡಿಯವರು ದಿವಾನ್ ಶ್ರೀ ರಾಮಸ್ವಾಮಿ ಮೊದಲಿಯಾರರೊಡನೆ ಸಂಧಾನ ಪ್ರಾರಂಭಿಸಿದರು. ಅದು ಕಾರಣಾಂತರಗಳಿಂದ ವಿಳಂಬವಾಯಿತು. ಈ ವಿಳಂಬ ಜನರಲ್ಲಿ ಸಂಶಯಕ್ಕೂ ರೊಚ್ಚಿಗೂ ಕಾರಣವಾಯಿತು. ಕೊನೆಗೆ ಸಂಧಾನ ವಿಫಲವಾಯಿತು. ಕಾಂಗ್ರೆಸ್ ಕಾರ್ಯಕರ್ತರ ತಾಳ್ಮೆ ಕೆಟ್ಟಿತು. ಚಳುವಳಿ ಅಂತಿಮ ಅಸ್ತ್ರವಾಯಿತು. ಮೈಸೂರು ಕಾಂಗ್ರೆಸ್ ಕಮಿಟಿಯವರು ಅರಮನೆ ಸತ್ಯಾಗ್ರಹ ಹೂಡಲು ಮುಂದಾದರು. ಶ್ರೀ ಕೆ. ಸಿ. ರೆಡ್ಡಿಯವರು ಚಳುವಳಿಯ ನಾಯಕರಾದರು.

ಚಳುವಳಿ ಪ್ರಾರಂಭವಾದ್ದನ್ನು ಕಂಡು ಮಹಾರಾಜರು ಭಾರತ ಒಕ್ಕೂಟಕ್ಕೆ ಸೇರಲು ಒಪ್ಪಿದರು. ಆದರೆ ಅದರಂತೆ ನಡೆದುಕೊಳ್ಳಲಿಲ್ಲ. "ಕೇಂದ್ರದಲ್ಲಿ ಏನೇನೋ ಆಗುತ್ತಿದೆ; ಪ್ರಾಂತ್ಯಗಳ ಮಾತು ಬೇರೆ; ಮೈಸೂರು ಸಂಸ್ಥಾನದ ಮಾತೇ ಬೇರೆ" ಎಂದು ದಿವಾನರು ಹಾರಿಕೆ ಮಾತಾಡಿದರು. ಜನರಿಗೆ ಕೋಪ ಉಕ್ಕಿತು; ಸತ್ಯಾಗ್ರಹವನ್ನು ತೀವ್ರಗೊಳಿಸಿದರು. ಇದಕ್ಕಾಗಿ ನಾಯಕರುಗಳು ರಾಜ್ಯಾದ್ಯಂತ ಪ್ರವಾಸ ಮಾಡಿ ಅಸಂಖ್ಯ ಜನರು 'ಮೈಸೂರು ಚಲೋ' ಚಳುವಳಿಯಲ್ಲಿ ಪಾಲ್ಗೊಳ್ಳುವಂತೆ ಮಾಡಿದರು. ಶ್ರೀ ಕೆ. ಸಿ. ರೆಡ್ಡಿಯವರನ್ನು 1-9-1947 ರಲ್ಲಿ ಪ್ರಥಮ ಸರ್ವಾಧಿಕಾರಿಯನ್ನಾಗಿ ನೇಮಿಸಲಾಯಿತು. ವಿದ್ಯಾರ್ಥಿಗಳು, ರೈತರು, ಕೂಲಿಕಾರರು, ಕಾರ್ಮಿಕರು, ವರ್ತಕರು ಮೊದಲಾಗಿ ಎಲ್ಲರೂ ಚಳುವಳಿಯಲ್ಲಿ ಭಾಗಿಗಳಾದರು. ಹೊರಪ್ರಾಂತದವರಾದ ಮದ್ರಾಸಿನ ಶ್ರೀ ಕೆ. ಕಾಮರಾಜರೂ, ಬೊಂಬಾಯಿಯ ಶ್ರೀ ಎಸ್. ಕೆ. ಪಾಟೀಲರೂ ಇದಕ್ಕೆ ಬೆಂಬಲ

ನೀಡಿದರು. ಕೇರಳದಿಂದ ಅನೇಕ ಸತ್ಯಾಗ್ರಹಿಗಳು ಬಂದರು. ರಾಜ್ಯದ ಕಾರ್ಮಿಕರು ನೇರವಾಗಿ ಚಳುವಳಿಗೆ ಧುಮುಕಿದರು.

ಸಂಭಾಷ್‌ನಗರದ ಕೆರೆಯ ಅಂಗಳದಲ್ಲಿ ಶ್ರೀ ಕೆ. ಸಿ. ರೆಡ್ಡಿಯವರು ಧ್ವಜಾರೋಹಣ ಮಾಡಿದರು. ಅಂದು ಅಸಂಖ್ಯಾತ ಜನರ ಸಮೂಹ ಸೇರಿತ್ತು. ಎಲ್ಲರೂ ಅಲ್ಲಿಂದ ಆರ್ಕಾಟರ ಅಧಿಕೃತ ನಿವಾಸವಾದ ಕಾರ್ಲ್‌ಟನ್ ಭವನದವರೆಗೆ ಮೆರವಣಿಗೆ ಹೊರಟರು. ಸಂಜೆ ಬನಪ್ಪಾ ಪಾರ್ಕಿನಲ್ಲಿ ಸಭೆ ಸೇರಿತು. ಶ್ರೀ ರೆಡ್ಡಿಯವರು "ಹಿಂದೆ ಸುಭಾಷರು ದೆಲ್ಲಿ ಚಲೋ ಎಂದ ಹಾಗೆ ನಾವು 'ಮೈಸೂರು ಚಲೋ' ಘೋಷಣೆ ಮಾಡಬೇಕಾಗಿದೆ. ಮೈಸೂರು ಅರಮನೆಯ ಮುಂದೆ ಸೆಪ್ಟೆಂಬರ್ 4 ನೇ ತಾರೀಖು ಸತ್ಯಾಗ್ರಹ ಆರಂಭಿಸುತ್ತೇವೆ. ಎಲ್ಲರೂ ಭಾಗವಹಿಸಬೇಕು" ಎಂದು ಕೇಳಿಕೊಂಡರು.

ನಿಶ್ಚಿತವಾದ ದಿನ ಸತ್ಯಾಗ್ರಹ ಆರಂಭವಾಯಿತು. ಅದರ ಹಿಂದಿನ ದಿನವೇ ಶ್ರೀಯುತರಾದ ಕೆ. ಸಿ. ರೆಡ್ಡಿ, ಟಿ. ಸುಬ್ರಹ್ಮಣ್ಯಂ, ಎಂ. ಹುಚ್ಚೆಗೌಡ, ಕೆ. ಆರ್. ಮಾಧವರಾವ್, ಕೆ. ಎಸ್. ಕುಮಾರನ್, ಎಚ್. ಕೆ. ವೀರಣ್ಣಗೌಡ, ಎ. ಜಿ. ರಾಮಚಂದ್ರರಾವ್, ಎಸ್. ಚನ್ನಯ್ಯ, ಎಚ್. ,ಸಿದ್ಧಯ್ಯ, ಕೆ. ಟಿ. ಭಾಷ್ಯಂ, ಎ. ಜಿ. ಬಂದೀಗೌಡ ಮೊದಲಾದ ನಾಯಕರುಗಳನ್ನೆಲ್ಲಾ ಸರಕಾರ ಬಂಧಿಸಿತು. ಆದರೆ ಚಳುವಳಿ ನಿಲ್ಲಲಿಲ್ಲ. ದಿವಾನರೂ, ದಿವಾನ್ ಕೌನ್ಸಿಲ್‌ನ ಸದಸ್ಯರೂ ಆದ ಶ್ರೀ ತಂಬೂಚೆಟ್ಟಿಯವರೂ ಜನರ ಟೀಕೆಗೆ ಬಹಳವಾಗಿ ಗುರಿಯಾದರು. 'ಆರ್ಕಾಟ್ ಬಾಯ್ಕಾಟ್', 'ತಂಬೂಚೆಟ್ಟಿ ಚೊಟ್ಟಕಟ್ಟಿ, ಕೆ. ಸಿ. ರೆಡ್ಡಿ ಪಟ್ಟಕಟ್ಟಿ' ಎಂಬ ಘೋಷಣೆಗಳು ಎಲ್ಲರ ಬಾಯಿಯಲ್ಲೂ ಮೊಳಗಿದುವು. ಲಾಠಿ ಏಟು, ಗೋಲಿಬಾರ್, ಬಂಧನ ಲೆಕ್ಕವಿಲ್ಲದಷ್ಟು ನಡೆಯಿತು. ಚಳುವಳಿಯನ್ನು ತಡೆಗಟ್ಟುವುದಕ್ಕೆ ಸರಕಾರದಿಂದ ಸಾಧ್ಯವಾಗಲಿಲ್ಲ. 6-10-1947 ರಂದು ಬಂಧಿಗಳನ್ನೆಲ್ಲಾ ಬಿಟ್ಟುಬಿಡಲು ಸರಕಾರ ತೀರ್ಮಾನಿಸಿತು. 11-10-1947 ರಂದು ಸರಕಾರಕೂ ಕಾಂಗ್ರೆಸ್ಸಿಗೂ ಒಪ್ಪಂದವಾಯಿತು. 13-10-1947 ರಂದು "ಪ್ರಜಾ ಪ್ರತಿನಿಧಿಗಳ ಮಂತ್ರಿಮಂಡಲ ಸ್ಥಾಪನೆಯಾಗಿದೆ" ಎಂದು ಸರಕಾರ ಪ್ರಕಟಿಸಿತು.

24-10-1947 ರ ವಿಜಯದಶಮಿಯ ದಿನ "ಆರ್ಕಾಟ್ ನವಾಬ್ ಷಾಹಿ" ಕೊನೆಕೊಂಡು ಅಂದೇ ಶ್ರೀ ಕೆ. ಸಿ. ರೆಡ್ಡಿಯವರ ಮಂತ್ರಿಮಂಡಲ ಸ್ಥಾಪನೆಯಾಯಿತು. ಮಂತ್ರಿಗಳು ಅತಾರಾ ಕಚೇರಿಗೆ ತೆರಳಿ ರಾಜ್ಯದ ಆಡಳಿತ ಸೂತ್ರವನ್ನು ವಹಿಸಿಕೊಂಡರು.

ಆ ದಿನ ಮೈಸೂರು ಸಂಸ್ಥಾನಕ್ಕೆ ಮಹಾ ಸುದಿನ. 1881 ರಲ್ಲಿ ಪ್ರಾರಂಭವಾದ ಪ್ರಜಾಪ್ರತಿನಿಧಿ ಸಭೆ ನಿಜವಾದ ಅರ್ಥದಲ್ಲಿ 'ಪಾರ್ಲಿಮೆಂಟ್' ಆದ ದಿನ.

ಆ ದಿನದ ಮಹತ್ವವನ್ನು ಕುರಿತು ಅನೇಕ ವಿಶೇಷ ಸಂಚಿಕೆಗಳು ಪ್ರಕಟವಾದುವು. ಬದಲಾದ ಪರಿಸ್ಥಿತಿಗೆ ಹೊಂದಿಕೊಂಡು ಪ್ರಜಾಪ್ರಭುತ್ವಕ್ಕೆ ಅವಕಾಶ ಮಾಡಿಕೊಟ್ಟ ಶ್ರೀಮನ್ ಮಹಾರಾಜರ ಔದಾರ್ಯವನ್ನು ಅನೇಕ ನಾಯಕರು ಕೊಂಡಾಡಿದರು.* "ಸಂಸ್ಥಾನಗಳಿಗೆಲ್ಲ ಮೈಸೂರು ಮಾದರಿಯಾಗಲಿ", ಮೈಸೂರಿನಲ್ಲಿ ಹೊಸ ಯುಗವನ್ನು ಆರಂಭಿಸಿದ ಪ್ರಭುವರೇಣ್ಯರು" ಎಂದು ಮಹಾತ್ಮ ಗಾಂಧೀಜಿಯವರು ಮಹಾರಾಜರನ್ನು ಅಭಿನಂದಿಸಿದರು.

"ನೀವು ತೋರಿಸಿದ ಈ ಉದಾರ ಭಾವನೆಯ ಫಲವಾಗಿ ನಿಮ್ಮ ಪ್ರಜೆಗಳಿಂದ ರಾಜಭಕ್ತಿಯುಂತವಾದ ಸಹಕಾರ ದೊರೆತು ಸಂಸ್ಥಾನದ ಅಭಿವೃದ್ಧಿಯು ಹೆಚ್ಚಲಿ" ಎಂದರು ಸರ್ದಾರ್ ಪಟೇಲ್. "ಮೈಸೂರಿನ ಅರಸರು ತಮ್ಮ ಪ್ರಜೆಗಳಿಗೆ ಪೂರ್ಣ ಜವಾಬ್ದಾರಿ ಸರಕಾರ ಕರುಣಿಸಿ ಅಖಿಲ ಕರ್ನಾಟಕದ ಛತ್ರಪತಿಯಾಗಲು ದಾರಿ ಸುಗಮ ಮಾಡಿದ್ದಾರೆ....ಮೈಸೂರಿನ ಪ್ರಜೆಗಳ ಕ್ರಿಯಾಶೀಲತೆ ವ್ಯವಸ್ಥಾಪನಾ ಶಕ್ತಿ, ರಾಜಕೀಯ ಪರಿಜ್ಞಾನ, ಆರ್ಥಿಕ ಸೌಕರ್ಯ, ವಿದ್ಯಾಭಿವೃದ್ಧಿ ಮೊದಲಾದವು ಭಾರತದ ಯಾವ ಪ್ರಾಂತದವರಿಗಿಂತಲೂ ಕಡಿಮೆ ಇಲ್ಲ" ಎಂದು ಡಾ. ಪಟ್ಟಾಭಿ ಸೀತಾರಾಮಯ್ಯನವರು ಬರೆದರು.

ಪ್ರಜಾಪ್ರಭುತ್ವಕ್ಕಾಗಿ ಹೋರಾಡಿ, ಶ್ರೀಮನ್ ಮಹಾರಾಜರೊಡನೆ ಸಂದರ್ಶಿಸಿದ ಶ್ರೀ ಕೆ. ಸಿ. ರೆಡ್ಡಿ ಮತ್ತು ಶ್ರೀ ಹೆಚ್. ಸಿ. ದಾಸಪ್ಪನವರು ಹೀಗೆ ಅಭಿಪ್ರಾಯಪಟ್ಟರು: "ಪ್ರಭುಗಳ ಭೇಟಿಯಿಂದ ಅವರಿಗೆ ಪ್ರಜೆಗಳಲ್ಲಿ ಎಷ್ಟು ಗಾಢವಾದ ಅನುರಾಗವಿದೆಯೆಂಬುದು ನಮಗೆ ಮನದಟ್ಟಾಯಿತು." "ಆಡಳಿತ ಸೂತ್ರಗಳನ್ನು ಸಂತೋಷವಾಗಿ ಪ್ರಜೆಗಳಿಗೇ ವಹಿಸಿ ಪ್ರಭುಗಳು ಪ್ರಜೆಗಳ ಪ್ರೀತಿ ಗೌರವಗಳನ್ನು ಸಾವಿರ ಪಾಲು ಹೆಚ್ಚಾಗಿ ಪಡೆದಿದ್ದಾರೆ."

ಜವಾಬ್ದಾರಿ ಸರ್ಕಾರದ ಆಧಾರದಮೇಲೆ ತಾತ್ಕಾಲಿಕ ಮಂತ್ರಿಮಂಡಲದ ಮಂತ್ರಿಗಳಾಗಿ ಅಧಿಕಾರ ವಹಿಸಿಕೊಂಡ ಮೊದಲ ಮಂತ್ರಿಗಳ ಹೆಸರುಗಳು ಹೀಗಿವೆ: ಶ್ರೀಯುತರಾದ ಕೆ. ಸಿ. ರೆಡ್ಡಿ, ಹೆಚ್. ಸಿ. ದಾಸಪ್ಪ, ಕೆ. ಟಿ. ಭಾಷ್ಯಂ, ಹೆಚ್. ಸಿದ್ದಯ್ಯ, ಟಿ. ಮರಿಯಪ್ಪ, ಆರ್. ಚೆನ್ನಿಗರಾಮಯ್ಯ, ಡಿ. ಹೆಚ್. ಚಂದ್ರಶೇಖರಯ್ಯ, ರಾಜಸೇವಾಸಕ್ತ ಪಾಮಡಿ ಸುಬ್ಬರಾಮ ಶೆಟ್ಟಿ ಮತ್ತು ಮಹಮದ್ ಷರೀಫ್.

ಹೊಸ ಮಂತ್ರಿಗಳಿಗೆ ಮತ್ತು ಹೊಸ ಮಂತ್ರಿಮಂಡಲಕ್ಕೆ ಅನೇಕರು ಶುಭಾಶಯಗಳನ್ನು ಕೋರಿದರು. ಶ್ರೀ ಎಸ್. ಚನ್ನಯ್ಯನವರು: "ಕಳೆದ ಹತ್ತು

---

* ಈ ಮುಂದಿನ ಉದ್ಧೃತ ಭಾಗಗಳನ್ನು 26-10-1947 ರ 'ಜನವಾಣಿ' ಯ ವಿಶೇಷ ಸಂಚಿಕೆಯಿಂದ ಆರಿಸಿದೆ.

ವರ್ಷಗಳಿಂದ ಮೈಸೂರು ಜನತೆ ಮಾಡಿದ ತ್ಯಾಗ, ಕೊಟ್ಟ ಬಲಿದಾನ ಇವುಗಳ ಫಲವಾಗಿ ಇಂದು ಪ್ರಜಾ ಸರ್ಕಾರ ಸ್ಥಾಪನೆಯಾಗಿದೆ. ಇನ್ನು ಮುಂದೆ ಪ್ರಜೆಗಳಿಗೂ ಸರಕಾರಕ್ಕೂ ಅಂತರವಿಲ್ಲ. ಪ್ರಜೆಗಳು ಸಂಪೂರ್ಣ ಸಹಕಾರನೀಡಿ, ಅವ್ಯವಸ್ಥೆಗೊಂಡಿರುವ ಮೈಸೂರಿನ ಜನಜೀವನದ ಅಂಗಾಂಗಗಳನ್ನು ಜೀರ್ಣೋದ್ಧಾರ ಮಾಡಬೇಕಾಗಿದೆ. ನೂತನ ಮಂತ್ರಿಗಳು ಈ ಗುರುತರ ಜವಾಬ್ದಾರಿಯನ್ನರಿತು ನಿಸ್ವಾರ್ಥ ಪ್ರಜಾ ಸೇವೆಯಲ್ಲಿ ನಿರತರಾಗಬೇಕು."

ಶ್ರೀ ಎ. ಜಿ. ಬಂದೀಗೌಡರು : "ಮೈಸೂರು ಕಾಂಗ್ರೆಸ್ ಜನ್ಮತಾಳಿದ ಹತ್ತು ವರ್ಷದಲ್ಲಿಯೂ ನಾಲ್ಕಾರು ಸಾರಿ ತನ್ನ ಧ್ಯೇಯ ಸಾಧನೆಗಾಗಿ ಹೋರಾಟ ನಡೆಸಿ ಕೊನೆಗೆ ಜವಾಬ್ದಾರಿ ಸರ್ಕಾರವನ್ನು ಸಾಧಿಸಿಯೇ ಸಾಧಿಸಿತು. ಪ್ರತಿಯೊಂದು ಹೋರಾಟದಲ್ಲೂ ಭಾಗಿಯಾಗಿ ಬಲಿದಾನರಾದ ವೀರರ ಆತ್ಮಕ್ಕೆ ಶಾಂತಿಯನ್ನು ಕೋರುವುದು ನಮ್ಮ ಪ್ರಥಮ ಕರ್ತವ್ಯ. ಈ ಹೋರಾಟದಲ್ಲಿ ನಾನಾ ರೀತಿಯಲ್ಲಿ ಸಹಾಯ ಮಾಡಿದ ಮೈಸೂರಿನ ಹಾಗೂ ಹೊರಗಿನ ಎಲ್ಲಾ ಜನರಿಗೂ ನಮ್ಮ ಧನ್ಯವಾದಗಳು. ಜವಾಬ್ದಾರಿ ಸರ್ಕಾರವನ್ನು ಅತಿ ಶೀಘ್ರದಲ್ಲೇ ಸಂಪಾದಿಸಿದ ಮೇಲ್ಮೆ ಮೈಸೂರಿಗೆ ಸೇರಿದ್ದು. ಜವಾಬ್ದಾರಿ ಸರ್ಕಾರವನ್ನು ಗಳಿಸಿದ ಇಡೀ ಎಪ್ಪತ್ತು ಮೂರು ಲಕ್ಷ ಪ್ರಜೆಗಳಿಗೂ ಮತ್ತು ಅದನ್ನು ಕರುಣಿಸಿದ ಶ್ರೀಮನ್ ಮಹಾರಾಜರವರಿಗೂ ನಮ್ಮ ಧನ್ಯವಾದಗಳು. ನೂತನ ಮಂತ್ರಿಮಂಡಲದಲ್ಲಿ ವಿಶ್ವಾಸವನ್ನಿಟ್ಟು ಜನರು ಸಹಕರಿಸಿ, ಮೈಸೂರು ಜನತೆಯ ಏಳಿಗೆಗಾಗಿ ದುಡಿದು, ಜವಾಬ್ದಾರಿ ಸರ್ಕಾರದ ಸವಿಯನ್ನು ಅನುಭವಿಸುತ್ತಾರೆಂದು ನಂಬುತ್ತೇನೆ. ನೂತನ ಮಂತ್ರಿ ಮಂಡಲಕ್ಕೆ ಸರ್ವ ವಿಧದಲ್ಲೂ ಜಯವುಂಟಾಗಲೆಂದು ಭಗವಂತನನ್ನು ಈ ಮೂಲಕ ಪ್ರಾರ್ಥಿಸೋಣ."

ಶ್ರೀ ಹೆಚ್. ಆರ್. ಗುರುವಾರೆಡ್ಡಿಯವರು ಸಂದೇಶದ ಮೂಲಕ ಹೀಗೆ ಶುಭ ಕೋರಿದರು : "ನಮ್ಮ ಸಂಸ್ಥಾನದಲ್ಲಿ ಕಾಂಗ್ರೆಸ್ ನಾಯಕರ ಪ್ರಶಂಸನೀಯವಾದ ತ್ಯಾಗದ ಫಲವಾಗಿ ನೂತನ ಶಕೆ ಆರಂಭವಾಗಿದೆ. ಈ ಸನ್ನಿವೇಶದಲ್ಲಿ ನಮ್ಮ ನೂತನ ಮಂತ್ರಿಗಳು ಪ್ರಭುಗಳ ಸಲಹೆಯನ್ನು ಕಾರ್ಯರಂಗಕ್ಕೆ ತರಲು ಕಂಕಣಬದ್ಧರಾಗಲಿ! ಮೈಸೂರಿನ ಪ್ರಜಾವರ್ಗದ ಸುಖ ಶಾಂತಿಗಳು, ಅವರುಗಳ ಪ್ರಯತ್ನದಿಂದ ಇಮ್ಮಡಿಯಾಗಿ ಹೆಚ್ಚಿ ಮೈಸೂರಿನ ಧವಳಕೀರ್ತಿ ಚಿರಂತನವಾಗಿ ಜಗತ್ತಿನಲ್ಲೆಲ್ಲಾ ಬೆಳಗಲಿ!"

ದಿನಾಂಕ 25–10–1947 ರಂದು ಬೆಂಗಳೂರಿನ ಬನಪ್ಪಾ ಪಾರ್ಕಿನಲ್ಲಿ ಪ್ರಚಂಡ ಬಹಿರಂಗ ಸಭೆ ನಡೆಯಿತು. ಪೂಜ್ಯ ಬಾಪೂಜಿಯವರ ಛಾಯಾನುವರ್ತಿಗಳಾಗಿ, ಪ್ರಜಾಸೇವೆಗೆ ಕಂಕಣಬದ್ಧರಾಗಿ ಅಧಿಕಾರವಹಿಸಿಕೊಂಡ ನೂತನ ಮಂತ್ರಿಗಳು ಸಾರ್ವಜನಿಕರನ್ನು ಕುರಿತು ಉಜ್ವಲವಾಗಿ ಭಾಷಣ ಮಾಡಿದರು. ಅವರ ಭಾಷಣದ ಕೆಲವು ತುಣುಕುಗಳು ಹೀಗಿವೆ:

ಮುಖ್ಯಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರು: "ಇಂದಿನಿಂದ ಮೈಸೂರಿನಲ್ಲಿ ಪ್ರಜಾಯುಗ ಆರಂಭವಾಗಿದೆ. ಅದರ ಜೊತೆಗೆ ಪ್ರಜೆಗಳ ಮೇಲೆ ಮಹತ್ತರದ

ಜವಾಬ್ದಾರಿಯೂ ಬಿದ್ದಿದೆ. ಜನತೆಯು ಸತ್ಯಕ್ಕೆ ಕಟ್ಟುಬಿದ್ದು ದೇಶಭಕ್ತಿಯುತರಾಗಿ ಎಲ್ಲಾ ಕ್ಷೇತ್ರಗಳಲ್ಲೂ ಪ್ರಾಮಾಣಿಕರಾಗಿ ನಡೆದುಕೊಳ್ಳದಿದ್ದರೆ ಇಂದು ಆರಂಭ ವಾಗಿರುವ ಪ್ರಜಾಯುಗವು ಪ್ರಗತಿಪಥದಲ್ಲಿ ಮುಂದುವರಿಯಲಾರದು. ಮೈಸೂರಿನ ಸರ್ವ ಪ್ರಜೆಗಳ ತ್ಯಾಗ, ಬಲಿದಾನ ಮತ್ತು ಅಮೋಘವಾದ ಸೇವೆಯಿಂದ ಇಂದು ಇಲ್ಲಿ ಪ್ರಜಾಸರ್ಕಾರ ಏರ್ಪಟ್ಟಿದೆ. ಪ್ರಜಾಸೇವಾ ಕಂಕಣಬದ್ಧರಾಗಿ ಇಂದು ನಾವೆಲ್ಲಾ ಅಧಿಕಾರ ವಹಿಸಿಕೊಂಡಿದ್ದೇವೆ. ನಮ್ಮ ರಾಷ್ಟ್ರಪಿತ ಪೂಜ್ಯ ಬಾಪೂಜಿ ಯವರ ಛಾಯಾನುವರ್ತಿಗಳಾಗಿ ಜನಸೇವೆಯನ್ನು ಮುಂದುವರಿಸೋಣ."

ಪ್ರಜಾಮಂತ್ರಿಗಳಾದ ಶ್ರೀ ಹೆಚ್. ಸಿ. ದಾಸಪ್ಪನವರು : "ಮೈಸೂರಿನ ಪ್ರಜಾವರ್ಗದಲ್ಲಿ ಕಂಡುಬರುತ್ತಿರುವ ಅಭೂತಪೂರ್ವವಾದ ಜನಜಾಗೃತಿ, ತ್ಯಾಗ, ಸೇವಾಶೀಲಗಳಿಗೆ ಮುಖ್ಯ ಕಾರಣರು ಪೂಜ್ಯ ಗಾಂಧೀಜಿಯವರು. ಚರಿತ್ರಾರ್ಹ ವಾದ ಈ ಸುದಿನದ ಸಂದರ್ಭದಲ್ಲಿ ಆ ಮಹಾತ್ಮರನ್ನು ಸ್ಮರಿಸಬೇಕಾದುದು ನಮ್ಮೆಲ್ಲರ ಕರ್ತವ್ಯ. ಇಂದು ನಾನಾ ಪ್ರಾಂತ್ಯಗಳಲ್ಲಿ ಹರಿದು ಹಂಚಿಹೋಗಿರುವ ಕರ್ನಾಟಕ ಪ್ರಾಂತ್ಯವು ಭಾರತದಲ್ಲಿ ಪ್ರಧಾನವಾಗಿ ಶೋಭಿಸುವ ಯೋಗ ಒದಗಿದೆ."

ಶ್ರೀ ಪಾಮಡಿ ಸುಬ್ಬರಾಮಶೆಟ್ಟಿಯವರು : "ಇಂದಿನಿಂದ ಪ್ರಜಾಯುಗ ಆರಂಭವಾಗಿದೆ." ಶ್ರೀ ಮಹಮದ್ ಷರೀಫ್ : "ಮೈಸೂರು ಜನತೆಯು ಮೈಸೂರು ಕಾಂಗ್ರೆಸ್ ನಾಯಕತ್ವದಲ್ಲಿ ಮಹಾತ್ಯಾಗ ಮಾಡಿ ಇಂದು ಸ್ವಾತಂತ್ರ್ಯ ಸಿದ್ಧಿ ಪಡೆದಿದೆ. ಶ್ರೀ ಆರ್. ಚೆನ್ನಿಗರಾಮಯ್ಯ : "ಮೈಸೂರಿನಲ್ಲಿ ಬೇರೂರುತ್ತಿದ್ದ ಕೋಮುವಾರು ವೈಷಮ್ಯದ ಭೂತವನ್ನು ಹೊಡೆದೋಡಿಸಿ ಜನತೆ ಸಂಪಾದಿಸಿದ ಮಹಾ ವಿಜಯವಿದು." ಶ್ರೀ ಟಿ. ಮರಿಯಪ್ಪ : "ಇಂದು ಪ್ರಜಾ ಸರ್ಕಾರ ಏರ್ಪಟ್ಟಿದೆ ನಿಜ. ಅಷ್ಟು ಮಾತ್ರಕ್ಕೆ ಇಲ್ಲಿ ರಾಮರಾಜ್ಯ ಸ್ಥಾಪಿತವಾಯಿತೆಂದು ಭಾವಿಸುವುದು ಕೇವಲ ಭ್ರಾಂತಿ. ಇಂದು ಪ್ರಜೆಗಳು ರಾಜಕೀಯ ಸಾತಂತ್ರ್ಯಗಳಿಸಿ ದ್ದಾರೆ. ಆದರೆ ಇದರ ಜೊತೆಗೆ ಆರ್ಥಿಕ ಸ್ವಾತಂತ್ರ್ಯವನ್ನುಗಳಿಸಿಕೊಳ್ಳಬೇಕಾಗಿದೆ. ಅದಿಲ್ಲದೆ ನಮ್ಮ ಈ ಸ್ವಾತಂತ್ರ್ಯ ಪೂರ್ಣವಾಗದು." ಶ್ರೀ ಡಿ. ಎಚ್. ಚಂದ್ರ ಶೇಖರಯ್ಯ : "ಇಂದಿನ ಆಡಳಿತ ಯಂತ್ರದ ಬಹುಭಾಗ ತುಕ್ಕು ಹಿಡಿದುಹೋಗಿದೆ. ಅದನ್ನೆಲ್ಲ ತೆಗೆದುಹಾಕಿ ಯಂತ್ರವನ್ನು ಸುಧಾರಿಸುವ ಸಕಲ ಜವಾಬ್ದಾರಿ ಹೊಸ ಸರ್ಕಾರದ ಮೇಲೆ ಬಿದ್ದಿದೆ."

ಶ್ರೀ ಹೆಚ್. ಸಿದ್ದಯ್ಯ : "ಇಂದು ಗಳಿಸಿದ ಸ್ವಾತಂತ್ರ್ಯವನ್ನು ಉಳಿಸಿ ಕೊಳ್ಳುವ ಶಕ್ತಿ ಮೈಸೂರಿನ ಜನತೆ ಮತ್ತು ಮಂತ್ರಿಮಂಡಲಕ್ಕೆ ಇದೆ." ಶ್ರೀ ಕೆ. ಟಿ. ಭಾಷ್ಯಂ : "ಸತ್ಯಾಗ್ರಹಕ್ಕೆ ಮೊದಲೇ ಈ ಸ್ವಾತಂತ್ರ್ಯ ಲಭಿಸಿದ್ದರೆ ಅಷ್ಟಾಗಿ ಶೋಭಿಸುತ್ತಿರಲಿಲ್ಲ. ಸತ್ಯಾಗ್ರಹವೆಂಬ ಅಗ್ನಿಕುಂಡದಿಂದ ಬಂದ ಮೈಸೂರು ಕಾಂಗ್ರೆಸ್ ಪುಟಕ್ಕೆ ಹಾಕಿದ ಚಿನ್ನದಂತೆ ಆಗಿದೆ."

ಮೇಲಿನ ಭಾಷಣದ ಅಭಿಪ್ರಾಯಗಳು ಅಂದಿನ ನಾಯಕರ ಹಾಗೂ ಜನರ ಆಶೋತ್ತರಗಳ ಸಂಕೇತಗಳಾಗಿವೆ.

ದಿನಾಂಕ 25-11-1949 ರಂದು ಮೈಸೂರು ಸರ್ಕಾರ 'ರಾಜಶಾಸನ ಪತ್ರಿಕೆ' ಯನ್ನು ಹೊರಡಿಸಿತು.

26-11-1949 ರಂದು ಮಹಾರಾಜರು 'ಭಾರತದ ಸಂವಿಧಾನವೇ ಮೈಸೂರಿನ ಸಂವಿಧಾನವೆಂದು' ಘೋಷಿಸಿದರು. ಮೈಸೂರಿನಲ್ಲಿ ಕಾಂಗ್ರೆಸ್ ಚಳುವಳಿ ನಿಲು ಗಡೆಯಾಯಿತು. ಪ್ರಜಾರಾಜ್ಯ ಪ್ರಾರಂಭವಾಯಿತು.

ಧ್ವಜದ ಸಮಸ್ಯೆ ಮಾತ್ರ ಹಾಗೇ ಇತ್ತು. ಹಿಂದಿನ ಮಿರ್ಜಾ-ಪಟೇಲರ ಒಪ್ಪಂದದಂತೆಯೇ, ಮೈಸೂರು ಧ್ವಜ ಮತ್ತು ರಾಷ್ಟ್ರಧ್ವಜಗಳೆರಡೂ ಹಾರಾಡು ತ್ತಿದ್ದುವು. ಮುಂದೆ ಶ್ರೀ ಕೆಂಗಲ್ ಹನುಮಂತಯ್ಯನವರು ಮುಖ್ಯಮಂತ್ರಿಯಾದಾಗ ಮೈಸೂರು ಧ್ವಜವನ್ನು ಅಧಿಕೃತವಾಗಿ ನಿಲ್ಲಿಸಿದರು. ರಾಷ್ಟ್ರಧ್ವಜವೇ ಮೈಸೂರಿನ ಧ್ವಜವಾಯಿತು. ಶಿವಪುರ ಧ್ವಜ ಸತ್ಯಾಗ್ರಹದ ಸಮಸ್ಯೆ ಶ್ರೀ ಕೆ. ಹನುಮಂತಯ್ಯ ನವರ ಕಾಲದಲ್ಲಿ ಪರಿಹಾರವಾಯಿತು ಎನ್ನಬಹುದು.

ಶಿವಪುರದ ಧ್ವಜ ಸತ್ಯಾಗ್ರಹದ ಪ್ರಭಾವ ಅಮೋಘವಾದುದು, ಅಮರ ವಾದುದು, ರಾಷ್ಟ್ರವ್ಯಾಪಿಯಾದುದು.

ಶಿವಪುರಧ್ವಜ ಸತ್ಯಾಗ್ರಹದ ಮಹತ್ವ

ಅಖಿಲ ಭಾರತ ಮಹಾಸಂಗ್ರಾಮದ ಸಾವಿರಾರು ಸತ್ಯಾಗ್ರಹಗಳ ಜೊತೆಯಲ್ಲಿ ವಿವೇಚಿಸಿದಾಗ ಶಿವಪುರ ಧ್ವಜ ಸತ್ಯಾಗ್ರಹ ಒಂದು ಘಟನೆ ಮಾತ್ರ. ಆದರೆ ಮೈಸೂರು ಸಂಸ್ಥಾನದ, ಮೈಸೂರು ಕಾಂಗ್ರೆಸ್ಸಿನ ಇತಿಹಾಸದಲ್ಲಿ ಇದು ಎಂದೆಂದೂ ಮರೆಯಲಾಗದ ಮಹತ್ವಪೂರ್ಣವಾದ ಘಟನೆ. ರಾಷ್ಟ್ರಮಟ್ಟದಲ್ಲಿ ಇದು ಕಿರು ಬೆಳಕು, ರಾಜ್ಯಮಟ್ಟದಲ್ಲಿ ಮಹಾಜ್ಯೋತಿ.

ರಕ್ತ ಕ್ರಾಂತಿಗೆ, ಹೊರತಾದ, ಸೌಮ್ಯವಾದ ಸಾಮೂಹಿಕ ಚಳುವಳಿಗೆ ಶಿವಪುರ ಧ್ವಜ ಸತ್ಯಾಗ್ರಹ ಒಳ್ಳೆಯ ಉದಾಹರಣೆ. ಸತ್ಯಾಗ್ರಹಿಗಳು ಅದರಿಂದ ಕಲಿತ ಪಾಠ ಅಪಾರ, ತ್ಯಾಗ, ನಿಸ್ವಾರ್ಥ ನಿಷ್ಠೆಗಳಿಂದ ಹೇಗೆ ದೇಶಸೇವೆ ಮಾಡಬಹುದು ಎಂಬ ಅರಿವು ಅದರಿಂದ ಮೂಡಿತು. ಜಯ ಲಭಿಸಿದಾಗ ಹರ್ಷದಿಂದ ಕುಣಿದು ಕುಪ್ಪಳಿಸು ವಂತೆಯೇ, ಆಯ ತಪ್ಪಿದಾಗ ಕಷ್ಟಗಳನ್ನು ಅನುಭವಿಸುವ ಅಸಾಧಾರಣ ಸಂಯ ಮವೂ ವೇದ್ಯವಾಯಿತು. ಇದರಿಂದ ಅವ್ಯಕ್ತವಾಗಿ ರಾಷ್ಟ್ರದ ಸ್ವಾತಂತ್ರ್ಯದ ಮಹಾಯುದ್ಧಕ್ಕೆ ಪ್ರತಿಯೊಬ್ಬರೂ ತಮ್ಮನ್ನು ತಾವೇ ಸಿದ್ಧಗೊಳಿಸಿಕೊಂಡರು. ಗುರಿ ಮುಟ್ಟಲು ಇನ್ನಿಲ್ಲದಂತೆ ಸತತವಾಗಿ ಹೋರಾಡಿದರು.

ಶಿವಪುರ ಧ್ವಜ ಸತ್ಯಾಗ್ರಹದಲ್ಲಿ ದಸ್ತಗಿರಿಯಾದ ಸತ್ಯಾಗ್ರಹಿಗಳು ಪುಟಕ್ಕಿಟ್ಟ ಚಿನ್ನದಂತೆ ಚೊಕ್ಕವಾಗಿ ಮತ್ತಷ್ಟು ಶಕ್ತಿ ಸಾಮರ್ಥ್ಯಗಳನ್ನು ಕ್ರೋಢೀಕರಿಸಿಕೊಂಡು, ಇನ್ನಷ್ಟು ನಿಯಮ ನಿಷ್ಠೆಯನ್ನು ಅಳವಡಿಸಿಕೊಂಡು, ಅಗತ್ಯವಾದ ಸಹನೆ ಕಷ್ಟ ಸಹಿಷ್ಣುತೆಗಳನ್ನು ಮೈಗೂಡಿಸಿಕೊಂಡು, ಮತ್ತೆ ಮತ್ತೆ ಸತ್ಯಾಗ್ರಹಗಳಲ್ಲಿ ಸೇರಿಕೊಂಡು ಅಂತಿಮ ಗುರಿ ಸಾಧನೆಗೆ ಇನ್ನಿಲ್ಲದಂತೆ ಹೋರಾಡಿ ಜಯಶಾಲಿಗಳಾದರು. ಇದರಿಂದ ನಿಷ್ಠಾವಂತರಾದ, ಪ್ರಾಮಾಣಿಕರಾದ, ಅನುಭವಸ್ಥರಾದ, ಪ್ರಜಾಧರ್ಮವನ್ನು ಅರಿತಂಥ, ಅಧಿಕಾರದ ಏರುಪೇರುಗಳನ್ನು ಸಮತೋಲನದಲ್ಲಿ ನಡೆಸುವಂಥ ಶಿಕ್ಷಿತ ನಾಯಕರು ದೇಶಕ್ಕೆ ದೊರೆಯುವಂತಾಯಿತು. ನಿಜವಾದ ಅರ್ಥದಲ್ಲಿ ದೇಶದಲ್ಲಿ ಪ್ರಜಾಪ್ರಭುತ್ವ ಸ್ಥಾಪನೆಯಾಗಲು ಕಾರಣವಾಯಿತು. ರಾಜ್ಯದಲ್ಲಷ್ಟೇ ಅಲ್ಲ ರಾಷ್ಟ್ರಮಟ್ಟದಲ್ಲಿ ನಮ್ಮ ಸತ್ಯಾಗ್ರಹಿಗಳು ಭಾಗವಹಿಸಿ ಸೇವೆ ಸಲ್ಲಿಸುವ ಸ್ಫೂರ್ತಿ ದೊರೆಯಿತು. ಭಾರತದ ಮಹಾಸಂಗ್ರಾಮದಲ್ಲಿ ಮೈಸೂರು ರಾಜ್ಯದ ಶ್ರಮವು ಸೇರುವಂತಾಯಿತು.

ಶಿವಪುರ ಧ್ವಜ ಸತ್ಯಾಗ್ರಹದ ಯಶಸ್ಸಿನಿಂದ ಮೈಸೂರು ರಾಜ್ಯದಲ್ಲಿ ಕಾಂಗ್ರೆಸ್ ಗರಿಗಟ್ಟಿಕೊಳ್ಳಲು, ಇತರ ರಾಜ್ಯಗಳಿಗೆ ಮಾದರಿಯಾಗುವ ಹಾಗೆ ಬೆಳೆಯಲು, ಹಲವು ವರ್ಷಗಳಿಂದ ಹೋರಾಡುತ್ತಿದ್ದ ಜನರ ಆಶೋತ್ತರಗಳು ಈಡೇರಲು ಸಾಧ್ಯವಾಯಿತು. ಕಾಂಗ್ರೆಸ್ಸಿನ ಸತ್ವ ಪರೀಕ್ಷೆಯ ಸಮಯ ಅದು. ಅಲ್ಲದೆ ಅಖಿಲ ಭಾರತ ಮಟ್ಟದ ನಾಯಕರು, ಇತರ ರಾಜ್ಯಗಳವರು ಮೈಸೂರಿನ ಕಡೆಗೆ ಆಸಕ್ತಿಯಿಂದ ನೋಡುವಂತೆ ಮಾಡಿದ ಚಿರಸ್ಥಾಯಿ ಘಟನೆ ಅದು. ಸಹಸ್ರಾರು ಜನರ ಹೃದಯದಲ್ಲಿ ಸತ್ಯಾಗ್ರಹದ ಕಿಡಿಯನ್ನು ಬಿತ್ತಿ ಸ್ವಾತಂತ್ರ್ಯದ ಬೆಳಕನ್ನು ಪಡೆಯಲು ಹೋರಾಡುವಂತೆ ಮಾಡಿದ ಸ್ಫೂರ್ತಿ ಚಿಲುಮೆ ಅದು. ರಾಜ್ಯ ಮತ್ತು ರಾಷ್ಟ್ರ ಮಟ್ಟದಲ್ಲಿ ಇತಿಹಾಸ ನಿರ್ಮಿಸಿದ ಘಟನೆ ಅದು. ಶಿವಪುರ ಧ್ವಜ ಸತ್ಯಾಗ್ರಹವನ್ನಾಗಲಿ, ಅದರ ಸ್ಫೂರ್ತಿಯಿಂದ ಅನಂತರ ಸಂಭವಿಸಿದ ಘಟನೆಗಳನ್ನಾಗಲಿ ಯಾರೂ ಸುಲಭವಾಗಿ ಮರೆಯುವುದಕ್ಕಾಗುವುದಿಲ್ಲ. ಜನಮನವನ್ನು ಸೂರೆಗೊಂಡ ಪ್ರಸಂಗಗಳವು.

ಶಿವಪುರ ಧ್ವಜ ಸತ್ಯಾಗ್ರಹ, ಅದರಲ್ಲಿ ಪಾಲ್ಗೊಂಡ ನಾಯಕರು, ಅದರಿಂದ ಸ್ಫೂರ್ತಿಗೊಂಡು ಸಂಭವಿಸಿದ ಘಟನೆಗಳು ಇತಿಹಾಸದ ವಸ್ತುಗಳಾದುದಷ್ಟೇ ಅಲ್ಲ ಸಾಹಿತ್ಯದ ವಸ್ತುಗಳೂ ಆದುವು. ಆ ಘಟನೆಗಳು ಆ ವ್ಯಕ್ತಿಗಳ ಬದುಕು ಹಾಡುಗಳಾಗಿ ಜನರ ಮನಸ್ಸಿನಲ್ಲಿ ನೆಲೆಸಿದುವು. ಆ ಬಗೆಗೆ ಹುಟ್ಟಿದ ಗೀತೆಗಳಿಗೆ, ಅವುಗಳಿಂದ ಸ್ಫೂರ್ತಿಗೊಂಡ ಜೀವಗಳಿಗೆ ಲೆಕ್ಕವಿಲ್ಲ. ಸತ್ಯಾಗ್ರಹದ ಹೋರಾಟದ ಲಾವಣಿಗಳನ್ನು ಜನರು ಪವಿತ್ರ ಕತೆಯನ್ನು ಕೇಳುವ ಹಾಗೆ ಕೇಳಿ ಸಂತೋಷಪಟ್ಟರು, ದುಃಖಿಸಿದರು, ಆವೇಶಗೊಂಡರು.

ಲಾವಣಿಕಾರ ಶ್ರೀ ಗೂಳೇಶರು ಕಟ್ಟಿ ಹಾಡಿ ಸಾವಿರಾರು ಹೃದಯಗಳನ್ನು ಮಿಡಿಸಿದ ಒಂದು ಲಾವಣಿ ಹೀಗಿದೆ:

ಸಿದ್ಧಲಿಂಗ ಸ್ವಾಮಿಯವರು ಬುದ್ಧಿ ಕೆಡಿಸಿ ಜನರಿಗೆಲ್ಲ
ಜಿದ್ದು ನಡೆಪರೆಂದು ಹೇಳಿ ಸೆರೆಯ ಹಿಡಿದರು
ಮುದ್ದು ಕರಕೆ ಬೇಡಿ ತೊಡಿಸಿ, ಮದ್ದುಗುಂಡು ಪಾರವಿರಿಸಿ
ಖುದ್ದು ಮನದ ಜಿದ್ದಿನಿಂದ ಸೆರೆಯೊಳಿಟ್ಟರು.

ವೀರಕೇಸ್ರಿಯಾರ್ಭಟಕೆ ಜ್ವರವು ಬಂದಂತಾಯಿತೆಂದು
ನರಿಯ ಕೂಗಿನವರು ಅವರ ಸೆರೆಯು ಹಿಡಿದರು.

ಗ್ರಾಮೋದ್ಧಾರಕ್ಕಾಗಿ ದುಡಿವ ರಾಮಚಂದ್ರರಾಯರನ್ನು
ಪ್ರೇಮ ಹಾನಿ ಗೈದರೆಂದು ಸೆರೆಯ ಹಿಡಿದರು.
ಜಾಮೀನನ್ನು ಕೊಟ್ಟ ಹೊರತು ನಿಮಗೆ ಬಿಡುವುದಿಲ್ಲವೆಂದು
ನೇಮಿಸಿದ್ದರೊಂದು ವರುಷ ಸಜವ ಕೊಟ್ಟರು.

ಕೆ. ಟಿ. ಭಾಷ್ಯಂ ಐಯ್ಯಂಗಾರ್ರ ಕಾಟ ತಡಿಯಲಾಗದೆಂದು
ಚಟುಲ ಪಂಥ ಹೂಡಿ ನಮ್ಮ ಸಚಿವರವರು
ನೀಟನಿಂದ ಅರೆಸ್ಟುಗೈಸಿ ತಾಟಿ ಪೋಟಿ ಕೇಸ ನಡಿಸಿ
ಇಟ್ಟರಯ್ಯಾ ಸೆರೆಯಲವರ ಬುದ್ಧಿವರ್ಯರು.

ತಿಮ್ಮರೆಡ್ಡಿಯವರು ಮುದದಿ ನಿಮ್ಮ ತಪ್ಪ ತಿದ್ದಿಕೊಳ್ಳಿರಿ
ನಮ್ಮ ನೃಪರ ಕೀರ್ತಿ ಬೆಳಗಲೆಂಬುತಲೇ
ನಮ್ಮ ತಪ್ಪ ತಿದ್ದಲಕ್ಕೆ ನಿಮ್ಮನ್ಯಾರು ಕರೆದರೆಂದು
ಸುಮ್ಮನಿಂದು ಇಟ್ಟರಯ್ಯೋ ಜೈಲಿನಲ್ಲೇ.

ರಂಗರಾಮಯ್ಯನವರ ಹಂಗರಾಣಿ ಹೆಚ್ಚಿತೆಂದು
ದಂಗು ಬಡಿದು ಹೋದ ನಮ್ಮ ಸಚಿವರವರು
ಹಂಗೆ ಬಿಟ್ಟರಿನ್ನು ಮುಂದೆ ದಂಗೆ ನಡಸಿ ಬಿಡುವರೆಂದು
ಮುಂಗಮಾಯ ಮಾಡಿ ತಂದು ಸೆರೆಯೊಳಿಟ್ಟರು.

ಎಂ. ಎನ್. ಜೋಯಿಸ್ ಎಂಬುವರು ಗುಮ್ಮನ್ ಬಿಟ್ಟು ಬೆದರಿಸುತ್ತ
ನಮ್ಮನ್ ಜರಿದರೆಂದು ಹೇಳಿ ಸೆರೆಯ ಹಿಡಿದರು.
ಕೊಟ್ರೆ ನಂಜಪ್ಪನವರ ಕ್ರಾಂತಿ ಗಂಟ್ರೆ ಕೇಳಿ ಜನದ ಶಾಂತಿ
ಕೆಟ್ರೆ ಏನುಗತಿಯು ಎಂದು ಸೆರೆಯ ಹಿಡಿದರು.

ಕಟ್ರೆಯಾಗುವುದಿನ್ನು ಮುಂದೆ ಬಿಟ್ರೆ ಹೀಗೆ ಗೈವರೆಂದು
ಉಟ್ರೆ ಬೈಟ್ರೆ ಯೆಂದು ಹೇಳಿ ಸಜವ ಗೈದರು.
ಸೂರ್ಯನಾರಾಯಣಾಖ್ಯ ಪಂಡಿತ ಶೌರ್ಯ ಹೆಚ್ಚಿತೆಂದು ಹೇಳಿ
ಧೈರ್ಯಗೆಟ್ಟು ಅವರ ಮುದಿದ ಸೆರೆಯು ಹಿಡಿದರು.

ಹಿರಿಯ ಮಠದ ಮರಿಗಳನ್ನು ಕಿರಿಯರೆಂಬುದೆಂದು ಮತ್ತೆ
ಸರಳ ಮನಸಿನ ಹೊಸಕೋಟೆ ಮಹದೇವ ಶಾಸ್ತ್ರಿ ದುರುಳರೇ
ನಿರುತ ದೇಶ ಸೇವೆ ಗೈದ ಸಿರಿವಾಸ ಸುಬ್ರಹ್ಮಣ್ಯ
ಇರುವರಲ್ಲಿ ದೋಷವುಂಟೆ ತಿರುಳನರಿಬರೆ.

ಹೆಚ್. ಸಿ. ದಾಸಪ್ಪಾಖ್ಯ ನುಡಿದ ಬಿಚ್ಚುಕಣೆಯಂಥ ಮಾತು
ಚುಚ್ಚಿತೆಂದು ಪೆಚ್ಚು ತಿಂದಾ ಸಚಿವರವರು
ಕೆಚ್ಚು ತಡಿಯಲಾರದವರ ಕೆಚ್ಚು ಮುರಿಯಲೆಂದು ಆಗ
ಮುಚ್ಚಿಸಿದ್ದರವರ ಸೆರೆಲಿ ಬುದ್ಧಿವರ್ಯರು.
ಅಂತು ಇಂತು ಕೊನೆಗೆ ಮಂತ್ರಿ ಪಂಥವೇನು ಸಾಗಲಿಲ್ಲ
ಎಂತು ಬಿಡುವುದೆಂದು ತಪಿಸಿ ಕೊನೆಗೆ ಬಿಟ್ಟುಬಿಟ್ಟರು.

ಮನೆಯ ದೇವರು ಮಣ್ಣು ಮುಕ್ಕುವಾಗ ತಬ್ಬಲಿ ದೇವರಿಗೆ ತುಂಬಿಟ್ಟು
ಅನುಭವ ರಹಿತರು ಆಳುವ ಅಸೆಂಬ್ಲಿಲಿ ಮಾತಿಗೆ ಮೊದಲೆ ಉಪ್ಪಿಟ್ಟು.
ಖೂನಿಕೋರರ ದುರ್ವರ್ತನೆಗಾ ಸೆರೆಮನೇಲವರಿಗೆ ಒಬ್ಬಟ್ಟು
ತನುಮನ ದೇಶಕ್ಕೆ ನೀಡಿದ ಕಾಂಗ್ರೆಸ್ ಜನರಿಗೆ ಮಾತ್ರ ಪಡಿಹಿಟ್ಟು.

ಪೋಲೀಸರು ದೊಣ್ಣೆ ತಿರುವಿದರು, ಕೋಲಿಂದ, ಪ್ರಜೆಗಳಿಗೊಡೆದರು
ಮೇಲಿಂದ, ಗುಂಡಿಂದ, ಸುಟ್ಟರು, ಕೇಳುವರಿಲ್ಲದ ಪಾಳುಕಾಡಿನಲಿ
ಪೋಲೀಸರ ಜೋರು.

ಬಂದನು ಬೊಂಬಾಯ ಕಾಂಗ್ರೆಸ್ ನರಿಮನ್ ದೂರದರ್ಶಿ ನಿಜವಿಕ್ರಮನು
ಹಿಂದು ಮುಂದರಿಯದ ನವರ್ ಸರ್ಕಾರವು ಬಂಧನಗೊಳಿಸಿತು ಅವರನ್ನು.
ಜವಾಬ್ದಾರಿ ಸರ್ಕಾರ ಬೇಕೆನ್ನುವ ಕೂಗಿನೊಳುದಿಸಿತು ಹೋರಾಟ
ಕಿವಿ ಕಣ್ಣಿಲ್ಲದ ಕರ್ತವ್ಯ ಮೂಢರಿಗಾಯಿತು ತಕ್ಷಣ ಪರದಾಟ.

ಶಿವಪುರ ಕಾಂಗ್ರೆಸ್ ಮೊದಲಧಿವೇಶನ ಸಮಯಕೆ ಅದ್ಭುತ ಜನಜಾಟ
ಭಾವ ಭೇದ ಕಾರ್ಪಣ್ಯಯುತರ ಬಹು ಕೃತ್ರಿಮ ಕಾರ್ಯದ ಓಡಾಟ
ತ್ರಿವರ್ಣ ಧ್ವಜ ನವಮ್ ರಾಷ್ಟ್ರಧ್ವಜದಡಿ ಹಗಲಿರುಳೆನ್ನದೆ ಕಾದಾಟ
ಗಾವಿಲವಿಂಥರ ಹುಸಿ ಬಡೆದಾಟದಿ ಬಂಧನ ಕಾರ್ಯವು ಹೊಲಸಾಟ.

ಸಿದ್ಧಲಿಂಗಯ್ಯನು ಅಧ್ಯಕ್ಷನಾಗಲು ಶಿವಪುರವಾಯಿತು ಶೃಂಗಾರ
ಸಾರ್ವಜನಿಕರ ಮೇಲೆ ಬಂದೂಕ ಹಿಡಿದರು ನೋಡಲು ಘೋರ ಅಪಾರ.

ಗೌರಮ್ಮ ಎಂಬುವ ಗರ್ಭಿಣಿ ಹೆಣ್ಣನು ಗರ್ವದಿ ಕೊಂದರು ಕೈಯಾರ
ಸಾರ್ವಜನಿಕರ ಮೇಲೆ ಗುಂಡಿನ ಸುರಿಮಳೆ ಸುರಿದರು ಘೋರ ವೈಯಾರ.

ನಿರುಪಮ ಕಾಂಗ್ರೆಸ್ ವಕೀಲ್ ಮುಖಂಡರು ಸನದ್ ಕಳೆದುಕೊಂಡ ಸುಗುಣಿಗಳು
ಸ್ವರಾಜ್ಯವಾದಿಗಳರಸರು ಭಾಷ್ಯಂ ಪಟ್ಟಾಭಿರಾಮನ್‌ರವರುಗಳು
ಭಾರತಾತ್ಮ ಪ್ರಭೆ ಸ್ಫುರಿಸುವಂತೆಸೆಗಿದ ರಾಮಾಚಾರ್ಯರ ಕಾರ್ಯಗಳು
ನಿರಪರಾಧಿತ್ವವ ಸ್ಥಾಪಿಸಲೊಪ್ಪದ ಸಂಪಂಗಿ ರಾಮಯ್ಯನವರುಗಳು.

ಪುರುಷೋಚಿತ ಸತ್ಕರ್ಮ ದುರಂಧರ ಟಿ. ಸುಬ್ರಹ್ಮಣ್ಯಂ ಮೇಲ್ಮೆಗಳು
ದಾರುಣವಾದ ವಿಪತ್ತಿಗೆ ಬೆದರದ ಶ್ರೀ ಕೆ. ಹನುಮಂತಯ್ಯ ಸುಧರ್ಮಿಗಳು.
ಸೆರೆಮನೆವಾಸದಿ ತರಳ ಪ್ರಹ್ಲಾದ ಶ್ರೇಷ್ಠಿ ಮೇಣ್ ಉಗ್ರಪ್ಪರು
ಮರಣ ದೇವಿಯ ಗೃಹವ ಸೇರಿದ ವೀರ ಹನುಮಂತಪ್ಪರು
ವೀರಸ್ವರ್ಗವ ಸೇರಿದರು ಮೇಣ್ ಕೃಷ್ಣಮೂರ್ತಿ ಮರೀಗೌಡರು.

ಮೈಸೂರು ಕಾಂಗ್ರೆಸ್ ಕಂಠಾಭರಣರು ಸಿದ್ಧಮ್ಮ ಗಂಗಮ್ಮನವರುಗಳು
ಅಸಹಕಾರ ಸಿದ್ಧಾಂತ ಪ್ರವೀಣರು ಸತ್ಯಾಗ್ರಹಿಗಳ ತಂಡಗಳು.
ದೇಶ ಹಿತಾರ್ಪಿತ ಪ್ರಾಣಪದಕ ನಿಜಲಿಂಗಪ್ಪ ಸಿದ್ಧಯ್ಯನವರುಗಳು
ದಾಸತ್ವದ ಮಿಗೆ ಲಾಂಛನವಳಿಸುವ ಸತ್ಯ ಅಹಿಂಸಾವಾದಿಗಳು.

ಇಂತಹ ನೂರಾರು ಲಾವಣಿಗಳನ್ನು ಅಂದಿನ ಸಾವಿರಾರು ಜನ ಅನೇಕ ಸಂದರ್ಭಗಳಲ್ಲಿ ಕೇಳಿದ್ದಾರೆ. ಸಾಹಿತ್ಯದ ವಸ್ತುವಾದ ಸತ್ಯಾಗ್ರಹಿಗಳ ಬದುಕು ಸಾರ್ಥಕವಾದುದು; ಸತ್ಯಾಗ್ರಹ ಚಳುವಳಿಗಳು ಸತ್ವಪೂರ್ಣವಾದುವು. ಶಿವಪುರ ಧ್ವಜ ಸತ್ಯಾಗ್ರಹವು ಮೈಸೂರಿನ ಸತ್ಯಾಗ್ರಹಗಳಲ್ಲೆಲ್ಲ ಮಕುಟಪ್ರಾಯವಾದುದು.

ಶಿವಪುರ ಧ್ವಜ ಸತ್ಯಾಗ್ರಹದ ಚರಿತ್ರೆಯೆಂದರೆ, ಮೈಸೂರು ಕಾಂಗ್ರೆಸ್ಸಿನ ಪ್ರಥಮ ಮಹಾಧಿವೇಶನದ ಚರಿತ್ರೆಯೂ ಹೌದು. ಮೈಸೂರು ಕಾಂಗ್ರೆಸ್ಸಿನ ತಾಯಿಬೇರು ಶಿವಪುರ ಧ್ವಜ ಸತ್ಯಾಗ್ರಹ. ಎರಡಕ್ಕೂ ಅವಿನಾ ಸಂಬಂಧವಿದೆ. ಒಂದನ್ನು ಬಿಟ್ಟು ಇನ್ನೊಂದಕ್ಕೆ ಅಸ್ತಿತ್ವವಿಲ್ಲ. ಮೈಸೂರು ಸಂಸ್ಥಾನದ ಉಳಿದ ಯಾವುದೇ ಸತ್ಯಾಗ್ರಹಕ್ಕಿಂತ ಶಿವಪುರ ಧ್ವಜ ಸತ್ಯಾಗ್ರಹಕ್ಕೆ ಹೆಚ್ಚಿನ ಮಹತ್ವವಿದೆ. ಅದರ ಅಂತಃಸತ್ವದ ಜೀವಂತ ನಾಡಿಗಳು ಮೈಸೂರು ಕಾಂಗ್ರೆಸ್ಸಿನ ದೇಹದಲ್ಲೆಲ್ಲಾ ಹರಡಿಕೊಂಡಿವೆ.

ಸ್ಮಾರಕ ಭವನ

ಇತಿಹಾಸ ಪ್ರಸಿದ್ಧವಾದ, ಸ್ವಾತಂತ್ರ್ಯ ಪ್ರೇಮಿಗಳು ಸದಾ ಸ್ಮರಣೆಯಲ್ಲಿಟ್ಟುಕೊಳ್ಳಬೇಕಾದ ಶಿವಪುರ ಧ್ವಜ ಸತ್ಯಾಗ್ರಹಕ್ಕೆ ಒಂದು ಸ್ಮಾರಕ ಅಗತ್ಯ ಎನ್ನುವುದನ್ನು ಮೊದಲು ಮನಗಂಡವರು ಶ್ರೀ ಕೆ. ಹನುಮಂತಯ್ಯನವರು. ಕರ್ನಾಟಕದ ಜನಪ್ರಿಯ ರಾಜಕಾರಿಣಿಗಳಾದ ಇವರು ತಮ್ಮ ಅಧಿಕಾರಾವಧಿಯಲ್ಲಿ ಮಾಡಿರುವ ಸಾರೋದ್ಧಾರವಾದ ಕಾರ್ಯಗಳಿಗಾಗಿ ಚಿರಪರಿಚಿತರಾಗಿದ್ದಾರೆ. ಧರ್ಮ ಕಲೆ ಸಂಸ್ಕೃತಿಗಳನ್ನು ಪ್ರತಿಬಿಂಬಿಸುವ ಸ್ಮಾರಕಗಳನ್ನು ನಿರ್ಮಿಸುವುದರಲ್ಲಿ ಇವರು ಸಿದ್ಧಹಸ್ತರಾಗಿದ್ದಾರೆ. ರಾಮನಗರದ 'ಶ್ರೀರಾಮಪಾದ' ದೇವಾಲಯ, ಶ್ರೀ ಕೆಂಗಲ್ ಹನುಮಂತಸ್ವಾಮಿ ದೇವಸ್ಥಾನ, ಬೆಂಗಳೂರಿನ ಹನುಮಂತಪುರದ ಗುಡ್ಡದಮೇಲಿರುವ, ಮತ್ತೊಂದು ಹನುಮಂತನ ಗುಂಡಿ, ರಾಜಧಾನಿಯ ವಿಧಾನಸೌಧದ ನಿರ್ಮಾಣಗಳು ಇದಕ್ಕೆ ಸಾಕ್ಷಿಯಾಗಿವೆ. ನಮ್ಮ ನಾಡಿನ ಸ್ವಾತಂತ್ರ್ಯ ಹೋರಾಟ, ಸ್ವಾತಂತ್ರ್ಯ ಯೋಧರ ಸ್ಮಾರಕಗಳ ಬಗೆಗೆ ಶ್ರೀ ಹನುಮಂತಯ್ಯನವರಿಗೆ ಮೊದಲಿಂದಲೂ ಕಳಕಳಿಯಿದೆ. ಇದಕ್ಕಾಗಿ "ಸ್ವಾತಂತ್ರ್ಯ ಸಮರ ವೀರರ ಸ್ಮಾರಕ ನಿಧಿ" ಯೊಂದನ್ನು ಸ್ಥಾಪಿಸಿದರು. ಸಾರ್ವಜನಿಕ ಸಮಾರಂಭಗಳಲ್ಲಿ ಜನರು ಹೂವಿನ ಹಾರಗಳನ್ನು ಅರ್ಪಿಸಿದಾಗ ಅವುಗಳನ್ನು ಸಭೆಯಲ್ಲಿಯೇ ಹರಾಜು ಮಾಡಿ ಬಂದ ಹಣದಿಂದ ಈ 'ಸ್ಮಾರಕ ನಿಧಿ' ಯನ್ನು ಹುಟ್ಟುಹಾಕಿ ವೃದ್ಧಿಪಡಿಸಿದರು. ಇದು ಸತ್‌ಸಂಕಲ್ಪವಾದುದರಿಂದ ಇದಕ್ಕೆ ಜನಬಲವೂ ಧನಬಲವೂ ದೈವಬಲವೂ ಧಾರಾಳವಾಗಿ ದೊರೆಯಿತು.

1968ಕ್ಕೆ ಮೊದಲೇ ಈ ಯೋಜನೆಯನ್ನು ಮನಸ್ಸಿನಲ್ಲಿಟ್ಟುಕೊಂಡು, ಅಧಿಕ ಸಂಖ್ಯೆಯ ಜನರ ಸಹಾಯ ಸಹಕಾರ ಮತ್ತು ಅನುಗ್ರಹಗಳು ಅಗತ್ಯವೆಂದು ಭಾವಿಸಿ, ಶ್ರೀ ಹನುಮಂತಯ್ಯನವರು ತಾವು ಭಾಗವಹಿಸಿದ ಸಾರ್ವಜನಿಕ ಸಭೆಗಳಲ್ಲೆಲ್ಲಾ ಪ್ರಚಾರ ಮಾಡಿದರು. ಇದಕ್ಕೆ ಸಂಬಂಧಿಸಿದಂತೆ ದಿನಾಂಕ 12-2-1968 ರಂದು ಒಂದು ಮನವಿಯನ್ನು ಹೀಗೆ ಪ್ರಕಟಿಸಿದರು : "ಭಾರತ ಮಾತೆಯನ್ನು ಬ್ರಿಟಿಷರ ಆಳ್ವಿಕೆಯಿಂದ ಬಿಡುಗಡೆ ಮಾಡಲು ಅಸಂಖ್ಯಾತ ದೇಶಭಕ್ತರು ದುಡಿದರು, ಮಡಿದರು. ಅವರ ಶೌರ್ಯದಿಂದ ಬಲಿದಾನದಿಂದ, ಭಾರತವು ಸ್ವತಂತ್ರವಾಯಿತು. ಅವರ ಜ್ಞಾಪಕಾರ್ಥವಾಗಿ, ಸ್ಫೂರ್ತಿಮೂರ್ತಿಯಾದ ಒಂದು

ಸ್ಮಾರಕದ ಸ್ಥಾಪನೆಯೂ ಆಗಬೇಕು. ಅದಾಗುವವರೆಗೆ ನಾನು ಸಾರ್ವಜನಿಕ ಸಭೆಗಳಿಗೆ ಹೋದಾಗ ಕೊಡಲ್ಪಡುವ ಹೂವಿನ ಹಾರಗಳನ್ನು ಧರಿಸುವುದಿಲ್ಲವೆಂದು ಸಂಕಲ್ಪ ಮಾಡಿಕೊಂಡಿದ್ದೇನೆ. ನನಗೆ ಹಾರ ಹಾಕಿ ಗೌರವಿಸಬಯಸುವವರು, ಹಾರಕ್ಕೆ ಬದಲಾಗಿ ಅದರ ಬೆಲೆಯನ್ನೂ ಹರಾಜು ಹಾಕಿ ಬಂದ ಹಣವನ್ನೂ ನನಗೆ ದಯಮಾಡಿ ಕೊಡುತ್ತಿದ್ದಾರೆ. ಈ ರೀತಿ ಎರಡು ಮೂರು ವರ್ಷಗಳಿಂದ ನಡೆಯುತ್ತಿದೆ. ಕೂಡಿರುವ ಹಣದ ಮೊತ್ತವು ಇದುವರೆಗೆ ಸುಮಾರು 18 ಸಾವಿರ ರೂಪಾಯಿಗಳಾಗಿ, ಸಿಂಡಿಕೇಟ್ ಬ್ಯಾಂಕಿನಲ್ಲಿ ಫಿಕ್ಸೆಡ್ ಡಿಪಾಜಿಟ್ಟಿನಲ್ಲಿ ಇಡಲಾಗಿದೆ. ಈ ಹಣವು "ಸ್ವಾತಂತ್ರ್ಯ ಸಮರ ವೀರರ ಸ್ಮಾರಕ ನಿಧಿ" ಯಾಗಿ ನಾಮಕರಣ ಹೊಂದಿ ದಿನೇ ದಿನೇ ವೃದ್ಧಿಯಾಗುತ್ತಿದೆ. ಈ ನಿಧಿಗೆ ಕೈತುಂಬ ಹಣ ನೀಡಿ ಸತ್ಸ್ಮರಣೆಗೆ ಪಾತ್ರರಾಗಬೇಕೆಂದು ಪ್ರಾರ್ಥಿಸುತ್ತೇನೆ."

ಈ ಮನವಿಯ ಪ್ರಕಟಣೆಯಿಂದ ಸಾರ್ವಜನಿಕರ ಬೆಂಬಲ ಸಾಕಷ್ಟು ದೊರೆಯಿತು. ಇದಕ್ಕೆ ಪೂರ್ವಕವಾಗಿ ಮೈಸೂರು ಸಂಸ್ಥಾನದಲ್ಲಿ ಕಾಂಗ್ರೆಸ್ ಸಂಸ್ಥೆಗೆ ಭದ್ರವಾದ ಬುನಾದಿ ಹಾಕಿದ ಶ್ರೀ ಟಿ. ಸಿದ್ದಲಿಂಗಯ್ಯನವರ ಸನ್ಮಾನದ ಘಟನೆ ಸಂಭವಿಸಿತು. ಶ್ರೀ ಸಿದ್ದಲಿಂಗಯ್ಯನವರು ಮೈಸೂರು ಕಾಂಗ್ರೆಸ್ಸಿನ ಪ್ರಥಮ ಅಧ್ಯಕ್ಷರೂ ಮೈಸೂರು ಕಾಂಗ್ರೆಸ್ಸಿನ ಪ್ರಥಮ ಅಧಿವೇಶನದ ಅಧ್ಯಕ್ಷರೂ ಆಗಿದ್ದವರು. ಇಂತಹ ಹಿರಿಯ ನಾಯಕರಿಗೆ ದೊಡ್ಡ ಪ್ರಮಾಣದಲ್ಲಿ ಸನ್ಮಾನ ಮಾಡಬೇಕು, ಇದೇ ಸಂದರ್ಭವನ್ನು ಬಳಸಿಕೊಂಡು ಸ್ವಾತಂತ್ರ್ಯ ಚಳುವಳಿಯನ್ನು ನೆನಪಿಸುವ ಭವ್ಯವಾದ ಸ್ಮಾರಕಭವನವೊಂದನ್ನು ನಿರ್ಮಾಣ ಮಾಡಬೇಕೆಂದು ಶ್ರೀ ಕೆ. ಹನುಮಂತಯ್ಯನವರು ಯೋಚಿಸಿ ಕಾರ್ಯತತ್ಪರರಾದರು. ಶ್ರೀಯುತರು ವಿಚಾರ ವಿನಿಮಯಕ್ಕಾಗಿ ಗಣ್ಯರ ಒಂದು ಸಭೆಯನ್ನು ಕರೆದರು. 14ನೇ ಜುಲೈ 1974 ರಂದು ವಿಧಾನ ಸೌಧದ ಕಾನ್ಫರೆನ್ಸ್ ಹಾಲಿನಲ್ಲಿ ಸಭೆ ಸೇರಿತು. ಆ ಸಭೆಗೆ ಅಂದಿನ ಮುಖ್ಯಮಂತ್ರಿಗಳಾಗಿದ್ದ ಶ್ರೀ ಡಿ. ದೇವರಾಜ ಅರಸ್, ಅವರ ಮಂತ್ರಿಮಂಡಲದ ಪ್ರಮುಖ ಸಚಿವರು, ಕರ್ನಾಟಕದ ಹಿರಿಯ ಸ್ವಾತಂತ್ರ್ಯ ಯೋಧರು, ನಾಗರಿಕರು ಅಧಿಕ ಸಂಖ್ಯೆಯಲ್ಲಿ ಆಗಮಿಸಿದ್ದರು. ಅಂದಿನ ಸಭೆಯಲ್ಲಿ ಮುಖಂಡರು ಮಾಡಿದ ಭಾಷಣಗಳ ಸಾರಾಂಶವನ್ನು ಮುಂದೆ ಕೊಟ್ಟಿದೆ.

ಸಭೆಗೆ ಬಂದ ಗಣ್ಯ ವ್ಯಕ್ತಿಗಳನ್ನು ಸ್ವಾಗತಿಸುತ್ತಾ ಸಭೆಯನ್ನು ಕರೆದ ಉದ್ದೇಶವನ್ನು ಕುರಿತು ಶ್ರೀ ಕೆ. ಹನುಮಂತಯ್ಯನವರು ಹೀಗೆ ಪ್ರಸ್ತಾಪಿಸಿದರು: "ಸ್ವಾತಂತ್ರ್ಯ ಪೂರ್ವದಲ್ಲಿ ಸ್ವಾತಂತ್ರ್ಯಕ್ಕಾಗಿ ನಮ್ಮ ಜನ ಬ್ರಿಟಿಷರ ವಿರುದ್ಧ ಮತ್ತು ಸಂಸ್ಥಾನದ ರಾಜರ ವಿರುದ್ಧ ಹೋರಾಡಬೇಕಾಯಿತು. ಸ್ವಾತಂತ್ರ್ಯಕ್ಕಾಗಿ ನಡೆಸಿದ ಹೋರಾಟ, ಅದರಲ್ಲಿ ಭಾಗವಹಿಸಿದ ಸ್ವಾತಂತ್ರ್ಯಯೋಧರ ಸಾಹಸ ತ್ಯಾಗ ದೇಶಭಕ್ತಿ ಮೊದಲಾದ ಅನುಕರಣೀಯ ಗುಣಗಳನ್ನು ನಾಡಿನ ಚರಿತ್ರೆಯಲ್ಲಿ ಸ್ಥಿರಗೊಳಿಸುವ ಅಗತ್ಯ ಕೆಲಸ ಈಗ ನಡೆಯಬೇಕಾಗಿದೆ. ಗ್ರಂಥ, ಸ್ಮಾರಕ ಭವನ, ವಸ್ತು ಸಂಗ್ರ

ಹಾಲಯಂಗಳ ಮೂಲಕ ಇದು ಆಗಬೇಕು. ಹೀಗೆ ಮಾಡುವುದರಿಂದ ನಮ್ಮ ನಾಡಿನ ಬಗೆಗೆ, ನಾಡಿನ ಹಿರಿಯರ ಬಗೆಗೆ ಮುಂದಿನ ಜನಾಂಗಕ್ಕೆ ಸ್ಫೂರ್ತಿ ಗೌರವ ಭಕ್ತಿಗಳು ಮೂಡುತ್ತವೆ. ಇಂಥ ಕೆಲಸಗಳು ಪಾಶ್ಚಾತ್ಯ ದೇಶಗಳಲ್ಲಿ ಹೆಚ್ಚಾಗಿ ನಡೆದಿವೆ. ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದಮೇಲೆ ಮಹಾತ್ಮ ಗಾಂಧೀಜಿ ಮತ್ತು ಇತರ ಕೆಲವು ರಾಷ್ಟ್ರನಾಯಕರ ಪ್ರತಿಮೆಗಳ ಅನಾವರಣವಾಗಿದೆ. ವ್ಯಕ್ತಿಗಳಿಗಿಂತಲೂ ಸ್ವಾತಂತ್ರ್ಯ ಹೋರಾಟದ ಘಟನೆಗಳಿಗೆ ಸಂಬಂಧಿಸಿದಂತೆ ಸ್ಮಾರಕ ಭವನಗಳನ್ನು ನಿರ್ಮಿಸಲು ನಾವು ಗಮನ ಕೊಡಬೇಕಾಗಿದೆ.

ಒಂದು ಕಾಲದಲ್ಲಿ ಧ್ವಜಾರೋಹಣ ಮಾಡುವುದೇ ನಮ್ಮ ಜನರಿಗೆ ಗೊತ್ತಿರಲಿಲ್ಲ. ಹಾಗೆ ಮಾಡಲು ಕೆಲವರು ಪ್ರಯತ್ನಿಸಿದರೆ ರಾಷ್ಟ್ರಧ್ವಜವು ಸರಕಾರದ ಧ್ವಜಕ್ಕೆ ಪ್ರತಿ ಸವಾಲು ಅನ್ನುವ ಕಾರಣಕ್ಕೋಸ್ಕರ ಸರಕಾರ ಅವಕಾಶ ಕೊಡುತ್ತಿರಲಿಲ್ಲ. ಪ್ರತಿಭಟಿಸಿದರೆ ಬಂಧನಗಳಾಗುತ್ತಿದ್ದುವು. ಅಂಥ ಕಾಲದಲ್ಲಿ, 1938 ರಲ್ಲಿ, ಶಿವಪುರದಲ್ಲಿ ಸ್ವಾತಂತ್ರ್ಯಯೋಧರು ರಾಷ್ಟ್ರಧ್ವಜಾರೋಹಣ ಮಾಡಿ ಮೊದಲ ಬಾರಿಗೆ ಯಶಸ್ವಿಯಾದರು. ಅದು ಮೈಸೂರು ರಾಜ್ಯದ ಕಾಂಗ್ರೆಸ್ಸಿನ ಮೊದಲ ಅಧಿವೇಶನವೂ ಹೌದು. ಆದ್ದರಿಂದ ಶಿವಪುರದಲ್ಲಿ ಒಂದು ಸ್ಮಾರಕ ಭವನವನ್ನು ನಿರ್ಮಿಸುವುದು ಅಗತ್ಯವಾಗಿದೆ. ಈ ಕಾರ್ಯ ಸಾಧನೆಗಾಗಿ ನನ್ನ ಮುಂದಿನ ಜೀವಿತವನ್ನೆ ಮೀಸಲಿಡಲು ನಿರ್ಧರಿಸಿದ್ದೇನೆ. ಶಿವಪುರದಲ್ಲಿ ನಿರ್ಮಾಣ ಮಾಡಬೇಕೆಂದಿರುವ ಸ್ಮಾರಕ ಭವನದ ಒಳಗೋಡೆಗಳ ಮೇಲೆ ಸ್ವಾತಂತ್ರ್ಯಕ್ಕೆ ಹೋರಾಡಿದ, ಅದಕ್ಕಾಗಿ ಪ್ರಾಣಾರ್ಪಣೆ ಮಾಡಿದ ವೀರರ ಭಾವಚಿತ್ರಗಳನ್ನು ಬರೆಯಿಸಬೇಕಾಗಿದೆ. ಅದರ ಕೊಠಡಿಗಳನ್ನು ಗ್ರಂಥಾಲಯಕ್ಕೆ, ವಾಚನಾಲಯಕ್ಕೆ, ದೇಶದ ಆಡಳಿತದ ಬಗೆಗಿನ ಉಪಯುಕ್ತ ಉಪನ್ಯಾಸಗಳಿಗೆ ಮೀಸಲಿಡಲು ಉದ್ದೇಶಿಸಿದೆ. ಸ್ಮಾರಕ ಭವನದ ಬಗೆಗೆ ನಿಮ್ಮ ಸಲಹೆ ಸೂಚನೆಗಳನ್ನು ಕೇಳುವುದಕ್ಕೋಸ್ಕರ ಈ ಸಭೆಯನ್ನು ಕರೆದಿದೆ. ಈ ಸದುದ್ದೇಶಕ್ಕೆ ಸರಕಾರ ಮತ್ತು ಸಾರ್ವಜನಿಕರು ಸಹಾಯ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ."

ಶ್ರೀ ಕೆ. ಹನುಮಂತಯ್ಯನವರ ಅಭಿಪ್ರಾಯಕ್ಕೆ ಮತ್ತು ಉದ್ದೇಶಕ್ಕೆ ಸಭೆಯಲ್ಲಿ ಇದ್ದವರೆಲ್ಲ ಬೆಂಬಲ ನೀಡಿದರು. ಶ್ರೀ ಟಿ. ಸಿದ್ದಲಿಂಗಯ್ಯನವರ ಸನ್ಮಾನ ಸಿದ್ಧತೆಗೆ ಒಪ್ಪಿಗೆ ನೀಡಿದ ಮೇಲೆ ಎಲ್ಲರ ದೃಷ್ಟಿ ಶಿವಪುರ ಧ್ವಜಸತ್ಯಾಗ್ರಹದ ಸ್ಮಾರಕ ಭವನದ ಕಡೆಗೆ ಹರಿಯಿತು. ಅಂಥ ಸ್ಮಾರಕ ಭವನದ ಅಗತ್ಯವನ್ನು ಎಲ್ಲರೂ ಅನುಮೋದಿಸಿದರು. ಶ್ರೀ ಡಿ. ದೇವರಾಜ ಅರಸರು ಶ್ರೀ ಹನುಮಂತಯ್ಯನವರ ಉದ್ದೇಶಕ್ಕೆ ಬೆಂಬಲ ನೀಡುತ್ತಾ ಹೀಗೆ ಅಭಿಪ್ರಾಯ ಪಟ್ಟರು: "ಸ್ವಾತಂತ್ರ್ಯ ಸಮರದ ಸ್ಮಾರಕ ಭವನವನ್ನು ಶಿವಪುರದಲ್ಲಿ ನಿರ್ಮಿಸುವುದು ಸೂಕ್ತವಾಗಿದೆ. ಅದಕ್ಕಾಗಿ ಸರಕಾರದಿಂದ ಎಲ್ಲಾ ರೀತಿಯ ಸಹಾಯ ನೀಡುವುದಾಗಿ ಭರವಸೆ ಕೊಡುತ್ತೇನೆ. ವಿದೇಶಗಳಲ್ಲಿ ಸ್ವಾತಂತ್ರ್ಯ ಹೋರಾಟಕ್ಕೆ ಸಂಬಂಧಿಸಿದ ಸಣ್ಣ ಪುಟ್ಟ ಘಟನೆ

ಗಳಿಗೂ ಭವ್ಯವಾದ ಸ್ಮಾರಕಗಳಿವೆ. ಅವುಗಳಿಂದ ಅಲ್ಲಿನ ಜನರಿಗೆ ಚಾರಿತ್ರಿಕ ಅರಿವು ಮೂಡುತ್ತದೆ. ಅಲ್ಲದೆ ಅವು ಪ್ರವಾಸಿಗರನ್ನು ಅಧಿಕ ಸಂಖ್ಯೆಯಲ್ಲಿ ಆಕರ್ಷಿಸುತ್ತವೆ. ಆದ್ದರಿಂದ ಸಾಂಕೇತಿಕವಾದ ಅರ್ಥಪೂರ್ಣವಾದ ಸ್ಮಾರಕ ಭವನಗಳು ನಿರ್ಮಾಣ ವಾಗಬೇಕಾಗಿದೆ. ಈ ದಿಸೆಯಲ್ಲಿ ಶ್ರೀ ಕೆ. ಹನುಮಂತಯ್ಯನವರು ಹಾಕಿಕೊಂಡಿರುವ ಯೋಜನೆ ಸ್ತುತ್ಯವಾಗಿದೆ. ಇಂತಹ ಕೆಲಸಗಳನ್ನು ಶ್ರೀಯುಂತರು ಶ್ರದ್ಧೆಯಿಂದಲೂ ನಿರ್ವಹಿಸುತ್ತಾರೆ. ಈ ಯೋಜನೆ ಕಾರ್ಯಗತವಾಗಲು, ಹಣ ಸಂಗ್ರಹಿಸಲು ಒಂದು ಸಮಿತಿಯನ್ನು ರಚಿಸಿಕೊಳ್ಳುವುದು ಅಗತ್ಯ. ಅದಕ್ಕೆ 'ಶಿವಪುರ ಧ್ವಜ ಸತ್ಯಾಗ್ರಹ ಸ್ಮಾರಕ' ಎಂದು ಹೆಸರಿಟ್ಟುಕೊಳ್ಳಬಹುದು."

ಶಿವಪುರ ಅಧಿವೇಶನದಲ್ಲಿ ಧ್ವಜಾರೋಹಣ ಮಾಡಿ, ಬಂಧಿತರಾಗಿ, ಅಂದಿನ ಘಟನೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದ ಚೆನ್ನಪಟ್ಟಣದ ಶ್ರೀ ವಿ. ವೆಂಕಟಪ್ಪನವರು ಮುಂದಿನ ಜನಾಂಗದ ದೃಷ್ಟಿಯಿಂದ ಶಿವಪುರ ಸ್ಮಾರಕ ಭವನದ ಅಗತ್ಯವಿದೆಯೆಂದು ಅಭಿಪ್ರಾಯಪಟ್ಟು ಆ ಕಾರ್ಯಕ್ಕೆ ಹೃತ್ಪೂರ್ವಕವಾದ ಯಶಸ್ಸನ್ನು ಕೋರಿದರು.

ಶ್ರೀ ಎಚ್. ಎಂ. ಚನ್ನಬಸಪ್ಪನವರು ಸ್ಮಾರಕ ಭವನದ ಬಗೆಗೆ ತಮ್ಮ ಅಭಿಪ್ರಾಯಗಳನ್ನು ಹೀಗೆ ವ್ಯಕ್ತಪಡಿಸಿದರು:

"ಶಿವಪುರ ಸ್ಮಾರಕ ಭವನದ ಯೋಚನೆ ಈ ಮೊದಲು ಹಲವರಿಗೆ ಬಂದಿತ್ತು. ಆದರೆ ಅದನ್ನು ಕಾರ್ಯಗತಗೊಳಿಸುವ ನಾಯಕರಿರಲಿಲ್ಲ. ಈಗ ಇದು ಶ್ರೀ ಕೆ. ಹನುಮಂತಯ್ಯನವರ ಮುಖಂಡತ್ವದಲ್ಲಿ ನಿರ್ದಿಷ್ಟವಾದ ರೂಪವನ್ನು ಪಡೆಯುತ್ತಿದೆ. ಇದು ಕೇವಲ ಸರಕಾರದ ಕೆಲಸವಲ್ಲ, ಒಂದು ಪಕ್ಷದ ಕೆಲಸವಲ್ಲ, ಒಟ್ಟು ಜನತೆಯ ಕೆಲಸ. ಸ್ಮಾರಕ ಭವನದ ನಿರ್ಮಾಣಕ್ಕೆ ನಿಧಿ ಸಂಗ್ರಹಿಸುವುದು ಕಷ್ಟವೇನಲ್ಲ. ಪೂರ್ತಿ ಹಣ ಸಂಗ್ರಹವಾಗುವ ವರೆಗೆ ನಿರ್ಮಾಣ ಕಾರ್ಯವನ್ನ ಪ್ರಾರಂಭಿಸು ವುದನ್ನು ನಿಲ್ಲಿಸದೆ, ದೊರಕುವ ಅಲ್ಪ ಪ್ರಮಾಣದ ಹಣದಿಂದಲೇ ಕೆಲಸವನ್ನು ಪ್ರಾರಂಭಿಸುವುದು ಒಳ್ಳೆಯದು."

ಶಿವಪುರ ರಾಷ್ಟ್ರಕೂಟದಲ್ಲಿ ಸ್ವಯಂಸೇವಕರಾಗಿ ಕೆಲಸಮಾಡಿದ ನಾಗಮಂಗಲದ ಶ್ರೀ ಎಂ. ಆರ್. ಎಸ್. ಶಾಸ್ತ್ರಿಗಳು ತಮ್ಮ ಸದಾಶಯವನ್ನು ಹೀಗೆ ಹೊರಗೆಡ ಹಿದರು : "ಅನೇಕ ಕಾಂಗ್ರೆಸ್ ಅಧಿವೇಶನಗಳಲ್ಲಿ ಸ್ಮಾರಕ ಭವನದ ನಿರ್ಮಾಣಕ್ಕೆ ನಿರ್ಣಯಗಳನ್ನು ಮಾಡಿದರೂ ಅವು ಯಾವುವೂ ಕಾರ್ಯಗತವಾಗಲಿಲ್ಲ. ಈಗ ಆ ಕೆಲಸ ಕೈಗೂಡುವ ಸೂಚನೆ ಕಂಡುಬರುತ್ತಿದೆ. ಇದು ಸಂತೋಷದಾಯಕ ವಿಷಯ ವಾಗಿದೆ. ಈ ಕೆಲಸ ಎಷ್ಟು ಬೇಗ ನಡೆದರೆ ಅಷ್ಟೂ ಒಳ್ಳೆಯದು.

ಶ್ರೀ ಎನ್. ಹುಚ್ಚಮಾಸ್ತಿಗೌಡರೂ ಕೂಡ ಶಿವಪುರ ರಾಷ್ಟ್ರಕೂಟದಲ್ಲಿ ಸ್ವಯಂ ಸೇವಕರಾಗಿದ್ದರು. ಅಂದು ಅವರು ಧ್ವಜಸ್ತಂಭದ ವೇದಿಕೆಯ ಹತ್ತಿರಕ್ಕೆ ಅಂದಿನ ಅಸಿಸ್ಟೆಂಟ್ ಕಮೀಷನರನ್ನು ಬಿಟ್ಟಿರಲಿಲ್ಲ. ಸತ್ಯಾಗ್ರಹದ ನಾಯಕರು ಒಪ್ಪಿಗೆ ಕೊಟ್ಟಮೇಲೆ ಸರ್ಕಾರದ ಅಧಿಕಾರಿ ಧ್ವಜ ವೇದಿಕೆಯ ಹತ್ತಿರಕ್ಕೆ ಬಂದು ಪ್ರತಿಬಂಧಕಾಜ್ಞೆಯನ್ನು ಉಲ್ಲಂಘಿಸಿ ಧ್ವಜಾರೋಹಣ ಮಾಡಿದ ಕಾರಣ ನಾಯಕರನ್ನು ಬಂಧಿಸಿದರು. ಆ ಘಟನೆಯನ್ನು ನೆನೆಸಿಕೊಂಡ ಶ್ರೀ ಹುಚ್ಚಮಾಸ್ತಿಗೌಡರು "ಶಿವಪುರ ಧ್ವಜಸತ್ಯಾಗ್ರಹದಲ್ಲಿ ಸ್ವಯಂ ಸೇವಕನಾಗಿ ದುಡಿದಿದ್ದೇನೆ. ಈಗ ಶಿವಪುರ ಸ್ಮಾರಕ ಭವನದ ಕಾರ್ಯದಲ್ಲಿಯೂ ಸ್ವಯಂ ಸೇವಕನಾಗಿ ದುಡಿಯುತ್ತೇನೆ." ಎಂದು ಘೋಷಿಸಿದರು.

ಚಿಕ್ಕಮಗಳೂರಿನ ಸ್ವಾತಂತ್ರ್ಯಯೋಧರಾದ 'ಶ್ರೀ ಹುಚ್ಚೇಗೌಡ ಸ್ಮಾರಕ'ಕ್ಕಾಗಿ ಸಂಗ್ರಹಿಸಿದ ನಿಧಿಯಲ್ಲಿ ಉಳಿದಿರುವ ಹಣವನ್ನು ಶಿವಪುರ ಸ್ಮಾರಕ ಭವನಕ್ಕೆ ನೀಡುವುದಾಗಿ ಹೇಳಿದ ಚಿಕ್ಕಮಗಳೂರಿನ ಶ್ರೀ ಅಣ್ಣಪ್ಪಶೆಟ್ಟಿಯವರು "ಸಾರ್ವಜನಿಕರ ಸಹಕಾರದಿಂದ ಶಿವಪುರ ಸ್ಮಾರಕದ ನಿರ್ಮಾಣ ಕೆಲಸವನ್ನು ಸರಕಾರ ಬೇಗ ಆಗುಮಾಡಬೇಕು" ಎಂದು ಕಳಕಳಿಯಿಂದ ಸೂಚಿಸಿದರು.

ಅದೇ ಸಂದರ್ಭದಲ್ಲಿ ಮಾತನಾಡುತ್ತಾ ಮೈಸೂರಿನ ಶ್ರೀ ಎ. ರಾಮಣ್ಣನವರು ತಮ್ಮ ನೆನಪನ್ನು ಕೆದಕಿ ಹೀಗೆ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸಿದರು: "1937 ರಲ್ಲಿ ಬೊಂಬಾಯಿಯ ಶ್ರೀ ನಾರಿಮನ್ ಬೆಂಗಳೂರಿಗೆ ಬಂದಾಗ ಉಂಟಾದ ಗಲಭೆಯ ಕಾರಣದಿಂದ ಮೈಸೂರು ಕಾಂಗ್ರೆಸ್ ಸ್ಥಾಪನೆಯ ಅಗತ್ಯ ಕಂಡು ಬಂದಿತು. ಅಂದು ಶಿವಪುರ ಧ್ವಜಸತ್ಯಾಗ್ರಹದಲ್ಲಿ ಭಾಗವಹಿಸಿದ್ದ ಅನೇಕ ಮುಖಂಡರು ನಮ್ಮ ನಡುವೆ ಇದ್ದಾರೆ. ಶಿವಪುರ ಅಧಿವೇಶನದ ಸ್ಫೂರ್ತಿಯಿಂದಲೇ ಇತರ ದೇಶೀಯ ಸಂಸ್ಥಾನಗಳಲ್ಲಿ ಸತ್ಯಾಗ್ರಹಗಳು ಕಾಣಿಸಿಕೊಂಡವು. ಆದ್ದರಿಂದ ಶಿವಪುರ ಅಧಿವೇಶನ ಮೈಸೂರು ಕಾಂಗ್ರೆಸ್ಸಿನ ಜನ್ಮಸ್ಥಳ ಮಾತ್ರವಲ್ಲ, ದೇಶೀಯ ಸಂಸ್ಥಾನಗಳ ಕಾಂಗ್ರೆಸ್‌ನ ಚಳವಳಿಯೂ ಹೌದು. ಅಂದು ಶಿವಪುರದಲ್ಲಿ ಹೇಗೆ ಧ್ವಜಸತ್ಯಾಗ್ರಹ ನಡೆಯಿತು ಎಂದು ಇಂದಿನ ನಮ್ಮ ಯುವಕರಿಗೆ ತಿಳಿದಿಲ್ಲ. ಅಂದಿನ ಘಟನೆಗಳನ್ನು ಭಿತ್ತಿ ಚಿತ್ರದ ಮೂಲಕ ಸಾದರಪಡಿಸಬೇಕಾಗಿದೆ. ಅದಕ್ಕಾಗಿ ಸ್ಮಾರಕ ಭವನದ ಅಗತ್ಯವಿದೆ.

ಬೆಂಗಳೂರು ನಗರ ಕಾರ್ಪೊರೇಷನ್ನಿನ ಆಗಿನ ಮೇಯರ್ ಆಗಿದ್ದ ಶ್ರೀ ತಿವಾರಿಯವರು ಸ್ಮಾರಕ ಭವನದ ನಿರ್ಮಾಣಕ್ಕೆ ಕಾರ್ಪೊರೇಷನ್ನಿನಿಂದ ಎಲ್ಲಾ ರೀತಿಯ ಸಹಾಯ ನೀಡುವುದಾಗಿ ಭರವಸೆ ನೀಡಿದರು.

ಶಾಸಕ ಶ್ರೀ ಟಿ. ಆರ್. ಶಾಮಣ್ಣನವರು ತಮ್ಮ ಭಾಷಣದಲ್ಲಿ ವ್ಯಕ್ತಪಡಿಸಿದ ಅಭಿಪ್ರಾಯ ಹೀಗಿದೆ: "ಭಾರತದಲ್ಲಿ ಎರಡು ವಿಭಾಗಗಳಲ್ಲಿ ಸ್ವಾತಂತ್ರ್ಯ ಚಳುವಳಿ

ನಡೆಯಿತು. ಒಂದು: ಮಹಾತ್ಮ ಗಾಂಧೀಜಿಯವರ ನೇತೃತ್ವದಲ್ಲಿ ಆಂಗ್ಲ ಭಾರತದಲ್ಲಿ ನಡೆದ ಚಳವಳಿ. ಇನ್ನೊಂದು : ಜವಾಬ್ದಾರಿ ಸರ್ಕಾರಕ್ಕಾಗಿ ಸಂಸ್ಥಾನಗಳಲ್ಲಿ ಜನರಿಂದ ನಡೆದ ಚಳವಳಿ. ಇವುಗಳಲ್ಲಿ ಮೈಸೂರು ಸಂಸ್ಥಾನದಲ್ಲಿ ನಡೆದ ಚಳವಳಿ ಅಗ್ರಗಣ್ಯವಾದುದು. ಶ್ರೀ ಟಿ. ಸಿದ್ದಲಿಂಗಯ್ಯನವರು ಅಂದಿನ ಆಂಗ್ಲ ಭಾರತದ ಚಳವಳಿ ಮತ್ತು ಸಂಸ್ಥಾನದ ಚಳವಳಿಯ ಸಂಪರ್ಕ ಶಕ್ತಿಯಾಗಿದ್ದರು. ಮೈಸೂರು ಕಾಂಗ್ರೆಸ್ಸಿನ ಪ್ರಥಮ ಅಧಿವೇಶನ ನಡೆದ ಶಿವಪುರದಲ್ಲಿ ಸ್ಮಾರಕ ಭವನ ನಿರ್ಮಿಸುವುದು ಸೂಕ್ತವಾಗಿದೆ."

"ನಮ್ಮಲ್ಲಿ ಅನೇಕ ಜನರು, ಬ್ರಿಟಿಷರು ನಮಗೆ ಸ್ವಾತಂತ್ರ್ಯವನ್ನು ಬಹುಮಾನವಾಗಿ ಕೊಟ್ಟರು ಎಂದು ಭಾವಿಸುತ್ತಾರೆ. ಆದರೆ ನಮಗೆ ಬಂದಿರುವ ಸ್ವಾತಂತ್ರ್ಯ ಬ್ರಿಟಿಷರು ಕೊಟ್ಟ ಬಹುಮಾನವಲ್ಲ. ನಮ್ಮ ಹಿರಿಯ ಸ್ವಾತಂತ್ರ್ಯಯೋಧರು ಸತತವಾಗಿ ಹೋರಾಡಿ ಅಧಿಕ ಪ್ರಮಾಣದಲ್ಲಿ ಸರ್ವಸ್ವವನ್ನೂ ತ್ಯಾಗಮಾಡಿ ಗಳಿಸಿದ ಶ್ರಮದ ಫಲ ಅದು. ನಮ್ಮ ಹಿರಿಯರ ಸಾಧನೆಯನ್ನು ಸ್ಮಾರಕಗಳ ಮೂಲಕ ಜೋಪಾನವಾಗಿ ನಾವು ಕಾಪಾಡಿಕೊಳ್ಳಬೇಕು" ಎಂದು ಶ್ರೀ ವಿ. ಕೃಷ್ಣ ಅಯ್ಯರ್ ಅವರು ಮಾತನಾಡುತ್ತಾ ತಿಳಿಸಿದರು.

ಡಾ|| ವಿ. ಕೆ. ಆರ್. ವಿ. ರಾವ್ ಅವರು ಸ್ಮಾರಕ ಭವನ ನಿರ್ಮಾಣವಾದ ಮೇಲೆ, ಶಿವಪುರವನ್ನು ಪ್ರೇಕ್ಷಣೀಯ ಸ್ಥಳವೆಂದು ಪರಿಗಣಿಸಿ ಅಲ್ಲಿಗೆ ಹೋಗಿ ವೀಕ್ಷಿಸಲು ಎಲ್ಲ ರೀತಿಯ ಸೌಲಭ್ಯಗಳನ್ನು ಒದಗಿಸಬೇಕೆಂದು ಸಲಹೆ ಮಾಡಿದರು.

ಶಿವಪುರ ಅಧಿವೇಶನದಲ್ಲಿ ಸ್ವಯಂಸೇವಕರಾಗಿ ಭಾಗವಹಿಸಿದ್ದ, ಲೋಕ ಸಭಾ ಸದಸ್ಯರಾಗಿದ್ದ ಮಂಡ್ಯದ ಶ್ರೀ ಕೆ. ಚಿಕ್ಕಲಿಂಗಯ್ಯನವರು ಸ್ಮಾರಕ ಭವನದ ನಿರ್ಮಾಣಕ್ಕೆ ಬೆಂಬಲ ನೀಡುವುದಾಗಿ ಹೇಳಿ, ಇಂತಹ ಕಾರ್ಯಕ್ಕೆ ಸರಕಾರದ ಜೊತೆಗೆ ಸಾರ್ವಜನಿಕರೂ ಉದಾರವಾಗಿ ಮಂತಿಗೆ ನೀಡಬೇಕೆಂದು ಕರೆಕೊಟ್ಟರು.

ಬಿ. ಪಿ. ಡಿ. ಸಿ. ಸಿ. ಯ ಅಧ್ಯಕ್ಷರಾಗಿದ್ದ ಶ್ರೀ ಬಿ. ವೆಂಕಟೇಶ್ ಅವರು ಸ್ಮಾರಕ ಭವನಕ್ಕೆ ಶಾಲೆಗಳಲ್ಲಿ ಬಳಸದೇ ಉಳಿದಿರುವ ಆಪದ್ಧನದಿಂದಲೂ ವಿದ್ಯಾರ್ಥಿಗಳಿಂದಲೂ ಹಣ ಸಂಗ್ರಹಿಸಬಹುದೆಂದು ಸೂಚಿಸಿದರು.

ಅದೇ ಸಂದರ್ಭದಲ್ಲಿ ಮಾತನಾಡಿದ ಶ್ರೀ ಬಿ. ಎನ್. ಗುಪ್ತ ಅವರು ಹಿಂದಿನ ರಾಜಕೀಯ ಪರಿಸ್ಥಿತಿಯನ್ನು ವಿಶ್ಲೇಷಿಸುತ್ತಾ ಹೀಗೆ ಅಭಿಪ್ರಾಯಪಟ್ಟರು : "ದೇಶೀಯ ಸಂಸ್ಥಾನಗಳಲ್ಲಿ ಮೊದಲು ಸತ್ಯಾಗ್ರಹ ನಡೆದದ್ದು ಶಿವಪುರದಲ್ಲಿ. ಮಹಾತ್ಮ ಗಾಂಧಿಯವರು ದೇಶೀಯ ಸಂಸ್ಥಾನಗಳ ಸತ್ಯಾಗ್ರಹ ಚಳವಳಿಯನ್ನು ವಿರೋಧಿಸಿ ಲೇಖನ ಬರೆದಿದ್ದರು. ಆ ಲೇಖನವನ್ನು ಬಳಸಿಕೊಂಡು ರಾಜ್ಯದ ಕಾಂಗ್ರೆಸ್ಸಿನ ಚಟುವಟಿಕೆಗಳನ್ನು ಹತ್ತಿಕ್ಕಲು ಅಂದಿನ ಸರಕಾರ ಪ್ರಯತ್ನಿಸಿತು.

ಆದರೂ ಸತ್ಯಾಗ್ರಹ ಚಳವಳಿಗಳು ನಿಲ್ಲಲಿಲ್ಲ. ಇತರ ದೇಶೀಯ ಸಂಸ್ಥಾನಗಳಲ್ಲಿ ಸತ್ಯಾಗ್ರಹದ ಕಲ್ಪನೆ ಮೂಡದೇ ಇದ್ದಾಗ ಮೈಸೂರು ಸಂಸ್ಥಾನದ ಶಿವಪುರದಲ್ಲಿ ಮೊದಲು ಸತ್ಯಾಗ್ರಹ ನಡೆಯಿತು. ಆ ಸತ್ಯಾಗ್ರಹದ ನೆನಪಿಗೆ ಸ್ಮಾರಕ ಭವನ ನಿರ್ಮಾಣವಾಗುವುದರಲ್ಲಿ ವಿಶಿಷ್ಟವಾದ ಅರ್ಥವಿದೆ."

ಆಗಿನ ಸಮಾಜ ಕಲ್ಯಾಣ ಸಚಿವರಾಗಿದ್ದ ಶ್ರೀ ಬಿ. ರಾಚಯ್ಯನವರು ಸ್ಮಾರಕ ಭವನಕ್ಕೆ ಸಂಬಂಧಿಸಿದಂತೆ ರಾಜ್ಯದ ಮುಖ್ಯ ಮಂತ್ರಿಗಳು ಕೈಗೊಳ್ಳುವ ತೀರ್ಮಾನ ಗಳನ್ನು ಸಮಾಜ ಕಲ್ಯಾಣ ಇಲಾಖೆ ತಪ್ಪದೆ ಅನುಸರಿಸುವಂತೆ ನೋಡಿಕೊಳ್ಳುವುದಾಗಿ ಭರವಸೆಯಿತ್ತರು.

ದೊಡ್ಡಬಳ್ಳಾಪುರದ ಶ್ರೀ ನೀಲಕಂಠಪ್ಪನವರು ಶ್ರೀ ಕೆ. ಹನುಮಂತಯ್ಯನವರ ಕಾರ್ಯವನ್ನು ಪ್ರಶಂಸಿಸಿ ಸ್ಮಾರಕ ಭವನದ ನಿರ್ಮಾಣ ಸುಗಮವಾಗಿ ನಡೆಯಲಿ ಎಂದು ಹಾರೈಸಿದರು.

ಹೀಗೆ, ಅಂದಿನ ಸಭೆಗೆ ಬಂದಿದ್ದ ಗಣ್ಯರೆಲ್ಲರೂ ಶಿವಪುರ ಸ್ಮಾರಕ ಭವನದ ನಿರ್ಮಾಣ ಅಗತ್ಯವೆಂದು ಸ್ಪಷ್ಟಪಡಿಸಿ ತಮ್ಮ ಬೆಂಬಲವನ್ನು ವ್ಯಕ್ತಪಡಿಸಿದರು. ಆ ಬೆಂಬಲ ಶ್ರೀ ಹನುಮಂತಯ್ಯನವರಿಗೆ ಇಮ್ಮಡಿಯಾದ ಉತ್ಸಾಹವನ್ನೂ ಕಾರ್ಯ ಪ್ರವೃತ್ತಿಯನ್ನೂ ಉಂಟುಮಾಡಿತು. ಸ್ಮಾರಕ ಭವನದ ನಿರ್ಮಾಣ ಖಚಿತ ವಾಯಿತು.

ಸಾವಿರಾರು ವರ್ಷಗಳವರೆಗೆ ಅನ್ಯರ ದಬ್ಬಾಳಿಕೆಗೆ ಒಳಗಾಗಿದ್ದ ಭಾರತಕ್ಕೆ ಸಂಪೂರ್ಣವಾಗಿ ಸ್ವಾತಂತ್ರ್ಯ ದೊರಕಿದುದು ಭಾರತದ ಇತಿಹಾಸದಲ್ಲೆ ಹೊಸದು. ಭಾರತದಲ್ಲಿ ಪ್ರಜಾಪ್ರಭುತ್ವ ಸ್ಥಾಪಿತವಾದುದೂ ಹೊಸ ವಿಷಯವೇ. ಸತ್ಯಾಗ್ರಹ ಮತ್ತು ಅಹಿಂಸೆಗಳು ಮಹಾತ್ಮ ಗಾಂಧೀಜಿಯವರು ರೂಪಿಸಿದ ಮಹಿಮಾನ್ವಿತ ಸಾಧನೆಗಳು. ಅವುಗಳನ್ನು ಅಷ್ಟೋ ಇಷ್ಟೋ ಜೀರ್ಣಿಸಿಕೊಂಡು ಆಚರಣೆಗೆ ತಂದ ಕಾಂಗ್ರೆಸ್ಸಿನವರಿಂದ ಮತ್ತು ಇತರ ದೇಶ ಪ್ರೇಮಿಗಳಿಂದ ದೇಶಕ್ಕೆ ಸ್ವಾತಂತ್ರ್ಯ ಬಂದಿತು; ಪ್ರಜಾಪ್ರಭುತ್ವ ಉದಯವಾಯಿತು. ಈ ಮಹಾ ಸಾಧನೆಗೆ ದೇಶೀಯ ಸಂಸ್ಥಾನಗಳ ಪೈಕಿ ಮೈಸೂರು ಸಂಸ್ಥಾನದ ಕೊಡುಗೆ ಅಪಾರವಾದುದು. ಶಿವಪುರ ದಲ್ಲಿ ನಡೆದ ಧ್ವಜಸತ್ಯಾಗ್ರಹ ದೇಶೀಯ ಸಂಸ್ಥಾನಗಳ ಹಾಗೂ ಮೈಸೂರು ಸಂಸ್ಥಾನದ ಇತಿಹಾಸದಲ್ಲಿ ಚಿರಸ್ಮರಣೀಯವಾದ ಘಟನೆ. ಒಂದು ಕಾಲದಲ್ಲಿ ದೇಶೀಯ ಸಂಸ್ಥಾನಗಳ ಚಳವಳಿಯ ಬಗೆಗೆ ನಂಬಿಕೆಯನ್ನೇ ಕಳೆದುಕೊಂಡಿದ್ದ ಮಹಾತ್ಮ ಗಾಂಧೀಜಿಯವರ ಮೆಚ್ಚಿಕೆಯನ್ನೂ ಕೂಡ ಗಳಿಸಿಕೊಂಡ ಅಪರೂಪದ ಸಾಧನೆ. ಅಂತಹ ಇತಿಹಾಸ ಪ್ರಸಿದ್ಧವಾದ ಧ್ವಜಸತ್ಯಾಗ್ರಹದ ಸ್ಮಾರಕದ ಬಗೆಗೆ ಯೋಜನೆಯೊಂದನ್ನು ರೂಪಿಸಿಕೊಂಡಿದ್ದ ಶ್ರೀ ಹನುಮಂತಯ್ಯನವರು, ಅನೇಕ

ಗಣ್ಯರು ಸ್ಮಾರಕ ಭವನದ ಬಗೆಗೆ ಬೆಂಬಲ ಸೂಚಿಸಿದುದರಿಂದ, ಮತ್ತಷ್ಟು ಕಾರ್ಯೋನ್ಮುಖರಾಗಲು ಉತ್ತೇಜನ ನೀಡಿದಂತಾಯಿತು. ನಿರ್ಮಾಣವಾಗಲಿರುವ ಸ್ಮಾರಕ ಭವನ ಸಾಂಕೇತಿಕವಾಗಿ ಕಲಾತ್ಮಕವಾಗಿ ಜನರನ್ನು ಆಕರ್ಷಿಸುವಂತಿರಬೇಕು. ಅದರ ಪ್ರತಿಯೊಂದು ಭಾಗವೂ ಉಪಯೋಗವಾಗಬೇಕು. ಅದರಿಂದ ಮುಂದಿನ ಜನಾಂಗ ಸ್ಫೂರ್ತಿ ಪಡೆಯಬೇಕು. ಸ್ವಾತಂತ್ರ್ಯ ಪ್ರಾಪ್ತಿಗೋಸ್ಕರ ನಮ್ಮ ಹಿರಿಯರು ಮಾಡಿದ ಸಾಹಸ, ತ್ಯಾಗ, ಬಲಿದಾನಗಳು, ತೋರಿದ ದೇಶಭಕ್ತಿ, ನಿಷ್ಠೆಗಳು ಅಚ್ಚ ಹಸಿರಾಗಿ ಕಂಗೊಳಿಸಬೇಕು ಎಂದು ಶ್ರೀ ಹನುಮಂತಯ್ಯನವರು ಸ್ಮಾರಕ ಭವನದ ಬಗೆಗೆ ರೂಪು ರೇಖೆಗಳನ್ನು ಕಲ್ಪಿಸಿಕೊಂಡರು. ಆ ಕಲ್ಪನೆಗಳು ಕಾರ್ಯಗತವಾಗಲು ಪೂರ್ವ ಸಿದ್ಧತೆಗಳನ್ನು ಮಾಡಿಕೊಂಡರು.

ಸ್ಮಾರಕ ಭವನದ ನಿರ್ಮಾಣ ಖಚಿತವಾದಮೇಲೆ, ಶಿವಪುರದಲ್ಲಿ ಧ್ವಜಸತ್ಯಾಗ್ರಹ ನಡೆದ ಸ್ಥಳದಲ್ಲಿ ಅಗತ್ಯವಾದ ಜಮೀನನ್ನು ಪಡೆದುಕೊಳ್ಳಲು ಶ್ರೀ ಹನುಮಂತಯ್ಯನವರು ಪತ್ರವ್ಯವಹಾರವನ್ನು ನಡೆಸಿದರು. ಸ್ಮಾರಕ ಭವನಕ್ಕೆ ಜಮೀನು ಕೊಡುವ ಬಗೆಗೆ ವಿಚಾರ ವಿನಿಮಯ ಮಾಡಲು, ದಿನಾಂಕ 8-5-1974 ರಂದು ಮದ್ದೂರಿನ ಪುರಸಭಾ ಕಚೇರಿಯಲ್ಲಿ ಅಂದಿನ "ಮದ್ದೂರು ಮುನಿಸಿಪಲ್ ಕಮಿಟಿ"ಯ ಸಭೆ ನಡೆಯಿತು. ಮದ್ದೂರು ತಾಲೂಕಿನ ಅಂದಿನ ತಹಶೀಲ್ದಾರ್ ಮತ್ತು ಅಡ್ಮಿನಿಸ್ಟ್ರೇಟರ್ಆಗಿದ್ದ ಶ್ರೀ ಎಂ. ಮಲ್ಲಯ್ಯನವರು ಸಭೆಯ ಅಧ್ಯಕ್ಷತೆ ವಹಿಸಿದ್ದರು. ಕಮಿಟಿಯ ಸದಸ್ಯರು ಬಹಳ ಹೊತ್ತು ಚರ್ಚೆ ನಡೆಸಿದ ಮೇಲೆ ಹಿಂದೆ ಧ್ವಜಸತ್ಯಾಗ್ರಹ ನಡೆದಿದ್ದ ಸ್ಥಳದಲ್ಲಿ 2 ಎಕರೆ 35 ಗುಂಟೆ ಜಮೀನನ್ನು ಉಚಿತವಾಗಿ ಸ್ಮಾರಕ ಭವನಕ್ಕೆ ಬಿಟ್ಟುಕೊಡಲು ತೀರ್ಮಾನಿಸಿ ಜಮೀನನ್ನು ಮಂಜೂರು ಮಾಡಿದರು. ಆಗ "ಮದ್ದೂರು ಮುನ್ಸಿಪಲ್ ಕಮಿಟಿ" ಯಲ್ಲಿ ಈ ಕೆಳಕಂಡವರು ಸದಸ್ಯರಾಗಿದ್ದರು. ಶ್ರೀಗಳಾದ ವೆಂಕಟಯ್ಯ, ಎಂ. ಪಿ. ಮಾದಯ್ಯ, ಮಿರ್ಜಾ ಇಸ್ಮಾಯಿಲ್ ಬೇಗ್, ಕೆ. ಎನ್. ರಂಗಪ್ಪ, ಎಂ. ವಿಷಕಂಠಯ್ಯ, ಎಂ. ಶ್ರೀನಿವಾಸ ಶೆಟ್ಟಿ, ಬೆಟ್ಟಯ್ಯ, ಕೆಂಪಯ್ಯ, ರಾಮೇಗೌಡ, ಎನ್. ನಂಜುಂಡಪ್ಪ, ಬಸವೇಗೌಡ, ಕೆ. ಎಂ. ಚೌಡೇಗೌಡ, ಎಂ. ಚನ್ನಪ್ಪ, ಕೃಷ್ಣಪ್ಪ, ಪುಟ್ಟಮಾದಯ್ಯ. ಬಿ. ಆರ್. ಶ್ರೀನಿವಾಸಮೂರ್ತಿ, ಎಂ. ಮಲ್ಲಯ್ಯ (ಆಡಳಿತಾಧಿಕಾರಿ) ಮತ್ತು ಶ್ರೀಮತಿ ಲಕ್ಷ್ಮಮ್ಮ.

ಅನಂತರ ಮದ್ದೂರು ಪುರಸಭೆಯ ಅಧ್ಯಕ್ಷರಾಗಿ ಆಯ್ಕೆಯಾದ ಶ್ರೀ ಕೆ. ಟಿ. ಚಂದು ಮತ್ತು ಅವರ ಸಹೋದ್ಯೋಗಿಗಳು ಸ್ಮಾರಕ ಭವನದ ಕೆಲಸಕ್ಕೆ ಬಹಳವಾಗಿ ಸಹಾಯ ಮಾಡಿದರು. ಸ್ಮಾರಕ ಭವನದ ಕಾರ್ಯಸಾಧನೆಗಾಗಿ ಶ್ರೀ ಕೆ. ಹನುಮಂತಯ್ಯನವರು "ಶಿವಪುರ ಧ್ವಜ ಸತ್ಯಾಗ್ರಹ ಸ್ಮಾರಕ ಟ್ರಸ್ಟ್" ಅನ್ನು ಸ್ಥಾಪಿಸಿದರು. ಶ್ರೀ ಕೆ. ಹನುಮಂತಯ್ಯನವರು ಇದರ ಅಧ್ಯಕ್ಷರು. ಶ್ರೀ ಡಿ. ದೇವರಾಜ ಅರಸ್ ಮತ್ತು ಶ್ರೀ ಎಚ್. ಎಂ. ಚನ್ನಬಸಪ್ಪನವರು ಇದರ ಧರ್ಮದರ್ಶಿಗಳು. ಅನಂತರ ಶ್ರೀ ಸಚ್ಚಿದಾನಂದ ಅವರನ್ನು ಟ್ರಸ್ಟಿಗೆ ಸದಸ್ಯರನ್ನಾಗಿ

ಆಯ್ಕೆ ಮಾಡಿಕೊಳ್ಳಲಾಯಿತು. ದಿನಾಂಕ 28-2-1975 ರಂದು ಬರೆಯಿಸಿದ ಈ ಟ್ರಸ್ಟನ್ನು ದಿನಾಂಕ 4-4-1975 ರಂದು ರಿಜಿಸ್ಟ್ರೇಷನ್ ಮಾಡಿಸಲಾಯಿತು. ರಿಜಿಸ್ಟ್ರೇಷನ್ ಮಾಡಿಸಿದಾಗ ಈ ಉದ್ದೇಶಕ್ಕಾಗಿಯೇ ಸಾರ್ವಜನಿಕರಿಂದ ಶ್ರೀ ಹನುಮಂತಯ್ಯನವರು ಸಂಗ್ರಹಿಸಿದ್ದ "ಸ್ವಾತಂತ್ರ್ಯ ಸಮರ ವೀರರ ಸ್ಮಾರಕ ನಿಧಿ" ಯಿಂದ ಒಂದು ಸಾವಿರ ರೂಪಾಯಿಗಳನ್ನು ತೆಗೆದು, ಪ್ರಾರಂಭದ ಠೇವಣಿ ಹಣವನ್ನು ಕಟ್ಟಿದರು.

ಸಹಾಯ ಧನ

ಸ್ಮಾರಕ ಭವನದ ನಿರ್ಮಾಣಕ್ಕೆ ಮೊದಲು ಸಹಾಯ ನೀಡಿದ ಕೀರ್ತಿ ಬೆಂಗಳೂರು ನಗರ ಕಾರ್ಪೊರೇಷನ್ನಿಗೆ ಸಲ್ಲಬೇಕು. ಹಲವು ಲಕ್ಷ ರೂಪಾಯಿಗಳ ಖರ್ಚಿನ ಸ್ಮಾರಕ ಭವನಕ್ಕೆ ಸಹಾಯ ಮಾಡಬೇಕೆಂದು ಶ್ರೀ ಹನುಮಂತಯ್ಯನವರು ಕೇಳಿಕೊಂಡಾಗ ಕಾರ್ಪೊರೇಷನ್ನಿನ ಪದಾಧಿಕಾರಿಗಳು ಹೃತ್ಪೂರ್ವಕವಾಗಿ ಸಹಾಯ ಮಾಡಲು ಮುಂದೆ ಬಂದರು. ಬೆಂಗಳೂರು ನಗರ ಕಾರ್ಪೊರೇಷನ್ನಿನಿಂದ 5 ಲಕ್ಷ ರೂಪಾಯಿ ಸಹಾಯಧನ ದೊರೆಯಿತು. ಶ್ರೀಯುತರಾದ ಜೆ. ಲಿಂಗಯ್ಯ, ತಿವಾರಿ, ಟಿ. ಡಿ. ನಾಗಣ್ಣ ಮೊದಲಾದವರು ಸಹಾಯಧನದ ಮಂಜೂರಾತಿಗೆ ಕಾರಣರಾದರು. ಶ್ರೀ ಜೆ. ಲಿಂಗಯ್ಯನವರು ಸ್ಮಾರಕ ಭವನದ ನಿರ್ಮಾಣದಲ್ಲಿ ಮೊದಲಿಂದ ಕೊನೆಯ ವರೆಗೆ ಆಸಕ್ತಿ ತೋರಿಸಿದರು.

ಕರ್ನಾಟಕ ರಾಜ್ಯ ಸರ್ಕಾರದ ಸಹಾಯವೂ ಧಾರಾಳವಾಗಿ ದೊರೆಯಿತು. ಸರ್ಕಾರ 5 ಲಕ್ಷ ರೂಪಾಯಿಗಳನ್ನು ಸಹಾಯಧನವಾಗಿ ಮಂಜೂರು ಮಾಡಿತು. ಸರ್ಕಾರದ ಪರವಾಗಿ ಮುಖ್ಯಮಂತ್ರಿ ಶ್ರೀ ಡಿ. ದೇವರಾಜ ಅರಸ್ ಮತ್ತು ಅವರ ಸಹೋದ್ಯೋಗಿಗಳು ನಿಷ್ಪಕ್ಷಪಾತವಾಗಿ, ಸರ್ವಾನುಮತದಿಂದ ಸಹಾಯ ಧನಕ್ಕೆ ಒಪ್ಪಿಗೆ ನೀಡಿದ್ದು ವಿಶೇಷ ಸಂಗತಿಯಾಗಿದೆ. ಮುಖ್ಯಮಂತ್ರಿ ಶ್ರೀ ಡಿ. ದೇವರಾಜ ಅರಸುರವರು ಮತ್ತೂ ಐದು ಲಕ್ಷ ರೂಪಾಯಿಗಳನ್ನು, ಎರಡನೆಯ ಕಂತಾಗಿ ಸರ್ಕಾರದಿಂದ ಕೊಡಿಸಿದರು. ಅಲ್ಲದೆ ಭವನದ ಸುತ್ತಲೂ ಉದ್ಯಾನವನವನ್ನು ನಿರ್ಮಿಸಲು, ಒಂದು ಲಕ್ಷ ಆರು ಸಾವಿರ ರೂಪಾಯಿಗಳ ಕೊಡುಗೆಯನ್ನು ಮಂಜೂರು ಮಾಡಿದರು. ಕರ್ನಾಟಕ ಸರಕಾರದಿಂದ ಈ ಸ್ಮಾರಕಕ್ಕೆ ಹನ್ನೊಂದು ಲಕ್ಷ ಆರು ಸಾವಿರ ರೂಪಾಯಿಗಳ ದಾನ ದೊರೆತಂತಾಯಿತು.

ಈ ಮೊತ್ತಗಳು ನೇರವಾಗಿ, ಲೋಕೋಪಯೋಗಿ ಇಲಾಖೆಯ ಮಂಡ್ಯ ವಿಭಾಗದ ಎಕ್ಸಿಕ್ಯುಟಿವ್ ಎಂಜಿನಿಯರಿಗೆ ಸಂದಾಯವಾಯಿತು. ಸರ್ಕಾರದ ಆಜ್ಞೆಯಂತೆ ಆ ಎಕ್ಸಿಕ್ಯುಟಿವ್ ಎಂಜಿನಿಯರಿಂಗ್ ವಿಭಾಗವು ಕಟ್ಟಡದ ಕೆಲಸವನ್ನು ಪ್ರಾರಂಭಿಸಿ ಮುಗಿಸಿದರು. ಉದ್ಯಾನವನದ ಕೆಲಸವನ್ನು, ತೋಟದ ಇಲಾಖೆಯವರು ಮಾಡಿದರು.

ಬೆಂಗಳೂರು ನಗರ ಕಾರ್ಪೊರೇಷನ್ ಮತ್ತು ರಾಜ್ಯ ಸರ್ಕಾರ ಮೊದಲು ಸಹಾಯ ಧನ ನೀಡದಿದ್ದರೆ ಸ್ಮಾರಕ ಭವನದ ನಿರ್ಮಾಣ ಸುಲಭವಾಗುತ್ತಿರಲಿಲ್ಲ.

ಸ್ಮಾರಕ ಭವನದ ಕಲ್ಪನೆ

ಸ್ಮಾರಕ ಭವನದ ರೂಪರೇಷೆ ಸಂಪೂರ್ಣವಾಗಿ ಶ್ರೀ ಹನುಮಂತಯ್ಯನವರ ಕಲ್ಪನೆಯಿಂದ ಮೂಡಿತು. ಹಲವು ದೇಶಗಳಲ್ಲಿ ಸಂಚಾರ ಮಾಡಿ, ಅಪಾರ ಸಂಖ್ಯೆಯ ನವೀನ ಮಾದರಿಯ ಕಟ್ಟಡಗಳನ್ನು ಕಣ್ಣಾರೆ ಕಂಡಿರುವ ಶ್ರೀಯುತರಿಗೆ ಹೊಸ ಮಾದರಿಯ ಹೊಸ ಸೌಂದರ್ಯದ ಕಲಾತ್ಮಕ ಕಟ್ಟಡಗಳನ್ನು ರೂಪಿಸುವುದು ಹುಟ್ಟು ಗುಣವಾಗಿದೆ. ವಿಧಾನಸೌಧದ ಒಳ ಹಾಗೂ ಹೊರ ಆವರಣದಲ್ಲಿ ಕಂಡುಬರುವ ಕಲಾತ್ಮಕವಾದ ಕುಸುರಿ ಕೆಲಸದಲ್ಲಿ ಶ್ರೀಯುತರ ಕಲ್ಪನೆಯ ಫಲವೂ ಸಾಕಷ್ಟು ಅಡಕವಾಗಿರುವುದು ಇದಕ್ಕೆ ಸಾಕ್ಷಿಯಾಗಿದೆ.

ಕಟ್ಟಡದ ರೂಪರೇಷೆಗಳನ್ನು ಬಹಳ ದಿನಗಳವರೆಗೆ ಯೋಚಿಸಿ ಅದರಂತೆ ಕೃತಿಗಿಳಿಸಲು ಎಂಜನಿಯರುಗಳಿಗೆ ಸೂಚನೆ ಕೊಟ್ಟರು. ಅವರ ಕಲ್ಪನೆಯ ಸೂಚನೆಗಳ ಪ್ರಕಾರ ವಾಸ್ತುಶಿಲ್ಪಿ ಶ್ರೀಮತಿ ಜಮುನ ಅವರು ಸ್ಮಾರಕ ಭವನದ ನೀಲಿ ನಕ್ಷೆಯನ್ನು ತಯಾರಿಸಿದರು. ಇವರಿಗೆ ಐದು ಸಾವಿರ ರೂಪಾಯಿಗಳನ್ನು ಗೌರವ ಧನವಾಗಿ ಕೊಡಲಾಯಿತು. ಅನಂತರವೂ ಸಾಕಷ್ಟು ಚಿಂತನೆ, ಪರಿವರ್ತನೆ ನಡೆಯಿತು.

ಅಂತಿಮವಾಗಿ, ತಮ್ಮ ಕಲ್ಪನೆಗಳಂತೆ ಮೊದಲಿನ ಕರಡು ಪ್ರತಿಯನ್ನು ಪರಿಷ್ಕರಿಸಿ ಶುದ್ಧ ನಕ್ಷೆಯನ್ನು ತಯಾರಿಸುವ ಕೆಲಸವನ್ನು ಶ್ರೀ ಹನುಮಂತಯ್ಯನವರು ಇಂಡೋಸ್ವಿಸ್ ಕಾರ್ಪೋರೇಷನ್ನಿನ ಎಂಜನಿಯರಾದ ಶ್ರೀ ಲಕ್ಷ್ಮಣ್ ಮತ್ತು ಶ್ರೀ ಪವಾರ್ ಅವರಿಗೆ ವಹಿಸಿದರು. ಈ ಇಬ್ಬರು ಎಂಜನಿಯರುಗಳೂ ಶ್ರೀ ಹನುಮಂತಯ್ಯನವರ ಕಲ್ಪನೆಯ ಎಲ್ಲ ಅಂಶಗಳೂ ಮೂಡುವಂತೆ ಶ್ರಮಿಸಿ ಶುದ್ಧ ನಕ್ಷೆಯನ್ನು ಉಚಿತವಾಗಿ ಸಿದ್ಧಪಡಿಸಿಕೊಟ್ಟರು. ಅಲ್ಲದೆ ಕಟ್ಟಡದ ಕೆಲಸವನ್ನು ನೋಡಲು ಆಗಾಗ್ಗೆ ಹೋಗಿ ಸಲಹೆಗಳನ್ನಿತ್ತು ಸಹಾಯ ಮಾಡಿದರು. ಈ ಎಲ್ಲ ಕೆಲಸಗಳನ್ನು ಇವರಿಬ್ಬರೂ ಉಚಿತವಾಗಿ ಮಾಡಿ ಸ್ಮಾರಕ ಭವನಕ್ಕೆ ತಮ್ಮ ಸೇವೆಯನ್ನು ಸಲ್ಲಿಸಿದ್ದಾರೆ. ಇವರು ಇಂಡೋಸ್ವಿಸ್ ಕಾರ್ಪೊರೇಷನ್ ನೌಕರರು. ಅದರ ಮಾಲೀಕರಾದ ಶ್ರೀ ಪಾಪಿರೆಡ್ಡಿಯವರ ಅಪ್ಪಣೆ ಮೇರೆಗೆ ಸೇವೆಯನ್ನು ಸಲ್ಲಿಸಿದರು. ಇಂಡೋಸ್ವಿಸ್ ಕಾರ್ಪೊರೇಷನ್ ಮಾಲೀಕರಾದ ಶ್ರೀ ಪಾಪಿರೆಡ್ಡಿಯವರ ಸಹಾಯ ಸ್ಮರಣೀಯವಾಗಿದೆ.

ನಿರ್ಮಾಣ ಕಾರ್ಯ

ಆಡಂಬರ ಮತ್ತು ದುಂದು ವೆಚ್ಚವನ್ನು ತಪ್ಪಿಸಲು ಸಂಪ್ರದಾಯಬದ್ಧವಾದ ಶಂಕುಸ್ಥಾಪನೆಯ ಕಾರ್ಯವನ್ನು ನಡೆಸಲಿಲ್ಲ. ಸಂಗ್ರಹವಾದ ಹಣವನ್ನು ಪೋಲಾ

ಗದಂತೆ ಹಿಡಿತವಾಗಿ ಬಳಸಬೇಕಾಗಿದ್ದುದರಿಂದ ನಿರ್ಮಾಣದ ಕೆಲಸವನ್ನು ಖಾಸಗಿ ಕಂಟ್ರಾಕ್ಟರಿಗೆ ವಹಿಸಲಿಲ್ಲ. ವಿಧಾನಸೌಧವನ್ನು ಸರ್ಕಾರ ಹೇಗೆ ತಾನೇ ಆಸಕ್ತಿವಹಿಸಿ ನಿರ್ಮಾಣ ಮಾಡಿತೋ ಅದೇ ರೀತಿಯಲ್ಲಿ ಸ್ಮಾರಕ ಭವನದ ನಿರ್ಮಾಣ ಮಾಡಲು ಶ್ರೀ ಹನುಮಂತಯ್ಯನವರು ಉದ್ದೇಶಿಸಿದರು. ಅದರಂತೆ ಸರ್ಕಾರದೊಡನೆ ಪತ್ರ ವ್ಯವಹಾರ ನಡೆಸಿದರು. ಆಗ ಪಿ. ಡಬ್ಲ್ಯು. ಡಿ. ಮಂತ್ರಿಗಳಾಗಿದ್ದ ಶ್ರೀ ಹೆಚ್. ಎಂ. ಚೆನ್ನಬಸಪ್ಪನವರು ಈ ವಿಷಯದಲ್ಲಿ ಹೆಚ್ಚಿನ ಮುತುವರ್ಜಿ ವಹಿಸಿದರು. ಪಿ. ಡಬ್ಲ್ಯು. ಡಿ. ಇಲಾಖೆಯವರೇ ಸ್ಮಾರಕ ಭವನವನ್ನು ನಿರ್ಮಿಸಲು ಆಜ್ಞೆ ಹೊರಡಿಸಿದರು. ಕಾನೂನಿನ ಪ್ರಕಾರ ಸರ್ಕಾರದವರು ಕಟ್ಟಡಗಳನ್ನು ನಿರ್ಮಿಸಿದರೆ ಖರ್ಚಿನ ಮೇಲೆ ಶೇಕಡ 15 ರಂತೆ ಆದಾಯವನ್ನು ಪಡೆದುಕೊಳ್ಳುತ್ತಾರೆ. ಶ್ರೀ ಹನುಮಂತಯ್ಯನವರ ಕೋರಿಕೆಯಂತೆ ಈ ಆದಾಯದ ಹಣವನ್ನು ತೆಗೆದುಕೊಳ್ಳದೆ ಉಚಿತವಾಗಿ ಕೆಲಸ ಮಾಡಿಸಿಕೊಡಲು ಸರ್ಕಾರದ ಪರವಾಗಿ ಶ್ರೀ ಚೆನ್ನಬಸಪ್ಪನವರು ಭರವಸೆ ನೀಡಿ ಅದರಂತೆಯೇ ನಡೆದುಕೊಂಡರು. ಇದರಿಂದ ಸಾಕಷ್ಟು ಹಣ ಉಳಿತಾಯವಾಯಿತು.

ಪ್ರಾರಂಭದಿಂದ ಕೊನೆಯವರೆಗೂ ಕಟ್ಟಡದ ನಿರ್ಮಾಣ ಕಾರ್ಯದ ಪ್ರತಿಯೊಂದು ಘಟ್ಟದಲ್ಲೂ ಶ್ರೀ ಹನುಮಂತಯ್ಯನವರು ಮೇಲ್ವಿಚಾರಕರಾಗಿದ್ದರು. ಒಂದು ತಿಂಗಳಿಗೆ ಎರಡು ಮೂರು ಸಲ ಸ್ಥಳಕ್ಕೆ ಹೋಗಿ ಆಗಿರುವ ಆಗುತ್ತಿರುವ ಕೆಲಸವನ್ನು ಕಣ್ಣಾರೆ ನೋಡಿ ಸಲಹೆ ಸೂಚನೆಗಳನ್ನು ಕೊಡುತ್ತಿದ್ದರು. ಇದರಿಂದ ಅಚ್ಚುಕಟ್ಟಾಗಿ ಕೆಲಸ ನಡೆಯಲು ಅನುವಾಯಿತು. ಕಟ್ಟಡದ ವೀಕ್ಷಣೆಗೆ ಶ್ರೀ ಹನುಮಂತಯ್ಯನವರು ತಮ್ಮ ಸ್ವಂತ ಖರ್ಚಿನಲ್ಲಿ ಹೋಗುತ್ತಿದ್ದರು. ಇದಕ್ಕಾಗಿ ಟ್ರಸ್ಟಿನಿಂದ ಒಂದು ಕಾಸನ್ನೂ ತೆಗೆದುಕೊಳ್ಳಲಿಲ್ಲ.

ಸ್ಮಾರಕ ಭವನದ ನಿರ್ಮಾಣ ಕಾರ್ಯವನ್ನು ಎಕ್ಸಿಕ್ಯೂಟಿವ್ ಎಂಜಿನಿಯರ್ ಶ್ರೀ ಎಸ್. ಹೆಚ್. ಬಸವರಾಜಯ್ಯ, ಅಸಿಸ್ಟೆಂಟ್ ಎಂಜಿನಿಯರ್ ಶ್ರೀ ಕೆ.ಜಿ. ರಾಮದಾಸ್ ಮತ್ತು ಜೂನಿಯರ್ ಎಂಜಿನಿಯರ್ ಶ್ರೀ ಟಿ. ತಿಮ್ಮಯ್ಯನವರು ನಿರ್ವಹಿಸಿದರು. ಕೊನೆಯ ಘಟ್ಟದಲ್ಲಿ ಎಕ್ಸಿಕ್ಯುಟಿವ್ ಎಂಜಿನಿಯರ್ ಶ್ರೀ ಎಂ.ಬಿ. ಸಿದ್ದಪ್ಪ ಮತ್ತು ಅಸಿಸ್ಟೆಂಟ್ ಎಂಜಿನಿಯರ್ ಶ್ರೀ ಎಸ್. ನಾಗಪ್ಪನವರು ನಿರ್ಮಾಣ ಕಾರ್ಯವನ್ನು ಆಗುಮಾಡಿದರು. ಜೂನಿಯರ್ ಎಂಜಿನಿಯರ್ ಶ್ರೀ ಟಿ. ತಿಮ್ಮಯ್ಯನವರು ಪ್ರಾರಂಭದಿಂದ ಮುಕ್ತಾಯದವರೆಗೆ ನಿರ್ಮಾಣ ಕಾರ್ಯವನ್ನು ಬಹಳ ಆಸಕ್ತಿಯಿಂದ ಶ್ರದ್ಧೆಯಿಂದ ನೋಡಿಕೊಂಡರು.

ಟ್ರಸ್ಟಿನ ಪರವಾಗಿ ಕಟ್ಟಡದ ಉಸ್ತುವಾರಿ ನೋಡಿಕೊಳ್ಳಲು ಒಬ್ಬ ಪ್ರಾಮಾಣಿಕ ವ್ಯಕ್ತಿಯ ಅಗತ್ಯವಿತ್ತು. ಲಾಕಪ್ಪನ ಹಳ್ಳಿಯ ಶ್ರೀ ಕಪನಯ್ಯನವರು ಆ ಅಗತ್ಯವನ್ನು ಪೂರೈಸಿದರು. ಶ್ರೀಯುತರು ಸರಳಜೀವಿಗಳು, ಉತ್ಸಾಹಶಾಲಿಗಳು, ದೇಶ

ಭಕ್ತರು. ಅವರು ಸ್ಥಳದಲ್ಲೇ ಇದ್ದುಕೊಂಡು ಕಟ್ಟಡದ ಉಸ್ತುವಾರಿಯನ್ನು ನೋಡಿಕೊಂಡರು. ಶ್ರೀ ಹನುಮಂತಯ್ಯನವರು, ಕೆಂಗಲ್ ದೇವಸ್ಥಾನ ಕಟ್ಟುವಾಗಲೂ, ಇವರನ್ನು ಮೇಲ್ವಿಚಾರಕರನ್ನಾಗಿ ನೇಮಿಸಿದ್ದರು. ಶ್ರೀ ಕಪನಯ್ಯನವರು ಪ್ರಾಮಾಣಿಕತೆಗೆ, ನಿಷ್ಠೆಗೆ ಹೆಸರಾದ ವ್ಯಕ್ತಿ. ಇವರು ಸ್ವಾತಂತ್ರ್ಯ ಹೋರಾಟಗಾರರೂ ಹೌದು.

ಸ್ಮಾರಕ ಭವನದ ವಿವರಗಳು ಹೀಗಿವೆ: ಸ್ಮಾರಕ ಭವನದ ನಿವೇಶನ ಬೆಂಗಳೂರು—ಮೈಸೂರು ಹೆದ್ದಾರಿಯ 79 ನೆಯ ಕಿಲೋಮೀಟರಿನಲ್ಲಿದೆ. ಇದರ ವಿಸ್ತೀರ್ಣ: ಪೂರ್ವ ಪಶ್ಚಿಮ 372 ಅಡಿ, ಉತ್ತರ—ದಕ್ಷಿಣ 375 ಅಡಿ ಇದೆ. ಈ ನಿವೇಶನದ ಪೂರ್ವಕ್ಕೆ ಬೆಂಗಳೂರು—ಮೈಸೂರು ಹೆದ್ದಾರಿ. ಪಶ್ಚಿಮಕ್ಕೆ 20 ಅಡಿ ರಸ್ತೆ, ದಕ್ಷಿಣಕ್ಕೆ 17 ಅಡಿ ಅಗಲದ ರಸ್ತೆ, ಉತ್ತರಕ್ಕೆ ಮದ್ದೂರು ರೈಲ್ವೆ ನಿಲ್ದಾಣಕ್ಕೆ ಹೋಗುವ ರಸ್ತೆ ಇದೆ. ಶಿವಪುರ ಸ್ಮಾರಕ ಭವನ ದಕ್ಷಿಣ ಭಾರತದಲ್ಲಿಯೇ ವಿಶಿಷ್ಟವಾದ ಕಟ್ಟಡವಾಗಿದೆ. ಕಟ್ಟಡವು ವೃತ್ತಾಕಾರವಾಗಿದೆ.

ಕಟ್ಟಡವು, ಹೊರಭಾಗದಲ್ಲಿ 24 ಇನ್‌ಕ್ಲೈಂಡ್ ಕಾಂಕ್ರೀಟ್ ಕಂಬಗಳಿಂದಲೂ ಒಳಭಾಗದಲ್ಲಿ 24 ಇನ್‌ಕ್ಲೈಂಡ್ ಕಾಂಕ್ರೀಟ್ ಕಂಬಗಳಿಂದಲೂ 24 ನೇರವಾದ ಕಾಂಕ್ರೀಟ್ ಕಂಬಗಳ ಆಧಾರದಿಂದಲೂ ನಿಂತಿದೆ. ಕಟ್ಟಡದ ಗೋಡೆಯನ್ನು 4 ಅಂಗುಲ ದಪ್ಪದ ಕಾಂಕ್ರೀಟನಿಂದ ತಯಾರಿಸಿದೆ. ಕಟ್ಟಡವು ಭೂಮಿಯ ಮಟ್ಟದಲ್ಲಿ 100 ಅಡಿ ವ್ಯಾಸವೂ 33 ನೆಯ ಅಡಿಯ ಎತ್ತರದಲ್ಲಿ 80 ಅಡಿಯ ವ್ಯಾಸವೂ 42 ನೆಯ ಅಡಿಯ ಎತ್ತರದಲ್ಲಿ 13ಅಡಿ ವ್ಯಾಸವೂ ಉಳ್ಳದ್ದಾಗಿದೆ. ತೊಲೆಗಳನ್ನು 1 ಅಡಿ ದಪ್ಪದ ಕಾಂಕ್ರೀಟ್‌ನಿಂದ ತಯಾರಿಸಿದೆ. 33 ಅಡಿಯ ಎತ್ತರದಿಂದ ಇಳಿಜಾರಾದ ಮೇಲ್ಚಾವಣಿ ಇದೆ. ಇದರಿಂದ 15 ಅಡಿ ಎತ್ತರದ ವರೆಗೆ ಕಟ್ಟಡ ಮೇಲೆ ಹೋಗಿದೆ. ಇದನ್ನು 12 ಕಾಂಕ್ರೀಟ್ ಕಂಬಗಳಿಂದ ಕೆಳಭಾಗದ ಇಳಿಜಾರಿಗೆ ಹೊಂದಿಕೊಳ್ಳುವಂತೆ ಜೋಡಿಸಿದೆ. ಇದರ ಮೇಲುಗಡೆ $6\frac{1}{2}$ ಅಡಿಯ ಗೋಪುರವಿದೆ. ಗೋಪುರದ ಮೇಲ್ಭಾಗ 4 ಅಡಿ ವ್ಯಾಸದ ವಿಸ್ತೀರ್ಣವನ್ನು ಒಳಗೊಂಡಿದೆ. ಗೋಪುರದ ತುದಿಯಲ್ಲಿ $8\frac{1}{4}$ ಅಡಿ ಉದ್ದದ ಧ್ವಜಸ್ತಂಭವಿದೆ. ಗೋಪುರದ ತುದಿಯ ಮೇಲೆ ರಾಷ್ಟ್ರಧ್ವಜವನ್ನು ಹಿಡಿದ ಸತ್ಯಾಗ್ರಹಿಯ ಪ್ರತಿಮೆಯಿದೆ. ಒಟ್ಟು ಕಟ್ಟಡದ ಎತ್ತರ 62 ಅಡಿ. ಬಾವುಟದ ಎತ್ತರವನ್ನು ಲೆಕ್ಕಕ್ಕೆ ತೆಗೆದುಕೊಂಡರೆ $70\frac{1}{4}$ ಅಡಿಯಾಗುತ್ತದೆ.

ಕಟ್ಟಡದ ಒಳ ಆವರಣ 70 ಅಡಿ ವ್ಯಾಸದ ಸಭಾಂಗಣದಿಂದ ಕೂಡಿದೆ. ಹೊರ ಆವರಣ 270 ಅಡಿ ಸುತ್ತಳತೆ ಮತ್ತು $11\frac{1}{2}$ ಅಡಿ ಅಗಲ ಉಳ್ಳದ್ದಾಗಿದೆ. ಒಳಭಾಗದಲ್ಲಿ 10 ಅಡಿ ಮುಂದಕ್ಕೆ ಚಾಚಿಕೊಂಡಿರುವಂತೆ 20 ಅಡಿ ಅಗಲವುಳ್ಳ ಆರ್ಟ್‌ಗ್ಯಾಲರಿ ಇದೆ. ಇದು ಕಟ್ಟಡದ ಒಳಗಡೆ ನೆಲದ ಮಟ್ಟದಿಂದ 11 ಅಡಿ

ಎತ್ತರದಲ್ಲಿ ವರ್ತುಳಾಕಾರವಾಗಿದೆ. ಇದನ್ನು ಸ್ವಾತಂತ್ರ್ಯ ಹೋರಾಟಕ್ಕೆ ಮತ್ತು ಸ್ವಾತಂತ್ರ್ಯ ಯೋಧರಿಗೆ ಸಂಬಂಧಿಸಿದ ವಿವಿಧ ರೀತಿಯ ಭಿತ್ತಿ ಚಿತ್ರಗಳಿಗಾಗಿ ಮೀಸಲ್ಪಟ್ಟಿದೆ. ಇವುಗಳ ರಚನೆಯನ್ನು ಪ್ರಖ್ಯಾತ ಕಲಾವಿಧರಾದ ಶ್ರೀ ಎನ್. ಎಸ್. ಸುಬ್ಬಕೃಷ್ಣ ಅವರಿಗೆ ವಹಿಸಲಾಗಿದೆ. ಕಟ್ಟಡದ 33ನೆಯ ಅಡಿ ಎತ್ತರದಲ್ಲಿ $1\frac{1}{2}$ ಅಡಿಯ ಪ್ಯಾರಾಪಟದ ಮೇಲ್ಭಾಗದಲ್ಲಿ ಸುತ್ತಲೂ ಕಬ್ಬಿಣದ ಸರಳುಗಳಿಂದ ಸ್ವಾತಂತ್ರ್ಯ ಯೋಧರ ಆಕೃತಿಗಳನ್ನು ಮಾಡಿ ಅಲಂಕರಿಸಿದೆ. ಇವು ಕಟ್ಟಡದ ಹೊರಗಡೆ ಸ್ಪಷ್ಟವಾಗಿ ಕಾಣುತ್ತವೆ. ಕಟ್ಟಡದ ಒಳಗಡೆ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಂಬಂಧಿಸಿದ ಗ್ರಂಥಾಲಯಕ್ಕೆ ಅವಕಾಶ ಕಲ್ಪಿಸಿದೆ. ಹೊರಗಡೆಯಿಂದ ನೋಡಿದಾಗ ಇಡೀ ಕಟ್ಟಡ ಗೋಳಾಕಾರವಾಗಿ ಆಕರ್ಷಕವಾಗಿ ಕಾಣುತ್ತದೆ. ಕಟ್ಟಡದ ಸುತ್ತಲೂ ಉದ್ಯಾನವಿದೆ.

ಕಟ್ಟಡದ ಮೇಲ್ಭಾಗದ 42 ಅಡಿಯವರೆಗಿನ ಡಿಸೈನ್ ಮತ್ತು ಮುಕ್ತಾಯದ ಕೆಲಸಗಳನ್ನು ಇಂಡೋಸ್ವಿಸ್ ಕಾರ್ಪೊರೇಷನ್‌ನವರು ಮಾಡಿದರು.

ಸ್ಮಾರಕ ಭವನದ ಮುಂದೆ ಮತ್ತು ಸುತ್ತಲಿನ ಉದ್ಯಾನದ ವಿನ್ಯಾಸವನ್ನು ತೋಟಗಾರಿಕೆ ಇಲಾಖೆಯವರು ಸಿದ್ಧಪಡಿಸಿದರು. ಇದಕ್ಕಾಗಿ ಶ್ರೀ ಹನುಮಂತಯ್ಯನವರು ಕಳಿಸಿದ ನಕ್ಷೆ ಮತ್ತು ಖರ್ಚನ್ನು ಒಪ್ಪಿಕೊಂಡು ಉದ್ಯಾನವನ್ನು ನಿರ್ಮಾಣ ಮಾಡುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಮುಖ್ಯಮಂತ್ರಿ ಶ್ರೀ ಡಿ. ದೇವರಾಜ ಅರಸ್ ಅವರು ಆಜ್ಞೆ ಹೊರಡಿಸಿದರು.

ರಾಜ್ಯ ಸರ್ಕಾರದ ಸಹಾಯ

ಸ್ಮಾರಕ ಭವನ ನಿರ್ಮಾಣ ಕಾರ್ಯದಲ್ಲಿ ರಾಜ್ಯ ಸರ್ಕಾರ ಬಹಳ ಉದಾರವಾಗಿ ನಡೆದುಕೊಂಡಿತು. ಪ್ರಾರಂಭದಲ್ಲಿ 5 ಲಕ್ಷ ರೂಪಾಯಿಗಳನ್ನೂ ಕಟ್ಟಡದ ಕೆಲಸ ಮುಂದುವರಿದಂತೆ ಮತ್ತೆ 5 ಲಕ್ಷ ರೂಪಾಯಿಗಳನ್ನೂ ಸಹಾಯಧನವಾಗಿ ನೀಡಿತು. ಆದಾಯವನ್ನು ಬಯಸದೆ ತನ್ನ ಸಿಬ್ಬಂದಿಯಿಂದಲೇ ನಿರ್ಮಾಣದ ಕೆಲಸ ಮಾಡಿಸಲು ನೆರವಾಯಿತು. ಒಂದು ಲಕ್ಷ ರೂಪಾಯಿಗಳಿಗೆ ಮೀರಿದ ಖರ್ಚಿನ ಉದ್ಯಾನದ ಕಾರ್ಯವನ್ನೂ ಸರ್ಕಾರ ವಹಿಸಿಕೊಂಡಿತು. ಇದಕ್ಕೆಲ್ಲ ಮುಖ್ಯಕಾರಣ ಮುಖ್ಯಮಂತ್ರಿ ಶ್ರೀ ಡಿ. ದೇವರಾಜ ಅರಸ್ ಮತ್ತು ಅವರ ಸಹೋದ್ಯೋಗಿಗಳು. ಅವರ ದೇಶಭಕ್ತಿ, ಸಾರ್ವಜನಿಕ ಸೇವಾಕಾಂಕ್ಷೆ ಮೆಚ್ಚುವಂಥಾದ್ದು. ಸ್ವಾತಂತ್ರ್ಯದ ಮಹತ್ವವನ್ನು ಸಾರುವ ಇಂಥ ಸ್ಮಾರಕ ಭವನದ ಅಗತ್ಯವನ್ನು ಮನಗಂಡಂಥ ಮಹನೀಯರು ಸರ್ಕಾರದ ಉನ್ನತ ಸ್ಥಾನಗಳಲ್ಲಿದ್ದುದರಿಂದ ಅವರಿಂದ ಸುಲಭವಾಗಿ ಸಹಾಯ ಸಹಕಾರಗಳು ದೊರೆಯುವಂತಾಯಿತು.

ಶ್ರೀ ಡಿ. ದೇವರಾಜ ಅರಸುರವರ ಬೆಂಬಲ, ಸಹಾಯಗಳಿಲ್ಲದಿದ್ದರೆ, ಸ್ಮಾರಕ ಭವನದ ಕೆಲಸ ಬಹಳ ದುಸ್ತರವಾಗುತ್ತಿತ್ತು. ಶ್ರೀ ಅರಸುರವರ ಸಹಾಯ ಸಹಕಾರ ಗಳು ಚಿರಸ್ಮರಣೀಯವಾಗಿ ಉಳಿಯುವಂಥವು.

ಧರ್ಮದರ್ಶಿಗಳಲ್ಲೊಬ್ಬರಾದ, ಶ್ರೀ ಸಚ್ಚಿದಾನಂದರವರ ಸೇವೆಯು "ಎಲೆ ಮರೆಯ ಕಾಯಿ"ಯಂಥದು. ಇವರು ಸ್ನೇಹಪರರು, ಕುಶಲಮತಿಗಳು, ಕಾರ್ಯ ಪಟುಗಳು,ಇವರ ಸೇವೆಯು ಮೊದಲಿನಿಂದ ಕೊನೆಯವರೆವಿಗೂ, ಸ್ಮಾರಕ ಭವನಕ್ಕೆ ದೊರೆತುದು ಒಂದು ಸೌಭಾಗ್ಯ. ಶ್ರೀ ಹನುಮಂತಯ್ಯನವರೊಡನೆಯೂ ಶ್ರೀ ದೇವರಾಜ ಅರಸುರವರೊಡನೆಯೂ ಸಮಯೋಚಿತವಾಗಿ ಸಮಾಲೋಚಿಸಿ, ಈ ಸ್ಮಾರಕವು ಕಾರ್ಯರೂಪಕ್ಕೆ ಬರಲು ಬಹಳವಾಗಿ ದುಡಿದರು.

ಸರ್ಕಾರ ಮತ್ತು ಸಾರ್ವಜನಿಕರ ಸಹಾಯದಿಂದ, ಶ್ರೀ ಹನುಮಂತಯ್ಯನವರ ಕರ್ತೃತ್ವ ಮತ್ತು ಮುಂದಾಳುತನದಿಂದ, ಧ್ವಜಸತ್ಯಾಗ್ರಹ ನಡೆದ 40 ವರ್ಷಗಳ ಮೇಲೆ ಚರಿತ್ರಾರ್ಹವಾದ ಶಿವಪುರ ಧ್ವಜಸತ್ಯಾಗ್ರಹ ಸ್ಮಾರಕ ಭವನ ನಿರ್ಮಾಣ ವಾಯಿತು.

ಮಂಗಳ

ಮೈಸೂರು ಸಂಸ್ಥಾನಕ್ಕೆ ಜವಾಬ್ದಾರಿ ಸರಕಾರವನ್ನು ತರಲು ನಾಂದಿ ಹಾಡಿದ, ಅದಕ್ಕಾಗಿ ಹೋರಾಡಲು ಸಾವಿರಾರು ಸತ್ಯಾಗ್ರಹಿಗಳಿಗೆ ಸ್ಫೂರ್ತಿ ನೀಡಿದ, ತನ್ನ ಯಶಸ್ಸಿನ ಪುಣ್ಯಫಲದಿಂದ ಸಾವಿರಾರು ಸತ್ಯಾಗ್ರಹಿಗಳು ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಧುಮುಕುವಂತೆ ಪ್ರೇರಣೆ ತುಂಬಿದ, ಮೈಸೂರು ಕಾಂಗ್ರೆಸ್ಸಿನ ಬೆಳ ವಣಿಗೆಗೆ ಪ್ರಾಣಧಾತುವಾದ ಶಿವಪುರ ಧ್ವಜಸತ್ಯಾಗ್ರಹದ ಚರಿತ್ರೆ ನಮ್ಮ ಮುಂದಿದೆ. ಮೈಸೂರು ರಾಜ್ಯಕ್ಕೆ ಹೊಸ ಆಡಳಿತವನ್ನು, ವಿನೂತನ ಬದುಕನ್ನು ತಂದುಕೊಟ್ಟ ಹೋರಾಟದ ನೆನಪನ್ನು ಚಿರಕಾಲ ನಮ್ಮ ಮೈಮನಗಳಲ್ಲಿ ತುಂಬಿಕೊಳ್ಳಲು ಅನುಕೂಲ ವಾಗುವಂತೆ ಸಾರ್ಥಕವಾದ, ಸಾಂಕೇತಿಕವಾದ ಶಿವಪುರ ಧ್ವಜಸತ್ಯಾಗ್ರಹದ ಸ್ಮಾರಕ ಭವನ ಸಿದ್ಧವಾಗಿದೆ. ಒಂದು : ಸ್ವಾತಂತ್ರ್ಯ ಸಂಪಾದನೆ ಎಷ್ಟು ಕಷ್ಟಕರವಾದುದು, ಗುರುತರವಾದುದು ಎಂಬುದನ್ನು ಮನದಟ್ಟು ಮಾಡುವ ಕುರುಹು. ಇನ್ನೊಂದು: ಗಳಿಸಿದ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳುವುದು, ಸ್ವಾತಂತ್ರ್ಯಕ್ಕಾಗಿ ಹೋರಾಡಿ ದವರನ್ನು ಸ್ಮರಿಸಿಕೊಳ್ಳುವುದು ಎಷ್ಟು ಅಗತ್ಯ ಎಂಬುದನ್ನು ಎತ್ತಿತೋರಿಸುವ ದ್ಯೋತಕ. ಇವೆರಡೂ ನಮ್ಮ ಇಂದಿನ ಮುಂದಿನ ಪೀಳಿಗೆಗೆ ಸ್ಫೂರ್ತಿಯ ಚಿಲುಮೆ ಗಳಾಗಿವೆ; ಸಂಸ್ಕೃತಿಯ ದಾಖಲೆಗಳಾಗಿವೆ.

ಕೋಟಿ ಕೋಟಿ ಜನರ ಹೃದಯದಲ್ಲಿ ದಾಸ್ಯ ವಿಮೋಚನೆಯ ಸ್ಪಂದನವನ್ನು ಮಿಡಿಸಿದ ಸ್ವಾತಂತ್ರ್ಯ ಗೀತೆಯೊಂದಿಗೆ ಶಿವಪುರ ಧ್ವಜಸತ್ಯಾಗ್ರಹದ ಚರಿತ್ರೆಯನ್ನು ಮುಗಿಸುತ್ತೇನೆ :

ವಂದೇ ಮಾತರಂ

ವಂದೇ ಮಾತರಂ
ಸುಜಲಾಂ ಸುಫಲಾಂ
ಮಲಯಜಶೀತಲಾಂ
ಸಸ್ಯಶ್ಯಾಮಲಾಂ
ಮಾತರಂ.

ಶುಭ್ರಜ್ಯೋತ್ಸ್ನಾ ಪುಲಕಿತಯಾಮಿನೀಂ
ಫುಲ್ಲಕುಸುಮಿತ ದ್ರುಮದಲ ಶೋಭಿನೀಂ
ಸುಹಾಸಿನೀಂ ಸುಮಧುರ ಭಾಷಿಣೀಂ
ಸುಖದಾಂ ವರದಾಂ ಮಾತರಂ.

ಸಪ್ತಕೋಟಿಕಂಠ ಕಲಕಲನಿನಾದಕಲಾಲೀ
ದ್ವಿಸಪ್ತಕೋಟಿ ಭುಜೈರ್ಧೃತಖರವಾಲೀ
ಅಬಲಾ ಕೇನ ಮಾ ಏತ ಬಲೀ.

ಬಹುಬಲ ಧಾರಿಣೀಂ
ನಮಾಮಿ ತಾರಿಣೀಂ
ರಿಪುದಲವಾರಿಣೀಂ
ಮಾತರಂ.

ತುಮಿ ವಿದ್ಯಾ ತುಮಿ ಧರ್ಮ
ತುಮಿ ಹೃದಿ ತುಮಿ ಧರ್ಮ
ತ್ವಂ ಹಿ ಪ್ರಾಣಾ : ಶರೀರೇ
ಬಾಹುತೇ ತುಮಿ ಮಾಶಕ್ತಿ
ಹೃದಯೇ ತುಮಿ ಮಾಭಕ್ತಿ
ತೋಮಾರ ಈ ಪ್ರತಿಮಾ ಗಡಿ
ಮಂದಿರೇ ಮಂದಿರೇ.

ಅನುಬಂಧಗಳು

೧. ಸಹಾಯಕ ಸಾಹಿತ್ಯ

ಗ್ರಂಥಗಳು

1. ಆರಾಧ್ಯ, ಆರ್. ಎಸ್.

ಮೈಸೂರು ಕಾಂಗ್ರೆಸ್ : ತುಮಕೂರು ವಿಶೇಷಾಧಿವೇಶನ ಸಂಚಿಕೆ, 1946

2. ಕೃಷ್ಣರಾವ್, ಎಂ. ವಿ.; ಕೇಶವಭಟ್ಟ, ಎಂ.

ಕರ್ನಾಟಕದ ಇತಿಹಾಸ ದರ್ಶನ, 1970. (ಮೈಸೂರು ಸಂಸ್ಥಾನದಲ್ಲಿ ಜವಾಬ್ದಾರಿ ಸರ್ಕಾರದ ವಿಕಾಸ—ಪುಟ ೬೪೦—೬೬೫.)

3. ಜೋಯಿಸ್, ಎಂ. ಎನ್.

ಕರ್ಮಯೋಗಿ (ತಗಡೂರು ರಾಮಚಂದ್ರರಾಯರ ಆತ್ಮ ಕಥನ ಮತ್ತು ಅಭಿನಂದನ ಗ್ರಂಥ), 1974.

4. ದೊರೆಸ್ವಾಮಿ, ಎಚ್. ಎಸ್.

ಹೋರಾಟದ ದಿಟ್ಟ ಹೆಜ್ಜೆಗಳು, 1972

ಸ್ವಾತಂತ್ರ್ಯ ಸಂಗ್ರಾಮ–ಕರ್ನಾಟಕ, 1977

5. ವಡೆಯರ್, ಕೆ. ಜಿ.

ಈಸೂರು ದುರಂತ, 1946

6. ವೀರಣ್ಣಗೌಡ, ಎಚ್. ಕೆ.

ಮೈಸೂರು ಕಾಂಗ್ರೆಸ್ : ಶಿವಪುರ ರಾಷ್ಟ್ರಕೂಟದ ವರದಿ, 1938

ಮೈಸೂರು ಕಾಂಗ್ರೆಸ್ : 1938-39 ನೇ ಸಾಲಿನ ವರದಿ, 1939.

ಬದುಕು – ಮೆಲುಕು (ಆತ್ಮಕತೆ), 1974

7. ವೀರತಪ್ಪ, ಕೆ.

ಮೈಸೂರು ಸಂಸ್ಥಾನದ ಸ್ವಾತಂತ್ರ್ಯ ಚಳುವಳಿ, 1977,

8. ಪಟ್ಟಾಭಿರಾಮನ್, ಕೆ. ; ನಾರಾಯಣರಾವ್, ವಿ. ಎಸ್.

ವಿದುರಾಶ್ವತ್ಥ ಕಾಂಗ್ರೆಸ್ ವಸ್ತು ಪ್ರದರ್ಶನದ ಕೈಪಿಡಿ, 1939

9. ರಾಮಮೂರ್ತಿ, ಎಂ.

ವಿದುರಾಶ್ವತ್ಥದ ದುರಂತ ಪ್ರಕರಣ, 1938

10. ಸೂರ್ಯನಾಥ ಕಾಮತ್ (ಡಾ.)
ಭಾರತೀಯ ಸಂಸ್ಕೃತಿಯ ಸಮೀಕ್ಷೆ, 1972
ಕರ್ನಾಟಕದ ಸಂಕ್ಷಿಪ್ತ ಇತಿಹಾಸ, 1973
ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು : ಸಂಪುಟ ಎರಡು, 1977

11. ಭೀಮಕುಮಾರ, ಲ.
ಮೈಸೂರು ಕಾರಾಗೃಹಗಳಲ್ಲೇನು ? 1940

12. ಶರ್ಮ, ತಿ. ತಾ.
ಜಗನ್ಮೋಹನ ಭವನದಿಂದ ವಿದುರಾಶ್ವತ್ಥಕ್ಕೆ, 1938
ಮೈಸೂರು ರಾಜಕೀಯ ಸುಧಾರಣೆಗಳ ತಿರುಳು, 1940
ಮೈಸೂರು ಸಂಸ್ಥಾನದ ಸ್ವಾತಂತ್ರ್ಯ ಸಂಗ್ರಾಮೇತಿಹಾಸ
(ಒಂದು ಮನವಿ), 1955
ಮೈಸೂರು ಸಂಸ್ಥಾನದ ಸ್ವಾತಂತ್ರ್ಯ ಸಂಗ್ರಾಮೇತಿಹಾಸ ಸಂಗ್ರಹ, 1956
ವಿಕ್ರಾಂತ ಭಾರತ, 1965

13. ಹರ್ಡೀಕರ, ಎನ್. ಎಸ್.
ಶುದ್ಧ ಸೇವೆಯ ಸಿದ್ದಲಿಂಗಯ್ಯ (ಸನ್ಮಾನಗ್ರಂಥ), 1975
ಮತ್ತು
ಕೆಲವು ಲಾವಣಿ ಗ್ರಂಥಗಳು

ಇಂಗ್ಲಿಷ್ ಗ್ರಂಥಗಳು

1. GURURAJA, R. & NAGARAJ RAO, B. S.
The Almanac For Mysore and who's who, 1958

2 HALAPPA, G. S.
History of freedom in Karnataka,
Volume 11, 1964

3. JAMES MANOR
Political change in an Indian State,
Political change in Mysore 1917—1955.

4. NARAYANA RAO, V. S.
Repression in Mysore-1937

5. PATTABHI SITARAMAYYA. Dr. BALAVANTRAY MEHATA
Mysore : A study, 1938

6. SWAMY, G. R.
65th Indian National Congress Souvenir, 1960.

AND

The Mysore Law Journal (XVI-10) June (Part-11), 1938
Freedom Struggle in Karnataka, who is who.
Volume 1, 1969, Vol. II, 1971, Vol III, 1972

ಪತ್ರಿಕೆಗಳು

ಸಂಯುಕ್ತ ಕರ್ನಾಟಕ, 1938ನೇ ಮಾರ್ಚ್, ಏಪ್ರಿಲ್, ಮೇ ಸಂಚಿಕೆಗಳು
ಸರಸ್ವತಿ, 1961
ವಿಶ್ವಕರ್ನಾಟಕ, 1932 ರಿಂದ 1934 ರ ಸಂಚಿಕೆಗಳು
ನವಜೀವನ (ವಿಶೇಷ ಸಂಚಿಕೆ), 17-4-1938
ಜನವಾಣಿ, 26-10-1947
The Hindu, 1938 April and May (Micro film)

ಸಂದರ್ಶನದ ಮೂಲಕ ವಿಷಯ ತಿಳಿಸಿದವರು

ಶ್ರೀಯುತರಾದ

1. ತಗಡೂರು ರಾಮಚಂದ್ರರಾವ್
2. ಮಾದೇಗೌಡ ಎ. ಸಿ.
3. ಮಹಾಬಲರಾವ್, ಎಂ. ಆರ್.
4. ಹನುಮಂತಯ್ಯ, ಕೆ.
5. ಸಿದ್ಧಲಿಂಗಯ್ಯ, ಟಿ.
6. ಚನ್ನಬಸವಯ್ಯ, ರುಮಾಲೆ
7. ಬ್ರಹ್ಮಯ್ಯ, ಟಿ. ಪಿ.
8. ರಂಗಯ್ಯ, ಅಗರಂ
9. ಜ್ವಾಲನಯ್ಯ, ಆರ್. ಪಿ.
10. ಜೋಯಿಸ್, ಎಂ. ಎನ್.
11. ಸೀತಾರಾಮಯ್ಯ, ಪಾಲಹಳ್ಳಿ

12. ನಂಜುಂಡಯ್ಯ, ಬಿ. ಸಿ.
13. ಜವರಪ್ಪಗೌಡ, ಪಿ. ಎನ್.
14. ವಿಶ್ವೇಶ್ವರಗೌಡ, ಕೆ.
15. ದಾಸೇಗೌಡ, ಜಿ. ಆರ್.
16. ಪಟ್ಟಾಭಿರಾಮನ್, ಕೆ.
17. ನರಸಿಂಹಶಾಸ್ತ್ರಿ, ಎಂ ಆರ್.
18. ಸೂರ್ಯನಾರಾಯಣರಾವ್, ಎನ್. (ಕಲಾ ಭವನ, ಮೈಸೂರು)
19. ರಾಜಗೋಪಾಲಯ್ಯಂಗಾರ್, ಟಿ. ಎಸ್.
20. ನಾರಾಯಣರಾವ್, ಪಿ. ಎಸ್. ಮೈಸೂರು
21. ನಾರಾಯಣಸ್ವಾಮಿ. ಬಿ. ಮೈಸೂರು
22. ಕೃಷ್ಣಯ್ಯ, ಪಿ. ಶಿವಪುರ
23. ಶೀನಪ್ಪ, ಬಿ. ಯಂ.
24. ಸ್ವಾಮಿ, ಜಿ. ಆರ್.
25. ಚಂದ್ರಶೇಖರಯ್ಯ ಆರ್. ಭೂಪಾಳಂ
26. ತುಳಸೀದಾಸಪ್ಪ

ಶ್ರೀಮತಿಯರಾದ

27. ಟಿ. ಸುನಂದಮ್ಮ
28. ತಾಯಮ್ಮ ವೀರಣ್ಣಗೌಡ
29. ಬಳ್ಳಾರಿ ಸಿದ್ದಮ್ಮ
30. ವೆಂಕಮ್ಮ ಸೀತಾರಾಮಯ್ಯ
31. ಯಶೋಧರಮ್ಮ ದಾಸಪ್ಪ

ಪತ್ರ - ಲೇಖನಗಳ ಮೂಲಕ ವಿಷಯ ತಿಳಿಸಿದವರು

1. ಚಿಕ್ಕ ಸುಬ್ಬಣ್ಣ, ಟಿ. ಆರ್. ದೊಡ್ಡಬಳ್ಳಾಪುರ
2. ಶಂಕರನಾರಾಯಣರಾವ್, ಬಿ. ಡಿ. ಶಿವಮೊಗ್ಗ
3. ವಾಸಪ್ಪಗೋಗಿ, ಶಿವಮೊಗ್ಗ
4. ಶಿವಪ್ರಸಾದ್, ಹೆಚ್. ಪಿ.
5. ಗುಪ್ತ, ಎಸ್. ಎನ್., ಬೆಂಗಳೂರು
6. ಲಕ್ಷ್ಮಯ್ಯ, ಡಿ. ಕೊಡಿಯಾಲ
7. ಸುಬ್ಬಯ್ಯ, ಮಳವಳ್ಳಿ
8. ವೆಂಕಟಪ್ಪ, ಸಿ. ಎಂ. ರಾಮನಗರ
9. ಹನುಮಂತರೆಡ್ಡಿ, ಕೆ. ತರೀಕೆರೆ

10. ಸುಬ್ಬೇಗೌಡ, ಎಚ್. ಎಸ್. ಮಂಡ್ಯ
11. ದಾಸೇಗೌಡ, ಎ. ಆರ್. ಅವ್ವೇರಹಳ್ಳಿ, ಮಂಡ್ಯಜಿಲ್ಲೆ
12. ವಾಸುದೇವರಾವ್, ಎಸ್. ತಿಪ್ಪೂರು
13. ದೊಳ್ಳಯ್ಯ, ಶಿವಪುರ
14. ಶಾಸ್ತ್ರೀ, ಎಂ. ಆರ್. ಎನ್. ನಾಗಮಂಗಲ
15. ಶ್ರೀನಿವಾಸಯ್ಯಂಗಾರ್, ಎಂ. ಟಿ. ಮದ್ದೂರು
16. ಆರಾಧ್ಯ, ಎಸ್. ಆರ್. ತುಮಕೂರು
17. ಅಣ್ಣೇಗೌಡ, ಕೆ. ಎಲ್. ಬೆಂಗಳೂರು
18. ಶೀನಪ್ಪ, ಬಿ. ಯಂ. ಬೆಂಗಳೂರು
19. ಗಂಗಣ್ಣ, ಎಸ್. ಕೆ. ಶೆಟ್ಟೀಕೆರೆ, ಚಿಕ್ಕನಾಯಕನಹಳ್ಳಿ
20. ನರಸಿಂಹೇಗೌಡ, ಎನ್. ಮಂಡ್ಯ
21. ಜಿ. ಸಿದ್ದೇಗೌಡ, ಮಂಡ್ಯ
22. ಎಂ. ವಿ. ಮಹದೇವಪ್ಪ, ಮೈಸೂರು
23. ಹೆಚ್. ಎನ್. ಸಾವಿತ್ರಮ್ಮ, ಬೆಂಗಳೂರು
24. ಟಿ. ತಾರೇಗೌಡ, ತುಮಕೂರು
25. ಬಿ. ಟಿ. ಶ್ರೀನಿವಾಸಗೌಡ, ಮಂಡ್ಯ

ಗ್ರಂಥಗಳನ್ನು ಸಹಾಯ ಮಾಡಿದವರು

ಶ್ರೀಮತಿ ತಿರುಮಲೆ ರಾಜಮ್ಮ, ಡಾ॥ ಸೂರ್ಯನಾಥ ಕಾಮತ್, ಶ್ರೀ ಟಿ. ಸಿದ್ದಲಿಂಗಯ್ಯ ಶ್ರೀ ಬಿ. ಎನ್. ಶ್ರೀಕಂಠಶೆಟ್ಟಿ, ಶ್ರೀಮತಿ ವಿ. ಲೀಲಾವತಿ, ಶ್ರೀ ಎಂ. ಜಿ. ನಂಜುಂಡಾರಾಧ್ಯ, ಶ್ರೀ ಎನ್. ಈಶ್ವರರಾವ್, ಶ್ರೀ ಎಂ. ಆರ್. ನರಸಿಂಹಶಾಸ್ತ್ರಿ, ಶ್ರೀ ಬಿ. ನೀಲಕಂಠಯ್ಯ, ಶ್ರೀ ಜಿ. ಆರ್. ಸ್ವಾಮಿ, ಶ್ರೀ ಮ. ಗ. ಸೆಟ್ಟಿ ಮತ್ತು ಗೀತಾಬುಕ್ ಹೌಸ್, ಮೈಸೂರು.

ಭಾವಚಿತ್ರಗಳ ಕೊಡುಗೆ

ಶ್ರೀ ಪಾಲಹಳ್ಳಿ ಸೀತಾರಾಮಯ್ಯ, ಶ್ರೀ ಬಿ. ಎಸ್. ವೆಂಕಟರಾವ್, ಶ್ರೀ ಎನ್. ಈಶ್ವರರಾವ್, ಶ್ರೀ ಪಿ. ಎಸ್. ನಾರಾಯಣರಾವ್, ಶ್ರೀ ಟಿ. ಎಸ್. ರಾಜಗೋಪಾಲ ಅಯ್ಯಂಗಾರ್, ಶ್ರೀ ಕೆ. ಹನುಮಂತಯ್ಯ.

ಪ್ರವಾಸಗಳಲ್ಲಿ ಸಹಾಯ ಮಾಡಿದವರು

ಶ್ರೀಗಳಾದ ಪಿ. ಎನ್. ಜವರಪ್ಪಗೌಡ, ಕೆ. ಜಯಗೋಪಾಲ್. ಎಚ್. ಎಸ್. ಸುಬ್ಬೇಗೌಡ, ಎಂ. ಟಿ. ಶ್ರೀನಿವಾಸಯ್ಯಂಗಾರ್ ಎಂ. ಆರ್.

ನರಸಿಂಹಶಾಸ್ತ್ರಿ, ಸಿಂಧುವಳ್ಳಿ ಸುಬ್ರಹ್ಮಣ್ಯ, ಎಂ. ಎ. ಜಯಚಂದ್ರ, ಹೆಚ್. ಬಿ. ರಮೇಶ್, ವೆಂಕಟ ವಿಶ್ವನಾಥ, ಬಾದ್ರಿ ಶಾಮಣ್ಣ, ಎಸ್. ಬಿ. ದಾನಿ, ಸಿ. ಎಂ. ರಾಮಚಂದ್ರ (ದಿ ಹಿಂದು, ಬೆಂಗಳೂರು), ಸುಂದರರಾಜನ್ (ದಿ ಹಿಂದು, ಮದರಾಸ್).

ಮಾಹಿತಿಗಾಗಿ ಪ್ರವಾಸಮಾಡಿದ ಸ್ಥಳಗಳು

ಶಿವಪುರ, ಚಾಮನಹಳ್ಳಿ, ಮದ್ದೂರು, ಮಂಡ್ಯ, ನಾಗಮಂಗಲ, ಪೀಹಳ್ಳಿ, ಮೈಸೂರು, ನಂಜನಗೂಡು, ಬೆಂಗಳೂರು, ಕೋಲಾರ, ತುಮಕೂರು, ದಾವಣಗೆರೆ, ಹುಬ್ಬಳ್ಳಿ, ಧಾರವಾಡ, ಶಿವಮೊಗ್ಗ, ಮದರಾಸು.

೧. ಸ್ವಯಂ ಸೇವಕರು

[ಶಿವಪುರ ರಾಷ್ಟ್ರಕೂಟದಲ್ಲಿ ಹಲವು ಸ್ವಯಂ ಸೇವಕರು ಕೆಲಸಮಾಡಿದರು. ಅಧಿಕೃತವಾಗಿ ತಿಳಿದ ಕೆಲವರ ಹೆಸರುಗಳನ್ನು ಇಲ್ಲಿ ಪಟ್ಟಿ ಮಾಡಿದೆ]

ಅಣ್ಣೇಗೌಡ, ಕೆ. ಎಲ್. ಬಿದಿರುಕೋಟೆ
ಅನಂತರಾಮಯ್ಯ, ರಾಮನಗರ
ಅನಂತರಾಮಯ್ಯ, ಎಸ್. ಮದ್ದೂರು
ಅಶ್ವತ್ಥರಾಯರು, ಭೈರಾಪಟ್ಟಣ
ಇಂದಿರಾಬಾಯಿ ಕೃಷ್ಣಮೂರ್ತಿ, ಮೈಸೂರು
ಈಶ್ವರರಾವ್, ಎನ್. ಮೈಸೂರು
ಈರೇಗೌಡ, ಗೆಜ್ಜಲಗೆರೆ
ಕರಡಣ್ಣಯ್ಯ, ವಳಗೆರೆಹಳ್ಳಿ
ಕರಿಯಪ್ಪ, ಕನಕಪುರ
ಕರಿಚಿಕ್ಕೇಗೌಡ, ಅರಕೆರೆ
ಕುಮಾರನ್, ಕೆ. ಎಸ್. ಬೆಂಗಳೂರು
ಕೃಷ್ಣಮೂರ್ತಿ, ಮಂಡ್ಯ
ಕೃಷ್ಣಮೂರ್ತಿ, ಎಂ. ಎನ್. ಮೈಸೂರು
ಕೃಷ್ಣಮೂರ್ತಿ. ಎಂ. ಆರ್.
ಕೃಷ್ಣಯ್ಯ, ಪಿ. ಶಿವಪುರ
ಕೃಷ್ಣಪ್ಪ, ಮದಗಂದೂರು
ಕೆಂಚಪ್ಪ, ಎ. ಅರಕೆರೆ
ಕೆಂಚಪ್ಪ, ಯು. ಅರಕೆರೆ

ಕೆಂಚಯ್ಯ, ಎ. ಅರಕೆರೆ
ಕೆಂಚಯ್ಯ, ಅಕ್ಕೂರು
ಕೆಂಚಯ್ಯ, ಗುರುದೇವರಹಳ್ಳಿ
ಕೆಂಪಯ್ಯ, ಶಿವಪುರ
ಗಂಗಣ್ಣ, ಎಸ್. ಕೆ. ಸೆಟ್ಟೀಕೆರೆ
ಗಂಗರೆಡ್ಡಿ
ಗುಂಡಪ್ಪ, ಕೊಪ್ಪ
ಗುಂಡೂರಾವ್, ಕೆ. ಆರ್. ಕೊಪ್ಪ
ಗೋಪಾಲಕೃಷ್ಣ ಶೆಟ್ಟಿ, ಪಿ. ಮೈಸೂರು
ಚಂದ್ರಯ್ಯ, ಪಿ. ಕೊಡಿಯಾಲ
ಚಿಕ್ಕಬಿಳೀಗೌಡ, ಕೊಪ್ಪ
ಚಿಕ್ಕಲಿಂಗಯ್ಯ, ಕೆ. ಮಂಡ್ಯ
ಚೆನ್ನೇಗೌಡ. ಎಂ ಹೆಚ್. ಮದ್ದೂರು
ಚೆನ್ನೇಗೌಡ, ವಿ. ಮದ್ದೂರು
ಜಯಲಕ್ಷ್ಮಮ್ಮ, ಮೈಸೂರು
ಜವರಪ್ಪಗೌಡ, ಪಿ. ಎನ್. ಪಾಲಗ್ರಹಾರ
ಜವರಾಯಿಗೌಡ, ಬೂದನೂರು
ಜ್ವಾಲನಯ್ಯ, ಆರ್. ಪಿ. ತುಮಕೂರು
ಜೀವಣ್ಣರಾವ್, ಕೆ. ಮೈಸೂರು
ಜೋಗಿಗೌಡ, ಕೆ. ಕೊಪ್ಪ
ತಮ್ಮಯ್ಯ, ದೇಶಹಳ್ಳಿ
ತಮ್ಮಯ್ಯ, ಎಂ. ಬಿ. ಮಲ್ಲನಾಯಕನಹಳ್ಳಿ
ತಮ್ಮಯ್ಯ, ವಿ. ವೈದ್ಯನಾಥಪುರ
ತಮ್ಮೇಗೌಡ, ಬಿದಿರುಕೋಟೆ
ತಾಯಮ್ಮ ವೀರಣ್ಣಗೌಡ, ಮದ್ದೂರು
ತಿರುಮಲೇಗೌಡ, ಪಿ. ಶಿವಪುರ
ತಿಮ್ಮೇಗೌಡ, ವಳಗೆರೆಹಳ್ಳಿ
ದೊಡ್ಡಬಿಳೀಗೌಡ, ಕೊಪ್ಪ
ದೊಡ್ಡಿಕಾಳಯ್ಯ, ಕಾಡನಪುರ
ದೊರಸ್ವಾಮಿ ಅಯ್ಯಂಗಾರ್, ಎಂ. ಎನ್. ಮೈಸೂರು
ದೊಳ್ಳಯ್ಯ, ಶಿವಪುರ
ನರಸಿಂಹ ಅಯ್ಯಂಗಾರ್, ಮೈಸೂರು
ನರಸಿಂಹಗೌಡ, ಎಚ್.

ನಾಗೂಬಾಯಿ, ಮೈಸೂರು
ನಾಗಪ್ಪಸೆಟ್ಟಿ, ಎಸ್. ಆರ್. ಶಿವಮೊಗ್ಗ
ನಾಗೇಶರಾವ್, ಮೈಸೂರು
ನಾರಾಯಣ, ಜಿ. ದೇಶಹಳ್ಳಿ
ನಾರಾಯಣಯ್ಯ, ಕೊಡಿಯಾಲ
ನಾರಾಯಣರಾವ್, ಪಿ. ಎಸ್. ಮೈಸೂರು
ನಾರಾಯಣಸ್ವಾಮಿ, ಸಿ. ಎಸ್. ಸಾತಿಗ್ರಾಮ
ನಾರಾಯಣಸ್ವಾಮಿ, ಬಿ. ಮೈಸೂರು
ಪಶುಪತಿ (ಡಾ॥). ಮಂಡ್ಯ
ಪಾರ್ಥನಾರಾಯಣ ಪಂಡಿತ್, ವೈ. ಬೆಂಗಳೂರು
ಪುಟ್ಟಸ್ವಾಮಯ್ಯ, ಕೋಣಸಾಲೆ
ಪುಟ್ಟಸ್ವಾಮಿ, ಕೆ. ಅರಕೆರೆ
ಪುಟ್ಟೀರಪ್ಪ, ಮದ್ದೂರು
ಪೊತ್ತ ತಮ್ಮಯ್ಯ, ಗೆಜ್ಜಲಗೆರೆ
ಬಂಗಾರಯ್ಯ, ಕೊಡಿಯಾಲ
ಬ್ರಹ್ಮಯ್ಯ, ಟಿ. ಪಿ. ತುಮಕೂರು
ಭಾಷಾಸಾಹೇಬ್, ಮದ್ದೂರು
ಬಿಳೀಗೌಡ, ಎ. ಡಿ. ಅವ್ವೇರಹಳ್ಳಿ
ಬೋರಯ್ಯ, ಕೆ.ಬಿ. ಕುದುರುಗುಂಡಿ
ಭೀಮಕುಮಾರ, ಚಿತ್ರದುರ್ಗ
ಭೀಮಪ್ಪನಾಯಕ, ಚಿತ್ರದುರ್ಗ
ಮರಿಯಪ್ಪ, ಕುದುರುಗುಂಡಿ
ಮರಿಯಪ್ಪ, ಟಿ.
ಮರಿಸ್ವಾಮಿಗೌಡ, ಗೆಜ್ಜಲಗೆರೆ
ಮಲ್ಲಯ್ಯ, ಪಟೇಲ್. ಕೊತ್ತನಹಳ್ಳಿ
ಮಹಾಬಲರಾವ್, ಎಂ. ಆರ್. ಮಂಡ್ಯ
ಮಾದಯ್ಯ. ಬಿ. ರಾಮನಗರ
ಮಾಧವನ್, ಕೆ. ಬೆಂಗಳೂರು
ಮಾದೇಗೌಡ, ಎ. ಸಿ, ಅರಕೆರೆ
ಮಾದೇಗೌಡ, ಪಟೇಲ್, ಚೆನ್ನಸಂದ್ರ
ಮಹದೇವಪ್ಪ, ಎಂ. ವಿ. ಮೈಸೂರು
ಮುದ್ದುಲಿಂಗಯ್ಯ, ಮಧುಗಿರಿ
ಯಶೋಧರಮ್ಮ ದಾಸಪ್ಪ, ಮೈಸೂರು

ರಂಗಯ್ಯ, ಆರ್. ಬೆಂಗಳೂರು
ರತ್ನಮ್ಮ ಕೃಷ್ಣಮೂರ್ತಿ, ಮೈಸೂರು
ರಮೇಶ್, ಕೆ. (ಡಾ॥) ಕೊಪ್ಪ
ರಾಜನ್. ಟಿ.
ರಾಮಚಂದ್ರ ಜೋಯಿಸ್, ಎಂ. ಎನ್. ಮೈಸೂರು
ರಾಮಣ್ಣ, ಎ. ಮೈಸೂರು
ರಾಮಣ್ಣ, ಕೆ. ಕೊಪ್ಪ
ರಾಮಯ್ಯ, ವಳಗೆರೆಹಳ್ಳಿ
ರಾಮಯ್ಯ, ಕೊಡಿಯಾಲ
ರಾಮಚಂದ್ರ, ಮೈಸೂರು
ರಾಮೇಗೌಡ, ಕೆ. ಎಸ್. ಕಂಚುಗಾರಕೊಪ್ಪಲು
ಲಕ್ಷ್ಮಯ್ಯ, ಡಿ. ಕೊಡಿಯಾಲ
ಲಕ್ಷ್ಮೀನಾರಾಯಣರಾವ್, ಮೈಸೂರು
ಲಲಿತಸ್ವಾಮಿ, ಬೆಂಗಳೂರು
ಲಲಿತಮ್ಮ ಶ್ರೀಕಂಠಯ್ಯ, ಬೆಂಗಳೂರು
ಲಿಂಗಯ್ಯ, ಕೆ. ಪಿ.
ಲಿಂಗಯ್ಯ, ಶಿವಪುರ
ಲಿಂಗಯ್ಯ, ಹೊಸಕೆರೆ
ಲಿಂಗಯ್ಯ, ಹೆಚ್. ಕೆ. ವಳಗೆರೆಹಳ್ಳಿ
ಲಿಂಗೇಗೌಡ, ಎ. ಎಸ್. ಅಕ್ಕೂರು
ಲಿಂಗೇಗೌಡ, ಎನ್. ಪಿ. ನಗರಕೆರೆ
ಲಿಂಗೇಗೌಡ, ಹೆಚ್. ಎಲ್. ಹನುಮಂತಪುರ
ವಡ್ಡರ ತಿಮ್ಮಯ್ಯ, ಅತಗನಹಳ್ಳಿ
ವಾಸುದೇವರಾವ್, ಎಸ್. ತಿಪ್ಪೂರು
ವೀರಣ್ಣಗೌಡ, ಬಿ. ಬೆಕ್ಕಳಲೆ
ವೀರಪ್ಪ, ಮಳವಳ್ಳಿ
ವೀರಭದ್ರಪ್ಪ, ಮೈಸೂರು
ವೀರೇಗೌಡ, ಗೆಜ್ಜಲಗೆರೆ
ವೆಂಕಟರಮಣಯ್ಯ, ಯಂ. ವಿ. ಕೊಡಿಯಾಲ
ವೆಂಕಟಪ್ಪ, ಬಿ. ಎಸ್. ಕೊಡಿಯಾಲ
ವೆಂಕಟಸ್ವಾಮಿ, ಮಧುಗಿರಿ
ವೆಂಕಮ್ಮ ಸೀತಾರಾಮಯ್ಯ, ಮೈಸೂರು
ಸಂಪಂಗಿರಾಮಯ್ಯ, ಚಿಕ್ಕಬಳ್ಳಾಪುರ

ಸಂಪತ್‌ಕುಮಾರ್, ಚಿಕ್ಕಬಳ್ಳಾಪುರ
ಸಾವಿತ್ರಮ್ಮ, ಹೆಚ್. ಎನ್. ಬೆಂಗಳೂರು
ಸಾಬ್ಜಾನ್ ಸಾಹೇಬ್, ಕೊಪ್ಪ
ಸಿಂಗಾರಿಗೌಡ, ಕೆ. ಕರಡಹಳ್ಳಿ
ಸ್ವಾಮಿ, ಜಿ. ಆರ್. ಬೆಂಗಳೂರು
ಸಿದ್ದಪ್ಪ, ಬೆಸಗರಹಳ್ಳಿ
ಸಿದ್ದಪ್ಪ, ಎಂ. ಜಿ. ಮದ್ದೂರು
ಸಿದ್ದಮ್ಮ, ಬಳ್ಳಾರಿ
ಸಿಂಹ, ಎಸ್. ಎನ್.
ಸೀತಾರಾಮಯ್ಯ, ಪಾಲಹಳ್ಳಿ
ಸುಂದರ್, ಜಿ. ಆರ್.
ಸುನಂದಮ್ಮ, ಟಿ. ಮೈಸೂರು
ಸುಬ್ಬಣ್ಣ, ಟಿ. ಎಸ್. ಮೈಸೂರು
ಸುಬ್ಬಮ್ಮ ಜೋಯಿಸ್, ಮೈಸೂರು
ಸುಬ್ರಹ್ಮಣ್ಯಂ, ತಗಡೂರು
ಸುಬ್ಬೇಗೌಡ, ಎಚ್. ಎಸ್. ಮಂಡ್ಯ
ಸುಶೀಲಾಬಾಯಿ, ಮೈಸೂರು
ಸುಶೀಲಮ್ಮ, ಎಂ.
ಸೂರ್ಯನಾರಾಯಣರಾವ್, ಎನ್. ಮೈಸೂರು
ಸೊತ್ತೆಲಿಂಗೇಗೌಡ, ಹನುಮಂತಪುರ
ಸೋನಾಬಾಯಿ, ಮೈಸೂರು
ಶಿವಣ್ಣ, ಅಣ್ಣೂರು
ಶಿವಲಿಂಗೇಗೌಡ, ಎನ್. ಎಲ್. ನಗರಕೆರೆ
ಶಾಸ್ತ್ರಿ, ಎಂ. ಆರ್. ಎನ್. ನಾಗಮಂಗಲ
ಶೀನಪ್ಪ, ಬಿ. ಯಂ. ಬೆಂಗಳೂರು
ಶ್ರೀನಿವಾಸ ಅಯ್ಯಂಗಾರ್, ಎಂ. ಟಿ. ಮದ್ದೂರು
ಶ್ರೀನಿವಾಸಯ್ಯ, ಕೊಡಿಯಾಲ
ಶೇಷಾದ್ರಿ ಅಯ್ಯಂಗಾರ್, ಅಮೃತೂರು
ಹನುಮಂತಪ್ಪ, ಕೆ. ಕಪ್ಪನಹಳ್ಳಿ
ಹುಚ್ಚಮಾಸ್ತಿಗೌಡ, ಎನ್. ತುಮಕೂರು
ಹೊನ್ನಗಿರಿಗೌಡ, ವಳಗೆರೆಹಳ್ಳಿ



ಶಿವಪುರ ಸ್ಮಾರಕ ಧ್ವಜ ಸತ್ಯಾಗ್ರಹ ಸ್ಮಾರಕ ಭವನ